ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಾತಿನಿಧ್ಯತೆ ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಮರಿಲಿಂಗಪ್ಪ

ಮಾರ್ಗದರ್ಶಕರು

ಡಾ.ಎಂ.ಚಂದ್ರ ಪೂಜಾರಿ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩ ೨೭೬

೨೦೧೯

307.772
MAR

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ 583 276.

Shri Mahantesh
BOOK BINDING
Digital Colour Print
Laser Prints & Xerox
1st Flior Stadiaum Copelex KCD Road DW
Cell 9632011325

969

ಹಂಗನ್ನದ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ: ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಮರಿಲಿಂಗಪ್ಪ

ಮಾರ್ಗದರ್ಶಕರು

ಡಾ. ಎಂ. ಚಂದ್ರ ಪೂಜಾರಿ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೯

141182

307.772
MAR P

ಕರ್ನಾಟಕ ಗ್ರಂಥಾಲಯ
ಮೈಸೂರು ವಿಶ್ವವಿದ್ಯಾನಿಲಯ

ಪ್ರಮಾಣ ಪತ್ರ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ : ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಎಂ. ಚಂದ್ರ ಪೂಜಾರಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 12-08-2019
ಸ್ಥಳ : ವಿದ್ಯಾರಣ್ಯ

(ಮರಿಲಿಂಗಪ್ಪ)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಮರಿಲಿಂಗಪ್ಪ ಅವರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ : ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 12-08-2019
ಸ್ಥಳ : ವಿದ್ಯಾರಣ್ಯ

(ಡಾ. ಎಂ. ಚಂದ್ರ ಪೂಜಾರಿ)
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ಕೋಷ್ಟಕಗಳು

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಸಮಸ್ಯೀಕರಣ

೧.೨. ಅಧ್ಯಯನ ಉದ್ದೇಶಗಳು

೧.೩. ಅಧ್ಯಯನ ವಿಧಾನ

೧.೪. ಅಧ್ಯಯನದ ಮಿತಿಗಳು

೧.೫ ಅಧ್ಯಯನದ ಮಹತ್ವ

೧.೬ ಅಧ್ಯಾಯಗಳ ವಿನ್ಯಾಸ

ಅಧ್ಯಾಯ ಒಂದು

ಪ್ರಸ್ತಾವನೆ

ಪ್ರಸ್ತುತ ಅಧ್ಯಯನದ ಉದ್ದೇಶವೆನೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿಯನ್ನು ಒಳಗೊಳ್ಳುವ ರಾಜಕಾರಣ ಪ್ರಕ್ರೀಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದಾಗಿದೆ. ಇದರ ಜೊತೆಗೆ ಸಾಮಾಜಿಕ ಅಸಮಾನತೆಯ ಭಾಗವಾಗಿ ಬಂದ ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆಯನ್ನು ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಣೆ ಒಳಪಡಿಸಲಾಗಿದೆ. ಆಧುನಿಕ ಪ್ರಕ್ರೀಯೆಯ ಸಂದರ್ಭದಲ್ಲಿ ಅಭಿವೃದ್ಧಿ, ಆಧುನೀಕರಣ, ತಂತ್ರಜ್ಞಾನ, ಪಶ್ಚಿಮದ ಅಭಿವೃದ್ಧಿ ಅನುಕರಣೆ, ಮುಂತಾದವುಗಳನ್ನು ಭಾರತದಂತಹ ಸಾಮಾಜಿಕ ಅಸಮಾನತೆ ಇರುವ ದೇಶದಲ್ಲಿ ಜಾತಿ, ವರ್ಗ, ಲಿಂಗ ಇವುಗಳ ತಾರತಮ್ಯದ ಬದುಕಿನಲ್ಲಿ ಪರಿಸಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡುವ ಅಗತ್ಯವಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿ ಎನ್ನುವ ಪರಿಕಲ್ಪನೆ ಕೇವಲ ಭೌತಿಕ ಕ್ರಿಯೆಗಳಾದ ಉತ್ಪಾದನೆ ಮತ್ತು ಆದಾಯಕ್ಕೆ ಮಾತ್ರ ಸಂಬಂಧಿಸಿತ್ತು. ಆದರೆ ನಾಗರಿಕ ಸಮಾಜ, ಮಾನವ ಬಂಡವಾಳ, ಸಾಕ್ಷರತೆ, ಸಾಂಸ್ಕೃತಿಕ ಅವಕಾಶಗಳು ಅಭಿವೃದ್ಧಿಯ ವ್ಯಾಪ್ತಿಯ ಒಳಗೆ ಬರುತ್ತವೆ. ೧೯೯೦ರ ದಶಕದಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂದ ಮಾನವ ಅಭಿವೃದ್ಧಿ ಸಿದ್ಧಾಂತವು ಇದನ್ನೆ ಪ್ರತಿಪಾದಿಸಿತು, ಅಂದರೆ ಒಂದು ಪ್ರದೇಶದ ಅಭಿವೃದ್ಧಿಯೂ ಕೇವಲ ಆದಾಯದ ಹೆಚ್ಚಳದಿಂದ ನಿರ್ಧರಿಸಲ್ಪಡದೆ ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಸೌಲಭ್ಯಗಳಿಂದಲೂ ನಿರ್ಧರಿಸಲ್ಪಡುತ್ತದೆ ಎಂಬ ಅಂಶವನ್ನು ಮುಂಚೂಣಿಗೆ ತಂದಿತ್ತು. ಇದನ್ನೇ ಅಮರ್ತ್ಯಸೇನ್ ಜನರ ಧಾರಣ ಸಾಮರ್ಥ್ಯ ಎಂದು ಕರೆದಿದ್ದಾರೆ.

ಈ ಅಧ್ಯಯನದಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸ್ಥಿತಿಗತಿಗಳು ಯಾವ ಮಟ್ಟದಲ್ಲಿದೆ. ಹೇಗೆ ನಿಕೃಷ್ಟವಾಗಿದೆ ಎಂಬುದನ್ನು ನೋಡುವುದಾಗಿದೆ. ಇದರ ಜೊತೆಗೆ ಪರಿಶಿಷ್ಟರಿಗಾಗಿ ಮೀಸಲಾತಿ, ಸಂವಿಧನಾತ್ಮಕ ಸೌಲಭ್ಯಗಳು, ಸಾಮಾನ್ಯ ಕಾನೂನುಗಳು, ಅಭಿವೃದ್ಧಿ ಕಾರ್ಯಕ್ರಮಗಳು ಅವರನ್ನು ಕೈ ಹಿಡಿದಿವೆ, ಅಲ್ಲದೆ ಪರಿಶಿಷ್ಟರಿಗಾಗಿ ಪ್ರತ್ಯೇಕ ಸಂವಿಧನಾತ್ಮಕ ಪ್ರತ್ಯೇಕ ಉಪಬಂದಗಳು, ಪ್ರತ್ಯೇಕ ವಿಶ್ವವಿದ್ಯಾಲಯ

ಪ್ರತ್ಯೇಕ ಕಲ್ಯಾಣ ಇಲಾಖೆಗಳು, ಅಧ್ಯಯನ ಪೀಠಗಳು, ಸರಕಾರೇತರ ಸಂಸ್ಥೆಗಳು (ಎನ್.ಜಿ.ಒ) ಕಾರ್ಯನಿರ್ವಹಿಸುತ್ತಿವೆ. ಆದರೂ ಪರಿಶಿಷ್ಟರು ದೈನ್ಯತೆಯ ಸ್ಥಿತಿಯಲ್ಲಿದ್ದಾರೆ ಮತ್ತು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಲಿಲ್ಲ. ಭಾರತದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಉದಾರೀಕರಣ ಮತ್ತು ಖಾಸಗೀಕರಣ ಮತ್ತು ಜಾಗತೀಕರಣ ವ್ಯವಸ್ಥೆಯಲ್ಲಿ ದಲಿತ ಬುಡಕಟ್ಟುಗಳ ಸಂಪ್ರಾದಾಯಿಕ ಉದ್ಯೋಗ ಮತ್ತು ಸಂಸ್ಕೃತಿಗೆ ಮಾರಾಣಾಂತಿಕ ಹೊಡೆತ ನೀಡಿದವು.

ಪ್ರಜಾಪ್ರಭುತ್ವವು ಅತ್ಯುತ್ತಮ ಸರಕಾರ ಪದ್ಧತಿ ಎಂದು ಪರಿಭಾವಿಸಲಾಗುತ್ತದೆ. ಈ ಸರಕಾರದ ಆಡಳಿತವನ್ನು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ನ್ಯಾಯ ಎಂಬ ನಾಲ್ಕು ಆಧಾರ ಸ್ಥಂಭಗಳ ಮೂಲಕ ನಡೆಸಲಾಗುತ್ತದೆ. ಅಧಿಕಾರ ಮತ್ತು ಅಭಿವೃದ್ಧಿ ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಅತಿ ಮುಖ್ಯವಾದುದು. ರಾಜಕೀಯ ಅಧಿಕಾರವು ರಾಜಕೀಯ ಪ್ರಕ್ರೀಯೆಯಲ್ಲಿ ಆಡಳಿತವನ್ನು ಸಾಮಾನ್ಯ ಜನರತ್ತ ಕೊಂಡೊಯ್ಯುತ್ತದೆ ಮತ್ತು ಅವರನ್ನು ರಾಜಕೀಯ ಪ್ರಕ್ರೀಯೆಯಲ್ಲಿ ಪಾಲ್ಗೋಳ್ಳುವಂತೆ ಪ್ರೇರೇಪಿಸುತ್ತದೆ. ಸಮಾಜದ ಎಲ್ಲ ಸಮುದಾಯಗಳೂ ಸಕ್ರೀಯವಾಗಿ ಪಾಲ್ಗೊಂಡಾಗ ಮಾತ್ರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಅರ್ಥಪೂರ್ಣವಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು ನಿರ್ಣಾಯಕ ಪ್ರಕ್ರೀಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಾಗ ಮಾತ್ರ ಅಭಿವೃದ್ಧಿ ಪ್ರಜಾಪ್ರಭುತ್ವ ಪ್ರಕ್ರೀಯೆ ಪೂರ್ಣಗೊಳ್ಳುತ್ತದೆ.

ಸಮಾಜದಲ್ಲಿ ಎಲ್ಲರೂ ಸಮನವಾಗಿರಲು ಸಾಧ್ಯವಿಲ್ಲ. ಬುದ್ಧಿಶಕ್ತಿ, ಸಂಪತ್ತು, ಅಧಿಕಾರ, ಧರ್ಮ, ಲಿಂಗ ಇತ್ಯಾದಿ ಕಾರಣಗಳಿಂದ ಅಸಮಾನತೆ ಸ್ವಾಭಾವಿಕವಾಗಿರುತ್ತದೆ. ನೈಸರ್ಗೀಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಆದರೆ ನಾವು ಸೃಷ್ಟಿಸಿಕೊಂಡಿರುವ ಕೃತಕ ಅಥವಾ ಮಾನವ ನಿರ್ಮಿತ ಅಸಮಾನತೆಯನ್ನು ಹೊಗಲಾಡಿಸಿ, ಸಮಾಜದಲ್ಲಿ ಎಲ್ಲರೂ ಆತ್ಮಗೌರವ ಮತ್ತು ನಂಬಿಕೆಯಿಂದ ಜೀವಿಸುವಂತೆ ಮಾಡುವುದು ಸಮಾಜದ ಹಾಗೂ ಸರ್ಕಾರದ ಮುಖ್ಯ ಗುರಿಯಾಗಿದೆ. ಜಾತಿಯಾಧಾರಿತ ಅಸಮಾನತೆಯನ್ನು ಅತಿಸುಲಭವಾಗಿ ಅಸಮಾನತೆಯಂದು ಗುರುತಿಸಬಹುದು, ಯಾಕಂದರೆ ಸಮಾಜದ ಒಂದು ವರ್ಗ ತನ್ನ ಸ್ವಾರ್ಥ ಸಾಧನೆಗಾಗಿ ಮತ್ತೊಂದು ವರ್ಗದ ಮೇಲೆ ಹೇರಿರುವುದಾಗಿದೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ವರ್ಣಾಶ್ರಮ ಧರ್ಮವು ಯಾವುದೇ ಅರ್ಹತೆಯನ್ನು ಆಧರಿಸಿದ ಜಾತಿ ಆಧಾರದ ಮೇಲೆ ಮನುಷ್ಯರನ್ನು ಅಳೆದು ನಾಲ್ಕನೇ ವರ್ಣವನ್ನು ಶೂದ್ರರೂ ಎಂದು ಕರೆದರು. ಅಲ್ಲದೆ ಅವರನ್ನು ಎಲ್ಲ ವರ್ಗಗಳಿಗೂ ಸೇವೆ ಮಾಡುವ ಸ್ಥಾನದಲ್ಲಿ ನಿಲ್ಲಿಸಿದರು. ಶೂದ್ರರಿಗೆ ಸಾರ್ವಜನಿಕ ಸ್ಥಳಗಳಾದ ದೇವಾಲಯ, ಕರೆ, ಭಾವಿ, ಜಾತ್ರೆ, ಸಭೆ ಸಮಾರಂಭಗಳಲ್ಲಿ, ಮನೋರಂಜನ ಸ್ಥಳಗಳಲ್ಲಿ ಭಾಗವಹಿಸುವುಂತಿರಲಿಲ್ಲ, ಈ ಪದ್ಧತಿ ೨೧ನೇ ಶತಮಾನದ ತಾಂತ್ರಿಕಯುಗದಲ್ಲಿ ಮತ್ತು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ

ವ್ಯವಸ್ಥೆಯಲ್ಲಿ ಜಾತಿ ಪದ್ಧತಿ ಉಳಿಸಿ ಬೆಳಿಸಿಕೊಂಡು ಬರುತ್ತಿರುವುದು ವಿಷಾದದ ಸಂಗತಿ. ಕೃತಕ ಅಸಮಾನತೆ ಅಥವಾ ಮಾನವ ನಿರ್ಮಿತ ಅಸಮಾನತೆಗೆ ಇದಕ್ಕಿಂತ ಉತ್ತಮ ನಿದರ್ಶನಬೇಕಿಲ್ಲ. ಆದರೆ ಸ್ವಾತಂತ್ರ್ಯ ನಂತರ ಸಂವಿಧಾನ ನಿರ್ಮಾಪಕರು ಇಂತಹ ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯ ದಟ್ಟತೆಯನ್ನು ನಿವಾರಿಸಲು ಸಂವಿಧಾನದಲ್ಲಿ ಮೀಸಲಾತಿ ಎಂಬ ಶಿರ್ಷಿಕೆ ಅಡಿಯಲ್ಲಿ ಶೋಷಣೆಗೆ ಒಳಗಾದ ಸಮುದಾಯಗಳ ಅಭಿವೃದ್ಧಿಗೆ ವಿಶೇಷ ಉಪಬಂಧಗಳನ್ನು ಅಳವಡಿಸಿದರು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ರಕ್ಷಣೆ ಒಂದು ವಿಶೇಷ ವಿಧಾನವಾಗಿದ್ದು ಒಂದು ಪ್ರತ್ಯೇಕ ಜಾತಿ ಅಥವಾ ಗುಂಪು ಅಥವಾ ವರ್ಗವನ್ನು ಸಾಮಾನ್ಯ ಸ್ಪರ್ದೆಯಿಂದ ಪ್ರತ್ಯೇಕಗೊಳಿಸಿ ಅವರು ಸ್ವಾತಂತ್ರ್ಯರಾಗಿ ತಮ್ಮ ಕಾಲು ಮೇಲೆ ತಾವು ನಿಲ್ಲುವ ವಿಶ್ವಾಸ ಬರುವರಿಗೂ ಸಂವಿಧಾನದ ಮೂಲಕ ರಕ್ಷಣೆ ಒದಗಿಸಲಾಗುತ್ತದೆ. ಈ ಮೀಸಲಾತಿ ನೀತಿಯೂ ಬಲಹೀನ ವರ್ಗಗಳ ಮತ್ತು ಹಿಂದುಳಿದ ವರ್ಗಗಳನ್ನು ಬಲಶಾಲಿ ಮತ್ತು ಶಕ್ತಿವಂತ ವರ್ಗಗಳಿಂದ ರಕ್ಷಿಸುವ ಉದ್ದೇಶ ಮತ್ತು ಗುರಿಯನ್ನು ಹೊಂದಿದೆ, ಹೀಗಾಗಿ ಬಲಹೀನರಿಗೆ ರಕ್ಷಣೆ ನೀಡುವ ಮೂಲಕ ಸಂರಕ್ಷಿಸಿದರೆ ಅಂತಹ ವರ್ಗಗಳು ಸಾಧ್ಯವಾದಮಟ್ಟಿಗೆ ಆತ್ಮವಿಶ್ವಾಸದಿಂದ ಬದುಕುವುದರ ಜೊತೆಗೆ ರಾಷ್ಟ್ರದ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರುತ್ತಾರೆ ಎಂಬುವುದು ಮೀಸಲಾತಿಯ ಮೂಲ ತತ್ವ

ಅಸಮಾನತೆ ಎಂಬುದು ಜಗತ್ತಿನ ಎಲ್ಲ ದೇಶ ಪ್ರದೇಶಗಳಲ್ಲಿ ಕಾಣಬಹುದು. ಭಾರತದಲ್ಲಿ ಜಾತಿ ಪದ್ಧತಿ ಯಾವ ರೀತಿ ಕ್ರೂರವಾಗಿ ಅನುಸರಿಸಿಕೊಂಡು ಬರಲಾಗುತ್ತದೆಯೋ, ಅದೇ ರೀತಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಣಬೇಧ ನೀತಿಯೂ ಸಹ ಅತ್ಯಂತ ಕ್ರೂರ ಮತ್ತು ಅಮಾನವೀಯ ಪದ್ಧತಿಯಾಗಿದೆ. ಅದಕ್ಕಿಂತ ಪೂರ್ವದಲ್ಲಿ ಗುಲಾಮಗಿರಿ ಪದ್ಧತಿ ಇತ್ತು. ೧೮೯೯ ರಿಂದ ೧೮೬೫ ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಗುಲಾಮಗಿರಿಯನ್ನು ರದ್ದುಗೊಳಿಸಿದರು. ಅದೇ ರೀತಿಯಾಗಿ ಅಬ್ರಹಾಂ ಲಿಂಕನ್ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರ ಪ್ರಯತ್ನದಿಂದ ಗುಲಮಗಿರಿ ಪದ್ಧತಿ ಮತ್ತು ವರ್ಣಬೇಧ ಪದ್ಧತಿಯನ್ನು ಕೊನೆಗೊಳಿಸಲಾಯಿತು. ಅಲ್ಲದೇ ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೆಲಾ (೧೯೯೦) ಅವರ ಪ್ರಯತ್ನದಿಂದ ವರ್ಣಬೇಧ ನೀತಿಯ ವಿರುದ್ಧ ಹೋರಾಟದ ಫಲದಿಂದ ವರ್ಣಬೇಧ ನೀತಿಯನ್ನು ಕೊನೆಗಳಿಸಿ, ಅಭಿವೃದ್ಧಿಯಲ್ಲಿ ಯಾವುದೇ ರಾಷ್ಟ್ರಕ್ಕಿಂತ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿವೆ. ಆದರೆ ಭಾರತದಲ್ಲಿ ವರ್ಣಬೇಧ ನೀತಿಯಷ್ಟೇ ಕ್ರೂರವಾದ ಅಮಾನವೀಯ ಪದ್ಧತಿ ಎಂದೇ ಕರೆಯಲ್ಪಡುವ ಜಾತಿ ಪದ್ಧತಿ, ಸಾವಿರಾರು ವರ್ಷಗಳಿಂದ ಮುಂದುವರೆದುಕೊಂಡು ಬಂದಿದೆ. ಇಂತಹ ಜಾತಿ ಪದ್ಧತಿ ದಕ್ಷಿಣ ಏಷಿಯಾದ ಉಪಖಂಡದಲ್ಲಿ ಅದರಲ್ಲಿನ ವಿಶೇಷವಾದ ಭಾರತದಲ್ಲಿ ಎದ್ದುಕಾಣುತ್ತದೆ.

ಮಾನವ ಸಮಾಜ ನೈಸರ್ಗಿಕ ಅಸಮಾನತೆಗಳನ್ನು ಸಹಿಸಿಕೊಳ್ಳುತ್ತದೆ. ಆದರೆ ಕೃತಕ ಅಸಮಾನತೆ ಅಥವಾ ಮಾನವ ನಿರ್ಮಿತ ಅಸಮಾನತೆಗಳನ್ನು ಎಂದಿಗೂ ಸಹಿಸುವುದಿಲ್ಲ. ಅದೇ ರೀತಿ ಭಾರತದಲ್ಲಿ ಸಾವಿರಾರು ವರ್ಷಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ,

ಅಸಮಾನತೆಯ ಅಗ್ನಿಕುಂಡದಲ್ಲಿ ನೊಂದು ಬೆಂದು ಕಂಗಾಲಾದ ಸಮುದಾಯಕ್ಕೆ ಮಹಾರಾಷ್ಟ್ರದಲ್ಲಿ ಮಹತ್ಮಾ ಜ್ಯೋತಿ ಭಾ ಫುಲೆ ಮತ್ತು ಕೊಲ್ಲಾಪುರದ ಸಂಸ್ಥಾನದ ಸಾಹು ಮಹಾರಾಜ ಅವರ ಪ್ರಯತ್ನದಿಂದ ಬ್ರಿಟೀಷ್ ಸರಕಾರದ ಆಜ್ಞೆ ಮೇರೆಗೆ ೧೯೨೧ರಲ್ಲಿ ಸಾಹು ಮಹಾರಜ ಕೊಲ್ಲಾಪುರ ಗೆಜೆಟ್‌ನಲ್ಲಿ ಭಾರತದಲ್ಲಿ ಮೊಟ್ಟಮೊದಲ ಭಾರಿಗೆ ಮೀಸಲಾತಿಯನ್ನು ಜಾರಿಗೆ ತಂದರು. ಅದೇ ವೇಳೆಯಲ್ಲಿ ಕರ್ನಾಟಕದಲ್ಲಿಯೂ ಸಹ ಕ್ರಾಂತಿಕಾರಕ ಬದಲಾವಣೆಗಳನ್ನು ಕಾಣಬಹುದು. ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಜಸ್ಟಿಸ್ ಮಿಲ್ಲರ್ ಆಯೋಗದ ಶಿಫಾರಸ್ಸಿನ ಅನ್ವಯ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ಜಾರಿಗೋಳಿಸಿದರು. ಇದನ್ನು ಪ್ರತಿಭಟಿಸಿ ಸರ್. ಎಂ. ವಿಶ್ವೇಶ್ವರಯ್ಯನವರು ತಮ್ಮ ದಿವಾನಗಿರಿ ಹುದ್ದೆಗೆ ರಾಜೀನಾಮೆಯನ್ನು ನೀಡಿದರು. ಇದೇ ವೇಳೆಗೆ ಡಾ.ಬಿ.ಆರ್.ಅಂಬೇಡ್ಕರ್‌ರ ರಂಗಪ್ರವೇಶವಾಯಿತು. ೧೯೦೯ರ ಇಂಡಿಯ ಕೌನ್ಸಿಲ್ ಆಕ್ಟ್ ಪ್ರಕಾರ ಮುಸ್ಲೀಂ ರಾಜಕೀಯದಲ್ಲಿ ಪ್ರತ್ಯೇಕ ಮೀಸಲಾತಿ ಕ್ಷೇತ್ರವನ್ನು ನೀಡುವುದರೊಂದಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯ ಒದಗಿಸಿತು. ಅದೇ ರೀತಿ ೧೯೧೯ರ ಮಾಂಟೆಗೋ ಚೇಮ್ಸ್‌ಫರ್ಡ್ ಕಾಯ್ದೆ ಪ್ರಕಾರ ಶಿಖ್ಖರಿಗೂ ಮೀಸಲಾತಿ ಅವಕಾಶ ಕಲ್ಪಿಸಿತು. ಈ ಎರಡು ಕಾಯ್ದೆಗಳಲ್ಲಿ ನಿಮ್ನ ವರ್ಗದವರ ರಾಜಕೀಯ ಮೀಸಲಾತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿತ್ತು. ಇದನ್ನು ಪ್ರತಿಭಟಿಸಿ ಅಂಬೇಡ್ಕರ್‌ರವರು ಬ್ರಿಟೀಷ್ ಸರಕಾರದ ಮೇಲೆ ನಿಮ್ನ ವರ್ಗದವರಿಗೂ ರಾಜಕೀಯದಲ್ಲಿ ಅವಕಾಶ ಕಲ್ಪಿಸಬೇಕೆಂದು ಒತ್ತಡಹೇರಿದರು ಪರಿಣಾಮವಾಗಿ ಬ್ರಿಟೀಷ್ ಸರಕಾರ ೧೯೨೮ರಲ್ಲಿ ಸೈಮನ್ ಕಮಿಷನ್ ನೇಮಕ ಮಾಡಿತು ಅದರಂತೆ ಭಾರತಕ್ಕೆ ಆಗಮಿಸಿದ ಸೈಮನ್ ಕಮಿಷನ್‌ಗೆ ಆ ಅವಧಿಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು ನಿಮ್ನವರ್ಗದವರ ಸ್ಥಿತಿಗತಿಗಳನ್ನು ಮನವರಿಕೆ ಮಾಡಿಕೊಟ್ಟರು. ಅಂದಿನ ಬ್ರಿಟೀಷ್ ಸರಕಾರ ಸೈಮನ್ ಕಮಿಷನ್ ಆಯೋಗದ ವರದಿಯಂತೆ ದುಂಡುಮೇಜಿನ ಪರಿಷತ್ತಿನಲ್ಲಿ ಮುಸ್ಲಿಂರಿಗೂ, ಶಿಖ್ಖರಿಗೂ ಮತ್ತು ಯುರೋಪಿಯನ್ನರಿಗೆ ರಾಜಕೀಯದಲ್ಲಿ ರಾಜಕೀಯ ಪ್ರಾತಿನಿಧ್ಯ ನಿಡಿದಂತೆ ನಿಮ್ನ ವರ್ಗದವರಿಗೂ ಪ್ರಾತಿನಿಧ್ಯ ನೀಡಲು ಅಂದಿನ ಬ್ರಿಟಿಷ್ ಪ್ರಧಾನಿ (ರಾಮ್ಸೇ ಮ್ಯಾಕಡೋಲ್) ಅವಕಾಶ ಕಲ್ಪಿಸಿದರು. ಆದರೆ ಇದನ್ನು ಪ್ರತಿಭಟಿಸಿ ಮಹಾತ್ಮಾ ಗಾಂಧಿ ಪೂನಾದ ಯರವಾಡ ಜೈಲಿನಲ್ಲಿ ಉಪವಾಸ ಕುಳಿತರು. ಅಂತಿಮವಾಗಿ ೧೯೩೨ರ ಪೂನಾ ಒಪ್ಪಂದದ ಪ್ರಕಾರ ದುರ್ಬಲವರ್ಗದವರಿಗೆ ಪ್ರತ್ಯೇಕ ಮತದಾರ ವರ್ಗಕ್ಕೆ ಬದಲಾಗಿ ಪ್ರತ್ಯೇಕ ಮೀಸಲು ಸ್ಥಾನಗಳು ಲಭ್ಯವಾದವು. ಆದ್ದರಿಂದ ಪೂನಾ ಒಪ್ಪಂದವನ್ನು ಅಂಬೇಡ್ಕರ್‌ರವರು ಪೂನಾ ಒಪ್ಪಂದದಲ್ಲಿ ನಡೆದ್ದದು ಒಂದು ಖಾಜೀನ್ಯಾಯ. ದಲಿತರಿಗೆ ಬಗೆದ ದ್ರೋಹ ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಸ್ವಾತಂತ್ರ್ಯದ ನಂತರ ಸಾಮಾಜಿಕ ನ್ಯಾಯವನ್ನು ಒದಗಿಸುವ ಉದ್ದೇಶದಿಂದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಒದಗಿಸಲಾಯಿತು. ಸಮಾನತೆ ಸಾದಿಸುವುದಕ್ಕಾಗಿ ೧೯೫೧ರ ಪ್ರಜಾ ಪ್ರತಿನಿಧಿ ಕಾಯ್ದೆ ಪ್ರಕಾರ ಎಲ್ಲಾರಿಗೂ ಮತದಾನದ ಹಕ್ಕನ್ನು ನೀಡಲಾಯಿತು. ಅದರಂತೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸಂವಿಧಾನದಲ್ಲಿ ಸಾಮಾಜಿಕ ಭದ್ರತಾ ದೃಷ್ಟಿಯಿಂದ ಮೂಲಭೂತ ಹಕ್ಕುಗಳನ್ನು ನೀಡಿ ರಕ್ಷಣೆಯನ್ನು ಸಹ ಒದಗಿಸಲಾಗಿದೆ. ಆ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಯಿತು. ಸಂವಿಧಾನದ ೧೫ನೇ ವಿಧಿ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಸಾರುತ್ತದೆ. ೧೫ನೇ ವಿಧಿ ಸಾಮಾಜಿಕ ನುನ್ಯತೆಯನ್ನು ವಿವರಿಸುತ್ತದೆ. ೧೬(೪) ಉಪ ವಿಧಿಯ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿ ಸರ್ಕಾರಿ ಉದ್ಯೋಗದಲ್ಲಿ ಶೇಕಡ ೧೮% ರಷ್ಟು ಸ್ಥಾನಗಳು ಒದಗಿಸುವುದರ ಮೂಲಕ ಉದ್ಯೋಗದಲ್ಲಿ ಅವಕಾಶವನ್ನು ಕಲ್ಪಿಸಲಾಯಿತು. ೧೭ ನೇ ವಿಧಿಯು ಅಸ್ಪೃಶ್ಯತೆ ನಿರ್ಮೂಲನೆಗೊಳಿಸುವುಂತೆ ಮತ್ತು ಆಚರಿಸದಂತೆ ನಿಷೇಧಿಸುತ್ತದೆ. ಅದರಂತೆ ಸಂವಿಧಾನದ ೨೫ನೇ ವಿಧಿಯು ಜೀತಪದ್ಧತಿ, ಗುಲಾಮಗಿರಿ, ಒತ್ತಾಯ ಅಥವಾ ಬಲವಂತ ದುಡಿಮೆ ನಿಷೇಧಿಸಿ ಶೋಷಣೆ ವಿರುದ್ದ ಹಕ್ಕನ್ನು ನೀಡಿ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ.

ಅದೇ ರೀತಿಯಾಗಿ ಸಂವಿಧಾನದ ೪ನೇ ಭಾಗದ ೪೬ನೇ ವಿಧಿಯಲ್ಲಿ ಅನುಸೂಚಿತ ಜಾತಿ ಹಾಗೂ ಬುಡಕಟ್ಟುಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳ ಹಿತಾಶಕ್ತಿಯನ್ನು ರಚಿಸಿ ಅವರ ಆರ್ಥಿಕ ಹಿತಾಶಕ್ತಿಯನ್ನು ಜಾಗುರಕತೆಯಿಂದ ಅಭಿವೃದ್ಧಿಗೊಳಸತಕ್ಕದ್ದು. ಅವರನ್ನು ಸಾಮಾಜಿಕ ಅನ್ಯಾಯದಿಂದ ರಚಿಸಬೇಕು ಮತ್ತು ಎಲ್ಲ ರೀತಿಯ ಶೋಷಣೆಯಿಂದ ರಚಿಸಬೇಕು. ಎಂದು ವಿವರಿಸುತ್ತದೆ. ಅಲ್ಲದೆ ಸಂವಿಧಾನದ ೩೪೧, ೩೪೨, ೩೩೮ನೇ ವಿಧಿ ಪ್ರಕಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ರಾಷ್ಟ್ರಪತಿಗಳು ಆ ಸಮುದಾಯಕ್ಕೆ ಸಂಬಂಧಿಸಿದಂತೆ ವಿಶೇಷ ಆಯೋಗ ಅಥವಾ ವಿಶೇಷ ಅಧಿಕಾರಿಯನ್ನು ನೇಮಕ ಮಾಡಬಹುದು ಆ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಯಿತು.

ಆದರೆ ಸಂವಿಧಾನತ್ಮಾಕ ರಕ್ಷಣೆಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಉತ್ತಮವಾದ ಕಾಯ್ದೆಗಳಾಗಿದ್ದರು ರಾಜಕೀಯ ವ್ಯವಸ್ಥೆ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಿಲ್ಲ. ಪರಿಣಾವಾಗಿ ೧೯೫೫ರಲ್ಲಿ ಅಸ್ಪೃಶ್ಯತ ನಿವಾರಣ ಕಾಯ್ದೆ, ೧೯೭೬ರಲ್ಲಿ ನಾಗರೀಕ ಹಕ್ಕುಗಳ ಕಾಯ್ದೆ, ೧೯೮೯ರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ (ಅಟ್ರಾಸಿಟಿ) ಜಾರಿಗೆ ತರಲಾಯಿತು. ಈ ಮೊದಲಾದ ಕಾಯ್ದೆಗಳಿಂದ ಅಸ್ಪೃಶ್ಯತೆ ನಿವಾರಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇದನ್ನು ನೇರ ಮತ್ತು ಪ್ರಜ್ಞಾಪೂರ್ವಕವಾಗಿ ಎದುರಿಸಬೇಕಾಗುತ್ತದೆ.

ಸ್ವಾತಂತ್ರ್ಯ ಭಾರತದ ೬೫ ವರ್ಷಗಳ ಇತಿಹಾಸದಲ್ಲಿ ಬದಲಾವಣೆಗಳಾಗಿವೆ. ಖ್ಯಾತ ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸರವರು ಕ್ರಾಂತಿಯ ಪ್ರಕ್ರೀಯೆಯಲ್ಲಿ ನಾವು ಬದುಕಿತ್ತಿದ್ದೇವೆ ಎಂದು ಉದ್ಗಾರ ತೆಗೆದಿದ್ದಾರೆ.(೧೯೯೨) ಅನುಸಾರವಾಗಿ ಹರಿದಕೊಂಡುಬರುವ ಸಾಮಾಜಿಕ, ಆರ್ಥಿಕ ಅಸಮಾನತೆಗಳು ಬದಲಾಗುತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ ಎಂದು ಅಮರ್ತೆಸೇನ್ (೨೦೦೨) ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಬದಲಾವಣೆಯನ್ನು ಪರಿಶಿಷ್ಟರಿಗೆ ಅರ್ಥ ಪೂರ್ಣವಾಗಿಲ್ಲ

ಎಂಬುವುದನ್ನು ಮನೋಹರ ಯಾದವ (೨೦೦೩) ದಾಖಲಿಸುತ್ತಾರೆ. ಅವರ ಪ್ರಕಾರ ಅಭಿವೃದ್ಧಿಯ ಪ್ರಕ್ರೀಯೆಯ ಫಲಗಳನ್ನು ಆಧಿಕವಾಗಿ ಉನ್ನತ ಜಾತಿಗಳು ಗುತ್ತಿಗೆ ಹಿಡಿದುಕೊಂಡುಬಿಟ್ಟಿವೆ. ಇದಕ್ಕೆ ಅವರ ಕೊಡುವ ಅರ್ಥವೆಂದರೆ ರಾಜ್ಯದ ಯಾವುದೇ ವ್ಯಾಪಾರ, ಉದ್ದಿಮೆ, ವಾಣಿಜ್ಯ, ಗುತ್ತಿಗೆ, ಕೈಗಾರಿಕೆ, ತಾಂತ್ರಿಕ ವಲಯಗಳಲ್ಲಿ ಏಕೆ ಅಸ್ಪೃಶ್ಯರು ಪ್ರವೇಶಿಸಿಲ್ಲ. ಜಾತಿಯ ಕಾರಣವಾಗಿ ಪರಿಶಿಷ್ಟರಿಗೆ ಕೃಷಿಯೇತರ ಕ್ಷೇತ್ರಗಳನ್ನು ಪ್ರವೇಶಿಸುವುದು ಕಷ್ಟವಾಗಿದೆ. ಇದರ ಜೊತೆಗೆ ಕಸುಬು ಮತ್ತು ಜಾತಿಯ ನಡುವಿನ ಸಂಬಂಧ ಕುಸಿದುಬಿದ್ದಿದೆ. ಶಿಷ್ಟರಿಗಿಂತ ಪರಿಶಿಷ್ಟರು ಎರಡುಪಟ್ಟು ಕೃಷಿ ಕೂಲಿಯನ್ನು ಅವಲಂಬಿಸಬೇಕಾದ ಮತ್ತು ಬಡತನವನ್ನು ಅನುಭವಿಸಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಪರಿಶಿಷ್ಟರ ದುಡುಮೆಗಾರರಲ್ಲಿ ಮೂರು ಮುಕ್ಕಾಲು ಜನರು ಬಡತನ ರೇಖೆಯ ಕೆಳಗೆ ಜೀವನ ಸಾಗಿಸುತ್ತಿದ್ದಾರೆ.

ಸ್ವಾತಂತ್ರ್ಯ ನಂತರ ಭಾರತದಲ್ಲಿ ಹಲವು ವರ್ಷಗಳಿಂದ ಅಸಮಾನತೆಯ ಬೇಗುದಿಯಲ್ಲಿ ನಲುಗಿದ ಸಮುದಾಯದ ಮೀಸಲಾತಿಗೆ ಅಸ್ಥೀರಭಾರವನ್ನು ಹಾಕಲು ಸಂವಿಧಾನದಲ್ಲಿ ಧೃಡಪಡಿಸಲಾಯಿತು. ಅದರಂತೆ ಭಾರತ ಸಂವಿಧನದ ೩೩೦ನೇ ವಿಧಿಯ ಪ್ರಕಾರ ಲೋಕಸಭೆಯ ೫೪೫ ಸ್ಥಾನಗಳಲ್ಲಿ ೧೨೦ ಸ್ಥಾನಗಳನ್ನು ನಿಮ್ನ ವರ್ಗದವರಿಗೆ ಮೀಸಲಿರಿಸಲಾಗಿದೆ. ಇವುಗಳನ್ನು ಮೀಸಲು ಕ್ಷೇತ್ರಗಳೆಂದು ಕರೆಯಲಾಗಿದೆ. ಈ ಕ್ಷೇತ್ರಗಳಿಗೆ ಅದೇ ಸಮುದಾಯದವರು ಮಾತ್ರ ಸ್ಪರ್ದಿಸಲು ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿಯಗಿ ಭಾರತ ಸಂವಿಧಾನದ ೩೩೨ನೇ ವಿಧಿಯ ಪ್ರಕಾರ ರಾಜ್ಯ ಶಾಸಕಾಂಗಗಳಲ್ಲಿಯೂ ಸಹ ಮೀಸಲಾತಿಯನ್ನು ಕಲ್ಪಿಸಿಲಾಗಿದೆ. ಭಾರತದ ೨೮ ರಾಜ್ಯಗಳಲ್ಲಿ ೧೦೬೮ ವಿಧಾನಸಭಾ ಕ್ಷೇತ್ರಗಳು, ರಾಜ್ಯ ಶಾಸಕಾಂಗಗಳಲ್ಲಿ ಮೀಸಲು ಸ್ಥಾನಗಳಿವೆ. ಕರ್ನಾಟಕದ ೨೨೫ ವಿಧಾನಸಭಾ ಕ್ಷೇತ್ರಗಳಲ್ಲಿ ೫೦ ಮಿಸಲು ಕ್ಷೇತ್ರಗಳು ಮತ್ತು ೭ ಲೋಕಸಭಾ ಮೀಸಲು ಸ್ಥಾನಗಳಿವೆ. ಕರ್ನಾಟಕದ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಪರಿಗಣಿಸಲ್ಪಟ್ಟಿರುವ ರಾಯಚೂರು ಜಿಲ್ಲೆಯಲ್ಲಿ ೦೧ ಲೋಕಸಭಾ ಕ್ಷೇತ್ರ (ಪರಿಶಿಷ್ಟ ಪಂಗಡ), ೦೪ ವಿಧಾನಸಭಾ ಕ್ಷೇತ್ರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿದೆ. ಈ ಸಮುದಾಯದ ಅಭಿವೃದ್ಧಿಗೆ ಈ ರೀತಿಯಗಿ ಸಂವಿಧನಾತ್ಮಕ ಪ್ರಾತಿನಿಧ್ಯ ರಕ್ಷಣೆಗಳು ನಿಡಲಾಯಿತು. ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಆದರೆ ಅಭಿವೃದ್ಧಿ ಯೋಜನೆಗಳು ಮತ್ತು ಸಂವಿಧಾನಾತ್ಮಕ ಸೌಲಭ್ಯಗಳು ಇನ್ನೂ ಆ ಸಮುದಾಯವನ್ನು ತಲುಪುತ್ತಿಲ್ಲ.

ಸಮಸ್ಯೀಕರಣ

ಪ್ರಸ್ತುತ ಅಧ್ಯಯನ ವಿಷಯವು "ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ: ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ" ಎಂಬ ವಿಷಯವು ಅಂತರಶಿಸ್ತೀಯ ಸಂಬಂಧಿತ ವಿಷಯವಾಗಿದ್ದು, ಇದರಲ್ಲಿ ಪ್ರದೇಶ, ಸಮುದಾಯ, ಸಂವಿಧಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮುಖ್ಯವಾಗಿ ಈ

ಅಧ್ಯಯನವು ಕರ್ನಾಟಕ ರಾಜ್ಯದ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ್ದಾಗಿದೆ. ಅದರಲ್ಲಿ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯಕ್ಕೆ ರಾಯಚೂರು ಜಿಲ್ಲೆಯನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಜನ ಕೇಂದ್ರಿತ ಅಧ್ಯಯನವು ಹೌದು ಈ ಅಧ್ಯಯನಕ್ಕಾಗಿ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಗತಿಯನ್ನು ತಿಳಿಯಲು ರಾಯಚೂರು ಜಿಲ್ಲೆಯ ಮೂರು ವಿಧಾನಸಭಾ ಕ್ಷೇತ್ರಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರ ಲಿಂಗಸಗೂರು, ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರಗಳಾದ ದೇವದುರ್ಗ ಮತ್ತು ಸಾಮಾನ್ಯ ಕ್ಷೇತ್ರವಾಗಿರುವ ಸಿಂಧನೂರು ವಿಧಾನಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹೀಗಾಗಿ ಸಾಮಾಜಿಕ ವ್ಯವಸ್ಥೆಯನ್ನು ಅರ್ಥೈಸುವುದು ಸುಲಬ ಮಾತ್ರವಲ್ಲದೆ, ಅದು ಆಂತರಿಕವಾಗಿ ಹಲವಾರು ವೈರುಧ್ಯಗಳನ್ನು ಸೃಷ್ಟಿಸಿಕೊಂಡಿದೆ. ಹೀಗಾಗಿ ಇಂತಹ ವೈರುಧ್ಯಗಳನ್ನು ಹೋಗಲಾಡಿಸಲು ಕಾನೂನಿನ ಮೂಲಕ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ಸಮಸಮಾಜವನ್ನು ಕಟ್ಟುವುದು ಧಾರ್ಮಿಕ ಚಳುವಳಿಗಳಿಂದಲೂ, ಸಾಮಾಜಿಕ ಆಂದೋಲನಗಳಿಂದಲೂ ಸಾಧ್ಯವಾಗಲಿಲ್ಲ. ಮನುಸ್ಮೃತಿಯ ಆಧಾರದ ಮೇಲೆ ಸಾಮಾಜಿಕ ತಾರತಮ್ಯವನ್ನೇ ಉಸಿರಾಗಿಸಿಕೊಂಡು ಬಂದಿರುವ ಈ ಜಾತಿಗ್ರಸ್ತ ಸಮಾಜ ತನ್ನ ಪೂರ್ವಗ್ರಹ ಮತ್ತು ಪರಂಪರಾನುಗತವಾಗಿರುವ ನಂಬಿಕೆಯಿಂದಾಗಿಯೇ ಸಮಾಜದಲ್ಲಿ ಪರಂಪರಾನುತವಾಗಿ ದಮನಕ್ಕೆ ಒಳಗಾದವರನ್ನು ಸಮಾನತೆ ನೆಲೆಯಲ್ಲಿ ಕಾಣುವುದಿಲ್ಲ. ಹೀಗಾಗಿ ಸಮಾನತೆ ಮತ್ತು ಅಸಮಾನತೆ ಮಧ್ಯದಲ್ಲಿನ ತೊಡಕುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ವಾಸ್ತವಿಕ ಸ್ಥಿತಿಯನ್ನು ಹೊರತರುವುದು ಅಧ್ಯಯನದ ಉದ್ದೇಶವಾಗಿದೆ.

ಸ್ಪೃಶ್ಯ ಮತ್ತು ಅಸ್ಪೃಶ್ಯ ಪರಂಪರೆ ಮೂಲ ನಿವಾಸಿ ವರ್ಗವೊಂದನ್ನು ಅವಕಾಶ ಮತ್ತು ಅಧಿಕಾರ ವಂಚಿತರನ್ನಾಗಿ ಹೇಗೆ ಮಾಡಲಾಗಿದೆ ಮತ್ತು ವರ್ಣ ವ್ಯವಸ್ಥೆಯಿಂದ ವರ್ಣ ವ್ಯವಸ್ಥೆ ಹೇಗೆ ಸೃಷ್ಠಿಯಾಯಿತು. ಈ ವರ್ಗ ವ್ಯವಸ್ಥೆ, ಹೇಗೆ ಜಾತಿಗಳಾಗಿ ಸೃಷ್ಠಿಗೊಂಡವು ಮತ್ತು ವ್ಯವಸ್ಥೆಯಲ್ಲಿ ಅದರ ಪಾತ್ರವನ್ನು ಅಸ್ಥಿತ್ವವನ್ನು ಊಹಿಸಲು ಅಸಾಧ್ಯ? ಇದಕ್ಕೆ ಸಂಬಂಧಿಸಿದಂತೆ ಪುರಾಣ, ಕತೆ, ಸ್ಮೃತಿ, ಶೃತಿಗಳನ್ನು ರಚಿಸಲಾಯಿತು. ಅಂದರೆ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಸಾಮಾಜಿಕವಾಗಿ ಸರಿ ಎನ್ನುವ ಮುದ್ರೆಯನ್ನು ಹೊತ್ತಿದವು. ಬ್ರಾಹ್ಮಣ, ಅಕ್ಷರ ಕಲಿಯುವ ಕಲಿಸುವ, ಕಾನೂನು ರಚನೆ, ಪೂಜಿಸುವ ಕಾರ್ಯ, ಕ್ಷತ್ರೀಯರು ರಾಜ್ಯರಕ್ಷಣೆ, ವೈಶ್ಯರು ವ್ಯಾಪಾರ, ಶೂದ್ರರು ಸೇವೆ ಅಂದರೆ ಗುಲಾಮಗಿರಿ, ಜೀತ, ಕೀಳು ದರ್ಜೆಯ ಕೆಲಸ ಮಾಡುವವರೆಂದು ವರ್ಗೀಕರಿಸಿ, ದೈವೀಕರಿಸಿ ಕಾನೂನಾತ್ಮಕವಾಗಿ ವಹಿಸಿಕೊಡಲಾಯಿತು. ಹೀಗೆ ವೈದಿಕಧರ್ಮ ಸಿದ್ಧಾಂತ ಬ್ರಾಹ್ಮಣವಾದ, ಮನುಸಿದ್ಧಾಂತಗಳು ಈ ಸಾಮಾಜಿಕ ವ್ಯವಸ್ಥೆಯನ್ನು ನಿರ್ದೇಶಿಸಿ ನಿಯಂತ್ರಿಸುತ್ತಿದ್ದವು. ಈ ಸಿದ್ಧಾಂತಗಳಲ್ಲಿ ಶೂದ್ರರು ಅಸ್ಪೃಶ್ಯರಿಗೆ ಸ್ಥಾನವೆ ಇರುವುದಿಲ್ಲ. ಮಾನಹೀನ ಪರಿಸ್ಥಿತಿಗೆ ಅಸ್ಪೃಶ್ಯರನ್ನು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ

ಗುರುತಿಸಲಾಗುತ್ತಿದೆ. ಕರ್ನಾಟದಲ್ಲಿ ಹೊಲೆಯ ಮತ್ತು ಮಾದಿಗ, ಆಂಧ್ರ ಪ್ರದೇಶದಲ್ಲಿ ಮಾಲ ಮತ್ತು ಮಾದಿಗ, ಮಹಾರಾಷ್ಟ್ರದಲ್ಲಿ ಮಹಾರ್ ಮತ್ತು ಮಾಹಾಂಗ್, ತಮಿಳುನಾಡಿನಲ್ಲಿ ಪುಲಯ ಮತ್ತು ಪರೈ, ಚಕ್ಕಲಿಯನ ಎಂದು, ಉತ್ತರ ಭಾರತದಲ್ಲಿ ಚಮ್ಮಾರರು ಮಾನಹೀನ ಸ್ಥಿತಿಗೆ ತಳ್ಳಲ್ಪಟ್ಟರು. ಅಕ್ಷರ, ಆಸ್ತಿ, ಅಧಿಕಾರದಿಂದ ವಂಚಿಸಲ್ಪ ಅಸ್ಪೃಶ್ಯರು ತಮ್ಮ ದೈನಂದಿನ ಬದುಕನ್ನು ಹಸನಾಗಿಸಿಕೊಳ್ಳಲು ಸಾವಿರಾರು ವರ್ಷಗಳಿಂದ ಹೆಣಗಾಡುತ್ತಾ ಬಂದಿದ್ದಾರೆ.

ಪರಿಶಿಷ್ಟ ಜಾತಿಗಳು ಮತ್ತಿತ್ತರ ವರ್ಗಗಳು ಗುಂಪುಗಳು ಮುಸಲ್ಮಾರ ಆಡಳಿತದ ಕ್ರೌರ್ಯ ದಬ್ಬಾಳಿಕೆ, ಒತ್ತಡಕ್ಕೆ ಬಲಿಯಾಗಿ ಅಮಾನುಷ ರಾಜಕೀಯ ಹಾಗೂ ಧಾರ್ಮಿಕ ಕಷ್ಟಗಳಿಗೆ ಸಿಲುಕಿ ಏರುಪೇರು ಕಂಡಿವೆ ಎಂಬುದನ್ನು ಗುರುತಿಸಿದ್ದಾರೆ. ಅಂದರೆ ಇತಿಹಾಸದ ಕಾಲಘಟ್ಟದ ಪ್ರಕಾರ ೧೨೦೭ರಿಂದ ೧೭೦೭ ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಲಾಲ್ ಅವರ ಪ್ರಕಾರ ಧರ್ಮ ಪ್ರಭುತ್ವದ ಆಳ್ವಿಕೆ ಎದ್ದುಕಾಣುತ್ತದೆ. ಅದೇ ರೀತಿಯಾಗಿ ಮಧ್ಯಕಾಲೀನ ಭಾರತದ ಮುಸ್ಲಿಂ ರಾಜರ ಆಳ್ವಿಕೆಯಲ್ಲಿ ಕೆಲವರು(ಪರಿಶಿಷ್ಟ ಜಾತಿ ಬುಡಕಟ್ಟುಗಳು) ಜಿಜಿಯಾ ತೆರಿಗೆ ಅಂದರೆ ತಲೆ ಕಂದಾಯ ಕಟ್ಟುವುದು ತಪ್ಪಿಸಿಕೊಳ್ಳಲು ಕೆಲವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ಇನ್ನು ಕೆಲವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ಮತ್ತೆ ಕೆಲವರು, ಬೌದ್ಧ ಧರ್ಮಕ್ಕೆ ಮತಾಂತರಗೊಂಡರು ಎಂಬುದನ್ನು ಲಾಲ್ ಗುರುತಿಸಿದ್ದಾರೆ. ಅಂದರೆ ಮಧ್ಯಯುಗದಲ್ಲಿ ಪರಿಶಿಷ್ಟ ವರ್ಗಗಳ ಅನೇಕ ಪಲ್ಲಟಗಳನ್ನು ಅನುಭವಿಸಿದರು. ಆದರೆ ಎಲ್ಲಿಯೂ ಅವರ ಜೀವನ ಸ್ಥಿರಗೊಳಿಸಿಕೊಳ್ಳಲು ಸಾಧ್ಯ ವಾಗಲಿಲ್ಲ. ಡಾ. ಬಿ.ಆರ್.ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ಪೃಶ್ಯರನ್ನು ಹೇಗೆ ಅಮಾನವೀಯ ರೀತಿಯಲ್ಲಿ ನಡೆಸಿಕೊಂಡು ಬರಲಾಗುತ್ತಿತ್ತು ಎಂಬುದನ್ನು ವಿವರಿಸುತ್ತಾ, ಭಾರತದಲ್ಲಿ ಬ್ರಿಟೀಷ್ ಆಳ್ವಿಕೆ ಪ್ರಾರಂಭವಾಗಲು ಅಥವಾ ಅಸ್ಪೃಶ್ಯರ ಸಹಾಯದಿಂದ ಬ್ರಿಟೀಷರು ನೆಲೆಯೂರಲು ಸಾಧ್ಯವಾಯಿತು. ರಾಬರ್ಟ್ ಕ್ಲೈವನ ಜೊತೆಗೆ ಪ್ಲಾಸಿ ಕದನದಲ್ಲಿ ಹೋರಾಟ ಮಾಡಿದ ಜನರು ದಲಿತರು ಅವರು ಅಸ್ಪೃಶ್ಯರಾಗಿದರು, ಅದೇ ರೀತಿಯಾಗಿ ಕೊರೆಗಾಂವ್ ಯುದ್ಧದಲ್ಲಿ ಹೋರಾಡಿದವರು ಮಹಾರ ಜನಾಂಗದವರು ಮಹಾರ ಜನರು ಅಸ್ಪೃಶ್ಯರಾಗಿದ್ದರು. ಮೊದಲ ಮತ್ತು ಅಂತಿಮ ಯುದ್ಧದಲ್ಲಿ ಜಯಗಳಿಸಲು ಬ್ರಿಟೀಷರಿಗೆ ಸಹಾಯಕವಾದ ಪಿಲ್‌ಕಮೀಶನ್ ವರದಿಯಲ್ಲಿ ಮಾರ್ಕಸ್ ಟ್ವಿಟಲ್‌ಡೆಲ್ ಅವರು ಉಲ್ಲೇಖಿಸಿದ್ದಾರೆ. ಅದೇ ರೀತಿಯಾಗಿ ಮುಂಬೈ ಮತ್ತು ಮದ್ರಾಸ್ ಸೈನ್ಯಗಳು ಬ್ರಿಟೀಷರಿಗೆ ವಿಧೇಯವಾಗಿದ್ದವು. ಈ ಎರಡು ಸೈನ್ಯಗಳ ಸಹಾಯದಿಂದ ಸಿಪಾಯಿ ದಂಗೆಯನ್ನು ಹತ್ತಿಕ್ಕಿದರು. ಈ ಸೈನ್ಯದಲ್ಲಿ ಬಹುಪಾಲು ಸೈನಿಕರು ಅಸ್ಪೃಶ್ಯರಾಗಿದ್ದರು. ಬಾಂಬೆ ಸೈನ್ಯದಲ್ಲಿ ಮಹಾರರು ಮದ್ರಾಸ್ ಸೈನ್ಯದಲ್ಲಿ ಪರೈಯ ಸೈನಿಕರಿದ್ದರು ಹೀಗಾಗಿ ಬ್ರಿಟೀಷರು ಭಾರತವನ್ನು ಜಯಿಸಲು ಮತ್ತು ಉಳಿಸಿಕೊಳ್ಳಲು ಅಸ್ಪೃಸ್ಯರು ಸಹಾಯ ಮಾಡಿದರು ಎಂಬುದು ಸತ್ಯ ಸಂಗತಿ. ಆದರೆ ೧೮೯೦ರಿಂದ ಬ್ರಿಟೀಷರು ಅಸ್ಪೃಶ್ಯರನ್ನು ಸೈನ್ಯದಲ್ಲಿ ಸೇರ್ಪಡೆ ನಿಷೇದಗೊಳಿಸಿದರು. ಯಾಕೆಂದರೆ ಸಿಪಾಯಿ ದಂಗೆಯ ನಂತರ ರಾಜ ವಂಶಾವಳಿಗಳು ನಲುಗಿ ಹೋದವು ಅವರವರ ರಾಜರ ಆಳ್ವಿಕೆ ಇರುವಾಗ ಬ್ರಿಟೀಷ್ ಸೈನ್ಯದಿಂದ ಸವರ್ಣೀಯರು

ದೂರವೇ ಉಳಿದಿದ್ದರು, ಅಸ್ಪೃಶ್ಯರೇ ತುಂಬಿಕೊಂಡಿದ್ದ ಬ್ರಿಟೀಷ್ ಸೈನ್ಯದಲ್ಲಿ ಸೇರಲು ಸವರ್ಣೀಯರು ಪ್ರಾರಂಭಿಸಿದರು. ಆಗಲೇ ಅಸ್ಪೃಶ್ಯರಿಗೆ ನಿಜವಾದ ಸಮಸ್ಯೆ ಪ್ರಾರಂಭವಾಯಿತು. ಅಸ್ಪೃಶ್ಯರು ಹೊಂದಿದ್ದ ಹುದ್ದೆಗಳು ಮತ್ತು ಅವರಿಬ್ಬರ ನಡುವಿನ ಹೊಂದಾಣಿಕೆ ವಿಷಯದ ಬಗ್ಗೆ ಬ್ರಿಟೀಷರಿಗೆ ಸಮಸ್ಯೆ ಕಾಡತೊಡಗಿತು. ರಾಜ ವಂಶಗಳನ್ನು ಬಲಹೀನಗೊಳಿಸುವುದು ಮತ್ತು ಸವರ್ಣೀಯರ ವಿಶ್ವಾಸ ಸಂಪಾದಿಸುವುದು ಬ್ರಿಟೀಷರಿಗೆ ಅನಿವಾರ್ಯವಾಗಿತ್ತು. ಹೀಗಾಗಿ ಅಸ್ಪೃಶ್ಯರನ್ನು ಬ್ರಿಟೀಷರು ಹೊರಗೆ ಇಡಬೇಕಾಯಿತು, ಈ ಧೋರಣೆಯಿಂದ ಅಸ್ಪೃಶ್ಯರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಘೋರವಾದ ಪರಿಣಾಮಗಳಾದವು. ಸೈನ್ಯದಲ್ಲಿ ಸೇವೆಯ ಏಕೈಕ ಅವಕಾಶ ಹೊಂದಿದ್ದ ಅಸ್ಪೃಶ್ಯರಿಗೆ ಜೀವನೋಪಾಯ ಹಾಗೂ ವೃತ್ತಿ ಜೀವನದಿಂದ ವಿಮುಖರಾಗಬೇಕಾಯಿತು. ಅಂದರೆ ಜಾತಿಯ ಕಾರಣಕ್ಕಾಗಿ ಅವರನ್ನು ಸೈನ್ಯದಿಂದ ತೆಗೆಯುವುದನ್ನು ನೋಡಿದರೆ ಭಾರತೀಯ ಇತಿಹಾಸದಲ್ಲಿ ಜಾತಿ ಎಂತಹ ಪ್ರಧಾನ ಪಾತ್ರವಹಿಸಿದೆ ಎಂಬುದನ್ನು ತಿಳಿಯಬಹುದು.[೨]

ಹೀಗೆ ಭಾರತೀಯ ಸಮಾಜವನ್ನು ಕುರಿತು ಅರ್ಥೈಸುವುದು ಸುಲಭದ ಮಾತಲ್ಲ, ಅದು ಕಾಲದಿಂದ ಕಾಲಕ್ಕೆ ಸಂಕೀರ್ಣಗೊಂಡಿರುವುದು ಮಾತ್ರವಲ್ಲದೆ ಆಂತರಿಕವಾಗಿ ಹಲವು ವೈರುಧ್ಯಗಳನ್ನು ಸೃಷ್ಟಿಸಿಕೊಂಡಿದೆ ಅವುಗಳನ್ನು ಚಾರಿತ್ರಿಕ ಕಾಲಘಟ್ಟದಲ್ಲಿ ನಿಂತು ಚರ್ಚಿಸುವುದು ಕಷ್ಟಸಾಧ್ಯ. ಈ ಅವಧಿಯಲ್ಲಿ ವಿವಿಧ ಮತ ಪಂಥಗಳು ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನಗಳು ಧರ್ಮ ಮತ್ತು ಸಮಾಜದ ಮೇಲೆ ಮಹತ್ವದ ಪರಿಣಾಮಗಳು ಬೀರಿವೆ, ಒಂದು ಸಮುದಾಯವನ್ನು ಕುರಿತು ಅಧ್ಯಯನ ಮಾಡುವುದು ಚಾರಿತ್ರಿಕ ಸಂದರ್ಭದಲ್ಲಿ ಕಷ್ಟ, ಈ ಪ್ರಕ್ರಿಯೆಯೊಳಗೆ ಜನಸಾಮಾನ್ಯರು, ಕಾರ್ಮಿಕರು ಕೆಳಜಾತಿಗಳು ಅದಿವಾಸಿಗಳು ಹಲವಾರು ವೈರುಧ್ಯಗಳಿಗೆ ಸಿಲುಕಿ ಗಂಭೀರ ಪರಿಣಾಮಗಳನ್ನು ಎದುರಿಸಿದ್ದಾರೆ. ಹಾಗೆಯೇ ವಿವಿಧ ಬಗೆಯ ತಲ್ಲಣಗಳನ್ನು ಅನುಭವಿಸಿದ್ದಾರೆ. ಈ ಬಗೆಯ ಸಾಮಾಜಿಕ ಪ್ರಕ್ರಿಯೆಯಿಂದ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕವು ಹೊರತಾಗಿರಲಿಲ್ಲ. ವರ್ಣ ಜಾತಿ, ಮತ, ಧರ್ಮ ಸಮಾಜದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಸಾಂಪ್ರದಾಯಿಕ ಚರಿತ್ರೆಯಲ್ಲಿ ಈ ಬಗೆಯ ಮೌಲ್ಯಗಳೇ ಪ್ರಧಾನವಾಗಿ ಕಾಣಿಸುತ್ತವೆ. ಜನಸಾಮಾನ್ಯರು ಪ್ರಭುತ್ವದೊಂದಿಗೆ ನಡೆಸಿದ ಯಾವುದೇ ಬಗೆಯ ಪ್ರಕ್ರಿಯೆಗಳನ್ನು ಅರ್ಥೈಸುವುದು ಸಾಧ್ಯವಾಗಲಾರದು. ಕ್ರಿ.ಶ. ಹತ್ತನೆ ಶತಮಾನದಿಂದ ಹದಿನೆಂಟನೆ ಶತಮಾನದವರೆಗೂ ಕರ್ನಾಟಕದಲ್ಲಿ ವಿವಿಧ ರಾಜವಂಶಗಳ ಆಳ್ವಿಕೆ ನಡೆದಿದೆ. ಈ ಕಾಲಘಟ್ಟದಲ್ಲಿ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು, ಜನಸಾಮಾನ್ಯರು ಸಾಮಾಜಿಕ ಆಯಾಮಗಳಲ್ಲಿ ಯವುದೇ ಬಗೆಯ ಸ್ಥಾನಮಾನಗಳು ಮತ್ತು ಸಾಮಾಜಿಕ ಬದಲಾವಣೆಗಳು ಗೋಚರಿಸುವುದಿಲ್ಲ, ಹಾಗೇಯೇ ಇಂದಿಗೂ ಕೂಡ ಅವರಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಬದಲಾವಣೆಗಳು ಕಾಣದೆ, ಪ್ರಾಚೀನ ಸಮಾಜವನ್ನು ನೆನಪಿಸುವಂತಿದೆ.[೩]

ಅಸ್ಪೃಶ್ಯತೆಯ ಸಂಪೂರ್ಣ ನಿವಾರಣೆಯು ಆಧುನಿಕ ಕಾಲದಲ್ಲಿ ಹಲವು ಸಾಮಾಜಿಕ ಸುಧಾರಕರು ಪ್ರಜ್ಞಾವಂತರು, ಸರಕಾರಗಳು, ಅಖಿಲ ಭಾರತ ವ್ಯಾಪ್ತಿಯ ನಿರಂತರ ಸತ್ಪ್ರಯತ್ನಗಳಿಂದಲೂ

ಇನ್ನು ಸಮಸಮಾಜ ಕಟ್ಟಲು ಸಾಧ್ಯವಾಗಿಲ್ಲ, ಇಪ್ಪತ್ತನೇ ಶತಮಾನದಲ್ಲಿ ಜ್ಯೋತಿ ಭಾ ಪುಲೆ, ಡಾ.ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧಿಜೀ ಮೊದಲಾದ ಮಹಾನೀಯ ಪ್ರಯತ್ನದಿಂದ ಭಾರತವು ಅಸ್ಪೃಶ್ಯತಾ ಸಮಸ್ಯೆಯಿಂದ ಎಚ್ಚೆತ್ತಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅಸ್ಪೃಶ್ಯತೆಯಿಂದ ಎಚ್ಚರಗೊಳ್ಳುವ ಮೊದಲೇ ಸಾಮಾಜಿಕ ಅಲಿಖಿತ ನಿಯಮಗಳನ್ನು ಅವರನ್ನು ಮೇಲೆಳೆದಂತೆ ಮಾಡಿರುವುದು ಕೂಡ ಅಷ್ಟೇ ಸತ್ಯಸಂಗತಿ. ಹಾಗಾಗಿ ಇಂದಿಗೂ ಕೂಡ ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳು ಲಭ್ಯವಾಗಿಲ್ಲ, ಭಾರತದ ಗೆಜೆಟಿಯರ್ ೧೯೮೬ ಇತ್ತೀಚಿಗೆ ದಕ್ಷಿಣದಲ್ಲಿ ಪ್ರತಿಷ್ಠೆ ಪಡೆದ ಸ್ಥಳೀಯ ಜಾತಿಗಳಲ್ಲಿ ಅಧಿಕಾರ ಹಣಕ್ಕಾಗಿ ಹೋರಾಟ ನಡೆದಿರುವುದು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಹಾಗೂ ಸಾಮಾಜಿಕ ಮಂಡಲಗಳ ಬೆಳವಣಿಗೆ, ತತ್ಸಂಬಂಧಿ ಕಾರ್ಯಕ್ರಮಗಳು ಸ್ಥಳೀಯ ಪ್ರತಿಷ್ಠಿತ ಜಾತಿಗಳಿಗೆ ಲಾಭದಾಯಕ ಎನಿಸಿರುತ್ತವೆ ಹೊರತು ಹೆಚ್ಚು ಬಡ ಹಾಗೂ ಚಿಕ್ಕ ಜಾತಿಗಳಿಗಲ್ಲ, ವಸ್ತುಸ್ಥಿತಿ ಏನೆಂದರೆ ಜಮೀನಿನ ಮೇಲೆ ಅವಲಂಭಿಸಿ ಜನರ ಒತ್ತಡದ ಮೂಲಕ ನಿಮ್ನ ಹಾಗೂ ಚಿಕ್ಕ ಜಾತಿಗಳ ಸ್ಥಿತಿ ಚಿಂತಾಜನಕವಾಗಿದೆ.[೪]

ಕರ್ನಾಟಕ ಜಾರಿಗೆ ತಂದ ೧೯೭೪ ಭೂಸುಧಾರಣಾ ಕಾಯಿದೆ ಅಥವಾ ಉಳುವವನೆ ನೆಲದೊಡೆಯ ಎಂಬ ಘೋಷಣೆಯಿಂದ ಕರ್ನಾಟಕದಲ್ಲಿ ಕೆಲವು ಜಿಲ್ಲೆಗಳಲ್ಲಿ ಅಂದರೆ ಕೋಲಾರ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಲ್ಪಸ್ವಲ್ಪ ಭೂಮಿಯನ್ನು ಪಡೆಯುವಂತಾಯಿತು. ಆದರೆ ಕರ್ನಾಟಕದ ಎಲ್ಲ ಜಿಲ್ಲೆ ಈ ಕಾಯಿದೆ ಯಾವುದೇ ಪರಿಣಾಮಬೀರಲಿಲ್ಲ. ಮುಂಬೈ ಕರ್ನಾಟಕ ಮತ್ತು ಹೈದಾರ್‌ಬಾದ್ ಕರ್ನಾಟಕದಲ್ಲಿ ಜಮೀನ್ದಾರಿಕೆಯಿಂದ ಪರಿಶಿಷ್ಟರ ಭೂಮಿ ಪಡೆದುಕೊಳ್ಳಲು ಹೇಗೆ ಉಳುವವನೆ ನೆಲದೊಡೆಯ ಎಂದರೆ ಯಾರು ಭೂಮಿಯನ್ನು ಉಳುಮೆ ಮಾಡುತ್ತಿದ್ದರೋ ಅವರಿಗೆ ಕಾಯ್ದೆ ರಕ್ಷಣೆಯಾಯಿತು ಹೊರತು ಭೂಮಿ ಉಳುಮೇ ಮಾಡದವರಿಗೆಲ್ಲ. ಮುಂಬೈ ಕರ್ನಾಕಟ ಹೈದಾರ್‌ಬಾದ ಕರ್ನಾಟಕ ಪರಿಶಿಷ್ಟರು ಗೇಣಿದಾರರು ಅಲ್ಲ ಭೂಮಿಯ ಮಾಲಿಕರು ಅಲ್ಲ ಹಾಗಾಗಿ ಈ ಪ್ರದೇಶದ ಜನರಿಗೆ ಭೂಮಿ ದಕ್ಕಲಿಲ್ಲ ಆದರೂ ಕಾಯ್ದೆ ಕೆಲವೊಂದು ರಕ್ಷಣೆಯನ್ನು ಒದಗಿಸಿದ್ದು ನಿಜ.

೧. ೧೯೭೪ರಲ್ಲಿ ೧೦ ಎಕರೆಗಳನ್ನು ನೀರಾವರಿ ಭೂಮಿ ಹೊಂದಿದ್ದ ಭೂ ಮಾಲಿಕರು ತಮ್ಮ ಭೂಮಿಯ ಬಗ್ಗೆ ಡಿಕ್ಲೇಷನ್‌ಕೊಡಬೇಕು. ಅದಕ್ಕಿಂತ ಹೆಚ್ಚಿನ ಭೂಮಿಯನ್ನು ಹೊಂದಿದ್ದು ಅಂತ ಭೂಮಿಯನ್ನು ಸರಕಾರ ಸ್ವಾದೀನ ಪಡೆದಕೊಂಡು ಪರಿಹಾರಧನ ನೀಡತ್ತದೆ ಎಂದು ತಿಳಿಸಲಾಯಿತು.

೨. ೧೨,೦೦೦ ಸಾವಿರಕ್ಕಿಂತ ಹೆಚ್ಚಿನ ವರಮಾನವುಳ್ಳ ಕೃಷಿಯೇತರ ಕೃಷಿ ಭೂಮಿಯನ್ನು ಹೊಂದುವದು ನೀಷೇದಿಸಲಾಯಿತು. ಅಲ್ಲದೆ ಕೃಷಿ ಭೂಮಿಯ ಮಾಲಿಕನಿಬ್ಬನು ನಿರಂತರವಾಗಿ ಎರಡು ವರ್ಷಗಳಿಗೂ ಹೆಚ್ಚು ಕಾಲ ಸಾಗುವಳಿ ಮಾಡದೆ ಖಾಲಿ ಬಿಡುವಂತಿಲ್ಲ. ಅಂತಹ ಭೂಮಿಯನ್ನು ಸರಕಾರ ಸ್ವಾದಿನ ಪಡೆಸಿಕೊಂಡು ಪರಿಹಾರ ನೀಡುತ್ತದೆ ಎಂದು ತಿಳಿಸಲಾಯಿತು.

ದೇವರಾಜ ಅರಸು ಅವರ ಮಿತ್ರರಾದ ಆರ್.ಎಂ. ದೇಸಾಯಿಯವರು ೧೯೭೪ರ ಭೂಸುಧಾರಣಾ ಕಾಯಿದೆ ಅನ್ವ ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡರು. ಅದರ ಜೊತೆಗೆ ಅವರ ಪಕ್ಷದ ಸದಸ್ಯರು ವಿಧಾನಸಭೆಯ ಸದಸ್ಯರು, ಮಂತ್ರಿಗಳು ಭೂಮಿಯನ್ನು ಕಳೆದು ಕೊಳ್ಳುವುಬೇಕಾಯಿತು. ದೇಶರಕ್ಷಣೆಯಲ್ಲಿರುವವರು ಮಾತ್ರ ಭೂಮಿಯನ್ನು ಗೇಣಿಗೆ ಕೊಡಬಹುದು.

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿಯನ್ನು ಯಾರು ಕೊಂಡು ಕೊಳ್ಳಬಾರದೆಂದು ಘೋಷಿಸಲಾಯಿತು. ೧೯೭೪ರ ಶಾಸನದಿಂದ ೧೫ ಲಕ್ಷ ಗೇಣಿದಾರರು ಭೂ ಒಡೆಯರಾದರು. ೨೦ಲಕ್ಷ ಕಾರ್ಮಿಕರಿಗೆ ಈ ಶಾಸನದಿಂದ ಭೂಮಿ ಪಡೆಯಲು ಸಾಧ್ಯವಾಯಿತು. ೧೯೯೫ರಲ್ಲಿ ಭೂಸುದಾರಣಾ ಕಾಯ್ದೆಯಿಂದ ಸಣ್ಣ, ಅತಿ ಸಣ್ಣ ರೈತರ ಸ್ಥಿತಿ ಹದೆಗೆಡಿಸಿತು. ೧೯೭೪ರ ಕಾಯ್ದೆಗೆ ೧೯೯೫ರಲ್ಲಿ ತಿದ್ದುಪಡಿ ಮಾಡಿ ಬಲಿಷ್ಟ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ೧೯೯೫ರಲ್ಲಿ ಕೈಗಾರಿಕೆಗಳಿಗೆ ಭೂ ಒಡೆತನ ಹೊಂದಲು ಅವಕಾಶ ಕಲ್ಪಿಸಿಕೊಡಲಾಯಿತು. ಅದೇ ರೀತಿಯಾಗಿ ೧೯೯೫ರ ಭೂ ಸುದಾರಣಾ ಕಾಯ್ದೆ ಪ್ರಕಾರ ೨೦ ಲಕ್ಷಕ್ಕೂ ಅಧಿಕ ಆದಾಯವಿರುವವರು ಭೂಮಿಯನ್ನು ಪಡೆಯಲು ಸಾಧ್ಯವಿಲ್ಲದಂಥೆ ಮಾಡಲಾಯಿತು. ಗೇಣಿಪದ್ಧತಿ ಹೊಸರೂ ಪಡೆಯಿತು. ಸಾರ್ವಜನಿಕ ಹಿತಾಸಕ್ತಿ ಹೆಸರಲ್ಲಿ ಭೂಒಡೆತನ ಬಲಿಷ್ಟರಿಗೆ ಬಿಟ್ಟು ಕೊಡಲಾಗುತ್ತದೆ.[೫]

ಭೂಸುಧಾರಣೆ-ಬಡತನ ನಿರ್ಮೂಲನೆ ಎಂಬ ಲೇಖನದಲ್ಲಿ ಭೂ ಸುಧಾರಣೆಗೆ ಸಂಬಂಧಿಸಿದ ಕೆಲವು ವಿಷಯಗಳ ಬಗ್ಗೆ ಒಂದು ವರ್ಷಕಾಲ ಭಾರತದ ೨೪ ರಾಜ್ಯಗಳ ೩೫೦ ಜಿಲ್ಲೆಗಳಲ್ಲಿ ಸುಮಾರು ೮೦,೦೦೦ ಸಾವಿರ ಕಿ.ಮೀ. ಸಂಚರಿಸಿ. ಸಾವಿರಾರು ಜನರನ್ನು ಸಂಪರ್ಕಿಸಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ನೀಡಿದ್ದಾರೆ. ಅದರಲ್ಲಿ ವಿಶೇಷವಾಗಿ ಪರಿಶಿಷ್ಟರ ಬದುಕು-ಬವಣೆಯನ್ನು ಅನಾವರಣೆಗೊಳಿಸುತ್ತಾ ನನ್ನ ಸಂಚಾರದಲ್ಲಿ ಎಲ್ಲ ಸೌಲಭ್ಯಗಳಿಂದ ವಂಚಿತರಾಗಿ ಮೂಲೆಗೆ ತಳ್ಳಲ್ಪಟ್ಟಿರುವ ಜನರೆಲ್ಲರು ಭೂಮಿಯ ಒಡೆತನದಿಂದ ವಂಚಿತರಾಗಿರುವುದನ್ನು ಕಂಡಿದ್ದೇನೆ. ಈ ವಿಷಯದಲ್ಲಿ ಅನೇಕ ನಿಷ್ಠವಂತ ವ್ಯಕ್ತಿಗಳು, ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯ ಆಧಾರಿತ ಸಾಮಾಜಿಕ ಆಂಧೋಲನಗಳು ಭೂಮಿಯ ಸಮಸ್ಯೆಯನ್ನು ಬಗೆಹರಿಸಲು ಎಷ್ಟೇ ಪ್ರಯತ್ನಪಟ್ಟರೂ ಅದರ ವಿರುದ್ಧ ಪ್ರಬಲ ಪ್ರತಿರೋಧ ಎದುರಿಸಬೇಕಾಯಿತು. ಅದೇ ರೀತಿಯಾಗಿ ಪರಿಶಿಷ್ಟ ಸಮುದಾಯಗಳು ವಾಸಿಸುವ ಸುಮಾರು ೨೯,೦೦೦ ಗ್ರಾಮಗಳು ಇಂದಿಗೂ ಸತ್ತವರನ್ನು ಹೂಳಲು ಮತ್ತು ಶವ ಸಂಸಾರಕ್ಕೆ ಭೂಮಿ ಹೊಂದಿಲ್ಲ ಎಂಬುದನ್ನು ಕೇಳಿದ್ದೇನೆ. ಅನೇಕ ಗ್ರಾಮಗಳಲ್ಲಿ ಬಡಜನರು ಶೌಚಾಲಯ ಅಥವಾ ಮಲವಿಸರ್ಜನೆಗೆ ಬಯಲು ಪ್ರದೇಶದಿಂದ ವಂಚಿತರಾಗಿದ್ದಾರೆ. ಹೀಗಾಗಿ ಭೂಮಿಯನ್ನು ಜನಗಳ ದೃಷ್ಟಿಯಿಂದ ನೋಡುವಾಗ ಅದರಲ್ಲಿ ಮುಖ್ಯವಾಗಿ ಭೂರಹಿತರ ದೃಷ್ಟಿಯಿಂದ ನೋಡುವಾಗ ನಾವು ಎರಡು ವಿಧವಾದ ಭೂಮಿಯನ್ನು ನೋಡಬೇಕಾಗುತ್ತದೆ.

೦೧	ವಸತಿಗಾಗಿ ಭೂಮಿ	೪.೪ ಕೋಟಿ ಜನ ವಸತಿ ಕೇಳುತ್ತಿದ್ದಾರೆ.
೦೨	ಕೃಷಿಗಾಗಿ ಭೂಮಿ	೩೦ ಕೋಟಿ ಜನ ಕೃಷಿಗಾಗಿ ಭೂಮಿ ಕೇಳುತ್ತಿದ್ದಾರೆ.

ಇದರ ಜೋತೆಗೆ ನಾವು ಭೂರಹಿತ ಬಡವರ ಬಗ್ಗೆ ಮಾತನಾಡುವಾಗ ಜನಸಂಖ್ಯೆಯ ಶೇಕಡ ೩೮.೦೨ರಷ್ಟು ನೀಡಬೇಕಾಗುತ್ತದೆ.

ಪರಿಶಿಷ್ಟರು	ಮೂಲ ನಿವಾಸಿಗಳು	ಅಲೆಮಾರಿಗಳು	ಮೀನುಗಾರರು	ಒಟ್ಟು
ಶೇ. ೧೮	ಶೇ. ೮	ಶೇ. ೧೧	ಶೇ. ೧.೨	ಶೇ. ೩೮.೨

ಈ ವಿವರಗಳಲ್ಲಿ ಭೂರಹಿತ ಇತರ ಜಾತಿ ಗುಂಪುಗಳು ಸೇರಿಲ್ಲ. ಕೇವಲ ತಳಸಮುದಾಯದ ನಾಲ್ಕು ಸಮುದಾಯಗಳಲ್ಲಿ ಭೂಮಿ ವಿಷಯದಲ್ಲಿ ಇಷ್ಟೊಂದು ಕಂದಕ ಕಂಡುಬರುತ್ತದೆ. ಬಲಿಷ್ಟವಾದ ಗುಂಪುಗಳು ಸಾಮಾನ್ಯ ಮತ್ತು ಸಮುದಾಯಗಳ ಭೂಮಿಯನ್ನು ಆಕ್ರಮಿಸಕೊಂಡಿದ್ದಾರೆ. ಆದ್ದರಿಂದ ಈ ಸನ್ನಿವೇಶದಲ್ಲಿ ಸಂವಿಧಾನ ನೀಡಿರುವ ಜೀವಿಸುವ ಹಕ್ಕು ಪರಿಣಾಮಕಾರಿಯಾಗಿ ಇಲ್ಲದಿರುವದನ್ನು ಪುನರ ರೂಪಿಸುತ್ತದೆ. ಹಾಗಾಗಿ ಭೂಮಿಯ ಸಮಸ್ಯೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಲ್ಲಿನ ಆರ್ಥಿಕ ಅಂಶಗಳು ಸಾಮಾಜಿಕ ಚಲನೆಗೂ ತೊಡಕುಂಟು ಮಾಡುತ್ತಿದೆ. ಯಾಕೆಂದರೆ ಆರ್ಥಿಕ ಅಂಶಗಳು ಸಾಮಾಜಿಕ ಚಲನೆ ಮೇಲೆ ಮುಸಕನ್ನ ಎಳೆಯುತ್ತದೆ. ಘಾಟಕ ಮತ್ತು ಘೋಷ್ ೨೦೧೨ ಮತ್ತು ೨೦೧೩ ಪ್ರಸ್ತುತ ಭೂನೀತಿ ಮತ್ತು ಕಾನೂನುಗಳು ಸೋಲುವದಕ್ಕೆ ಕಾರಣ ಆದರ್ಶ ಮತ್ತು ವಾಸ್ತವ ಇವರೆಡರ ನಡುವೆ ಹೊಂದಾಣಿಕೆ ಇಲ್ಲದಿರುವದು. ಹಲವು ಉದ್ದೇಶಗಳಾದ ಕೈಗಾರಿಕರಣ ಅಥವಾ ಅರಣ್ಯಕರ ಇವುಗಳ ನಡುವೆ ಸಮತೋಲನ ಸಾದಿಸಲು ಸಾಧ್ಯವಾಗಿಲ್ಲದಿರುವದು ಭೂಮಿಯ ಸಮಾನದಾದ ಹಂಚಿಕೆಯು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯವಾದದ್ದು. ಅದರೆ ಇದು ಭೂ ಮಾರುಕಟ್ಟೆಯ ಸರಾಗ ಕಾರ್ಯ ನಿರ್ವಹಣೆ ಮತ್ತು ಭೂ ಬಳಕೆಯೊಂದಿಗೆ ಸಂಬಂಧ ಹೊಂದಿಲ್ಲ ಎಂದಿದ್ದಾರೆ. ಆದರೂ ಭಾರತದಂತಹ ಬೃಹತ ಜನಸಂಖ್ಯೆಯುಳ್ಳ ದೇಶದಲ್ಲಿ ಸಾರ್ವಜನಿಕವಾಗಲಿ, ಸಮುದಾಯವಾಗಲಿ, ಸ್ವಯಂ ಸೇವಾ ಸಂಸ್ಥೆಗಳಾಗಲಿ ಅಥವಾ ಸಾಮಾಜೀಕ ಆಂದೋಲನಗಳಾಗಲಿ, ಭೂರಹಿತರ ಸಮಸ್ಯೆಯನ್ನು ಸಂಘರ್ಷವನ್ನಾಗಿ ಪರಿವರ್ತಿಸುವಲ್ಲಿ ವಿಫಲವಾಗಿರುವದನ್ನು ಕಾಣಬಹುದು. ಈಗ ಪರಿಶಿಷ್ಟರು ಮತ್ತು ಮೂಲ ನಿವಾಸಿಗಳ ಪ್ರಮುಖ ಸಮಸ್ಯೆ ಎಂದರೆ ಭೂಮಿಯ ಮರುಹಂಚಿಕೆ ಅಥವಾ ಭೂಮಿಗಾಗಿ ಒತ್ತಾಯ ಪಡಿಸುವುದು ಬಿಟ್ಟರೆ ಅವರ ಅಭಿವೃದ್ಧಿಗೆ ಬೇರೆ ಯಾವ ದಾರಿಯು ಕಾಣುವುದಿಲ್ಲ.[೬] ಇಂಗ್ಲೆಂಡಿನಲ್ಲಿ ಭೂರಹಿತರಿಗೆ ಮತ್ತು ಬಡವರಿಗೆ ಸರ್ಕಾರವು ಯಾವ ರೀತಿಯಲ್ಲಿ ಸಾಮಾಜಿಕ ಭದ್ರತೆಯಲ್ಲಿ ಒದಗಿಸಬೇಕೆಂದು ಥಾಮಸ್ ಫೇಯ್ನ ಆಭಿಪ್ರಾಯವನ್ನು ಉಲ್ಲೇಖಿಸುತ್ತ ೧೭೯೭ರಲ್ಲಿ ಅವರು ಅಗ್ರೇರಿಯನ್ ಜಸ್ಟಿಸ್ (ಕೃಷಿ ನ್ಯಾಯ) ವೈಯಕ್ತಿಕ ಆಸ್ತಿಯ ಕಲ್ಪನೆಯ ಬಗ್ಗೆ ಚರ್ಚಿಸಿದ ವೈಯಕ್ತಿಕ ಸ್ವಂತತ್ರ್ಯವು ಸಾಮಾಜಿಕ ಜೀವನವನ್ನು ಸಮತೋಲನ ಗೋಳಿಸಬೇಕು ಮತ್ತು ಬದುಕಬೇಕಾದ ಅವಶ್ಯಕತೆ

ಬದುಕಿನ ಬಗ್ಗೆ ಭರವಸೆ ಮೂಡಿಸಬೇಕು. ಅದಕ್ಕಾಗಿ ಎಲ್ಲರಿಗೂ ಕನಿಷ್ಟ ಆದಾಯ ಪಿಂಚಣಿಯನ್ನು ನೀಡಬೇಕೆಂದು ಪ್ರತಿಪಾದಿಸಿದ.

ಥಾಮಸ್ ಫೇಯ್ನನ ಮತ್ತೊಂದು ಬರಣಿಗೆ ಎಂದರೆ ಅದು ಆತನ ಕೊನೆಯ ಕರಪತ್ರ "ಅಗ್ರೇರಿಯನ್ ಜಸ್ಟಿಸ್ ಅಪೋಜ್ಡ್ ಟು ಅಗ್ರೇರಿಯನ್ ಲಾ ಆ್ಯಂಡ್ ಅಗ್ರೇರಿಯನ್ ಮನೋಪಾಲಿನ" ಇದು ರೈಟ್ ಆಫ್ ಮ್ಯಾನ ಲೇಖನದ ಮುಂದುವರಿಕೆಯ ಭಾಗವಾಗಿ ಅಥವಾ ಅದರ ವಿಸ್ತರಣೆಯ ಭಾಗವಂತಿದೆ. ಹೇಗೆ ಬಹು ಜನಸಂಖ್ಯೆಯ ಜನರು ಸಹಜ ಸ್ವಾತಂತ್ರ್ಯವನ್ನು ಮತ್ತು ಬದುಕುವ ಹಕ್ಕನ್ನು ಭೂ ಮಾಲಿಕತ್ವದ ಕಾರಣವಾಗಿ ಕಳೆದು ಕೊಂಡಿದ್ದಾರೆ ಎಂದು ವಿವರಿಸುತ್ತದೆ. ನಂತರ ಅಮೇರಿಕದಲ್ಲಿ ವೃಧ್ಯಾಪ ವೇತನ, ಕನಿಷ್ಟ ಆದಾಯ ಯೋಜನೆ ಜಾರಿಗೆ ಬರಲು ಈ ಪ್ರಬಂಧವೆ ಕಾರಣವಾಯಿತು. ಥಾಮಸ್ ಫೇಯ್ನನ ಪ್ರಕಾರ ಸರ್ಕಾರ ರಾಷ್ಟ್ರೀಯ ನಿಧಿಯನ್ನು ರೂಪಿಸಬೇಕು. ಭೂಮಾಲೀಕತ್ವದ ಆಸ್ತಿ ಹಕ್ಕು ಮೊದಲಾದ ಸಿರಿವಂತ ಸ್ನೇಹಿ ಆಳ್ವಿಕರ ಕ್ರಮಗಳಿಂದ ಯಾರ ಸಹಜ ಸ್ವತಂತ್ರ್ಯ ಮತ್ತು ಬದುಕು ಹಕ್ಕುಗಳನ್ನು ಕಳೆದುಕೊಂಡು ಬಡವರಾಗಿರುತ್ತಾರೋ ಅಂತಹ ಎಲ್ಲ ಭೂ ಹೀನರಿಗೆ ವಾರ್ಷಿಕ ೧೫ ಪೌಂಡ್ ಸ್ಟರಲಿಂಗ್ ಪರಿಹಾರ ಕೊಡಬೇಕು. ಹಾಗೆಯೇ ೫೦ವರ್ಷ ದಾಟಿದ ಪ್ರತಿಯೊಬ್ಬರಿಗೆ ವಾರ್ಷಿಕವಾಗಿ ೧೦ಪೌಂಡ್ ಸ್ಟರಲಿಂಗ್ ಹಣ ಕೊಡಬೇಕು. ಇದು ಸರ್ಕಾರ ಬಡವರಿಗೆ ಕೊಡುವ ದಾನವಲ್ಲ ಇದು ಅವರ ಹಕ್ಕು. ಅಂದಿನ ೧೦ಪೌಂಡ್ ಸ್ಟರಲಿಂಗ್ ಇಂದಿನ ಲೆಕ್ಕಚಾರದ ಪ್ರಕಾರ ೮೪ಸಾವಿರ ರೂ. ೧೫ ಪೌಂಡ್ ಎಂದರೆ ೧.೪ಲಕ್ಷ ಸಮಾನತೆ ಹಾಗು ಸ್ವಾತಂತ್ರ್ಯದ ಫಲವಾಗಿ ಖಾಸಿಗಿ ಭೂಮಾಲೀಕರ ಜವಾಬ್ದಾರಿಯನ್ನು ಥಾಮಸ್ ನೆನಪಿಸುತ್ತಾನೆ. ಆದಾಗಿ ಮುಂದುವರೆದ ದೇಶಗಳು ಅಥವಾ ಪಶ್ಚಿಮ ದೇಶಗಳು ಸಾಮಾಜಿಕ ಭದ್ರತೆಗೆ ಹೆಚ್ಚಿನ ಪ್ರಾಶ್ಯಸ್ತ ನೀಡಿ ಸಾಮಾಜಿಕ ಭದ್ರತೆಯನ್ನು ಒದಗಿಸಿವೆ.[೬]

ಕೋಷ್ಟಕ ೧.೧. ಭಾರತ ಸಾಮಾಜಿಕ ಗುಂಪುಗಳಲ್ಲಿ ಉದ್ಯೋಗ ವರ್ಗೀಕರಣ

ಉದ್ಯೋಗ	ಎಸ್.ಸಿ	ಎಸ್.ಟಿ	ಓ.ಬಿ.ಸಿ	ಇತರೆ
ಕೃಷಿ ಸ್ವ-ಉದ್ಯೋಗ	೨೦	೩೯	೩೯	೪೪
ಸ್ವಯಂ ಉದ್ಯೋಗ ಒಟ್ಟು	೧೪	೬.೪	೧೮	೧೯
ಕೃಷಿ ಕೂಲಿ ಕಾರ್ಮಿಕರು	೩೪	೪೫.೭	೫೬	೬೧
ಕೃಷಿಯೇತರ ಕೂಲಿ ಕಾರ್ಮಿಕರು	೪೧	೩೪	೨೨	೧೬
ಗ್ರಾಮೀಣ ಕೂಲಿ ಕಾರ್ಮಿಕರು	೧೫	೧೧.೩	೧೦	೭.೭
ಇತರ ಕೂಲಿ ಕಾರ್ಮಿಕರು	೫೭	೪೫.೩	೩೩	೨೩
ಇತರೆ	೯.೮	೮.೯	೧೧	೧೫

ಎನ್.ಎಸ್.ಎಸ್.ಓ ವರದಿ ೨೦೦೪-೦೫.

ಈ ಮೇಲಿನ ಕೋಷ್ಟಕದಲ್ಲಿ ನೀಡಲಾದ ಮಾಹಿತಿಯ ಪ್ರಕಾರ ೨೦೦೪-೨೦೦೫ರಲ್ಲಿ ಮೇಲಿನ ವರದಿ ಪ್ರಕಾರ ಶೇಕಡ ೬೧ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಗಳು, ಕೃಷಿ ಕ್ಷೇತ್ರದಲ್ಲಿ

ದುಡಿಮೆಗಾರರಾಗಿ ಜೀವನ ಸಾಗಿಸುತ್ತಿದ್ದಾರೆ. ಶೇಕಡ ೨೦.೫ರಷ್ಟು ಎಸ್.ಸಿ ಮತ್ತು ಎಸ್.ಟಿ ಕುಟುಂಬಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಅದೇ ರೀತಿಯಾಗಿ ಶೇಕಡ ೮೦.೮ರಷ್ಟು ಕುಟುಂಬಗಳು ಕೃಷಿ ಕೂಲಿಕಾರರಾಗಿ ಜೀವನ ಸಾಗಿಸುತ್ತಿದ್ದಾರೆ. ಈ ಮೇಲಿನ ಕೋಷ್ಟಕದಂತೆ ಉದ್ಯೋಗದ ವರ್ಗೀಕರಣ ಮತ್ತು ಅವಕಾಶಗಳ ಬಗ್ಗೆ ಹಿಂದುಳಿದ ವರ್ಗ ಮತ್ತು ಇತರ ಮೇಲ್ವರ್ಗಗಳಿಗೆ ಹೋಲಿಸಿದರೆ ಪರಿಶಿಷ್ಟರಲ್ಲಿ ಬಹಳಷ್ಟು ಅಂತರ ಕಂಡುಬರುತ್ತದೆ. ಉದ್ಯೋಗದ ರಾಚನಿಕ ಸ್ವರೂಪದಲ್ಲಿ ಪರಿಶಿಷ್ಟರ ಅಂತರವನ್ನು ಗಮನಿಸವುದಾದರೆ, ೧೯೯೧ರಲ್ಲಿ ಜಾರಿಗೆ ಬಂದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳು ಪರಿಶಿಷ್ಟರ ಸಾಂಪ್ರದಾಯಿಕ ಹುದ್ದೆಗಳನ್ನು ಕಸಿದುಕೊಂಡಿದ್ದು ಮತ್ತೆ ಅವರನ್ನು ಪರಾವಲಂಬನೆಗೆ ದೂಡಿತು ಎಂಬುದಾಗಿ ವರದಿ ಸಾದರ ಪಡಿಸುತ್ತದೆ.

೮೦ರ ದಶಕವು ಭಾರತದ ಮಟ್ಟಿಗೆ ಹೇಳುವುದಾದರೆ ಭಾರತವು ಒಂದು ಹೊಸದಿಗಂತದತ್ತ ದಾಪುಗಾಲು ಇಟ್ಟಿತು. ಅಂದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಕಡೆಗೆ ಒಲವು ತೋರಿಸಿ ಅದನ್ನು ೧೯೯೧ರಲ್ಲಿ ಸಾಭೀತು ಮಾಡಿತು. ೧೯೯೧ರಲ್ಲಿ ಭಾರತವು ಎಲ್.ಪಿ.ಜಿಗೆ ಸಹಿ ಹಾಕುವುದರ ಮೂಲಕ ಹೊಸ ಮನ್ವಂತರದತ್ತ ಪಯಣ ಬೆಳೆಸಿತು. ಇದರಿಂದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆಗಾದವಾದ ಬದಲಾವಣೆಗಳಾದವು. ಅನೇಕ ಜನಸಮುದಾಯಗಳು ಸ್ಥಿತ್ಯಂತರಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಗೊಳಗಾದರು.

ಸರ್ಕಾರಿ ಸ್ವಾಮ್ಯವನ್ನು ಖಾಸಗೀಕರಣ ಮಾಡುವ ಪ್ರಕ್ರೀಯೆ ಒಂದು ಕಡೆಯಾದರೆ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಋಣಾತ್ಮಕ ನೆಲೆಯಲ್ಲಿ ನೋಡುವಂತಾಯಿತು. ಇದರ ಜೋತೆಗೆ ೧೯೯೫ರಲ್ಲಿ ೫ನೇ ವೇತನ ಆಯೋಗವು ವರದಿ ನೀಡಿ ಯೋಜನೇತರ ವೆಚ್ಚವನ್ನು ಕಡಿಮೆ ಮಾಡಬೇಕು. ಮತ್ತು ಸರ್ಕಾರಿ ಹುದ್ದೆಗಳನ್ನು ಕಡಿತಗೊಳಿಸಬೇಕು ಎಂದು ಶಿಪಾರಸ್ಸು ಮಾಡಿತು ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ಕಾರಿ ಹುದ್ದೆಗಳನ್ನು ಕಡಿತಗೊಳಿಸಿ ಹೊಸ ನೇಮಕಾತಿಗಳನ್ನು ರದ್ದುಗೊಳಿಸಿದವು. ಇದರ ಜೊತೆಗೆ ಖಾಲಿ ಹುದ್ದೆಗಳನ್ನು ರದ್ದುಗೊಳಿಸಿದವು. ಸಂಪ್ರದಾಯಿಕ ಹುದ್ದೆಗಳ ಜಾಗದಲ್ಲಿ ಯಂತ್ರೋಪಕರಣಗಳು ಬಂದವು. ದೇಶದ ಆರ್ಥಿಕ ವಲಯಗಳಾದ ಭೂಮಿ, ಕೈಗಾರಿಕೆ, ವ್ಯಾಪರ, ವಾಣಿಜ್ಯ, ಸಾರಿಗೆ ಮತ್ತು ಸಂಪರ್ಕ ಎಲ್ಲವು ಶೇ ೧೫ರಷ್ಟಿರುವ ಶ್ರೀಮಂತರು ಅಥವಾ ಮೇಲ್ವರ್ಗದವರು ಆದೀನದಲ್ಲಿ ಉಳಿದವು.

ಆರ್ಥಿಕ, ಸಾಮಾಜಿಕ ಮತ್ತು ಸಂಸ್ಕೃತಿಕ ಕ್ಷೇತ್ರಗಳು ಬಾರಿ ಹೊಡತಕ್ಕೆ ಸಿಲುಕಿದವು ಹೀಗಾಗಿ ಜನರ ಸ್ಥಿತಿಗತಿಗಳಲ್ಲಿ ಏರು–ಪೇರುಗಳಾದವು. ಇದರ ಜೊತೆಗೆ ರಾಜಕೀಯ ಅಸ್ಥಿರತೆಯ ಸಮಸ್ಯೆಯಾಗಿ ಸಮಿಶ್ರ ಸರ್ಕಾರಕ್ಕೆ ಹೊಸ ಭಾಷೆಯನ್ನು ಬರೆಯಿತು. ಹೀಗಾಗಿ ಜನರ ಸ್ಥಿತಿ ಅತ್ತ ಧರಿ ಇತ್ತ ಪುಲಿ ಎಂಬಂತಾಯಿತು. ಹೀಗಾಗಿ ೯೦ರ ದಶಕವು ಅನೇಕ ಜನಸಮುದಾಯಗಳ ಸ್ವತಂತ್ರ್ಯ ಮತ್ತು ಸ್ವಾಭಿಮಾನ, ಸ್ವವಲಂಬನೆಗೆ ದಕ್ಕೆಯುಂಟು ಮಾಡಿತು. ಸ್ವಾಲಂಬನೆಗೆ ಆಧಾರವಾಗಿದ್ದ ಸರ್ಕಾರಿ

ಉದ್ಯೋಗ ೧೯೯೧ರಲ್ಲಿ ಕಾಂಗ್ರೇಸ್ ಮನುವಾದಿಗಳು ಜಾರಿಗೆ ತಂದ ಆರ್ಥಿಕ ನೀತಿಯಿಂದಾಗಿ ೧೯೯೧ರಲ್ಲಿ ಶೇಕಡ ೧.೫೨ರಷ್ಟಿದ್ದ ಸರ್ಕಾರದ ಉದ್ಯೋಗದ ಸೃಷ್ಟಿ ೧೯೯೩ರ ಅವಧಿಯಲ್ಲಿ ಶೇಕಡ ೦.೯ಕ್ಕೆ ಕುಸಿಯಿತು. ಮೇಲ್ವರ್ಗ ಅಥವಾ ಶ್ರೀಮಂತರ ಒಡೆತನದಲ್ಲಿರುವ ಖಾಸಗಿ ವಲಯದ ಉದ್ಯೋಗದ ಸೃಷ್ಟಿಯು ೧೯೯೧ರಲ್ಲಿ ಶೇ. ೧.೨೪ರಷ್ಟಿದ್ದದ್ದು ೧೯೯೮ರ ವೇಳೆಗೆ ೧.೭೨ಕ್ಕೆ ಹೆಚ್ಚಾಯಿತು. ಹೀಗಾಗಿ ಬಹುತೇಕ ಜನರಿಗೆ ಉದ್ಯೋಗ ಸಿಗದಂತೆ ಮತ್ತು ಪರಾವಲಂಬಿಗಳು ಆಗದಂತೆ ಈ ಹಂತದಲ್ಲಿ ಬಹಳ ನಯ ಮತ್ತು ನಾಜೂಕುನಿಂದ ಎಲ್.ಪಿ.ಜಿ.ಯನ್ನು ಜಾರಿಗೆ ತರಲಾಯಿತು. ಇಂತಹ ಪರಿಸ್ಥಿತಿಯನ್ನು ಯಾವುದೇ ಭೂಮಿ, ಬಂಡವಾಳ ಮತ್ತು ಶಿಕ್ಷಣ ಇಲ್ಲದ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳು ಭಾರತದ ಚರಿತ್ರೆಯಲ್ಲಿ ಮತ್ತೊಂದು ದುರಂತಕ್ಕೆ ಇಡಾದರು. ಅದೇ ರೀತಿಯಾಗಿ ಸೇವಾ ವಲಯಗಳಾದ ಶಿಕ್ಷಣ, ಆರೋಗ್ಯ, ಸಾರಿಗೆ ಮತ್ತು ಸಂಪರ್ಕಗಳಲ್ಲಾದ ಬದಲಾವಣೆಗಳನ್ನು ಅರಗಿಸಿಕೊಳ್ಳಲು ಪರಿಶಿಷ್ಟರಿಂದ ಸಾಧ್ಯವಾಗದ ಸ್ಥಿತಿ ತಲುಪಿದರು.[೮]

ಈ ರೀತಿಯಾಗಿ ಭಾರತದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಅಧ್ಯಯನ ಮಾಡಿದಾಗ ಕಂಡುಬರುವ ಸಂಗತಿಗಳು ಆಘಾತಕಾರಿಯಾಗಿವೆ. ಎರಡು ಸಾವಿರದ ಜಾಗತೀಕ ಮಾನವ ಅಭಿವೃದ್ಧಿ ವರದಿ ಪ್ರಕಾರ ಭಾರತದ ಜನಸಂಖ್ಯೆ ಅರ್ಧಕ್ಕಿಂತ ಹೆಚ್ಚು ಅಂದರೆ ಶೇ.೫೨ರಷ್ಟು ಜನರು ಬಡತನದಿಂದ ನರಳುತ್ತಿದ್ದಾರೆ. ಅಂದರೆ ಮೂರು ಹೊತ್ತಿನ ಊಟಕ್ಕೂ ಪರದಾಡುವ ಪರಸ್ಥಿತಿ ಎಂದರ್ಥ. ದುಡಿಯುವ ಸಾಮರ್ಥವಿರುವ ೩೦ ಕೋಟಿ ಜನ ನಿರುದ್ಯೋಗಿಗಳಾಗಿದ್ದಾರೆ. ಇದರಲ್ಲಿ ೨೦ ಕೋಟಿ ಜನ ಅವಿದ್ಯಾವಂತ ನಿರುದ್ಯೋಗಿಗಳು. ೧೦ ಕೋಟಿ ವಿದ್ಯಾವಂತ ನಿರುದ್ಯೋಗಿಗಳಾಗಿದ್ದಾರೆ. ಇದೊಂದು ಭೀಕರ ಪರಿಣಾಮ ಎಂದು ವರದಿ ತಿಳಿಸಿದೆ. ಅದರಂತೆ ಭಾರತದ ಒಟ್ಟು ಉದ್ಯೋಗದಲ್ಲಿ ಕೃಷಿ ಕ್ಷೇತ್ರವು ಶೇ. ೬೬ರಷ್ಟು ಉದ್ಯೋಗವನ್ನು ಒದಗಿಸುತ್ತದೆ. ಕೈಗಾರಿಕೆಗಳು ಶೇ.೧೩. ಮತ್ತು ಖಾಸಗಿ ವಲಯ ಶೇ.೯ರಷ್ಟು ಉದ್ಯೋಗವನ್ನು ಒದಗಿಸುತ್ತದೆ. ಅಂದರೆ ಶೇ.೯೮ರಷ್ಟು ಉದ್ಯೋಗವು ಭೂಮಿ, ಕೈಗಾರಿಕೆ ಮತ್ತು ಖಾಸಗಿ ಸೇವಾ ವಲಯಗಳಲ್ಲಿ ಸೃಷ್ಟಿಯಾಗುತ್ತವೆ ಎಂದರ್ಥ. ಆಗಿದ್ದರೆ ಭೂಮಿ, ಕೈಗಾರಿಕೆ, ಖಾಸಗಿ ಸೇವಾ ವಲಯ, ಯಾರಾ ಕೈಯಲ್ಲಿವೆ ಎಂಬುದು ಗಮನರ್ಹವಾದ ಸಂಗತಿ. ೧೯೯೪-೯೫ರ ಕೇಂದ್ರ ಗ್ರಾಮೀಣ ಅಭಿವೃದ್ಧಿ ಇಲಾಖೆಯ ವರದಿ ಪ್ರಕಾರ ಶೇ. ೬೬ರಷ್ಟು ಉದ್ಯೋಗವನ್ನು ಒದಗಿಸುವ ಭೂಮಿ ಒಡೆತನವು ಶೇ.೭೧ರಷ್ಟು ಭೂಮಿಯು ಕೇವಲ ಶೇ.೨೪ರಷ್ಟಿರುವ ಭೂ ಮಾಲೀಕರ ಆಧೀನದಲ್ಲಿದೆ. ಇನ್ನೂಳಿದ ಶೇ.೨೯ರಷ್ಟು ಭೂಮಿಯು ಶೇ.೪೩ರಷ್ಟಿರುವ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲಿದೆ. ದೇಶದ ಶೇ.೩೩ರಷ್ಟು ಜನರಿಗೆ ಒಂದಿಂಚು ಭೂಮಿಯು ಇಲ್ಲ. ಅಂದರೆ ಕೃಷಿ ಕ್ಷೇತ್ರದಲ್ಲಿ ಶೇ.೭೧ರಷ್ಟು ಭೂಮಿ ಹೊಂದಿರುವ ೨೪% ರೈತರು ಭೂಮಾಲೀಕರು ಸ್ವಾಲಂಬಿಗಳಾಗಿದ್ದಾರೆ. ದೇಶದ ಬಹುಸಂಖ್ಯಾತ ಜನರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಭೂಮಿಯು ಜಾತೀಯ ಅಸಮಾನತೆಯ ಮೇಲೆ ಅಂಚಿಕೆಯಾಗಿರುವುದರಿಂದ ಅವರು ಕೃಷಿ ಕಾರ್ಮಿಕರಾಗಿ, ದಿನಗೂಲಿಗಳಾಗಿ ಜೀವನ

ಸಾಗಿಸುತ್ತಿದ್ದಾರೆ. ಹೀಗಾಗಿ ಬಹುತೇಕ ವಿಚಾರಗಳಲ್ಲಿ ಅದರಲ್ಲಿ ವಿಶೇಷವಾಗಿ ಬಂಡವಾಳ ವೃದ್ಧಿ ಮತ್ತು ಆದಾಯ ಹೆಚ್ಚಿಸುವಲ್ಲಿ ತೆಗೆದುಕೊಂಡ ತೀರ್ಮಾನಗಳು ಭೂಮಿ ಮರು ಹಂಚಿಕೆಯಲ್ಲಿ ತೆಗೆದುಕೊಳ್ಳಲಾಗುತ್ತಿಲ್ಲ. ಅದನ್ನು ಆದ್ಯತೆಯನ್ನಾಗಿ ತೆಗೆದುಕೊಂಡರೆ ಭಾರತದ ಬಡತನಕ್ಕೆ ಅರ್ಥ ಬರುತ್ತದೆ.

೧೯೯೧ರ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರಕಾರ ಕರ್ನಾಟಕದಲ್ಲಿ ಬೆಂಗಳೂರು ಜಿಲ್ಲೆ ೦.೬೨೩ ಸೂಚ್ಯಾಂಕದೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದರೆ ರಾಯಚೂರು ಜಿಲ್ಲೆ ೨೭ನೇ ಸ್ಥಾನದಲ್ಲಿದೆ. ಅದೇ ರೀತಿಯಾಗಿ ೨೦೦೧ರ ಮಾನವ ಅಭಿವೃದ್ಧಿ ಸೂಚ್ಯಾಂಕ ವರದಿ ಪ್ರಕಾರ ೦.೭೫೩ ಸೂಚ್ಯಾಂಕದೊಂದಿಗೆ ಮೊದಲನೆ ಸ್ಥಾನದಲ್ಲಿದ್ದರೆ ರಾಯಚೂರು ಜಿಲ್ಲೆ ೨೭ನೇ ಸ್ಥಾನದಲ್ಲಿತ್ತು. (ಯು.ಎನ್.ಡಿ.ಪಿ ವರದಿ ೨೦೦೫) ಅದರಂತೆ ಜಿಲ್ಲಾವಾರು ಮಾನವ ಅಭಿವೃದ್ಧಿ ವರದಿ ಪ್ರಕಾರ ರಾಯಚೂರು ಜಿಲ್ಲೆ ಆರೋಗ್ಯ ಸೂಚ್ಯಾಂಕದಲ್ಲಿ ೧೬ನೇ ಸ್ಥಾನದಲ್ಲಿದ್ದರೆ ಶಿಕ್ಷಣದಲ್ಲಿ ೨೭ನೇ ಸ್ಥಾನ ಹಾಗೂ ಆದಾಯದಲ್ಲಿಯೂ ಸಹ ೨೭ನೇ ಸ್ಥಾನದಲ್ಲಿದೆ ಒಟ್ಟಾರೆಯಾಗಿ ೨೦೦೫ರ ಕರ್ನಾಟಕ ಮಾನವ ಅಭಿವೃದ್ಧಿ ಪ್ರಕಾರ ರಾಯಚೂರು ಜಿಲ್ಲೆ ೧೮ನೇ ಸ್ಥಾನದಲ್ಲಿದೆ. ಹೀಗಾಗಿ ರಾಯಚೂರು ಜಿಲ್ಲೆಯ ಮಾನವ ಅಭಿವೃದ್ಧಿ ದು:ಸ್ಥಿಯಲ್ಲಿದೆ ಎಂಬುದು ವರದಿಗಳು ಸಾದರಪಡಿಸಿವೆ. ಅದೇ ರೀತಿಯಾಗಿ ಉದ್ಯೋಗ ಮತ್ತು ದುಡಿಮೆಯ ರಾಚನಿಕ ಸ್ವರೂಪಕ್ಕೆ ಸಂಬಂಧಿಸಿದಂತೆ (೨೦೦೧ರ ಜಿಲ್ಲಾ ಅಂಕಿ-ಸಂಖಿಗಳ ನೋಟ) ಜಿಲ್ಲೆಯ ಒಟ್ಟು ಕೆಲಸಗಾರರ ಪೈಕಿ ಸಾಗುವಳಿದಾರರ ಪ್ರಮಾಣ ಶೇ.೩೭.೧೪ರಷ್ಟಿದ್ದರೆ ೨೦೧೧ರಲ್ಲಿ ಶೇ.೩೩.೫೦ಕ್ಕೆ ಕುಸಿದಿದೆ. ೨೦೦೧ರಲ್ಲಿ ಜಿಲ್ಲೆಯ ಒಟ್ಟು ಕೆಲಸಗಾರರಲ್ಲಿ ಕೃಷಿಕೂಲಿ ಕಾರ್ಮಿಕರ ಸಂಖ್ಯೆ ಶೇ.೨೮.೧೫ರಷ್ಟಿದ್ದರೆ. ೨೦೧೧ಕ್ಕೆ ೨೯.೫೭ಕ್ಕೆ ಹೆಚ್ಚಾಗಿದೆ. ಒಂದು ಪ್ರದೇಶದಲ್ಲಿ ಕೃಷಿ ಕೂಲಿಕಾರರು ಹೆಚ್ಚಾಳವೆಂದರೆ ಬಡತನ, ನಿರುದ್ಯೋಗ, ಕಡಿಮೆ ಮಟ್ಟದ ಜೀವನ, ಶಿಕ್ಷಣ, ಆರೋಗ್ಯ, ಆದಾಯ ಮತ್ತು ಅಪೌಷ್ಟಿಕತೆ ಅನಾರೋಗ್ಯಕರ ವಾತಾವರಣ ಸೂಚಿಸುತ್ತದೆ. ಇದೆ ಮಾನದಂಡವನ್ನು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಹೈದಾರ್‌ಬಾದ್ ಕರ್ನಾಟಕದಲ್ಲಿ ಕೃಷಿಕಾರ್ಮಿಕರು ಹೆಚ್ಚಾಗಿರಲು ಬಡತನ ಕಾರಣವಾಗಿದೆ ಎನ್ನಲಾಗಿದೆ. ೨೦೦೨ರ ಡಾ. ಡಿ.ಎಂ. ನಂಜುಡಪ್ಪ ಅವರ ಪ್ರಾದೇಶಿಕ ಅಸಮನಾತ ವರದಿ ಪ್ರಕಾರ ರಾಯಚೂರು ಜಿಲ್ಲೆ ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳ ಪೈಕಿ ಅತ್ಯಂತ ಹಿಂದೂಳಿದ ಜಿಲ್ಲೆಯೆಂದು ಸಮಿತಿ ಅಭಿಪ್ರಾಯಪಟ್ಟಿತು. ನಂಜುಂಡಪ್ಪ ವರದಿಯು ೩೫ ಸೂಚಿಗಳಿಂದ ಕೂಡಿದ ಸಮಗ್ರ ಸಂಯುಕ್ತ ಸೂಚ್ಯಾಂಕದ ಆಧಾರದ ಮೇಲೆ ರಾಜ್ಯದ ೧೭೫ ತಾಲೂಕುಗಳನ್ನು ಶ್ರೇಣಿಕರಿಸಲಾಗಿದ್ದು ಈ ಸೂಚ್ಯಾಂಕದಲ್ಲಿ ರಾಯಚೂರು ತಾಲೂಕು ಅತಿ ಹಿಂದೂಳಿದ ತಾಲ್ಲೂಕ ಆಗಿದ್ದು. ಸಿಂಧನೂರು, ದೇವದುರ್ಗ, ಲಿಂಗಸೂಗುರು ಮತ್ತು ಮಾನ್ವಿ ಅತ್ಯಂತ ಹಿಂದೂಳಿದ ತಾಲೂಕುಗಳಾಗಿದ್ದವು. ಅದರಲ್ಲಿ ದೇವದುರ್ಗ ತಾಲೂಕು ಕನಿಷ್ಟ ಸ್ಥಾನದಲ್ಲಿದ್ದರೆ. ಮಡಿಕೇರಿ ಗರಿಷ್ಟ ಸ್ಥಾನದಲ್ಲಿದೆ. ಒಟ್ಟಾರೆಯಾಗಿ ಕರ್ನಾಟಕದ ೭೮ ತಾಲೂಕುಗಳಲ್ಲಿ ಅತ್ಯಂತ ಹಿಂದೂಳಿದ ತಾಲೂಕುಗಳೆಂದು ಸಮಿತಿ ಗುರುತಿಸಿತ್ತು. ಅದರಲ್ಲಿ ೨೫ ಉತ್ತರ ಕರ್ನಾಟಕದಲ್ಲಿದ್ದರೆ, ೧೮ ತಾಲೂಕು ಹೈದಾರ್‌ಬಾದ್

ಕರ್ನಾಟಕದಲ್ಲಿವೆ. ಈ ೧೮ರಲ್ಲಿ ರಾಯಚೂರು ಜಿಲ್ಲೆಯ ಅಭಿವೃದ್ಧಿಯ ಮಟ್ಟ ಅತ್ಯಂತ ಕೆಳಮಟ್ಟದಲ್ಲಿದೆ ಎಂದು ಸಮಿತಿಯ ವರದಿಯಲ್ಲಿ ತಿಳಿಸಿದೆ.[೯]

ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ದೃಷ್ಟಾಂತಗಳು ಹೊರಬರುತ್ತವೆ. ಈ ದೃಷ್ಟಾಂತಗಳಲ್ಲಿ ನಂಜುಂಡಪ್ಪ ವರದಿ ಹೈದಾರ್‌ಬಾದ್ ಕರ್ನಾಟಕವನ್ನು ಇದುವರೆಗೆ ನಿರ್ಲಕ್ಷಿಸುತ್ತ ಬಂದಿದೆ. ಅಭಿವೃದ್ಧಿಯು ಅನುದಾನಕ್ಕೆ ಸಂಬಂಧಿಸಿದಂತೆ ಸಮಿತಿಯು ಮೀಸಲಿಡಬೇಕು ಮತ್ತು ಕಾಲವಧಿಯನ್ನು ನಿಗದಿ ಪಡಿಸಿತು. ಅದರಂತೆ ಸಾರಿಗೆ ಮತ್ತು ಸಂಪರ್ಕಗಳು ಸುಧಾರಣೆ ಕಂಡಿದೆ. ಅದೇ ರೀತಿಯಾಗಿ ಅಭಿವೃದ್ಧಿಯ ಕೆಲಸಗಳು ನಡೆಯುತ್ತಲೆ ಇವೆ. ಆದರೆ ಕೆಲಸ ಎಲ್ಲಿ ನಡೆಯಿತು ಹೇಗೆ ನಡೆಯಿತು ಎಂದು ಹುಡುಕಲು ಹೋದರೆ ಎಲ್ಲಿಯೂ ಏನನ್ನು ಸಿಗುವುದಿಲ್ಲ. ಅನುಧಾನ ಬಿಡುಗಡೆ ಆಗಿರುತ್ತದೆ ಆದರೆ ಹಣ ಖರ್ಚಾಗಿರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಪ್ರತಿವರ್ಷ ಸರ್ಕಾರ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ನೂರಾರು ಕೋಟಿ ರೂಪಾಯಿ ವಿಭಾಗವಾರು ಜಿಲ್ಲಾ ಮಟ್ಟಕ್ಕೆ ಬಿಡುಗಡೆ ಮಾಡುತ್ತದೆ. ಆದರೆ ಯಾರ ಮನೆಗೆ ನೀರು ಬಂದಿರುವುದಿಲ್ಲ. ಆದರೆ ಹಣ ಮಾತ್ರ ಖರ್ಚಾಗಿರುತ್ತದೆ. ನೀರಿನ ಆಹಕಾರ! ಹಾಗೆಯೇ ಇರುತ್ತದೆ. ಹಣವನ್ನು ಹೇಗೆ ಸಂಪಾಧಿಸಬಹುದು ಎಂಬುದನ್ನ ರಾಜಕಾರಣಿಗಳು ಮತ್ತು ಅಧಿಕಾರಿಗಳು ಕಂಡುಕೊಂಡ ಹೊಸ ದಾರಿ ನೀರು, ಹೀಗಾಗಿ ಇಂದಿಗೂ ಸಹ ಈ ಭಾಗ ಅಭಿವೃದ್ಧಿಯ ದುಃಸ್ಥಿತಿಯನ್ನು ಅನುಭವಿಸುತ್ತಿದೆ ೨೦೦೬ರ ಇನಸ್ಕೊ ವರದಿ ಪ್ರಕಾರ ಇಡಿ ಏಷ್ಯಾ ಖಂಡದಲ್ಲಿ ರಾಯಚೂರು ಜಿಲ್ಲೆ ಅತಿ ಹಿಂದೂಳಿದ ಮತ್ತು ಅದರಲ್ಲಿನ ದೇವದುರ್ಗ ಅತ್ಯಂತ ಹಿಂದೂಳಿದ ತಾಲೂಕು ಎಂದು ಅಭಿಪ್ರಾಯ ಪಟ್ಟಿದೆ. ಬಡತನ, ಅನಕ್ಷರತೆ, ಅಪೌಷ್ಟಿಕತೆಯಲ್ಲಿ ಆಫ್ರಿಕದ ಕಗ್ಗತ್ತಲೆಯ ಖಂಡವನ್ನು ನಾಚೂವಂತಿದೆ ಎಂದು ವರದಿ ಅಭಿಪ್ರಾಯ ಪಟ್ಟಿದೆ.[೧೦]

೨೦೧೧ರ ಜನಗಣಿತಿ ಪ್ರಕಾರ ರಾಯಚೂರು ಜಿಲ್ಲೆಯ ಜನಸಂಖ್ಯೆ ೧೯.೨೮ಲಕ್ಷ ಇದರಲ್ಲಿ ಗ್ರಾಮೀಣ ಜನಸಂಖ್ಯೆ ೧೨.೪೮ ಲಕ್ಷ, ಒಟ್ಟು ಜನಸಂಖ್ಯೆಯಲ್ಲಿ ಶೇ.೬೪.೭೫ರಷ್ಟು ಗ್ರಾಮೀಣ ಪ್ರದೇಶದಲ್ಲಿದೆ. ಒಟ್ಟು ೨.೯೮ಲಕ್ಷ ಕುಟುಂಬಗಳಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಜನಸಂಖ್ಯೆಯ ಪ್ರಮಾಣ ೩೨.೧೫ ಇದೆ. ೩೩.೦೭ರಷ್ಟು ಅತೀಹೆಚ್ಚು ಪರಿಶಿಷ್ಟ ಪಂಗಡದ ಜನಸಂಖ್ಯೆ ದೇವದುರ್ಗ ತಾಲೂಕಿನಲ್ಲಿದೆ. ಮತ್ತು ಅತ್ಯಂತ ದುಃಸ್ಥಿತಿಯಲ್ಲಿರುವ ಜನರು ಸಹ ಅವರೆ ಆಗಿದ್ದಾರೆ. ಹೀಗೆ ಮಾನವ ಅಭಿವೃದ್ಧಿ ವರದಿಗಳು ಯು.ಎನ್.ಡಿ.ಪಿ ವರದಿಗಳು ಮತ್ತು ನಂಜುಂಡಪ್ಪ ವರದಿ ಮತ್ತು ಪ್ರಾದೇಶಿಕ ಅಧ್ಯಯನಗಳು ಸಹ ಒಂದೇ ಮಾದರಿಯ ಫಲಿತಾಂಶಗಳನ್ನು ಹೊರ ಹಾಕಿವೆ.

ಕೋಷ್ಟಕ ೧.೨. ೨೦೦೦ರಲ್ಲಿ ಹೈದಾರ್‌ಬಾದ್ ಕರ್ನಾಟಕ ಶೈಕ್ಷಣಿಕ ಸ್ಥಿತಿ

ಜಿಲ್ಲೆ	**ಸಾಪೇಕ್ಷ ಅಭಿವೃದ್ಧಿ**	**ಹಿಂದೂಳಿದ ತಾಲ್ಲೂಕ**	**ಅತೀ ಹಿಂದೂಳಿದ ತಾಲ್ಲೂಕ**	**ಅತ್ಯಂತ ಹಿಂದೂಳಿದ ತಾಲ್ಲೂಕು**
ಬಳ್ಳಾರಿ	ಇಲ್ಲಾ	ಇಲ್ಲಾ	ಹೊಸಪೇಟೆ ಬಳ್ಳಾರಿ ಹಡಗಲಿ ಕೂಡ್ಲಿಗಿ ಹಗರಿ ಬೊಮ್ಮನಳ್ಳಿ	ಸಂಡೂರು ಸಿರುಗುಪ್ಪ
ಬೀದರ	ಇಲ್ಲಾ	ಬೀದರ ಬಾಲ್ಕಿ	ಔರಾದ ಬಸವಕಲ್ಯಾಣ	ಇಲ್ಲಾ
ಗುಲ್ಬರ್ಗಾ	ಗುಲ್ಬರ್ಗಾ	ಇಲ್ಲಾ	ಇಲ್ಲಾ	ಆಳಂದ ಅಫ್ಜಲ್‌ಪುರ್, ಚಿತ್ತಾಪೂರ, ಚಿಂಚೋಳಿ, ಸೇಡಂ, ಜೆವರ್ಗಿ, ಸುರಪುರ, ಶಹಾಪುರ, ಯಾದಗಿರಿ
ಕೊಪ್ಪಳ	ಇಲ್ಲಾ	ಇಲ್ಲಾ	ಕೊಪ್ಪಳ	ಯಲಬುರ್ಗಾ, ಗಂಗಾವತಿ, ಕುಷ್ಟಗಿ
ರಾಯಚೂರು	ಇಲ್ಲಾ	ಇಲ್ಲಾ	ರಾಯಚೂರು	ಸಿಂದನೂರು, ಲಿಂಗಸುಗೂರು,
ಗುಲ್ಬರ್ಗಾ ವಿಭಾಗ	೧	೨	೧೦	೧೮
ಉತ್ತರ ಕರ್ನಾಟಕ ವಿಭಾಗ	೨೦	೧೭	೧೮	೨೫
ಕರ್ನಾಟಕ ರಾಜ್ಯ	೬೯	೩೬	೩೫	೩೫

ಆಧಾರ: ಹೈ ಪವರ್ ಕಮಿಟಿ ಫಾರ್ ರೀಡ್ರೆಸ್ಸಲ್ ಆಫ್ ರಿಜಿನಲ್ ಇಂಬ್ಯಾಲೆನಸ್ ೨೦೦೨.

ರಾಯಚೂರು ಜಿಲ್ಲೆಯನ್ನು ಕುರಿತು ಚರ್ಚಿಸುವುದಾದರೆ ಅದೊಂದು ದುಃಸ್ಥಿತಿಯ ಕಥೆಯಾಗುತ್ತದೆ. ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳಲ್ಲಿ ಅತ್ಯಂತ ಹಿಂದೂಳಿದ ಜಿಲ್ಲೆ ಎಂದು ಗುರುತಿಸಿಕೊಂಡಿದೆ. ಅಭಿವೃದ್ಧಿಯ ಫಲಗಳು ಜಿಲ್ಲೆಯ ಜನರನ್ನು ತಲುಪುತ್ತಿಲ್ಲ. ಹಾಗಾಗಿ ಅನೇಕ ವಲಯಗಳಲ್ಲಿ ಹಿಂದೂಳಿದಿವೆ. ಜಿಲ್ಲೆಯು ತಲಾವರಮಾನ, ಕೃಷಿ, ಕೈಗಾರಿಕೆ, ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ, ಆದಾಯ, ಮಕ್ಕಳ ಅಪೌಷ್ಟಿಕತೆ, ಮಹಿಳೆಯರಲ್ಲಿ ರಕ್ತಹೀನತೆ ಮೊದಲಾದವುಗಳಲ್ಲಿ ಜಿಲ್ಲೆ ದುಃಸ್ಥಿತಿಯಲ್ಲಿದೆ.[೧೦]

ಅದೇ ರೀತಿಯಾಗಿ ಜಿಲ್ಲೆ ಬರ, ಬಡತನ, ನಿರುದ್ಯೋಗ, ಅಸಮಾನತೆ, ಅನಾರೋಗ್ಯ ವಲಸೆಗಳಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಯಚೂರು ಜಿಲ್ಲೆಯ ಒಟ್ಟು ದುಡಿಮೆಗಾರರಲ್ಲಿ ಮಹಿಳೆ ದುಡಿಮೆಗಾರರು ಶೇ. ೩೯.೨೩ ಇದ್ದು, ರಾಜ್ಯದ ಒಟ್ಟು ಮಹಿಳಾ

ದುಡಿಮೆಗಾರರ ಸಂಖ್ಯೆಗಿಂತ ಶೇ.೩೫.೨೬ರಷ್ಟು ಹೆಚ್ಚಾಗಿದೆ. ಮೇಲೆ ಹೇಳಲಾದ ಎಲ್ಲ ಸೂಚಿಗಳು ರಾಯಚೂರು ಜಿಲ್ಲೆಯ ದುಃಸ್ಥಿತಿಯನ್ನು ಮತ್ತು ಆರ್ಥಿಕ, ಸಾಮಾಜಿಕ ಚಿತ್ರಣದ ಒಂದು ಮಗ್ಗಲನ್ನು ಮಾತ್ರ ಹೊರ ಹಾಕುತ್ತದೆ. ಜನಗಣತಿ ವರದಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಅತಿ ಸಣ್ಣ ಭೂ ಹಿಡುವಳಿದಾರರು ಮತ್ತು ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಜಿಲ್ಲೆಯ ಒಟ್ಟು ಭೂಹಿಡುವಳಿದಾರರಲ್ಲಿ ೩.೩೭ಲಕ್ಷ ಮಧ್ಯಮ ಹಿಡುವಳಿದಾರರಿದ್ದಾರೆ. ಅತಿ ಸಣ್ಣ ಹಿಡುವಳಿದಾರರ ಪ್ರಮಾಣ ಶೇ.೪೧ರಷ್ಟಿದೆ. ಭೂ ಹಿಡುವಳಿ ಮತ್ತು ಭೂ ಬಳಕೆಯಲ್ಲಿ ಬಾರಿ ಅಂತರ ಕಂಡುಬರುತ್ತದೆ. ಹೀಗಾಗಿ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳು ಭೂಮಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ರಾಯಚೂರು ಜಿಲ್ಲೆಯಲ್ಲಿ ಅನೇಕ ಭೂ ಹೋರಾಟಗಳಾಗಿರುವುದನ್ನು ಕಾಣಬಹುದು. ಮೇಲಿನ ಸಂಕಥನಗಳು ಒಂದು ರೀತಿಯ ಕಥೆಗಳನ್ನು ಹೇಳಿದರೆ ಗ್ರಾಮೀಣ ಪ್ರದೇಶಗಳು ಮತ್ತೊಂದು ಕಥೆಯನ್ನು ಹೇಳುತ್ತವೆ. ಗ್ರಾಮಗಳ ಅಧ್ಯಯನ ಸಾಮಾನ್ಯ ಮಾಹಿತಿ ಗ್ರಾಮಗಳಲ್ಲಿ ಜಾತಿ ಪದ್ಧತಿ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಒಳಗೊಂಡಿದೆ. ಜನಸಂಖ್ಯೆ ಮತ್ತು ಅಭಿವೃದ್ಧಿ ಫಲಗಳನ್ನು ಕುರಿತು ಚರ್ಚಿಸುವಾಗ ಜಾತಿ ಪರಿಕಲ್ಪನೆಯನ್ನು ಹೊರಗಿಟ್ಟು ವಿಶ್ಲೇಷಿಸುವುದು ಅಥವಾ ಜಾತಿಯನ್ನು ಪರಿಗಣಿಸಿದಿರುವುದು ಅಪೂರ್ಣ ಚರ್ಚೆಯಾಗುತ್ತದೆ. ಭಾರತೀಯ ಸಮಾಜದ ಏಣಿ–ಶ್ರೇಣಿಯಲ್ಲಿ ಜಾತಿ ಪರಿಕಲ್ಪನೆ ಮುಖ್ಯವಾದದ್ದು. ಇದು ಪ್ರಾಚೀನ ಕಾಲದಿಂದ ಬೆಳೆದು ಆಧುನಿಕ ಕಾಲದಲ್ಲಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಆದ್ದರಿಂದ ಈಗಲೂ ಜಾತಿ ಆಧಾರದಲ್ಲಿ ಅನೇಕ ಅಂಶಗಳು ಸಂಗತಿಗಳು ನಿರ್ಧರವಾಗುತ್ತವೆ. ಮುಂದೆಯೂ ಸಹ ಹೊಸ ಸ್ವರೂಪದಲ್ಲಿ ತನ್ನ ಅಸ್ತಿತ್ವ ಕಂಡುಕೊಳ್ಳುತ್ತದೆ. ಈ ಕಾರಣದಿಂದಲೆ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮತ್ತು ಯೋಜನೆಗಳಲ್ಲಿ ಜಾತಿಯನ್ನು ಮುಖ್ಯದಾತುವನ್ನಾಗಿ ಪರಿಗಣಿಸಲಾಗುತ್ತದೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಜಾತಿಯವರನ್ನು ಅಸ್ಪೃಶ್ಯರೆಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳೆಂದು (ಹರಿಜನ, ಗಿರಿಜನ) ಶೋಷಿತ ಸಮುದಾಯ, ಅವಕಾಶ ವಂಚಿತ ವರ್ಗ ಮತ್ತು ದಲಿತ ವರ್ಗವೆಂದು ಹೀಗೆ ಹಲವಾರು ರೀತಿಯಲ್ಲಿ ಜಾತಿಯನ್ನು ಬಳಸುತ್ತ ಬರಲಾಗಿದೆ. ಸಂವಿಧಾನದ ಘೋಷಣೆಯ ಪ್ರಕಾರ ೧೯೫೦ರಲ್ಲಿ ಇವುಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳೆಂದು ಕರೆಯಲಾಗಿದೆ. ೧೯೫೬ರ ತಿದ್ದುಪಡಿ ಘೋಷಣೆಯ ಪ್ರಕಾರ ಕರ್ನಾಟಕದಲ್ಲಿ ೧೨೬ ಪರಿಶಿಷ್ಟ ಜಾತಿಗಳಿವೆ ಎನ್ನಲಾಗಿತ್ತು ಇಂದು ಕರ್ನಾಟಕದಲ್ಲಿ ೧೦೧ ಪರಿಶಿಷ್ಟ ಜಾತಿಗಳು ಮತ್ತು ೫೧ ಪರಿಶಿಷ್ಟ ಪಂಗಡಗಳು ಇವೆ. ಕರ್ನಾಟಕದಲ್ಲಿ ಇತರೆ ಜಾತಿಗಳೆಂದರೆ ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗ, ವಿಶ್ವಕರ್ಮ, ಉಪ್ಪಾರ, ಮಡಿವಾಳ, ಕೊಮಟಿಗ ಹೀಗೆ ಅನೇಕ ಜಾತಿಗಳಿವೆ. ಜಾತಿ ಪದ್ಧತಿಯ ಏಣಿ–ಶ್ರೇಣಿಗಳಲ್ಲಿ ಲಿಂಗಾಯಿತ ಮತ್ತು ಒಕ್ಕಲಿಗ ಪ್ರಬಲ ಜಾತಿಗಳಾಗಿವೆ. ಈ ಹಿಂದೆ ತಿಳಿಸಿದಂತೆ ರಾಯಚೂರು ಜಿಲ್ಲೆಯಲ್ಲಿ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ.೪೦ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿದ್ದಾರೆ. ಇದರಲ್ಲಿ ಶೇ.೧೯.೫ರಷ್ಟು ಪರಿಶಿಷ್ಟ ಜಾತಿ ಹಾಗೂ ೧೮.೫ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿದ್ದಾರೆ. ಲಿಂಗಾಯಿತರು ಜಿಲ್ಲೆಯ ಪ್ರಬಲ

ಸಮುದಾಯವೆಂದು ಗುರುತಿಸಲ್ಪಟ್ಟಿದ್ದಾರೆ. ಶೇ.೮೬.೪೪ರಷ್ಟು ದೊಡ್ಡ ಹಿಡುವಳಿದಾರರು ಇತರೆ ಸಮುದಾಯಕ್ಕೆ ಸೇರಿದ್ದವರಾಗಿದ್ದಾರೆ. ಲಿಂಗಾಯಿತ ಮತ್ತು ಕುರುಬ ಸಮುದಾಯ ಪ್ರಮುಖವಾದವು.

ಜಿಲ್ಲೆಯಲ್ಲಿ ಭೂ ಸಂಪತ್ತು ಪ್ರಮುಖ ಅಂತಸ್ತನ್ನು ಸೂಚಿಸುವ ಅಂಶವಾಗಿ ಪ್ರಬಲ ಜಾತಿಗಳಾದ ಲಿಂಗಾಯಿತ ಮತ್ತು ಕುರುಬರ ಹಿಡಿತದಲ್ಲಿದೆ. ಹೀಗಾಗಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಜಾತಿ ಅಸಮಾನತೆ ಮತ್ತು ಸಂಪತ್ತಿನ ಅಸಮಾನತೆಯಿಂದ ನಲಿಗಿ ನಿತ್ರಾಣಗೊಂಡಿದ್ದಾರೆ. ಅವರ ಬದುಕು ಮತ್ತು ಬವಣೆಗಳು 'ಅತ್ತ ಧರಿ ಇತ್ತ ಪುಲಿ' ಎಂಬಂತಾಗಿದೆ. ಈ ಹಿನ್ನೆಲೆಯಲ್ಲಿ ಈ ಆಧ್ಯಯನವು ಪರಿಶಿಷ್ಟರ ಅಭಿವೃದ್ಧಿಗೆ ಒಂದು ಆಕಾರವಾಗಬಲ್ಲದು ಎಂಬ ಆಶೆಯವನ್ನು ಹೊಂದಿದೆ.

ರಾಜ್ಯಮಟ್ಟದ ಜೊತೆಗೆ ಗುಲ್ಬರ್ಗಾ ವಿಭಾಗವನ್ನು ಹೋಲಿಕೆ ಮಾಡುತ್ತಾ, ಗುಲ್ಬರ್ಗಾ ವಿಭಾಗಗಳ ಒಟ್ಟು ವರಮಾನ ಹಾಗೂ ತಲಾ ವರಮಾನ ೧೯೯೨-೯೪ ರಿಂದ ೨೦೦೨-೦೪ರ ಅವಧಿಯಲ್ಲಿ ತೀವ್ರವಾಗಿ ಏರಿಕೆ ಆಗಿದೆ. ಆದರೆ ರಾಜ್ಯ ಮಟ್ಟದ ಅಭಿವೃದ್ಧಿಗೆ ಹೋಲಿಸಿದರೆ, ತುಂಬಾ ಮಂದಗತಿಯದ್ದಾಗಿದೆ. ಗುಲ್ಬರ್ಗಾ ವಿಭಾಗದ ಜಿಲ್ಲಾ ಮಟ್ಟದ ಒಟ್ಟು ವರಮಾನ ೧೯೯೩-೯೪ರಲ್ಲಿ ರೂ ೫೬೬೪.೨೮ ಕೋಟಿ ಇತ್ತು. ೨೦೦೩-೦೪ರಲ್ಲಿ ೧೯೧೧೭.೭೮ ಕೋಟಿಗೆ ಏರಿದೆ. ಇಲ್ಲಿನ ವಾರ್ಷಿಕ ವರಮಾನದ ಬೆಳವಣಿಗೆ ಶೇ. ೨೩.೨೫ ಇದೆ. ಇದೇ ಅವಧಿಯಲ್ಲಿ ರಾಜ್ಯದ ಒಟ್ಟು ವರಮಾನ ೪೧.೦೭೯.೦೫ ಕೋಟಿ ರಿಂದ ೧೩೦.೧೨೬.೬೧ ಕೋಟಿ ರೂಪಯಿಗೆ ಏರಿದೆ. ಇಲ್ಲಿನ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೨೧.೬೧ ಗುಲ್ಬರ್ಗಾ ವಿಭಾಗದ ತಲಾ ವರಮಾನವು ೧೯೯೨-೯೪ರಿಂದ ೨೦೦೩-೦೪ರ ಅವಧಿಯಲ್ಲಿ ೬.೬೪೧.೫೦ರಿಂದ ೧೭.೩೮೬ಕ್ಕೆ ಏರಿದೆ. ಇಲ್ಲಿನ ವಾಷಿಕ ಪ್ರಮಾಣ ಶೇ. ೧೬.೧೮ ಇದೇ ಅವಧಿಯಲ್ಲಿ ರಾಜ್ಯಮಟ್ಟದ ತಲಾ ವರಮಾನವು ರೂ. ೮.೭೦೬ ರಿಂದ ೨೩.೫೮೬ಕ್ಕೇರಿದೆ. ಇದರ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. ೧೭.೮೪ ಒಟ್ಟು ಎಡಯಾಗಿ ಗುಲಬರ್ಗಾ ವಿಭಾಗವು ಅಭಿವೃದ್ದಿಯಾಗಿದೆ. ಆದರೆ ಸಾಪೇಕ್ಷವಾಗಿ ಅಭಿವೃದ್ದಿ ತೃಪ್ತಿಕರವಾಗಿಲ್ಲ. ಅದೇ ರೀತಿಯಾಗಿ ಸಾಕ್ಷರತೆಯಲ್ಲಿ ಗುಲ್ಬರ್ಗಾ ವಿಭಾಗದ ಸ್ಥಿತಿ ಅತ್ಯಂತ ಹೀನಾಯವಾಗಿದೆ. ಇಡೀ ರಾಜ್ಯದಲ್ಲಿ ೨೦೦೧ರಲ್ಲಿ ಅಕ್ಷರಸ್ಥರ ಸಂಖ್ಯೆ ೩೦೪.೩೫ ಲಕ್ಷ ಇದ್ದರೆ, ಗುಲ್ಬರ್ಗಾ ವಿಭಾಗದ ಅಕ್ಷರಸ್ಥರ ಸಂಖ್ಯೆ ೪೨.೫೭ ಲಕ್ಷ. ರಾಜ್ಯದ ಅಕ್ಷರಸ್ಥರಲ್ಲಿ ಗುಲ್ಬರ್ಗಾ ವಿಭಾಗವು ಶೇ.೧೮ ರಷ್ಟು ಹೊಂದಿದ್ದರೆ, ರಾಜ್ಯದ ಅಕ್ಷರಸ್ಥರಲ್ಲಿ ಅದರ ಪಾಲು ಕೇಚಲ ಶೇ.೧೮ ಇದಕ್ಕಿಂತ ಆತಂಕಕಾರಿ ಸಂಗತಿಯೆಂದರೆ, ಲಿಂಗ ಸಂಬಂಧಿ ಸಾಕ್ಷರತಾ ಸೂಚ್ಯಂಕ ರಾಜ್ಯಮಟ್ಟದಲ್ಲಿ ೨೦೦೧ರಲ್ಲಿ ಶೇ ೨೭.೩೩ರಷ್ಟಿದ್ದರೆ, ಗುಲ್ಬರ್ಗಾ ವಿಭಾಗದ ಸೂಚ್ಯಂಕದಲ್ಲಿ ಕೇವಲ ೬೦.೭೦ ರಾಜ್ಯಮಟ್ಟದಲ್ಲಿ ೨೦೦೧ರಲ್ಲಿ ಸಾಕ್ಷರತಾ ಪ್ರಮಾಣ ಶೇ ೬೭.೦೪ರಷ್ಟು ಇದ್ದರೆ, ಗುಲ್ಬರ್ಗಾ ವಿಭಾಗದಲ್ಲಿ ಸಾಕ್ಷರತೆ ಅತಿ ಹೆಚ್ಚು ಬೀದರ್‌ನಲ್ಲಿದೆ. ಶೇ ೬೧.೭೪ ರಷ್ಟಿದ್ದರೆ. ಅತೀ ಕಡಿಮೆ ಶೇ ೫೦ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿದೆ. (೨೦೧೦ ಡಿಸೆಂಬರ್ ೩೧ರಂದು ಯಾದಗಿರಿ

ಜಿಲ್ಲೆ ರಚನೆಯಾಗಿದೆ. ಯಾದಗಿರಿ ಜಿಲ್ಲೆ ಗುಲಬರ್ಗಾ ವಿಭಾಗದಲ್ಲಿ ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ.) ಇವೆರಡೂ ಜಿಲ್ಲೆಗಳು ರಾಜ್ಯದಲ್ಲಿ ಅತೀ ಕಡಿಮೆ ಸಾಕ್ಷರತೆ ಜಿಲ್ಲೆಗಳಾಗಿವೆ ಇನ್ನು ಮಹಿಳಾ ಸಾಕ್ಷರತೆಯ ಸ್ಥಿತಿಗತಿಗಳ ಬಗ್ಗೆ ಬೇರೆನೂ ಹೇಳುವ ಅಗತ್ಯವಿಲ್ಲ. ರಾಜ್ಯಮಟ್ಟದಲ್ಲಿ ಮಹಿಳಾ ಸಾಕ್ಷರತೆ ೨೦೧೧ರಲ್ಲಿ ಶೇ ೫೭.೪೫ರಷ್ಟು ಅತಿಹೆಚ್ಚು ಮಹಿಳಾ ಸಾಕ್ಷರತೆಯನ್ನು ಶೇ ೭೭.೩೯ ದಕ್ಷಿಣ ಜಿಲ್ಲೆಯಲ್ಲಿದೆ. ಮಹಿಳೆಯರ ಸಾಕ್ಷರತೆ ಶೇ ೪೦ಕ್ಕಿಂತ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿದೆ. ಸಾಕ್ಷರತೆಯಲ್ಲಿ ಶೇ ೩೦ಕ್ಕಿಂತ ಕಡಿಮೆ ಇರುವ ಯಾದಗಿರಿ, ಶೇ ೨೯.೯೯. ಶಹಾಪೂರ ೨೯.೯೭, ಜೇವರ್ಗಿ ಶೇ ೨೯.೮೬. ಮತ್ತು ದೇವದುರ್ಗ ಶೇ ೯೨.೭೦ ಇದ್ದು ಸಾಕ್ಷರತೆಯ ಚಿತ್ರಣ, ಅದೇ ರೀತಿಯಲ್ಲಿ ಮಾನವ ಅಭಿವೃದ್ಧಿಯಲ್ಲಿಯೂ ಸಹ ರಾಜ್ಯದ ವರಮಾನ ವರ್ಚನೆಯ ದೃಷ್ಟಿಯಿಂದ ಗುಲ್ಬರ್ಗಾ ವಿಭಾಗವು ಉಳಿದೆಲ್ಲಾ ವಿಭಾಗಕ್ಕಿಂತ ತುಂಬಾ ಕೆಳಮಟ್ಟದಲ್ಲಿದೆ. ಮಾನವ ಅಭಿವೃದ್ಧಿ ವರದಿಯ ಶಿಕ್ಷಣ, ಆರೋಗ್ಯ, ಸಾಕ್ಷರತೆ, ವರಮಾನ ಒಳಗೊಂಡ ಸಂಯುಕ್ತ ಮಾಪನವಾಗಿದೆ. ಇತರ ಜಿಲ್ಲೆಗಳು ಮತ್ತು ಗುಲ್ಬರ್ಗಾ ವಿಭಾಗ ಮಟ್ಟಕ್ಕೆ ಹೋಲಿಸಿದರೆ, ಗುಲ್ಬಗಾ ವಿಭಾಗ ಮನವ ಅಭಿವೃದ್ಧಿಯಲ್ಲಿ ಕೆಳಮಟ್ಟದಲ್ಲಿದೆ. ಅದರಲ್ಲಿ ರಾಯಚೂರು ಜಿಲ್ಲೆಯೆಂಬುದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಅರ್ದದಷ್ಟು ಜನ ಮಹಿಳೆಯರಿದ್ದಾರೆ. ಇದು ಹೈದ್ರಬಾದ್ ಕರ್ನಾಟಕ ಪ್ರದೇಶಕ್ಕೂ ಅನ್ವಯಿಸುತ್ತದೆ. ಲಿಂಗಾನುಪಾತವು ನಮ್ಮ ಸಮಾಜದಲ್ಲಿ ವಿರುದ್ಧವಾಗಿದೆ. ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಅಲ್ಲಿ ಮಹಿಳೆಯರು ವಂಚಿತರಾಗಿರುವುದು ಕಂಡುಬರುತ್ತದೆ. ಕೌಟುಂಬಿಕ ಹಿಂಸೆ, ಲೈಂಗಿಕ ಕಿರುಕುಳ, ಲಿಂಗತಾರತಮ್ಯ, ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಾ ನಡೆದಿದೆ. ಈ ಎಲ್ಲ ಸಂಗತಿಗಳನ್ನು ಹೈದ್ರಬಾದ್ ಕರ್ನಾಟಕದ ಮಹಿಳೆಯರು ಎದುರಿಸುತ್ತಿದ್ದಾರೆ. ವಾಸ್ತವಾಗಿ ಅಲ್ಲಿ ಮಹಿಳೆಯರು ದುಡಿಮೆ ಸಹಭಾಗಿತ್ವ ಪ್ರಮಾಣವು ೨೦೧೧ರಲ್ಲಿ ಶೇ.೩೪.೫೮ ರಷ್ಟಿದೆ. ರಾಜ್ಯ ಮಟ್ಟದಲ್ಲಿ ಅದು ಸಾಮಾಜಿಕ ಸಂಗತಿ. ಆದರಿಂದ ಎಲ್ಲರ ಬದುಕು ಉತ್ತಮ ಪಡಿಸಬಹುದಾಗಿದೆ. ಈ ಲಿಂಗ ಸಮಾನತೆಯನ್ನು ಅಭಿಯಾನ ರೂಪದಲ್ಲಿ ಕೈಗೊಳ್ಳಬೇಕೆಂದಿದ್ದಾರೆ.[೧೧]

ಅದೇ ರೀತಿಯಾಗಿ ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳು ನಡೆಯುವುದಿಲ್ಲ ಎಂಬುದು ಗೆಜೆಟಿಯರ್‌ನಿಂದ ತಿಳಿದುಕೊಳ್ಳಲು ಅನುಕೂಲವಾಗಿದೆ. ಜಿಲ್ಲಾ ಜಗಣತಿ ೨೦೧೧ ರಾಯಚೂರು ಜಿಲ್ಲೆ ಭಾರತದ ೬೪೦ ಜಿಲ್ಲೆಗಳಲ್ಲಿ ೨೪೫ನೇ ಸ್ಥಾನ ಪಡೆದುಕೊಂಡಿದೆ. ಕರ್ನಾಟಕದ ೩೦ ಜಿಲ್ಲೆಗಳ ಪೈಕಿ ಹಿಂದುಳಿದ ಜಿಲ್ಲೆಯಾಗಿ ಗೋಚರಿಸುತ್ತದೆ. ಬಡತನ ಅನಕ್ಷರತೆ ನಿರುದ್ಯೋಗ ಭೂಹೀನ ಬಡ ದಲಿತರ ಪಾಲಿಗೆ ಕಂಡರು, ಮತ್ತೊಮ್ಮೆ ಬಿಡಿ ಬಿಡಿಯಾಗಿ ಕಂಡುಬರುತ್ತದೆ. ಮುಖ್ಯವಾಗಿ ಜಾಗತೀಕರಣದ ಕದಂಬ ಬಾಹುಗಳಲ್ಲಿ ಜನರು ನಲುಗುತ್ತಿದ್ದಾರೆ. ಅದಕ್ಕಾಗಿ ಬೆವರು ಹರಿಸುತ್ತಿದ್ದಾರೆ. ಕಣ್ಣೀರು ಹರಿಸುತ್ತಿದ್ದಾರೆ. ಆದರೂ ಇಲ್ಲಿಯ ಜನರು ಬದುಕು ಹಸನಾಗುತ್ತಿಲ್ಲ. ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಸ್ಥಿತಿಗತಿಗಳು ತೀರಾ ಚಿಂತಾಜನಕವಾಗಿದೆ. ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡದ ಅಭಿವೃದ್ಧಿಯನ್ನು ಇತರ ಜಿಲ್ಲೆಗಳಿಗೆ ಹೋಲಿಸಿದರೆ ಈ ಸಮುದಾಯ ಹಿಂದುಳಿಯುವಿಕೆಗೆ ವಿರಾಟ ಸ್ವರೂಪ ಗೋಚರಿಸುತ್ತದೆ. ಇದಕ್ಕೆ ಐತಿಹಾಸಿಕ ಕಾರಣಗಳನ್ನು ಸಹ ನಾವು ಅಲ್ಲಗಳೆಯುವಂತಿಲ್ಲ ಯಾಕೆಂದರೆ ೧೯೨೦ ಮುಂಬೈ ಕರ್ನಾಟಕ, ಕೊಲ್ಲಾಪುರ ಸಂಸ್ಥಾನದಲ್ಲಿ ಮೀಸಲಾತಿ ಜಾರಿಗೆ ತಂದು ಅಲ್ಲಿನ ಹಿಂದುಳಿದ ದಲಿತರಿಗೆ ಮೀಸಲಾತಿ ಜಾರಿಗೆ ವ್ಯವಸ್ಥೆ ಕಲ್ಪಿಸಿ ಹಿಂದುಳಿದ ಅಲ್ಪಸಂಖ್ಯಾತರ ಮತ್ತು ಕೆಳವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಯಿತು. ಅಂದರೆ ಕರ್ನಾಟಕದ ಇತರೆ ಭಾಗಕ್ಕೆ ಹೋಲಿಸಿದರೆ ಹೈದ್ರಬಾದ್ ಕರ್ನಾಟಕ ಪ್ರದೇಶದಲ್ಲಿ ೧೯೨೦ ರಿಂದ ೧೯೪೮ ರವರೆಗೂ ಭಾಗದ ಜನರಿಗೆ ಮೀಸಲಾತಿಯ ಮತ್ತು ರಾಜಕೀಯದ ಗಂಧ ಗಾಳಿ ಸೋಕಲೇ ಇಲ್ಲ. ಅಲ್ಲಿಂದ ಇಲ್ಲಿಯವರೆಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಊಳಿಗಮಾನ್ಯ ಸಂಭಂದದಿಂದ ಮತ್ತು ಭೂ ಮಾಲಿಕತ್ವ ನಾಡಗೌಡಿಕೆ ಜಹಾಗಿರುದಾರಿಕೆ, ದಬ್ಬಾಳಿಕೆಯಿಂದ ಹೊರಬರಲು ಸಾಧ್ಯವಾಗಲಿಲ್ಲ ಪರಿಣಾಮವಾಗಿ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಅತ್ಯಂತ ದುನೀಯ ಸ್ಥಿತಿಯಲ್ಲಿರುವುದನು ಅನೇಕ ಅಧ್ಯಯನಗಳ ಮೂಲಕ ಸಾಧರಪಡಿಸಲಾಗಿದೆ.

ರಾಯಚೂರು ಜಿಲ್ಲೆಯ ದಲಿತ ಬುಡಕಟ್ಟು ಜನರ ಚಿತ್ರಣವನ್ನು ನೀಡುತ್ತಾ ಮುಖ್ಯವಾಗಿ ಉತ್ತರ ಕನಾರ್ಟಕದಲ್ಲಿ ೧೯೬೧ ಮತ್ತು ೧೯೭೪ರ ಭೂಸುಧಾರಣೆ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಗೊಳಿಸಲಿಲ್ಲ ಪರಿಣಾಮವಾಗಿ ದಲಿತ ಬುಡಕಟ್ಟು ಜನರು ಭೂಮಿಯ ಗೇಣಿ ಹಕ್ಕನ್ನು ಕಳೆದುಕೊಂಡರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳು ಹೊಂದಿರುವ ಭೂಮಿಯ ಪ್ರಮಾಣ ಪರೀಶಿಲಿಸಿದರೆ, ಭೂಒಡೆತನದ ಕಟ್ಟು ವಾಸ್ತವ ಪರಿಚಯವಾಗುತ್ತದೆ. ಭೂಮಿ ಹೊಂದಿರುವ ದಲಿತ ಬುಡಕಟ್ಟುಗಳ ಕುಟುಂಬಗಳಲ್ಲಿ ಸಣ್ಣ ಅತಿ ಸಣ್ಣ ಗಾತ್ರದ ಭೂಮಿ ಹೊಂದಿದ್ದಾರೆ. ಇವರಲ್ಲಿ ಬೆರಳೆಣಿಕೆಯಷ್ಟು ಮಾತ್ರ ಮಧ್ಯಮ ಮತ್ತು ದೊಡ್ಡ ಗಾತ್ರದ ಭೂ ಮಾಲಿಕರನ್ನು ಕಾಣಬಹುದು. ಆದರೆ ಭೂ ಸುಧಾರಣಾ ಕಾಯ್ದೆಗಳು ವಿಶೇಷ ಪರಿಣಾಮ ಬೀರದೆ ಇದ್ದುದರಿಂದ ದಲಿತ ಬುಡಕಟ್ಟು ಜನರು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ ಎಂದಿದ್ದಾರೆ.[೨]

ಪರ್ಯಾಯ ಕೃಷಿ ನೀತಿ ೨೦೧೪ ಸ್ವಾತಂತ್ರ್ಯ ನಂತರ ಭೂಮಾಲಿಕ ಪದ್ಧತಿ ಪದ್ಧತಿಯನ್ನು ರದ್ದು ಮಾಡಿ ತೀವ್ರತರದಿಂದ ಭೂಸುಧಾರಣೆಗಳನ್ನು ಆರಂಭಿಸುವ ಬದಲು ಕಾಂಗ್ರೇಸ್ ಸರಕಾರಗಳ ಪಾಳೇಗಾರಿಕೆಯ ಬುನಾದಿಯನ್ನು ಕಿತ್ತು ಹಾಕದೆ, ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸುವ ಕೃಷಿ ನೀತಿಯನ್ನು ಅಂಗೀಕರಿಸಿದವು. ಅರೆ ಪಾಳೇಗಾರಿಕೆ ಭೂಮಾಲಿಕರನ್ನು ಬಂಡವಾಳಶಾಹಿ ಭೂಮಾಲಿಕರನ್ನಾಗಿ ಪರಿವರ್ತಿಸುವುದು ಮತ್ತು ಶ್ರೀಮಂತ ರೈತರ ಒಂದು ವಿಭಾಗವನ್ನು ಬೆಳೆಸುವುದು ಅವರ ಗುರಿಯಾಗಿತ್ತು. ಭೂಸುಧಾರಣೆಗಳನ್ನು ಜಾರಿಗೊಳಿಸುವುದನ್ನು ಕೈ ಬಿಡಲಾಯಿತು, ಕಾನೂನುಬದ್ಧ ಭೂಮಾಲೀಕ ಪದ್ಧತಿಯನ್ನು ರದ್ದು ಮಾಡುವ ಶಾಸನಗಳ ಮೂಲಕ ಭೂಮಾಲೀಕರಿಗೆ ಪರಿಹಾರ ನೀಡಲಾಯಿತು ಮತ್ತು ಅವರು ವಿಶಾಲ ಪ್ರಮಾಣದ ಭೂಮಿಯನ್ನು ತಮಗೆ ಉಳಿಸಿಕೊಳ್ಳಲು

ಅವಕಾಶ ನೀಡಲಾಯಿತು. ಭೂಮಿತಿ ಕಾಯ್ದೆಗಳಲ್ಲಿನ ಲೋಪದೋಷಗಳ ನೆರವಿನಿಂದ ಭೂಮಾಲೀಕರಿಗೆ ದೊಡ್ಡ ಪ್ರಮಾಣದ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಯಿತು. ದೇಶದಲ್ಲಿ ಸುಮಾರು ೬.೩ ಕೋಟಿ ಎಕ್ಟೇರಷ್ಟು ಭೂಮಿಯನ್ನು ಪುನರ್ ವಿತರಣೆಗೆ ಲಭ್ಯವಾಗಿಸಲು ಸಾಧ್ಯವಿದೆ ಎಂದು ೫೦ರ ದಶಕದಲ್ಲಿ ಪಿ.ಸಿ. ಮಹಾಲ್ನೋಟಿಸ್ ಅಂದಾಜು ಮಾಡಿದ್ದರು. ಎಡಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಪ್ರಭುತ್ವದ ಇತಿಮಿತಿಯೊಳಗೆ ಭೂಸುಧಾರಣೆಗಳನ್ನು ಜಾರಿಗೆ ತರಲು ನಡೆಸಲಾದ ಯೋಜಿತ ಪ್ರಯತ್ನವನ್ನು ಬಿಟ್ಟರೆ ಉಳಿದ ಕಡೆ ಈ ಭೂಮಿಯ ಒಂದು ಸಣ್ಣಭಾಗವನ್ನು ಸಹ ವಶಪಡಿಸಿಕೊಳ್ಳುವುದಾಗಲಿ ಅಥವಾ ಕೃಷಿ ಕೂಲಿಕಾರರಿಗೆ ಮತ್ತು ಬಡರೈತರಿಗೆ ವಿತರಣೆ ಮಾಡುವುದಾಗಲಿ ನಡೆಯಲಿಲ್ಲ, ದೇಶದ ಉಳಿದ ಭಾಗಗಳಲ್ಲಿ ಭೂ ಕೇಂದ್ರೀಕರಣವು ಸರಿಸುಮಾರು ಬದಲಾಣೆಯಾಗದೆ ಉಳಿಯುವಂತಾಯಿತು.

ಭಾರತದ ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಪಾಳೇಗಾರಿಕೆ ಪದ್ಧತಿಯನ್ನು ಮತ್ತು ಅದರ ಹಿಂದಿನ ಸ್ವರೂಪಗಳನ್ನು ನಿರ್ಧಾರ ಪೂರ್ವಕವಾಗಿ ನಾಶಮಾಡಿಬಂದದ್ದಲ್ಲ, ಬದಲಾಗಿ ಅದು ಬಂಡವಾಳಶಾಹಿ ಪೂರ್ವದ ಉತ್ಪಾದನಾ ಸಂಬಂಧಗಳು ಹಾಗೂ ಸಾಮಾಜಿಕ ಸಂಘಟನೆಯ ಸ್ವರೂಪಗಳ ಹೆಸರಿನ ಮೇಲೆ ಹೇರಲ್ಪಟ್ಟದಾಗಿತ್ತು, ಜಾತಿ ಮತ್ತು ಲಿಂಗ ದಮನದ ಮುಂದುವರಿಕೆಗೆ ಇದೊಂದು ಪ್ರಮುಖ ಕಾರಣವಾಗಿದೆ. ಅದೇ ರೀತಿಯಲ್ಲಿ ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳ ಬೆಳವಣಿಗೆಗೂ ಪ್ರಮುಖ ಕಾರಣವಾಗಿದೆ. ಭೂ ಕೇಂದ್ರಿಕರಣದೊಂದಿಗೆ ಸರಕಾರದ ನೀತಿಗಳಿಂದಾಗಿ ನೀರಾವರಿ ಹಾಗೂ ವಿದ್ಯುತ್ ಸೌಲಭ್ಯಗಳು, ಕೃಷಿ ಸಬ್ಸಿಡಿಗಳು, ಸಾಂಸ್ಥಿಕ ಸಾಲ, ಕೀಟನಾಶಕಗಳು, ಅಧಿಕ ಹಿಳುವರಿ ಬೀಜಗಳು, ರಸಗೊಬ್ಬರಗಳು, ಕೃಷಿ ಸಲಕರಣೆಗಳು, ಕೊಳವೆ ಭಾವಿಗಳು, ಪಂಪ್‌ಸೆಟ್‌ಗಳು, ವಾಹನಗಳು, ಸಾರಿಗೆ ಸಂಪರ್ಕ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಭೂಮಾಲೀಕರು ಮತ್ತು ಇತರ ಶ್ರೀಮಂತ ರೈತರ ದಕ್ಕಿಸಿಕೊಳ್ಳುವಂತಾಯಿತು. ಈ ವಿಭಾಗಗಳೆ ಗ್ರಾಮೀಣ ಭಾರತದಲ್ಲಿ ಬಂಡವಾಳಶಾಹಿ ಭೂಮಾಲೀಕ ಪಕ್ಷಗಳ ಪ್ರಭಾವಶಾಲಿ ಬೆಂಬಲದ ನೆಲೆಗಳಾಗಿಬಿಟ್ಟವು. ೧೯೬೦ರ ದಶಕದಲ್ಲಿ ಕೃಷಿ ಬೆಳವಣಿಗೆಯೊಂದಿಗೆ ವರ್ಗ ಮತ್ತು ಪ್ರಾದೇಶಿಕ ಅಸಮಾನತೆ ಇನ್ನಷ್ಟು ಹೆಚ್ಚಾದವು. ಇದು ಸಾಮಾಜಿಕ ವೆಚ್ಚದಲ್ಲಿ ಆರ್ಥಿಕ ಗಳಿಕೆಯ ಒಂದು ನಿದರ್ಶನವಾಯಿತು, ಗುನ್ನಾರ ಮಿರ್ಡಾಲ್ ಅವರು ಪ್ರಭುತ್ವವು ಗ್ರಾಮೀಣ ಬಡಜನರಿಗೆ ನೆರವಾಗಲು ಬಡತನ ನಿವಾರಣೆ ಕ್ರಮಗಳು ಕೈಗೊಳ್ಳದಿದ್ದರೆ ಹಸಿರುಕ್ರಾಂತಿ ಹಸಿರಾಗಿ ಉಳಿಯಲಿಕ್ಕಿಲ್ಲ ಎಂದು ಎಚ್ಚರಿಸಿದ್ದಾರೆ.

ಸರಕಾರದ ನೀತಿಗಳು ಜಾತಿ ದಮನ ಮತ್ತು ಸಾಮಾಜಿಕ ಅನ್ಯಾಯವನ್ನು ಕೊನೆಗೊಳಿಸುವಲ್ಲಿ ವಿಫಲಗೊಂಡವು. ಮಂಡಲ ವರದಿಗಳು ಸೇರಿದಂತೆ ಅಸಂಖ್ಯಾ ಅಧ್ಯಯನಗಳು ಭಾರತದಲ್ಲಿ ಬಡತನ ಮತ್ತು ಸಾಮಾಜಿಕ ಹಿಂದುಳಿಯುವಿಕೆಗೆ ಬಹಳಷ್ಟು ಸಂಬಂಧವಿದೆ ಎಂದು ಸಾಭೀತು ಪಡಿಸಿರುವುದು ನಿರ್ದಿಷ್ಟವಾಗಿ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ

ವಿಷಯದಲ್ಲಿ ಸತ್ಯಸಂಗತಿ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಬಗ್ಗೆ ಹೇಳುವುದಾದರೆ ಶೇ. ೮೫ರಷ್ಟು ಮಂದಿಯ ಒಟ್ಟು ಜನಸಂಖ್ಯೆ ಶೇ.೩೫ರಷ್ಟು ಮಂದಿ ಅತೀ ಬಡ ವಿಭಾಗಕ್ಕೆ ಸೇರಿದವರು ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ರಾಷ್ಟ್ರೀಯ ಆಯೋಗ ೧೯೮೧ರಲ್ಲಿ ಅಂದಾಜು ಮಾಡಿತ್ತು. ದಲಿತರಲ್ಲಿ ಶೇ ೮೦ಕ್ಕೂ ಹೆಚ್ಚು ಹಾಗೂ ಆದಿವಾಸಿಗಳಲ್ಲಿ ಶೇ ೯೦ಕ್ಕೂ ಹೆಚ್ಚು ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ಬದುಕುತ್ತಿದ್ದು, ಅದರಲ್ಲಿ ಹೆಚ್ಚಿನವರು ಭೂಹೀನ ಕೃಷಿಕೂಲಿಕಾರರಾಗಿದ್ದಾರೆ ಮತ್ತು ಬಡರೈತರಾಗಿದ್ದಾರೆ ಎಂದು ಇತರ ಅಧ್ಯಯನಗಳು ಸೂಚಿಸಿವೆ. ಎಲ್ಲ ಜೀತದಾಳುಗಳಲ್ಲಿ ಸುಮಾರು ಶೇ.೯೦ ಹಾಗೂ ಎಲ್ಲ ಬಾಲಕಾರ್ಮಿಕರಲ್ಲಿ ಶೇ.೮೦ರಷ್ಟು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಂದ ಬಂದವರು, ಭೂ ಹೀನತೆ ಮತ್ತು ನಿರಕ್ಷರತೆ ಜನ ಸಂಖ್ಯೆಯ ಇತರ ವಿಭಾಗಗಳಿಗಿಂತ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಲ್ಲಿಯೇ ಅತಿ ಹೆಚ್ಚು ಇದೆಯೆಂದು ಯೋಜನಾ ಆಯೋಗವು ಗುರುತ್ತಿಸುತ್ತಾ ಬಂದಿದೆ. ಅಸ್ಪೃಶ್ಯತೆ ದಮನ, ಪ್ರತ್ಯೇಕವಾಗಿಡುವುದು ಮತ್ತು ಎಲ್ಲ ರೀತಿಯ ಪಕ್ಷಪಾತಗಳು ಶತಮಾನಗಳಿಂದ ದಲಿತರ ಪಾಲಿಗೆ ಬಂದಿವೆ. ಇಂದಿನವರೆಗೂ ಅವು ಗ್ರಾಮೀಣ ಭಾರತದ ಬಹಳಷ್ಟು ಭಾಗಗಳಲ್ಲಿದೆ, ಅಲ್ಲದೆ ಆದಿವಾಸಿಗಳನ್ನು ಅರಣ್ಯಗಳಿಗೆ ಸೀಮೀತಗೊಳಿಸಲಾಯಿತು. ಅವರನ್ನೆಂದು ನಾಗರೀಕ ಸಮಾಜದ ಭಾಗವೆಂದು ಪರಿಗಣಿಸಲಿಲ್ಲ. ಅಲ್ಲಿಯೂ ಕೂಡ ಅವರನ್ನು ಅರಣ್ಯ ಇಲಾಖೆ, ಕಂಟ್ರಾಕ್ಟರ್, ಭೂಮಾಲೀಕ, ಲೇವಾದೇವಿಗಾರರು, ಪೋಲೀಸರ ದುಷ್ಟಕೂಟದಿಂದ ಶೋಷಣೆಗೆ ಮತ್ತು ದಬ್ಬಾಳಿಕೆಗೆ ಒಳಗಾಗದವರು, ಅವರ ಭೂಮಿಯನ್ನು ಅವರಿಂದಲೇ ಪರಾಬಾರೆ ಮಾಡಲಾಯಿತು. ಅರಣ್ಯ ಕುರಿತು ಅವರ ಹಕ್ಕನ್ನು ನಿರಾಕರಿಸಲಯಿತು, ಇದರ ಜೊತೆಗೆ ಅವರು ಒಂದು ಅಗ್ಗ ಮತ್ತು ಜೀತದ ಶ್ರಮದ ಮೂಲವಾದರು, ಗ್ರಾಮೀಣ ಭಾರತದಲ್ಲಿ ಮಹಿಳೆಯರ ಆರ್ಥಿಕ ಶೋಷಣೆ ಸಾಮಾಜಿಕ ಧಮನ ಮತ್ತು ಪಿತೃ ಪ್ರಧಾನ ನಿಲುವುಗಳಿಗೆ ದೊಡ್ಡಪ್ರಮಾಣದಲ್ಲಿ ಬಲಿಯಾದರು, ಸಾಮಾನ್ಯವಾಗಿ ಮಹಿಳೆಯರಿಗೆ ಆಸ್ತಿಯ ಹಕ್ಕುಗಳನ್ನು ನಿರಾಕರಿಸಲಾಯಿತು. ಹಾಗೆ ನೋಡುವುದಾದರೆ ಜಂಟಿ ಪಟ್ಟಾಗಳು ಬಹಳ ಅಪರೂಪ, ವರದಕ್ಷಿಣೆಯಂತಹ ಸಾಮಾಜಿಕ ಪಿಡುಗಳು ಹೆಚ್ಚುತ್ತಾ ಬರುತ್ತಿವೆ. ಮಹಿಳೆಯರು, ದಲಿತರು, ಆದಿವಾಸಿಗಳ ಮೇಲೆ ದೌರ್ಜನ್ಯಗಳು ಮತ್ತು ಹಿಂಸಾಚಾರಗಳು, ಸತತವಾಗಿ ಏರುತ್ತಿರುವ ಪ್ರವೃತ್ತಿ ಕಂಡುಬರುತ್ತಿದೆ. ಇದು ರಾಷ್ಟ್ರೀಕರಣ ವ್ಯವಸ್ಥೆಯಲ್ಲಿ ನಡೆದ ಸಂಕಥನವಾದರೆ ೧೯೯೧ರ ನಂತರದ ಖಾಸಗೀಕರಣ ಮತ್ತು ಉದಾರೀರಣದ ಸಂಕಥನಗಳು ಇನ್ನು ಆಶ್ಚರ್ಯಕರವಾದ ಮಾಹಿತಿಯನ್ನು ಹೊರ ಹಾಕುತ್ತದೆ.[೧೩]

೧೯೯೧ರ ನಂತರ ಭಾರತವು ಒಂದು ಹೊಸ ದಿಗಂತದತ್ತ ಹೆಜ್ಜೆಯನಿಟ್ಟಿತು. ಅದೇ ಉದಾರೀಕರಣ, ಖಾಸಗೀಕರಣ, ಜಾಗತೀಕರಣ(LPG) ಸ್ವಾತಂತ್ರ್ಯಾನಂತರ ಅನೇಕ ಏಳು–ಬೀಳು ಗಳೊಂದಿಗೆ, ಕೋಮುವಾದ ಮತ್ತು ಜಾತಿಯತೆ, ಪ್ರಾದೇಶಿಕ ಅಸಮಾನತೆ ಮತ್ತು ಅಭಿವೃದ್ಧಿಯ ನೀತಿಗಳು ಜನರನ್ನು ಅಷ್ಟೊಂದು ಭಾದಿಸಲಿಲ್ಲ. ಯಾಕೆಂದರೆ ಸ್ವಾತಂತ್ರ್ಯ ನಂತರ ರಾಷ್ಟ್ರೀಕರಣ ವ್ಯವಸ್ಥೆ ಜಾರಿಗೆ ಬಂತು. ಈ ರಾಷ್ಟ್ರೀಕರಣ ವ್ಯವಸ್ಥೆಯಲ್ಲಿ ಸಾಮಾಜಿಕ ವಲಯ ಮತ್ತು

ಸೇವಾವಲಯಗಳು, ಕೈಗಾರಿಕೆಗಳು, ಉದ್ದಿಮೆಗಳು, ಉತ್ಪಾದನೆ ಮತ್ತು ವಿತರಣೆಗಳು, ವಸ್ತುವಿನ ಬೆಲೆ ನಿಗದಿ ಮಾಡುವುದು ಮತ್ತು ನಿಯಂತ್ರಿಸುವುದು ಸರಕಾರದ ಕೈಯಲ್ಲಿತ್ತು. ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಅವಶ್ಯಕವಸ್ತುಗಳು ಕೈಗೆಟುಕುವ ಬೆಲೆಯಲ್ಲಿ ಸಿಗುತ್ತಿದ್ದವು. ಅನ್ನ, ಅರಿವೆ, ಆಸರೆ, ನೀರು, ಆರೋಗ್ಯ ಮೊದಲಾದವು ಗಂಭೀರ ಸಮಸ್ಯೆಗಳೆನಿಸಲಿಲ್ಲ. ಬಡತನ ಮತ್ತು ನಿರುದ್ಯೋಗವು ಗಂಭೀರ ಸಮಸ್ಯೆ ಎನಿಸಲಿಲ್ಲ. ಯಾಕೆಂದರೆ ಇವೆಲ್ಲವನ್ನು ಸರಕಾರವು ನಿಯಂತ್ರಿಸಿ ನಿರ್ದೇಶಿಸುತ್ತಿತ್ತು. ಹಾಗಾಗಿ ಸರಕಾರವು ಜನರ ಒಳಿತಿಗಾಗಿ ಕಾರ್ಯ ನಿರ್ವಹಿಸುತ್ತದೆ ಎಂಬ ಅಭಿಪ್ರಾಯವು ಜನರಲ್ಲಿತ್ತು. ಆಗ ಸರಕಾರವು ಸಹ ಜನರನ್ನು ಇಷ್ಟೊಂದು ಹತಾಶಾ ಭಾವನೆಯಿಂದ ನಡೆಸಿಕೊಳ್ಳುತ್ತಿರಲಿಲ್ಲ. ಹಾಗಾಗಿ ಭಾರತದಲ್ಲಿ ೧೯೯೦ರ ದಶಕದವರೆಗೂ ಎಡಪಕ್ಷದ ಆಳ್ವಿಕೆಯನ್ನು ಕಾಣಬಹುದು. ೧೯೯೦ರ ದಶಕಕ್ಕಿಂತಲೂ ಪೂರ್ವದಲ್ಲಿ ಭಾರತದಲ್ಲಿ ಅಸ್ಪೃಶ್ಯತೆ, ಬಡತನ, ನಿರುದ್ಯೋಗ, ಅಸಮಾನತೆಗಳು ಇರಲಿಲ್ಲವೆಂದಲ್ಲ ಇದ್ದವು ಅವು ಸಾಮಾಜಿಕ ಒಪ್ಪಂದದ ಚೌಕಟ್ಟಿನಲ್ಲಿ ನಡೆಯುತ್ತಿದ್ದವು. ಅಂದರೆ ಸಮಾಜದಲ್ಲಿ ಒಂದು ಜಾತಿಗೆ ಇನ್ನೊಂದು ಜಾತಿ ಸಮುದಾಯಗಳು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿ ಕೊಡುಕೊಳ್ಳುವಿಕೆ ಸಹಕಾರ ಇತ್ತು, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು ಅಭದ್ರತೆಯಲ್ಲಿದ್ದರೂ ಹತಾಸೆಯಲ್ಲಿ ಮುಳುಗಿಸಿಲ್ಲ ಆದರೆ ೧೯೯೦ರ ನಂತರವು (೧) ಜಾಗತೀಕರಣ ಮತ್ತು ಮಂಡಲವರದಿ ಎಸ್‌ಸಿ/ಎಸ್‌ಟಿ ಭಾರಿ ಪೆಟ್ಟು ನೀಡಿದವು ೧೯೯೦ರಲ್ಲಿ ಮಂಡಲವರದಿಯ ಜಾರಿಯಿಂದ ಇಡೀ ಭಾರತವೇ. ಅಲ್ಲೋಲಕಲ್ಲೋಲವಾಯಿತು. ಮಂಡಲವರದಿ ಕೊಟ್ಟ ತಿರುಗಳುಗಳು ಒಂದರದಲ್ಲ, ಇದು ಕ್ರಮೇಣ ಮೀಸಲಾತಿಯ ಸಿದ್ಧಾಂತವನ್ನೇ ತಿರುವುಮುರುವು ಮಾಡಿತು. ಜೊತೆಗೆ ಈಗಿನ ಭಾತದಲ್ಲಿ ಜಾತಿಪದ್ಧತಿ ಶಾಶ್ವತವಾಗಿ ಬೇರೂರುವಂತೆ ಮಾಡಿತು. ಜಾತಿ ಪದ್ಧತಿಗೆ ಹೊಸ ಹೊಸ ಭಾಷೆಯನ್ನು ಬರೆದುದ್ದೇ ಮಂಡಲವರದಿ ಭಾರತದಲ್ಲಿ ಹಿಂದುಳಿದವರು (ಜಾತಿಗಳು) ಎಂಬ ಹೊಸ ಪರಿಕಲ್ಪನೆ ಹುಟ್ಟುಹಾಕಿತು. ಹಿಂದುಳಿದ ವರ್ಗಗಳು ಎಂಬ ಹೆಸರಿನಲ್ಲಿ ಜಾತಿ ಸಂಘಗಳು ಹುಟ್ಟಿಕೊಂಡವು. ಭಾರತದಲ್ಲಿ ಜಾತಿ ಪದ್ಧತಿ ಹೋಗಬೇಕೆನ್ನುವ ಸಂದರ್ಭದಲ್ಲಿ ಮತ್ತೆ ಜಾತಿ ಪದ್ಧತಿಗೆ ಭದ್ರಬುನಾದಿ ಹಾಕಿದ್ದು ಮಂಡಲವರದಿ. ಇಲ್ಲಿಯವರೆಗೆ ಕೇವಲ ಪರಿಶಿಷ್ಟರಿಗೆ ಇದ್ದ ಮೀಸಲಾತಿ ಹಿಂದುಳಿದ ವರ್ಗಗಳಿಗೂ ವಿಸ್ತರಣೆಯಾಯಿತು. ಹೀಗಾಗಿ ಮಂಡಲವರದಿಯೂ ಮೇಲ್ವರ್ಗ, ಮಧ್ಯಮವರ್ಗ ಮತ್ತು ಕೆಳವರ್ಗ ಎಂಬ ವರ್ಗವ್ಯವಸ್ಥೆಯನ್ನು ಸೃಷ್ಟಿಸಿತು. ಮೀಸಲಾತಿಯನ್ನು ವಿರೋಧಿಸುವವರು ಮೀಸಲಾತಿ ವ್ಯಾಪ್ತಿಗೆ ಬಂದರು. ಹೀಗಾಗಿ ಕೆಳವರ್ಗ ಅಥವಾ ಅಸ್ಪೃಶ್ಯರನ್ನು ಮೂಲೆಗುಂಪು ಮಾಡುವಲ್ಲಿ ಮಂಡಲವರದಿ ಯಶಸ್ವಿಯಾಯಿತು. ಯಾಕೆಂದರೆ ಪರಿಶಿಷ್ಟರ ಮೀಸಲಾತಿಯನ್ನು ಜಾರಿಗೊಳಿಸುವ ಆಡಳಿತ ಎಲ್ಲ ಸ್ತರಗಳಲ್ಲಿ ಮೇಲ್ವರ್ಗದವರು ಮತ್ತು ಹಿಂದುಳಿದ ವರ್ಗದವರಿದ್ದರು. ಯಾವಾಗ ಹಿಂದುಳಿದ ವರ್ಗದವರಿಗೆ ಮೀಸಲಾತಿ ಸಿಕ್ಕಿತೋ ಆಗ ಅವರು ತಮ್ಮ ಮೀಸಲಾತಿ ಮತ್ತು ಅವಕಾಶಗಳನ್ನು, ಸೌಲಭ್ಯಗಳನ್ನು, ಬಾರಿ ನಯ, ನಾಜೂಕಿನಿಂದ ಉತ್ಸುಕತೆಯಿಂದ ಜಾರಿಗೆ ತಂದರು. ಹೀಗಾಗಿ ಪರಿಶಿಷ್ಟರ ಮೀಸಲಾತಿ ಮತ್ತು ಪರಿಶಿಷ್ಟರು ನಿರ್ಲಕ್ಷ್ಯಕ್ಕೆ ಒಳಗಾದರು ಮತ್ತು ಪರಿಶಿಷ್ಟರು ದ್ವೇಷ ಹಸೂಯೆಗೆ ಒಳಗಾದರು ಮತ್ತು ಇಲ್ಲಿಂದಲೇ

ಮೀಸಲಾತಿ ವಿರೋಧಿ ಚಳುವಳಿಗಳು ಪ್ರಭಲವಾದವು, ಪರಿಣಾಮವಾಗಿ ಸುಪ್ರೀಂಕೋರ್ಟ್ ಪರಿಶಿಷ್ಟ ಜಾತಿಗಳಲ್ಲಿ ಕೆನೆಪದರು ನೀತಿ ಜಾರಿಗೆ ತಂದಿತು. (ಸರಕಾರಿ ಅಧಿಕಾರಿಗಳು ಮಕ್ಕಳು ನಿಗದಿ ಆದಾಯಕ್ಕಿಂತ ಹೆಚ್ಚಿನ ಆದಾಯ ಹೊಂದಿದವರು, ಭೂಮಿ ಹೊಂದಿದವರು, ಮೀಸಲಾತಿ ಸೌಲಭ್ಯ ಪಡೆಯುವಂತಿಲ್ಲ) ಹೀಗಾಗಿ ಪರಿಶಿಷ್ಟರಿಗೆ ಬಡ್ತಿ ಮೀಸಲಾತಿಯು ಕೈತಪ್ಪಿ ಹೋಯಿತು. ಹೀಗಾಗಿ ಪರಿಶಿಷ್ಟರ ಮೀಸಲಾತಿ ದಿನದಿಂದ ದಿನಕ್ಕೆ ಸೊರಗುತ್ತಾ ಹೋಯಿತು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಕರಗುತ್ತಾ ಹೋದವು. ಈಗಲೂ ಸಹ ಪರಿಶಿಷ್ಟ ಜಾತಿಗಳ ಮೀಸಲಾತಿ ಶೇ.೧೩ ದಾಟಿಲ್ಲ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಶೇ.೩ರಷ್ಟು ದಾಟಿಲ್ಲ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ದಿನಕ್ಕೊಂದು ಜಾತಿಗಳು ಮೀಸಲಾತಿ ಕೇಳುತ್ತಿವೆ ಮತ್ತು ಮೀಸಲಾತಿ ಪಟ್ಟಿಗೆ ಬರುತ್ತಿವೆ.

ವಾಸ್ತವಿಕವಾಗಿ ಮೀಸಲಾತಿ ಸಾಮಾಜಿಕ ನ್ಯಾಯದ ಭಾಗವಾಗಿ ಬಂದಿಲ್ಲ, ಅದು ಸಾಮಾಜಿಕ ಅಸಮಾನತೆಯ ಭಾಗವಾಗಿ ಬಂದಿದೆ. ಮೀಸಲಾತಿಗೂ ಸಾಮಾಜಿಕ ನ್ಯಾಯಕ್ಕೂ ಸಂಬಂಧವಿಲ್ಲ, ಆದರೆ ಮೀಸಲಾತಿಗೂ ಅಸಮಾನತೆಗೂ ಸಂಬಂಧವಿದೆ. ಹಾಗಾಗಿ ಮೀಸಲಾತಿಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವ ಹಾಗಿಲ್ಲ. ಯಾಕೆಂದರೆ ಇವೆರಡೂ ಬೇರೆ ಬೇರೆ ಕಾಲಘಟ್ಟದಲ್ಲಿ ಬಂದ ಪರಿಕಲ್ಪನೆಗಳು. ಮೀಸಲಾತಿಯಿಂದ ದೇಶದ ಐಕ್ಯತೆಗೆ ಧಕ್ಕೆ ಬರುತ್ತದೆ. ಪ್ರತಿಭೆಗೆ ಧಕ್ಕೆ ಬರುತ್ತದೆ ಎನ್ನುವವರು ಯಾಕೆ ಮೀಸಲಾತಿ ಕೇಳುತ್ತಿದ್ದಾರೆ. ಮೀಸಲಾತಿ ಮೆರಿಟ್‌ಗೆ ಅಡ್ಡ ಬರುತ್ತದೆ ಎನ್ನುವುದಾದರೆ ಅವರು ಅದೇ ಅನ್ಯಾಯವನ್ನು ಅನುಭವಿಸಬೇಕು ಎನ್ನುವುದು ಯಾವ ಮೆರಿಟ್. ಹಾಗಾದ್ದರೆ ಈ ದೇಶದ ಅರ್ಧಕ್ಕಿಂತ ಹೆಚ್ಚು ಜನರನ್ನು ಅವಕಾಶ ವಂಚಿತರನ್ನಾಗಿ ಮಾಡಿದ ಮೇರಿಟ್ ಯಾವುದು. ಅಂದರೆ ಪುಕಸಟ್ಟೆ ಸಿಗುತ್ತದೆ ಎಂದರೆ ನನಗೆ ಬೇಕು, ನಮ್ಮಪ್ಪ–ನಮ್ಮವ್ವಗೆ ಬೇಕು, ಸತ್ತ ನಮ್ಮಜ್ಜಿತಾತನಿಗೂ ಬೇಕು ಎನ್ನುವ ಸ್ವೂಪ ಮನಸುಗಳೇ ಈ ಅವಾಂತರಗಳು ಮಾಡುತ್ತಿರುವುದು. ಅಂದರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಡಬಾರದೆಂದು ಅರ್ಥವಲ್ಲ, ಸಂವಿಧಾನಾತ್ಮಕವಾದ ಹಕ್ಕನ್ನು ಯಾರು ಬೇಕಾದರೂ ಕೇಳಬಹುದು, ಪಡೆಯಬಹುದು. ಆದರೆ ಇನ್ನೊಬ್ಬರಿಗೆ ಕೊಡಬಾರದು ಎಂದು ಹೇಳುವುದು ಅಥವಾ ಇನ್ನೊಬ್ಬರದನ್ನು ಕಸಿದುಕೊಳ್ಳುವುದು ಸಾಮಾಜಿಕವಾಗಿ ಅನ್ಯಾಯ ಮಾಡಿದಂತಾಗುತ್ತದೆ ಎಂಬ ಪ್ರಜ್ಞೆ ಇರಲಿ ಎಂಬುದು ಈ ಚರ್ಚೆಯ ವಾದವಾಗಿದೆ.

ಮಾನವನಲ್ಲಿ ಇಂತಹ ಪ್ರವೃತ್ತಿಗಳಿಗೆ ಪರಿಸರ ಮತ್ತು ಸನ್ನಿವೇಶಗಳು ಕಾರಣವಾಗಿರಬಹುದು, ಅಥವಾ ಸರಕಾರ ಆಡಳಿತ ದೋರಣೆಯು ಕಾರಣವಾಗಿಬಹುದು, ಆದರೆ ನಾಗರೀಕ ಸಮಾಜದಲ್ಲಿ ವಾಸಿಸುವ ನಾವು ನಮ್ಮಂತೆ ಇತರರು ಎಂಬುದನ್ನು ಅರಿತರೆ ಸುಖ ಸಮಾಜ ಸಮಸಮಾಜವನ್ನು ಕಟ್ಟಬಹುದು. ಸುಭದ್ರ ದೇಶವನ್ನು ಕಟ್ಟಬಹುದು. ಅದರೆ ವ್ಯವಸ್ಥೆ ಸ್ಥಿರವಾಗಿ ಉಳಿಯುವಂತೆ ನೋಡಿಕೋಳ್ಳುವುದು ಸಹ ಪ್ರಜ್ಞಾಪೂರ್ವಕವಾದ್ದು. ಆದರೆ ಪ್ರಜ್ಞೆ ಬರುವ ವೇಳೆಗೆ ಭಾರತ ಹೊಸ ಧಿಗಂತದತ್ತ ಮುಖಮಾಡಿತ್ತು ಆದೇ ಜಾಗತೀಕರಣ.

ಕರ್ನಾಟಕ ರಾಜ್ಯದಲ್ಲಿ ಸಾಕ್ಷರತೆಯ ಸುಧಾರಣೆಯನ್ನು ವಿಶ್ಲೇಷಿಸುತ್ತಾ ರಾಜ್ಯದ ಸಾಕ್ಷರತೆಯು ೧೯೬೭ರ ಶೇ. ೩೦% ರಿಂದ ೧೯೯೬ರ ಶೇ. ೯೩.೪೨%ಕ್ಕೆ ಏರಿದೆ. ಆದರೆ ೨೦೦೧ರ ಜನಗಣತಿ ವೇಳೆಗೆ ಸಾಕ್ಷರತೆ ೬೭.೦೪% ಕ್ಕೆ ಹೆಚ್ಚಿತ್ತು. ಆದರೆ ಈ ಅವಧಿಯಲ್ಲಿ ಪ್ರಾದೇಶಿಕ ಅಸಮತೋಲನದಲ್ಲಿ ಹೆಚ್ಚಾಗಿದ್ದು, ರಾಯಚೂರು ಜಿಲ್ಲೆಯಲ್ಲಿ ಶೇ. ೩೨% ರಷ್ಟು ಸಾಕ್ಷರತೆ ಇದ್ದರೆ, ಬೆಂಗಳೂರಿನಲ್ಲಿ ಶೇ.೭೬.೦೨% ರಷ್ಟು ಇತ್ತು. ಇದಕ್ಕೆ ಕಾರಣ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ವಿದ್ಯಾರ್ಥಿ ಮೇಲಿನ ವೆಚ್ಚವು ೧೯೯೨-೯೨ರಲ್ಲಿ ಪ್ರತಿ ವಿದ್ಯಾರ್ಥಿಗೆ ೨೭೭ರೂ., ತಮಿಳುನಾಡಿನಲ್ಲಿ ೨೭೭ರೂ., ಹರಿಯಾಣದಲ್ಲಿ ೨೯೬ರೂ., ಮಹಾರಾಷ್ಟ್ರದಲ್ಲಿ ೩೧೨ರೂ ಇದಕ್ಕೆ ಹೋಲಿಸಿದರೆ, ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣಕ್ಕ ಆದ್ಯತೆ ಕಡಿಮೆ ಎಂಬುದನ್ನು ತೋರಿಸುತ್ತದೆ. ಜೊತೆಗೆ ಮೂಲಭೂತ ಸೌಕರ್ಯಗಳ ಕೊರತೆಯನ್ನು ಸಹ ನಾವು ಅಲ್ಲಗಳೆಯುವಂತಿಲ್ಲ. ಕಟ್ಟಕಡೆಯ ತಾಲೂಕು ಎಂದರೆ ದೇವದುರ್ಗ. ಗ್ರಾಮೀಣ ಪ್ರದೇಶದಲ್ಲಿ ಕರ್ನಾಟಕದ ಮಹಿಳೆಯರಲ್ಲಿ ೧೯೯೧ರಲ್ಲಿ ಸಾಕ್ಷರತಾ ಪ್ರಮಾಣ ಶೇ. ೫೪.೭೬% ರಷ್ಟಿದ್ದರೆ, ೨೦೦೧ರಲ್ಲ ಶೇ. ೪೮.೦೧%ರಷ್ಟು, ಆದರೆ ೨೦೦೧ರಲ್ಲಿ ಪರಿಶಿಷ್ಟ ಜಾತಿ ಮಹಿಳೆಯರು ಶೇ. ೩೫.೫೬ರಷ್ಟು, ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ. ೧೫.೭೩ರಷ್ಟು, ಈ ಸಂಗತಿಗಳನ್ನು ಗಮನಿಸಿದಾಗ, ಪರಿಶಿಷ್ಟ ಜಾತಿ ಮತು ಪರಿಶಿಷ್ಟ ಪಂಗಡಗಳ ಮಹಿಳಾ ಸ್ಥಿತಿಗಳು ಗೋಚರಿಸುತ್ತವೆ. ಇದರ ಜೊತೆಗೆ ವರಮಾನದ ದೃಷ್ಟಿಯಿಂದಲೂ ರಾಜ್ಯದ ವರಮಾನವೂ ಸಹ ಹಿಂದುಳಿದ ಸ್ಥಿತಿಯಲ್ಲಿದೆ.

ಪ್ರಾದೇಶಿಕ ಅಸಮತೋಲನ ಒಂದು ವಿಶ್ವವ್ಯಾಪ್ತಿ ಸಮಸ್ಯೆಯಾಗಿದೆ. ಪ್ರಾದೇಶಿಕ ಅಸಮತೋಲನ ಜಗತ್ತಿನ ಯಾವುದೇ ರಾಷ್ಟ್ರವು ಸಹ ಮುಕ್ತವಾಗಿಲ್ಲ. ಆದರೆ ಈ ಸಮಸ್ಯೆಯ ಸ್ವರೂಪ ಕಾಲದಿಂದ ಕಾಲಕ್ಕೆ ಹಾಗೂ ದೇಶದಿಂದ ದೇಶಕ್ಕೆ ಭಿನ್ನತೆಯಿಂದ ಕೂಡಿರುತ್ತದೆ. ಪ್ರಾದೇಶಿಕ ಅಸಮಾತೊಲನೆಗೆ ಸಂಬಂಧಿಸಿದಂತೆ ಅವಲೋಕಿಸುವುದಾದರೆ ಎರಡು ರೀತಿಯ ಕಾರಣಗಳಿಂದ ಸೃಷ್ಟಿಯಾಗುತ್ತದೆ. ಒಂದು ನಿಸರ್ಗದತ್ತವಾದ ಅಂಶಗಳಿಂದ ಸೃಷ್ಟಿಯಾದರೆ ಇನ್ನೊಂದು ಮಾನವ ನಿರ್ಮಿತ ಅಂಶಗಳಿಂದ ಸೃಷ್ಟಿಯಾಗುತ್ತದೆ.

ನಿಸರ್ಗದತ್ತವಾಗಿ ಅಂದರೆ ನಿರ್ದಿಷ್ಟ ಪ್ರದೇಶ (ರಾಜ್ಯ-ದೇಶ)ಗಳಿಗೆ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯಲ್ಲಿ ಅಸಮಾನವಾಗಿ ಹಂಚಿಕೆಯಾಗುವ ಮೂಲಕ ಪ್ರಾದೇಶಿಕ ಅಸಮಾನತೆಗೆ ಸೃಷ್ಟಿಗೆ ಕಾರಣವಾಗುತ್ತದೆ. ಅದನ್ನು ನೈಸರ್ಗಿಕ ಅಸಮಾನತೆಯ ಏರುಪೇರುಗಳಿಂದಾಗಿಯೂ ಸಹ ಪ್ರಾದೇಶಿಕ ಅಸಮಾತೋಲನ ಸೃಷ್ಟಿಯಾಗುತ್ತದೆ. ಇರುವಂತಹ ಅಸಮತೋಲನ ಸ್ಥಿತಿಯ ಹಾಗೆಯೇ ಮುಂದುವರೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದನ್ನೂ ಮಾನವ ನಿರ್ಮಿತ ಪ್ರಾದೇಶಿಕ ಅಸಮತೋಲನ ಎಂದು ಕರೆಯುಲಾಗುತ್ತದೆ. ಉದಾಹರಣೆಗೆ ಈ ಕಲ್ಪನೆಯನ್ನು ನಾವು ಜಾಗತೀಕ ಪರಿಭಾವನೆಯಲ್ಲಿ ನೊಡುವುದಾದರೆ, ಉತ್ತರದ ರಾಷ್ಟ್ರಗಳು ಮತ್ತು ದಕ್ಷಿಣದ ರಾಷ್ಟ್ರಗಳು, ಪಶ್ಚಿಮಾತ್ಯ ರಾಷ್ಟ್ರಗಳು ಮತ್ತು ಹೀಗಾಗಿ ಪಾಶ್ಚ್ಯತ ರಾಷ್ಟ್ರಗಳ ಈ ಪದಗಳನ್ನು ನಾವು ಪ್ರಾದೇಶಿಕ ಅಸಮತೋಲನ

ಗುರುತಿಸುವಲ್ಲಿ ಬಳಸುತ್ತೇವೆ. ಹೀಗಾಗಿ ಪ್ರಾದೇಶಿಕ ಅಸಮಾನತೆ ಎಂಬುದು ನಿಸರ್ಗದತ್ತ ವಾಗಿಯಾದರೂ ಸೃಷ್ಟಿಯಾಗಬಹುದು, ಮಾನವ ನಿರ್ಮಿತ ಅಂಶಗಳಿಂದಲೂ ಸೃಷ್ಟಿಯಾಗಬಹುದು. ಆದರೆ ಪ್ರಾದೇಶಿಕ ಅಸಮತೋಲನ ಒಳ ಮತ್ತು ಹೊರ ಹರಿವುಗಳನ್ನು ತಿಳಿದುಕೊಂಡು ಆದ್ಯತೆ ಮೇರೆಗೆ ನಿವಾರಿಸಿಕೊಳ್ಳುದಿದ್ದರೆ ಅದು ಸಂಕೀರ್ಣ ಸಮಸ್ಯೆಯಾಗಿ ರೂಪಗೊಳ್ಳುತ್ತದೆ.

ಈ ಪ್ರಾದೇಶಕ ಅಸಮಾನತೆಯಿಂದ ಕರ್ನಾಟಕವು ಸಹ ಮುಕ್ತವಾಗಿಲ್ಲ. ಕನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯೂ ಸ್ವಾತಂತ್ರ್ಯ ಪೂರ್ವದಲ್ಲಿಯೂ ಇತ್ತು. ನಂತರವು ಇದೇ ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನವು ಅಭಿವೃದ್ಧಿಗೆ ಆದ್ಯತೆ. ಆದರೆ ಹೈದ್ರಾಬಾದ ಕನಾಟಕದಲ್ಲಿ ನಿಜಾಮ ಸರ್ಕಾರವು ಅಭಿವೃದ್ಧಿಯನ್ನು ನಿರ್ಲಕ್ಷಿಸುತ್ತಿತ್ತು ಅದರ ಜೊತೆಗೆ ಸ್ವಾತಂತ್ರ್ಯ ನಂತರ ೧೯೫೬ರಲ್ಲಿ ಭಾಷಾವಾರು ರಾಜ್ಯಗಳು ರಚನೆಯ ನಂತರ ಪ್ರಾದೇಶಿಕ ಅಸಮಾನತೆ ಒಂದು ಸಂಕೀರ್ಣವಾದ ಸಮಸ್ಯೆಯಾಗಿ ರೂಪಗೊಂಡಿತ್ತು. ಈ ಪ್ರಾದೇಶಿಕ ಅಸಮಾನತೆಯ ನಿರ್ವಾಹಣೆಗಾಗಿ ೧೯೯೧ರಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಅದೇ ರೀತಿಯಾಗಿ ಪ್ರಾದೇಶಿಕ ಅಸಮಾನತೆ ನಿವಾರಣೆಗಾಗಿ ೨೦೦೦ರಲ್ಲಿ ಡಾ. ಡಿ.ಎಂ. ನಂಜುಡಪ್ಪ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಲಾಯಿತು, ಆ ಸಮಿತಿಯೂ ಈ ಪ್ರದೇಶಕ್ಕೆ ೩೭೧ನೇ ವಿಧಿ ಅವಶ್ಯಕ ಎಂದು ಮತ್ತು ಹಣಕಾಸಿನ ವಿಷಯದಲ್ಲಿ ಆದ್ಯತೆಯಾಗಿ ಪರಿಗಣಿಸಬೇಕೆಂದು ವರದಿ ನಿಡಿದೆ. ಆದರೂ ಇಂದಿಗೂ ಸಮಸ್ಯೆ ಸಮಸ್ಯೆಯಾಗಿ ಉಳಿದಿರುವುದನ್ನು ಕಾಣಬಹುದು.

ಕರ್ನಾಟಕವು ಮಾನವ ಅಭಿವೃದ್ಧಿ ವರದಿ ೨೦೦೫ ಪ್ರಾದೇಶಿಕ ಅಸಮಾನತೆ ಬಗ್ಗೆ ಉಲ್ಲೇಖಿಸುತ್ತಾ ಕರ್ನಾಟಕವು ಸಾಮಾಜಿಕ, ಆರ್ಥಿಕವಾಗಿ ಅಸಮಾತೋಲನದಿಂದ ಕುಡಿದ ವಿವಿಧ ರಾಜಕೀಯ ಹಿತಾಸಕ್ತಿಗಳನ್ನು ಒಳಗೊಂಡಿದ್ದು ತಮ್ಮದೆಯಾದ ವಿಶಿಷ್ಟ ಆಡಳಿತ ರಚನೆ ಹೊಂದಿದ ಸೇರ್ಪಡೆಯೊಂದಿಗೆ ಒಂದು ಸಮಗ್ರ ರಾಜ್ಯವಾಗಿ ರಚನೆಯಾಗಿರುವುದನ್ನು ಕಾಣಬಹುದು. ರಾಜ್ಯವಾಗಿ ರಚನೆಯಾದಗ ಅಲ್ಲಿ ಅತ್ಯಂತ ತೀವ್ರವಾದ ಮತ್ತು ತಿಕ್ಷಣವಾದ ಅಸಮಾತೋಲನಗಳು ಪ್ರಮುಖವಾಗಿದ್ದವು, ಅದರಲ್ಲಿ ಮುಖ್ಯವಾಗಿ ಹೈದ್ರಾಬಾದ ಕರ್ನಾಟಕ ಅಥವಾ ಈಶಾನ್ಯ ಕರ್ನಾಟಕದಲ್ಲಿ ಅಸಮಾನತೆಯ ದಟ್ಟತೆ ವಿರಾಟ ಸ್ವರೂಪದಂತೆಯ ಇತ್ತು. ಹೈದ್ರಾಬಾದ ಕರ್ನಾಟಕ ಮೂಲತಃ ನಿಜಾಮರ ಆಡಳಿತಕ್ಕೆ ಒಳಪಟ್ಟಿದ ಮೂರು ಜಿಲ್ಲೆಗಳಾದ ಬಿದರ ಗುಲಬರ್ಗಾ ಮತ್ತು ರಾಯಚೂರನ್ನು (೧೯೫೦ರಲ್ಲಿ ಬಳ್ಳಾರಿ ಜಿಲ್ಲೆ ಸೇರ್ಪಡೆಯಾಯಿತು. ೧೯೭೭ರಲ್ಲಿ ಕೊಪ್ಪಳ ಜಿಲ್ಲೆ ರಚನೆ) ಒಳಗೊಂಡಿತ್ತು. ೧೭ ಶತಮಾನದಿಂದಲೂ ಈ ಪ್ರದೇಶವು ಕ್ಷಾಮ-ಡಾಮರಗಳನ್ನು ಎದರಿಸಬೇಕಾಗಿತ್ತು ಎಂಬುದನ್ನು ಭಾರತೀಯ ಗೆಜೆಟಿಯರ್ ವಿಸ್ತೃತವಾಗಿ ವಿವರಿಸಿದೆ. ಬರ ಮತ್ತು ಬೀಕರ ಕ್ಷಾಮಗಳು ಈ ಪ್ರದೇಶವನ್ನು ನಿರಂತರವಾಗಿ ಕಾಡಿವೆ ಹಸಿವಿನಿಂದ ಜನ ಪದೇ ಪದೇ ಅಸಖ್ಯಾಂತ ಜನರು ಸಾವನ್ನುಪತ್ತಿದ್ದರು. ಇತ್ತಿಚೀನ ಬರಗಳಲ್ಲಿ ಭಯನಕವಾದಂತಹ ಬರವು ೧೯೭೦-೭೧ರಲ್ಲಿ ಈ ಪ್ರದೇಶದಲ್ಲಿ ಸಂಭವಿಸುತು. ೧೯೮೦ರಲ್ಲಿ ಸಂಭವಿಸಿದ ಅನಾವೃಷ್ಟಿಯೂ ಆವರಿಸಿತ್ತು. ಇತ್ತೀಚೆಗೆ

೨೦೦೨-೨೦೦೩ರಂದು ಸಂಭವಿಸಿದ ಬೀಕರ ಬರಗಾಲವು ಇಡಿ ರಾಜ್ಯವನ್ನು ವ್ಯಾಪಿಸಿತ್ತು. ನೈಸರ್ಗಿಕ ವಿಕೋಪವನ್ನು ತಡೆಗಟ್ಟುವಲ್ಲಿ ಮತ್ತು ಮಾನವ ಅಭಿವೃದ್ಧಿಯಲ್ಲಿ ಹಣ ತೊಡಗಿಸುವಲ್ಲಿ ಮೈಸೂರಿನ ಅರಸರಂತೆ ಹೈದ್ರಾಬಾದ್ ನಿಜಾಮರು ಆಸಕ್ತರಾಗಿರಲಿಲ್ಲ. ಸ್ವಾತಂತ್ರ್ಯದ ನಂತರ ಮತ್ತು ಏಕೀಕರಣದ ನಂತರ ಈ ಪ್ರದೇಶ ಮತ್ತು ಜನಸಂಖ್ಯೆ ಅಭಿವೃದ್ಧಿಯ ನೆಲೆಯಲ್ಲಿ ಒಳಗೊಳ್ಳಲಿಲ್ಲ ಮತ್ತು ಸರ್ಕಾರವು ಸಹ ಹಿಂದುಳಿದಿರುವಿಕೆಯನ್ನು ಆದ್ಯತೆಯಾಗಿ ಪರಿಗಣಿಸಲಿಲ್ಲ.[೧೫] ಆದ್ದರಿಂದ ಇಂದಿಗೂ ಸಹ ಈ ಪ್ರದೇಶದ ಜನ ಕೆಲವು ಬಾರಿ ಕಂಡಂತೆ ಕೆಲವು ಬಾರಿ ಕಾಣದಂತೆ ಸಂಗ್ರಾಮವನ್ನು ಸಾಗಿಸಿದ್ದಾರೆ.

ಹೈದ್ರಾಬಾದ್ ಕರ್ನಾಟಕ ಪಾರಂಪಾರಿಕ ದಯನೀಯ ಸ್ಥಿತಿಗತಿಗಳನ್ನು ವಿಶ್ಲೇಷಿಸುತ್ತಾ ಪ್ರದೇಶ ಮುಖ್ಯವಾಗಿ ಇಲ್ಲಿನ ರಾಜಕಾರಣಿಗಳ ಸಮಾಜ ಮುಖಂಡರ ಹಾಗೂ ಆಳಿದ ವಿವಿಧ ಸರಕಾರಗಳ ನಿಸ್ಸೀಮ, ಉದಾಸೀನ ಕಾರಣದಿಂದಾಗಿ ಕರ್ನಾಟಕದ ಅತ್ಯಂತ ಹಿಂದುಳೀದ ಪ್ರದೇಶ ಎಂಬ ಹಣಪಟ್ಟಿಯನ್ನು ಕಟ್ಟಿಕೊಂಡಿದೆ. ಅನಕ್ಷರತೆ, ಬಡತನ, ನೀರುದ್ಯೋಗ, ಅಸೀಮ ಮುಗ್ಧತೆ, ಮುಗ್ಧರ ಮೈ ಎಲುಬುಗಳನ್ನು ಮುರಿದು ಅವರ ಪ್ರತಿಭಟನಾ ಶಿಲತೆಗಳಿಗೆ ಕತ್ತಲು ಪರದೆಯನ್ನು ಹಾಕಿ ಎಲ್ಲಿಂದಲೋ ಬಂದ ಶೋಷಕ ಕೈಗಾರಿಕೋದ್ಯಮಿಗಳು ಈ ನೆಲ, ಜಲದ ಅವಕಾಶಗಳನ್ನು ಬಾಚಿಕೊಂಡಿರುವುದರ ಜೊತೆಗೆ ಆತ್ಮ ಗೌರವವನ್ನು ದೋಚಿಕೊಂಡುಬಿಟ್ಟಿದ್ದಾರೆ. ಹೀಗಾಗಿ ಇಲ್ಲಿನ ಬಹುಜನ ಶ್ರಮಿಕ ವರ್ಗ ಪ್ರತಿವರ್ಷ ಊರಿಗೆ ಊರೇ ಗೂಳೆ ಹೋಗುವ ಧಾರುಣ ದೃಶ್ಯ ನೋಡುಗರಲ್ಲಿ ಕಣ್ಣಲ್ಲಿ ನೀರೂರಿಸುತ್ತದೆ. ನಿಜಾಮರ ಕಾಲದ ದಬ್ಬಾಳಿಕೆ ಈ ಜನರನ್ನು ಪಾತಾಳಕ್ಕೆ ತಳ್ಳಿದ್ದರೆ, ಅವಿದ್ಯೆ ಕತ್ತಲಲ್ಲಿ ಉದುಗಿಸಿದೆ. ಪ್ರತಿಭಟನೆಯ ಸೊಕ್ಕನ್ನು ಅಡಗಿಸಿದೆ. ಸ್ವಾತಂತ್ರ್ಯ ನಂತರವೂ ಮತ್ತು ರಾಜ್ಯಗಳ ಪುನರ್‌ವಿಂಗಡಣೆ ನಂತರವೂ ಇವರ ಬದುಕು ಸುಧಾರಿಸಿಲ್ಲ. ಮೇಲೆ ವಿವರಿಸಿದ ಸಂಕಥನಗಳೆಲ್ಲವೂ ಇಡೀ ಪ್ರದೇಶ ಮತ್ತು ಸಮುದಾಯಗಳ ಜೊತೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳೂ ಸಹ ಅಷ್ಟೇ ಸಂಕಷ್ಟದಲ್ಲಿದೆ. ಬಹುತೇಕವಾಗಿ ಇಲ್ಲಿ ಭೂಹೀನ ದಲಿತರು ಮತ್ತು ಬುಡಕಟ್ಟು ಜನರಿದ್ದಾರೆ. ಹೊಟ್ಟೆಪಾಡಿಗಾಗಿ ದೂರದ ಹೈದ್ರಾಬಾದ್, ಪುಣೆ, ಮುಂಬೈ, ಗೋವಾ, ಬೆಂಗಳೂರಿನಂತಹ ಪ್ರದೇಶಕ್ಕೆ ವಲಸೆ ಹೋಗುವುದು ಸಾಮಾನ್ಯ. ಅಲ್ಲಿಯೂ ಬದುಕಲು ಸಾಧ್ಯವಿಲ್ಲ ಎಂದಾಗ ಮಕ್ಕಳನ್ನು ಮಾರಿ ಉಳಿದವರು ಜೀವನಮಾಡುವ ಧಾರುಣ ಸತ್ಯವನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣವೆನೆಂದರೆ ಆರ್ಥಿಕ ಅವಕಾಶಗಳು ಇಲ್ಲದೇ ಇರುವುದು. ಆರ್ಥಿಕ ಭದ್ರತೆ ಇದ್ದಾಗ ಸಾಮಾಜಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಬಹಳಕಾಲ ಬೇಕಾಗಿಲ್ಲ. ಇಂತಹ ಸೌಲಭ್ಯಗಳ ಅಗತ್ಯತೆಗಳನ್ನು ಪೂರೈಸಿದರೆ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ.[೧೬]

ಹೈದ್ರಾಬಾದ್ ಕರ್ನಾಟಕ ಹಿಂದುಳಿಯಲು ಕಾರಣಗಳನ್ನು ವಿಶ್ಲೇಷಿಸುತ್ತಾ ಕೆಲವು ಸಲಹೆಗಳನ್ನು ನೀಡಿದ್ದಾರೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಆರ್ಥಿಕ ಅಭಿವೃದ್ಧಿಯ ಜೀವಾಳವಿದ್ದಂತೆ. ಅವುಗಳ ಕೊರತೆ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತವೆ. ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಆರ್ಥಿಕ

ಕಲ್ಯಾಣವನ್ನವಲಂಬಿಸಿದೆ. ಆದರೆ ದುರದೃಷ್ಟಾವಷಾತ್ ಆರ್ಥಿಕ ಅಭಿವೃದ್ಧಿಯ ಫಲ ರಾಷ್ಟ್ರದ ಎಲ್ಲಾ ಜನರಿಗೂ ಮತ್ತು ಎಲ್ಲ ವರ್ಗಗಳಿಗೂ ಸಮನವಾಗಿ ಹಂಚಿಕೆಯಾಗಿಲ್ಲ. ಇದಕ್ಕೆ ಕಾರಣವೆನೆಂದರೆ ಆರ್ಥಿಕತೆಯಲ್ಲಿನ ಪ್ರಾದೇಶಿಕ ಅಸಮಾನತೆಯ ಅಂತರ ಮತ್ತು ಆಳುಗಳನ್ನು ಪ್ರಾಥಾಮಿಕ ಮತ್ತು ಅನುಷಂಗಿಕ ಅಧ್ಯಯನದಿಂದ ಈ ತಿರ್ಮಾನಕ್ಕೆ ಬರಲಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಾರಿಗೆ, ಸಂಪರ್ಕ ಮತ್ತು ವಿಧ್ಯುಚ್ಛಕ್ತಿ ಯೋಜನೆಗಳನ್ನು ರೂಪಿಸಬೇಕು. ಇದು ಇತರ ಭಾಗಗಳಿಗಿಂತಲೂ ಅಧಿಕವಾಗಿರುವಂತೆ ನೋಡಿಕೊಳ್ಳಬೇಕು. ಅಲ್ಲದೇ ವಿಶೇಷ ಅಭಿವೃದ್ಧಿಯ ಕಾರ್ಯಕ್ರಮಗಳ ಅಗತ್ಯವಿದೆ ಎಂದಿದ್ದಾರೆ. ಆದರೆ ಪ್ರಾದೇಶಿಕ ಅಸಮಾನತೆಯ ನಿವಾರಣೆಗೆ ಕೇವಲ ಸಾರಿಗೆ, ಸಂಪರ್ಕ, ವಿಧ್ಯುಚ್ಛಕ್ತಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸಾಕಷ್ಟು ಪ್ರಯತ್ನ ಮಾಡಲಾಗಿದೆ. ಆರ್ಥಿಕ ಕಲ್ಯಾಣ ಆರ್ಥಿಕ ಅಭಿವೃದ್ಧಿಯ ಮಟ್ಟದ ಮೇಲಲ್ಲದೇ ಅದರ ವಿತರಣೆಯ ಮೇಲೆ ಆರಂಭಿಸಿದೆ. ಅಂದರೆ ಅದು ಇದ್ದಂತಹ ಜನರಿಗೆ ತಲುಪುವಂತಾಗಬೇಕು. ಅಂದಾಗ ಮಾತ್ರ ಅಸಮಾನತೆ ನಿವಾರಣೆಯಾಗಿ ಅಭಿವೃದ್ದಿ ಹೊಂದಲು ಸಾಧ್ಯವಿದೆ.

ಪ್ರಾದೇಶಿಕ ಅಸಮಾನತೆ ನಿವಾರಣೆಯಲ್ಲಿ ಡಾ.ಡಿ.ಎಂ.ನಂಜುಂಡಪ್ಪ ವರದಿಯನ್ನು ಉಲ್ಲೆಖೀಸುತ್ತಾ ಡಾ. ಡಿ.ಎಂ. ನಂಜುಂಡಪ್ಪ ವರದಿ ಅತ್ಯಂತ ಸ್ಪಷ್ಟವಾಗಿ ಅಭಿವೃದ್ಧಿಯ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಕೇಂದ್ರೀಕರಣಗೊಂಡಿದ್ದರೆ ದುಃಸ್ಥಿತಿಯೂ ಉತ್ತರ ಕನಾಟಕದಲ್ಲಿ ಮಡುಗಟ್ಟಿದೆ. ಈ ಪ್ರದೇಶದ ಜನರ ಬದುಕು ಕಡು ಬಡತನದಿಂದ ಕೂಡಿದೆ. ಆದ್ದರಿಂದ ಅಭಿವೃದ್ಧಿಯ ನೀತಿಯಲ್ಲಿ ಪ್ರಜ್ಞಾಪೂವ್ಕವಾಗಿ ಲಿಂಗಸಂಬಂಧಿ ಅಯಾಮಕ್ಕೆ ಪ್ರಾಶಸ್ತ್ಯ ನೀಡಬೇಕು. ಅದಕ್ಕೆ ದಲಿತ ದೃಷ್ಟಿಯನ್ನು ನೀಡಬೇಕು. ಪ್ರಾದೇಶಿಕ ಅಸಮಾತೆಯನ್ನು ನಾವು ಅತ್ಯಂತ ಗಂಭೀರ ಸಂಗತಿಯನ್ನು ಮಾಡುವಲ್ಲಿ ನಾವು ವಿಫಲರಾಗಿದ್ದೇವೆ. ಈ ದಿಶೆಯಲ್ಲಿ ನಾವು ಕ್ರಮಿಸಬೇಕಾದ ದಾರಿ ದೀರ್ಘವಾಗಿದೆ. ನಮ್ಮ ರಾಜ್ಯದ ತೀವ್ರಗತಿ ಅಭಿವೃದ್ದಿ ಕಂಟಕವಾಗಿರುವ ಸಂಗತಿಯೆಂದರೆ, ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಎಂದಿದ್ದಾರೆ.[೧೮]

ಅದೇ ರೀತಿಯಾಗಿ ಪ್ರಾದೇಶಿಕ ಅಸಮಾನತೆಗೆ ಸಂವಿಧಾನದ ೩೭೧ ವಿಧಿ ಪರಿಹಾರವಾಗಲಿದ್ದು ಶೈಕ್ಷಣಿಕ, ಉದ್ಯೋಗ, ಮೀಸಲಾತಿಯ ಸೌವಲತ್ತು ಇರುತ್ತದೆ. ಅಸಮಾನೆತಯ ಹಿಂದಿರುವ ಕಾರಣ ಹಲವಾರು ಕಾರಣಗಳಲ್ಲಿ ನಿರುದ್ಯೋಗದ್ದು ಒಂದು ಎನ್ನುವುದರತ್ತ ನಾಗರೀಕ ಸಮಾಜ ಹಾಗೂ ಸಮುದಾಯ ಗಮನಹರಿಸಬೇಕಾಗಿದೆ ಎಂದಿದ್ದಾರೆ. ಆದರೆ ಕೇವಲ ಸಂವಿಧಾನ ೩೭೧ ನೇ ವಿಧಿಯ ಅಸಮಾನತೆಗೆ ಪರಿಹಾರವಾಗಲಾರದು ಏಕೆಂದರೆ ಈಗಾಗಲೇ ಮಹಾರಾಷ್ಟ್ರದ ವಿದರ್ಭ ಮತ್ತು ಆಂದ್ರಪ್ರದೇಶದ ತೆಲಂಗಾಣ ಇಲ್ಲಿ ಸಾಧಿಸಿದ್ದೇನು ಅಥವಾ ಅದರಿಂದ ಉಪಯೋಗವೇನು ಹಾಗಿದ್ದರೆ ಪ್ರತ್ಯೇಕ ರಾಜ್ಯದ ಕೂಗು ಯಾಕೆ ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಇರುವಂತ ಸೌಲಭ್ಯಗಳನ್ನು ಪ್ರಮಾಣಿಕವಾಗಿ ಜಾರಿಗೊಳಿಸಿದರೆ ಅಸಮಾನತೆ ತನ್ನಿಂದ ತಾನೆ ನಿವಾರಣೆಯಾಗುತ್ತದೆ ಎಂಬುದು ಈ ಅಧ್ಯಯನದ ಅಭಿಪ್ರಾಯವಾಗಿದೆ. ಹೀಗೆ ಪ್ರಾದೇಶಿಕ

ಅಸಮಾನತೆ ನಿವಾರಣೆಗೆ ಅನೇಕ ಸಿದ್ಧಾಂತ ಸುಧಾರಣೆಗಳು ರೂಪಗೊಂಡವು ಆದರೆ ಅವು ಪರಿಹಾರವಾಗಿ ಕಾಣುತ್ತಿಲ್ಲ. ಜೆ.ಜಿ. ವಿಲಿಯಸ್ಸನ್ನ ಅವರು ಮಾದರಿ ಸಿದ್ಧಾಂತದಲ್ಲಿ ಯಾವ ಪ್ರದೇಶದಲ್ಲಿ ಸಾಮಾಜಿಕವಾಗಿ ಹಿಂದುಳಿದಿರುತ್ತಾರೆಯೋ ರಾಜಕೀಯವಾಗಿ ಜನರು ತೀರಾ ಹಿಂದುಳಿದಿರುತ್ತಾರೆ ಎಂಬ ಅಂಶವನ್ನು ಬೆಳಕಿಗೆ ತಂದಿದ್ದಾರೆ. ಆದರೂ ತಕ್ಕಮಟ್ಟಿಗೆ ಡಾ. ಡಿ. ನಂಜುಂಡಪ್ಪ ವರದಿಯಿಂದ ಪ್ರಾದೇಶಿಕ ಅಸಮಾನತೆ ಆಳ ಹರಿವುಗಳನ್ನು ಅರ್ಥಮಾಡಿಕೊಳ್ಳಬಹುದು.[೧೯]

ಅಭಿವೃದ್ಧಿ ರಾಜಕಾರಣದ ಸಾಂಪ್ರಾದಾಯಿಕ ನಿಲುವನ್ನು ವಿವರಿಸುತ್ತಾ ರಾಜಕೀಯ ನಾಯಕತ್ವವು ತನ್ನ ಸಮಾಜೋ-ಆರ್ಥಿಕ ಸಂಬಂಧಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಅಂತರಾಷ್ಟ್ರೀಯ ಬಂಡವಾಳ ಒಳಗೊಳ್ಳುವುದೊಂದಿಗೆ ಎಲ್ಲ ಕಡೆಗಳಲ್ಲಿ ರಾಜಕೀಯ ನಾಯಕತ್ವ ತನ್ನ ಸಮಾಜೋ-ಆರ್ಥಿಕ ಸಂಬಂಧಗಳನ್ನು ತನ್ನ ಪರಿಸರದ ಬೇಕು ಬೇಡಿಕೆಗಳಿಗನುಸಾರವಾಗಿ ರೂಪಿಸಿಕೊಳ್ಳುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಂತರಾಷ್ಟ್ರೀಯ ಅಭಿವೃದ್ಧಿ ರಾಜಕಾರಣ ಆರ್ಥಿಕ ಬದಲಾವಣೆಯನ್ನು ಬಂಡವಾಳದ ಅಭಿವೃದ್ಧಿ ಎಂದು ಮತ್ತು ಸಾಮಾಜಿಕ ಪರಿವರ್ತನೆ ಎಂದು ವ್ಯಾಖ್ಯಾನಿಸಿದೆ. ಎಲ್ಲ ಕಡೆಗಳಲ್ಲಿ ಆರ್ಥಿಕ ಕ್ಷೇತ್ರಗಳ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿಸುವುದು ಮಾತ್ರ ರಾಜಕೀಯ ನಾಯಕತ್ವದ ಜವಾಬ್ದಾರಿಯಾಗಿದೆ. ಅಂದಾಗ ಮಾತ್ರ ಆರ್ಥಿಕ ಕ್ಷೇತ್ರದ ಬೆಳವಣಿಗೆಗೆ ಮತ್ತು ಸಾಮಾಜಿಕ ಪರಿವರ್ತನೆಗೆ ಪ್ರತ್ಯೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿಲ್ಲ ಎನ್ನುವುದು ಕೂಡಾ ವಿಶ್ವವ್ಯಾಪಿ ಪ್ರಾಮುಖ್ಯತೆ ಪಡೆದಿದೆ ಎಂಬುದನ್ನು ವಿವರಿಸಲಾಗಿದೆ.[೨೦] ಬಹುತೇಕವಾಗಿ ರಾಜಕೀಯವಾಗಿ ಹಿಂದುಳಿದ ಹೈದ್ರಬಾದ್ ಕರ್ನಾಟಕಕ್ಕೆ ಅವರ ಅಭಿಪ್ರಾಯವು ಬಹುಮುಖ್ಯವಾದ ಸಲಹೆ ಎಂದು ಹೇಳಬಹುದು. ಏಕೆಂದರೆ ಯಾವುದೇ ಒಂದು ಪ್ರದೇಶ ಅಥವಾ ರಾಷ್ಟ್ರದ ಅಭಿವೃದ್ಧಿ ಎಂಬುದು ರಾಜಕೀಯ ಇಚ್ಛಾಶಕ್ತಿಯ ಕೊರತೆಯೆಂದು ಹೇಳಬಹುದು.

ಇದು ಆರ್ಥಿಕ ದೃಷ್ಟಿಯಿಂದ ವಿಶ್ಲೇಷಿಸಿದರೆ ಇನ್ನು ರಾಜಕೀಯ ದೃಷ್ಟಿಯಿಂದ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಹೈದ್ರಬಾದ್ ಕರ್ನಾಟಕ ಪ್ರದೇಶ ರಾಜಕೀಯ ದೃಷ್ಟಿಯಿಂದ ನೋಡಿದಾಗಲೂ ಈ ಪ್ರದೇಶ ಸಾಧನೆ ಹೇಳಿಕೊಳ್ಳುವಂತಿಲ್ಲ. ಈ ಪ್ರದೇಶದ ಅಭಿವೃದ್ಧಿಯ ನಾಯಕತ್ವವು ದೊರೆಯುತ್ತಿಲ್ಲ. ಆದರೆ ಅಭಿವೃದ್ಧಿ ರಾಜಕಾರಣಕ್ಕೆ ಪ್ರತಿಯಾಗಿ ಇಲ್ಲಿ ಪಟ್ಟಬದ್ರ ರಾಜಕಾರಣ ನಡೆದಿದೆ. ದುಡಿಮೆಗಾರರ ಸಂಖ್ಯೆಯೂ ಅಧಿಕವಾಗಿದೆ. ಇದಕ್ಕೆ ಕಾರಣ ಅಲ್ಲಿರುವ ಜಮೀನ್ದಾರಿಕೆ, ಊಳಗಮಾನ್ಯ ವ್ಯವಸ್ಥೆಯನ್ನು ಶೋಷಿಸುತ್ತದೆ. ಇಂತಹ ಸಂಬಂಧಗಳಿಂದಾಗಿ ಉನ್ನತ ವರ್ಗಗಳ ಹಿತಾಸಕ್ತಿಗಳು ರಾಜಕಾರಣದಲ್ಲಿ ಮುಖ್ಯವಾಗಿ ದಿನಗೂಲಿಗಳ, ಮಹಿಳೆಯರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಲಸಿಗರ ಹಿತಾಸಕ್ತಿಗಳು ಅಥವಾ ಸಮಸ್ಯೆಗಳು ಇಲ್ಲಿಯ ಆದ್ಯತೆಯ ಸಂಗತಿ ಹಾಳಾಗುತ್ತಿಲ್ಲ. ಇದು ಅತೀ ಮುಖ್ಯವಾಗಿ ಗಮನಸಿಬೇಕಾದ ಸಂಗತಿ. ಏಕೆಂದರೆ ಹೈದ್ರಬಾದ್ ಕರ್ನಾಟಕದಲ್ಲಿ ಜಾತಿ ರಾಜಕಾರಣದಿಂದಾಗಿ ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡುತ್ತಿಲ್ಲ. ಪರಿಣಾಮವಾಗಿ ಭ್ರಷ್ಟಚಾರ, ಸ್ವಾರ್ಥ, ಸ್ವಜನಪಕ್ಷಪಾತ, ರಾಜಕೀಯ ನಾಯಕರ ಆದ್ಯತೆಗಳಾಗುತ್ತಿರುವುದು

ವಿಷದದ ಸಂಗತಿ. ಆದ್ದರಿಂದ ಈಗ ಹಿಂದುಳಿದ ಪ್ರದೇಶವೆಂದು ಕರೆಸಿಕೊಳ್ಳುತ್ತಿದೆ. ಇದಕ್ಕೆ ಜನರ ಸಹಕಾರ ಮತ್ತು ಬುದ್ದಜೀವಿಗಳ ಸಹಕಾರವು ಸಹ ಮುಖ್ಯವಾದುದು ಅಂದಾಗ ಮಾತ್ರ ಅಭಿವೃದ್ಧಿಗೆ ಅರ್ಥಬರುವ ಸಾಧ್ಯತೆ ಇದೆ.

ರಾಜ್ಯದ ವರಮಾನದಲ್ಲಿ ಹೈದ್ರಾಬಾದ್ ಕರ್ನಾಟಕದ ಪಾಲು ಶೇ. ಮಾನವ ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ. ಈ ಪ್ರದೇಶಗಳ ಜಿಲ್ಲೆಗಳಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕದ ಶೇ. ೯೪.೯೨ರಷ್ಟು ಬಳ್ಳಾರಿ ಜಿಲ್ಲೆಗಳಲ್ಲಿದ್ದಾರೆ, ಶೇ. ೮೪.೧೫ರಷ್ಟು ರಾಯಚೂರು ಜಿಲ್ಲೆ ಅತ್ಯಂತ ಕನಿಷ್ಠ ಸುಚ್ಯಂಕದಲ್ಲಿರುವುದನ್ನು ಕಾಣಬಹುದು. ಇಲ್ಲಿ ಮುಖ್ಯವಾಗಿ ರಾಯಚೂರು ೨೦೦೯ ವರಮಾನ ಅಭಿವೃದ್ದಿಯಲ್ಲಿ ಏಕಕಾಲದಲ್ಲಿ ಹಿಂದುಳಿದಿರುವುದನ್ನು ಕಾಣಬಹುದು. ಮೇಲಿನ ಸಂಗತಿಗಳು ರಾಯಚೂರು ಜಿಲ್ಲೆಯ ಧಾರುಣ ಸ್ಥಿತಿಯನ್ನು ಅನಾವರಣಗೊಳಿಸುತ್ತವೆ.[೨೦] ಈ ಪ್ರಕ್ರೀಯೆಗಳು ಹೇಗೆ ನಡೆಯುತ್ತವೆ ಎಂಬುದು ಅಧ್ಯಯನದ ಆಯಾಮಗಳಲ್ಲೊಂದಾಗಿದೆ. ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮುಖ್ಯವಾಗಿ ಸಾಮಾಜಿಕ, ಆರ್ಥಿಕ, ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ದಲಿತನೇ ಅಧ್ಯಕ್ಷನಾದರೂ ದಲಿತ ಕೇರಿಗೆ ನೀರು ಒದಗಿಸುವ ಮತ್ತು ರಸ್ತೆ ನಿರ್ಮಿಸುವ ಸಾಮರ್ಥ್ಯ ಇಲ್ಲದ್ದನ್ನು ಕಾಣಬಹುದು. ಇಂತಹ ಪ್ರಕ್ರೀಯೆಯನ್ನು ಮೇಲ್ವರ್ಗದ ಜನ ನಿಯಂತ್ರಿಸಿ ನಿರ್ದೇಶಿಸುತ್ತಾರೆ. ಉದಾಹರಣೆಗೆ ರಾಯಚೂರು ಲೋಕಸಭಾ ಮೀಸಲು ಕ್ಷೇತ್ರ ಆದರೆ ಮೀಸಲಾತಿಯಲ್ಲಿ ಬರುವ ಸಮುದಾಯವೇ ಹಿಂದುಳಿದಿವೆ. ಅದೇ ರೀತಿಯಾಗಿ ದೇವದುರ್ಗ ತಾಲೂಕು ೧೯೭೮ರಿಂದಲೂ ಮೀಸಲು ವಿಧಾನಸಭಾಕ್ಷೇತ್ರ ಆದರೆ ಅದೇ ಮೀಸಲಾತಿಯಲ್ಲಿ ಬರುವ ಜನ ಅತ್ಯಂತ ಸಂಕಷ್ಟ ಸ್ಥಿತಿಯಲ್ಲಿದ್ದಾರೆ ಮತ್ತು ದಯನೀಯ ಸ್ಥಿತಿಯಲ್ಲಿದ್ದಾರೆ. ಇನ್ನೂ ಸಾಮಾನ್ಯ ಕ್ಷೇತ್ರದಲ್ಲಿ ಬರುವ ಪರಿಶಿಷ್ಟ ಜಾತಿ ಸಮುದಾಯದ ಸ್ಥಿತಿಗತಿಗಳೂ ಸಹ ಇದಕ್ಕಿಂತ ಭಿನ್ನವಾಗಿಲ್ಲ. ಆದರೆ ಸಾಮಾನ್ಯ ಕ್ಷೇತ್ರದಲ್ಲಿ ಮೇಲ್ವರ್ಗದವರ ದಬ್ಬಾಳಿಕೆಯನ್ನು ಕಾಣಬಹುದು. ಜನರನ್ನ ಒಳಗೊಳ್ಳುವ ಅಭಿವೃದ್ಧಿ ರಾಯಚೂರು ಜಿಲ್ಲೆ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ಎದುರಿಸುತ್ತಿದೆ. ಜೊತೆಗೆ ಪ್ರಾದೇಶಿಕ ಅಸಮಾನತೆ ಛಾಯೇ ಇದೇ ಜಿಲ್ಲೆಯಿಂದಲೇ ಪ್ರಾರಂಭವಾಗುತ್ತದೆ ಎಂದು ಹೇಳಬಹುದು. ಹೆಸರಿಗೆ ಚಿನ್ನದ ನಾಡು, ಭತ್ತದ ಕಣಜ, ದೋ-ಅಬ್ ಪ್ರದೇಶ ಎಂದು ಕರೆಯಲಾಗುತ್ತದೆ. ಆದರೆ ಇಲ್ಲಿಯ ಜನರ ಬದುಕು ಮಾತ್ರ ಹಸನಾಗಿಲ್ಲ. ಕೃಷಿ ಮತ್ತು ಅಸಂಘಟಿತ ವಲಯದ ಕಾರ್ಮಿಕರು ದುಡಿಮೆಯೇ ಇವರ ಜೀವನದ ಪ್ರಮುಖ ಆಧಾರ. ಬಡತನ, ನಿರುದ್ಯೋಗ, ಭೂಹೀನ ದಲಿತರು, ಉದ್ಯೋಗವನರಿಸಿ ಹೊಟ್ಟೆ ತುಂಬಿಸಿಕೊಳ್ಳಲು ವಲಸೆ ಹೊಗುವುದು ಜಿಲ್ಲೆಯ ಜನರ ಸಾಮಾನ್ಯ ಚಿತ್ರಣವಾಗಿದೆ. ರಾಯಚೂರು ಜಿಲ್ಲೆಯಲ್ಲಿ ದಲಿತರು ಮತ್ತು ಬುಡಕಟ್ಟು ವರ್ಗದವರು ಉಳಿಗಮಾನ್ಯ ಸಂಬಂಧ ಭೂ ಮಾಲೀಕತ್ವ, ನಾಡಗೌಡಿಕೆ. ಜಾಗೀರುದಾರಿಕೆಯಲ್ಲಿ ನಲುಗಿದ್ದಾರೆ. ಇದರೋಂದಿಗೆ ಜಾತಿ ರಾಜಕಾರಣ ಮತ್ತು ಒಡೆದು ಆಳುವ ನೀತಿ, ಸ್ಥಳೀಯ ರಾಜಕಾರಣವೂ ಸಹ ಮೇಲ್ಜಾತಿಯ ಮತ್ತು ಮೇಲ್ವರ್ಗದವರ ಕೈಯಲ್ಲಿ ಇದೆ. ಇಲ್ಲಿ ದಲಿತರ ಸ್ವತ್ತು ಎಂದರೆ ದೈಹಿಕ ಶ್ರಮವೇ ಅವರಿಗೆ

ಮುಖ್ಯ ಆಧಾರ ಇಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಮೇಲೆ ಚರ್ಚಿಸಿದ ಎಲ್ಲ ಅಧ್ಯಯನಗಳು ಮೀಸಲಾತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಲ್ಲಿ ಯಾವ ಪರಿವರ್ತನೆ ತಂದಿದೆ ಎಂಬುದನ್ನು ಗುರ್ತಿಸಿಲ್ಲ. ಮೀಸಲಾತಿಯನ್ನು ಮಾನದಂಡವನ್ನಾಗಿಟ್ಟುಕೊಂಡು ಅಭಿವೃದ್ಧಿಯನ್ನು ಮಾನದಂಡಮಾಡಲಾಗಿದೆ. ಆದರೆ ಅಭಿವೃದ್ಧಿ ಯೋಜನೆಯನ್ನು ಮಾನದಂಡವನ್ನಾಗಿಕೊಂಡು ಚರ್ಚಿಸಿಲ್ಲ. ಈ ಅಧ್ಯಯನಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮೀಸಲಾತಿಯ ಪ್ರಕ್ರಿಯೆಯನ್ನು ಅಧ್ಯಯನ ಮಾಡಿವೆ. ಆದರೆ ಅದರ ಹಿಂದಿರುವ ಪ್ರಕ್ರೀಯೆಯನ್ನು ಗುರ್ತಿಸಿಲ್ಲ. ಈ ಹಿನ್ನೆಲೆಯಲ್ಲಿ ಮೀಸಲಾತಿಯನ್ನು ಈ ಸಮುದಾಯಗಳು ಹೇಗೆ ಜೀರ್ಣಿಸಿಕೊಂಡಿವೆ ಎಂದು ನೋಡುವುದು ಸಹ ಮುಖ್ಯವಾಗಿರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ವ್ಯವಸ್ಥೆಯ ಕಟ್ಟಕಡೆಯ ಶೋಷಿತ ಸಮುದಾಯ ಎಂದು ಪರಿಗಣಿಸಲ್ಪಟ್ಟಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಾಜೋಆರ್ಥಿಕ, ರಾಜಕೀಯ ಸ್ಥಿತಿಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕೆಲವು ವಾಸ್ತವಿಕ ಪ್ರಶ್ನೆಗಳನ್ನು ಎತ್ತಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮೀಸಲಾತಿ ಅವಕಾಶಗಳನ್ನು ಹೇಗೆ ಜೀರ್ಣಿಸಿ ಕೊಂಡಿದ್ದಾರೆ? ಅದರಿಂದ ಅವರ ಬದುಕು ಬದಲಾಗಿದಿಯೇ? ಅಭಿವೃದ್ಧಿ ಪ್ರಕ್ರೀಯೆಯಲ್ಲಿ ಒಳಗೊಳ್ಳವವರೇ? ಮತ್ತು ಅವರ ದುಸ್ಥಿತಿಗಳಿಗೆ ಕಾರಣಗಳೇನು? ಸ್ವಾತಂತ್ರ್ಯ ಭಾರತದ ೬೫ ವರ್ಷಗಳ ಇತಿಹಾಸದಲ್ಲಿ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ, ಜೀವಂತ ದಹನ ಇಂದಿಗೂ ಸಹ ಮುಂದುವರೆಯುತ್ತವೆ ಯಾಕೆ? ಅಲ್ಲದೇ ಈ ಸಮುದಾಯಗಳು ಅಭಿವೃದ್ಧಿ ಪ್ರಜಾಪ್ರಭುತ್ವ ರಾಜಕಾರಣ ಪ್ರಭುತ್ವ ರಾಜಕಾರಣದಲ್ಲಿ ಯಾವ ಹಂತದಲ್ಲಿದ್ದಾರೆ? ಸರಕಾರದ ಅಥವಾ ಇತರ ಅಭಿವೃದ್ಧಿ ಯೋಜನೆಗಳು ಈ ಸಮುದಾಯಕ್ಕೆ ತಲುಪಿವೆಯೇ? ಒಂದುವೇಳೆ ತಲುಪದಿದ್ದರೆ ಯಾಕೆ ತಲುಪುತಿಲ್ಲ? ಹಾಗಾದರೆ, ಸರರ್ಕಾದ ನೀತಿ ಮತ್ತು ಧೋರಣೆಗಳಲ್ಲಿ ಯಾವ ತರಹದ ಮಾರ್ಪಾಡುಗಳು ಮಾಡಬೇಕು? ಸರ್ಕಾರಿ ಸೌಲಭ್ಯ ಮತ್ತು ಸಂವಿಧಾನತ್ಮಕ ಸೌವಲಭ್ಯಗಳ ಮಾನದಂಡಗಳು ಸರಿಯಾಗಿಲ್ಲವೇ? ಪರಿಶಿಷ್ಟ ಜಾತಿ ಮತು ಪರಿಶಿಷ್ಟ ಪಂಗಡಗಳು ಮೀಸಲು ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿದ್ದಾರೆಯೇ? ಅವರು ಯಾವ ಹಂತದಲ್ಲಿದ್ದಾರೆ? ಸಾಮಾನ್ಯ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಅಭಿವೃದ್ಧಿ ಹೊಂದಿದ್ದಾರೆಯೇ? ಮತ್ತು ಅವರ ಸ್ಥಿತಿಗತಿಗಳೇನು? ಯಾವ ಹಂತದಲ್ಲಿದ್ದಾರೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಸಮಸ್ಯೆಗಳು ಹೇಗೆ ಉದ್ಭವಿಸಿದವು ಮತ್ತು ಪರಿಹಾರವಾಗಬಲ್ಲವೇ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಮಸ್ಯೆ ಮತ್ತು ಸವಾಲುಗಳೇನು? ಎಂಬ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ನೆಲಗಟ್ಟಿನ ಮೇಲೆ ಕೆಲವು ಪ್ರಶ್ನೆಗಳನ್ನು ಎತ್ತಿಕೊಳ್ಳಲಾಗಿದೆ.

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೂಲಭೂತ ಸಮಸ್ಯೆಗಳು ಯಾವುವು? ಮತ್ತು ಅವುಗಳನ್ನು ಪರಿಹಾರ ಕೈಗೊಳ್ಳಬೇಕಾದ ಕ್ರಮಗಳೇನು?

ಬ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಇದೇ ಧೋರಣೆಗಳು ಮುಂದುವರೆದರೆ, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು ಯಾವಾಗ? ಮತ್ತು ಪರಿಹಾರಿಸುವುದು ಹೇಗೆ? ಅವರು ಸಹ ಇತರೆ ಅಭ್ಯರ್ಥಿಗಳು ಹಾಗೂ ಸಮುದಾಯದವರು ಬದುಕಲು ಸಾಧ್ಯವಿದೆಯೇ?

ಕ) ಸಮುದಾಯದ ಪ್ರಾತಿನಿಧಿಕತ್ವ ಹಾಗೂ ಸಮುದಾಯದ ಅಭಿವೃದ್ಧಿಯ ನಡುವೆ ಸಂಬಂಧಿಸಿದೆ ಎನ್ನಲಾದ ಹಲವು ಅಧ್ಯಯನಗಳು ನಡೆದಿವೆಯೇ? ಮತ್ತು ಸಮಸ್ಯೆಗಳನ್ನು ಯಾವ ನಿಟ್ಟಿನಲ್ಲಿಯೂ ಪರಿಹರಿಸಬಹುದು?

ಡ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಮೀಸಲಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಮಾದರಿಗಳು ನೀತಿ ಮತ್ತು ಕಾರ್ಯಕ್ರಮಗಳನ್ನು ಯಾವ ಪ್ರಮಾಣದಲ್ಲಿ ಮತ್ತು ಹೇಗೆ ಕಾರ್ಯರೂಪಕ್ಕೆ ತರಲಾಗಿದೆ ಮತ್ತು ಇತರ ಸಾರ್ವಜನಿಕ ನೀತಿಗೆ (ಸಾಮಾನ್ಯ ನೀತಿಗೆ) ಕೊಟ್ಟಷ್ಟು ಮಹತ್ವ ವಿಶೇಷವಾಗಿ ಈ ಸಮುದಾಯಗಳು ಅಭಿವೃದ್ಧಿಗೆ ಆಸಕ್ತಿ ವಹಿಸುತ್ತಿಲ್ಲ. ಅಲ್ಲದೇ ಈವರೆಗಿನ ಬಹುತೇಕ ಅಭಿವೃದ್ಧಿ ಅಧ್ಯಯನಗಳು ಪ್ರಾದೇಶಿಕ, ರಾಜ್ಯ, ಅಥವಾ ಜಿಲ್ಲೆ ಅಥವಾ ರಾಷ್ಟ್ರದ ಅಭಿವೃದ್ಧಿಗೆ ಮಹತ್ವ ನೀಡಿವೆ. ಅದರಲ್ಲಿಯೂ ಬುಡಕಟ್ಟು ಸಮುದಾಯವನ್ನು ಕೇಂದ್ರೀಕರಿಸಿ ೬೦-೭೦ರ ದಶಕದಲ್ಲಿ ಅಧ್ಯಯನಗಳು ನಡೆದವು. ಆದರೆ ದಲಿತರ ಅಭಿವೃದ್ಧಿಗಾಗಿ ವಿಶೇಷ ಅಧ್ಯಯನಗಳು ಯಾಕೆ ನಡೆಯಲಿಲ್ಲ? ಈ ಎಲ್ಲ ವಿಚಾರಗಳಿಗೆ ಒತ್ತುಕೊಟ್ಟು ಮೀಸಲಾತಿ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಹೇಗಿದೆ? ಯಾವ ರೀತಿ ಕಾರ್ಯ ನಿರ್ವಹಿಸುತ್ತದೆ ಎಂಬುದರ ಮೇಲೆ ಈ ಅಧ್ಯಯನ ಬೆಳಕು ಚೆಲ್ಲುವುದಾಗಿದೆ.

ಅಧ್ಯಯನ ಉದ್ದೇಶಗಳು

ಪ್ರಸ್ತುತ ಅಧ್ಯಯನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತಿಗಳನ್ನು ಕುರಿತು ವಿವರಣೆಯನ್ನು ನೀಡುತ್ತದೆ. ಇದರ ಜೊತೆಗೆ ಪರಿಶಿಷ್ಟರ ಕುರಿತು ನಡೆದ ಅಧ್ಯಯನಗಳು ವರದಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಸತ್ಯಾಂಶಗಳನ್ನು ಹೊರತರಲು ಪ್ರಯತ್ನ ಮಾಡಲಾಗಿದೆ. ಅದೇ ರೀತಿಯಾಗಿ ಪರಿಶಿಷ್ಟರ ಸ್ಥಿತಿಗತಿಯ ಸುಧಾರಣೆಗೆ ಜಾರಿಗೆ ತಂದ ಕಾರ್ಯಕ್ರಮಗಳು ಮತ್ತು ಸುಧಾರಣೆಯ ಪರಿಹಾರ ಭಾಗವಾಗಿ ಬಂದ ಮೀಸಲಾತಿ ಮತ್ತು ಒಳಮೀಸಲಾತಿಯನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮುಖ್ಯವಾಗಿ ಈ ಅಧ್ಯಯನದ ಸ್ಪಷ್ಟವಾದ ಉದ್ದೇಶಗಳೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧನಾತ್ಮಕ ಅವಕಾಶಗಳು ಹೇಗೆ ಜನರನ್ನು ತಲುಪಿವೆ ಮತ್ತು ತಲುಪವಲ್ಲಿ ಇರುವ ತೊಂದರೆಗಳನ್ನು ವಿಶ್ಲೇಷಿಸುವುದು ಅದರಲ್ಲಿ ವಿಶೇಷವಾಗಿ ಪರಿಶಿಷ್ಟರ ಸ್ಥಿತಿಗತಿಳನ್ನು ಕುರಿತು ವಿವರಿಸಲು ಪ್ರಯತ್ನಿಸಲಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನವು ನಾಲ್ಕು ಉದ್ದೇಶಗಳನ್ನು ಒಳಗೊಂಡಿದೆ.

೧. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಮಾಜಿಕ ಸ್ಥಿತಿಗತಿ ಮತ್ತು ಮೀಸಲಾತಿಯ ಸಾಧಕ ಭಾದಕಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು.

೨. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಸ್ಥಿತಿಗತಿ ಮತ್ತು ಅವರ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸುವದು.

೩. ಪರಿಶಿಷ್ಟರಗಾಗಿ ಇರುವ ಮೀಸಲಾತಿ ಕ್ಷೇತ್ರಗಳಲ್ಲಿ ಆಶ್ಪೃಸ್ಯತೆ ಮತ್ತು ಅದರ ನಿವಾರಣೆಗೆ ಇರುವ ಕಾರ್ಯಕ್ರಮಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು.

೪. ಮಾನವ ಅಭಿವೃದ್ಧಿಯಲ್ಲಿ ಪರಿಶಿಷ್ಟರ ಅಭಿವೃದ್ಧಿ ಮಟ್ಟವನ್ನು ಗುರುತಿಸುವುದು.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ ಎಂಬ ಶಿರ್ಷಿಕೆ ಹೇಳುವಂತೆ ಇದೊಂದು ದೃಷ್ಠಾಂತವಾದಿ (EMPERICAL) ಅಧ್ಯಯನವಾಗಿದೆ. ಇಲ್ಲಿ ಚಾರಿತ್ರಿಕ ಘಟನೆಗಳಿಗೆ ಸಮಾಜದ ಪ್ರತಿಕ್ರಿಯೆ ಯಾವ ರೀತಿ ಇತ್ತು ಮತ್ತು ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಹೇಗೆ ಚರಿತ್ರೆಯ ಕೂಸುಗಳಾದವು ಎಂಬುದನ್ನು ನೋಡುವದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಲ್ಲದೆ ಚಾರಿತ್ರಿಕ ಘಟನೆಗಳಿಗೆ ಸಮಕಾಲಿನ ಸಂದರ್ಭದ ಆಗು–ಹೋಗುಗಳಿಗೆ ಹೇಗೆ ಚಾಲನೆ ನೀಡುತ್ತದೆ ಎಂಬುದನ್ನು ಸಹ ಅಧ್ಯಯನದಲ್ಲಿ ನೋಡುವದಾಗಿದೆ. ಆದರೇ ಈ ಕಡೆಗಳಿಂದಲೂ ಬಹಳ ಮುಖ್ಯ ಎನಿಸಿಕೊಳ್ಳುವ ಪ್ರಸ್ತುತ ಅಧ್ಯಯನವು ಸಮಾಜವನ್ನು ಮೂಲಕೇಂದ್ರವನ್ನಾಗಿರಿಸಿಕೊಂಡಿದ್ದು, ಸಮಾಜ ಎಂಬುದು ಜನರಿಂದ ಕೂಡಿದ ಸಮುದಾಯ ಸಾಮಾಜಿಕ ಪ್ರತಿಕ್ರಿಯೆ(ನಿಯಮ) ಜನರ ಚಟುವಟಿಕೆ(ವರ್ತನೆ)ಗಳು ಮತ್ತು ಕಾನೂನುಗಳು(ಸಂವಿಧಾನಿಕ ನಿಯಮಗಳು) ಪರಿಧಿಗೆ, ವ್ಯಾಪ್ತಿಗೆ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಸಮಸ್ಯೆಯು ವ್ಯಕ್ತಿ, ಸಮಾಜ ಮತ್ತು ಕಾನೂನಿಗೆ ಸಂಬಂಧಿಸಿದ್ದಾಗಿದೆ.

ಪ್ರಸ್ತುತ ಅಧ್ಯಯನವು ಕರ್ನಾಟಕ ರಾಜ್ಯದ ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲೊಂದಾದ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಹೆಸರಾದ ರಾಯಚೂರು ಜಿಲ್ಲೆಗೆ ಸಂಬಂಧಿಸಿದ್ದಾಗಿದೆ. ವಿಶೇಷವಾಗಿ ಈ ಅಧ್ಯಯನವು ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನವನ್ನು ಪ್ರತಿಬಿಂಬಿಸುತ್ತದೆ. ಇದರ ಜೊತೆಗೆ ರಾಯಚೂರು ಜಿಲ್ಲೆಯ ಪ್ರಾದೇಶಿಕ ಆಸಮಾನತೆ ಮತ್ತು ಮಾನವ ಅಭಿವೃದ್ಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹೇಗೆ ಅಭಿವೃದ್ಧಿಯ ದುಃಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಈ ಅಂತರ ಮತ್ತು ಆಸಮಾನತೆಗಳನ್ನು ತಗ್ಗಿಸಲು ಸೂಕ್ತವಾದ ಸಲಹೆಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪ್ರಸ್ತುತ ಅಧ್ಯಯನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಗತಿಗಳನ್ನು ಕುರಿತು ಮಾಹಿತಿ ಒದಗಿಸುತ್ತದೆ. ಈ ಜಿಲ್ಲೆ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಗುರುತಿಸಲಾಗಿದೆ. ಅದೇ ರೀತಿಯಾಗಿ ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಗುರುತಿಸಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೂ ಸಹ ಈ ಜಿಲ್ಲೆ ದುಃಸ್ಥಿತಿಯಲ್ಲಿತ್ತು. ಮತ್ತು ನಂತರವು ಅದೇ ಸ್ಥಾನವನ್ನು ಉಳಿಸಿಕೊಂಡಿತು ಎಂಬುದಕ್ಕೆ ಅನೇಕ ಅಧ್ಯಯನಗಳು, ವರದಿಗಳು ಸಾದರ ಪಡಿಸಿವೆ. ೧೯೯೦ರ ಮಾನವ ಅಭಿವೃದ್ಧಿ ವರದಿ ಮತ್ತು ೧೯೯೫ರ ಮಾನವ ಅಭಿವೃದ್ಧಿ ವರದಿಗಳು ಜಿಲ್ಲೆಯು ಸಾಪೇಕ್ಷವಾಗಿ ಹಿಂದುಳಿದಿರುವಿಕೆಯನ್ನು ಗುರುತಿಸಿದೆ. ಅದೇರೀತಿಯಾಗಿ ೧೯೯೧ರ ಜನಗಣತಿ ವರದಿಗಳು, ೨೦೧೧ ಜನಗಣತಿ, ೨೦೦೨ರ ನಂಜುಂಡಪ್ಪ ವರದಿ ಹಿಂದುಳಿದಿರುವಿಕೆಯನ್ನು ಗುರುತಿಸಿವೆ. ಇಂತಹ ಸ್ಥಿತಿಯಲ್ಲಿ ಪರಿಶಿಷ್ಟರ ಸ್ಥಿತಿಗತಿ ಹೇಗೆ ಇದೆ ಎಂಬುದನ್ನು ಗುರುತಿಸಲು ರಾಯಚೂರು ಜಿಲ್ಲೆಯ ಮೂರು ಮೀಸಲಾತಿ ಕ್ಷೇತ್ರಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಮೂರು ವಿಧಾನಸಭಾ ಮೀಸಲಾತಿ ಕ್ಷೇತ್ರಗಳನ್ನು ಯಾಕೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದರೆ ಇವು ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕುಗಳು ಮತ್ತು ಅತಿ ಹೆಚ್ಚು ಪರಿಶಿಷ್ಟ ಜನಸಂಖ್ಯೆಯನ್ನು ಹೊಂದಿವೆ. ಪರಿಶಿಷ್ಟ ಪಂಗಡ ಮೀಸಲಾತಿ ಕ್ಷೇತ್ರವಾಗಿ ದೇವದುರ್ಗಾ ಮತ್ತು ಪರಿಶಿಷ್ಟ ಜಾತಿ ಮೀಸಲಾತಿ ಕ್ಷೇತ್ರವಾಗಿರುವ ಲಿಂಗಸೂಗುರು, ಅದೇ ರೀತಿಯಾಗಿ ಸಾಮಾನ್ಯ ಮೀಸಲಾತಿ ಕ್ಷೇತ್ರವಾಗಿರುವ ಸಿಂಧನೂರು ತಾಲೂಕಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯಕ್ಕಾಗಿ ಪ್ರತಿಯೊಂದು ತಾಲೂಕಿನಿಂದ ೧೦೦ ಜನರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೀಗೆ ಒಟ್ಟು ೩೦೦ ಜನರನ್ನು ಪ್ರಶ್ನಾವಳಿ ಅನುಸೂಚಿ ಮೂಲಕ, ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಧ್ಯಯನದಲ್ಲಿ ಪ್ರತಿಯೊಂದು ತಾಲ್ಲೂಕಿನಿಂದ ನಾಲ್ಕು ಗ್ರಾಮಗಳನ್ನು (ಹಿಂದುಳಿದ) ಅತೀ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆ ಇರುವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ದೇವದುರ್ಗಾ ತಾಲ್ಲೂಕಿನಿಂದ ಹಿಂದುಳಿದ ಗ್ರಾಮಗಳಾದ ಗಲಗ್, ಹಿರೆಬೂದುರು, ಜಾಲಹಳ್ಳಿ, ಇಂಗಳದಾಳು ಗ್ರಾಮಗಳನ್ನು ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ೭೫ ಕುಟುಂಬಗಳನ್ನು ಈ ಕುಟುಂಬಗಳಲ್ಲಿ ೫೦ ಪುರುಷರು, ೨೫ ಮಹಿಳೆಯರನ್ನು ಅದೇ ರೀತಿಯಾಗಿ ಪರಿಶಿಷ್ಟ ಪಂಗಡದ ೨೫ ಕುಟುಂಬಗಳಲ್ಲಿ ೧೬ ಪುರುಷರು, ೯ ಮಹಿಳೆಯರನ್ನು ಅಧ್ಯಯನದ ಸಮೀಕ್ಷೆಗೆ ಒಳಪಡಿಸಲಾಗಿದೆ. ಲಿಂಗಸೂಗುರು ತಾಲ್ಲೂಕಿನಿಂದ ಆನೆಹೊಸೂರು, ಮೆದಿಕಿನಾಳ, ಸರ್ಜಾಪುರ ಹಾಗೂ ನಿಲೋಗಲ್ ಗ್ರಾಮಗಳನ್ನು ಆಯ್ದುಕೊಳ್ಳಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ೭೫ ಕುಟುಂಬಗಳನ್ನು ಈ ಕುಟುಂಬಗಳಲ್ಲಿ ೫೦ ಪುರುಷರು, ೨೫ ಮಹಿಳೆಯರನ್ನು ಅದೇ ರೀತಿಯಾಗಿ ಪರಿಶಿಷ್ಟ ಪಂಗಡದ ೨೫ ಕುಟುಂಬಗಳಲ್ಲಿ ೧೬ ಪುರುಷರು, ೯ ಮಹಿಳೆಯರನ್ನು ಅಧ್ಯಯನದ ಸಮೀಕ್ಷೆಗೆ ಒಳಪಡಿಸಲಾಗಿದೆ. ಹಾಗೆಯೇ ಸಿಂಧನೂರು ತಾಲ್ಲೂಕಿನಿಂದ

ಗುಂಡ, ಮುಕ್ಕುಂದಾ, ರಾಮತ್ನಾಳ ಹಾಗೂ ಜಾಲಿಹಾಳ ಗ್ರಾಮಗನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು ಇದರಲ್ಲಿ ಪರಿಶಿಷ್ಟ ಜಾತಿಯ ೭೫ ಕುಟುಂಬಗಳನ್ನು ಈ ಕುಟುಂಬಗಳಲ್ಲಿ ೫೦ಪುರುಷರು, ೨೫ ಮಹಿಳೆಯರನ್ನು ಅದೇ ರೀತಿಯಾಗಿ ಪರಿಶಿಷ್ಟ ಪಂಗಡದ ೨೫ ಕುಟುಂಬಗಳಲ್ಲಿ ೧೬ ಪುರುಷರು, ೯ ಮಹಿಳೆಯರನ್ನು ಪರಿಶಿಷ್ಟರ ಆರ್ಥಿಕ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ತಿಳಿದುಕೊಳ್ಳಲು ಈ ಗ್ರಾಮೀಣ ಪ್ರದೇಶಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲು ಸ್ಥೂಲವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗಿದೆ.

ಅನುಷಂಗಿಕ ಮಾಹಿತಿ

ಸಂಶೋಧನೆಗೆ ಸಂಬಂಧಿಸಿದಂತೆ ಅನುಷಂಗಿಕ ಮಾಹಿತಿಯ ಪಾತ್ರ ಬಹಳ ಮುಖ್ಯವಾದುದ್ದು. ಅವು ವಿಫಲವಾದ ಮಾಹಿತಿ ಮತ್ತು ಸಮಸ್ಯೆಯನ್ನು ಎತ್ತಿ ತೋರಿಸುತ್ತವೆ. ಹೀಗಾಗಿ ಈ ಅಧ್ಯಯನಕ್ಕೆ ಕೆಲವು ಅನುಷಂಗಿಕ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಅವುಗಳೆಂದರೆ ಪರಾಮರ್ಶನಾ ಗ್ರಂಥಗಳು, ಸರ್ಕಾರದ ಗೆಜೆಟಿಯರಗಳು, ೧೯೯೧ರ ಜನಗಣತಿ ವರದಿ, ೨೦೦೧ ಜನಗಣತಿ ವರದಿ, ೨೦೧೧ರ ಜನಗಣಿತಿ ವರದಿ, ೧೯೯೦ರ ಮಾನವ ಅಭಿವೃದ್ಧಿ ವರದಿ, ೧೯೯೫ರ ಮಾನವ ಅಭಿವೃದ್ಧಿ ವರದಿ, ೨೦೦೫ರ ಮನವ ಅಭಿವೃದ್ಧಿಗಳು, ೨೦೦೨ರ ಡಾ. ಬಿ.ಎಂ ನಂಜುಂಡಪ್ಪ ವರದಿ (ಪ್ರಾದೇಶಿಕ ಅಸಮಾನತೆ ನಿವಾರಣ ಸಮಿತಿ) ಅದೇ ರೀತಿಯಾಗಿ ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ರಾಯಚೂರು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಗಣತಿ ೨೦೧೩, ದಲಿತ ಅಭಿವೃದ್ಧಿ ಸೂಚ್ಯಂಕ, ಮಾನವ ಅಭಿವೃದ್ಧಿ ಸೂಚ್ಯಂಕ, ಕರ್ನಾಟಕ ಅಂಕಿ–ಸಂಖ್ಯೆಗಳ ವರದಿಗಳು ೨೦೧೨, ಸರ್ಕಾರದ ಅಂಕಿ–ಅಂಶಗಳು, ಸಮಾಜ ಕಲ್ಯಾಣ ಇಲಾಖೆಯ ಕೈಪಿಡಿಗಳು, ಪ್ರಕಟಿತ ಮತ್ತು ಅಪ್ರಕಟಿತ ಎಂ.ಫಿಲ್ ಸಂಶೋದನಾ ಪ್ರಬಂಧಗಳು ಮತ್ತು ಪ್ರಕಟಿತ ಮತ್ತು ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಿಕಪತ್ರಿಕೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅದೇ ರೀತಿಯಾಗಿ ಅಂತರ್‌ಜಾಲದಲ್ಲಿ ಲಭ್ಯವಾಗಿರುವ ಮಾಹಿತಿಯನ್ನು ಸಂಗ್ರಹಿಸಿ ಈ ಸಂಶೋದನೆಗೆ ಬಳಸಿಕೊಳ್ಳಲಾಗಿದೆ.

ಪ್ರಾಥಮಿಕ ಮಾಹಿತಿ

ಪ್ರಾಥಮಿಕ ಮಾಹಿತಿಯು ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಂಡ ವಿವರಗಳು ಮತ್ತು ಗ್ರಾಮದಲ್ಲಿ ಸಂದರ್ಶನ ಮಾಡಲಾದ ಜನರ ಸಾಮಾನ್ಯ ಮಾಹಿತಿಯೊಂದಿಗೆ ಪ್ರಶ್ನಾವಳಿಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಒಳಗೊಂಡಿದೆ.

ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿ ಅನುಸೂಚಿಯನ್ನು ರೂಪಿಸಿಕೊಳ್ಳಲಾಗಿದೆ, ಪ್ರಶ್ನಾವಳಿ ಅನುಸೂಚಿ ಮೂರು ಸೂಚಕಗಳು (Indicators) ಮತ್ತು ಹದಿನಾಲ್ಕು ಉಪ ಸೂಚಕಗಳ ಮತ್ತು ನೂರಾ ಒಂಬತ್ತು ಪ್ರಶ್ನೆಗಳ ಮೂಲಕ ಪಲಾನುಭವಿಗಳಿಂದ ಕ್ಷೇತ್ರಕಾರ್ಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಾಗಿ ಸಂದರ್ಶನ, ಗುಂಪು ಚರ್ಚೆ ಮತ್ತು ಅವಲೋಕನ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಸ್ಯಾಂಪ್ಲಿಂಗ್ ಆಯ್ಕೆವಿಧಾನ

ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಲು ರಾಯಚೂರು ಜಿಲ್ಲೆಯ ಮೂರು ತಾಲೂಕುಗಳ(ಮೀಸಲಾತಿ ಕ್ಷೇತ್ರಗಳು)ನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ ಪರಿಶಿಷ್ಟ ಜಾತಿ ಮೀಸಲಾತಿ ಕ್ಷೇತ್ರವಾಗಿರುವ ಲಿಂಗಸೂರು, ಪರಿಶಿಷ್ಟ ಪಂಗಡದ ಮೀಸಲಾತಿ ಕ್ಷೇತ್ರವಾಗಿರುವ ದೇವದುರ್ಗಾ ಮತ್ತು ಸಾಮಾನ್ಯ ಕ್ಷೇತ್ರವಾಗಿರುವ ಸಿಂದನೂರು (ತಾಲೂಕು) ವಿಧಾನಸಭಾ ಕ್ಷೇತ್ರಗಳ ಆಯ್ಕೆ ಮಾಡಿಕೊಳ್ಳಲಾಗಿದೆ. –ಪ್ರತಿಯೊಂದು ತಾಲೂಕಿನಿಂದ ೧೦೦ ಫಲಾನುಭವಿಗಳನ್ನು ಸಂದರ್ಶನ ಮಾಡಲಾಗಿದೆ. ಪ್ರತಿಯೊಂದ ಕ್ಷೇತ್ರದಿಂದ ೪ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಂದರ್ಶನಕ್ಕಾಗಿ ಫಲಾನುಭವಿಗಳನ್ನು ಸರಳ ಯಾದೃಚ್ಛವಿಕ ವಿಧಾನದ (Simple Systematic random method) ಮೂಲಕ ಆಯ್ಕೆಮಾಡಿಕೋಳ್ಳಲಾಗಿದೆ. ಗ್ರಾಮಗಳನ್ನು ಮುಂದೆವರಿದ ಮತ್ತು ಹಿಂದುಳಿದ ಎಂಬ ಮಾನದಂಡದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ದೇವದುರ್ಗಾ ತಾಲೂಕಿನಲ್ಲಿ ಮುಂದುವರಿದ ಗ್ರಾಮವಾಗಿ ಜಾಲಹಳ್ಳಿ ಮತ್ತು ಹಿಂದುಳಿದ ಗ್ರಾಮವಾಗಿ ಹದ್ದಿನಾಳ, ಹಿರೆಬೂದುರು, ಇಂಗಳದಾಳ, ಮುಡಬಾಳ, ಮೆದಿಕಿನಾಳ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಸಮೀಕ್ಷೆಗೆ ಒಳಪಡಿಸಲಾಗಿದೆ. ಸಿಂದನೂರು ತಾಲೂಕಿನಲ್ಲಿ ಬಳಗಾನೂರು ಮತ್ತು ಜಾಲಿಹಾಳ ಗ್ರಾಮಗಳು ಮುಂದವರಿದು ಮತ್ತು ಮುಕ್ಕಾಂದಾ ಮತ್ತು ಗುಂಡ ಗ್ರಾಮಗಳು ಹಿಂದುಳಿದ ಗ್ರಾಮಗಳೆಂದು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗ್ರಾಮಗಳ ಪರಿಶಿಷ್ಟ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಂಸ್ಕೃತಿಕ ಅವಕಾಶಗಳಿಗೆ ಸಂಬಂದಿಸಿದಂತೆ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಲಾಗಿದೆ.

ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ

ಪ್ರಸ್ತುತ ಅಧ್ಯಯನವು ಒಂದು ದೃಷ್ಟಿಂತವಾದಿ (ಎಂಪೆರಿಕಲ) ಅಧ್ಯಯನವಾಗಿದ್ದು ಮತ್ತು ತುಲಾನಾತ್ಮಕ ಅಧ್ಯಯನವು ಆಗಿದೆ ಕ್ಷೇತ್ರಕಾರ್ಯದ ಮೂಲಕ ಫಲಾನುಭವಿಗಳೆಂದರೆ ಸಂದರ್ಶನದ ಮೂಲಕ ಸಂಗ್ರಹಿಸಿ, ಪ್ರಾಥಮಿಕ ಮಾಹಿತಿಯನ್ನು ದತ್ತಾಂಶವನ್ನು ಕೋಷ್ಟಕಗಳ ರೂಪದಲ್ಲಿ ನಿರೂಪಿಸಲಾಗಿದೆ, ತುಲನಾತ್ಮಕ ಅಧ್ಯಯನವನ್ನು ಖಚಿತ ಪಡಿಸಿಕೊಳ್ಳುವ ಸಲುವಾಗಿ ಕೋಷ್ಟಕಗಳನ್ನು ಶೇಕಡವಾರಿನ ಮೂಲಕ ವಿಶ್ಲೇಷಿಸಣೆಗೆ ಒಳಪಡಿಸಲಾಗಿದೆ. ಅಂಕಿ ಅಂಶಗಳು, ಮಾಪನಗಳು, ಸರಾಸರಿ ವಿಚಲನೆ ಸಂಬಂಧದ ಮೂಲಕ ಅಗತ್ಯವೆನಿಸಿದಲ್ಲಿ ಬಳಸಿಕೊಳ್ಳಲಾಗಿದೆ. ನೂರು ಜನರ ಸಂದರ್ಶನದಲ್ಲಿ ೩೪ ಮಹಿಳೆಯರು ಮತ್ತು ೬೬ ಪುರುಷರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಅದೇ ರೀತಿಯಾಗಿ ೨೦ ರಿಂದ ೩೦, ೩೧ ರಿಂದ ೪೦, ಮತ್ತು ೪೧ ರಿಂದ ೭೫ರ ವರೆಗಿನ ವಯೋಮಾನವರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾಮಾನ್ಯ ಅಂಕಿ-ಅಂಶಗಳ ಆಧಾರದ ಮೇಲೆ ಸಲಹೆಗಳು ಮತ್ತು ತೀರ್ಮಾನಗಳನ್ನು ಪಡೆಯಲು ಇದರಿಂದ ಸಾಧ್ಯವಾಗಿದೆ. ಈ ರೀತಿಯಾಗಿ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿ ವಿಶ್ಲೇಷಣೆಗೆ ಒಳಪಡಿಸಿ ಫಲಿತಗಳನ್ನು ನೀಡಲಾಗಿದೆ. ಅದರಲ್ಲಿ ಶೇಕಡವಾರು, ಅನುಪಾತ, ಸೂಚ್ಯಾಂಕ, ಕೋಷ್ಟಕಗಳಂತಹ ಸಾಧನಗಳನ್ನು ಬಳಸಿ ವೈಜ್ಞಾನಿಕ ವಿಧಾನಗಳ ಮೂಲಕ ಮಾಹಿತಿ ವಿಶ್ಲೇಷಿಸಲಾಗಿದೆ. ಈ ಮಹಾಪ್ರಬಂಧವು ಮುಖ್ಯವಾಗಿ ಅನುಷಂಗಿಕ ಮತ್ತು ಪ್ರಾಥಮಿಕ (ಕ್ಷೇತ್ರಕಾರ್ಯದ ಮಾಹಿತಿ) ಎರಡನ್ನು ಆಧರಿಸಿದೆ. ಅಂಕಿ ಸಂಖ್ಯೆಗಳ ಆಧಾರವೇ ಹೆಚ್ಚು ಇರುವುದರಿಂದ ಅಂಕಿ ಸಂಖ್ಯೆಗಳ ಕುರಿತಾದ ಅಧ್ಯಯನಕ್ಕೆ ಯಾವ ಮಿತಿ ಇರುತ್ತದೆಯೋ ಅದೇ ಮಿತಿ ಈ ಅಧ್ಯಯನಕ್ಕೆ ಇರುತ್ತದೆ.

ಅವಲೋಕನ ವಿಧಾನ

ಪ್ರಸ್ತುತ ಅಧ್ಯಯನಲ್ಲಿ ಅನುಷಂಗಿಕ ಮಾಹಿತಿ ಆಧಾರದ ಮೇಲೆ ಸಂಶೋಧನಾ ಪ್ರಶ್ನೆಗಳನ್ನು ರೂಪಿಸಲಾಗಿದೆ. ಅದೇರೀತಿಯಾಗಿ ಸಂಶೋಧನೆಗೆ ಸ್ಪಷ್ಠ ಉದ್ದೇಶಗಳನ್ನು ರೂಪಿಸಿಕೊಂಡು ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳಿಂದ ಮಾಹಿತಿ ಸಂಗ್ರಹಿಸಿ, ವಿಶ್ಲೇಷಣೆ ಒಳಪಡಿಸಲಾಗಿದೆ. ಆದರೂ ಕೆಲವು ಮಾಹಿತಿಗಳು ಸ್ಪಷ್ಟತೆ ಇನ್ನು ಸರಕಾರದ ವರದಿಗಳಲ್ಲಿ ಲಭ್ಯವಾಗಿಲ್ಲ. ಉದಾ : ಪರಿಶಿಷ್ಟರ ಭೂಮಿ ಮತ್ತು ಬಂಡವಾಳ, ಆಧಾಯವನ್ನು ಮಾಪನ ಮಾಡುವ ವಿಧಾನಗಳು ಬದಲಾಗಿಲ್ಲ. ಹಾಗಾಗಿ ಪ್ರಾಥಮಿಕ ಮಹಿತಿಗಳು ಮತ್ತು ಅನುಷಂಗಿಕ ಮಾಹಿತಿಗಳು ಕೆಲವೊಂದು ಬಾರಿ ಒಂದೇ ಫಲಿತಾಂಶವನ್ನು ಹೊರಹಾಕಿದ ಉದಾಹರಣೆಗಳಿವೆ ಆಗಾಗಿ ಅಂತಹ ಸಂದರ್ಭದಲ್ಲಿ ಅಡ್ಡ ಪರೀಶೀಲನೆ(ಕ್ರಾಸ್ ವೆರಿಫಿಕೇಷನ್)ಮಾಡಲಾಗಿದ್ದು ಮತ್ತು ಅವಲೋಕನ ವಿಧಾನ (ಆಬರ್ಸವೇಷನ್ ಮೆಥಡ್) ಬಳಸಿ ಮಾಹಿತಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಯನದ ಮಿತಿಗಳು

ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ಇದೊಂದು ತೌಲನಿಕ ಅಧ್ಯಯನವಾಗಿದೆ. ಅಧ್ಯಯನದ ಶಿರ್ಷಿಕೆ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಬಿವೃದ್ಧಿ ಮತ್ತು ಪ್ರಜಾ ಪ್ರಭುತ್ವ ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ಪೌಲನಿಕ ಅಧ್ಯಯನ" ಎಂಬ ಶಿರ್ಷಿಕೆಯನ್ನು ಹೊಂದಿದ್ದು. ಕರ್ನಾಟಕ ರಾಜ್ಯದ ಹೈದ್ರಾಬಾದ ಕರ್ನಾಟಕದ ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಕರೆಯಲ್ಪಡುವ ರಾಯಚುರು ಜಿಲ್ಲೆಗೆ ಸಂಬಂದಿಸಿದ್ದಾಗಿದೆ. ಅದರಲ್ಲಿ ವಿಶೇಷವಾಗಿ ರಾಯಚೂರು ಜಿಲ್ಲೆಯ ಮೂರು ವಿಧಾನಸಭಾ ಕ್ಷೇತ್ರಗಳಾದ ಲಿಂಗಸೂಗುರು (ಪರಿಶಿಷ್ಟ ಜಾತಿ) ವಿಧಾನಸಭಾ ಕ್ಷೇತ್ರ ದೇವದುರ್ಗಾ (ಪರಿಶಿಷ್ಟ ಪಂಗಡದ ವಿಧಾನಸಭಾ ಕ್ಷೇತ್ರ) ಮತ್ತು ಸಿಂದನೂರು (ಸಾಮಾನ್ಯ ವಿಧಾನಸಭಾ) ಕ್ಷೇತ್ರಗಳನ್ನು ಕ್ಷೇತ್ರಕಾಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಮೂಲಕ ಮಿಸಲಾತಿ ಕ್ಷೇತ್ರಗಳಲ್ಲಿನ ಮೀಸಲಾತಿಯ ಸಾಧಕ ಬಾಧಕಗಳನ್ನು ಚರ್ಚಿಸಲಾಗಿದೆ.

ಈ ಅಧ್ಯಯನದಲ್ಲಿ ಎಂಪಿರಿಕಲ್(ದೃಷ್ಟಾಂತವಾದಿ) ಅಂಶಗಳಿಗೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ. ಸರಕಾರದ ಅಂಕಿ-ಅಂಶಗಳು ಮತ್ತು ಕ್ಷೇತ್ರಕಾರ್ಯದ ಮಾಹಿತಿ ವಿಶ್ಲೇಷಣೆಯ ಮೂಲಕ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಕೆಲವು ಅಂಕಿ-ಸಂಖ್ಯೆಗಳ ಕೊರತೆಯನ್ನು ಅಧ್ಯಯನದಲ್ಲಿ ಕಾಣಬಹುದು. ಅದರೂ ಲಭ್ಯವಿರುವ ಮತ್ತು ಅಗತ್ಯಕನುಗುಣವಾಗಿರುವ ಮಾಹಿತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅಧ್ಯಯನದಲ್ಲಿ ಪರಿಶಿಷ್ಟ ಜಾತಿ ಎಂದರೆ ಸಂವಿಧಾನದ ಅನುಸೂಚಿಯಲ್ಲಿರುವ ಜಾತಿಗಳೆಂದು ಪರಿಭಾವಿಸಿಕೊಳ್ಳಲಾಗಿದೆ. ಉದಾ: ಕರ್ನಾಟಕದಲ್ಲಿ ೧೦೧ ಪರಿಶಿಷ್ಟ ಜಾತಿಗಳಿವೆ. ಇದರಲ್ಲಿ ಅಧ್ಯಯನದ ಕ್ಷೇತ್ರದಲ್ಲಿ ಬರುವ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇರುವವರನ್ನು ಮಾತ್ರ ಪಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದೇ ರೀತಿಯಾಗಿ ಪರಿಶಿಷ್ಟ ಪಂಗಡ ಎಂದರೆ ಸಂವಿಧಾನದಲ್ಲಿ ನಮೂದಿಸಲ್ಪಟ್ಟ ಪಂಗಡಗಳು ಎಂದರ್ಥ. ಕರ್ನಾಟಕದಲ್ಲಿ ೫೧ ಪರಿಶಿಷ್ಟ ಪಂಗಡಗಳಿವೆ.

ಅಭಿವೃದ್ಧಿ ಎಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಜೀವನ ಮಟ್ಟ, ಶಿಕ್ಷಣ, ಆರೋಗ್ಯ, ಆಧಾಯ, ವಸತಿ, ಭೂಮಿ, ಉದ್ಯೋಗ್ಯಕ್ಕೆ ಸಂಬಂಧಿಸಿದ ಭೌತಿಕ ಸಾಧನೆ ಎಂದು ಅಧ್ಯಯನದಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಅದೇರೀತಿಯಾಗಿ ಮೀಸಲಾತಿ ಎಂದರೆ ಸಂವಿಧಾನದಲ್ಲಿ ನಮೋದಿಸಲ್ಪಟ್ಟ ಶೇ. ೧೫ರ ಪರಿಶಿಷ್ಟ ಜಾತಿಯ ಮೀಸಲಾತಿ ಮತ್ತು ಶೇ ೩ರಷ್ಟು ಪರಿಶಿಷ್ಟ ಪಂಗಡದವರ ಮೀಸಲಾತಿಯನ್ನು ಚರ್ಚೆಗೆ ಒಳಪಡಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಇತರರಿಗೆ ಇರುವ ಮೀಸಲಾತಿಯನ್ನು ಚರ್ಚಿಸಿಲ್ಲ ಎಂದರ್ಥವಲ್ಲ. ಸಮಯ ಸಂದರ್ಭಕ್ಕನುಗುಣವಾಗಿ ಪರಿಶಿಷ್ಟರಿಗಿರುವ ಮೀಸಲಾತಿಯಿಂದ ಇತರರಿಗೆ ಆಗಿರುವ ಪರಿಣಾಮಗಳು ಮತ್ತು ಇತರರಿಗೆ ಇರುವ ಮೀಸಲಾತಿಯಿಂದ ಪರಿಶಿಷ್ಟರಿಗೆ ಆಗಿರುವ ಪರಿಣಾಮಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಇದರ ಜೊತೆಗೆ ಒಳಮೀಸಲಾತಿ ಮತ್ತು ಬಡ್ತಿ ಮೀಸಲಾತಿಯನ್ನು ಸಹ ಚರ್ಚಿಸಲಾಗಿದೆ. ಪ್ರಜಾಪ್ರಭುತ್ವ ಎಂದರೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೊಸ್ಕರ ಇರುವ ಸರ್ಕಾರ ಎಂದು ಭಾವಿಸಲಾಗಿದೆ. ವಾಸ್ತವದಲ್ಲಿ ಹಾಗೆ ಇದೆಯೇ ಎಂಬುದನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಜಾತಿ ವ್ಯವಸ್ಥಯು ಪ್ರಜಾಪ್ರಭುತ್ವವನ್ನು ಹೇಗೆ ಟ್ರ್ಯಾಪ್ ಮಾಡುತ್ತಿದೆ ಎಂದು ವಾದಿಸಲಾಗಿದೆ.

೧. ಈ ಅಧ್ಯಯನವು ರಾಯಚೂರು ಜಿಲ್ಲೆಗೆ ಮಾತ್ರ ಸಿಮಿತಗೊಳಿಸಲಾಗಿದೆ.

೨. ಈ ಅಧ್ಯಯನವು ಮೀಸಲಾತಿನೆಲೆ, ಪರಿಶಿಷ್ಟರ ಅಭಿವೃದ್ಧಿಯ ನೆಲೆಯ ವಸ್ತುಸ್ಥಿತಿಯನ್ನು ಅಧ್ಯಯನ ಮಾಡುವಂತದ್ದು

೩. ಪ್ರಾದೇಶಿಕ ಅಸಮಾನತೆಯು ರಾಯಚೂರು ಜಿಲ್ಲೆಯ ಜನರ ಮೇಲೆ ಆಗಿರುವ ಪರಿಣಾಮಗಳನ್ನು ನೋಡುವಂತದ್ದು

೪. ಈ ಅಧ್ಯಯನವು ಜನ ಕೇಂದ್ರಿತ ಅಧ್ಯಯನವಾಗಿದ್ದು, ರಾಯಚೂರು ಜಿಲ್ಲೆಯ ಪರಿಶಿಷ್ಟರ ಮಾನವ ಅಭಿವೃದ್ಧಿ ಮತ್ತು ದುಸ್ಥಿತಿಯ ಮಜಲುಗಳನ್ನು ಅಧ್ಯಯನ ಮಾಡುವುದಾಗಿದೆ.

ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ರಾಯಚೂರು ಜಿಲ್ಲೆಯ ಪರಿಶಿಷ್ಟರ ಅಭಿವೃದ್ಧಿಯನ್ನು ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಪರಿಶಿಷ್ಟರು ಮೀಸಲಾತಿಯ ಮೂಲಕ ಪಡೆದ ರಾಜಕೀಯ ಪ್ರಾತಿನಿಧ್ಯದಿಂದ ಅವರು ಸಬಲೀಕರಣವಾಗಿದಾರೆಯೋ ಅಥವಾ ಇಲ್ಲವೋ ಎಂಬುದನ್ನು ಫಲಿತಗಳ ಆಧಾರದ ಮೇಲೆ ತೀರ್ಮಾನಕ್ಕೆ ಬರಲಾಗಿದೆ. ಇಲ್ಲಿಯವರೆಗೂ ಬಹುತೇಕ ಅಧ್ಯಯನ ಮತ್ತು ವರದಿಗಳು ಮೀಸಲಾತಿ ನೀತಿಯನ್ನು ಅಭಿವೃದ್ಧಿಯ ಸಾಧನವೆಂದು ಬಿಂಬಿಸುತ್ತ ಬಂದಿವೆ. ಆದರೆ ಈ ಅಧ್ಯಯನವು ಮೀಸಲಾತಿ ಅಭಿವೃದ್ಧಿಯ ಸಾಧನ ಅಥವಾ ಅದೇ ಅಂತಿಮ ಗುರಿಯಲ್ಲ. ಅದೊಂದು ಅಭಿವೃದ್ಧಿಯ ಮಾಧ್ಯಮ ಎಂದು ಅಂಕಿ ಅಂಶಗಳ ಮೂಲಕ ತಿಳಿಸಲಾಗಿದೆ. ರಾಯಚೂರು ಜಿಲ್ಲೆಯೂ ಅತೀ ಹೆಚ್ಚು ಪರಿಶಿಷ್ಟರನ್ನು ಹೊಂದಿದೆ. ಜಿಲ್ಲೆಯಲ್ಲಿ ೫ ಮೀಸಲು ವಿಧಾನಸಭಾ ಕ್ಷೇತ್ರಗಳಿವೆ. ಆದರೆ ಈಗ ಈ ಜಿಲ್ಲೆಯು ಪರಿಶಿಷ್ಟ ಪಂಗಡದ ಮೀಸಲು ಲೋಕಸಭ ಕ್ಷೇತ್ರವಾಗಿದೆ. ಆದರೂ ಜನಸಂಖ್ಯೆಗೂ ಮೀಸಲಾತಿಗೂ ಹಾಗೂ ಅಭಿವೃದ್ಧಿಗೂ ತಾಳಮೇಳವೆ ಇಲ್ಲ ಎಂಬ ಸೈದ್ಧಾಂತಿಕ ಗ್ರಾಸವನ್ನು ಈ ಅಧ್ಯಯನವು ನೀಡುತ್ತದೆ. ಜಾತಿಯತೆ, ಅಸ್ಪೃಶ್ಯತೆ ಪರಿಶಿಷ್ಟರ ಮೇಲೆ ಬೀರಿದ ಪರಿಣಾಮ ಮತ್ತು ಪ್ರಾದೇಶಿಕ ಅಸಮಾನತೆ ಪರಿಶಿಷ್ಟರ ಮೇಲೆ ಬೀರಿದ ಪರಿಣಾಮಗಳ ಸ್ಥೂಲ ಚಿತ್ರಣವನ್ನು ನೀಡುತ್ತದೆ. ಆಡಳಿತ ಮತ್ತು ರಾಜಕೀಯ ಪರಿಶಿಷ್ಟರಿಗೆ ಇರುವ ಸಂವಿಧಾನಾತ್ಮಕ ಅವಕಾಶಗಳನ್ನು ಹೇಗೆ ತಂತ್ರ ಮತ್ತು ಕುತಂತ್ರಗಳಿಂದ ತಪ್ಪಿಸಿದ್ದಾರೆ ಎಂಬುದನ್ನು ಅಂಕಿ ಅಂಶಗಳ ಮೂಲಕ ಮಾಹಿತಿಯನ್ನು ಒದಗಿಸುತ್ತದೆ.

ಒಟ್ಟಾರೆಯಾಗಿ ಈ ಅಧ್ಯಯವು ಜನಕೇಂದ್ರಿತ ಅಧ್ಯಯನವಾಗಿದೆ. ಪರಿಶಿಷ್ಟರನ್ನು ಕುರಿತು ಅಧ್ಯಯನ ಮಾಡುವವರಿಗೆ ಇದೊಂದು ಉತ್ತಮ ಮಾಹಿತಿಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ, ಬರಹಗಾರರಿಗೆ, ಸಂಶೋಧಕರಿಗೆ, ಓದುಗಾರರಿಗೆ ಯೋಜನೆ ಮತ್ತು ವರದಿ ತಯಾರಿಸುವವರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಇದೊಂದು ತುಲನಾತ್ಮಕ ಅಧ್ಯಯನವಾಗಿದೆ. ಈ ಅಧ್ಯಯನವು ಸೂಕ್ಷ್ಮ ಮತ್ತು ಆಳವಾದ ಅಧ್ಯಯನವಾಗಿದ್ದರಿಂದ ರಾಯಚೂರು ಜಿಲ್ಲೆಯ ಮೂರು ತಾಲೂಕುಗಳಿಗೆ ಸಿಮಿತಗೊಳಿಸಲಾಗಿದೆ.

ಅಧ್ಯಾಯಗಳ ವಿನ್ಯಾಸ

ಈ ಸಂಶೋದನಾ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳನ್ನು ಈ ಕೆಳಗಿನಂತೆ ರಚಿಸಲಾಗಿದೆ.

ಅಧ್ಯಾಯ: ಒಂದು ಈ ಅಧ್ಯಾಯದಲ್ಲಿ ಅಧ್ಯಯನದ ಪ್ರಸ್ತಾವನೆ ಅಧ್ಯಯನದ ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಧಾನ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಿತಿ ಅಧ್ಯಯಗಳ ವಿನ್ಯಾಸವನ್ನು ಒಳಗೊಂಡಿದೆ.

ಅಧ್ಯಾಯ: ಎರಡು ಈ ಅಧ್ಯಾಯದಲ್ಲಿ ಸಂಶೋಧನಾ ವಿಷಯಕ್ಕೆ ಆಯ್ಕೆ ಮಾಡಿಕೊಂಡ ಅಧ್ಯಯನ ಕ್ಷೇತ್ರ ಪರಿಚಯದ ವಿವರವನ್ನು ನೀಡಲಾಗಿದೆ. ಪ್ರಸ್ತಾವನೆ, ಪ್ರಾದೇಶಿಕ ಮತ್ತು ಜಿಲ್ಲೆ, ತಾಲೂಕುಗಳ ವಿವರ, ಭೌಗೋಳಿಕತೆ, ಹವಾಮಾನ, ಜನಸಂಖ್ಯೆ, ಶಿಕ್ಷಣ, ಆರೋಗ್ಯ, ಆದಾಯ ಮತ್ತು ಮೂಲಭೂತ ಸೌಲಭ್ಯಗಳ ಚಿತ್ರಣವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಾಯ: ಮೂರು ಅಧ್ಯಾಯದಲ್ಲಿ ಅಧ್ಯಯನದ ವಿಷಯವಸ್ತುವನ್ನು ಸೈದ್ಧಾಂತಿಕವಾಗಿ ವಿಮರ್ಶೆಗೆ ಒಳಪಡಿಸಲಾಗಿದೆ. ಪರಿಶಿಷ್ಟ ಜಾತಿ ಎಂದರೆ ಯಾರು? ಪರಿಶಿಷ್ಟ ಪಂಗಡ ಎಂದರೆ ಯಾರು? ಮೀಸಲಾತಿ ಎಂದರೇನು, ಮೀಸಲಾತಿ ಪರಿಕಲ್ಪನೆ, ಪ್ರಜಾಪ್ರಭುತ್ವ ಮತ್ತು ಮೀಸಲಾತಿ, ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ, ಮೀಸಲಾತಿ ಸಿದ್ಧಾಂತ ಮತ್ತು ಆಚರಣೆ, ಮೀಸಲಾತಿ ಹಾಗೂ ಬಡ್ತಿ ಮೀಸಲಾತಿಗಳ ಉದ್ದೇಶವೇನು ಹಾಗೂ ಅದರ ಆಚರಣೆಯಲ್ಲಿ ಹೇಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ: ನಾಲ್ಕು ಈ ಅಧ್ಯಾಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ವಿವರಣೆಯನ್ನು ನೀಡಲಾಗಿದೆ. ಪ್ರಸ್ತಾವನೆ ಪರಿಶಿಷ್ಟರ ಆರ್ಥಿಕ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು, ಕೇಂದ್ರ ಸರ್ಕಾರದ ಯೋಜನೆಗಳು, ರಾಜ್ಯ ಸರ್ಕಾರದ ಯೋಜನೆಗಳು, ಪರಿಶಿಷ್ಟರ ಆರ್ಥಿಕ ಅಭಿವೃದ್ಧಿಗಾಗಿ ಇರುವ ಸಾಂವಿಧಾನಿಕ ಕ್ರಮಗಳು, ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟರ ಆರ್ಥಿಕ ಅಭಿವೃದ್ಧಿಗಾಗಿ ತೆಗೆದುಕೊಂಡ ಕ್ರಮಗಳು ಅಧ್ಯಯನ ಕ್ಷೇತ್ರದ ಪರಿಶಿಷ್ಟರ ಆರ್ಥಿಕ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ: ಐದು ಈ ಅಧ್ಯಾಯದಲ್ಲಿ ಅಸ್ಪೃಶ್ಯತೆಯ ಬಗ್ಗೆ ಚರ್ಚೆ ಮತ್ತು ಅದರ ನಿವಾರಣೆಗಾಗಿರುವ ಕ್ರಮಗಳು, ಅಸ್ಪೃಶ್ಯಯ ಭಾಗವಾಗಿ ಬಂದ ಮೀಸಲಾತಿ ಕ್ಷೇತ್ರಗಳ ವಿವರಣೆ ಮೀಸಲಾತಿ ಕ್ಷೇತ್ರಗಳಲ್ಲಿ ಅಸ್ಪೃಶ್ಯತೆ, ಮತ್ತು ಅಸ್ಪೃಶ್ಯತೆ ನಿವಾರಣೆಗೆ ಸಲಹೆಗಳನ್ನು ನೀಡಲಾಗಿದೆ.

ಅಧ್ಯಾಯ: ಆರು ಈ ಅಧ್ಯಾಯದಲ್ಲಿ ಪರಿಶಿಷ್ಟರ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಅಭಿವೃದ್ಧಿ ಮತ್ತು ಮಾಣವ ಅಭಿವೃದ್ಧಿ, ಮಾನವ ಅಭಿವೃದ್ಧಿ ಸೂಚ್ಯಾಂಕ, ಜಿ.ಡಿ.ಪಿ ಮತ್ತು ಮಾನವ ಅಭಿವೃದ್ಧಿ ಸಂಬಂಧ, ಜಾಗತಿಕ ಮಾನವ ಅಭಿವೃದ್ಧಿ, ಭಾರತದಲ್ಲಿ ಮಾನವ ಅಭಿವೃದ್ಧಿ ಅಸಮತೋಲನ, ಪ್ರಾದೇಶಿಕ ಅಸಮಾನತೆ ಮತ್ತು ಮಾನವ ಅಭಿವೃದ್ಧಿ, ಪರಿಶಿಷ್ಟರು ಮತ್ತು ಮಾನವ ಅಭಿವೃದ್ಧಿ, ಅಧ್ಯಯನ ಕ್ಷೇತ್ರದಲ್ಲಿ ಮಾನವ ಅಭಿವೃದ್ಧಿಯನ್ನು ವಿಶ್ಲೇಷಿಸಿ ಫಲಿತಗಳನ್ನು ನೀಡಲಾಗಿದೆ.

ಅಧ್ಯಾಯ: ಏಳು ಈ ಅಧ್ಯಾಯದಲ್ಲಿ ಅಧ್ಯಾಯನದ ಸಮಾರೋಪದೊಂದಿಗೆ ಅಧ್ಯಯನದಿಂದ ಕಂಡುಕೊಂಡ ಫಲಿತಗಳೊಂದಿಗೆ ಕೆಲವು ಉಪಯುಕ್ತ ಸಲಹೆಗಳನ್ನು ನೀಡಲಾಗಿದೆ. ಮತ್ತು ಪರಮಾರ್ಶನ ಗ್ರಂಥಗಳು, ಕೋಷ್ಟಕಗಳನ್ನು, ನಕ್ಷೆಗಳನ್ನು ಸಂದರ್ಭಕ್ಕನುಗುಣವಾಗಿ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಕೊನೆ ಟಿಪ್ಪಣಿ

೧. ಕುಮಾರಸ್ವಾಮಿ ಎಚ್., ೨೦೧೦, ದಲಿತ ಚಳುವಳಿ ಮತ್ತು ಸಾಮಾಜಿಕ ನ್ಯಾಯ, ದಲಿತ ಅಭಿವೃದ್ಧಿ ಸಂಸ್ಥೆ ಸಿ-೧, ನೃಪತುಂಗ ನಗರಹಳ್ಳಿ ಕೆರೆರೋಡ್, ಕನ್ನಡ ವಿಶ್ವವಿದ್ಯಾಲಯ ಆವರಣ ವಿದ್ಯಾರಣ್ಯ, ಪುಟ-೪೯

೨. ಲಾಲ್ ಕೆ.ಎಸ್., ೨೦೧೨, ಮಧ್ಯಯುಗೀನ ಭಾರತದಲ್ಲಿ ಪರಿಶಿಷ್ಟವರ್ಗ ಜಾತಿಗಳ ವೃದ್ಧಿ ಸಾಹಿತ್ಯ ಸಿಂದು ಪ್ರಕಾಶನ, ೧೪/೩ಎ ನೃಪತುಂಗರಸ್ತೆ, ಬೆಂಗಳೂರು, ಪುಟ-೧೧೯

೩. ದೇವರಾಜ ಓ., ೨೦೧೩, ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ, ಚನ್ನಪಟ್ಟಣ ಎಮ್ಮಿಗನೂರು ರೋಡ್, ಬಳ್ಳಾರಿ, ಪು೧-೫೦

೪. ಚಿದಾನಂದ ಮೂರ್ತಿ ಎಂ., ೨೦೧೧, ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಸ್ವಪ್ನ ಬುಕ್‌ಹೌಸ್, ಗಾಂಧೀನಗರ, ಬೆಂಗಳೂರು, ಪುಟ-೧೫೪

೫. ವೆಂಕಟೇಶ ಎಚ್.ಎ., ೨೦೧೧, ಕರ್ನಾಟಕದ ಅರಸು ಭಾರತಿ ಎಂ.ಆರ್., ಭೂಸುಧಾರಣೆ ಮತ್ತು ದಿವಂಗತ ದೇವರಾಜ ಅರಸು, ವಿಸ್ಮಯ ಪ್ರಕಾಶನ, ಮೈಸೂರು, ಪುಟ-೧೧೫

೬. ರಾಜಗೋಪಾಲ (ಲೇ)., ೨೦೧೩, ನಾಗರಾಜ(ಅನು), ಯೋಜನಾ ಮಾಸಪತ್ರಿಕೆ, ಯೋಜನಾ ಕನ್ನಡ ವಿಭಾಗ, ಕೊರಮಂಗಲ, ಬೆಂಗಳೂರು, ಪುಟ-೩೧

೭. ಅನುಪಮ ಎಚ್.ಎಸ್., ಮಹಾತ್ಮ ಜ್ಯೋತಿ ಭಾ ಫುಲೆ ಜೀವನ ಚರಿತ್ರೆ, ೨೦೧೬, ಲಡಾಯಿ ಪ್ರಕಾಶನ, ಗದಗ, ಪು. ೭೬

೮. ಕೋಮಲ್ ಜೆ., ೨೦೦೩, ಪು.೭೬

೯. ನಂಜುಂಡಪ್ಪ ವರದಿ, ೨೦೦೨, ಹೈಪವರ್ ಕಮೀಟಿ ಫಾರ್ ರಿಡ್ರೆಸಲ್ ಆಫ್ ರಿಜಿನಲ್ ಇಂಬ್ಯಾಲನ್ಸ್, ಪು.೭೬

೧೦. ಕೆಂಪೇಗೌಡ, ೨೦೧೫, ಗ್ರಾಮೀಣ ಹಣಕಾಸು(ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ. ಮಹಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೨

೧೧. ನಂಜುಂಡಪ್ಪ ವರದಿ, ೨೦೦೨, ಹೈಪವರ್ ಕಮೀಟಿ ಫಾರ್ ರಿಡ್ರೆಸಲ್ ಆಫ್ ರಿಜಿನಲ್ ಇಂಬ್ಯಾಲನ್ಸ್, ಪು.೭೬

೧೨. ಚಂದ್ರ ಪೂಜಾರಿ ಎಂ., ೨೦೧೧, ಯೋಜನಾ, (ಲೇ) ಉತ್ತರ ಕರ್ನಾಟಕದ ಸಮಸ್ಯೆ ಮತ್ತು ಪರಿಹಾರಗಳು, ಯೋಜನಾ ಕನ್ನಡ ವಿಭಾಗ, ಕೊರಮಂಡಲ, ಬೆಂಗಳೂರು, ಪು. ೭೧

೧೩. ಪರ್ಯಾಯ ಕೃಷಿನೀತಿ., ೨೦೧೪, (ಕನ್ನಡ ಅನುವಾದ) ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕರರ ಸಂಘ, ಪ್ರಕಟಣೆ, ಬೆಂಗಳೂರು ಪು. ೧೨-೧೩

೧೪. ಕರ್ನಾಟಕ ಆಡಳಿತ ಸುಧಾರಣಾ ಆಯೋಗ, ೨೦೧೦, ಕರ್ನಾಟಕ ಗೆಜೆಟಿಯರ ಇಲಾಖೆ, ಬೆಂಗಳೂರು.

೧೫. ಚಂದ್ರಶೇಖರ ಟಿ.ಆರ್., ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು. ೮

೧೬. ಅಮರೇಶ್ ನುಗಡೋಣಿ, ೨೦೦೩, ಹೈದ್ರಾಬಾದ್ ಕರ್ನಾಟಕ ಹಾಡು–ಪಾಡು, , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು.೧೩೧

೧೭. ಮಹಾಬಲೇಶ್ವರಪ್ಪ ಬಿ.ಸಿ., ೧೯೪೬–೨೦೦೦, ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪು.೮೧

೧೮. ದೊಡ್ಡನಗೌಡ ಪಾಟೀಲ್, ೨೦೦೫, ಭೌತಿಕ ಮೂಲಸೌಕರ್ಯಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ(ಹೈದ್ರಾಬಾದ್ ಕರ್ನಾಟಕ ಪ್ರದೇಶ ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು.೧೪೧

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರ ಪರಿಚಯ

೨.೧ ರಾಯಚೂರು ಜಿಲ್ಲೆಯ ರಾಜಕೀಯ ಇತಿಹಾಸ

೨.೨. ಸಂಕ್ಷಿಪ್ತ ಪ್ರಾದೇಶಿಕ ಇತಿಹಾಸ (ಚರಿತ್ರೆ)

೨.೩. ಭೌಗೋಳಿಕತೆ

೨.೪. ಹವಾಮಾನ

೨.೫. ಜನಸಂಖ್ಯೆ

೨.೬. ಶಿಕ್ಷಣ

೨.೭. ಆರೋಗ್ಯ

೨.೮. ಆದಾಯ

೨.೯. ಮೂಲಭೂತ ಸೌಲಭ್ಯಗಳು

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರ ಪರಿಚಯ

ರಾಯಚೂರು ಜಿಲ್ಲೆ ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಹಿಂದಿನ ಅವಿಭಜಿತ ರಾಯಚೂರು ಜಿಲ್ಲೆಯಲ್ಲಿ ೯ ತಾಲೂಕುಗಳಿದ್ದವು. ೧೯೯೧ ಆಗಸ್ಟ್ ೨೪ರಂದು ರಾಯಚೂರು ಜಿಲ್ಲೆಯನ್ನು ವಿಭಜಿಸಿ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕುಗಳನ್ನು ಸೇರಿಸಿ ಕೊಪ್ಪಳ ಹೊಸ ಜಿಲ್ಲೆಯಾಗಿ ರಚನೆ ಮಾಡಲಾಯಿತು. ಈಗ ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ದೇವದುರ್ಗ, ಲಿಂಗಸೂಗೂರು, ಮಾನ್ವಿ ಮತ್ತು ಸಿಂಧನೂರು ಈ ೫ ತಾಲೂಕುಗಳು ರಾಯಚೂರು ಜಿಲ್ಲೆಯಲ್ಲಿ ಇವೆ. ರಾಯಚೂರು ನಗರವು ಜಿಲ್ಲಾ ಕೇಂದ್ರವಾಗಿದೆ ರಾಯಚೂರು ಜಿಲ್ಲೆಗೆ ಐತಿಹಾಸಿಕವಾಗಿ ಪ್ರಾಗ್ಯೈತಿಹಾಸಿಕ ಇತಿಹಾಸವಿದೆ. ಅನೇಕ ಅಧ್ಯಯನಗಳು ರಾಯಚೂರು ಜಿಲ್ಲೆಯಲ್ಲಿ ಆದಿಮಾನವ ಸಂಶೋಧನಾ ನೆಲೆಗಳನ್ನು ಗುರುತಿಸಿವೆ. (ಗಂಗಾವತಿ ತಾಲೂಕು ಹಿರೆಬೆಣಕಲ್ ಈಗಿನ ಕೊಪ್ಪಳ ಜಿಲ್ಲೆ) ಐತಿಹಾಸಿಕವಾಗಿ ಕ್ರಿಪೂ ೩ನೇ ಶತಮಾನದಲ್ಲಿ ಮೌರ್ಯರು, ಕ್ರಿಶ ೧೦೬ ರಲ್ಲಿ ಶಾತವಾಹನರು, ಬನವಾಸಿಯ ಕದಂಬರು ಆಳಿದರೆಂದು ಶಾಸನಗಳಿಂದ ತಿಳಿದುಬರುತ್ತದೆ. ೫ನೇ ಶತಮಾನದಲ್ಲಿ ಬಾದಾಮಿಯ ಚಾಲುಕ್ಯರು, ೭ನೇ ಶತಮಾನದಲ್ಲಿ ರಾಷ್ಟ್ರಕೂಟರು, ೯ನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರು, ೧೦ನೇ ಶತಮಾನದಲ್ಲಿ ಚೋಳರು, ೧೧ನೇ ಶತಮಾನದಲ್ಲಿ ವಾರಂಗಲ್‌ನ ಕಾಕತೀಯರು, ೧೩ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ, ಒಟ್ಟು ೧೩೩೬ ರಿಂದ ೧೫೬೫ರ ಕಾಲಾವಧಿಯಲ್ಲಿ ವಿಜಯನಗರ ಸಾಮ್ರಾಜ್ಯ, ಬಹುಮನಿ ಸುಲ್ತಾನರು, ಬಿಜಾಪುರದ ಆಧಿಲ್-ಷಾಹಿಗಳ ಆಡಳಿತಕ್ಕೆ ಒಳಪಟ್ಟಿತ್ತು. ೧೭ನೇ ಶತಮಾನದಲ್ಲಿ ಮೊಗಲ್ ಸಾಮ್ರಾಜ್ಯದ ಅವನತಿಯ ನಂತರ ೧೭೨೪ರಲ್ಲಿ ಸುಬೇಧಾರ ಅಸಫ್‌ಝಾ ನಿಜಾಂ-ಉಲ್-ಮುಲ್ಕ ಹೈದ್ರಾಬಾದ್‌ನಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿದ. ೧೭೨೪ರಿಂದ ೧೯೪೮ರವರೆಗೆ ಅಂದರೆ ಸುಮಾರು ೨೨೪ ವರ್ಷಗಳ ಕಾಲ ಹೈದ್ರಾಬಾದಿನ ನಿಜಾಮನ ಆಡಳಿತಕ್ಕೆ ಒಳಪಟ್ಟಿತ್ತು. ೧೯೪೮ ಸೆಪ್ಟಂಬರ್ ೧೭ರಂದು ಹೈದ್ರಾಬಾದ್ ಸಂಸ್ಥಾನ ಭಾರತದ ಒಕ್ಕೂಟಕ್ಕೆ ಸೇರಿಸಲಾಯಿತು. ೧೯೫೬ರ ಭಾಷಾವಾರು ರಾಜ್ಯ ರಚನೆ ನಂತರ ಮೈಸೂರು ರಾಜ್ಯದಲ್ಲಿ ವಿಲೀನವಾಯಿತು.

ಆಗ ಹೈದ್ರಾಬಾದ್ ಸಂಸ್ಥಾನದಲ್ಲಿದ್ದ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡಲಾಯಿತು. ೧೯೭೩ರಲ್ಲಿ ಕರ್ನಾಟಕ ಎಂದು ನಾಮಕರಣ

ಮಾಡಲಾಯಿತು. ಪ್ರಾದೇಶಿಕವಾಗಿ ಈ ಜಿಲ್ಲೆಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶ ಎಂದೇ ಕರೆಯಲಾಗುತ್ತದೆ.

ಸ್ವಾತಂತ್ರ್ಯ: ಭಾರತವು ೧೯೪೭ ಅಗಸ್ಟ್ ೧೫ ರಂದು ಒಂದು ಸ್ವತಂತ್ರ್ಯ ಸಾರ್ವಬೌಮ ರಾಷ್ಟವಾಗಿ ಉದಯವಾಯಿತು, ಭಾರತ ಸ್ವತಂತ್ರವಾದಗ ೫೫೦ ದೇಶಿಯ ಸಂಸ್ಥಾನಗಳಿದ್ದವು. ಅದರಲ್ಲಿ ಬಹುತೇಕ ಸಂಸ್ಥಾನಗಳು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲಿನವಾಗಲು ಒಪ್ಪಿದವು ಆದರೆ ಜಮ್ಮುಕಾಶ್ಮೀರದ ರಾಜ ಹರಿಸಿಂಗ್ ಮತ್ತು ಹೈದರಭಾದ ನಿಜಾಂ ಭಾರತದ ಒಕ್ಕೂಟದಲ್ಲಿ ಇರಲು ನಿರಾಕರಿಸಿದರು, ಹೀಗಾಗಿ ಅಂದಿನ ಗೃಹ ಮಂತ್ರಿ ಸರಧಾರ ವಲ್ಲಭಾಯಿ ಪಟೇಲರು ಹೈದಾರಬಾದ್ ನಿಜಾಂ ಸರಕಾರದ ಮೇಲೆ ಸೇನಾ ಕಾರ್ಯಚರಣೆ ನಡೆಸಿ ನಿಜಾಂ ಸೈನ್ಯವನ್ನು ಸೋಲಿಸಿದರು, ೧೯೪೮ ಸೆಪ್ಟಂಬರ್ ೧೭ ರಂದು ಹೈದಾರಬಾದ್ ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲಿನವಾಯಿತು, ಆಗ ಅಸ್ತಿತ್ವದಲ್ಲಿದ್ದ ಮೈಸೂರು ರಾಜ್ಯಕ್ಕೆ ಹೈದರಬಾದ್ ಕರ್ನಾಟಕದ ಮೂರು ಜಿಲ್ಲೆಗಳು (ಬಿದರು ಗುಲ್ಬರ್ಗಾ ರಾಯಚೂರು) ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡವು, ಆಗ ಅಖಂಡ ಮೈಸೂರು ರಾಜ್ಯದಲ್ಲಿ ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ, ಕೊಡಗು ಕರ್ನಾಟಕ, ಮತ್ತು ಮದ್ರಾಸ್ ಕರ್ನಾಟಕದ ಪ್ರದೇಶಗಳ ಸೇರಿಸಿ ಮೈಸೂರು ರಾಜ್ಯ ಎಂದು ನಾಮಕರಣ ಮಾಡಲಾಯಿತು, ೧೯೭೩ ರಲ್ಲಿ ದೇವರಾಜ ಅರಸ ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ೧೯೯೭ ರಲ್ಲಿ ಜೆ, ಎಚ್, ಪಟೇಲರು ಮುಖ್ಯ ಮಂತ್ರಿಯಾಗಿದ್ದಾಗ ಈ ಜಿಲ್ಲೆಯನ್ನು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳೆಂದು ವಿಭಾಜಿಸಲಾಯಿತು, ಈಗ ರಾಯಚೂರು ಜಿಲ್ಲೆಯಲ್ಲಿ ಸಿಂಧನೂರು ದೇವದುರ್ಗಾ. ಲಿಂಗಸೂಗುರು, ಮಾನ್ವಿ ಮತ್ತು ರಾಯಚೂರು ಐದು ತಾಲೂಕುಗಳಿವೆ, ಹೈದರಾಭಾದ್ ಕರ್ನಾಟಕದಲ್ಲಿ ಈಗ ಆರು ಜಿಲ್ಲೆಗಳಿವೆ, (ಬಳ್ಳಾರಿ, ಬೀದರ, ಗುಲ್ಬರ್ಗಾ, ರಾಯಚೂರು ಬಳ್ಳಾರಿ ಯಾದಗಿರಿ ಕೊಪ್ಪಳ) ಇಡಿ ದೇಶಕ್ಕೆ ಬಂದು ದಿನ ಸ್ವಾತಂತ್ರ್ಯವಾದರೆ ಈ ಪ್ರದೇಶದ ಜನರಿಗೆ ಒಂದು ದಿನ ಸ್ವಾತಂತ್ರ್ಯ.

ರಾಯಚೂರು ಜಿಲ್ಲೆಯು ಭಾರತದ ೬೪೦ ಜಿಲ್ಲೆಗಳಲ್ಲಿ ೨೪೬ ನೇ ಸ್ಥಾನದಲ್ಲಿದೆ ಜನಸಂಖ್ಯಾ ದೃಷ್ಟಿಯಿಂದ ನೋಡುವದಾದರೆ ತಿದೋಥೊ (lestho) ದೇಶಕ್ಕೆ ಸಮನಾದರು ಅಥವಾ ಅಮೇರಿಕಾ ಸಂಯುಕ್ತ ಸಂಸ್ಥಾನದ ಪಶ್ಚಿಮ ಜರ್ಮನಿಯಾ (The us state of West Virgina) ರಾಜ್ಯಕ್ಕೆ ಸಮಾನಾದುದ್ದು ಇದು ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಹಿಂದಿನ ಅವಿಬಜಿತ ರಾಯಚೂರು ಜಿಲ್ಲೆಯಲ್ಲಿ ಈಗಿನ ಕೊಪ್ಪಳ ಜಿಲ್ಲೆ ಸೇರಿ ೯ ತಾಲೂಕುಗಳಿದ್ದವು. ೨೪-೦೮-೧೯೯೭ ರಲ್ಲಿ ರಾಯಚೂರು ಜಿಲ್ಲೆಯನ್ನು ಬೇರ್ಪಡಿಸಿ ಕೊಪ್ಪಳ ಹೊಸ ಜಿಲ್ಲೆಯಾಗಿ ಅಸ್ಥಿತ್ವಕ್ಕೆ ತರಲಾಯಿತು, ಹೈದರಬಾದ್ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಂದು ಕರೆಯಲ್ಪಡುವ ರಾಯಚೂರು ಜಿಲ್ಲೆಯಲ್ಲಿ ಈಗ ೫ ತಾಲೂಕುಗಳಿವೆ. ರಾಯಚೂರು ಜಿಲ್ಲಾ ಕೇಂದ್ರವಾಗಿದೆ, ಈ ಜಿಲ್ಲೆಯಲ್ಲಿ

ರಾಯಚೂರು ದೇವದುರ್ಗ, ಲಿಂಗಸೂಗುರ್, ಮಾನ್ವಿ, ಸಿಂಧನೂರು ೫ ತಾಲೂಕುಗಳನ್ನು ಒಳಗೊಂಡಿದೆ ಮತ್ತು ಎರಡು ಉಪವಿಭಾಗವನ್ನು ಹೊಂದಿದೆ.[೧]

ಭೌಗೋಳಿಕತೆ

ರಾಯಚೂರು ಜಿಲ್ಲೆ ಕರ್ನಾಟಕದ ಈಶಾನ್ಯ ಭಾಗದಲ್ಲಿದೆ. ವಾಸ್ತವಿಕವಾಗಿ ಈ ಜಿಲ್ಲೆ ಆಯಾಕಟ್ಟಿನ ಸ್ಥಳದಲ್ಲಿದ್ದು ೧೬:೧೨ ಉತ್ತರ ಅಕ್ಷಾಂಶ ಮತ್ತು ೭೭:೨೧ ಪೂರ್ವ ರೇಖಾಂಶಗಳವರೆಗೆ ಈ ಜಿಲ್ಲೆ ವಿಸ್ತರಿಸಿದೆ. ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೮.೩೮೬ ಚದರ ಕಿಲೋಮೀಟರಗಳಿದ್ದು. ಸಮುದ್ರ ಮಟ್ಟದಿಂದ ೧೩೧೧ ಅಡಿ ಸಮಾನ್ಯವಾದ ಉತ್ತರದಲ್ಲಿದೆ, ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲಿ ಭೂವಿಸ್ತಾರದಲ್ಲಿ ಮೂರನೇ ಸ್ಥಾನದಲ್ಲಿದೆ. ಉತ್ತರದಲ್ಲಿ ಕೃಷ್ಣಾ ನದಿ ದಕ್ಷಿಣದಲ್ಲಿ ತುಂಗಾ ಬದ್ರ ನದಿ ಈ ಜಿಲ್ಲೆಯ ಮೆರಗಳಾಗಿವೆ. ಜಿಲ್ಲೆಯ ಮೆರಗಳನ್ನು ಗುರುತಿಸುವದಾದರೇ ಉತ್ತರದಲ್ಲಿ ಯಾದಗಿರಿ ಜಿಲ್ಲೆ ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿ ಕೊಪ್ಪಳ ಜಿಲ್ಲೆ, ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ ಪೂರ್ವದಲ್ಲಿ ಈಗಿನ ತೆಲಾಂಗಾಣ ರಾಜ್ಯದ ಕರ್ನೂಲ ಮತ್ತು ಅನಂತಪುರ ಜಿಲ್ಲೆಗಳಿವೆ. ಈ ಜಿಲ್ಲೆ ಎರಡು ನದಿಗಳ ಮಧ್ಯ ಇರುವದು ವಿಶೇಷವಾಗಿರುವುದರಿಂದ ಇದನ್ನು ದೋ–ಅಬ್ ಪ್ರದೇಶ ಎಂದು ಕರೆಯಲಾಗುತ್ತಿದೆ. ರಾಯಚೂರು ಜಿಲ್ಲೆ ದಕ್ಷಿಣ ಮೈದಾನ ಪ್ರದೇಶದಲ್ಲಿದೆ, ಸಾಮಾನ್ಯವಾಗಿ ಕಪ್ಪುಮಣ್ಣು ಮತ್ತು ಕೆಂಪು ಮಿಶ್ರಿತ ಭೂಮಿಯದೆ.[೨]

ರಾಯಚೂರು ಜಿಲ್ಲೆಯ ವಿಸ್ತೀರ್ಣ ೮: ೩೮೩ ಚ.ಕೀ. ಗಳಾಗಿದ್ದು ಪ್ರತಿ. ಚ.ಕಿ.ಮೀಗೆ. ಜನಸಾಂದ್ರತೆ ೨೨೮ ಇರುತ್ತದೆ. ಜಿಲ್ಲೆಯಲ್ಲಿ ೨೦೧೧ರ ಜನಗಣತಿ ಪ್ರಕಾರ ೮೮೩ ಜನವಸತಿ ಇರುವ ಗ್ರಮಗಳ ಮತ್ತು ೬೯ ಜನವಸತಿ ಇಲ್ಲದ ಗ್ರಾಮಗಳು ಇವೆ. ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ೫ ತಾಲೂಕುಗಳನ್ನಾಗಿ ಹಾಗೂ ೨ ಕಂದಾಯ ಉಪವಿಭಾಗಳನ್ನಾಗಿ ವಿಂಗಡಿಸಲಾಗಿದೆ. ರಾಯಚೂರು ಒಂದು ಉಪವಿಭಾಗವಾಗಿದ್ದು ಇದರಲ್ಲಿ ರಾಯಚೂರು ದೇವದುರ್ಗ ಹಾಗೂ ಮಾನ್ವಿ ತಾಲೂಕುಗಳನ್ನು ಒಳಗೊಂಡಿದೆ, ಲಿಂಗಸೂಗುರ್ ಇನ್ನೊಂದು ಉಪವಿಭಾಗವಾಗಿದ್ದು ಇದರಲ್ಲಿ ಲಿಂಗಸೂಗುರ್ ಮತ್ತು ಸಿಂಧನೂರು ತಾಲೂಕಗಳನ್ನು ಒಳಗೊಂಡಿದೆ, ಜಿಲ್ಲೆಯಲ್ಲಿ ಲಿಂಗಸೂಗುರ್ ತಾಲೂಕು ೧೯೪೪೮ ಚ.ಕೀ.ಮೀ. ವಿಸ್ತೀರ್ಣ ಹೊಂದಿದ್ದು, ಇದು ಜಿಲ್ಲೆಯಲ್ಲಿಯೇ ಅತಿ ದೊಡ್ಡ ತಾಲೂಕು ಆಗಿರುತ್ತದೆ. ತಾಲೂಕುವಾರು ಗ್ರಾಮಗಳ ಪೈಕಿ ಲಿಂಗಸೂರು ತಾಲೂಕು ೧೯೧ ಗ್ರಾಮಗಳನ್ನು ಹೊಂದಿದ್ದ ಅತ್ಯಂತ ದೊಡ್ಡ ತಾಲೂಕು ಎನಿಸಿದರೆ, ರಾಯಚೂರು ತಾಲೂಕು ೧೬೦ ಗ್ರಾಮಗಳನ್ನ ಹೊಂದಿ ಅತಿ ಚಿಕ್ಕ ತಾಲೂಕು ಆಗಿದೆ.

ಕೋಷ್ಟಕ ೨.೧. ರಾಯಚೂರು ಜಿಲ್ಲೆಯ ಸಾಮಾನ್ಯ ವಿವರ

ಕ್ರಸಂ	ತಾಲೂಕು	ಜನ ವಸತಿ ಇರುವ	ಜನ ವಸತಿ ಇಲ್ಲದ	ಗ್ರಾಮ ಲೆಕ್ಕಿಗ ವೃತಗಳು	ಹೋಬಳಿ	ಗ್ರಾ. ಪಂ	ನಗರಸಭೆ. ಪುರ ಸಭೆ, ಪಟ್ಟಣ ಪಂಚಾಯಿತಿ
೧	೨	೩	೪	೫	೬	೭	೮
೧	ದೇವದುರ್ಗ	೧೭೩	೧೫	೩೯	೪	೨೮	೧
೨	ಲಿಂಗಸೂಗುರ್	೧೮೬	೬	೨೯	೪	೩೫	೩
೩	ಮಾನ್ವಿ	೧೬೫	೬	೬೪	೯	೩೬	೧
೪	ರಾಯಚೂರು	೧೪೫	೧೫	೪೭	೬	೩೧	೧
೫	ಸಿಂಧನೂರು	೧೪೬	೨೭	೯೩	೧೪	೩೫	೧
*	ಒಟ್ಟು	೮೧೫	೬೯	೨೭೨	೩೭	೧೬೫	೭

(ಆಧಾರ ರಾಯಚೂರು ಜಿಲ್ಲಾ ಆರ್ಥಿಕ ಮತ್ತು ಸಾಮಾಜೀಕ ಅವಲೋಕನ ೨೦೧೨-೧೩)

ಈ ಮೇಲೆ ತೋರಿಸಿದ ಕೋಷ್ಟಕದ ಪ್ರಕಾರ ರಾಯಚೂರು ಜಿಲ್ಲಾ ಆರ್ಥಿಕ ಮತ್ತು ಸಾಮಾಜಿಕ ಅವಲೋಕನ ೨೦೧೨-೧೩ರ ವರದಿ ಪ್ರಕಾರ ಜಿಲ್ಲೆಯಲ್ಲಿ ೫ ತಾಲೂಕುಗಳಿದ್ದು, ೮೧೫ ಜನವಸತಿ ಇರುವ ಗ್ರಾಮಗಳು ೬೯ ಜನ ವಸತಿ ಇಲ್ಲದಿರುವ ಗ್ರಾಮಗಳಿವೆ, ಅದೇ ರೀತಿಯಾಗಿ ೨೭೨ ಗ್ರಾಮಲೆಕ್ಕಿಗ ವೃತ್ತಗಳು ೩೭ ಹೋಬಳಿಗಳು ಹಾಗೂ ೧೬೫ ಗ್ರಾಮ ಪಂಚಾಯತಗಳು ಮತ್ತು ೭ ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಗಳನ್ನು ಹೊಂದಿದೆ. ೫ ತಾಲೂಕು ಆಡಳಿತ ೫ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ೭ ವಿಧಾನಸಭಾ ಕ್ಷೇತ್ರಗಳು ಮತ್ತು ೧ ಲೋಕಸಭಾ ಕ್ಷೇತ್ರವನ್ನು ಹೊಂದಿದೆ.

ರಾಯಚೂರು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಜೀವನ ಕೆಳಮಟ್ಟದ ಸಾಮಾಜಿಕ ವ್ಯವಸೆ, ದುರ್ಬಲ ಆರ್ಥಿಕ ವ್ಯವಸ್ಥೆ ಜನ ಪ್ರತಿನಿದಿಗಳು ನಿರಾಸಕ್ತಿ ಈ ಜಿಲ್ಲೆಯನ್ನು ಅತಿ ಹೆಚ್ಚು ಬಾರಿಸುತ್ತಿದೆ ಹೀಗಾಗಿ ಜಿಲ್ಲೆಯು ಮಾನವ ಅಭಿವೃದ್ಧಿಯಲ್ಲಿಯು ಸಹ ಅತ್ಯಂತ ಕೆಳಮಟ್ಟದಲ್ಲಿದೆ ಎಂದು ಯು,ಎನ್, ಡಿ.ಪಿ. ವರದಿಗಳು, ಮಾನವ ಅಭಿವೃದ್ದಿ ವರದಿ ಸಹ ಹಿಂದುಳಿದಿರುವಿಕೆಯನ್ನು ಹೊರಹಾಕಿವೆ, ಹೀಗಾಗಿ ಈ ಜಿಲ್ಲೆಯ ವೈದ್ಯ ಕಾಲೇಜ್ ಇಂಜಿನಿಯರಿಂಗ್ ಕಾಲೇಜ್. ಐ.ಐ.ಟಿ, ಕೈಗಾರಿಕೆಗಳ ಸ್ಥಾಪನೆ ಮೊದಲಾದವುಗಳ ಮೂಲಕ ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬಹುದು ಎಂಬ ವಾದವು ಇದೆ. ಅದರೆ ಇದಕ್ಕೆ ಇವು ಪರಿಹಾರವಲ್ಲ. ಯಾಕೆಂದರೆ ಜಿಲ್ಲೆಯ ವಾಸ್ತವಿಕ, ಸಮಸ್ಯೆಗಳು ಬೇರೆ. ಹಸಿವು, ಬಡತನ, ನಿರುದ್ಯೋಗ ಅಪೌಷ್ಠಿಕತೆ. ವಲಸೆ. ಭೂರಹಿತ ಕೃಷಿ ಕಾರ್ಮಿಕರು ಮತ್ತು ಮಹಿಳಾ ದುಡಿಮೆಗಾರರನ್ನು ಕೇಂದ್ರಿಕರಿಸಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕಾಗಿದೆ.

ಹವಾಮಾನ

ರಾಯಚೂರು ಜಿಲ್ಲೆ ಕೃಷ್ಣ ತುಂಗೆಯರ ಮಂಗಳ-ಅಂಗಳ. ಎಡ ದೊರೆ ನಾಡು ಹಾಗೂ ದೋ ಅಭ್ ಪ್ರದೇಶ ಎಂದು ಕರೆಯಲಾಗುತ್ತಿದೆ. ಎರಡು ನದಿಗಳ ಮದ್ಯ ಇರುವ ಪ್ರದೇಶ ಫಲವತ್ತಾದ ಭೂಮಿ. ಸಂಪದ್ಭರಿತವಾದ ನಾಡು ಅದಕ್ಕಾಗಿ ಈ ಪ್ರದೇಶದಲ್ಲಿ ಸುಮಾರು ೭೦೦ ಯುದ್ದಗಳು ಆಗಿವೆ ಎಂದು ಇತಿಹಾಸದಲ್ಲಿ ದಾಖಲೆಯಾಗಿದೆ. ಈ ಮಾತಿಗೆ ಅಪವಾದ ಎಂಬಂತೆ ಇದನ್ನು ಬಿಸಿಲೂರು ಎಂದು ಸಹ ಕರೆಯಲಾಗಿದೆ. ಆದ್ದರಿಂದ ಪ್ರತಿ ವರ್ಷವು ಸರಕಾರ ಈ ಜಿಲ್ಲೆ ಸೇರಿ ಮತ್ತು ಹೈದರಾಬಾದ ಕರ್ನಾಟಕ ೬ ಜಿಲ್ಲೆಗಳಲ್ಲಿ ಏಪ್ರೀಲ್ ೧ನೇ ತಾರಿಖಿನಿಂದ ಜೂನ್ ೩೦ನೇ ತಾರಿಖಿನವರೆಗೆ ಸರ್ಕಾರಿ ಕಛೇರಿಗಳಿಗೆ ಅರ್ಧದಿನ ಕೆಲಸದ ದಿನವಾಗಿದೆ. ಅದೇ ರೀತಿಯಾಗಿ ೨೦೧೪ರಲ್ಲಿ ಯು.ಪಿ.ಎ ಸರಕಾರದಲ್ಲಿ ರೈಲ್ವೇ ಮಂತ್ರಿಯಾದ ಮಲ್ಲಿಕಾರ್ಜುನ ಖರ್ಗೆಯವರು ರಾಯಚೂರಿನ ರೈಲ್ವೇ ನಿಲ್ದಾಣವನ್ನು ಹವಾನಿಯಂತ್ರಿತ ರೈಲ್ವೇ ನಿಲ್ದಾಣವಾಗಿ ಪರಿವರ್ತಿಸಿದರು, ಇದು ಏಷ್ಯಖಂಡದಲ್ಲಿಯೆ ಎರಡನೆಯದು ಮತ್ತು ಭಾರತದಲ್ಲಿ ಮೊದಲ ಹವಾನಿಯಂತ್ರಿತ ರೈಲ್ವೇ ನಿಲ್ದಾಣವಾಗಿದೆ.

ಅಂದರೆ ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಹವಾಮಾನವು ಸಹ ಮಹತ್ವದ ಪಾತ್ರ ವಹಿಸುತ್ತದೆ. ಆದರೆ ರಾಯಚೂರು ಜಿಲ್ಲೆಗೆ ಹವಾಮಾನದ ವೈಪರಿತ್ಯವು ಅಭಿವೃದ್ಧಿಯ ಬೆಳವಣಿಗೆಯ ಮೇಲೆ ದುಷ್ಪರಿಣಾಮವನ್ನು ಬೀರಿದ್ದು ಹವಾಮಾನವು ಈ ಜಿಲ್ಲೆ ಮತ್ತು ಹೈದಾರಾಬಾದ್ ಕರ್ನಾಟಕ ಪ್ರದೇಶವು ದಖನ್ ಪ್ರಸ್ಥಭೂಮಿಯಲ್ಲಿ ಬರುತ್ತದೆ, ಬಂಡೆಗಲ್ಲುಗಳಿಂದ ಕೂಡಿದ ಮರಳುಗಲ್ಲಿನ ಮತ್ತು ಅರಣ್ಯ ಪ್ರದೇಶವಿಲ್ಲದ ಬಯಲು ಭೂಮಿ ಒಣಹವೆ ಹಾಗೂ ಕಪ್ಪು ಮಣ್ಣು ಮತ್ತು ಕೆಂಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ, ಕಪ್ಪು ಮಣ್ಣು ಮತ್ತು ಕೆಂಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಚಳಿಗಾಲ ಅಥವಾ ಮಾಗಿಯ ಕಾಲವನ್ನು ಹೊರತು ಪಡಿಸಿ ಈ ಜಿಲ್ಲೆಯಲ್ಲಿ ಬಹುತೇಕ ಒಣ ಹವೆ ಅಥವಾ ಬೀಸಿಲಿನಿಂದ ಕೂಡಿದ ಹವಾಮಾನವಿರುತ್ತದೆ.[೩]

ರಾಯಚೂರು ಜಿಲ್ಲೆಯ ಹವಾಮಾನವು ವರ್ಷದ ಬಹುಭಾಗ ಅರ್ದ್ರತೆಯಿಂದ ಕೂಡಿದ್ದು ಬೇಸಿಗೆ ಕಾಲ ಕಡುಬಿಸಿಯಾಗಿರುವದು ಸಾಮಾನ್ಯ ಸಂಗತಿ. ವಾರ್ಷಿಕ ಹವಾಮಾನವನ್ನು ನಾಲ್ಕು ಋತುಗಳಾಗಿ ವಿಂಗಡಿಸಬಹುದಾಗಿದೆ. ಬೇಸಿಗೆ ಕಾಲ ಪೆಬ್ರವರಿ ಮದ್ಯದಲ್ಲಿ ಆರಂಭವಾಗಿ ಮೇ ಕೊನೆಯರೆಗೂ ಇರುತ್ತದೆ. ನೈರುತ್ಯಮುಂಗಾರು ಜೂನ್ ತಿಂಗಳಿನಿಂದ ಪ್ರಾರಂಭವಾಗಿ ಸೆಪ್ಟಂಬರ್ ತಿಂಗಳವರೆಗೆ ಇದ್ದು, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳು ಮಳೆ ಗಾಲದ ನಂತರದ ದಿನಗಳಾದರೆ ಡಿಸೆಂಬರ್ ಮತ್ತು ನವೆಂಬರ್ ತಿಂಗಳುಗಳು ಮಳೆ ಗಾಲದ ನಂತರದ ದಿನಗಳು ಡಿಸೆಂಬರ್ ನಿಂದ ಫೆಬ್ರವರಿ ಮದ್ಯವರೆಗೆ ಚಳಿಗಾಲದ ಅವದಿಯಾಗಿರುತ್ತದೆ, ಡಿಸೆಂಬರ್ ಅತ್ಯದಿಕ ಚಳಿ ಇರುವ ತಿಂಗಳಾದರೆ ಮೇ ತಿಂಗಳಿನಲ್ಲಿ ೩೯.೮ ಡಿಗ್ರಿ ತಾಪ ಮಾನದೊಂದಿಗೆ ಅತಿ ಹೆಚ್ಚು ಉಷ್ಣತೆ ಇರುತ್ತದೆ, ಈ ಜಿಲ್ಲೆಯಲ್ಲಿ ಮಳೆಗಾಲ ಆರಂಭವಾಗುವವರೆಗೂ ಉಷ್ಣತೆಯು

ಬಹುತೀವ್ರವಾಗಿರುತ್ತದೆ. ಅದೇ ರೀತಿಯಾಗಿ ಜೂನ್ ತಿಂಗಳಿನಿಂದ ಸೆಪ್ಟಂಬರ್ ತಿಂಗಳವರೆಗೆ ಇರುವ ನೈರುತ್ಯ ಮುಂಗಾರು ಅವದಿಯಲ್ಲಿ ವರ್ಷದ ಸುಮಾರು ಶೇ ೧೭೧ ರಷ್ಟು ಮಳೆ ಬೀಳುತ್ತದೆ ಸರಾಸರಿ ವಾಡಿಕೆಯ ಮಳೆಯ ಪ್ರಮಾಣವು ೬೮೧ ಮೀ.ಮೀ ಇದ್ದರೂ ವಾಸ್ತವಿಕವಾಗಿ ಮಳೆಯ ಪ್ರಮಾಣವು ತುಂಭಾ ಕಡಿಮೆ ಅಂದರೆ ಸುಮಾರು ೨೯ ವಾರ್ಷಿಕ ಮಳೆಯ ದಿನಗಳು ಈ ಪ್ರಮಾಣವು ತುಂಬಾ ಅಸಮರ್ಪಕವೆಂದು ಹೇಳಬಹುದು.[೪]

ಜಿಲ್ಲೆಯಲ್ಲಿ ೪೫ ಮಳೆಯ ಮಾಫನ ಕೇಂದ್ರಗಳು ಇದ್ದು ಇದರಲ್ಲಿ ೪೦ ಮಳೆಯ ಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ, ಉಳಿದ ೫ ಮಳೆಯ ಮಾಪನ ದುರಸ್ಥಿಯಲ್ಲಿವೆ. ಜಿಲ್ಲೆಯ ಒಟ್ಟು ಮಳೆಯ ಪ್ರಮಾಣ ೬೮೧ ಮೀ.ಮೀ ಇದ್ದು. ಅತಿ ಹೆಚ್ಚು ಮಳೆಯ ವಾಡಿಕೆಯ ಪ್ರಮಾಣ ದೇವದುರ್ಗ ತಾಲೂಕಿನಲ್ಲಿ ೭೩೬ ಮೀ.ಮೀ ಇರುತ್ತದೆ. ಅದೇ ರೀತಿಯಾಗಿ ಅತಿಕಡಿಮೆ ಮಳೆಯ ಪ್ರಮಾಣ ಲಿಂಗಸೂಗುರು ತಾಲೂಕಿನಲ್ಲಿ ೫೯೮ ಮಿ.ಮೀಗಳಾಗಿರುತ್ತದೆ. ದಕ್ಷಿಣ ಹಾಗೂ ಪೂರ್ವಕ್ಕೆ ಹೋದಹಾಗೆ ಮಳೆಯ ಪ್ರಮಾಣ ಅಧಿಕವಾಗುತ್ತದೆ, ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆಯ ದಾಖಲೆಯಂದರೆ ೧೯೯೪.೯೫ ರಲ್ಲಿ ಶೇ ೨೪.೫ ಅಂದರೆ ಸಾಮಾನ್ಯ ೬೨೧. ಮಿ.ಮಿ ಮತ್ತು ೧೯೯೬–೯೭ ರಲ್ಲಿಯ ಸಹ ಇದೇ ರೀತಿಯ ಪ್ರಮಾಣ ದಾಖಲಾಗಿದೆ, ೧೯೯೭–೯೮ ರಲ್ಲಿ ೪೧. ೯೭ ದಾಖಲೆಯ ಸಾಮಾನ್ಯ ಮಳೆಯಾಗಿರುವದು ಕಂಡುಬರುತ್ತದೆ.[೫]

ರಾಯಚೂರು ಜಿಲ್ಲೆಯ ಮಳೆಯ ಪ್ರಮಾಣವನ್ನು ೨೦೦೨ರಿಂದ ೨೦೧೩ರವರೆಗೆ ಅಂದರೆ ೧೨ ವರ್ಷಗಳ ಅವಧಿಯಲ್ಲಿ ೨೬೦೯ರಲ್ಲಿ ೯೪೩.೩ ಮಿ.ಮೀ. ದಾಖಲೆಯ ಸಾಮಾನ್ಯ ಮಳೆಯಾಗಿರುವುದನ್ನು ಹೊರತುಪಡಿಸಿದರೆ (ವರ್ಷದಲ್ಲಿ ರಾಯಚೂರು ಜಿಲ್ಲೆ ನೆರೆ ಮತ್ತು ಬರ ಎರಡನ್ನು ಏಕಕಾಲಕ್ಕೆ ಅನುಭವಿಸಿದೆ) ಉಳಿದ ಅವಧಿಯಲ್ಲಿ ಬರಗಾಲದ ಛಾಯೇ ಮತ್ತು ಶೇ. ೪೮. ಉಷ್ಣಾಂಶವನ್ನು ಕಾಣಬಹುದು. ಹಾಗಾಗಿ ಪರಿಸರ ಮತ್ತು ಸನ್ನಿವೇಶಗಳು ಸಹ ಈ ಜಿಲ್ಲೆ ಪೂರಕವಾಗಿ ಕಂಡುಬರುವುದಿಲ್ಲ.

ನೈಸರ್ಗಿಕ ಸಂಪನ್ಮೂಲಗಳು

ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯಲ್ಲಿ ಅತಿಹೆಚ್ಚು ಕಂಡುಬರುವದಿಲ್ಲ ಮತ್ತು ಅಂತಹ ಹೇಳಿಕೊಳ್ಳವಂತಹ ಅರಣ್ಯ ಸಂಪತ್ತಿಲ್ಲ ಅಥವಾ ಖನಿಜ ಸಂಪತ್ತಿನ ಸ್ಥಳಗಳು ಕಡಿಮೆ. ರಾಯಚೂರು ಜಿಲ್ಲೆಯಲ್ಲಿ ಹಟ್ಟಿ ಚಿನ್ನದ ಗಣಿಯ ನಿಕ್ಷೇಪವನ್ನು ಹೊರತುಪಡಿಸಿದರೆ ಅಂತಹ ನೈಸರ್ಗಿಕ ಸಂಪನ್ಮೂಲಗಳು ಕಂಡುಬರುವದಿಲ್ಲ.[೬] ಜಿಲ್ಲೆಯ ಉತ್ತರದಲ್ಲಿ ಕೃಷ್ಣಾನದಿ, ದಕ್ಷಿಣದಲ್ಲಿ ತುಂಗಾಭದ್ರ ನದಿಗಳಿಂದ ಅವೃತ್ತಗೊಂಡು ರಾಯಚೂರು ದೋ–ಅಬ್‌ನನ್ನು ನಿರ್ಮಿಸಿದೆ, ಸಾಮಾನ್ಯವಾಗಿ ಜಿಲ್ಲೆಯ ಮಣ್ಣು ಫಲವತ್ತಾಗಿದ್ದು ಹಲವಾರು ವಿದದ ಬೆಳೆಗಳನ್ನು ಬೆಳೆಯಲು ಸಹಾಯಕಾರಿಯಾಗಿದೆ, ಜಿಲ್ಲೆಯ ಐದು ತಾಲೂಕಗಳ ನೀರಾವರಿಯಾಗಿದ್ದು, ಉತ್ತಮ ಗುಣಮಟ್ಟದ ಭತ್ತಕ್ಕೆ ಹೆಸರುವಾಸಿಯಾಗಿದೆ, ಅಕ್ಕಿ ಗಿರಣಿಗಳು ಉತ್ತಮವಾದ ಅಕ್ಕಿ

ತಯಾರಿಸಿ ರಫ್ತು ಮಾಡುತ್ತವೆ ಜಿಲ್ಲೆಯ ಮಣ್ಣುಗಳಲ್ಲಿ ನಾಲ್ಕು ವಿದದ ಮಣ್ಣು ಕಂಡುಬರುತ್ತದೆ. ೧ ಕಪ್ಪು ಮತ್ತು ಕೆಂಪು ಮೀಶ್ರಿತ ಮಣ್ಣು ೨ ಆಳವಾದ ಕಪ್ಪು ಮಣ್ಣು ೩ ಅಫೇನು ಅಷ್ಟೇನು ಆಳವಲ್ಲದ ಕಪ್ಪು ಮಣ್ಣು ೪ ಕಪ್ಪು ಮಿಶ್ರಿತ ಮಣ್ಣಿನಿಂದ ಕೂಡಿದೆ, ಈ ಜಿಲ್ಲೆಯ ಮಣ್ಣು ಮಳೆ ಯಾಶ್ರಿತ ಬೆಳೆಗಳಿಗೂ ಮತ್ತು ನೀರಾವರಿ ಬೆಳೆಗಳಿಗೂ ಸೂಕ್ತವಾದುದು, ತೋಟಗಾರಿಕೆ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ, ಅದೇ ರೀತಿಯಾಗಿ ನೀರಾವರಿ ಆಶ್ರಯದಲ್ಲಿ ಭತ್ತ , ಕಬ್ಬು, ಹತ್ತಿ, ಮೆಣಸಿನಕಾಯಿ, ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಈ ಮೇಲೆ ತಿಳಿಸಿದ ಬೆಳೆಯ ಮಾದರಿಯಲ್ಲಿ ಭತ್ತವು ಅತ್ಯಂತ ಪ್ರಮುಖ ಬೆಳೆಯಾಗಿದೆ, ಕ್ರಮವಾಗಿ ಜೋಳ, ಶೇಂಗಾ, ಹತ್ತಿ, ಸೂರ್ಯಕಾಂತಿ, ತೊಗರಿ, ಬರುತ್ತವೆ, ಈ ಬೆಳೆಗಳಿಗೆ ಹೋಲಿಸಿದರೆ. ಇತರ ಬೆಳೆಗಳು ಜಿಲ್ಲೆಯ ಒಟ್ಟು ನಿವ್ವಳ ಬಿತ್ತನೆ ಪ್ರದೇಶದ ಶೇ. ೧ ಕ್ಕಿಂತ ಕಡಿಮೆ ಪ್ರದೇಶವನ್ನು ಅವರಿಸಿಕೊಂಡು ನೀರಾವರಿಯನ್ನು ಹೆಚ್ಚಾಗಿ ಅವಲಂಬಿಸಿದೆ. ಹಾಗಾಗಿ ತುಂಗಾಭದ್ರ ಜಲಾಶಯ ಮತ್ತು ನಾರಾಯಣಪುರ ಜಲಾಶಯಗಳಿಗೆ ನೀರು ಬರದೇ ಹೋದರೆ ಜಿಲ್ಲೆಯಲ್ಲಿ ಬೀಕರ ಬರಗಾಲ ಆವರಿಸಿದಂತಾಗುತ್ತದೆ. ಇದರಿಂದಾಗಿಯೇ ಈ ಪ್ರದೇಶದಲ್ಲಿ ವಲಸೆ ಪ್ರಮಾಣ ಹೆಚ್ಚಾಗಿ ಕಂಡು ಬರುತ್ತದೆ. ಇದಕ್ಕೆ ಪರಿಯಾಯವಾಗಿ ಕೈಗಾರಿಕೆಗಳು ಮತ್ತು ಅಂತರ್ಜಲಾಧರಿತ ಕೃಷಿ ಚಟುವಟಿಕೆಗಳಿಗೆ ಆದ್ಯತೆ ನೀಡುವ ಅಗತ್ಯವಿದೆ. ಅಂದಾಗ ಮಾತ್ರ ವಲಸೆ ಪ್ರಮಾಣ ಆರೋಗ್ಯ ಮತ್ತು ಆದಾಯ ಸುಧಾರಿಸುತ್ತದೆ.

141182
ಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜನಸಂಖ್ಯೆ

೨೦೧೧ರ ಜನಗಣತಿ ಪ್ರಕಾರ ರಾಯಚೂರು ಜಿಲ್ಲೆಯ ಜನಸಂಖ್ಯೆ ೧೯,೨೮,೮೧೨ ಜನರಿದ್ದು, ಅದರಲ್ಲಿ ೯,೬೪,೫೧೧ ಜನ ಪುರುಷರು ಮತ್ತು ೯,೬೪,೩೦೧ ಜನ ಮಹಿಳೆಯರಿದ್ದಾರೆ, ಜಿಲ್ಲೆಯ ಬದಲಾಗುತ್ತಿರುವ ಜನಸಂಖ್ಯೆಯ ಮಾದರಿಯನ್ನು ಗಮನಿಸುವುದಾದರೆ, ೨೦೦೧ ಮತ್ತು ೨೦೧೧ರ ಅವಧಿಯಲ್ಲಿ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆಯ ದರ ಶೇ.೧೫.೫ರ ಪ್ರಮಾಣದಲ್ಲಿದ್ದು ರಾಜ್ಯ ಮಟ್ಟಕ್ಕಿಂತ ಅಧಿಕವಾಗಿದೆ. ಲಿಂಗಾನುಪಾತವು ಸಹ ರಾಜ್ಯಮಟ್ಟಕ್ಕಿಂತ ಅಧಿಕವಾಗಿದೆ. ೨೦೧೧ರ ಜನಗಣತಿ ಪ್ರಕಾರ ರಾಜ್ಯ ಮಟ್ಟದ ಲಿಂಗಾನುಪಾತ ೧೦೦೦ ಪುರುಷರಿಗೆ ೯೭೩ ಮಹಿಳೆಯರಿದ್ದಾರೆ. ರಾಯಚೂರು ಜಿಲ್ಲೆಯ ಲಿಂಗಾನುಪಾತ ೧೦೦೦ ಪುರುಷರಿಗೆ ಸಾವಿರ ಸ್ತ್ರೀಯರಿದ್ದಾರೆ, ಅದೇ ರೀತಿಯಾಗಿ ಜಿಲ್ಲೆಯಲ್ಲಿ ೧೪,೩೮,೪೬೪ ಗ್ರಾಮೀಣ ಜನಸಂಖ್ಯೆ ಮತ್ತು ೪,೯೦,೩೪೮ನಗರ ಜನಸಂಖ್ಯೆ ಇರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ೪.೦೦.೯೩೩ ಪರಿಶಿಷ್ಟ ಜಾತಿ ಹಾಗೂ ೩,೬೭,೦೭೧ ಪರಿಶಿಷ್ಟ ಪಂಗಡದ ಜನಸಂಖ್ಯೆ ಇರುತ್ತದೆ. ಅದೇ ರೀತಿಯಾಗಿ ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ವಾಸವಾಗಿರುವ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೩,೬೩,೮೫೩ ಕುಟುಂಬಗಳಿವೆ, ಅದರಲ್ಲಿ ೨,೬೭,೫೮೫ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ ಮತ್ತು ೯೬,೨೬೮ ಕುಟುಂಬಗಳು ನಗರ ಪ್ರದೇಶದಲ್ಲಿ ನೆಲೆಸಿವೆ. ಅದೇ ರೀತಿಯಗಿ ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ ೩೭.೬ರಷ್ಟು (೭೨೫೯೮೫) ಮುಖ್ಯ ಕೆಲಸಗಾರರು ಹಾಗೂ ಶೇ.೯,೧೯ರಷ್ಟು (೧೭೭೪೨೮) ಅರೆಕಾಲಿಕ ಕೆಲಸಗಾರರು ಮತ್ತು ಶೇ ೫೩.೧ರಷ್ಟು (೧೦೨೫೩೯೯)

ಜನಸಂಖ್ಯೆ ಕೆಲಸಗಾರರಲ್ಲಿದವರು ಇರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳು ಜನಸಂಖ್ಯಾ ಲಕ್ಷಣ ಮತ್ತು ಸ್ವರೂಪವನ್ನು ಗಮನಿಸಿದರೆ ಒಂದಕ್ಕೊಂದು ಹೋಲಿಕೆ ಇಲ್ಲದಿರುವುದು ಕಂಡುಬರುತ್ತದೆ, ಹಾಗಾಗಿ ಜನಸಂಖ್ಯೆಯ ಪ್ರಮಾಣ ಎಲ್ಲಾ ಅಂಶಗಳ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶವನ್ನು ಇದರಿಂದ ಗಮನಿಸಬಹುದಾಗಿದೆ.

ಜನ ಸಾಂದ್ರತೆ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಜನಸಾಂದ್ರತೆ ಪ್ರತಿ ಚ.ಕಿ.ಮಿಗೆ ವಾಸವಾಗಿರುವ ಜನಸಂಖ್ಯೆ/ ಜನಸಾಂದ್ರತೆ ೩೧೯ ಆದರೆ ರಾಯಚೂರು ಜಿಲ್ಲೆಯ ಜನಸಾಂದ್ರತೆ ೨೨೮ ಪ್ರತಿ ಚ.ಕಿ.ಮಿ ವಾಸವಾಗಿರುವ ಜನಸಂಖ್ಯೆ ಇರುತ್ತದೆ. ಇದು ರಾಜ್ಯ ಮಟ್ಟದ ಜನಸಾಂದ್ರತೆಗಿಂತ ಕಡಿಮೆಯಾಗಿರುತ್ತದೆ. ಮತ್ತು ಅದೇ ರೀತಿಯಾಗಿ ಜಿಲ್ಲೆಯ ಜನ ಸಾಂದ್ರತೆ ೨೦೦೧ ಮತ್ತು ೨೦೧೧ರ ಮಧ್ಯದ ಅವಧಿಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಏರಿಕೆಯಾಗಿರುವುದನ್ನು ಕಾಣಬಹುದು ಜಿಲ್ಲೆಯ ತಾಲೂಕುಗಳ ಪೈಕಿ ಮಾನ್ವಿ ೧೮೪ ಹಾಗೂ ಸಿಂಧನೂರು ತಾಲೂಕುಗಳು ಕ್ರಮವಾಗಿ ಅತಿ ಹೆಚ್ಚು ಜನಸಾಂದ್ರತೆಯುಳ್ಳ ತಾಲೂಕುಗಳಾಗಿವೆ. ಈ ಎರಡು ತಾಲೂಕುಗಳಲ್ಲಿ ಜನಸಾಂದ್ರತೆಯು ಸಾಪೇಕ್ಷವಾಗಿ ಅಧಿಕವಾಗಿರುವುದು ಕಂಡುಬರುತ್ತದೆ.[೭]

ಜನಸಂಖ್ಯೆಯ ಬೆಳವಣಿಗೆ

ರಾಯಚೂರು ಜಿಲ್ಲೆಯ ಜನಸಂಖ್ಯೆ ೨೦೦೧–೨೦೧೧ರ ಅವಧಿಯಲ್ಲಿ ೨.೫೯ ಲಕ್ಷಗಳಷ್ಟು ಅಧಿಕವಾಗಿದೆ. ಶೇ ೧೫.೩ರ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದೆ. ರಾಯಚೂರು ಜಿಲ್ಲೆಯ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಕೋಷ್ಟಕ (೧)ರಲ್ಲಿ ನೀಡಲಾಗಿದೆ. ಹೆಚ್ಚಳದ ಸಿಂಹಪಾಲು ಶೇ ೭೩% ಗ್ರಾಮೀಣ ಭಾಗದಲ್ಲಿ ಬೆಳವಣಿಗೆ ಆಗಿದೆ. ತಾಲೂಕು ವಾರು ಗಮನಿಸಿದರೆ ರಾಯಚೂರು, ಲಿಂಗಸಗೂರು, ಮತ್ತು ದೇವದುರ್ಗ ತಾಲೂಕುಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ಈ ಮೂರು ತಾಲೂಕುಗಳಲ್ಲಿ ಜನಸಂಖ್ಯೆಯ ಹೆಚ್ಚಳ ಅಧಿಕವಾಗಿದೆ.[೮] ಒಟ್ಟಾರೆಯಾಗಿ ಜಿಲ್ಲೆಯ ಜನಸಂಖ್ಯೆ ಸಾಪೇಕ್ಷವಾಗಿ ಬೆಳವಣಿಗೆಯಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೨.೨. ರಾಯಚೂರು ಜಿಲ್ಲಾ ಜನಸಂಖ್ಯಾ ಲಕ್ಷಣಗಳು ಮತ್ತು ಪ್ರವೃತ್ತಿಗಳು

೨೦೦೧-೨೦೧೧

ತಾಲೂಕು	ಪ್ರದೇಶ	ತಾಲೂಕುಗಳಲ್ಲಿ ಜನಸಂಖ್ಯಾ %		ಜನಸಂಖ್ಯೆಯಲ್ಲಿ ಹೆಚ್ಚಳದಲ್ಲಿ		೨೦೦೧-೨೦೧೧ರ ಮಧ್ಯ ಬೆಳವಣಿಗೆ	ಲಿಂಗಾನುಪಾತ	
		೨೦೦೧	೨೦೧೧	ಒಟ್ಟು ಹೆಚ್ಚಳ	ಶೇ ಪಾಲು	ಪ್ರಮಾಣ	೨೦೦೧	೨೦೧೧
ದೇವದುರ್ಗ	ಗ್ರಾ	೧೨	೧೩.೧	೫೧೨೧೪	೧೯.೭೭	೨೫.೫೫	೯೮೬	೧೦೦೫
	ನ	೧.೩೨	೧.೫	೬೯೩೫	೨.೬೮	೩೧.೫೩	೯೪೪	೯೭೮
	ಒಟ್ಟು	೧೩.೩	೧೫.೪	೫೮೧೪೯	೨೨.೪೫	೨೬.೧೪	೯೮೨	೧೦೦೨
ಲಿಂಗಸುಗೂರು	ಗ್ರಾ	೧೪.೮	೧೫.೪	೫೦೨೬೫	೧೯.೪	೨೦.೩೧	೯೮೧	೯೮೫
	ನ	೪.೪೧	೪.೫೬	೧೪೩೯೨	೫.೫೬	೧೯.೫೬	೯೫೨	೯೮೪
	ಒಟ್ಟು	೧೯.೨	೨೦	೬೪೬೫೭	೨೪.೯೬	೨೦.೧೪	೯೭೪	೯೮೪
ಮಾನ್ವಿ	ಗ್ರಾ	೧೭.೬	೧೬.೮	೩೧೦೯೯	೧೨.೦೧	೧೦೬೧	೯೯೪	೧೦೧೫
	ನ	೨.೨೫	೨.೪೧	೮೮೫೨	೩.೪೨	೨೩.೫೩	೯೭೩	೯೯೮
	ಒಟ್ಟು	೧೯.೮	೧೯.೨	೩೯೯೫೧	೧೫.೪೨	೧೨.೦೮	೯೯೨	೧೦೧೩
ರಾಯಚೂರು	ಗ್ರಾ	೧೨.೫	೧೨.೮	೩೮೫೦೦	೧೪.೮೬	೧೮.೪೨	೯೮೯	೧೦೦೮
	ನ	೧೩.೬	೧೩	೨೪೭೫೭	೯.೫೬	೧೦.೯೩	೯೫೯	೯೮೯
	ಒಟ್ಟು	೨೩.೧	೨೫.೯	೬೩೨೫೭	೨೪.೪೨	೧೪.೫೩	೯೭೩	೯೯೮
ಸಿಂಧನೂರು	ಗ್ರಾ	೧೭೯	೧೬.೫	೧೮೪೬೧	೭೧೩	೬.೧೮	೧೦೦೭	೧೦೦೬
	ನ	೩.೬೭	೩.೯೩	೧೪೫೭೫	೫.೬೩	೨೩.೭೯	೯೫೫	೯೯೪
	ಒಟ್ಟು	೨೧.೬	೨೦.೪	೩೩೦೩೬	೧೨.೭೫	೯.೧೭	೯೯೮	೧೦೦೩
ಜಿಲ್ಲೆ	ಗ್ರಾ	೭೪.೮	೭೪.೬	೧೮೯೫೩೯	೭೩.೧೭	೧೮.೧೮	೯೯೨	೧೦೦೪
	ನ	೨೫.೨	೨೫.೪	೬೯೫೧೧	೨೬.೮೩	೧೬.೫೨	೯೫೮	೯೮೯
	ಒಟ್ಟು	೧೦೦	೧೦೦	೨೫೯೦೫೦	೧೦೦	೧೫.೫೧	೯೮೩	೧೦೦೦

ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪

ಕೋಷ್ಟಕ ೨.೩ ೧೯೯೧–೨೦೦೧ ಹಾಗೂ ೨೦೧೧ರ ಜನಗಣತಿ ಪ್ರಕಾರ ರಾಯಚೂರು ಜಿಲ್ಲೆಯ ಜನಸಂಖ್ಯೆ

ಪ್ರದೇಶ	೧೯೯೧			೨೦೦೧			೨೦೧೧		
	ಪುರುಷ	**ಮಹಿಳೆ**	**ಒಟ್ಟು**	**ಪುರುಷ**	**ಮಹಿಳೆ**	**ಒಟ್ಟು**	**ಪುರುಷ**	**ಮಹಿಳೆ**	**ಒಟ್ಟು**
ಗ್ರಾಮೀಣ	೫೧೨.೮	೫೦೬೯೫೪	೧೦೧೯೭೫೮	೬೧೭೩೩೨	೬೧೧೮೮೭೧	೧೨೨೯೨೦೩	೭೧೭೯೭೨	೭೧೯೯೯೨	೧೪೩೮೪೬೪
ನಗರ	೧೭೦೪೫೪	೧೬೧೫೯೭	೩೩೨೦೫೧	೨೧೫೦೨೦	೨೩೯೮೯	೪೧೯೦೦೯	೨೪೬೫೩೯	೨೪೩೫೩೯	೪೯೦೩೪೮
ಒಟ್ಟು	೬೮೩೨೫೮	೬೬೮೫೫೧	೧೩೫೮೦೯	೮೩೨೩೫೨	೮೧೫೫೬೦	೧೬೪೮೨೧೨	೯೬೪೫೧೧	೯೬೪೩೦೧	೧೯೨೮೮೧೨

ಆಧಾರ: ರಾಯಚೂರು ಜಿಲ್ಲಾ ಅಂಕಿಸಂಖ್ಯೆಗಳ ನೋಟ ೨೦೧೧–೧೨

ಕೋಷ್ಟಕ ೨.೪. ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯಾ ಲಕ್ಷಣಗಳು

ತಾಲೂಕು	ಒಟ್ಟು ಜನಸಂಖ್ಯೆ		ಒಟ್ಟು ಜನಸಂಖ್ಯೆ		ಲಿಂಗಾನುಪಾತ		ಒಟ್ಟು ಜನಸಂಖ್ಯೆ		ಒಟ್ಟು ಜನ ಸಂಖ್ಯೆ			
	ಪ.ಜಾ	ಪ.ಪಂ	ಪ.ಜಾ	ಪ.ಪಂ	ಪ.ಜಾ	ಪ.ಪಂ	ಪ.ಜಾ	ಪ.ಪಂ	ಪ.ಜಾ	ಪ.ಪಂ	ಪ.ಜಾ	ಪ.ಪಂ
ದೇವದುರ್ಗ	೪೪೩೪೯	೭೪೯೧೦	೧೯.೯೪	೩೩.೬೭	೯೮೦	೯೮೫	೬೦೪೭೮	೯೬೫೩೫	೨೧.೫೫	೩೪.೪	೯೯೬	೧೦೦೮
ಲಿಂಗಸಗೂರು	೬೮೪೧೨	೫೧೩೩೨	೨೧.೩೧	೧೫.೯೯	೯೮೭	೯೮೭	೮೯೬೯೨	೬೫೫೮೯	೨೩.೨೫	೧೭೦೧	೯೮೭	೧೦೦೦
ಮಾನ್ವಿ	೬೨೨೩೯	೭೭೯೫೬	೧೮.೮೨	೨೩.೫೭	೯೯೯	೧೦೦೧	೭೮೦೫೬	೮೯೧೯೦	೨೧.೦೬	೨೪.೦೬	೧೦೧೪	೧೦೨೮
ರಾಯಚೂರು	೮೨೬೪೬	೫೨೧೨೯	೧೮.೯೮	೧೧.೯೭	೯೮೫	೯೮೬	೧೦೪೮೪೯	೬೩೧೭೮	೨೧.೦೩	೧೨.೬೭	೧೦೦೫	೧೦೧೮
ಸಿಂಧನೂರು	೫೯೬೩೦	೪೬.೭೧೫	೧೬.೫೬	೧೨.೯೭	೧೦೧೫	೧೦೧೪	೬೭೮೫೮	೫೨೫೭೯	೧೭.೨೬	೧೩.೩೭	೧೦೧೫	೧೦೨೬
ಜಿಲ್ಲೆ	೩೧೭೨೭೬	೩೦೩೦೪೨	೧೯	೧೮.೧೫	೯೯೭	೯೯೩	೪೦೦೯೩೩	೩೬೭೦೭೧	೨೦.೭೯	೧೯.೦೩	೧೦೦೧	೧೦೧೬

ಮೂಲ ವಿವಿಧ ವರ್ಷಗಳ ಜನಗಣತಿ ದಾಖಲೆಗಳು

ಈ ಮೇಲಿನ ಕೋಷ್ಟಕದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಜನಸಂಖ್ಯಾ ಲಕ್ಷಣಗಳನ್ನು ನೀಡಲಾಗಿದೆ. ೨೦೧೧ರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ಜಿಲ್ಲೆಯ ಜನಸಂಖ್ಯೆಯ ಶೇ ೨೧ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಜನಸಂಖ್ಯೆಯು ಶೇ ೧೯ರಷ್ಟಿತ್ತು, ಲಿಂಗಸಗೂರು ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಪರಿಶಿಷ್ಟ ಜಾತಿ ಜನ ಸಂಖ್ಯೆ ಇದ್ದರೆ, ದೇವದುರ್ಗ ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಪರಿಶಿಷ್ಟ ಪಂಗಡದ ಜನಸಂಖ್ಯೆ ಇದೆ. ೨೦೦೧–೨೦೧೧ರ ಅವಧಿಯಲ್ಲಿ ಎರಡು ವರ್ಗಗಳ ಜನಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಇದರ ಜೊತೆಗೆ ಈ ವರ್ಗದ ಲಿಂಗಾನುಪಾತವು ಇತರ ಸಾಮಾನ್ಯ ಜನರಿಗಿಂತ ಅಧಿಕವಿದ್ದು ಅನುಕೂಲಕರ ಸ್ಥಿತಿಯಲ್ಲಿದೆ.

ಸಾಕ್ಷರತೆ

ಕೋಷ್ಟಕ ೨.೫. ರಾಯಚೂರು ಜಿಲ್ಲಾ ಸಾಕ್ಷರತೆ ದಶಕವಾರು ಬೆಳವಣಿಗೆ

	೧೯೯೧	೨೦೦೧	೨೦೧೧	ದಶಕ ಹೆಚ್ಚಳ
ಪುರುಷ	೪೬.೭೫	೬೧.೫	೭೦.೪೭	೧೫.೨೭
ಮಹಿಳೆ	೨೧.೭	೩೫.೯	೪೮.೭೩	೧೫.೧೪
ಒಟ್ಟು	೩೪.೩೪	೪೮.೮	೫೯.೫೬	೧೫.೨

ಆಧಾರ: ರಾಯಚೂರು ಜಿಲ್ಲಾ ಅಂಕಿ ಸಂಖ್ಯೆಗಳ ನೋಟ ೨೦೧೧-೧೨

ಸಾಕ್ಷರತೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆ ಸ್ವಾತಂತ್ರಪೂರ್ವ ಮತ್ತು ಸ್ವಾತಂತ್ರ್ಯಾ ನಂತರ ಹಿನ್ನಡೆಯನ್ನು ಸಾಧಿಸುತ್ತಾ ಬಂದಿರುವುದನ್ನು ಕಾಣಬಹುದು. ರಾಯಚೂರು ಜಿಲ್ಲೆಯಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಕಾಣಬಹುದಾಗಿದೆ. ಆದರೆ ೨೦೧೧ರ ನಂತರ ಶಾಲಾ ಮೂಲಭೂತ ಸೌಲಭ್ಯಗಳನ್ನು ವಿಸ್ತರಿಸಿ ಕಲಿಕೆಯ ವಾತವರಣವನ್ನು ಸುಧಾರಿಸಿ ಜನರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಕಾರ್ಯ ಗಮನಾರ್ಹವಾಗಿ ಹೆಚ್ಚಳವಾಗಿದೆ.

ಈ ಸಾಕ್ಷರತೆಯನ್ನು ರಾಜ್ಯಮಟ್ಟಕ್ಕೆ ಹೋಲಿಸಿ ನೋಡುವುದಾದರೆ ೨೦೧೧ರ ಪ್ರಕಾರ ರಾಜ್ಯದ ಸಾಕ್ಷರತೆ ೭೫% ಎಂದು ಗುರುತಿಸಲಾಗಿದೆ. ಅದೇ ರೀತಿಯಾಗಿ ಜಿಲ್ಲೆಯ ಸಾಕ್ಷರತೆ ೫೯.೫೬ ಅಂದರೆ ಶೇ ೬೦ರಷ್ಟು ಗುರಿಸಾಧಿಸಿದೆ. (ಸಾಮಾಜಿಕ ಆರ್ಥಿಕ ಸಮೀಕ್ಷೆಗಳಲ್ಲಿ ಓದಲು ಮತ್ತು ಬರೆಯಲು ಬರುವವರನ್ನು ಸಾಕ್ಷರರೆಂದು ಪರಿಗಣಿಸಲಾಗುತ್ತದೆ.) ಆದ್ದರಿಂದ ಜನಗಣತಿ ವರದಿಗಳಲ್ಲಿ ಒಡಮೂಡಿದ ಮಾಹಿತಿಯು ಸಾಕ್ಷರತೆಗೆ ಸಂಬಂಧಿಸಿದಂತೆ ಒಂದು ಉತ್ತಮ ಮಾಹಿತಿ ಮೂಲವಾಗುವುದರಲ್ಲಿ ಸಂದೇಹವಿಲ್ಲ, ಹಾಗಾಗಿ ರಾಯಚೂರು ಜಿಲ್ಲೆಯ ಸಾಕ್ಷರತೆಯ ದಶಕವಾರು ಬೆಳವಣಿಗೆಯನ್ನು ೨೦೧೧ಕ್ಕೆ ಸಂಬಂಧಿಸಿದಂತೆ ನೀಡಲಾಗಿದೆ.

ಕೋಷ್ಟಕ ೨.೬. ೨೦೧೧ ಜನಗಣತಿ ಪ್ರಕಾರ ರಾಯಚೂರು ಜಿಲ್ಲೆಯ ಸಾಕ್ಷರತಾ ಪ್ರಮಾಣ

ತಾಲೂಕು	ಒಟ್ಟು			ಗ್ರಾಮೀಣ			ನಗರ		
	ವ್ಯಕ್ತಿಗಳು	ಪುರುಷ	ಮಹಿಳೆ	ವ್ಯಕ್ತಿಗಳು	ಪುರುಷ	ಮಹಿಳೆ	ವ್ಯಕ್ತಿಗಳು	ಪುರುಷ	ಮಹಿಳೆ
ದೇವದುರ್ಗ	೪೯.೪೯	೬೦.೪೭	೩೮.೬೨	೪೭.೧೭	೫೮.೪೪	೬೩.೦೫	೬೯.೪೯	೭೭.೭೨	೬೧.೧೪
ಲಿಂಗಸುಗೂರು	೬೧.೧೪	೭೩.೦೪	೪೯.೧೪	೫೬.೮೯	೬೯.೭೧	೪೩.೯೯	೭೫.೦೨	೮೩.೯೧	೬೬.೦೩
ಮಾನ್ವಿ	೫೪.೬೯	೬೫.೬೪	೪೪.೦೯	೫೨.೮೧	೬೪.೧೨	೪೧.೭೮	೬೭.೬೨	೭೫.೧೮	೬೦.೧
ರಾಯಚೂರು	೬೫.೧೮	೭೫.೨೩	೫೫.೧೬	೫೨.೧೬	೬೪.೬೫	೩೯.೮೯	೭೭.೫೧	೮೫.೨	೬೯.೭೯
ಸಿಂಧನೂರು	೬೨.೪೫	೭೩.೪೪	೫೧.೬	೫೯.೭೧	೭೧.೩೮	೪೮.೨೨	೭೩.೯೨	೮೧.೯೮	೬೫.೮೪
ಜಿಲ್ಲೆ	೫೯.೫೬	೭೦.೪೭	೪೮.೭೩	೫೪.೧೧	೬೬.೦೧	೪೨.೩೭	೭೫.೧೨	೮೩.೧	೬೭.೧
ಕರ್ನಾಟಕ	೭೫.೩೬	೮೨.೪೭	೬೮.೦೮	೬೮.೭೩	೭೭.೬೧	೫೯.೭೧	೮೫.೭೮	೯೦.೦೪	೮೧.೩೬

(ಆಧಾರ: ರಾಯಚೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪)

ಮಾನವ ಅಭಿವೃದ್ಧಿ ವರದಿ ೨೦೧೪ರ ಪ್ರಕಾರ ಯಾವುದೇ ಸಮಾಜದ ಸಾಮಾಜಿಕ ಪ್ರಗತಿಯ ಮೂಲ ಸೂಚಿ ಎಂದರೆ ಶಿಕ್ಷಣ ಶಿಕ್ಷಣವು ಜನಸಮುದಾಯವನ್ನು ಹೆಚ್ಚು ಕೌಶಲ್ಯವಾಗಿ ಮಾಡುವುದಲ್ಲದೆ ಸಾಮಾಜಿಕ ಪಿಡುಗುಗಳ ವಿರುದ್ಧ ದನಿಯೆತ್ತುವ ಹೆಚ್ಚಿನ ಕಾಳಜಿಯನ್ನು ಹೊಂದಿರುತ್ತದೆ. ಇದರಿಂದ ಹಲವಾರು ಗೋಚರ ಮತ್ತು ಅಗೋಚರ ಪ್ರಯೋಜನಗಳು ದೊರೆಯುತ್ತವೆ. ಮತ್ತು ಸ್ವಾವಲಂಬಿ ಮತ್ತು ಸಮೂಹಿಕ ಅಭಿವೃದ್ಧಿಯ ಪ್ರತೀಕ ಎಂದು ಭಾವಿಸಲಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಶೇ ೬೦ರಷ್ಟು ಸಾಕ್ಷರತೆಯನ್ನು ಹೊಂದಿದ್ದು ಪುರುಷರಲ್ಲಿ ಶೇ ೭೦ರಷ್ಟು ಇದ್ದರೆ ಮಹಿಳೆಯಲ್ಲಿ ಅದು ಶೇ ೪೮ರಷ್ಟಿತ್ತು, ಎಲ್ಲಾ ವರ್ಗದವರಲ್ಲಿ ಜಿಲ್ಲೆಯ ಸಾಕ್ಷರತಾ ದರಗಳು ರಾಜ್ಯಮಟ್ಟಕ್ಕಿಂತ ಕಡಿಮೆ ಇವೆ. ಅಲ್ಲದೆ ಪುರುಷ ಮತ್ತು ಮಹಿಳೆ, ಗ್ರಾಮೀಣ ಮತ್ತು ನಗರ ಪ್ರದೇಶದ ಸಾಕ್ಷರತ ದರಗಳಲ್ಲಿ ತೀವ್ರ ಭಿನ್ನತೆಗಳಿರುವುದನ್ನು ಕಾಣಬಹುದು. ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಶೇ ೪೨ರಷ್ಟು ಮಹಿಳೆಯ ಸಾಕ್ಷರರಿದ್ದು, ಇದಕ್ಕೆ ವ್ಯತಿರಿಕ್ತವಾಗಿ ನಗರ ಪ್ರದೇಶದ ಪುರುಷರ ಸಾಕ್ಷರತೆ ಶೇ ೮೨ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ರಾಯಚೂರು ತಾಲೂಕು ಗರಿಷ್ಠ ಸಾಕ್ಷರತಾ ದರವನ್ನು ದಾಖಲಿಸಿದರೆ, ದೇವದುರ್ಗ ತಾಲೂಕಿನಲ್ಲಿ ಅತಿ ಕನಿಷ್ಠವಾಗಿದೆ. ಸಾಕ್ಷರತೆಯಲ್ಲಿನ ಲಿಂಗ ಅಂತರಗಳು ಜಿಲ್ಲೆಯಲ್ಲಿ ರಾಜ್ಯಕ್ಕಿಂತ ಅಧಿಕ ಪ್ರಮಾಣದಲ್ಲಿವೆ ಹಾಗೂ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಎರಡರಷ್ಟಿದೆ. ಆದ್ದರಿಂದ ಭವಿಷ್ಯದ ಸಾಕ್ಷರತೆಯಲ್ಲಿನ ವಿಸ್ತರಣೆಯ ಒತ್ತು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಮಹಿಳೆಯರ ಮೇಲೆ ಇರಬೇಕು ಎಂಬುದನ್ನು ಇದು ತೋರಿಸುತ್ತದೆ. ಅಂದರೆ ಲಿಂಗ ತಾರತಮ್ಯವು ಅಭಿವೃದ್ಧಿಯ ಹಿನ್ನಡೆಯನ್ನು ತೋರಿಸುತ್ತದೆ ಎಂಬುದು ಶಿಕ್ಷಣ ಸಾಕ್ಷರತೆಯ ಮೌಲ್ಯೀಕರಣದಿಂದ ತಿಳಿಯುತ್ತದೆ.

ಆರೋಗ್ಯ

ಯಾವುದೇ ದೇಶದ ಅಭಿವೃದ್ಧಿ ಮತ್ತು ಅನಭಿವೃದ್ಧಿಯನ್ನು ಆದೇಶದ ಜನರ ಆರೋಗ್ಯ, ಜನನ ಮತ್ತು ಮರಣಗಳಿಂದ ಅಳೆಯಲಾಗುತ್ತದೆ. ದೇಶದ ಅಭಿವೃದ್ಧಿಯಲ್ಲಿ ಆರೋಗ್ಯವಂತ ಪ್ರಜೆಗಳ ಪಾತ್ರ ಮುಖ್ಯವಾದದ್ದು ಹಾಗಾಗಿ ಆರೋಗ್ಯ ಕ್ಷೇತ್ರವನ್ನು ಸಾಮಾಜಿಕ ಸೇವಾ ವಲಯದಲ್ಲಿ ಉಳಿಸಿಕೊಳ್ಳಲಾಗಿದೆ. ಆರೋಗ್ಯವು ರಾಷ್ಟ್ರದ ಜಿ.ಡಿ.ಪಿಯನ್ನು ಹೆಚ್ಚು ಮಾಡುತ್ತದೆ ಮತ್ತು ಕಡಿಮೆಯೂ ಮಾಡುವಶಕ್ತಿಯಿದೆ. ಆದರೂ (೨೦೧೪ ಮಾ. ಅ. ವ.) ಆರೋಗ್ಯವು ಒಂದು ಸಂಕೀರ್ಣವಾದ ಬಹು ಆಯಾಮವುಳ್ಳ ಅಂಶವಾಗಿದ್ದು, ಅದನ್ನು ಯಾವುದೇ ಒಂದು ಸೂಚಿಯನ್ನು ಬಳಸಿ ಅಳೆಯುವುದು ಅಷ್ಟೊಂದು ಸುಲಭ ಮತ್ತು ಸರಗಾವಾಗಿ ಅಳೆಯಲಾಗದು ಉತ್ತಮ ಆರೋಗ್ಯವು ಜೀವನದ ಇತರ ಸಾಧನೆಗಳನ್ನು ಮತ್ತು ಅವಕಾಶಗಳನ್ನು ಪಡೆಯಲು ಸಹಾಯಕಾರಿಯಾದುದು, ಅನಾರೋಗ್ಯ ಈಗಾಗಲೇ ಇರುವ ವಂಚಿತೆಗಳನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ಹಾಗಾಗಿ ಶಿಕ್ಷಣ ಮತ್ತು ಆರೋಗ್ಯವನ್ನು ಮಾನವ ಬಂಡವಾಳದ ದೃಷ್ಠಿಯಿಂದ ನೋಡಲಾಗಿದ್ದು, ಉತ್ತಮ ಆರೋಗ್ಯವು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಅಂಗವಾಗಿ ಪರಿಗಣಿಸಲಾಗುತ್ತದೆ. ಆದ್ದರಿಂದ (ಅಮರ್ತ್ಯಸೇನ್

೨೦೦೨) ಆರೋಗ್ಯವು ಮಾನವನ ಜೀವನದ ಮಹತ್ವದ ಅಂಶಗಳೊಂದಾಗಿದೆ. ಅದು ಆರ್ಥಿಕ ಬೆಳವಣಿಗೆ, ಶೈಕ್ಷಣಿಕ ಸಾಧನೆ, ಉದ್ಯೋಗ ಆದಾಯಗಳಿಕೆ, ಗೌರವ, ಭದ್ರತೆ ಮತ್ತು ಮಾನವನಲ್ಲಿ ಧಾರಣ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದಿದ್ದಾರೆ. ಆರೋಗ್ಯ ಎಂದರೆ WHO ಪ್ರಕಾರ (೧೯೪೬) ಆರೋಗ್ಯವು ಕೇವಲ ರೋಗ ಅಥವಾ ವಿಫುಲತೆಯಲ್ಲಿರದೆ ಸಂಪೂರ್ಣ ಭೌತಿಕ, ಮಾನಸಿಕ ಮತ್ತು ಸಾಮಾಜಿಕ ಉತ್ತಮಿಕೆಯಾಗಿದೆ. ಅಂದರೆ ಆರೋಗ್ಯ ಸಾಮಾಜಿಕ ಮಾನಸಿಕ ಮತ್ತು ಆರ್ಥಿಕ ರಂಗಗಳಲ್ಲಿ ಮಾಡಬೇಕಾದ ಸಾಧನೆಯನ್ನು ನಿರ್ಧರಿಸುತ್ತದೆ. ಹಾಗಾಗಿ ಅನಾರೋಗ್ಯದಿಂದ ಉಂಟಾಗುವ ಹಾನಿಯು ಹಲವು ವಂಚಿತತೆಗಳನ್ನು ಬಿಂಬಿಸುತ್ತದೆ. ಇಂತಹ ವಿಷಮ ಸ್ಥಿತಿಯಿಂದ ಜನರನ್ನು ರಕ್ಷಿಸುವುದು ಬಹುಮುಖ್ಯವಾದುದು.

ಆರೋಗ್ಯವು ಮಾನವ ಅಭಿವೃದ್ಧಿಯ ಪ್ರಮುಖವಾದ ಒಂದು ಸೂಚಿಯಾಗಿದೆ. ರಾಜ್ಯದ ಒಟ್ಟಾರೆ ಅಭಿವೃದ್ದೀಯಲ್ಲಿ ಪ್ರಮುಖ ಪಾತ್ರವಹಿಸಿದೆ. ಕರ್ನಾಟಕದಲ್ಲಿ ಆರೋಯಕ್ಕೆ ಸಂಬಂದಿಸಿದಂತೆ ಗಣನೀಯ ಪ್ರಮಾಣದಲ್ಲಿ ಪ್ರಾಮುಖ್ಯತೆ ನೀಡಿದೆ. ರಾಜ್ಯದಲ್ಲಿ ಪ್ರಮುಖ ಪ್ರಕರಣಗಳನ್ನು (ರೋಗಗಳನ್ನು ಪತ್ತೆ ಹಚ್ಚುವದರ ಮೂಲಕ ಆರೋಗ್ಯ ಸುಧಾರಣೆಯ ವಾತವರಣ ನಿರ್ಮಿಸಬಹುದು ಮತ್ತು ವಿವಿದ ಯೋಜನೆಗಳ ಸಮುದಾಯಗಳ ಮನೊಬಲ ಮತ್ತು ಪರಿಸರ ಗುಣಮಟ್ಟ ಸುಧಾರಿಸಿದೆ. ಸಾಮಾಜಿಕ, ಆರ್ಥಿಕ ಬೆಳವಣೆಗೆಗೆ ಸಹಾಯಕಾರಿಯಾಗುವದಿಸೆಯಲ್ಲಿ ರಾಜ್ಯವುದಾಪುಗಾಲು ಇಟ್ಟಿದೆ. ಆರೋಗ್ಯದ ದೃಷ್ಠಿಯಲ್ಲಿ ಕಳೆದ ಕೆಲವು ದಶಕಗಳ ಅವದಿಯಲ್ಲಿ ಸಾಕಷ್ಟು ಅಭಿವೃದ್ಧಿಸಾದಿಸಿದೆ. ಅದರೂ ರಾಜ್ಯವು ಸಾಗಬೆಕಾದ ಹಾದಿ ಬಹಳ ದೂರವಿದೆ. ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂತರಿಕ ಉತ್ಪನ್ನದ ಬೆಳವಣಿಗೆ ದರ ಅರೋಗ್ಯದಡಿ ಸಾರ್ವಜನಿಕ ವೆಚ್ಚವು ಶೇ ೦.೯ರಷ್ಟು ಇರುತ್ತದೆ. ಶಿಕ್ಷಣ ಮತ್ತು ಅರೋಗ್ಯವು ಮಾಣವ ಅಭಿವೃದ್ಧಿಯ ಮೊದಲ ಸ್ತರಗಳು ಹಾಗಾಗಿ ಇವುಗಳ ಮೇಲಿನ ವೆಚ್ಚವು ಶೇ ೧೮ರಷ್ಟುಗಬೇಕು ಅಂಥಾಗ ಮಾತ್ರ ಸುಸ್ಥಿರ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ. ಯಾಕೆಂದರೆ ರಾಜ್ಯದ ಈಗಿನ ಜನಸಂಖ್ಯೆ ಪ್ರಮಾಣಕ್ಕೆ ತಾಳ ಮೇಳವೆ ಇಲ್ಲ ಎಂದುದನ್ನು ಅಂಕಿಸಂಖ್ಯೆಗಳ ಮೂಲಕ ಗಮನಿಸಬಹುದು.[೯]

ಕರ್ನಾಟಕದಲ್ಲಿ ೨೦೧೫ರಲ್ಲಿದ್ದಂತೆ ಅರೋಗ್ಯ ಇಲಾಖೆಯಲ್ಲಿ ಒದಗಿಸಲಾದ ಅರೋಗ್ಯ ಸೇವೆಗಳು ಈ ರೀತಿಯಗಿವೆ. ಜಿಲ್ಲಾಸ್ಪತ್ರೆಗಳು ೨೦. ಇತರೆ ಅಸ್ಪತ್ರೆಗಳು(ಅರೋಗ್ಯ ಇಲಾಖೆ ಅಡಿಯಲ್ಲಿ ೧೧ ಅಸ್ಪತ್ರೆಗಳ ಸ್ವಯಂ ಸ್ಥಾನಿಕ ಮತ್ತು ಬೋದಕ ಆಸ್ಪತ್ರೆಗಳ ೩೨ ತಾಲೂಕು ಆಸ್ಪತ್ರೆಗಳು ೪೬, ಸಮುದಾಯ ಆರೋಗ್ಯ ಕೇಂದ್ರಗಳು ೨೦೩, ಪ್ರಾಥಮಿಕ ಅರೋಗ್ಯ ಕೇಂದ್ರಗಳು ಗ್ರಾಮೀಣ ೨,೩೫೩, ನಗರ ಪ್ರಾಥಮಿಕ ಅರೋಗ್ಯ ಕೇಂದ್ರಗಳು (ಐಪಿ ಪಿ ಅಡಿಯಲ್ಲಿ) ೧೦೮, ಸಂಚಾರಿ ಅರೋಗ್ಯ ಘಟಕಗಳು (ಬುಡಕಟ್ಟು-ಅರೋಗ್ಯ ಮತ್ತು ಕುಟುಂಬಕಲ್ಯಾಣ ಸೇವೆಗಳು ೧೯ ಉಪಕೇಂದ್ರಗಳು ೮.೮೭೧ ಇವೆ.[೧೦]

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ರಾಯಾಚೂರು ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳಲ್ಲಿ ಸೇವೆಯನ್ನು ಒದಗಿಸಲು ೨೧೩ ಉಪ ಕೇಮದ್ರಗಳು, ೪೧ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೫ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ತಾಲೂಕು ಮಟ್ಟದಲ್ಲಿ ೧೦೦ ಹಾಸಿಗೆಯುಳ್ಳ ೪ ತಾಲೂಕ ಆಸ್ಪತ್ರೆಗಳು, ೬ ಸಮುದಾಯ ಆರೋಗ್ಯ ಕೇಂದ್ರಗಳು, ರಾಯಾಚೂರು ನಗರದಲ್ಲಿ ೭ ನಗರ ಆರೋಗ್ಯ ಕೇಂದ್ರಗಳು, ಹೆರಿಗೆ ಆಸ್ಪತ್ರೆ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆಸ್ಪತ್ರೆ ಕಾರ್ಯನಿರ್ವಹಿಸುತ್ತವೆ.

ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕುಷ್ಠರೋಗ ನಿಯಂತ್ರಣ ಕೆಂದ್ರ ಒಂದು ಪರಿವರ್ತಿತ ಕುಷ್ಠರೋಗ ನಿಯಂತ್ರಣ ಹಾಗೂ ಒಂದು ೨೦ ಹಾಸಿಗೆಗಳ ಪರಿವರ್ತಿತ ಕುಷ್ಠರೋಗ ನಿಯಂತ್ರಣ ಕೆಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈಲ್ಲಾ ಮಟ್ಟದಲ್ಲಿ ಕುಟುಂಬ ಕಲ್ಯಾಣ, ತಾಯಿ ಮಕ್ಕಳ ಆರೋಗ್ಯ ಕ್ಷಯರೋಗ ನಿವಾರಣೆ, ಕುಷ್ಠರೋಗ ನಿವಾರಣೆ, ಮಲೇರಿಯಾ ಮತ್ತು ಫೈಲೇರಿಯಾ, ಸಾಂಕ್ರಾಮಿಕ ರೋಗಗಳ ತಡೆಗೆ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

೨೦೧೨-೧೩ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿಗಳು ಈ ಕೆಳಗಿನಂತಿರುತ್ತದೆ.

೧. ಕುಟುಂಬ ಕಲ್ಯಾಣ ಕಾರ್ಯಕ್ರಮ

ಈ ಕಾರ್ಯಕ್ರಮದಲ್ಲಿ ಅರ್ಹ ದಂಪತಿಗಳಿಗೆ ದಾಖಲಾತಿ ಮಾಡಿಕೊಂಡ ಸಣ್ಣ ಕುಟುಂಬ ವಿಧಾನ ಬಗ್ಗೆ ಆರೋಗ್ಯ ಶಿಕ್ಷಣ ನೀಡಿ ಕುಟುಂಬ ಕಲ್ಯಾಣ ಪದ್ಧತಿಯನ್ನು ಅನುಸರಿಸಲು ಆರೋಗ್ಯ ಸಹಾಯಕ/ ಸಹಾಯಕಿಯರು ಹಾಗೂ ಅಧಿಕಾರಿಗಳು ಫಲಾನುಭವಿಗಳ ಮನವೊಲಿಸಿ ಈ ಕಾರ್ಯಕ್ರಮದಯಡಿಯಲ್ಲಿ ಸಾದನೆ ಈ ಕೆಳಕಂಡತಿದೆ.

ಕೋಷ್ಟಕ ೨.೭. ರಾಯಚೂರು ಜಿಲ್ಲೆಯ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ

	ಗುರಿ	**ಸಾಧನೆ**	**ಶೇಕಡಾ**
ಟುಬೆಕ್ಟಮಿ	೧೬೨೩೯	೧೫೮೧೫	೯೪.೩೧%
ವಂಕಿಧಾರಣೆ	೮೭೦೬	೬೪೩೩	೭೪.೦೦%
ನುಂಗುವ ಮಾತ್ರೆ	೯೮೧೦	೭೧೯೦	೯೫.೦೦

೨. ತಾಯಿ ಮಕ್ಕಳ ಅರೋಗ್ಯ ಕಾರ್ಯಕ್ರಮ

ಈ ಕಾರ್ಯಕ್ರಮದಡಿಯಲ್ಲಿ ಪ್ರತಿಯೊಬ್ಬ ಆರೋಗ್ಯ ಸಹಾಯಕ/ಸಹಾಯಕಿಯರು ಮನೆ ಭೇಟಿ ನೀಡಿ ಮಕ್ಕಳ ಹಾಗೂ ಗರ್ಭಿಣಿಯರ ದಾಖಲೆತಿ ಮಾಡಿಕೋಡು, ಅವರುಗಳಿಗೆ ಆರೋಗ್ಯ ಶಿಕ್ಷಣವನ್ನು ಹಾಗೂ ಚಿಕಿತ್ಸೆಯನ್ನು ನೀಡುವುದು. ಈ ಕಾರ್ಯಕ್ರಮದಲ್ಲಿ ೨೦೧೨-೧೩ನೇ ಸಾಲಿನಲ್ಲಿ ಗುರಿ ಮತ್ತು ಸಾಧನಗಳ ವಿವರ ಈ ಕೆಳಕಂಡಂತಿದೆ.[೧೧]

ಗರ್ಭಿಣಿಯರ ದಾಖಲಾತಿ	೪೯೦೩೪
ನಿರ್ವಹಿಸಲ್ಪಟ್ಟ ಹೆರಿಗೆಗಳು	೩೫೨೯೪
ಆಸ್ಪತ್ರೆಯಲ್ಲಿ ಆದ ಹೆರಿಗೆಗಳು	೩೧೯೮೩
ಆರೋಗ್ಯ ಕಾರ್ಯಕರ್ತೆಯರಿಂದ	೧೪೦೨
ತರಬೇತಿ ಹೊಂದಿದ ದಾದಿಯರಿಂದ	೧೯೦೯

೨೦೧೧ರ ಜನಗಣತಿ ಪ್ರಕಾರ ರಾಯಚೂರು ಜಿಲ್ಲೆಯ ಜನಸಂಖ್ಯೆ ೧೯.೨೯ ಲಕ್ಷಗಳಷ್ಟಿದ್ದು ರಾಜ್ಯದ ಜನಸಂಖ್ಯೆಯ ೩ ಶೇ. ಪ್ರತಿಶತದಷ್ಟಿದೆ ಮಹಿಳೆ ಶೇ ೪೯.೯ರಷ್ಟಿದೆ. ದೇವದುರ್ಗ, ಮಾನ್ವಿ, ಸಿಂಧನೂರು ತಾಲೂಕುಗಳಲ್ಲಿ ಮಹಿಳೆಲಯರ ಅಧಿಕ ಪ್ರಮಾಣವಿದೆ, ಜಿಲ್ಲೆಯು ಶೇ ೨೫ರಷ್ಟು ನಗರೀಕರಣವನ್ನು ಹೊಂದಿದೆ. ಆದರೂ ಇಂದಿಗೂ ಗ್ರಾಮೀಣ ಲಕ್ಷಣವನ್ನು ಹೊಂದಿದೆ. ಆದರೆ ರಾಯಚೂರು ತಾಲೂಕಿನ ನಗರೀಕರಣ ಪ್ರಮಾಣದ ಶೇ ೫೦ರಷ್ಟಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ರಾಜ್ಯಮಟ್ಟಕ್ಕಿಂತ ಅಧಿಕವಿದೆ. ೨೦೦೧–೨೦೧೧ರ ಅವಧಿಯಲ್ಲಿ ಜನಸಂಖ್ಯೆ ಬೆಳವಣಿಗೆ ಪ್ರಮಾಣವು ಶೇ.೧೫.೨ರಷ್ಟಿತ್ತು ಜಿಲ್ಲೆಯಲ್ಲಿ ೦–೧೪ವಯೋಮಾನದವರು ಮತ್ತು ಅದಕ್ಕಿಂತ ಹೆಚ್ಚಿನ ಮಯೋಮಾನದವರು ಹೆಚ್ಚಿಗೆ ಇರುವುದು ಕಂಡುಬರುತ್ತದೆ. ಹಾಗಾಗಿ ಇವರ ಆರೋಗ್ಯದ ಕಾಳಜಿ ಬಗ್ಗೆ ಹೆಚ್ಚಿನ ಗಮನ ಹರಿಸುವ ಅವಶ್ಯಕತೆಯಿದೆ.[೧೨] ರಾಯಚೂರು ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಿನ್ನಡೆಯನ್ನು ಅನುಭವಿಸುತ್ತಿದೆ ಎಂಬ ಅಂಕಿ ಅಂಶಗಳನ್ನು ಹೊರಹಾಕಿದೆ ಅಲೋಪಥಿಕ್ ಆಸ್ಪತ್ರೆ ೦೧, ಭಾರತೀಯ ವೈದ್ಯ ಪದ್ಧತಿ ೨೧, ಹಾಗೂ ಖಾಸಗಿ ಆಸ್ಪತ್ರೆಗಳು ೯೫, ಪ್ರಾಥಮಿಕ ಆರೋಗ್ಯ ಕೇಂದ್ರಗಳು ೪೬ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳು ೦೬, ರಾಯಚೂರು ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಗಮನಿಸಿದರೆ ಆರೋಗ್ಯ ಕ್ಷೇತ್ರದಲ್ಲಿ ಜಿಲ್ಲೆ ಕ್ರಮಿಸಬೇಕಾದ ಧಾರಿ ಇನ್ನು ಬಹಳ ದೂರ ಇದೆ ಎಂದು ಅನಿಸುತ್ತದೆ. ಯಾಕೆಂದರೆ ಸರಕಾರಿ ಆಸ್ಪತ್ರೆಗಳು PHC ಮತ್ತು CHC ಎರಡನ್ನು ಸೇರಿಸಿದರೆ ೪೬+೬=೫೨ ಆಗುತ್ತದೆ. ಆದರೆ ಖಾಸಗಿ ಆಸ್ಪತ್ರೆಗಳು ೯೫ ಇವೆ. ಅಂದರೆ ಆರೋಗ್ಯ ಸಂಬಂಧಿಸಿದಂತೆ ಜನರು ಹೆಚ್ಚು ಖಾಸಗಿ ಆಸ್ಪತ್ರೆಯನ್ನು ನಂಬಿದಂತೆ ಕಾಣುತ್ತದೆ. ಇದರ ಜೊತೆಗೆ ಖಾಸಗಿ ಆಸ್ಪತ್ರೆಗೆ ಹೋಗಲು ಹಣದ ಕೊರತೆಯಿಂದ ಅನೇಕ ರೋಗ ರುಜಿನಿಗಳಿಗೆ ತುತ್ತಾದ ಉದಾಹರಣೆಗಳು ಇದೆ. ಜಿಲ್ಲೆಯಲ್ಲಿ ಸಿಗುತ್ತವೆ, ಉದಾ: ೨೦೧೬ಜನವರಿ ತಿಂಗಳಲ್ಲಿ ಇಡೀ ರಾಜ್ಯದಲ್ಲಿಯೇ ದೇವದುರ್ಗ ತಾಲೂಕಿನಲ್ಲಿ ತಾಯಿ ಮಕ್ಕಳು ಅಪೌಷ್ಠಿಕತೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂಬ ವರದಿಗಳ ದಾಖಾಲಾಗಿದೆ.[೧೩]

ಕೋಷ್ಟಕ ೨.೮. ರಾಯಚೂರು ಜಿಲ್ಲೆಯ ಆರೋಗ್ಯ ಸೌಲಭ್ಯಗಳು

ಕ.ಸಂ	ತಾಲೂಕು	ಅಲೋಪತಿ ಆಸ್ಪತ್ರೆಗಳು		ಭಾ,ವೈ. ಪ. ಆಸ್ಪತ್ರೆಗಳು		ಖಾಸಗಿ ಆಸ್ಪತ್ರೆಗಳು		ಪ್ರಾಥಾಮಿಕ ಕೇಂದ್ರಗಳು		ಆರೋಗ್ಯ ಕೇಂದ್ರಗಳು	
		ಸಂಖ್ಯೆಗಳು	ಹಾಸಿಗೆಗಳು	ಸಂಖ್ಯೆಗಳು	ಹಾಸಿಗೆಗಳು	ಸಂಖ್ಯೆಗಳು	ಹಾಸಿಗೆಗಳು	ಸಂಖ್ಯೆಗಳು	ಹಾಸಿಗೆಗಳು	ಸಂಖ್ಯೆಗಳು	ಹಾಸಿಗೆಗಳು
೧	ದೇವದುರ್ಗ	೧	೧೦೦	೫	೦	೩	೫೪	೬	೩೬	೨	೬೦
೨	ಲಿಂಗಸೂಗೂರು	೧ಸ	೧೦೦	೫	೬	೧೨	೧೮೦	೧೨	೭೨	೨	೬೦
೩	ಮಾನವಿ	೧	೧೦೦	೫	೨೫	೭	೧೦೫	೯	೫೪	೧೧	೩೦
೪	ರಾಯಾಚೂರು	೧	೧೦೦೦	೫	೦	೪೩	೬೪೫	೮	೪೮	೨	೩೦
೫	ಸಿಂಧೂನೂರು	೧	೧೦೦	೧	೦	೨೫	೩೭೫	೧೧	೬೬	೦	೦
೬	ಒಟ್ಟು	೫	೧೪೦೦	೨೧	೩೧	೯೦	೧೩೫೦	೪೬	೨೭೬	೬	೧೮೦

(ಆಧಾರ: ರಾಯಾಚೂರ ಜಿಲ್ಲಾ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ, ೨೦೧೨-೧೩)

ವರದಿಯಲ್ಲಿ ಅಪೌಷ್ಠಿಕತೆ ಕಾರಾಳ ಸ್ವರೂಪ ಹೊರಹಾಕಿದೆ. ರಾಜ್ಯ ವ್ಯಾಪಿ ೬ ವರ್ಷದೊಳಗಿನ ಮಕ್ಕಳಲ್ಲಿ ಅಪೌಷ್ಠಿಕತೆ ಹೆಚ್ಚಿನ ಪ್ರಮಾಣದಲ್ಲಿದ್ದು, ರಾಜ್ಯದಲ್ಲಿಯೇ ರಾಯಚೂರು ಜಿಲ್ಲೆಯಲ್ಲಿ ಗರಿಷ್ಟ ೮.೮೧೦ ಮಕ್ಕಳು ಅಪೌಷ್ಠಿಕತೆಯ ಸಮಸ್ಯೆ ಎದುರಿಸುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವರದಿ ಪ್ರಕಾರ ೬ ವಯೋಮಾನದ ೨೧,೦೦,೮೧೮ ಸಾಮಾನ್ಯ ೧೧,೨೯,೯೪೭ ಮಧ್ಯಮ ೭೧,೬೦೫ ಕನಿಷ್ಠ ತೂಕವುಳ್ಳ ಮಕ್ಕಳಿದ್ದಾರೆ ಎಂದು ಗುರುತ್ತಿಸಿದೆ. ಇದರಲ್ಲಿ ೩೩,೦೪೯ ಗಂಡುಮಕ್ಕಳು ೩೮,೫೬೬ ಹೆಣ್ಣುಮಕ್ಕಳು ಇವೆ ಎಂದು ತಿಳಿಸಿದೆ, ಅಂದರೆ ವಹಿಸಬೇಕಾದ ಕಾಳಜಿ ವಹಿಸಿಲ್ಲ ಎಂದು ಆತಂಕ ವ್ಯಕ್ತಪಡಿಸಿದೆ. ಅದೇ ರೀತಿಯಾಗಿ ೨೦೧೩ರ ಸೆಪ್ಟಂಬರಿನಲ್ಲಿ ವರದಿ ಗೋಚರಿಸುತ್ತದೆ. ಜಿಲ್ಲಾ ಆರೋಗ್ಯ ಅಭಿಯಾನದ ಕಾರ್ಯಕಾರಿ ಸಮಿತಿ ಕಲೆಹಾಕಿದ, ಮಾಹಿತಿಯಂತೆ ಕಳೆದ ೫ ತಿಂಗಳಲ್ಲಿ ಜಿಲ್ಲೆಯಲ್ಲಿ ೧೪೬ ಶಿಶುಗಳು ಮೃತಪಟ್ಟಿವೆ ಈ ಪೈಕಿ ೧೪೬ ಶಿಶುಗಳು ಆಸ್ಪತ್ರೆಯಲ್ಲಿ ಹಾಗೂ ೪೨ ಮನೆಯಲ್ಲಿ ಕೊನೆಯುಸಿರೆಳೆದಿವೆ ಶಿಶುಮರಣ ಪ್ರಮಾಣದಲ್ಲಿ ಕರ್ನಾಟಕದ ರಾಯಚೂರು ಜಿಲ್ಲೆ ಮೊದಲು ಹಾಗೂ ಕೊಪ್ಪಳ ಎರಡನೆ ಸ್ಥಾನದಲ್ಲಿ ಉಡುಪಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಭಾರತದಲ್ಲಿ ಹುಟ್ಟಿದ್ದ ೧೦೦೦ ಮಕ್ಕಳಲ್ಲಿ ೪೮ ಮಕ್ಕಳು ಮೊದಲ ಹುಟ್ಟುಹಬ್ಬ ಆಚರಿಸಿಕೊಳ್ಳುವ ಮುನ್ನವೆ ಅಸುನೀಗುತ್ತವೆ. ನೂಮೇನಿಯಾ ಕಡಿಮೆ ತೂಕ, ನಂಜಾಗುವಿಕೆ, ಹೃದಯ ಸಂಬಂಧಿ ಕಾಯಿಲೆ ಮೊದಲಾದ ಗಂಭೀರ ಸಮಸ್ಯೆಗಳು ಜಿಲ್ಲೆಯಲ್ಲಿ ಗೋಚರಿಸುತ್ತವೆ.[೧೪]

ಆದಾಯ

ಬಡತನವು ಭಾರತ ದೇಶ ಎದುರಿಸುತ್ತಿರುವ ಅತ್ಯಂತ ಬೃಹತ್ ಮತ್ತು ತೀವ್ರತರವಾದ ಸಮಸ್ಯೆಯಾಗಿದೆ. ೧೯೯೦ರಿಂದ ಈಚೆಗೆ ಆರ್ಥಿಕ ಬೆಳವಣಿಗೆ ಸತತವಾಗಿ ಏರಿಕೆ ಕಂಡಿದ್ದರು ಬಡತನದ ಪ್ರಮಾಣದಲ್ಲಿ ಕುಸಿತ ನಿಧಾನಗತಿಯಲ್ಲಿ ಆಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಕೇವಲ ಆದಾಯ ಸಂಬಂಧಿ ಸೂಚಿಗಳಲ್ಲದೆ ಇತರ ಋಣಾತ್ಮಕ ಸೂಚಿಗಳಾದ ಜೀವಿತಾವದಿ ಮತ್ತು ಸಾಕ್ಷರತೆಯಲ್ಲೂ ಸಹ ನಿರೀಕ್ಷಿತ ಸುಧಾರಣೆಯಾಗಿಲ್ಲ. ೧೯೯೦ಕ್ಕಿಂತಲೂ ಪೂರ್ವದಲ್ಲಿ ಭಾರತ ಬಡತನ ನಿರುದ್ಯೋಗ ಮತ್ತು ಆದಾಯದ ಅಸಮಾನತೆ ಇರಲಿಲ್ಲವೆಂದಲ್ಲ. ಆದರೆ ಈಗಿರುವಷ್ಟು ಅಂತರ ಮತ್ತು ಅಸಮಾಧಾನ, ಅಸಹಾಯಕತೆ ಬೆಗುದಿ ಇರಲಿಲ್ಲ, ಈ ಹಿಂದೆ ಕೂಲಿ-ನಾಲಿ ಮಾಡಿ ಒಂದು ಒಪ್ಪತ್ತು ಊಟ ಮಾಡಿದರೂ ನೆಮ್ಮದಿಯ ಸಹಜೀವನ ಸಾಗಿಸಬಹುದಾಗಿತ್ತು. ಆದರೆ ಈಗ ಮೂರು ಒಪಪತ್ತು ಮೃಷ್ಟಾನ್ನ ಬೋಜನ ಊಟ ಮಾಡಿದರೂ ನೆಮ್ಮದಿಯುತ ಜೀವನ ಸಾಧ್ಯವಿಲ್ಲ ಎಂಬ ವಾತಾವರಣ ಸೃಷ್ಠಿಯಾಗಿದೆ. ಅದಕ್ಕೆ ಕಾರಣ (ಮೇಹತಾ) ಮತ್ತು ಸ್ವತ್ತುಗಳ ಅಲಭ್ಯತೆಯಿಂದ ಬಳಲುತ್ತಿದ್ದು, ಭೂಮಿ, ನೀರು ನೈರ್ಮಲ್ಯ, ವಸತಿ, ಆಧಾಯ, ಸಾಕ್ಷರತೆ, ದೀರ್ಘಾಯಸ್ಸು, ಧ್ವನಿ ಅಲ್ಲದೆ ಭೌತಿಕ ಹಾಗೂ ಸಾಮಾಜಿಕ ಬಂಡವಾಳದಿಂದ ಅವರು ವಂಚಿತರಾಗಿದ್ದಾರೆ. ಬಡತನವು ಕೆಲ ಪ್ರದೇಶಗಳಿಗೆ (ಗ್ರಾಮೀಣ) ಹಾಗೂ ಕೆಲವೆ ಜನಸಮುದಾಯಗಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೃಷಿಕಾರ್ಮಿಕರು) ಸೀಮಿತವಾಗಿರುವುದರಿಂದ ಬಡತನಕ್ಕೆ ತನ್ನದೇ ಆದ ಭೌಗೋಳಿಕ ಹಾಗೂ ಸಮಾಜಿಕ ಲಕ್ಷಣಗಳಿರುವುದು ಸರ್ವೇಸಾಮಾನ್ಯ

ಬಡತನವು ಗ್ರಾಮೀಣ ಭಾಗಗಳಲ್ಲಿ ಮತ್ತು ಸಮಾಜದ ಹಲವು ವರ್ಗಗಗಳಲ್ಲಿ ಕೇಂದ್ರೀಕೃತ ವಾಗಿರುವುದರಿಂದ ವಿಶ್ಲೇಷಕರು ಬಡತನ ಭೌಗೋಳಿಕ ಮತ್ತು ಸಾಮಾಜಿಕತೆಯ ಕುರಿತಾಗಿ ಮಾತನಾಡುತ್ತಾರೆ. ೨೦೦೮ರ ಯೋಜನಾ ಆಯೋಗದ ವರದಿ ಪ್ರಕಾರ ಬಡತನವು ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕ ಮತ್ತು ಕುಶಲಕರ್ಮಿ ಕುಟುಂಬಗಳಲ್ಲಿ ಮತ್ತು ನಗರಗಳಲ್ಲಿ ಅರೆ ಕಾಲಿಕ ಕೆಲಸಗಳಲ್ಲಿ ತೊಡಗಿಕೊಂಡಿರುವ ಕುಟುಂಬಗಳಲ್ಲಿ ಕೇಂದ್ರೀಕೃತವಾಗಿದೆ. ಈಗ ಅವರ ಜೀವನೋಪಾಯವು ಸುಭದ್ರವಾಗಿರುವುದಿಲ್ಲ, ಹಾಗಾಗಿ ಜನರು ಸ್ವತಃ ತಮ್ಮ ಸಾಮರ್ಥ್ಯ ಮತ್ತು ಆಯ್ಕೆಗಳ ವಿಸ್ತರಣೆಗೆ ಅವಕಾಶ ಕಲ್ಪಿಸಬೇಕು. ಆದ್ದರಿಂದ ಜನರ ಉದ್ಯೋಗ ಮತ್ತು ಆದಾಯ ಮತ್ತು ಸುರಕ್ಷತೆಯನ್ನು ಬಲಪಡಿಸುವುದು ಸಾರ್ವಜನಿಕ ನೀತಿಯ ಭಾಗವಾಗಬೇಕು. ಅಲ್ಲದೇ ಜನರು ಹೆಚ್ಚಾಗಿ ಸರ್ಕಾರ ಸರ್ಕಾರಿ ಸೌಲಭ್ಯಗಳನ್ನು ಅವಲಂಭಿಸದಂತೆ ಮತ್ತು ಸ್ವಸಾಮರ್ಥ್ಯ ಕೌಶಲ್ಯವನ್ನು ವೃದ್ಧಿಸಿಕೊಳ್ಳುವ ಯೋಜನೆಗಳನ್ನು ಜಾರಿಗೆ ತರುವುದು ಮುಖ್ಯವಾಗಿರುತ್ತದೆ. ಅಲ್ಲದೆ ಯೋಜನೆ ಜಾರಿಗೆ ತಂದರೆ ಅಷ್ಟ ಸಾಲದು ಅದರ ಮೌಲ್ಯಮಾಪನವಾಗಬೇಕು. ಅಂದಾಗ ಮಾತ್ರ ಅದರ ಸಾಧಕ-ಬಾಧಕಗಳು ಗೋಚರಿಸುತ್ತವೆ. ಅದೇ ರೀತಿಯಾಗಿ ರಾಷ್ಟ್ರದ ಆಧಾಯ ವೇಗವಾಗಿ ಬೆಳವಣಿಗೆ ಹೊಂದಿದ್ದರೂ, ಅದೇ ಬೆಳವಣಿಗೆಯ ಗತಿಯು ಪ್ರಾದೇಶಿಕವಾಗಿ, ಅಥವಾ ಜನರ ಸಮೂಹಗಳಿಗೆ ಅಥವಾ ಆರ್ಥಿಕ ವಲಯಗಳಿಗೆ ಅನ್ವಯಿಸುತ್ತದೆ ಎಂದು ಹೇಳಲು ಬರುವುದಿಲ್ಲ ಉದಾ: ೧೯೯೦ರ ನಂತರ ಪುರಾವೆಗಳ ಪ್ರಕಾರ ಬೆಳವಣಿಗೆ ಏಕ ರೂಪವಾಗಿಲ್ಲ. ಇದರ ಕಠೋರ ಪರಿಣಾಮವೆಂದರೆ ಕೃಷಿಬೆಳವಣಿಗೆ ಹೆಚ್ಚು ಕಡಿಮೆ ಕುಂಠಿತಗೊಳ್ಳುತ್ತಾ ಬರುತ್ತಿದೆ. ಇದರಿಂದ ಗ್ರಾಮೀಣ ಆರ್ಥಿಕತೆ ಕುಸಿಯುವ ಅಪಾಯದಲ್ಲಿದ್ದರೆ, ಮತ್ತೊಂದು ಕಡೆ ಕೃಷಿಯೇತರ ಬೆಳವಣಿಗೆ ಯಿಂದಾಗಿ ನಗರ ಆರ್ಥಿಕತೆ ವಿಸ್ತಾರಾಗೊಂಡಿದೆ ಮತ್ತೊಂದು ರೀತಿಯಲ್ಲಿ ಇದನ್ನು ವಿಶ್ಲೇಷಣೆ ಮಾಡುವುದಾದರೆ ನಗರ ಆರ್ಥಿಕತೆ ಕೃಷಿ ಉತ್ಪಾದನಾ ವಿಧಾನವನ್ನು ಅವಲಂಭಿಸಿದೆ.

ಹೀಗಾಗಿ ಸುಸ್ಥಿರ ಆರ್ಥಿಕೆಯನ್ನುವುದು ಅಥವಾ ಆಧಾಯವು ಜನರಿಗೆ ಸಮರ್ಪಕವಾಗಿ ದೊರೆಯಬೇಕಾದರೆ, ಜನರು ತೊಡಗಿಕೊಂಡಿರುವ ಉದ್ಯೋಗಗಳ ಲಾಭಾದಾಯಕವಾಗಿರಬೇಕು ಮತ್ತು ಸುಶಿಕ್ಷಿತವಾಗಿರಬೇಕು, ಹೀಗಾಗಿ ಜನರ ಜೀವನ ಮಟ್ಟವನ್ನು ನಿರ್ಧರಿಸುವಲ್ಲಿ ಉದ್ಯೋಗ ಮತ್ತು ನಿರುದ್ಯೋಗದ ಪ್ರಮಾಣಗಳು ಪ್ರಮುಖ ಪಾತ್ರ ವಹಿಸುತ್ತವೆ.[೧೫] ರಾಯಚೂರು ಜಿಲ್ಲೆಯ ವರಮಾನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ಏಕೀಕರಿಸಿ ನೋಡಬೇಕಾಗುತ್ತದೆ. ಯಾಕೆಂದರೆ ವರಮಾನದಲ್ಲಿ ಪ್ರಾದೇಶಿಕ ಅಥವಾ ವರಮಾನದಲ್ಲಿ ಅಸಮಾನತೆ ಕಂಡುಬರುತ್ತದೆ. ವರಮಾನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ತೋರಿಸುವ ಕ್ರಮವೆಂದರೆ ಒಟ್ಟು ವರಮಾನದಲ್ಲಿ ಹಿಂದುಳಿದ ಪ್ರದೇಶಗಳು ಪಡೆದಿರುವ ಪಾಲನ್ನು ಅವು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪಡೆದಿರುವ ಪಾಲಿಗೆ ಹೋಲಿಸಿ ಅಲ್ಲಿನ ಅಂತರವನ್ನು ಲೆಕ್ಕ ಹಾಕುವುದು, ಅದರ ಪ್ರಕಾರ ರಾಜ್ಯದ ಹಿಂದುಳಿದ ಬಿಜಾಪುರ ಬಾಗಲಕೋಟೆ, ಬೀದರ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ರಾಜ್ಯದ ಜನಸಂಖ್ಯೆಯಲ್ಲಿ ೨೦೦೭-೦೮ರಲ್ಲಿ ಪಡೆದಿದ್ದ ಪಾಲು ಶೇ.೨೪.೯೨ಆದರೆ

ಅವು ರಾಜ್ಯದ ವರಮಾನದಲ್ಲಿ ಪಡೆದಿದ್ದ ಪಾಲು ಮಾತ್ರ ಕೇವಲ ೧೬.೮೭ ಈ ಏಳು ಜಿಲ್ಲೆಗಳ ಸರಾಸರಿ ಒಟ್ಟು ಆಂತರಿಕ ತಲಾ ಉತ್ಪನ್ನ ೨೯.೧೧೩ರಷ್ಟಾಗುತ್ತದೆ, ಇದು ರಾಜ್ಯದ ಸರಾಸರಿ ತಲಾವರಮಾನದ ಶೇ.೬೯.೪೮ರಷ್ಟಾಗುತ್ತದೆ. ಹೇಗೆ ವರಮಾನದ ದೃಷ್ಟಿಯಿಂದಲೂ ಈ ಏಳು ಜಿಲ್ಲೆಗಳು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿವೆ. ಹಾಗೇ ನೋಡಿದರೆ ಈ ಏಳು ಜಿಲ್ಲೆಗಳು ೧೯೯೯-೨೦೦೦ರಲ್ಲಿ ರಾಜ್ಯದ ವರಮಾನದಲ್ಲಿ ಶೇ.೧೮.೬೧ರಷ್ಟು ಪಾಲು ಪಡೆದಿದ್ದವು, ಅಂದರೆ ರಾಜ್ಯದ ವರಮಾನದಲ್ಲಿ ಹಿಂದುಳಿದ ಏಳು ಜಿಲ್ಲೆಗಳು ಪಡೆದಿದ್ದ ಪಾಲು ೧೯೯೯-೨೦೦೦ರಿಂದ ೨೦೦೭-೦೮ರ ಅವಧಿಯಲ್ಲಿ ಶೇ ೧೮.೬೧ರಿಂದ ಶೇ.೧೬.೮೭ಕ್ಕೆ ಇಳಿದಿದೆ. ಇದು ವರಮಾನಕ್ಕೆ ಸಂಬಂಧಿಸಿದಂತೆ ಆತಂಕಕಾರಿ ಬೆಳವಣಿಗೆಯಾಗಿದೆ. ಅದೇ ರೀತಿಯಾಗಿ ೧೯೯೯-೨೦೦೦ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರಾಜ್ಯ ಮಟ್ಟದ ತಲಾ ಅನುಭೋಗ ಮಾಸಿಕ ಪರಿಶಿಷ್ಟ ಜಾತಿ ೪೮೯.೩೯ರೂ ಇತ್ತು ಅದೇ ರೀತಿಯಾಗಿ ಪರಿಶಿಷ್ಟ ಪಂಗಡ ೪೦೪.೨೮ರೂ ಇತ್ತು ಪರಿಶಿಷ್ಟ ಜಾತಿಯ ವಿವಿಧ ಗುಂಪುಗಳ ವರ್ಗೀಕರಣ ಗಮನಿಸಿದಾಗ ಮತ್ತು ಅದನ್ನು ಕುಟುಂಬಗಳ ಮಾದರಿಗೆ ಹೋಲಿಸಿದಾಗ ಅಸಮಾನತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ.[೧೬]

ಹೀಗಾಗಿ ರಾಜ್ಯದ ಆಧಾಯದಲ್ಲಿ ಜಿಲ್ಲೆಯ ಪಾಲು ೨೦೦೪-೦೫ ಮತ್ತು ೨೦೦೮-೦೯ರ ಅವಧಿಯಲ್ಲಿ ಶೇ. ೧.೮ರಿಂದ ಶೇ.೧.೭ಕ್ಕೆ ಇಳಿದಿದೆ ಜಿಲ್ಲೆಯ ತಲಾಧಾಯವು ರಾಜ್ಯದ ತಲಾಧಾಯಕ್ಕಿಂತ ಕಡಿಮೆ ಇದೆ. ತಲಾಧಾಯವನ್ನು ಗಮನಿಸಿದಾಗ ಅಸಮಾನತೆ ಸ್ಪಷ್ಟವಾಗಿ ಗೋಚರಿಸುತ್ತದೆ, ಎರಡು ವರ್ಷಗಳಲ್ಲಿ ರಾಯಚೂರು ತಾಲೂಕು ಗರಿಷ್ಠ ತಲಾದಾಯ ಹೊಂದಿದ್ದು, ನಂತರ ಮಾನ್ವಿ ತಾಲೂಕು ಬರುತ್ತದೆ. ಉಳಿದ ತಾಲೂಕುಗಳ ತಲಾದಾಯ ರೂ. ೨೦,೦೦೦ಕ್ಕಿಂತ ಕಡಿಮೆ ಇದೆ. ಲಿಂಗಸುಗೂರು ತಾಲೂಕು ಕನಿಷ್ಠ ತಲಾದಾಯ ಹೊಂದಿದೆ. ಆದರೆ ಬೆಳವಣಿಗೆ ದೃಷ್ಟಿಯಿಂದ ಸಿಂಧನೂರು ತಾಲೂಕು ಹೆಚ್ಚಿನ ಬೆಳವಣಿಗೆ ಸಾಧಿಸಿದೆ. ದೇವದುರ್ಗ, ಲಿಂಗಸುಗೂರು, ರಾಯಚೂರು ತಾಲೂಕುಗಳು ಕೂಡ ಸಾಪೇಕ್ಷ ಬೆಳವಣಿಗೆ ಹೊಂದಿದೆ. ಆದರೆ ಮಾನ್ವಿ ತಾಲೂಕು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಬೆಳವಣಿಗೆ ದರವನ್ನು ದಾಖಲಿಸಿದೆ. ಹಾಗಾಗಿ ರಾಯಚೂರು ಜಿಲ್ಲೆಯ ಆದಾಯ ತಲಾದಯ ಮತ್ತು ಉತ್ಪಾದನ ವಿಧಾನದಲ್ಲಿ ಯಾವಕಾಲದಲ್ಲಿಯೂ ಹೇಳಿಕೊಳ್ಳುವಂತಹ ಸಾಧನೆ ಕಂಡು ಬರುವುದಿಲ್ಲ. ಇದನ್ನು ಮೊದಲು ಪ್ರಾದೇಶಿಕ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಹೋಲಿಕೆ ಮಾಡುವ ಕ್ರಮದಿಂದ ನೋಡಬೇಕೆ ಹೊರತು ರಾಜ್ಯ ಮಟ್ಟದಿಂದ ಪ್ರಾದೇಶಿಕತೆಯನ್ನು ಹೋಲಿಕೆ ಮಾಡಬಾರದು ಇದೆ ಹೈದಾರ್‌ಬಾದ್ ಕರ್ನಾಟಕದ ದೃಷ್ಠಿಯಲ್ಲಿ ನಡೆದ ದುರಂತ. ಅಂದರೆ ಅಳತೆ ಮಾಡುವ ಕ್ರಮ ಅಥವಾ ಬದಲಾವಣೆಯ ಅಥವಾ ಮಾನದಂಡಗಳು ಬಲಾವಣೆಯಾಗಬೇಕು.[೧೭]

ಭೂ ಹಿಡುವಳಿ

ರಾಯಚೂರು ಜಿಲ್ಲೆಯ ವಿಸ್ತೀರ್ಣ ೮೩೫.೮೪೩ ಹೆಕ್ಟೇರ್ ಇದ್ದು ೨೦೧೨-೧೩ನೇ ಸಾಲಿನಲ್ಲಿ ೧೮.೧೬೭ ಹೆಕ್ಟೇರ್ ಅರಣ್ಯಭೂಮಿ ೨೦.೫೬೩ ಹೆಕ್ಟೇರ್ ವ್ಯವಸಾಯೇತರ ಭೂಮಿ, ೨೦.೦೮೪ ಹೆಕ್ಟೇರ್ ಬಂಜರು ಭೂಮಿ, ೧೦.೭೧೨ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ೧೯.೮೧೬ ಹೆಕ್ಟೇರ್ ಖಾಯಂ ಗೋಮಾಳ ಭೂಮಿ ೧೩.೬೮೪ ಹೆಕ್ಟೇರ್ ವೃಕ್ಷ ಮತ್ತು ತೋಪುಗಳಿವೆ ಅಲ್ಲದೆ ೨.೨೨.೭೧೦ ಹೆಕ್ಟೇರ್ ಸಾಗುವಳಿ ಜಮೀನು ಇದ್ದು ಇದರಲ್ಲಿ ೬.೬೨.೬೨೦ ಹೆಕ್ಟೇರ್ ಬಿತ್ತನೆಯಾಗಿದ್ದು, ಇದರಲ್ಲಿ ೫.೧೦.೧೦೭ ಹೆಕ್ಟೇರ್ ನಿವ್ವಳ ಬಿತ್ತನೆ ಮತ್ತು ೧.೫೨.೫೧೩ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾಗಿರುವ ಪ್ರದೇಶವಾಗಿದೆ.

ಕೋಷ್ಟಕ ೨.೯. ರಾಯಚೂರು ಜಿಲ್ಲೆಯ ಭೂಮಿ ವಿವರ ೨೦೧೨-೧೩ರ ಪ್ರಕಾರ

೨೦೧೨-೧೩ನೇ ಸಾಲಿನಲ್ಲಿ ಭೂಮಿಯ ಬಳಕೆ ಹೆಕ್ಟೇರಗಳಲ್ಲಿ					
ಸಾಗುವಳಿಗೆ ಲಭ್ಯವಿರುವ ಭೂಮಿ					
ಕ್ರಸಂ.	ತಾಲೂಕು	ಭೌಗೋಳಿಕ ವಿ.ಹೆ	ಅರಣ್ಯ	ವ್ಯವಸಾಯೇತರ	ಬಂಜರು
೧	೨	೩	೪	೫	೬
೧	ದೇವದುರ್ಗ	೧೫೦೯೭೯	೫೩೦೧	೪೯೯೯	೪೯೭೯
೨	ಲಿಂಗಸಗೂರು	೧೯೪೦೧೦	೯೦೭೭	೭೩೫೩	೫೬೫೬
೩	ಮಾನವಿ	೧೭೯೨೭೩	೨೩೧೩	೩೫೧೮	೬೧೨
೪	ರಾಯಚೂರು	೧೫೧೪೧೫	೪೦೧	೭೮೪	೧೩೮೮
೫	ಸಿಂಧನೂರು	೧೬೦೧೬೬	೧೦೭೫	೩೯೦೫	೭೪೪೯
	ಒಟ್ಟು	೮೩೫೮೪೩	೧೮೧೬೭	೨೦೫೬೩	೨೦೦೮೪

(ಆಧಾರ: ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ೨೦೧೨-೧೩ ರಾಯಚೂರು ಜಿಲ್ಲೆ)

ಭೂ ಹಿಡುವಳಿದಾರರು

ರಾಯಚೂರು ಜಿಲ್ಲೆಯಲ್ಲಿ ೨೦೦೫-೦೬ನೇ ಸಾಲಿನ ಕೃಷಿ ಗಣತಿ ಪ್ರಕಾರ ಒಟ್ಟು ೩.೩೨.೦೩೩ಭೂಹಿಡುವಳಿದಾರರು ೬.೯೫.೭೮೭ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತಾರೆ. ಜಿಲ್ಲೆಯಲ್ಲಿ ೧.೦೧.೪೨೨ ಅತಿ ಸಣ್ಣ ಹಿಡುವಳಿದಾರರಿದ್ದು (ಒಂದು ಹೆಕ್ಟೇರ್‌ಗಿಂತ ಕಡಿಮೆ) ಒಟ್ಟು ೫೮.೧೬೭ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತಾರೆ. ಅದೇ ರೀತಿಯಾಗಿ ಜಿಲ್ಲೆಯಲ್ಲಿ ಒಟ್ಟು ೧.೧೧.೮೫೯ ಸಣ್ಣ ಹಿಡುವಳಿದಾರರಿದ್ದು (೧ರಿಂದ೨ ಹೆಕ್ಟೇರ್‌ವರೆಗೆ) ಒಟ್ಟು ೧.೬೦.೦೭೮ ಹೆಕ್ಟೇರ್ ವಿಸ್ತೀರ್ಣವನ್ನು

ಹೊಂದಿರುತ್ತಾರೆ. ಅದರಂತೆ ಜಿಲ್ಲೆಯಲ್ಲಿ ಒಟ್ಟು ೭೮.೫೧೯ ಅರೆ ಮಧ್ಯಮ ಹಿಡುವಳಿದಾರರಿದ್ದು (೨-೪ ಹೆಕ್ಟೇರಗಳು) ೨.೧೨.೭೭೦ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತಾರೆ. ಅದೇ ರೀತಿಯಾಗಿ ಜಿಲ್ಲೆಯಲ್ಲಿ ಒಟ್ಟು ೩೫.೭೬೫ ಮಧ್ಯಮ ಹಿಡುವಳಿದಾರರಿದ್ದು (೪ರಿಂದ ೧೦ ಹೆಕ್ಟೇರ್‌ವರೆಗೆ) ಒಟ್ಟು ೨.೦೫.೩೫೦ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತಾರೆ. ಅದೇ ರೀತಿಯಗಿ ಜಿಲ್ಲೆಯಲ್ಲಿ ಒಟ್ಟು ೪.೪೬೮ ದೊಡ್ಡ ಹಿಡುವಳಿದಾರರಿದ್ದು (೧೦ ಹೆಕ್ಟೇರಿಗಿಂತ ಹೆಚ್ಚು) ಅಂದರೆ ೨೫ ಎಕರಗಳಿಗಿಂತ ಹೆಚ್ಚು ಭೂಮಿಯನ್ನು ಹೊಂದಿರುವವರು) ಒಟ್ಟು ೫೯.೪೩೦ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತಾರೆ. ಹೀಗಾಗಿ ಜಿಲ್ಲೆಯಲ್ಲಿ ಒಟ್ಟು ಭೂಮಿಯಲ್ಲಿ ಶೇ. ೫ರಷ್ಟು ಅರಣ್ಯವಿದೆ ಶೇ ೪ರಷಟು ಭೂಮಿ ಸಾಗುವಳಿಗೆ ಒಳಪಟ್ಟಿಲ್ಲ ಮತ್ತು ಶೇ ೬ರಷ್ಟು ಸಾಗುವಳಿಗೆ ಯೋಗ್ಯವಲ್ಲದ ಭೂಮಿಯಿದೆ ಮತ್ತು ಶೇ ೨೮ರಷ್ಟು ಪ್ರಸಕ್ತ ಬೀಳು ಭೂಮಿಯಿದೆ. ಶೇ. ೫೫ರಷ್ಟು ನಿವ್ವಳ ಬಿತ್ತನೆಗೆ ಒಳಪಟ್ಟಿದೆ, ಅಂದರೆ ಭೂಮಿಯಲ್ಲಿ ೪.೫೮ ಲಕ್ಷ ಹೆಕ್ಟೇರ್ ಭೂಮಿ ನಿವ್ವಳ ಬಿತ್ತನೆಯಾಗಿದೆ. ಶೇ.೨ರಷ್ಟು ಭೂಮಿ ಶಾಶ್ವತ ಬಳಕೆಗೆ ಬರುವುದಿಲ್ಲ. ೨೦೧೧-೧೨ರ ಅಂಕಿ ಅಂಶಗಳ ಪ್ರಕಾರ ರಾಯಚೂರು ಜಿಲ್ಲೆಯ ಭೂಮಿ ಬಳಕೆಯಲ್ಲಿ ಒಟ್ಟು ೨.೮೦ಲಕ್ಷ ಹೆಕ್ಟೇರ್ ಪ್ರಸಕ್ತ ಬೀಳು ಭೂಮಿಯಿದೆ. ೪.೫೮ ಲಕ್ಷದಷ್ಟು ನಿವ್ವಳ ಬಿತ್ತನೆಯಾಗಿದೆ. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯಲ್ಲಿ ೨೦೧೨-೧೩ನೇ ಸಾಲಿನಲ್ಲಿ ಒಟ್ಟು ನೀರಾವರಿಯಾದ ಪ್ರದೇಶ ಕಾಲುವೆಗಳಿಂದ ೧೪೩೪೪೯ ಹೆಕ್ಟೇರ್ ಕೆರೆಗಳಿಂದ ೨.೩೨೪ ಹೆಕ್ಟೇರ್, ಭಾವಿಗಳಿಂದ ೯೬೦೪ ಹೆಕ್ಟೇರ್ ಕೊಳವೆ ಭಾವಿಗಳಿಂದ ಪ೨೨.೮೮೫ ಹೆಕ್ಟೇರ್, ಏತ ನೀರಾವರಿ ೧೧.೨೩೧ ಹೆಕ್ಟೇರ್ ನಿವ್ವಳ ಭೂಮಿಯಾಗಿದೆ.[೧೮]

ಪರಿಶಿಷ್ಟರ ಭೂ ಒಡೆತನ ಮಾದರಿಗಳು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಾತಿಗಳ ಭೂ ಒಡೆತನ ಮತ್ತು ಭೂಮಿಯ ಮಾದರಿಗಳನ್ನು ಅವಲೋಕಿಸಿದರೆ ಅಂತಹ ಹೇಳಿಕೊಳ್ಳುವಂತಹ ಅಥವಾ ಸಾಧಾರಣ ಎನ್ನುವ ಸ್ಥಿತಿ ಇಲ್ಲ ಯಾಕೆಂದರೆ ಅನೇಕ ಅಧ್ಯಯನಗಳು ಮತ್ತು ವರದಿಗಳು ಪರಿಶಿಷ್ಟ ದುಸ್ಥಿತಿಗೆ ಭೂಒಡೆತನದ ಮಾದರಿಗಳೇ ಕಾರಣ ಎಂದು ಸಾರಿವೆ. ಹಾಗಾಗಿ ರಾಜ್ಯ ಮಟ್ಟದಲ್ಲಿ ಭೂ ಒಡೆತನದ ಮಾದರಿಗಳನ್ನು ಅವಲೋಕಿಸಿದಾಗ ಕರ್ನಾಟಕದಲ್ಲಿ ಕೃಷಿ ಭೂಮಿಯ ಒಡೆತನವು ಪರಿಶಿಷ್ಟಜಾತಿಗಳಲ್ಲಿ ಕನಿಷ್ಠ ತಮವಾಗಿದ್ದು, ಬಹುತೇಕವಾಗಿ ಈ ವರ್ಗಗಳಲ್ಲಿ ಸಣ್ಣ ಹಾಗೂ ಅತಿ ಸಣ್ಣ ಮತ್ತು ಆರ್ಥಿಕವಾಗಿ ಲಾಭದಾಯಕವಲ್ಲದ ಹಿಡುವಳಿಗಳನ್ನು ಹೊಂದಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ೭೦.೭೯ಲಕ್ಷ ಸಾಗುವಳಿ ಹಿಡುವಳಿದಾರರ ಪೈಕಿ ಒಪರಿಶಿಷ್ಟ ಜಾತಿಗಳು ಕೇವಲ ೮.೨೩ಲಕ್ಷ ಅಂದರೆ (ಶೇ.೧೧.೬೫) ಸಾಗುವಳಿ ಹಿಡುವಳಿಗಳನ್ನು ಹೊಂದಿದ್ದರು ಎಂದು ೨೦೦೧ರ ಜನಗಣತಿ ಬಹಿರಂಗ ಪಡಿಸುತ್ತದೆ ಒಟ್ಟು ೧೨೩.೦೨ ಲಕ್ಷ ಹೆಕ್ಟೇರ್ ಸಾಗುವಳಿ ಪ್ರದೇಶದ ಪೈಕಿ ಪರಿಶಿಷ್ಟ ಜಾತಿಗಳು ಕೇವಲ ೧೦.೭೧ ಲಕ್ಷ ಹೆಕ್ಟೇರ್‌ಗಳಷ್ಟು ಸಾಗುವಳಿ ಪ್ರದೇಶವನ್ನು ಹೊಂದಿದ್ದರು. ಅದು ಕೆವಲ ಶೇ.೮.೭ ರಷ್ಟಾಗುತ್ತದೆ. ೨೦೦೧ರ ಜನಗಣತಿ ಪ್ರಕಾರ ರಾಜ್ಯದ ಪರಿಶಿಷ್ಟ ಪರಿಶಿಷ್ಟ ಜಾತಿಯ ಜನಸಂಖ್ಯೆಯ ಪ್ರಮಾಣ ಶೇ. ೧೬.೨೧ರಷ್ಟಾಗಿರುವುದರಿಂದ ಅವರ ಕೃಷಿ ಭೂಮಿ

ಒಡೆತನವು ಅವರ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳಲ್ಲದವರು ಕ್ರಮವಾಗಿ ಶೇ ೪೫ ಹಾಗೂ ಶೇ ೨೬ರಷ್ಟು ಸಣ್ಣ ಹಾಗೂ ಅತಿ ಸಣ್ಣ ಹಿಡುವಳಿಗಳನ್ನು ಹೊಂದಿದ್ದಾರೆ. ಅದೇ ರೀತಿಯಾಗಿ ಶೇ.೫೨ರಷ್ಟು ಅತಿಸಣ್ಣ ಹಿಡುವಳಿಗಳ ಪೈಕಿ ಪರಿಶಿಷ್ಟ ಜಾತಿಗಳು ಶೇ ೩೦ರಷ್ಟು (ಅಂದರೆ ಒಂದು ಹೆಕ್ಟೇರ್) ಸಾಗುವಳಿ ಹಿಡುವಳಿಗಳನ್ನು ಹೊಂದಿದ್ದಾರೆ. ಪರಿಶಿಷ್ಟ ಜಾತಿಗಳಲ್ಲಿ ಬಹುತೇಕವಾಗಿ ಸಣ್ಣ ಅತಿಸಣ್ಣ ಕೃಷಿಕರಾಗಿದ್ದು, ಅವರ ಹಿಡುವಳಿಗಳು ಆರ್ಥಿಕವಾಗಿ ಲಾಭದಾಯಕವಾಗಿಲ್ಲ ಮತ್ತು ಅವು ಅವರನ್ನು ಸಾಲಗಾರರನ್ನಾಗಿ ಮಾಡಿ ಬಡತನದ ಕೂಪಕ್ಕೆ ತಳ್ಳಿವೆ. ಬಹುತೇಕರಲ್ಲಿ ಕೇವಲ ೨-೩ ಎಕರೆ ಭೂಮಿಯೂ ಇದೆ. ಆದರೆ ಅದು ಅವರ ಆರ್ಥಿಕತೆಯನ್ನು ವೃದ್ಧಿಸುತ್ತದೆ ಎಂದು ಹೇಳಲು ಬರುವುದಿಲ್ಲ ಬಹುತೇಕ ಅಧ್ಯಯನಗಳು ಮತ್ತು ವರದಿಗಳು ಪರಿಶಿಷ್ಟರು ಹೊಂದಿರುವ ಭೂಮಿ ನೀರಾವರಿಯಾಗಿಲ್ಲ. ಒಂದುವೇಳೆ ನೀರಾವರಿಯಾಗಿದ್ದರೆ ಅದು ಟೀ ಲ್ಯಾಂಡ್ ಭೂಮಿಯಾಗಿರುತ್ತದೆ.(ಅಂದರೆ ಅರ್ಧಮರ್ದ) ಮೇಲಿನ ಹೊಲದವರು ಬಿಟ್ಟರೆ ನೀರು; ಇಲ್ಲದಿದ್ದರೆ ಇಲ್ಲ. ಯಾಕೆಂದರೆ ಪರಿಶಿಷ್ಟ ಜಾತಿಗಳ ಕೇರಿ ಊರ ಹೊರಗೆ ಇದ್ದ ಹಾಗೆ ಅವರ ಭೂಮಿಯೂ ಸಹ ಮೇಲ್ವರ್ಗದವರ ಹೊಲದ ಕೆಳಗೆ ಬಾಲದ ರೀತಿಯಲ್ಲಿ ಇರುತ್ತದೆ ಮತ್ತು ಇನಾಮ್ ಭೂಮಿಯು ಸಹ ಇದೇ ರೀತಿಯಾಗಿ ಇದೆ. ಸರ್ಕಾರ ಪರಿಶಿಷ್ಟರ ಭೂಒಡೆತನ ಯೋಜನೆಯಲ್ಲಿ ನೀಡಿರುವ ಭೂಮಿಯು ಸಹ ಸೌಳು, ಜೌಗು, ಕಲ್ಲುಮಿಶ್ರಿತ ಮರಳು ಮಿಶ್ರಿತ ಮತ್ತು ಸಾಗುವಳಿಗೆ ಯೋಗ್ಯವಲ್ಲದ ಭೂಮಿ ಹೊಂದಿರುತ್ತಾರೆ. ಹಾಗಾಗಿ ಅವರ ಪರಕೀಯರ ಭೂಮಿಯಲ್ಲಿ ಕೃಷಿ ಕೂಲಿಕಾರರಾಗಿದ್ದಾರೆ. ಭಾರತದ ಬಹುತೇಕ ಭಾಗಗಳಲ್ಲಿ ಆರ್ಥಿಕ ಸ್ಥಾನಮಾನ ಮತ್ತು ಆರ್ಥಿಕ ಹಂಚಿಕೆಗಳ ರಚನೆ ನಡುವೆ ಸಹ ಸಂಬಂಧವಿಲ್ಲ. ಯಾಕೆಂದರೆ ಐತಿಹಾಸಿಕವಾಗಿ ನೋಡಿದರೆ, ಉದ್ಯೋಗ, ಆದಾಯ ಆಸ್ತಿ ಇವುಗಳಲ್ಲಿ ಕೆಳಜಾತಿಗಳಿಗೆ ಹೋಲಿಸಿದರೆ, ಮೇಲ್ಜಾತಿಗಳು ಅಧಿಕವಾಗಿ ಹೊಂದಿದ್ದಾರೆ.[೧೯] ಅದೇ ರೀತಿಯಾಗಿ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಭೂಮಿ ಮತ್ತು ಭೂ ಒಡೆತನದ ಮಾಧರಿಯನ್ನು ವಿಶ್ಲೇಷಿಸುತ್ತಾ, ಜಿಲ್ಲೆಯ ಒಟ್ಟು ೭೧೦೪ ದೊಡ್ಡ ಭೂಹಿಡುವಳಿಧಾರರಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯರು ಮತ್ತು ಪುರುಷರು ಸೇರಿ ೧೩೩ ಜನರಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳು ಅತ್ಯಂತ ಕಡಿಮೆ ಭೂ ಹಿಡುವಳಿ ಹೊಂದಿರುವ ವರ್ಗವಾಗಿದೆ. ಅದೇ ರೀತಿ ಪರಿಶಿಷ್ಟ ಪಂಗಡದಲ್ಲಿ ೪೩೫ ಜನರರಿದ್ದಾರೆ.

ದೊಡ್ಡ ಹಿಡುವಳಿದಾರರಲ್ಲಿ ಇತರೆ ಜನಾಂಗಕ್ಕೆ ಸೇರಿದ ಒಟ್ಟು ೩೩೭೧ ಜನರಿದ್ದು, ಒಟ್ಟು ೫.೧೩ಲಕ್ಷ ಹೆಕ್ಟೇರ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ಜಿಲ್ಲೆಯ ಬಹುತೇಕ ಭೂಮಿ ಇತರೆ ಜನಾಂಗದವರ ಹಿಡಿತದಲ್ಲಿದೆ. ಈ ಜಿಲ್ಲೆಯಲ್ಲಿ ಇತರೆ ವರ್ಗಗಳಲ್ಲಿ ಲಿಂಗಾಯತ ಪ್ರಭಲ ಮತ್ತು ಪ್ರಮುಖ ಜಾತಿಯಾಗಿದ್ದು. ಅತಿ ಹೆಚ್ಚು ದೊಡ್ಡ ಭೂಹಿಡುವಳಿಗಳನ್ನು ಹೊಂದಿದಾರೆ. ಜಿಲ್ಲೆಯಲ್ಲಿ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರು ಅಧಿಕ ಸಂಖ್ಯೆಯಲ್ಲಿದ್ದು ಕಡಿಮೆ ಭೂಒಡೆತನ ಹೊಂದಿದ್ದಾರೆ. ಇದು ಭೂಮಿಯಂತ ಇದು ಸಂಪತ್ತಿನ ಅಸಮಾನ ಹಂಚಿಕೆಯನ್ನು ಸೂಚಿಸುತ್ತದೆ.

ಒಂದು ಹೆಕ್ಟೇರ್‌ಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿಯ ಅತಿ ಸಣ್ಣ ಹಿಡುವಳಿದಾರರಲ್ಲಿ ದೇವದುರ್ಗ ತಾಲೂಕು ೪೭೬೫ ಪುರುಷರಿದ್ದು ೨೭೮೮ ಹೆಕ್ಟೇರ್ ಭೂಮಿಯನ್ನು ಹೊಂದಿದ್ದಾರೆ. ಅದೇರೀತಿ ೭೫೨ ಅತಿ ಸಣ್ಣ ಮಹಿಳಾ ಹಿಡುವಳಿದಾರರಿದ್ದು ೪೬೩ ಹೆಕ್ಟೇರ್ ಭೂಮಿಯನ್ನು ಹೊಂದಿದ್ದಾರೆ. ಅದೇ ರೀತಿ ಸಿಂಧನೂರು ತಾಲೂಕಿನಲ್ಲಿ ೨೦೫೩ ಪುರುಷರಿದ್ದು ೧೨೪೫ ಹೆಕ್ಟೇರ್ ಭೂಮಿಯನ್ನು ಹೊಂದಿದ್ದಾರೆ. ಅದರಂತೆ ೭೨ ಮಹಿಳೆಯರು ೪೩೪ ಹೆಕ್ಟೇರ್ ಭೂಮಿಯನ್ನು ಹೊಂದಿದ್ದಾರೆ. ಜಿಲ್ಲೆಯ ೫ ತಾಲೂಕುಗಳಲ್ಲಿ ಪರಿಶಿಷ್ಟ ಜತಿಗೆ ಸೇರಿದ ಅತಿ ಸಣ್ಣ ಹಿಡುವಳಿದಾರರಿದ್ದಾರೆ. ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ತಾಲೂಕು ಎಂದು ಹೇಳುವ ದೇವದುರ್ಗ ತಾಲೂಕಿನಲ್ಲಿ ೩೧೫೫ ಪರಿಶಿಷ್ಟಜಾತಿಯ ಅತಿ ಸಣ್ಣ ಹಿಡುವಳಿದಾರರಿದ್ದಾರೆ. ಮತ್ತು ೫೨೮೬ ಪರಿಶಿಷ್ಟ ಪಂಗಡದ ಅತಿ ಸಣ್ಣ ಹಿಡುವಳಿದಾರರಿದ್ದಾರೆ. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯಲ್ಲಿ ಭೂರಹಿತ ಕುಟುಂಬಗಳನ್ನು ಸಹ ಕಾಣಬಹುದು.[೨೦]

ರಾಯಚೂರು ಜಿಲ್ಲೆಯಲ್ಲಿ ಭೂರಹಿತ ಕುಟುಂಬಗಳ ಸಂಖ್ಯೆ ಅಂದಾಜು ೩೧.೮೩೧ ಆಗಿದ್ದು, ಇದು ಒಟ್ಟು ಜನಗಣತಿಯ ಶೇ. ೯ರಷ್ಟಾಗುತ್ತದೆ. ಈ ಮಾಹಿತಿ ನಿಖರವಾಗಿಲ್ಲ. ಜನಗಣತಿಯಲ್ಲಿನ ಒಟ್ಟು ಕುಟುಂಬಗಳ ಸಂಖ್ಯೆಯಿಂದ ಕೃಷಿಗಣತಿ ನೀಡುವ ಹಿಡುವಳಿಗಳ ಸಂಖ್ಯೆಯಿಂದ ಕಳೆದರೆ ಪರೋಕ್ಷವಾಗಿ ಭೂರಹಿತರ ಸಂಖ್ಯೆ ಲೆಕ್ಕಹಾಕಬಹುದು ಎಂಬ ವಿಧಾನದಿಂದ ಈ ಸಂಖ್ಯೆಯನ್ನು ನೀಡಲಾಗಿದೆ. ಆದರೆ ವಾಸ್ತವವಾಗಿ ಇದಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಕಾಣಬಹುದು. ಯಾಕೆಂದರೆ ಭೂಮಿಗೆ ಸಂಬಂಧಿಸಿದಂತೆ ಈ ರೀತಿಯ ವಾಸ್ತವಾಂಶಗಳು ಕೇವಲ ರಾಯಚೂರು ಜಿಲ್ಲೆಗೆ ಸೀಮಿತವಾಗಿ ಇಡೀ ಹೈದ್ರಾಬಾದ್ ಕರ್ನಾಟಕದಲ್ಲಿ ಇದೇ ರೀತಿಯ ಸತ್ಯಾಂಶಗಳನ್ನು ಹೊರ ಹಾಕುತ್ತದೆ. ಯಾಕೆಂದರೆ ಈ ಜಿಲ್ಲೆ ಮತ್ತು ಈ ಪ್ರದೇಶ ಹೈದಾರಬಾದ್ ನಿಜಾಮನ ಆಡಳಿತಕ್ಕೆ ಸೇರಿತ್ತು. ಹಾಗಾಗಿ ನಿಜಾಮನ ಆಡಳಿತದಲ್ಲಿ ಹೆಚ್ಚಾಗಿ ಮೇಲ್ವರ್ಗದ ಜನರು ನಿಜಾಮನ ಹೆಸರಿನಲ್ಲಿ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡರು ಅವರನ್ನು ಈಗಲೂ ಜಮೀನ್ದಾರರು, ಜಾಗೀರದಾರರು, ನಾಡಗೌಡರು ಮಾಲಿಗೌಡರು, ಪೊಲೀಸ್‌ಗೌಡರು, ದೇಸಾಯಿಗಳು, ಭೂಮಾಲಿಕರು ಎಂದು ಕರೆಯಲಾಗುತ್ತದೆ. ಹೀಗಾಗಿ ಕೆಳವರ್ಗ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ಭೂಮಿಯಿಂದ ವಂಚಿತರಾದರು, ಹೀಗಾಗಿ ಅಭಿವೃದ್ಧಿ ಮತ್ತು ಭೂಸಂಬಂಧದ ಫಲಗಳು ಇಲ್ಲಿ ಪರಿಶಿಷ್ಟ ಜಾತಿ/ಜನಾಂಗಗಳಿಗೆ ತಲುಪುತ್ತಿಲ್ಲ. ಎಂಬುದು ಸರ್ಕಾರದ ಅಂಕಿ ಅಂಶಗಳು ಹೇಳುತ್ತವೆ. ಹಾಗಾಗಿ ಪರಿಶಿಷ್ಟರ ಭೂ ಸಂಬಂಧ ಆರ್ಥಿಕ ರಚನೆ ಮತ್ತು ಉದ್ಯೋಗಕ್ಕೆ ಸಹ ಸಂಬಂಧ ಕಲ್ಪಿಸಿ ನೋಡುವ ಅಗತ್ಯವಿದೆ.[೨೧]

ದುಡಿಮೆ ಮತ್ತು ಉದ್ಯೋಗದ ರಾಚನಿಕ ಸ್ವರೂಪ

ಒಂದು ದೇಶದ ಅಭಿವೃದ್ಧಿಯನ್ನು ಅದರ ಆರ್ಥಿಕತೆ ಬೆಳವಣಿಗೆ ಮತ್ತು ಆರ್ಥಿಕ ಸಂಪನ್ಮೂಲಗಳು ಜನರಿಗೆ ಲಭ್ಯತೆಯ ಆಧಾರದ ಮೇಲೆ ಅಳೆಯಲಾಗುತ್ತದೆ. ಒಂದು ಆರ್ಥಿಕತೆಯಲ್ಲಿ ಜನರ ಜೀವನ ಮಟ್ಟವನ್ನು ಸೂಚಿಸುವ ಬಹುಮುಖ್ಯ ಸಂಗತಿಯೆಂದರೆ, ಉದ್ಯೋಗ ಮತ್ತು ದುಡಿಮೆಗಾರರ

ವೃತ್ತಿವಾರು ವರ್ಗೀಕರಣ, ಪ್ರಸ್ತುತ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸಂಬಂಧಿಸಿದಂತೆ ಕೃಷಿ ಅವಲಂಬನೆ, ಕೃಷಿ ಕಾರ್ಮಿಕರ ಪ್ರಮಾಣ ದುಡಿಮೆ ಸಹಭಾಗಿತ್ವ ಮುಂತಾದ ಸಂಗತಿಗಳನ್ನು ಚರ್ಚಿಸಬೇಕಾಗುತ್ತದೆ.

ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದಲ್ಲಿ ಕೃಷಿಯ ಅವಲಂಬನೆ ಯಾವ ಆರ್ಥಿಕತೆಯಲ್ಲಿ ಅಧಿಕ ವಿರುತ್ತದೆಯೋ, ಅದನ್ನು ಹಿಂದುಳಿದ ಆರ್ಥಿಕತೆಯೆಂದು ಗುರುತಿಸುತ್ತಾ ಬರಲಾಗಿದೆ. ಈ ಪ್ರಮೇಯ ಆಧಾರದ ಮೇಲೆ ಆರ್ಥಿಕತೆಯೊಂದರ ಜನರ ಬದುಕಿನ ಸ್ಥಿತಿಯನ್ನು ಅವರ ಕೃಷಿ ಅವಲಂಬನೆ ಪ್ರಮಾಣದಿಂದ ತೋರಿಸಬಹುದು ಆರ್ಥಿಕ ಸಿದ್ಧಾಂತದ ಪ್ರಕಾರ ಆರ್ಥಿಕತೆಯ ಅಭಿವೃದ್ಧಿ ಮಟ್ಟ ಹಾಗೂ ಗತಿ ಉನ್ನತ ಮಟ್ಟತಲುಪಿದಾಗ ಅಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಕಡಿಮೆಯಾಗಿ ಕೃಷಿಯೇತರ ಚಟುವಟಿಕೆಗಳನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಅಧಿಕವಾಗುತ್ತದೆ. ಇದನ್ನು ಆರ್ಥಿಕ ವ್ಯವಸ್ಥೆಯಲ್ಲಿ ವೃತ್ತಿ ರಚನಾ ಪರಿವರ್ತನಾ ಸಿದ್ಧಾಂತವೆಂದು ಕರೆಯಲಾಗಿದೆ. ಕೊಲನ್‌ಕ್ಲಾರ್ಕ್, ಸ್ಟೆಮನ್ ಕುಜ್ನೆಟ್ಸ್ ಇದರ ಪ್ರತಿಪಾದಕರಾಗಿದ್ದಾರೆ. ಒಟ್ಟಾರೆಯಾಗಿ ಆರ್ಥಿಕ ಸಿದ್ದಾಂತ ಮತ್ತು ಅರ್ಥಶಾಸ್ತ್ರಜ್ಞರು ಅಭಿವೃದ್ಧಿಯನ್ನು ಉತ್ಪಾದನೆ ಮತ್ತು ವಿತರಣೆ ನೆಲೆಯಲ್ಲಿ ನಿರ್ವಚಿಸಿದ್ದಾರೆ. ಹಾಗಾಗಿ ಉದ್ಯೋಗ ಮತ್ತು ದುಡಿಮೆಯ ರಾಚನಿಕ ಸ್ವರೂಪವನ್ನು ಅಭಿವೃದ್ಧಿ ಸಿದ್ದಾಂತ ಪರಿಗಣಿಸುವುದಿಲ್ಲ. ಹಾಗಾಗಿ ಜನರು ಅಭಿವೃದ್ಧಿಯ ನೆಲೆಯಿಂದ ದೂರ ಉಳಿಯುತ್ತಾರೆ. ಉದಾ: ಭಾರತದ ಜನಸಂಖ್ಯೆ ೨೦೧೧ರ ಜನಗಣತಿ ಪ್ರಕಾರ ೧೨೧ಕೋಟಿ ಇದೆ. ಆದರೆ ಸರಕಾರಿ ಉದ್ಯೋಗದಲ್ಲಿರುವವರ ಸಂಖ್ಯೆ ೭ ಕೋಟಿ ಇದೆ ಅಂದರೆ ಉಳಿದ ೧೧೬ ಕೋಟಿ ಜನ ಅಸಂಘಟಿತ ಅರೆ ಉದ್ಯೋಗ, ಖಾಸಗಿ ಉದ್ಯೋಗಗಳು ಮತ್ತು ನಿರುದ್ಯೋಗಿಗಳನ್ನು ಒಳಗೊಂಡಿದೆ. ಹೀಗಾಗಿ ಬಡತನ ನಿರುದ್ಯೋಗ ಹಸಿವು, ಅಪೌಷ್ಠಿಕತೆ ಜೀವನಾಯಸ್ಸು ಕಡಿಮೆ ಮತ್ತು ರೋಗರುಜಿನಗಳಿಂದ ಬಳಲುತ್ತಾರೆ. ಅದೇ ಒಂದು ಕುಟುಂಬಕ್ಕೆ ಒಂದು ಉದ್ಯೋಗ ಸರಕಾರ ಕೊಟ್ಟರೆ ಅಥವಾ ಉದ್ಯೋಗ ಅವಕಾಶವನ್ನು ಸೃಷ್ಟಿಸಿದರೆ ಎಲ್ಲರು ಎಲ್ಲಾ ರೀತಿಯಿಂದ ಸುಖವಾಗಿರಬಹುದು.

ಅದೇ ರೀತಿಯಾಗಿ ದೇಶದಲ್ಲಿ ೨೨ ಕೋಟಿ ದಲಿತರಿದ್ದಾರೆ. ಅದರಲ್ಲಿ ಕೇವಲ ೧೨ ಲಕ್ಷ ದಲಿತರು ಮಾತ್ರ ಸಾರ್ವಜನಿಕ ವಲಯ ಅಥವಾ ಸರಕಾರಿ ನೌಕರಿಯಲ್ಲಿದ್ದಾರೆ. ಅಂದರೆ ೨೧ ಕೋಟಿ ೮೮.೦೦೦೦ಲಕ್ಷ ದಲಿತರು ಕೃಷಿ ಮತ್ತು ದಿನಗೂಲಿ ಅಥವಾ ಅರೆ ಉದ್ಯೋಗ ಜೀತ ಅಸುರಕ್ಷಿತ ಉದ್ಯೋಗ ಅಭದ್ರತೆ ಮುಂತಾದ ಸಮಸ್ಯೆಗಳ ಸುಳಿಯಲ್ಲಿ ಸಿಲಿಕಿದ್ದಾರೆ. ಹೀಗಾಗಿ ಸರಕಾರ ಕೃಷಿ ಉದ್ಯೋಗವಾಗಲಿ ಅಥವಾ ಇನ್ನಾವುದೇ ಉದ್ಯೋಗವಾಗಲಿ ದೇಶದ ಎಲ್ಲರಿಗೂ ಭದ್ರತೆ ಒದಗಿಸಬೇಕು, ಕರ್ನಾಟಕದಲ್ಲಿಯೂ ದುಡಿಮೆಯ ರಾಚನಿಕ ಸ್ವರೂಪ ಇದೇ ಮಾಧರಿಯಲ್ಲಿದೆ, ದುಡಿಮೆ ಮತ್ತು ಉದ್ಯೋಗದ ಬಗ್ಗೆ ಗಂಭೀರ ಚರ್ಚೆ ಮತ್ತು ತೀರ್ಮಾನ ತೆಗೆದುಕೊಳ್ಳುವ ಅಗತ್ಯವಿದೆ. ಇದನ್ನು ಕೇಂದ್ರ ಮತ್ತು ರಾಜ್ಯ ಯೋಜನ ಆಯೋಗಗಳು ಬಡತನ ಮಾಪನ ಮಾಡಿದಂತೆ ಪರಿಶಿಷ್ಟರ ಆರ್ಥಿಕ ಭದ್ರತೆ ಮಾಪನ ಮಾಡಲು ಮಾನದಂಡಗಳನ್ನು ಗುರುತಿಸಬೇಕು.

"ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು ರಾಯಚೂರು ಜಿಲ್ಲೆಯ ಅತ್ಯಂತ ಕುತೂಹಲಕಾರಿ ಸಂಗತಿ ಎಂದರೆ ಕೃಷಿಯ ಅವಲಂಬನೆಯು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ದುಡಿಮೆಗಾರರಲ್ಲಿ ಒಟ್ಟು ಸಂಖ್ಯೆಯ ಪ್ರಮಾಣ ಇತರ ಕೆಲಸ ಅವಲಂಬನೆಗಿಂತ ಕರಷಿ ಅವಲಂಬನೆ ಹೆಚ್ಚಾಗಿದೆ. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆ ಕೃಷಿ ಅವಲಂಬನೆ ಶೇ. ೭೧.೧೫ರಷ್ಟಿದ್ದರೆ, ಪರಿಶಿಷ್ಟ ಜಾತಿಯಲ್ಲಿ ಅವರ ಪ್ರಮಾಣ ಶೇ ೭೩.೩೫ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಅದರ ಪ್ರಮಾಣ ಶೇ.೭೪.೫೦ ಮತ್ತೊಂದು ಸಂಗತಿಯೆಂದರೆ ಕೃಷಿ ಅವಲಂಬಿತರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಒಟ್ಟು ಜನ ಸಂಖ್ಯೆಯಲ್ಲಿರುವುದಕ್ಕಿಂತ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಅಧಿಕವಾಗಿದೆ. ಒಟ್ಟು ಜನಸಂಖ್ಯೆಯಲ್ಲಿನ ಕೃಷಿ ಅವಲಂಬಿತರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಶೇ.೫೭.೯೮ರಷ್ಟಿದ್ದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಕ್ರಮವಾಗಿ ೬೯.೭೧ ಮತ್ತು ೭೧.೮೮ರಷ್ಟಿದೆ.

ಒಟ್ಟು ಜನಸಂಖ್ಯೆಯಲ್ಲಿ ಕೃಷಿಯೇತರ ಚಟುವಟಿಕೆಗಳ ಪ್ರಮಾಣ ಶೇ.೨೮.೫೬ರ ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಅವುಗಳ ಪ್ರಮಾಣವು ಅಧಿಕವಾಗಿದೆ. ಆದರೆ ಮತ್ತೊಂದು ಸಂಗತಿಯೆಂದರೆ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿದೆ. ಆದರೆ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಶೇ ೫೭.೬೩ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಅವರ ಪ್ರಮಾಣ ೫೩.೩೩ ದುಡಿಮೆಯ ಸಹಭಾಗಿತ್ವ ಪ್ರಮಾಣವು ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಶೇ.೩೯.೬೦ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದುಡಿಮೆಗಾರರ ಬದುಕಿನ ಸ್ಥಿತಿಯು ಒಟ್ಟು ಜನಸಂಖ್ಯೆಯ ಸ್ಥಿತಿಗಿಂತ ತುಂಬಾ ಸಂಕಷ್ಟದಲ್ಲಿದೆ. ಏಕೆಂದರೆ ಕೃಷಿ ಅವಲಂಬನೆ ಕೃಷಿಕಾರ್ಮಿಕರ ಪ್ರಮಾಣ ಅಧಿಕವಾಗಿದೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಅನುಭವಿಸುತ್ತಿರುವ ಶೋಷಣೆ ಹಾಗೂ ತಾರತಮ್ಯವನ್ನು ಮೇಲಿನ ಅಂಕಿಗಳಿಂದ ಗಮನಿಸಬಹುದು.[೨೨]

ಅಧ್ಯಯನ ಸಮೀಕ್ಷೆಗೊಳಪಡಿಸಿದ ಗ್ರಾಮಗಳ ವಿವರ

ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕ ರಾಜ್ಯದ ಹೈದಾರ್‌ಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ ಒಂದಾದ ರಾಯಚೂರು ಜಿಲ್ಲೆಯನ್ನು ಮಾತ್ರ ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ ಅದರಂತೆ ಅಧ್ಯಯನದ ವಿಷಯ 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ಸಾಮಾನ್ಯ ಮತ್ತು ಮೀಸಲಾತಿ ಕ್ಷೇತ್ರಗಳ ಒಂದು ತೌಲನಿಕ ಅಧ್ಯಯನ' ಇದೊಂದು ಅಂತರಶಿಸ್ತಿಯ ಅಧ್ಯಯನವಾಗಿದೆ. ಆಗಾಗಿ ಕ್ಷೇತ್ರಕಾರ್ಯ ಮತ್ತು ಕುಟುಂಬಗಳ ಸಮೀಕ್ಷೆಗಾಗಿ ರಾಯಚೂರು ಜಿಲ್ಲೆಯ ಮೂರು ಮೀಸಲಾತಿ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೧. ಲಿಂಗಸೂಗುರು ಪರಿಶಿಷ್ಟ ಜಾತಿ, ೨. ದೇವದುರ್ಗ ಪರಿಶಿಷ್ಟ ಪಂಗಡ ಮೀಸಲಾತಿ ಕ್ಷೇತ್ರ, ೩. ಸಿಂದನೂರ ಸಾಮಾನ್ಯ ವಿಧಾನಸಭ ಕ್ಷೇತ್ರ, ಈ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಅಸಮಾನತೆ, ಆರ್ಥಿಕ, ಸಾಮಾಜಿಕ, ರಾಜಕೀಯ,

ಸಾಂಸ್ಕೃತಿಕ ಸ್ಥಿತಿಗತಿ, ಭೂಮಿ ಮತ್ತು ಬಂಡವಾಳ, ಶಿಕ್ಷಣ, ಉದ್ಯೋಗ, ಸರ್ಕಾರದ ಯೋಜನೆಗಳು ಅವರಿಗೆ ತಲುಪಿವೆ ಅಥವಾ ಇಲ್ಲ. ಮೀಸಲಾತಿ ಸೌಲಭ್ಯ ಮತ್ತು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವರು ಜೀರ್ಣಿಸಿಕೊಂಡಿದ್ದಾರೆ ಅಥವಾ ಇಲ್ಲ ಎನ್ನುವುದನ್ನು ನೋಡುವುದಾಗಿದೆ.

ಅದೇ ರೀತಿಯಾಗಿ ಪ್ರಾದೇಶಿಕ ಅಸಮಾನತೆಯ ಛಾಯೆ ರಾಯಚೂರು ಜಿಲ್ಲೆ ಮತ್ತು ಜನಾಂಗದ ಮೇಲೆ ಬೀರಿದ ಪರಿಣಾಮವನ್ನು ವಿಶ್ಲೇಷಿಸುವುದು ಮತ್ತು ಈ ಎಲ್ಲಾ ಅಂಶಗಳ ಜೊತೆಗೆ ಮೀಸಲಾತಿ ಕ್ಷೇತ್ರ ಮತ್ತು ಮೀಸಲಾತೇತರ ಕ್ಷೇತ್ರಗಳಲ್ಲಿ ಅವರ ಪರಿಸ್ಥಿತಿಯನ್ನು ಅವಲೋಕಿಸುವುದಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕಾಗಿ ಕಾಲಾಮಿತಿಯನ್ನು ಹಾಕಿಕೊಳ್ಳಲಾಗಿದೆ. ಮುಖ್ಯವಾಗಿ ಈ ಅಧ್ಯಯನಕ್ಕಾಗಿ ೧೯೯೧ರ ನಂತರ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಜಾರಿಗೆ ಬಂದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟರ ಸ್ಥಿತಿಗತಿಗಳು ಏನಾದವು. ಮತ್ತು ಈ ಜನಾಂಗದಲ್ಲಿ ಆದ ಸ್ಥಿತ್ಯಾಂತರಗಳೇನು ಎಂಬುದನ್ನು ನೋಡುವುದು ಮುಖ್ಯವಾಗಿದೆ. ಏಕೆಂದರೆ ಜಾಗತೀಕರಣ ಜಾರಿಗೆ ಬಂದ ಮೇಲೆ ಯಾವ ವಲಯಗಳನ್ನು, ಯಾವ ಜನಾಂಗಗಳನ್ನು ಬದುಕಲು ಬಿಟ್ಟಿಲ್ಲ, ಬರಿ ಅಸಮಧಾನ ಅಸಹಾಯಕತೆ, ನಿರುದ್ಯೋಗ, ಬಡತನ, ಹಸಿವು, ಅವಲಂಬನೆ, ಅಸಹಿಂಷ್ಪಣತೆ, ಮೋಸ, ಅನ್ಯಾಯ, ದಬ್ಬಾಳಿಕೆ, ದೌರ್ಜನ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ, ಕೃಷಿ ವಲಯ ನೆಲಕಚ್ಚಿದ್ದು. ಇದಕ್ಕೆ ವಿರುದ್ಧವಾಗಿ ಶ್ರೀಮಂತರು ಮತ್ತಷ್ಟುರು ಶ್ರೀಮಂತರಾದರು, ಇವರ ಆದಾಯ ಮತ್ತಷ್ಟು ಏರುತ್ತಲೇ ಹೋಯಿತು. ಬಡವರು ಮತ್ತಷ್ಟು ಬಡವರಾದರು, ಮತ್ತು ಬಡವರ ಸಂಖ್ಯೆ ಏರುತ್ತಲೇ ಹೋಯಿತು. ಭ್ರಷ್ಟಾಚಾರ ಕುಟುಂಬದಿಂದಲೇ ಪ್ರಾಂಭವಾಯಿತು. ಇದರ ಜೊತೆಗೆ ಯಾರು ಯಾರನ್ನು ನಂಬುವ ಸ್ಥಿತಿಯಲ್ಲಿ ಇಲ್ಲ. ಮತ್ತು ಅವರ ನಂಬಿಕೆಯಲ್ಲಿ ವಾಸ್ತವವಿಲ್ಲ. ಇಂತಹ ಪರಿಸ್ಥಿತಿ ಸನ್ನಿವೇಶ ಅಥವಾ ವಾತಾವರಣದಲ್ಲಿ ಯಾವುದೇ ಭೂಮಿ, ಬಂಡವಾಳ, ಶಿಕ್ಷಣ, ಉದ್ಯೋಗವಿಲ್ಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಎಲ್.ಪಿ.ಜಿ ಮಾಡಲ್‌ಗಳನ್ನು, ಪಿ.ಪಿ.ಪಿ ಮಾಡಲ್‌ಗಳು, ಮತ್ತು ಡೆವಲೆಪ್‌ಮೆಂಟ್ ಮಾಡಲ್‌ಗಳಲ್ಲಿ ಪರಿಶಿಷ್ಟರ ಸ್ಥಿತಿ ಏನಾಗಿದೆ. ಎಂಬ ಅಂಶವು ಅತೀ ಮುಖ್ಯವೆನಿಸುತ್ತದೆ.

ಈ ಅಧ್ಯಯನಕ್ಕಾಗಿ ೧೯೯೧ರ ಆಯ್ಕೆ ಏಕೆ ಆಯ್ದುಕೊಳ್ಳಲಾಗಿದೆ ಎಂದರೆ ೧೯೯೧ಕ್ಕಿಂತ ಪೂರ್ವದಲ್ಲಿ ರಾಷ್ಟ್ರೀಕರಣದ ವ್ಯವಸ್ಥೆ ಇತ್ತು. ಈ ರಾಷ್ಟ್ರೀಕರಣದ ವ್ಯವಸ್ಥೆಯಲ್ಲಿ ಕಂಪನಿ, ಕಾರ್ಖಾನೆ ಅಥವಾ ಕೈಗಾರಿಕೆಗಳು ಉತ್ಪಾದನೆ ಮತ್ತು ವಿತರಣೆ ಬೆಲೆ ನಿರ್ಧಾರ ಮತ್ತು ನಿಯಂತ್ರಣ ಸರ್ಕಾರದ ಕೈಯಲ್ಲಿತ್ತು. ಇದರ ಜೊತೆಗೆ ಸೇವಾ ವಲಯಗಳಾದ ಶಿಕ್ಷಣ, ಆರೋಗ್ಯ, ಉದ್ಯೋಗ ಸರ್ಕಾರದ ವಶದಲ್ಲಿದ್ದವು. ಮತ್ತು ಅವು ಕೈಗೆಟುಕುವ ಬೆಲೆಯಲ್ಲಿ ಪಡೆಯಬಹುದಾಗಿತ್ತು. ಇನ್ನು ಆಗ ಅನ್ನ. ಅರಿವೆ, ಆಸರೆ ಬರಗಲಾದ ಪರಿಸ್ಥಿತಿಯನ್ನು ಹೊರತು ಪಡಿಸಿದರೆ ಗಂಬೀರ ಸಮಸ್ಯೆಯನಿಸಲಿಲ್ಲ. ಕೂಲಿಕಾರರು, ರೈತರು, ವ್ಯಾಪರಸ್ಥರು, ಮುಂಜಾನೆಯಿಂದ ಸಂಜೆಯವರೆಗೆ ಕೆಲಸಮಾಡಿ ರಾತ್ರಿ ನೆಮ್ಮದಿ ಇಂದ ನಿದ್ದೆ ಮಾಡಬಹುದಾಗಿತ್ತು. ಇನ್ನೂ ಸಾಮಾಜಿಕ ಪರಿಸ್ಥಿತಿ ಗಂಬೀರ ಸ್ವರೂಪದಾಗಿತ್ತು. ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆ, ಬಡತನ, ರೋಗ ರೂಜಿನಗಳು,

ಸಾಮಾನ್ಯವಾಗಿದ್ದವು. ಆಗಲೂ ಕೂಡ ಭೂಮಿ, ಬಂಡವಾಳ, ಶಿಕ್ಷಣ, ಉದ್ಯೋಗ ಕೆಲವೇ ಜನರ ಸ್ವತ್ತಾಗಿದ್ದವು. ಅದೇ ರೀತಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಮೇಲ್ವರ್ಗದವರ ಆಧಿನದಲ್ಲಿ ಈ ಎಲ್ಲಾ ಚಟುವಟಿಕೆಗಳಲ್ಲಿ ನಡೆಯುತ್ತಿದ್ದವು. ಗ್ರಾಮೀಣ ಭಾಗದಲ್ಲಿ ಜಮೀನ್ದಾರರು, ಜಹಾಗೀರದಾರರು, ಮಾಲೀ ಗೌಡರು, ಪೊಲೀಸ್ ಗೌಡರು, ನಾಡಗೌಡರು, ಒಕ್ಕಲಿಗರು, ದೇಸಾಯಿಗಳು ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದರು. ಆಗ ಕೆಳವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಸ್ಥಿತಿ ಗಂಭೀರವಾಗಿತ್ತು. ಆಗಲೂ ಕೂಡ ಅವರು ಭೂಮಿ, ಬಂಡವಾಳ, ಶಿಕ್ಷಣದಿಂದ ವಂಚಿತರಾಗಿದ್ದರು, ಎಲ್ಲದಕ್ಕೂ ಮೇಲ್ವರ್ಗದವರನ್ನೆ ಅವಲಂಬಿಸಿದ್ದರು. ಮತ್ತು ಮೇಲ್ವರ್ಗದವರು ಕೆಳವರ್ಗದವರನ್ನು ಇದ್ದ ಮತ್ತು ಬರಗಾಲದಂತ ಪರಿಸ್ಥಿತಿಯಲ್ಲಿ ಅನ್ನ, ಅರಿವೆ, ಆಸರೆಯನ್ನು ನೀಡಿದ್ದಾರೆ. ಆದರೆ ಅದಕ್ಕೆ ಪ್ರತಿಯಾಗಿ ಅವರ ಭೂಮಿ ಮತ್ತು ಶ್ರಮವನ್ನು ಕದ್ದಿದ್ದಾರೆ. ಆಗಲೂ ಅಸ್ಪೃಶ್ಯತೆ ಮತ್ತು ಅಸಮಾನತೆ ಇದ್ದರು ಅವಿನಾಭಾವ ಸಂಬಂಧವಿತ್ತು. ಆಗ ಸ್ವಲ್ಪಮಟ್ಟಿಗೆ ನೈತಿಕತೆ ಇಂದ ತಿಳಿದು ಬದುಕಿದ್ದಾರೆ ಆದರೆ ತಿಂದು ಬದುಕಿಲ್ಲ. ಹೀಗಿರುವಷ್ಟು ಸಮಾಜ ವಿಕೃತವಾಗರಲಿಲ್ಲ. ಈಗಾಗಿ ಅಧ್ಯಯನ ಕ್ಷೇತ್ರದಲ್ಲಿ ಪರಿಶಿಷ್ಟ ಪರಿಸ್ಥಿತಿಯನ್ನು ಅವಲೋಕಿಸುವುದು ಅಭಿವೃದ್ಧಿಯ ಯಾವ ಹಂತದಲ್ಲಿದ್ದಾರೆ ಅದಕ್ಕೆ ಕಾರಣ ಮತ್ತು ಪರಿಣಾಮವನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಅಧ್ಯಯನ ಮುಖ್ಯ ಉದ್ದೇಶವಾಗಿದೆ.

ರಾಯಚೂರು ಜಿಲ್ಲೆ ಐದು ತಾಲ್ಲೂಕುಗಳನ್ನು ಒಳಗೊಂಡಿದ್ದು ಏಳು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ ಅದರಲ್ಲಿ ಐದು ಮೀಸಲಾತಿ ಕ್ಷೇತ್ರಗಳಿವೆ. ೧. ಲಿಂಗಸೂಗುರು ಪರಿಶಿಷ್ಟ ಜಾತಿ ವಿಧಾನಸಭ ಕ್ಷೇತ್ರ, ೨. ದೇವದುರ್ಗ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭ ಕ್ಷೇತ್ರ, ೩. ಮಸ್ಕಿ ಪರಿಶಿಷ್ಟ ಪಂಗಡದ ಮೀಸಲು ವಿಧಾನಸಭಾ ಕ್ಷೇತ್ರ, ೪. ಮಾನ್ವಿ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರ. ೫. ರಾಯಚೂರು ಗ್ರಾಮೀಣ ಪರಿಶಿಷ್ಟ ಪಂಗಡದ ಮೀಸಲು ವಿಧಾನಸಭ ಕ್ಷೇತ್ರ. ರಾಯಚೂರು ಜಿಲ್ಲೆಯ ಜನರು ೨ ಲೋಕಸಭಾ ಕ್ಷೇತ್ರಗಳ ಮತಧಾರರಾಗಿದ್ದಾರೆ. ಕೊಪ್ಪಳ ಮತ್ತು ರಾಯಚೂರು ಎರಡು ಕ್ಷೇತ್ರಗಳಲ್ಲಿ ಮತದಾರರು ಹಂಚಿ ಹೋಗಿದ್ದಾರೆ. ೧೯೫೦ರಿಂದ ಜಿಲ್ಲೆಯು ರಾಜಕೀಯವಾಗಿ ಮೇಲ್ವರ್ಗದ ಕಪಿಮುಷ್ಟಿಯಲ್ಲಿ ಇತ್ತು. ಆದರೆ ೨೦೦೮ರ ಚುನಾವಣ ಕ್ಷೇತ್ರ ಮರುವಿಂಗಡಣೆ ಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ರಾಜಕೀಯ ಪ್ರಜ್ಞೆ ಮತ್ತು ಸಹಬಾಗಿತ್ವ ಒದಗಿಬಂದಿತ್ತು.

ಮುಖ್ಯವಾಗಿ ಸಂಶೋಧನಾ ಶಿರ್ಷಿಕೆಗೆ ಸಂಬಂಧಪಟ್ಟಂತೆ ರಾಯಚೂರು ಜಿಲ್ಲೆಯ ಮೂರು ವಿಧಾನಸಭ ಕ್ಷೇತ್ರಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಒಟ್ಟು ರಾಯಚೂರು ಜಿಲ್ಲೆಯಲ್ಲಿ ಏಳು ವಿಧಾನಸಭ ಕ್ಷೇತ್ರಗಳಲ್ಲಿ, ೫ (ರಾಯಚೂರು ಗ್ರಾಮೀಣ, ದೇವದುರ್ಗ, ಮಾನ್ವಿ ಮತ್ತು ಮಸ್ಕಿ ಮೀಸಲು ಕ್ಷೇತ್ರಗಳು ಮತ್ತು ೨ (ಸಿಂದನೂರು ಮತ್ತು ರಾಯಚೂರ ನಗರ) ಸಾಮಾನ್ಯ ಕ್ಷೇತ್ರಗಳಾಗಿವೆ. ೨೦೦೮ಕ್ಕಿಂತಲೂ ಪೂರ್ವದಲ್ಲಿ ಚುನಾವಣಾ ಕ್ಷೇತ್ರಗಳ ಮರು ವಿಂಗಡಣೆಗಿಂತ ಮೊದಲು ರಾಯಚೂರು ಜಿಲ್ಲೆ ಕೇವಲ ಒಂದು ಪರಿಶಿಷ್ಟ ಜಾತಿಯ(ಎಸ್.ಸಿ) ಮೀಸಲು (ದೇವದುರ್ಗ)

ಕ್ಷೇತ್ರ ಇತ್ತು. ೨೦೦೮ರ ಚುನಾವಣಾ ಕ್ಷೇತ್ರಗಳ ಮರು ವಿಂಗಡಣೆಯ ಪರಿಣಾಮವಾಗಿ ರಾಯಚೂರು ಪರಿಶಿಷ್ಟ ಪಂಗಡ(ಎಸ್.ಟಿ) ಲೋಕಸಭಾ ಕ್ಷೇತ್ರವಾಗುವುದರ ಜೊತೆಗೆ ಐದು ಮೀಸಲು ವಿಧಾನಸಭ ಕ್ಷೇತ್ರಗಳನ್ನು ಹೊಂದಿತು. ಹೀಗಾಗಿ ಜಿಲ್ಲೆಯು ಸ್ವತಂತ್ರ್ಯ ಪೂರ್ವ ಮತ್ತು ನಂತರ ಯಾವಕಾಲದಲ್ಲಿಯೂ ಉತ್ತುಂಗ ಸ್ಥಿತಿಯಲ್ಲಿ ಕಾಣುವುದಿಲ್ಲ. ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಮೂರು ವಿಧಾನಸಭ ಕ್ಷೇತ್ರಗಳಲಿ ಕ್ಷೇತ್ರಕಾರ್ಯದ ಮೂಲಕ ಕುಟುಂಬಗಳನ್ನು ಸಮೀಕ್ಷೆ ಮಾಡಲಾಗಿದೆ.

ಕೋಷ್ಟಕ ೨.೧೦. ಸಿಂಧನೂರು ತಾಲೂಕಿನ ಅಧ್ಯಯನ ಗ್ರಾಮಗಳು

ಕ್ರಸಂ	ತಾಲೂಕು	ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ				ಒಟ್ಟು
	ಗ್ರಾಮಗಳು	ಪುರುಷ	ಮಹಿಳೆ	ಒಟ್ಟು	ಶೇಕಡ	ಪುರುಷ	ಮಹಿಳೆ	ಒಟ್ಟು	ಶೇಕಡ	ಪ.ಜಾ.ಪ.ಪಂ
೧	ಮುಕ್ಕುಂದಾ	೧೦	೬	೧೬	೦.೨	೪	೨	೬	೦.೬	೨೨
೨	ರಾಮತ್ನಾಳ್	೧೦	೬	೧೬	೦.೨	೪	೨	೬	೦.೬	೨೨
೩	ಜಾಲಿಹಾಳ್	೧೫	೬	೨೧	೦.೨	೪	೨	೬	೦.೬	೨೭
೪	ಗುಂಡಾ	೧೫	೭	೨೨	೦.೨	೪	೩	೭	೦.೭	೨೯
	ಒಟ್ಟು	೫೦	೨೫	೭೫	೦.೮	೧೬	೯	೨೫	೦.೩	೧೦೦

ಜಾಲಿಹಾಳ್ ಗ್ರಾಮವು ಕರ್ನಾಟಕ ರಾಯಚೂರು ಜಿಲ್ಲೆಯ ಸಿಂಧನೂರು. ಸಿಂಧನೂರು ತಾಲೂಕಿನ ಒಂದು ದೊಡ್ಡ ಗ್ರಾಮವಾಗಿದ್ದು, ಸಿಂಧನೂರು ತಾಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಜಾಲಿಹಾಳ ಗ್ರಾಮವು ಗ್ರಾಮಪಂಚಾಯತ್ ಕೇಂದ್ರವು ಆಗಿದೆ. ಅದೇ ರೀತಿಯಾಗಿ ಜಿಲ್ಲಾ ಪಂಚಾಯತ್ ಕ್ಷೇತ್ರವಾಗಿದೆ. ಈ ಗ್ರಾಮವು ನೀರಾವರಿ ಪ್ರದೇಶವಾಗಿದ್ದು, ಆರ್ಥಿಕ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಆದರೆ ಈ ಮಾತು ಜಾತಿಗಳಿಗೆ ಅನ್ವಯಿಸಿ ಹೇಳಲು ಬರುವುದಿಲ್ಲ. ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಆರ್ಥಿಕವಾಗಿ ಮೇಲ್ವರ್ಗದವರನ್ನು ಅವಲಂಬಿಸಬೇಕಾಗಿದೆ. ಗ್ರಾಮದಲ್ಲಿ ಒಟ್ಟು ೬೭೩ ಕುಟುಂಬಗಳಿದ್ದು, ೨೦೧೧ರ ಜನಗಣತಿ ಪ್ರಕಾರ ೩೫೮೩ ಜನಸಂಖ್ಯೆಯನ್ನು ಹೊಂದಿದೆ. ಲಿಂಗವಾರು ೧೭೫೨ ಮಹಿಳೆಯರು, ೧೮೩೧ ಪುರುಷ ಜನಸಂಖ್ಯೆ ಇದೆ. ಅದರಲ್ಲಿ ೦–೬ ವಯೋಮಾನದ ಮಕ್ಕಳು ೪೬೬ ಅಂದರೆ ಶೇ. ೧೩.೦೧ರಷ್ಟಿದೆ. ಗ್ರಾಮದ ಲಿಂಗಾನುಪಾತ ೧೦೪೫. ಇದು ಕರ್ನಾಟಕ ರಾಜ್ಯದ ಸರಾಸರಿ ೯೭೩ಕ್ಕಿಂತ ಹೆಚ್ಚಾಗಿದೆ. ಕರ್ನಾಟಕಕ್ಕೆ ಹೋಲಿಸಿದರೆ ಜಾಲಿಹಾಳ ಗ್ರಾಮವು ಕಡಿಮೆ ಸಾಕ್ಷರತೆ ಹೊಂದಿದೆ. ೨೦೧೧ರಲಸ್ಲಿ ಗ್ರಾಮದ ಸಾಕ್ಷರತೆ ಶೇ. ೫೭.೪೩ರಷ್ಟಾಗಿದ್ದು, ಅದರಲ್ಲಿ ಪುರುಷರ ಸಾಕ್ಷರತೆ ಶೇ. ೭೧.೪೨ರಷ್ಟು ಮತ್ತು ಮಹಿಳಾ ಸಾಕ್ಷರತಾ ಶೇ. ೪೩.೮೩ರಷ್ಟಿತ್ತು. ಬಹುತೇಕವಾಗಿ ಗ್ರಾಮದ ಜನರು ಕೃಷಿ ಪ್ರಧಾನ ವ್ಯವಸ್ಥೆಯಲ್ಲಿ ಜೀವನಾಧಾರವಾಗಿದೆ. ಗ್ರಾಮವು ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಹೊಂದಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ತಾಲೂಕು ಕೇಂದ್ರಕ್ಕೆ

ಹೋಗಬೇಕಾಗಿದೆ. ಗ್ರಮದ ಜನರು ಕುಡಿಯುವ ನೀರಿನ ಅಸಮರ್ಪಕ ವ್ಯವಸ್ಥೆಯನ್ನು ಎದುರಿಸುತ್ತಿದ್ದಾರೆ. ಹೀಗಾಗಿ ಗ್ರಾಮವು ಮೂಲಭೂತ ಅವಶ್ಯಕತೆಗಳ ಕೊರತೆ ಎದುರಿಸುತ್ತಿದೆ.

ಮುಕ್ಕುಂದಾ ಗ್ರಾಮವು ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ದೊಡ್ಡ ಗ್ರಾಮವಾಗಿದೆ. ಒಟ್ಟು ೭೩೮ ಕುಟುಂಬಗಳಿದ್ದು, ೨೦೧೧ರ ಜನಗಣತಿ ಪ್ರಕಾರ ೧೯೧೬ ಪುರುಷರು ಮತ್ತು ೧೯೧೭ ಮಹಿಳೆಯರಿದ್ದು ಒಟ್ಟು ೩೮೩೩ ಜನಸಂಖ್ಯೆಯನ್ನು ಹೊಂದಿದೆ. ಮುಕ್ಕುಂದಾ ಗ್ರಾಮದಲ್ಲಿ ೦-೬ ವಯೋಮಾನ ಮಕ್ಕಳ ಪ್ರಮಾಣ ೫೧೪ ಇದ್ದು, ಇದು ಒಟ್ಟು ಜನಸಂಖ್ಯೆ ಶೇ. ೧೩.೪೧ರಷ್ಟಿದೆ. ಸರಾಸರಿ ಲಿಂಗಾನುಪಾತ ರಾಜ್ಯದ ಸರಾಸರಿಗಿಂತ ಹೆಚ್ಚಾಗಿದೆ. ಗ್ರಾಮದ ಲಿಂಗಾನುಪಾತ ೧೦೩೨ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ಮುಕ್ಕಂದಾ ಗ್ರಾಮದ ಸಾಕ್ಷರತೆ ಪ್ರಮಾಣ ಶೇ. ೫೬.೦೭ರಷ್ಟಿತ್ತು. ಪುರುಷರ ಸಾಕ್ಷರತಾ ಪ್ರಮಾಣ ಶೇ. ೬೭.೯೫ ಮತ್ತು ಮಹಿಳೆಯರ ಸಾಕ್ಷರತೆ ಶೇ. ೪೪.೧೪ರಷ್ಟಿತು. ಮುಕ್ಕಂದಾ ಗ್ರಾಮವು ಸಹ ಕೃಷಿಪ್ರಧಾನ ಗ್ರಾಮವಾಗಿದ್ದು ಒಕ್ಕಲುತನ ಇಲ್ಲಿನ ಜನರ ಉದ್ಯೋಗವಾಗಿದೆ.

ಗುಂಡಾ ಗ್ರಾಮವು ಕರ್ನಾಟಕ ರಾಜ್ಯ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಗಡಿಭಾಗದ ಗ್ರಾಮವಾಗಿದ್ದು, ತಾಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ೨೦೧೧ರ ಜನಗಣತಿ ಪ್ರಕಾರ ೨೭೨ ಕುಟುಂಬಗಳಿದ್ದು, ೧೪೦೬ ಜನಸಂಖ್ಯೆಯನ್ನು ಹೊಂದಿದೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ೨೬೩ (ಶೇ. ೧೮.೭), ಪರಿಶಿಷ್ಟ ಪಂಗಡದ ಜನಸಂಖ್ಯೆ ೩೫೩(ಶೇ. ೨೫.೧)ಇದೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ಶೇ. ೫೭.೨ (೮೦೪), ೨೦೧೧ರಲ್ಲಿದ್ದಂತೆ ೦-೬ ವಯೋಮಾನದ ಮಕ್ಕಳ ಪ್ರಮಾಣ ೧೯೪ ಆಗಿರುತ್ತದೆ. ಕೆಲಸದ ಜನಸಂಖ್ಯೆಯ ಪ್ರಮಾಣ ಶೇ. ೪೬.೮. ಗ್ರಾಮದ ಜನರು ಒಣ ಬೇಸಾಯದ ಕೃಷಿ ಕೆಲಸವನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಗ್ರಾಮ, ಶಿಕ್ಷಣ, ಆರೋಗ್ಯ, ಉದ್ಯೋಗ, ರಸ್ತೆ ಮುಂತಾದ ಸಮಸ್ಯೆಗಳ ಸುಳಿಯಲ್ಲಿ ಜೀವನಸಾಗಿಸುತ್ತಾರೆ. ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದು ಜರೂರು ಆಗಬೇಕಾದ ಕೆಲಸವಾಗಿದೆ.

ಸಿಂಧನೂರು ತಾಲೂಕಿನ ರಾಮತ್ನಾಳ ಗ್ರಾಮವು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ಒಂದಾಗಿದೆ. ಇದು ತಾಲೂಕು ಕೇಂದ್ರದಿಂದ ಸುಮಾರು ೨೫ ಕಿ.ಮೀ. ದೂರದಲ್ಲಿದೆ ಮತ್ತು ಸಿಂಧನೂರು ತಾಲೂಕಿನ ಗಡಿ ಗ್ರಾಮವಾಗಿದೆ. ೨೦೧೧ರ ಜನಗಣತಿ ಗ್ರಾಮದಲ್ಲಿ ಒಟ್ಟು ೪೦೭ ಕುಟುಂಬಗಳಿದ್ದು, ೨೧೧೩ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ೧೦೫೫ ಪುರುಷ ಮತ್ತು ೧೦೫೮ ಮಹಿಳಾ ಜನಸಂಖ್ಯೆ ಇದೆ. ಅದರಲ್ಲಿ ೦-೬ ವಯೋಮಾನದ ಮಕ್ಕಳ ಪ್ರಮಾಣ ೨೮೯(ಶೇ. ೧೩.೬೮) ಇದೆ. ರಾಮತ್ನಾಳ ಗ್ರಾಮದ ಲಿಂಗಾನುಪಾತ ೧೦೦೩ ಆಗಿದೆ. ಇದು ರಾಜ್ಯದ ಸರಾಸರಿಗಿಂತ (೯೭೯) ಹೆಚ್ಚಾಗಿದೆ.

ರಾಮತ್ನಾಳ ಗ್ರಾಮದ ಸಾಕ್ಷರತಾ ಪ್ರಮಾಣ ೨೦೧೧ರಲ್ಲಿ ಕರ್ನಾಟಕದ ಶೇ. ೭೫.೩೬ಕ್ಕೆ ಹೋಲಿಸಿದರೆ (ಶೇ. ೫೬.೬೯) ರಷ್ಟಿತು. ಪುರುಷರ ಸಾಕ್ಷರತಾ ಶೇ. ೭೦.೭೪ರಷ್ಟು, ಮಹಿಳಾ ಸಾಕ್ಷರತಾ ಶೇ. ೪೨.೭೪ರಷ್ಟಿತು. ಗ್ರಾಮದಲ್ಲಿ ಶೇ. ೮೦ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದ ಜನಸಂಖ್ಯೆ ಇದೆ. ಗ್ರಾಮವು ಗ್ರಾಮಪಂಚಾಯತಿ ಕೇಂದ್ರಸ್ಥಾನವಾಗಿದ್ದು, ಶೇ. ೮೦ರಷ್ಟು ಜನ ಕೃಷಿ ಕೂಲಿಕಾರರಾಗಿದ್ದಾರೆ.

ಕೋಷ್ಟಕ ೨.೧೧. ದೇವದುರ್ಗ ತಾಲ್ಲೂಕಿನ ಅಧ್ಯಯನ ಗ್ರಾಮಗಳು

ಕ್ರಸಂ	ತಾಲೂಕು	ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ				ಒಟ್ಟು
	ಗ್ರಾಮಗಳು	ಪುರುಷ	ಮಹಿಳೆ	ಒಟ್ಟು	ಶೇಕಡ	ಪುರುಷ	ಮಹಿಳೆ	ಒಟ್ಟು	ಶೇಕಡ	ಪ.ಜಾ.ಪ.ಪಂ
೧	ಜಾಲಹಳ್ಳಿ	೧೫	೭	೨೨	೦.೨	೪	೩	೭	೦.೧	೨೯
೨	ಗಲಗ್	೧೫	೬	೨೧	೦.೨	೪	೨	೬	೦.೬	೨೭
೩	ಇಂಗಳದಾಳ್	೧೦	೬	೧೬	೦.೨	೪	೨	೬	೦.೬	೨೨
೪	ಚಿ.ಬೂದುರು	೧೦	೬	೧೬	೦.೨	೪	೩	೬	೦.೬	೨೨
	ಒಟ್ಟು	೫೦	೨೫	೭೫	೦.೮	೧೬	೯	೨೫	೦.೩	೧೦೦

ಚಿಕ್ಕಬುದೂರು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೊಡ್ಡ ಗ್ರಾಮವಾಗಿದ್ದು, ಸುಮಾರು ೪೨೪ ಕುಟುಂಬಗಳು ವಾಸಿಸುತ್ತಿದೆ. ೨೦೧೧ರ ಜನಗಣತಿ ಪ್ರಕಾರ ೨೨೦೯ ಜನಸಂಖ್ಯೆಯನ್ನು ಹೊಂದಿದ್ದು, ಲಿಂಗವಾರು ಗಮನಿಸಿದಾಗ ೧೧೨೨ ಪುರುಷರು, ೧೦೮೭ ಮಹಿಳೆಯರಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ೨೨೭ ಅದರಲ್ಲಿ ೧೨೦ ಪುರುಷರು ಮತ್ತು ೧೦೭ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ೩೧೮ ಅದರಲ್ಲಿ ೧೭೨ ಪುರುಷರು ಹಾಗೂ ೧೪೬ ಮಹಿಳೆಯರಿದ್ದಾರೆ. ೦-೬ ವಯೋಮಾನದ ಮಕ್ಕಳಲ್ಲಿ ೩೦೨ ಗ್ರಾಮದ ಒಟ್ಟು ಜನಸಂಖ್ಯೆಯ ಶೇ. ೧೩.೬೭ರಷ್ಟಿದೆ. ಚಿಕ್ಕಬುದೂರು ಗ್ರಾಮದ ಸರಾಸರಿ ಲಿಂಗಾನುಪಾತ ೯೬೯ ಆಗಿದೆ. ಇದು ಕರ್ನಾಟಕ ರಾಜ್ಯದ ಸರಾಸರಿ ೯೭೩ ಆಗಿದೆ.

ಕರ್ನಾಟಕಕ್ಕೆ ಹೋಲಿಸಿದರೆ ಚಿಕ್ಕಬುದೂರು ಗ್ರಾಮವು ಕಡಿಮೆ ಸಾಕ್ಷರತೆಯನ್ನು ಹೊಂದಿದೆ. ೨೦೧೧ರಲ್ಲಿ ಚಿಕ್ಕಬುದೂರು ಗ್ರಾಮದ ಸಾಕ್ಷರತಾ ಪ್ರಮಾಣವು ಕರ್ನಾಟಕದ ಶೇ. ೭೫.೩೬ಕ್ಕೆ ಹೋಲಿಸಿದರೆ ಶೇ ೫೫.೧೧ರಷ್ಟಿತ್ತು. ಚಿಕ್ಕಬುದೂರು ಗ್ರಾಮದಲ್ಲಿ ಪುರುಷರ ಸಾಕ್ಷರತೆ ಶೇ. ೬೭.೫೭ ಮತ್ತು ಮಹಿಳೆಯರ ಸಾಕ್ಷರತೆಯು ಶೇ. ೪೨.೫೧ರಷ್ಟಿದೆ.

ಇಂಗಳದಾಳ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೊಡ್ಡ ಗ್ರಾಮವಾಗಿದ್ದು, ಸುಮಾರು ೧೨೫ ಕುಟುಂಬಗಳು ವಾಸಿಸುತ್ತಿದೆ. ೨೦೧೧ರ ಜನಗಣತಿ ಪ್ರಕಾರ ೬೬೯ ಜನಸಂಖ್ಯೆಯನ್ನು ಹೊಂದಿದ್ದು, ಲಿಂಗವಾರು ಗಮನಿಸಿದಾಗ ೩೪೬ ಪುರುಷರು, ೩೨೩ ಮಹಿಳೆಯರಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ೧೩೯ ಅದರಲ್ಲಿ ೭೩ ಪುರುಷರು ಮತ್ತು ೬೬ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ೨೯ ಅದರಲ್ಲಿ ೧೬ ಪುರುಷರು ಹಾಗೂ ೧೩ ಮಹಿಳೆಯರಿದ್ದಾರೆ. ೦-೬ ವಯೋಮಾನದ ಮಕ್ಕಳಲ್ಲಿ ೧೩೧ ಗ್ರಾಮದ ಒಟ್ಟು ಜನಸಂಖ್ಯೆಯ ಶೇ. ೧೯.೫೮ರಷ್ಟಿದೆ.

ಇಂಗಳದಾಳ ಗ್ರಾಮದ ಸರಾಸರಿ ಲಿಂಗಾನುಪಾತ ೯೩೪ ಆಗಿದೆ. ಇದು ಕರ್ನಾಟಕ ರಾಜ್ಯದ ಸರಾಸರಿ ೯೭೩ಕ್ಕಿಂತ ಕಡಿಮೆಯಾಗಿದೆ.

ಕರ್ನಾಟಕಕ್ಕೆ ಹೋಲಿಸಿದರೆ ಇಂಗಳದಾಳ ಗ್ರಾಮವು ಕಡಿಮೆ ಸಾಕ್ಷರತೆಯನ್ನು ಹೊಂದಿದೆ. ೨೦೧೧ರಲ್ಲಿ ಇಂಗಳದಾಳ ಗ್ರಾಮದ ಸಾಕ್ಷರತಾ ಪ್ರಮಾಣವು ಕರ್ನಾಟಕದ ಶೇ. ೭೫.೩೬ಕ್ಕೆ ಹೋಲಿಸಿದರೆ ಶೇ ೫೮.೩೬ರಷ್ಟಿತ್ತು. ಇಂಗಳದಾಳ ಗ್ರಾಮದಲ್ಲಿ ಪುರುಷರ ಸಾಕ್ಷರತೆ ಶೇ. ೬೯.೩೧ ಮತ್ತು ಮಹಿಳೆಯರ ಸಾಕ್ಷರತೆಯು ಶೇ. ೪೬.೭೪ರಷ್ಟಿದೆ.

ಗಲಗ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮಧ್ಯಮ ಗಾತ್ರದ ಗ್ರಾಮವಾಗಿದ್ದು, ಸುಮಾರು ೫೨ ಕುಟುಂಬಗಳು ವಾಸಿಸುತ್ತಿದೆ. ೨೦೧೧ರ ಜನಗಣತಿ ಪ್ರಕಾರ ೩೦೯ ಜನಸಂಖ್ಯೆಯನ್ನು ಹೊಂದಿದ್ದು, ಲಿಂಗವಾರು ಗಮನಿಸಿದಾಗ ೧೪೯ ಪುರುಷರು, ೧೬೦ ಮಹಿಳೆಯರಿದ್ದಾರೆ.

೦-೬ ವಯೋಮಾನದ ಮಕ್ಕಳಲ್ಲಿ ೪೯ ಗ್ರಾಮದ ಒಟ್ಟು ಜನಸಂಖ್ಯೆಯ ಶೇ. ೧೫.೮೬ರಷ್ಟಿದೆ. ಗಲಗ ಗ್ರಾಮದ ಸರಾಸರಿ ಲಿಂಗಾನುಪಾತ ೧೦೭೪ ಆಗಿದೆ. ಇದು ಕರ್ನಾಟಕ ರಾಜ್ಯದ ಸರಾಸರಿ ೯೭೩ಕ್ಕಿಂತ ಕಡಿಮೆಯಾಗಿದೆ.

ಕರ್ನಾಟಕಕ್ಕೆ ಹೋಲಿಸಿದರೆ ಗಲಗ ಗ್ರಾಮವು ಕಡಿಮೆ ಸಾಕ್ಷರತೆಯನ್ನು ಹೊಂದಿದೆ. ೨೦೧೧ರಲ್ಲಿ ಗಲಗ ಗ್ರಾಮದ ಸಾಕ್ಷರತಾ ಪ್ರಮಾಣವು ಕರ್ನಾಟಕದ ಶೇ. ೭೫.೩೬ಕ್ಕೆ ಹೋಲಿಸಿದರೆ ಶೇ ೪೬.೧೫ರಷ್ಟಿತ್ತು. ಗಲಗ ಗ್ರಾಮದಲ್ಲಿ ಪುರುಷರ ಸಾಕ್ಷರತೆ ಶೇ. ೫೮.೭೩ರಷ್ಟಿದ್ದರೆ ಮತ್ತು ಮಹಿಳೆಯರ ಸಾಕ್ಷರತೆಯು ಶೇ. ೩೪.೩೩ರಷ್ಟಿದೆ.

ಕೋಷ್ಟಕ ೨.೧೨. ಲಿಂಗಸಗೂರು ತಾಲೂಕಿನ ಅಧ್ಯಯನ ಗ್ರಾಮಗಳು

ಕ್ರಸಂ	ತಾಲೂಕು	ಪರಿಶಿಷ್ಟ ಜಾತಿ				ಪರಿಶಿಷ್ಟ ಪಂಗಡ				ಒಟ್ಟು
	ಗ್ರಾಮಗಳು	ಪುರುಷ	ಮಹಿಳೆ	ಒಟ್ಟು	ಶೇಕಡ	ಪುರುಷ	ಮಹಿಳೆ	ಒಟ್ಟು	ಶೇಕಡ	ಪ.ಜಾ.ಪ.ಪಂ
೧	ಆ.ಹೊಸುರ್	೧೫	೭	೨೨	೦.೨	೪	೩	೭	೦.೧	೨೯
೨	ಮೆದಿಕನಾಳ್	೧೫	೬	೨೧	೦.೨	೪	೨	೬	೦.೬	೨೭
೩	ಪಾ.ಕಲ್ಲೂರು	೧೦	೬	೧೬	೦.೨	೪	೨	೬	೦.೬	೨೨
೪	ತರಲಬೆಂಚಿ	೧೦	೬	೧೬	೦.೨	೪	೩	೬	೦.೬	೨೨
	ಒಟ್ಟು	೫೦	೨೫	೭೫	೦.೮	೧೬	೯	೨೫	೦.೩	೧೦೦

ಲಿಂಗಸಗೂರು ತಾಲೂಕಿನಲ್ಲಿ ಅಧ್ಯಯನಕ್ಕೆ ನಾಲ್ಕು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಾಲಾಗಿದೆ. ಸರ್ಜಾಪುರ, ಆನೆಹೊಸೂರು, ನಿಲೋಗಲ್ ಮತ್ತು ಮೆದಿಕಿನಾಳ್(ಈಗಿನ ಮಾಸ್ಕಿ ತಾಲೂಕು) ಸರ್ಜಾಪುರ ಗ್ರಾಮವು ಲಿಂಗಸಗೂರು ತಾಲೂಕಿನ ದೊಡ್ಡಗ್ರಾಮವಾಗಿದ್ದು, ಒಟ್ಟು ೪೮೨ ಕುಟುಂಬಗಳಿದ್ದು ೨೦೧೧ರ ಜನಗಣತಿ ಪ್ರಕಾರ ೨೪೩೧ ಜನಸಂಖ್ಯೆಯನ್ನು ಹೊಂದಿದೆ, ಇದರಲ್ಲಿ

ಮಹಿಳೆಯರು ೧೨೦೫ ಪುರುಷರು ೧೨೨೬ರಷ್ಟಿದ್ದಾರೆ. ಪರಿಶಿಷ್ಟ ಜಾತಿ ಒಟ್ಟು ೩೫೭ ಅದರಲ್ಲಿ ಪುರುಷರು ೧೮೮ ಮಹಿಳೆಯರು ೧೬೯ರಷ್ಟಿದ್ದಾರೆ. ಅದೇ ರೀತಿಯಾಗಿ ಪರಿಶಿಷ್ಟ ಪಂಗಡ ಒಟ್ಟು ೩೮೧ ಅದರಲ್ಲಿ ಲಿಂಗಾವರು ಗಮನಿಸಿದಾಗ ಪುರುಷರು ೧೯೮, ಮಹಿಳೆಯರು ೧೮೩ ಇದ್ದಾರೆ. ಜನರ ಮುಖ್ಯ ಉದ್ಯೋಗ ಒಕ್ಕಲುತನ ಸಾಮಾನ್ಯವಾಗಿ ಒಣ ಪ್ರದೇಶದಿಂದ ಕೂಡಿದ್ದು, ಮಳೆಯಾಶ್ರಿತ ಬದುಕು ಸಾಗಿಸುವಂಥದ್ದು ಇಲ್ಲಿಯ ಜನರ ಜೀವನ ವಿಧಾನವಾಗಿದೆ.

ವಯೋಮಾನವಾಗಿ ಗಮನಿಸಿದಾಗ ೦-೬ ವರ್ಷದ ಮಕ್ಕಳ ಪ್ರಮಾಣ ೩೪೫ (ಶೇ. ೧೪.೧೯)ರಷ್ಟಿದೆ. ಲಿಂಗಾನುಪಾತ ೧೦೧೭ ಆಗಿದೆ. ೨೦೧೧ರ ಪ್ರಕಾರ ಗ್ರಾಮದ ಸಾಕ್ಷರತಾ ಪ್ರಮಾಣ ಶೇ. ೬೦.೯೩ರಷ್ಟಿತ್ತು. ಅದರಲ್ಲಿ ಪುರುಷರು ಶೇ. ೭೬.೪೪ರಷ್ಟು, ಮಹಿಳೆಯರು ಶೇ. ೪೬.೩೮ರಷ್ಟು ಸಾಕ್ಷರತೆ ಹೊಂದಿದೆ. ಇದು ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಆದರೂ ಅತ್ಯಂತ ಹಿಂದುಳಿದ ಪ್ರದೇಶದಂತೆ ಗೋಚರಿಸುತ್ತದೆ. ಗ್ರಾಮವು ಮೂಲಭೂತ ಅವಶ್ಯಕತೆಗಳ ಲಭ್ಯತೆಯನ್ನು ಎದುರಿಸುತ್ತಿದೆ.

ಮೆದಿಕಿನಾಳ ಗ್ರಾಮ ಸಹ ಲಿಂಗಸೂಗುರ ತಾಲೂಕಿನಲ್ಲಿದೆ. ಆದರೆ ೨೦೧೮ರಲ್ಲಿ ಮಾರ್ಚ್‌ನಲ್ಲಿ ಹೊಸ ತಾಲೂಕು ರಚನೆಯಾದಾಗ ಮಸ್ಕಿಗೆ ಸೇರಿಸಲಾಗಿದೆ. (ಇದರ ಕ್ಷೇತ್ರಕಾರ್ಯ ೨೦೧೬ರಲ್ಲಿ ಮಾಡಲಾಗಿದೆ.) ಈ ಗ್ರಾಮದಲ್ಲಿ ಒಟ್ಟು ೬೮೩ ಕುಟುಂಬಗಳಿದ್ದು, ೨೦೧೧ರ ಜನಗಣತಿ ಪ್ರಕಾರ ಗ್ರಾಮವು ೩೮೧೬ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ ಲಿಂಗವಾರು ಗಮನಿಸಿದಾಗ ೧೯೦೧ ಪುರುಷರು, ೧೯೧೫ ಮಹಿಳೆಯರಿದ್ದಾರೆ. ಲಿಂಗಾನುಪಾತವು ೧೦೦೭ ಆಗಿದೆ. ೦-೬ ವಯೋಮಾನದ ಮಕ್ಕಳ ಪ್ರಮಾಣ ಶೇ ೧೫.೪೬ರಷ್ಟಿದೆ. ಕರ್ನಾಟಕದ ಸಾಕ್ಷರತೆ ಶೇ. ೭೫.೩೬ರ ಪ್ರಮಾಣಕ್ಕೆ ಹೋಲಿಸಿದರೆ ಶೇ. ೫೨.೩೬ ಆಗಿದೆ. ಪುರುಷರ ಸಾಕ್ಷರತೆ ಶೇ. ೬೫.೭೯ ಮತ್ತು ಮಹಿಳೆಯರ ಪ್ರಮಾಣವು ಶೇ. ೩೯.೦೫ರಷ್ಟಿದೆ. ಇದು ಹಿಂದುಳಿದ ಗ್ರಾಮವಾಇಗದ್ದು, ಬಹುತೇಕವಾಗಿ ಇಲ್ಲಿಯ ಜನರು ಕೃಷಿಯನ್ನು ಅವಲಂಬಿಸಿ ಜೀವನಸಾಗಿಸುತ್ತಿದ್ದಾರೆ. ಲಿಂಗಸಗೂರು ತಾಲೂಕಿನಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿಗಳನ್ನು ಹೊಂದಿದ ಗ್ರಾಮ ಪರಿಶಿಷ್ಟಜಾತಿ ೧೨೫೫ ಅದರಲ್ಲಿ ಪುರುಷರು ೬೩೦ ಪುರುಷರು, ೬೨೫ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡ ಜನಸಂಖ್ಯೆ ೩೫೧ ಅದರಲ್ಲಿ ೧೭೫ ಪುರುಷರು, ೧೭೬ ಮಹಿಳೆಯರಿದ್ದಾರೆ.

ಆನೆಹೊಸೂರ ರಾಯಚೂರು ಜಿಲ್ಲೆ ಲಿಂಗಸಗೂರು ತಾಲೂಕಿನ ದೊಡ್ಡಗ್ರಾಮ. ಗ್ರಾಮವು ಸುಮಾರು ೮೧೩ ಕುಟುಂಬಗಳನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಗ್ರಾಮದ ಜನಸಂಖ್ಯೆ ೪೪೮೦ ಅದರಲ್ಲಿ ೨೨೯೧ ಪುರುಷರು ಮತ್ತು ೨೧೮೯ ಮಹಿಳೆಯರಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ೭೪೬ ಪುರುಷರು ಹಾಗೂ ೩೫೩ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ೩೭೯ ಇದ್ದರೆ, ಅದರಲ್ಲಿ ಲಿಂಗವಾರು ಗಮನಿಸಿದಾಗ ೧೮೭ ಪುರುಷರು, ೧೯೨ ಮಹಿಳೆಯರಿದ್ದಾರೆ. ಲಿಂಗಾನುಪಾತ ೯೮ ಆಗಿದೆ. ಗ್ರಾಮದ ಸಾಕ್ಷರತೆಯ ಪ್ರಮಾಣ ಶೇ ೬೪.೩೦, ಪುರುಷ ಸಾಕ್ಷರತೆ ಪ್ರಮಾಣ ಶೇ. ೭೯.೫೧ರಷ್ಟು, ಶೇ. ೪೮.೨೦ರಷ್ಟು ಮಹಿಳೆಯರ

ಸಾಕ್ಷರತೆ ಪ್ರಮಾಣವಿದೆ. ಗ್ರಾಮದಲ್ಲಿ ಒಟ್ಟು ಕೆಲಸಗಾರರು ೨೪೨೫ ಅದರಲ್ಲಿ ೧೫೧೭ಮುಖ್ಯ ಕೆಲಸಗಾರರಾಗಿದ್ದಾರೆ. ಗ್ರಾಮದ ಜನರ ಆರ್ಥಿಕ ಪರಿಸ್ಥಿತಿ ಅಷ್ಟಾಗಿ ಹೇಳಿಕೊಳ್ಳುವಷ್ಟರ ಮಟ್ಟಿಗೆ ಇರುವುದಿಲ್ಲ. ಇಲ್ಲಿಯೂ ಉದ್ಯೋಗವನ್ನು ಅರಸಿ ವಲಸೆ ಹೋಗುವ ಪ್ರಮಾಣ ಹೆಚ್ಚಾಗಿದೆ.

ನಿಲೋಗಲ್ ಲಿಂಗಸಗೂರು ತಾಲೂಕಿನ ದೊಡ್ಡ ಗ್ರಾಮ ಸುಮಾರು ೪೪೪ ಕುಟುಂಬಗಳಿದ್ದು, ೨೦೧೧ರ ಜನಗಣತಿ ಪ್ರಕಾರ ೨೫೪೧ ಜನಸಂಖ್ಯೆ ಹೊಂದಿದೆ. ಇದರಲ್ಲಿ ೧೨೭೨ ಪುರುಷರು, ೧೨೬೯ ಮಹಿಳೆಯರಿದ್ದಾರೆ. ಅದರಲ್ಲಿ ೫೩೨ ಪರಿಶಿಷ್ಟ ಜಾತಿ ಜನಸಂಖ್ಯೆ ಇದೆ. ಲಿಂಗವಾರು ಗಮನಿಸಿದಾಗ ೨೭೨ ಪುರುಷರು, ೩೦೬ ಮಹಿಳೆಯರಿದ್ದಾರೆ. ೧೩೨ ಪರಿಶಿಷ್ಟ ಪಂಗಡದ ಜನಸಂಖ್ಯೆ ೬೮ ಪುರುಷ, ೬೪ ಮಹಿಳೆಯರಿದ್ದಾರೆ. ೦-೬ ವಯೋಮಾನದ ಮಕ್ಕಳ ಪ್ರಮಾಣ ಶೇ. ೧೪.೧೩ರಷ್ಟಿದೆ. ಲಿಂಗಾನುಪಾತ ೯೯೮ ಆಗಿದೆ. ಕರ್ನಾಟಕದ ಸಾಕ್ಷರತೆಗೆ ಹೋಲಿಸಿದರೆ ಕಡಿಮೆ ಶೇ. ೭೫.೩೬ರಷ್ಟಿದೆ. ಲಿಂಗವಾರು ಶೇ. ೮೦.೯೫ ಪುರುಷರು ಮತ್ತು ಶೇ. ೫೦.೮೩ ಮಹಿಳಾ ಸಾಕ್ಷರತೆ ಇದೆ.

ಕೊನೆ ಟಿಪ್ಪಣೆ

೧. ಅಂತರ್ಜಾಲ ಮಾಹಿತಿ: htt//www.raichur.nic.in

೨. ವಾಸುದೇವನ್ ಸಿ.ಎಸ್., ೨೦೧೨, "ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.೯

೩. ಸಾಮಾಜಿಕ ಮತ್ತು ಆರ್ಥಿಕ ಅವಲೋಕನ, ೨೦೧೨-೧೩, ರಾಯಚೂರು ಜಿಲ್ಲೆ, ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ ರಾಯಚೂರು, ಪು.೧

೪. ರಾಯಚೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ, ೨೦೧೪ ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, ಪು.೨೫

೫. ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ೨೦೧೩-೧೪, ರಾಯಚೂರು ಜಿಲ್ಲೆ, ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ, ರಾಯಚೂರು, ಪು.೧೦

೬. ರಾಯಚೂರು ಜಿಲ್ಲಾ ಅಂಕಿ ಸಂಖ್ಯೆಗಳ ನೋಟ, ೨೦೧೪, ರಾಯಚೂರು ಜಿಲ್ಲೆ, ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ, ರಾಯಚೂರು, ಪು.೨೫

೭. ರಾಯಚೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ, ೨೦೧೪, ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, ಪು.೨೫

೮. ಸಾಮಾಜಿಕ ಮತ್ತು ಆರ್ಥಿಕ ಅವಲೋಕನ, ೨೦೧೨-೧೩, ರಾಯಚೂರು ಜಿಲ್ಲೆ- ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಯಚೂರು, ಪು.೮

೯. ರಾಯಚೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ, ೨೦೧೪ ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರಕಾರ, ಪು. ೨೭

೧೦. ಕರ್ನಾಟಕ ಕೈಪಿಡಿ, ೨೦೧೮, ಕರ್ನಾಟಕ ಗ್ಯಾಜೆಟಿಯರ್ ಇಲಾಖೆ, ಬೆಂಗಳೂರು, ಪು.೬೫೨

೧೧. ರಾಯಚೂರು ಜಿಲ್ಲಾ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ, ೨೦೧೩-೧೪, ರಾಯಚೂರು ಜಿಲ್ಲೆ, ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ, ರಾಯಚೂರು, ಪು.೨೧

೧೨. ರಾಯಚೂರು ಜಿಲ್ಲಾ ಅಂಕಿ ಸಂಖ್ಯೆಗಳ ನೋಟ, ೨೦೧೩-೧೪, ರಾಯಚೂರು ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಛೇರಿ ರಾಯಚೂರು, ಪು.೧೦೨

೧೩. ಪ್ರಜಾವಾಣಿ ೧೬.೦೨.೨೦೧೨ ಅಪೌಷ್ಠಿಕ ಸಮಸ್ಯೆ ಶೀಘ್ರ ಪರಿಹರಿಸಿ, ಪು.೮

೧೪. ವಿಜಯ ಕರ್ನಾಟಕ ೨೭.೦೯.೨೦೧೩ ಶಿಶುಗಳ ಮರಣಹೋಮ, ಪ್ರಾದೇಶಿಕ ಸುದ್ಧಿ, ಪು.೭

೧೫. ಯಲ್ಲಪ, ೨೦೧೭, ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಪು.೭೭

೧೬. ಮುರಿಗೆಪ್ಪ ಎ., ೨೦೦೭(ಸಂ), ಅಭಿವೃದ್ಧಿ ಅಧ್ಯಯನ ಸಂಚಿಕೆ-೨, ಸಂಪುಟ-೬, ಜುಲೈ-ಡಿಸೆಂಬರ್-೨೦೦೭ ಟಿ.ಎಚ್.ಮೂರ್ತಿ, ಮಾನವ ಸಂಪನ್ಮೂಲ ಅಭಿವೃದ್ಧಿ: ಕರ್ನಾಟಕದ ಒಂದು ತೌಲನಿಕ ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು.೬೧

೧೭. ರಾಯಚೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ, ೨೦೧೪ ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರಕಾರ, ಪು.೧೧೫

೧೮. ಸಾಮಾಜಿಕ ಮತ್ತು ಆರ್ಥಿಕ ಅವಲೋಕನ, ೨೦೧೨-೧೩ ರಾಯಚೂರು ಜಿಲ್ಲೆ ಜಿಲ್ಲಾ ಸಂಖ್ಯಾ ಸಂಗ್ರಣಾಧಿಕಾರಿಗಳ ಕಛೇರಿ ರಾಯಚೂರು, ಪು.೧೭

೧೯. ಮುರಿಗೆಪ್ಪ ಎ., ೨೦೦೭(ಸಂ), ಅಭಿವೃದ್ಧಿ ಅಧ್ಯಯನ, ಟಿ.ಎಚ್.ಮೂರ್ತಿ, ಮಾನವ ಸಂಪನ್ಮೂಲ ಅಭಿವೃದ್ಧಿ ಕರ್ನಾಟಕದ ಒಂದು ತೌಲನಿಕ ವಿಶ್ಲೇಷಣೆ ಸಂಪುಟ-೬, ಸಂಚಿಕೆ-೨, ಜುಲೈ-ಡಿಸೆಂಬರ್ ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು.೬೦

೨೦. ಕೆಂಪೇಗೌಡ ಪಿ., ೨೦೧೫, ಗ್ರಾಮೀಣ ಹಣಕಾಸು (ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.೯೬

೨೧. ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪, ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, ಪು.೧೨೪

೨೨. ಯಲ್ಲಪ್ಪ, ೨೦೧೬, ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು (ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ), ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.೧೨೭

ಅಧ್ಯಾಯ ಮೂರು

ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆ

ಅಧ್ಯಾಯ ಮೂರು

ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆ

ಪ್ರಸ್ತುತ ಅಧ್ಯಾಯದಲ್ಲಿ ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆಗೆ ಸಂಬಂಧಪಟ್ಟಂತೆ ಗ್ರಂಥಗಳನ್ನು ಪರಾಮರ್ಶೆಗೆ ಒಳಪಡಿಸಲಾಗಿದೆ. ಈ ಅಧ್ಯಾಯವು ಇಲ್ಲಿಯವರಗೂ ನಡೆದ ಅಧ್ಯಯ ಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಪರಾಮರ್ಶೆಗೆ ಒಳಪಡಿಸಲಾಗಿದೆ ಮೊದಲನೆಯದಾಗಿ ಪ್ರಜಾಪ್ರಭುತ್ವ ಮತ್ತು ಮೀಸಲಾತಿ, ಎರಡನೆಯದಾಗಿ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ, ಮೂರನೆಯದಾಗಿ ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆ, ನಾಲ್ಕನೆಯದಾಗಿ ಮೀಸಲಾತಿ ಮತ್ತು ಬಡ್ತಿ ಮೀಸಲಾತಿ, ಐದನೆತದಾಗಿ ಮೀಸಲಾತಿ ಮತ್ತು ಒಳಮೀಸಲಾತಿಗೆ ಸೈದ್ಧಾಂತಿಕಗ್ರಾಸವನ್ನು ನೀಡಲಾಗಿದೆ, ಅಲ್ಲದೆ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಅಧ್ಯಯನಗಳು ಶಿಕ್ಷಣ, ಆರೋಗ್ಯ ಮತ್ತು ವರಮಾನಕ್ಕೆ ಸಂಬಂಧಿಸಿದ ಅಧ್ಯಾಯಗಳನ್ನು ಪರಾಮರ್ಶಿಸಿ ವಿಷಯದ ಚೌಕಟ್ಟನ್ನು ರೂಪಿಸಲಾಗಿದೆ.

೧.೧. ಪ್ರಜಾಪ್ರಭುತ್ವ ಮತ್ತು ಮೀಸಲಾತಿ

ಪ್ರಜಾಪ್ರಭುತ್ವ ಸರಕಾರ ಪದ್ಧತಿಯು ಒಂದು ಜನಪ್ರಿಯ ಸರ್ಕಾರ ಮತ್ತು ಎಲ್ಲರನ್ನು ಸಮಾನವಾಗಿ ಗೌರವಿಸುವ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸವ ಮತ್ತು ಎಲ್ಲರಿಗೂ ಮುಕ್ತ ಸ್ವಾತಂತ್ರವನ್ನು ನೀಡುವ ಏಕೈಕ ಸರ್ಕಾರ ಎಂದು ಪರಿಭಾವಿಸಲಾಗಿದೆ. ಹಾಗಾಗಿ ಪ್ರಪಂಚದ ಬಹುತೇಕ ರಾಷ್ಟ್ರಗಳು ಇಂದು ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡು ಅಭಿವೃದ್ಧಿ ಪಥದತ್ತ ಸಾಗಿರುವುದು ೨೧ನೇ ಶತಮಾನದ ಮಹತ್ವದ ಬದಲಾವಣೆ ಎಂದು ಹೇಳಬಹುದು. ಆದರೆ ಇದು ಎಲ್ಲ ದೇಶ–ಪ್ರದೇಶಗಳಲ್ಲಿ ಸಮಾನವಾಗಿ ಏಕರೂಪತೆಯನ್ನು ಕಾಯ್ದುಕೊಂಡಿಲ್ಲ. ಭಾರತ ಸಂದರ್ಭದಲ್ಲಿಯೂ ಸಹ ಇದೆ ಸ್ವರೂಪವನ್ನು ಕಾಣಬಹುದು. ಭಾರತದ ಎಲ್ಲ ರಾಜ್ಯ ಮತ್ತು ಪ್ರದೇಶಗಳಲ್ಲಿ ಸಮನಾಗಿ ಪ್ರಜಾಪ್ರಭುತ್ವ ಏಕರೂಪತೆಯನ್ನು ಕಾಯ್ದುಕೊಂಡಿಲ್ಲ ಎಂಬುದಕ್ಕೆ ಅನೇಕ ಉದಾಹರಣೆಗಳು ಇವೆ. ಪ್ರತಿ ರಾಜ್ಯದಲ್ಲಿ ಅದರ ಸ್ವರೂಪ ಬೇರೆ ಬೇರೆ ರೀತಿಯಾಗಿ ಗೋಚರಿಸುತ್ತದೆ. ಅದೇ ರೀತಿಯಾಗಿ ಮೀಸಲಾತಿ ಕೂಡ ಸಂವಿಧಾನ ಬದ್ಧವಾಗಿ ಜಾರಿಗೆ ಬಂದಿದೆ. ಆದರೆ ಅದರ ಸಿದ್ಧಾಂತ ಹಾಗೂ ಆಚರಣೆ ಎಲ್ಲಾ ರಾಜ್ಯಗಳಲ್ಲಿ ಏಕರೂಪವಾಗಿಲ್ಲ. ಇಲ್ಲಿಯವರೆಗೂ ೭೦ ವರ್ಷಗಳ ಇತಿಹಾಸದಲ್ಲಿ ಮೀಸಲಾತಿಗೆ ಸ್ಪಷ್ಟವಾದ ಅರ್ಥವಿವರಣೆ ನೀಡುವುದಾಗಲಿ ಅಥವಾ ಏಕರೂಪತೆಯನ್ನು ಕಾಯ್ದುಕೊಳ್ಳವುದಾಗಲಿ ಸಾಧ್ಯವಾಗಲೇ ಇಲ್ಲ.

ಏಕೆಂದರೆ ಇಂದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಎಲ್ಲ ಜಾತಿಗಳು ಮೀಸಲಾತಿ ಪಟ್ಟಿಗೆ ಬಂದಿವೆ. ಹಾಗಾಗಿ ಯಾರು, ಯಾರಿಗೆ? ಸಾಮಾಜಿಕ ನ್ಯಾಯ ಕೊಡಬೇಕು ಎನ್ನುವ ಗೊಂದಲಗಳಿಗೆ ಅರ್ಥ ವಿವರಣೆ ಕೊಡುವ ಅಗತ್ಯವಿದೆ. ಇದರ ಜೊತೆಗೆ ಮಾನವ ಅಭಿವೃದ್ಧಿಯಲ್ಲಿ ಅಸಮಾನತೆ ಮೂಲಭೂತ ಸೌಕರ್ಯಗಳ ಅಸಮಾನತೆಯಿದೆ. ಇನ್ನು ಪ್ರಾದೇಶಿಕ ಅಸಮಾನತೆಗಳು ಹಾಗೆಯೇ ಉಳಿದುಕೊಂಡು ಬಂದಿವೆ. ಇದರ ಜೊತೆಗೆ ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ಅವಕಾಶಗಳಲ್ಲಿ ಹೆಚ್ಚು ಅಂತರಗಳಿವೆ. ಶಿಕ್ಷಣ ಆರೋಗ್ಯ ಮತ್ತು ಉದ್ಯೋಗಗಳು ಬದಲಾಗುತ್ತಿರುವ ಪರಿಸರ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಹೊಂದಿಕೊಳ್ಳುತ್ತಿಲ್ಲ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಜನರ ಸ್ಥಿತ್ಯಾಂಥರಗಳಿಗೆ ಮೂಲಭೂತ ಅವಶ್ಯಕತೆಗಳು ಲಭ್ಯವಾಗುತ್ತಿಲ್ಲ. ಇವುಗಳ ಮೂಲ ಮತ್ತು ಆಳ ಅರಿವಿನ ಬಗ್ಗೆ ತಿಳಿದುಕೊಳ್ಳಬೆಕಾದರೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಅಭಿವೃದ್ಧಿ ಮಾದರಿಗಳ ಅರಿವು ಕೂಡ ಅಷ್ಟೇ ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಳೆಯ ಮತ್ತು ಹೊಸ ವಿಚಾರಗಳನ್ನು ಘರ್ಷಣೆಗೆ ಒಳಪಡಿಸುವುದು ಅಷ್ಟೇ ಸಮಂಜಸವೆನಿಸುತ್ತದೆ.

ಮೀಸಲಾತಿ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಈ ಮೀಸಲಾತಿ ವ್ಯವಸ್ಥೆ ಬೇರೆ ಬೇರೆ ಹೆಸರಿನಲ್ಲಿ (ಶಿರ್ಷಿಕೆಯಲ್ಲಿ) ಪಾಕಿಸ್ತಾನ, ಜಪಾನ, ಇಂಡೋನೇಷಿಯಾ, ದಕ್ಷಿಣ ಆಫ್ರಿಕಾ, ಅಮೇರಿಕಾ, ಇಂಗ್ಲೆಂಡ್ ಮುಂತಾದ ಜಗತ್ತಿನ ಹಲವಾರು ದೇಶಗಳಲ್ಲಿ ಸರಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಯಲ್ಲಿದೆ. ಅಮೇರಿಕಾದಲ್ಲಿ ಶೇ. ೬೦ರಷ್ಟು ಬಿಳಿಯರಿಗೆ, ಶೇ ೪೦ರಷ್ಟು ಕರಿಯರಿಗೆ (ಕಪ್ಪು ಜನಾಂಗದ ನಿಗ್ರೋಗಳಿಗೆ) ಮೀಸಲಾತಿ ನೀಡುವುದರ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ವೈವಿಧ್ಯತೆಯನ್ನು ಸಾಧಿಸುವದರ ಜೊತೆಗೆ ದೇಶದ ಆರ್ಥಿಕ ಅಭಿವೃದ್ಧಿಗೆ ಬದ್ರ ಬುನಾಧಿಯನ್ನು ಹಾಕಿವೆ.[೧]

ಮೀಸಲಾತಿ ಸೌಲಭ್ಯವನ್ನು ಒದಗಿಸುವುದು. ದಲಿತ ಹಿಂದುಳಿದ ಜಾತಿಗಳನ್ನು ಓಲೈಸುವುದಕ್ಕೆಂದು ಅವರನ್ನು ಓಟ್ ಬ್ಯಾಂಕ್ ಮಾಡಿಕೊಳ್ಳಲು ಇದು ಕಾಂಗ್ರೆಸ್ ಹುಟ್ಟುಹಾಕಿದ ಕುತಂತ್ರವೆಂದು ಮೀಸಲಾತಿ ವಿರೋಧಿಗಳು ಮುಂದುವರೆದ ಜಾತಿಗಳು ಹಾಗೂ ಸಂಘ ಪರಿವಾರದವರು ಪ್ರಚಾರ ಮಾಡುತ್ತಾರೆ. ಆದರೆ ಸುಮಾರು ಮೂರುಸಾವಿರ ವರ್ಷಗಳಿಂದ ಸಾವಿರಾರು ತಲೆಮಾರುಗಳು ದೇಶದಲ್ಲಿ ಜಾತಿಯ ತಾರತಮ್ಯದ ಆಧಾರದಲ್ಲಿ ಈ ಬಹುಸಂಖ್ಯಾತ ಜನಕೋಟಿಯ ವಿರುದ್ದ ನಡೆದುಕೊಂಡು ಬರುತ್ತಿರುವ ಘೋರ ಅನ್ಯಾಯವನ್ನು ಹಂತ ಹಂತವಾಗಿ ಸರಿಪಡಿಸಿ ಭಾರತೀಯ ಸಮಾಜದ ಎಲ್ಲರೂ ಸಮಾನ ಅವಕಾಶಗಳನ್ನು ಪಡೆಯಲು ಸಮಾನ ರೀತಿಯಲ್ಲಿ ಶಕ್ತರಾಗಬೇಕು ಎಂಬ ಧ್ಯೇಯವೇ ಮೀಸಲಾತಿ ತತ್ವದ ಹಿಂದಿರುವ ತತ್ವವಾಗಿದೆ. ಅದಕ್ಕಾಗಿ ರೂಪಿಸಿದ ಪರಿಹಾರ ಮಾರ್ಗವೇ ಸಂರಕ್ಷಣಾತ್ಮಕ ತಾರತಮ್ಯ ಎಂದು ಕರೆಯಲಾಗುವ ಮೀಸಲಾತಿ ನೀತಿಯಾಗಿದೆ. ಇದು ಯಾರನ್ನೂ ಓಲೈಸುವುದಕ್ಕಾಗಿ ಅಲ್ಲ. ಭಾರತಿಯ ಸಮಾಜ ತನ್ನಲ್ಲಿಯೆ ತಾನು ಸುಧಾರಣೆ ಮಾಡಿಕೊಳ್ಳುವಲ್ಲಿ ಇರುವ ಒಂದು ಮಹತ್ವದ ಹೆಜ್ಜೆ ಎಂದು ಹೇಳಬಹುದು.[೨]

ಈ ದೇಶವು ನಾಗರಿಕತೆಯ ಪ್ರಜಾಪ್ರಭುತ್ವ ಮುಸುಕು ಹೊತ್ತು ಹಲವಾರು ವರ್ಷಗಳೇ ಕಳೆದಿದ್ದರೂ ಜಾತಿ ದೌರ್ಜನ್ಯ, ಜಾತಿ ತಾರತಮ್ಯದ ಅವಮಾನ, ತಿರಸ್ಕಾರ, ಧಾರಿದ್ರ್ಯದ ಉಸಿರುಗಟ್ಟಿಸುವ ವಾತಾವರಣ ಅಂತ್ಯಗೊಂಡಿಲ್ಲ. ಆಡಳಿತಾಂಗದ ದೊಡ್ಡ ಪುಸ್ತಕಗಳಲ್ಲಿ ಹಲವಾರು ಕಾನೂನುಗಳು ಬರೆಯಲ್ಪಟ್ಟಿದ್ದರೂ ಜಾತಿ ದೌರ್ಜನ್ಯದಲ್ಲಿ ದಲಿತರು ಸುಟ್ಟು ಕರುಕಲಾಗುವುದು ನಿಂತಿಲ್ಲ. ದಲಿತನೇ ರಾಷ್ಟ್ರಪತಿಯಾದರು ದಲಿತರು ಗುಲಾಮರಾಗುವುದು ತಪ್ಪಿಲ್ಲ ಜಾಗತೀಕರಣದ ಮಾತುಗಳು ಜಿಗದಾಡುತ್ತಿದ್ದರೂ ಜೀತದ ಸಂಕೋಲೆಗಳು ಕರಗಿಲ್ಲ. ಇದನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ ಅಂದಾಗ ಮಾತ್ರ ಭಾರತವು ಒಂದು ಜಾತ್ಯಾತೀತ ರಾಷ್ಟ್ರವಾಗಲು ಸಾದ್ಯವಾಗುತ್ತದೆ.[೬]

ಶೋಷಣೆಗೆ ಒಳಗಾದ ಜನಾಂಗ ಜಗತ್ತಿನ ಎಲ್ಲಾ ದೇಶ, ಪ್ರದೇಶಗಳಲ್ಲಿ ಇದ್ದಾರೆ. ಆದರೆ ಶೋಷಣೆ ನಿರಂತರವಾದರೆ ಅಥವಾ ಅದನ್ನು ಸರಿಪಡಿಸದೆ ಹೋದರೆ, ಸರಿಪಡಿಸುವಲ್ಲಿ ಪ್ರಮಾಣಿಕ ಪ್ರಯತ್ನ ಇಲ್ಲದೆ ಹೋದರೆ. ಅದು ಐತಿಹಾಸಿಕ ಪ್ರಮಾದ ಎಸಗಿದಂತಾಗುತ್ತದೆ. ಇಂತಹ ಐತಿಹಾಸಿಕ ಪ್ರಮಾದಗಳಿಂದ ಹೊರತರುವ ಪ್ರಯತ್ನ ಪ್ರಮಾಣಿಕವಾಗಿ ನಡೆಯಲಿಲ್ಲ. ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿಭಾ ಪುಲೆ ೧೮೭೩ ಸತ್ಯಶೋಧಕ ಸಮಾಜ ಸ್ಥಾಪಿಸಿ ಅಸ್ಪೃಶ್ಯತೆ ನಿವಾರಣೆಗೆ ಪ್ರಯತ್ನಿಸಿದರು. ಜೊತೆಗೆ ಬ್ರಿಟೀಷ್ ಸರಕಾರದ ಮೇಲೆ ಒತ್ತಡ ಹಾಕಿದರು, ಈ ಒತ್ತಡಕ್ಕೆ ಮಣಿದ ಸರ್ಕಾರ ಹಂಟರ್ ಆಯೋಗವನ್ನು ನೆಮಿಸಿತ್ತು. ೧೮೯೧ರಲ್ಲಿ ಸರಕಾರಿ ಉದ್ಯೋಗದ ಮೀಸಲಾತಿಗೆ ಆಗ್ರಹಿಸಲಾಯಿತು. ಇದೇ ವೇಳೆಯಲ್ಲಿ ಛತ್ರಪತಿ ಸಾಹು ಮಹಾರಾಜ ಇಂಗ್ಲೇಂಡಿನ ರಾಣಿಯ ಕುಟುಂಬದ ಯುವರಾಜನ ಮದುವೆ ಸಮಾರಂಬದಲ್ಲಿ ಭಾಗವಹಿಸಿ ನಂತರ ಬ್ರಿಟೀಷ್ ಅಧಿಕಾರಿಗಳ ಜೊತೆಗೆ ನಡೆಸಿದ ಮಿಸಲಾತಿಯ ಚರ್ಚೆ ಮಹತ್ವದ ಫಲಕೊಟ್ಟಿತು. ಆಗ ಇಂಗ್ಲೆಂಡಿನಿಂದಲೇ ರಾಜಾಜ್ಞೆ ಹೊರಡಿಸಲಾಯಿತು. ೨೬-೦೭-೧೯೦೨ ಕೊಲ್ಲಾಪೂರ ಸಂಸ್ಥಾನದಲ್ಲಿ ಶೇ ೫೦ರಷ್ಟು ಮಿಸಲಾತಿ ಕೊಲ್ಲಾಪುರ ಗೆಜೆಟಿನಲ್ಲಿ ಪ್ರಕಟಿಸಲಾಯಿತು.[೭]

ಬ್ರಿಟೀಷರ ಕಾಲದಲ್ಲಿಯೂ ಸಹ ಸಾಮಾಜಿಕ ನ್ಯಾಯಕ್ಕಾಗಿ ಶತ-ಶತಮಾನಗಳ ಕಾಲ ತುಳಿಕ್ಕೆ ಒಳಗಾದ ತಳಸಮುದಾಯವನ್ನು ಸುಧಾರಣೆಗೆ ಪ್ರಯತ್ನಿಸಿಲಿಲ್ಲ. ೧೯೦೯ ಇಂಡಿಯಾ ಕೌನ್ಸಿಲ್ ಆ್ಯಕ್ಟ್ ಪ್ರಕಾರ ಮುಸ್ಲಿಂರಿಗೆ ರಾಜಕೀಯದಲ್ಲಿ ಪ್ರತ್ಯೇಕವಾಗಿ ಮಿಸಲು ಕ್ಷೇತ್ರವನ್ನು ನೀಡುವುದರೊಂದಿಗೆ ಅವಕಾಶ ಮಾಡಿಕೊಟ್ಟಿತ್ತು. ಅದೇ ರೀತಿಯಾಗಿ ೧೯೧೯ರಲ್ಲಿ ಮಾಂಟೆಗೂ ಚೇಮ್ಸಪೋರ್ಡ ಕಾಯ್ದೆ ಪ್ರಕಾರ ಶಿಖ್ಖರಿಗೂ ಮೀಸಲಾತಿ ನೀಡಲಾಯಿತು. ಈ ಎರಡು ಕಾಯಿದೆಗಳಲ್ಲಿ ನಿಮ್ನವರ್ಗದವರ ರಾಜಕೀಯ ಮೀಸಲಾತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿತು. ಬ್ರಿಟಿಷ್ ಸರಕಾರದ ಮೀಸಲಾತಿ ಪ್ರಯತ್ನಗಳನ್ನು ವಿವರಿಸುತ್ತಾ ೧೯೨೭ರಲ್ಲಿ ಬ್ರಿಟೀಷ್ ಸರಕಾರ ಭಾರತದಲ್ಲಿನ ನಿಮ್ನ ವರ್ಗಗಳ ಸ್ಥಿತಿಗತಿಗಳನ್ನು ಡಾ.ಬಿ.ಆರ್.ಅಂಬೇಡ್ಕರ್‌ವರು ಸೈಮನ್ ಕಮಿಷನ್‌ಗೆ ಮನವರಿಕೆ ಮಾಡಿಕೊಟ್ಟರು. ಅಂದಿನ ಬ್ರಿಟೀಷ್ ಸರಕಾರ ಸೈಮನ್ ಆಯೋಗವು ನೀಡಿದ ಸಲಹೆ ಮೇರೆಗೆ ೧೯೩೦-೩೧, ೩೨ರಲ್ಲಿ ನಿರಂತರವಾಗಿ ಲಂಡನ್‌ನಲ್ಲಿ ದುಂಡು ಮೇಜಿನ ಪರಿಷತ್ತು ನಡೆಸಿತ್ತು. ಈ ಸಮ್ಮೇಳನದಲ್ಲಿ

ಸತತವಾಗಿ ಮೂರು ದುಂಡು ಮೇಜಿನ ಪರಿಷತ್ತಿನಲ್ಲಿ ನಿಮ್ನ ವರ್ಗದ ಪರವಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾಗವಹಿಸಿ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಶಿಖ್ಖರಿಗೆ ಮತ್ತು ಯುರೋಪಿಯನ್ನರಿಗೆ ರಾಜಕೀಯದಲ್ಲಿ ರಾಜಕೀಯ ಸ್ಥಾನಮಾನ ಕೊಟ್ಟಂತೆ ನಿಮ್ನ ವರ್ಗದವರಿಗೆ ರಜಕೀಯದಲ್ಲಿ ಮೀಸಲಾತಿ ಕಲ್ಪಿಸಿಬೇಕೆಂದು ವಾದಿಸಿದರು. ಅಂತಿಮವಾಗಿ ಅಂಬೇಡ್ಕರ್‌ವರ ಕೋರಿಕೆಯಂತೆ ನಿಮ್ನ ವರ್ಗದವರಿಗೆ ಮಿಸಲಾತಿ ನೀಡಲು ಬ್ರಿಟಿಷ್ [ಪ್ರಧಾನಿ (ರ್‍ಯಾಮ್ಸೆ ಮ್ಯಾಕ್ ಡೋನಾಲ್ಡ್) ಒಪ್ಪಿಗೆ ಸೂಚಿಸಿದರು. ಆದರೆ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪರವಾಗಿ ಎಮ್.ಕೆ. ಗಾಂಧಿ ಭಾಗವಹಿಸಿದ್ದರು. ಮೀಸಲಾತಿಯನ್ನು ವಿರೋಧಿಸುತ್ತಾ ಅನ್ಯರ ಸಹಮತವಿದ್ದರೆ ನನ್ನದೇನೂ ಅಭ್ಯಂತರವಿಲ್ಲ. ಎಂದು ಭಾರತಕ್ಕೆ ಬಂದು ಪೂನಾದ ಯರವಾಡ ಜೈಲಿನಲ್ಲಿ ಪ್ರತ್ಯೇಕ ಮಿಸಲಾತಿ ವಿರುದ್ದವಾಗಿ ಉಪವಾಸ ಕೈಗೊಂಡರು.[೫]

ಗಾಂಧೀಜಿ ಅವರು ಮೀಸಲಾತಿ ವಿರೋಧಿ ಧೋರಣೆಯನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರು ಮಹಾತ್ಮಾ ಗಾಂಧೀಜಿಯವರು ಇಂಗ್ಲೆಂಡ್ ನಾಶವಾಗುವುದಾದರೆ ಭಾರತಕ್ಕೆ ಸ್ವಾತಂತ್ರವೇ ಬೇಡ ಎಂಬ ನಿಲುವಿನಲ್ಲಿದ್ದರೆ, ಅಂಬೇಡ್ಕರ್‌ರವರು ದಲಿತರಿಗೆ ಸ್ವಾತಂತ್ರ್ಯ ದೊರೆಯದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯ ಬೇಡ ಎನ್ನುತ್ತಾರೆ. ಆದರೆ ಮದನ್ ಮೋಹನ್ ಮಾಳವಿಯರ ಮಧ್ಯಸ್ಥಿಕೆಯಿಂದಾಗಿ ಒಂದು ಒಪ್ಪಂದಕ್ಕೆ ಬರಲಾಯಿತು. ಈ ಒಪ್ಪಂದದ ಪ್ರಕಾರ, ಪ್ರತ್ಯೇಕ ಮತದಾರ ವರ್ಗದ ಬದಲಾಗಿ ಪ್ರತ್ಯೇಕ ಮೀಸಲು ಸ್ಥಾನಗಳಿಗೆ ಒಪ್ಪಿಕೊಳ್ಳಲಾಯಿತು. (೨೪-೦೯-೧೯೩೨) ಇದೇ ಪೂನಾ ಒಪ್ಪಂದ ಎಂದು ಪ್ರಸಿದ್ಧಿಯಾಯಿತು.[೬]

ಪೂನಾ ಒಪ್ಪಂದದಲ್ಲಿ ನಡೆದಿದ್ದು ಒಂದು ಖಾಜಿ ನ್ಯಾಯ. ದಲಿತರಿಗೆ ಬಗೆದ ದ್ರೋಹ ಗಾಂಧೀಜಿಯವರು ಮೇಲ್ವರ್ಗದವರ ಪ್ರತಿನಿಧಿಯಂತೆ ವರ್ತಿಸಿದರು. ಅಂಬೇಡ್ಕರ್‌ವರು ಕೆಳವರ್ಗದವರ ಮತ್ತು ಅಲ್ಪಸಂಖ್ಯಾತರ ಪ್ರತಿನಿಧಿಯಂತೆ ವರ್ತಿಸಿದರು. ಈ ಒಪ್ಪಂದದಲ್ಲಿ ಆದ ಅನ್ಯಾಯವನ್ನು ಸರಿಪಡಿಸಲು ಸಾಧ್ಯವಿಲ್ಲ ಇಂದು ಚುನಾವಣೆಯಲ್ಲಿ ಸಮರ್ಥ ಸ್ವಾಭಿಮಾನಿ ಅಭ್ಯರ್ಥಿಗಳು ಜಾತಿ ರಾಜಕಾರಣಕ್ಕೆ ಸೋಲುಂಡು ಮನೆ ಸೇರುತ್ತಾರೆ. ಇದು ಗಾಂಧೀಜಿಯವರು ಭಾರತದ ಅಸ್ಪೃಶ್ಯ ಸಮುದಾಯಕ್ಕೆ ನಿಡಿದ ಕೊಡುಗೆ ಎಂದಿದ್ದಾರೆ. ಭಾರತದಲ್ಲಿ ಅಸ್ಪೃಶ್ಯರ ಬಗ್ಗೆ ಮೇಲ್ವರ್ಗದ ದೊರಣೆ ಮತ್ತು ಗಾಂಧೀಜಿಯವರ ಧೋರಣೆಯಂತೆ ಕರ್ನಾಟಕದಲ್ಲಿ ಇದಕ್ಕಿಂತ ಭಿನ್ನವಾಗಿರಲಿಲ್ಲ.

ಕನಾಟಕದಲ್ಲಿ ಹಿಂದುಳಿದ ವರ್ಗಗಳು ಸಂಘಟಿತಗೊಳ್ಳುವ ಪ್ರಕ್ರಿಯೆ ಆರಂಭವಾಯಿತು. ಅದರಂತೆಯೇ ೧೯೦೫ರಲ್ಲಿ ವಿರಶೈವ ಮಹಾಸಭಾ, ೧೯೦೬ರಲ್ಲಿ ಒಕ್ಕಲಿಗರ ಸಂಘ, ಆದಿ ದ್ರಾವಿಡರ ಸಂಘಟನೆಗಳು ಅಸ್ಥಿತ್ವಕ್ಕೆ ಬಂದವು. ಆಗಲೇ ಬ್ರಾಹ್ಮಣೇತರರಿಗೆ ಮೀಸಲಾತಿಗಾಗಿ ಆಗ್ರಹಿಸಿದವು. ಜೊತೆಗೆ ಮೈಸೂರು ಸಂಸ್ಥಾನಗಳಲ್ಲಿ ಚಳುವಳಿಯೂ ಪ್ರಾರಂಭವಾಯಿತು. ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾದ ನಾಲ್ವಡಿ ಕರಷ್ಣರಾಜ ಒಡೆಯರ ಮಿಲ್ಲರ್ ಕಮಿಷನ್ ನೇಮಿಸಿದರು. ಜಸ್ಟಿಸ್ ಮಿಲ್ಲರ್ ಕಮಿಷನ್‌ನ ಶಿಫಾರಸ್ಸುಗಳ ಪ್ರಕಾರ ಬ್ರಾಹ್ಮಣೇತರರಿಗೆ ಸರಕಾರಿ

ಉದ್ಯೋಗದಲ್ಲಿ ಮೀಸಲಾತಿಗೆ ಅವಕಾಶ ನೀಡಲಾಯಿತು. ಆದರೆ ಈ ಮೀಸಲಾತಿ ತೀರ್ಪನ್ನು ವಿರೋಧಿಸಿ. ದಿವಾನರಾದ ಸರ್.ಎಂ.ವಿಶ್ವೇಶ್ವರಯ್ಯ ನವರು ತಮ್ಮ ಹುದ್ದೆಗೆ ರಾಜೀನಾಮೆ ನಿಡಿದರು. ಇದಕ್ಕೆ ಕಾರಣ ಭಾರತದಲ್ಲಿರುವ ಜಾತಿಪದ್ಧತಿ ಎಂದು ಬೇರೆನೂ ಹೇಳಬೇಕಾಗಿಲ್ಲ.[೬]

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಮೀಸಲಾತಿ ಪ್ರಯೋಜನಗಳನ್ನು ಪಡೆಯುತ್ತಿದ್ದ ಲಿಂಗಾಯತ, ಒಕ್ಕಲಿಗ, ಮುಸ್ಲಿಂ, ಸಮುದಾಯಗಳು ಮೀಸಲಾತಿಯ ಪ್ರಯೋಜನವನ್ನು ಪಡೆಯುತ್ತಿದ್ದವು. ೧೯೫೬ರ ರಾಜ್ಯಗಳ ಮರು ವಿಂಗಡಣ ಪರಿಣಾಮವಾಗಿ ಕೊಡಗು, ಹೈದ್ರಬಾದ್ ಕನಾಟಕ, ಮುಂಬೈ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಪ್ರಾಂತ್ಯಗಳು ಸೇರಿದ ಮೇಲೆ ಲಿಂಗಾಯತರು ಜನಸಂಖ್ಯೆಯಲ್ಲಿ ಮೊದಲ ಸ್ಥಾನಕ್ಕೇರಿದರು ಮಾತ್ರವಲ್ಲ ಒಕ್ಕಲಿಗರು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟರು. ೧೯೭೨ರ ತನಕ ಲಿಂಗಾಯತ ನಾಯಕರಾದ ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ ಮತ್ತು ವಿರೇಂದ್ರ ಪಾಟೀಲರು ಆಡಳಿತದ ಚುಕ್ಕಾಣಿ ಹಿಡಿದಿದ್ದರು. ಏಕೀಕರಣದೊಂದಿಗೆ ಹಿಂದುಳಿದ ವರ್ಗದವರ ಪಟ್ಟಿಯಲ್ಲಿ ಸಾಕಷ್ಟು ಏರುಪೇರಾಯಿತು. ೧೯೮೫ರಲ್ಲಿ ಸರಕಾರ ಆಜ್ಞೆ ಹೊರಡಿಸಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಮುದಾಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ಬ್ರಾಹ್ಮಣರು ಹಿಂದುಳಿದ ವರ್ಗಗಳೆಂದು ಘೋಷಿಸಿತು. ಈ ಆಜ್ಞೆಯನ್ನು ಕೋರ್ಟು ಅಮಾನ್ಯ ಮಾಡಿತು. ಆದರೆ ೧೯೬೦ರ ರಾಮಕೃಷ್ಣ ಸಿಂಗ್ ಮೊಕದ್ದಮೆಯಲ್ಲಿ ಈ ಆದೇಶವನ್ನು ದೋಷ ಪೂರಿತ ಎಂದು ರದ್ದುಗೊಳಿಸಿತು. ಪರಿಣಾಮವಾಗಿ ೧೯೬೧ರಲ್ಲಿ ನಾಗನಗೌಡ ಸಮಿತಿ ವರದಿಯು ಸಾಕಷ್ಟು ಒತ್ತಡಗಳಿದ್ದಾಗ್ಯೂ ಲಿಂಗಾಯತ ಕೋಮುವನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೈ ಬಿಟ್ಟಿತು. ತದನಂತರ ಸರಕಾರವು ಲಿಂಗಾಯತರನ್ನು ಸೇರಿಸಿದ್ದು ಕರ್ನಾಟಕದ ರಾಜಕಾರಣದ ಮೇಲೆ ಅವರಿಗಿದ್ದ ಹಿಡಿತ ಎಷ್ಟೆಂಬುದನ್ನು ಪ್ರತಿಬಿಂಬಿಸುತ್ತದೆ. ನಂತರ ನಡೆದ ಕಾನೂನು ಸಮರದಲ್ಲಿ ನ್ಯಾಯಾಲವು ಕೂಡ ಹಿಂದುಳಿವಿಕೆ ಜಾತಿ ಒಂದೇ ಮಾನದಂಡವಲ್ಲ. ಸರ್ಕಾರದ ಮೀಸಲಾತಿಯನ್ನು ಆರ್ಥಿಕ ಮಾನದಂಡದಲ್ಲಿ ನೀಡುವಂತೆ ಆಜ್ಞೆ ನಿಡಿತು.[೮]

ಭಾರತದಲ್ಲಿ ಜಾತಿಪದ್ಧತಿಯ ಮೇಲೆ ಸಮಾಜ ರಚನೆಯಾಗಿದೆ. ಆದರೆ ಜಾತಿಯು ಒಬ್ಬನ ವೃತ್ತಿ ಮತ್ತು ಅವನು ಮಾಡುವ ಕೆಲಸದ ಮೇಲೆ ಅವಲಂಭಿಸಿರುವುದಿಲ್ಲ. ಒಬ್ಬ ಬ್ರಾಹ್ಮಣ ತನ್ನ ಜೀವನವನ್ನು ಕಸ ಗೂಡಿಸುವವನಾಗಿ, ತಟ್ಟೆ ತೊಳೆಯುವವನಾಗಿ, ಜೀವನ ಸಾಗಿಸಿದರೂ ಅವನು ಬ್ರಾಹ್ಮಣನಾಗಿಯೇ ಇರುತ್ತಾನೆ. ಆದರೆ ಒಬ್ಬ ಅಸ್ಪೃಶ್ಯ ಲಾಯರ್ ಆಗಿ, ಇಂಜಿನಿಯರ್ ಆಗಿ, ಡಾಕ್ಟರ್ ಆಗಿ, ಶಾಸಕನಾಗಿ, ಮಂತ್ರಿಯಾಗಿ ಜೀವನ ಸಾಗಿಸಿದ್ದರೂ ಅವನು ಅಸ್ಪೃಶ್ಯನಾಗಿರುವುದು ಕೊನೆಗೊಳ್ಳವುದಿಲ್ಲ. ಅಲ್ಲದೇ ವೃತ್ತಿ ಧರ್ಮ ಬದಲಾಯಿಸಿದರೂ ಜಾತಿಯನ್ನು ಗುರುತಿಸದೇ ಇರುವುದು ಸಾಧ್ಯವಿಲ್ಲ.[೯]

ಅಂಬೇಡ್ಕರ್‌ರವರು ದಲಿತರಿಗೆ ಸ್ವಾತಂತ್ರ್ಯ ದೊರೆಯದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯ ಬೇಡ ಎಂದಿದ್ದಾರೆ. ಸ್ವಾತಂತ್ರ್ಯ ಮತ್ತು ಸಮಾನತೆ ಎಂಬ ಉನ್ನತ ದ್ಯೇಯ ಹೊಂದಿರುವ ಭಾರತದ

ಸಂವಿಧಾನಾತ್ಮಕ ಪ್ರಜಾಪ್ರಭುತ್ವ ಇಲ್ಲಿರುವ ಬಡವರ, ಹಿಂದುಳಿದವರ ಹಾಗೂ ವಾರಸುದಾರರೇ ಇಲ್ಲದ ಜನಾಂಗದ ಬದುಕಿಗೆ ಅಧಿಕ ತಪ್ಪುಗಳನ್ನು ಸೇರಿಸುತ್ತಲೇ ನಡೆದಿದೆ. ಆದ್ದರಿಂದ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಎಲ್ಲಿ ಇರುವುದಿಲ್ಲವೋ ಅಲ್ಲಿ ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ ಎಂಬ ಅಭಿಪ್ರಾಯವು ಸೂಕ್ತವಾದುದು.[೧೦]

ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಡಾ. ಬಿ.ಆರ್.ಅಂಬೇಡ್ಕರ್ ಸಾಮಾಜಿಕ ಚಿಂತನೆ ಭಾರತದ ಕೋಟ್ಯಂತರ ಪ್ರಜೆಗಳ ಜೀವನ ಮಟ್ಟ ಎತ್ತರಿಸುವಲ್ಲಿ ವಿಫಲವಾದದ್ದು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಇಂತಹ ದಯನೀಯ ಸ್ಥಿತಿಗೆ ಬಡತನ ರೇಖೆಯ ಕೆಳಗೆ ಜೀವನ ನಡೆಸುತ್ತಿರುವ ಕೋಟ್ಯಂತರ ಜನರ ಧಾರುಣವಾದ ಅಸ್ಥಿತ್ವಕ್ಕೆ ಕಾರಣರು ಯಾರು? ತನ್ನ ಕೋಟ್ಯಂತರ ಪ್ರಜೆಗಳನ್ನು ಇಂತಹ ಔದಾಸೀನ್ಯ ನಿರ್ಲಕ್ಷತೆಯಿಂದ ನೋಡಿಕೊಳ್ಳುತ್ತಿರುವ ದೇಶವನ್ನು ಒಂದು ಸುಸಂಸ್ಕೃತ ನಾಗರೀಕ ದೇಶವೆಂದು ಕರೆಯಬಹುದು ಎಂಬ ಅಂಶವನ್ನು ಡಾ. ಬಿ.ಆರ್.ಅಂಬೇಡ್ಕರ್ ಸಾಮಾಜಿಕ ಚಿಂತನೆಯಲ್ಲಿ ಕಾಣಬಹುದು. ಆದ್ದರಿಂದಲೇ ಎಷ್ಟೇ ವಿರೋಧಗಳಿದ್ದರೂ ಸಂವಿಧಾನ ಸಮಿತಿಯಲ್ಲಿ ಅಂಬೇಡ್ಕರ್‌ರವರು ತಮ್ಮ ನಿಲುವನ್ನು ಬದಲಿಸಲಿಲ್ಲ. ಇತಿಹಾಸ ಮತ್ತು ಸಂಸ್ಕೃತಿಯನ್ನು ಕಳೆದುಕೊಂಡ ಜನಾಂಗವು ತನ್ನ ಹಕ್ಕು ಮತ್ತು ಅಧಿಕಾರಿಗಳನ್ನು ಕಳೆದುಕೊಳ್ಳುತ್ತದೆ ಎಂಬುದು ಅಂಬೇಡ್ಕರ್‌ರವರ ವಾದವಾಗಿತ್ತು.[೧೧]

ಐವತ್ತರ ದಶಕದಲ್ಲಿ ಭಾರತದ ಸಂವಿಧಾನ ಅಂತಿಮ ರೂಪರೇಷ ಪಡೆಯುವ ಸಂದರ್ಭದಲ್ಲಿ ಮಿಸಲಾತಿ ಚರ್ಚೆ ಪುನಃ ಬಂತು. ಅವಾಗಲೂ ಪರ–ವಿರೋದ ಬಣಗಳಿದ್ದವು. ಆದರೆ ವಿಪರ್ಯಾಸವೆಂದರೆ ಪರ–ವಿರೊಧ ಎರಡನ್ನೂ ಕೂಡ ಹೆಚ್ಚು–ಕಡಿಮೆ ಒಂದೇ ವರ್ಗ ಚರ್ಚೆ ಮಾಡಿದೆ. ಅಂದರೆ ದಲಿತರಿಗೆ ಮೀಸಲಾತಿ ನೀಡುವ ಚರ್ಚೆಯನ್ನು ಆ ವರ್ಗದ ಜನಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಇತರರೂ ಮಾಡಿದ್ದಾರೆ. ಈ ಹೇಳಿಕೆಗೆ ಬಹುದೊಡ್ಡ ಆಕ್ಷೇಪವಿದ್ದರೆ ಅದು ಸಂವಿಧಾನ ಶಿಲ್ಪಿ ಡಾ. ಬಿ.ಆರ್, ಅಂಬೇಡ್ಕರ್‌ರವರು ಆ ವರ್ಗಗಳ ಹಕ್ಕನ್ನೂ ಪರಿಣಾಮಕಾರಿಯಾಗಿ ಮಂಡಿಸಿದ್ದಾರೆ. ಮಾತ್ರವಲ್ಲ ತಮ್ಮ ಪ್ರಯತ್ನದಲ್ಲಿ ಯಶಸ್ವಿಯನ್ನು ಕಂಡಿದ್ದಾರೆ.[೧೨]

ಭಾರತೀಯ ಸಮಾಜ ಜಾತಿ ವ್ಯವಸ್ಥೆಯನ್ನು ತಳಹದಿ ಯನ್ನಾಗಿರಿಸಿಕೊಂಡಿರುವುದರಿಂದ ಸಮಾಜವು ಹಲವು ಜಾತಿ, ಉಪಜಾತಿಗಳಾಗಿ ಒಡೆದು ಹೋಗಿದೆ. ಸಮಾಜದಲ್ಲಿ ಬದುಕುವ ಜನರು ಒಂದೇ ಪ್ರದೇಶದಲ್ಲಿದ್ದರೂ ಯಾವುದೇ ಭಾವನಾತ್ಮಕ ಸಂಬಂಧಗಳನ್ನು ಇರಿಸಿಕೊಳ್ಳದೇ ಪ್ರತ್ಯೇಕವಾದ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿದೆ. ಪ್ರತಿಯೊಂದು ಜಾತಿಯು ತನ್ನ ಎಲ್ಲಾ ಬಗೆಯ ಸಂಬಂಧಗಳಿಗೆ ತನ್ನದೇ ಆದ ಜಾತಿ ಪರಿಮಿತಿ ಯನ್ನಾಗಿರಿಸಿಕೊಂಡಿದೆ. ಈ ಕಾರಣದಿಂದ ಭಾರತೀಯತೆ ಎಂಬುದು ಅಖಂಡವಾಗಿರದೇ ಹಲವಾರು ವೈರುಧ್ಯಗಳಿವೆ. ಇದರಿಂದ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧಿಸದೇ ಹಿಂದುಳಿದ ರಾಷ್ಟ್ರವಾಗಿ ಉಳಿಯಲು ಇಲ್ಲಿನ ಸಾಮಾಜಿಕ ದೌರ್ಬಲ್ಯಗಳೇ ಕಾರಣವಾಗಿವೆ ಎಂದಿದ್ದಾರೆ. ಏಕೆಂದರೆ ಯಾವುದೇ ರಾಷ್ಟ್ರವು ಮುಂದುವರೆಯ

ಬೇಕಾದರೆ ಸಾಮಾಜಿಕ ಅಸಮಾನತೆ ಇರಬಾರದು. ಕೇವಲ ಒಂದು ವರ್ಗದಿಂದ ರಾಷ್ಟ್ರೀಯತೆ ಅಥವಾ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ.[೧೩]

ಆಧುನಿಕ ಭಾರತದ ಸಮಾಜವಾದಿ ಚಿಂತನೆಯ ಇತಿಹಾಸದಲ್ಲಿ ಅಂಬೇಡ್ಕರ್‌ರವರ ಕೊಡುಗೆ ಅನನ್ಯವಾದುದು. ಈ ಅನನ್ಯತೆಯ ಮೊದಲ ಕಾರಣವೆಂದರೆ ಭಾರತೀಯ ಶೋಷಿತರ ಒಂದು ನಿರ್ದಿಷ್ಟ ವರ್ಗವಾದ ಅಸ್ಪೃಶ್ಯರ ಬದುಕಿನ ಗರ್ಭದಿಂದ ಮೂಡಿಬಂದ ಚಿಂತನೆ. ಇದನ್ನೇ ಇನ್ನೋಂದು ರೀತಿಯಲ್ಲಿ ಹೇಳುವುದಾದರೆ, ಮಾರ್ಕ್ಸ್‌ನ ಚಿಂತನೆ ಕಾರ್ಮಿಕ ವರ್ಗದ ನಡುವೆ ಹೇಗೆ ಬಿಡಿಸಲಾಗದ ಸಂಬಂಧ ಹೊಂದಿದೆಯೋ ಹಾಗೆಯೇ ಅಂಬೇಡ್ಕರ್‌ರವರ ಚಿಂತನೆ ಅಸ್ಪೃಶ್ಯರ ಹಾಗೂ ದಲಿತರ ಬದುಕಿನ ಜೊತೆ ಅನಿವಾರ್ಯ ಸಂಬಂಧವನ್ನು ಹೊಂದಿದೆ. ಕಾರ್ಮಿಕ ವರ್ಗದ ವಿಮೋಚನೆ ಆಗದೆ ಇಡೀ ಮಾನವ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಭಾವಿಸಿದ. ಹಾಗೇ ದಲಿತರ ವಿಮೋಚನೆ ಆಗದೇ ಇಡೀ ಭಾರತೀಯ ಸಮಾಜ ವಿಮೋಚನೆ ಸಾಧ್ಯವಿಲ್ಲ.[೧೪]

ಮೀಸಲಾತಿಗೆ ಸಂಬಂಧಿಸಿದಂತೆ ಇವರೆಗಿನ ಬೆಳವಣಿಗೆಗಳು ಮತ್ತು ಮೀಸಲಾತಿಗೆ ಸಂಬಂಧಿಸಿದ ಅಭಿವೃದ್ಧಿಯ ಫಲಗಳನ್ನು ವಿಶ್ಲೇಷಿಸುತ್ತಾ ಮೀಸಲಾತಿಯಲ್ಲಿ ಕೇವಲ ಸಣ್ಣಪುಟ್ಟ ಹುದ್ದೆಗಳಲ್ಲಿ ಮಾತ್ರ ಮೀಸಲಾತಿ ಎಂಬಂಥೆ ಗೋಚರಿಸುತ್ತದೆ ಎಂದು ಅಭಿಪ್ರಾಯಪಡುತ್ತಾ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲರು, ಮುಖ್ಯಮಂತ್ರಿಗಳು, ಲೋಕಸಭೆ, ರಾಜ್ಯಸಭೆ ಅಧ್ಯಕ್ಷರು, ವಿಧಾನ ಪರಿಷತ್ತು, ವಿಧಾನಸಬೆಯ ಅಧ್ಯಕ್ಷರು, ಸುಪ್ರಿಂ ಕೋರ್ಟಿನ್ ನ್ಯಾಯಾಧೀಶರು, ಹೈಕೋರ್ಟಿನ ನ್ಯಾಯಾದೀಶರು, ಲೋಕಸೇವಾ ಆಯೋಗದ ಅಧ್ಯಕ್ಷರು ಸದಸ್ಯರು, ಭಾರತದ ಮಹಾ ಲೆಕ್ಕಪರಿಶೋಧಕರು, (ಸಿ.ಎ.ಜಿ)ಅಟಾರ್ನಿ ಜನರಲ್, ಅಡ್ವೋಕೇಟ್ ಜನರಲ್, ಮೊದಲಾದವು ಮೀಸಲಾತಿ ಹುದ್ದೆಗಳಿಗೆ ಅನ್ವಯಿಸುವಂತಿಲ್ಲ. ಕೇಂದ್ರ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಧಾನ ಮಂತ್ರಿಯ ಆಪ್ತ ಕಾರ್ಯದರ್ಶಿ, ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ, ಜಂಟಿ ಮುಖ್ಯ ಕಾರ್ಯದರ್ಶಿ, ಡಿ.ಸಿ, ಎಸ್.ಪಿ, ಮುಂತಾದ ಹುದ್ದೆಗಳಲ್ಲಿ ಜೂನಿಯರ್ ಕ್ಲಾಸ್ ೧ಕ್ಕಿಂತ ಮೇಲ್ಮಟ್ಟದ ಹುದ್ದೆಗಳಲ್ಲಿ ಮೀಸಲಾತಿ ಇಲ್ಲವೆಂದು ಸರ್ಕಾರವೇ ವಿಧಿಸಿರುವ ಮಿತಿಯಿದೆ.[೧೫] ಇದರ ಜೊತೆಗೆ ಖಾಸಗೀಕರಣದ ನೀತಿಯಿಂದ ಪುರಸಭೆ ಮತ್ತು ಮಹಾನಗರ ಪಲಿಕೆಗಳು ಇತರೆ ಸರ್ಕಾರಿ ಖಾಸಗೀಕರಣಕ್ಕೆ ಒಳಪಡುತ್ತಿವೆ. ಮೀಸಲಾತಿ ಹುದ್ದೆಯ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳೆಲ್ಲವು ಒಣಗಿಹೋಗಿವೆ, ಇನ್ನೂ ಒಣಗುತ್ತಿವೆ. ಇದರ ಜೊತೆಗೆ ದಲಿತ ನಾಯಕತ್ವವು ಸಹ ಮೀಸಲಾತಿ ಮೂಲಕ ನೀಡಲಾದ ಸೌಲಭ್ಯಗಳನ್ನು ಸಂಘರ್ಷವನ್ನಾಗಿ ಪರಿವರ್ತಿಸುವಲ್ಲಿ ವಿಫಲವಾಯಿತು. ಪರಿಣಾಮವಾಗಿ ಹಿಂದುಳಿದವರ ಜಾಗೃತ ಮತ್ತು ಹೋರಾಟದ ಫಲವಾಗಿ ಮೀಸಲಾತಿ ಪಟ್ಟಿಯಲ್ಲಿ ಬರುವಂತಾಯಿತು. ಉದಾ: ಬ್ರಾಹ್ಮಣ ಮಾಲೇಯರೆಂದು(ಮಾಲ ಬ್ರಾಹ್ಮಣ) ಜಂಗಮರು. ಬೇಡ ಜಂಗಮರೆಂದು ಕುರುಬರು ಕಾಡುಕುರುಬರೆಂದು ಮೀಸಲಾತಿ

ಲಾಭ ಪಡೆಯುವಾಗ ಮತ್ತು ಮೀಸಲಾತಿ ವ್ಯಾಪ್ತಿಗೆ ಬಂದರು ಹೀಗಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಮೀಸಲಾತಿ ಅವಕಾಶದಿಂದ ತಾವೇ ತಾವಾಗಿ ದೂರ ಸರಿಯುವಂತಹ ವಾತವರಣವು ಸಹ ನಿರ್ಮಾಣವಾಯಿತು. ಅಲ್ಲದೆ ಇಂದು ದಿನಕ್ಕೊಂದು ಜಾತಿ ಮೀಸಲಾತಿಯ ವ್ಯಾಪ್ತಿಗೆ ಬರುತ್ತಿವೆ. ಆದರೆ ದಲಿತರಿಗೆ ನೀಡಿರುವ ಮೀಸಲಾತಿ ಪ್ರತಿದಿನ ಸೋರಗುತ್ತಿದೆ. ಅದರಲ್ಲಿ ಮೀಸಲಾತಿಯಲ್ಲಿ ಬರುವವರು ಕರಗುತ್ತಿದ್ದಾರೆ. ಇದನ್ನೂ ಪ್ರಜ್ಞಾಪೂರ್ವಕವಾಗಿ ಅಲೋಚನೆ ಮಾಡಬೇಕಾದ ಅಗತ್ಯವಿದೆ. ಸಂವಿಧಾನದ ೭೩, ೭೪ನೇ ತಿದ್ದುಪಡಿಯ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸ್ಥಳೀಯ ಸರ್ಕಾರಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಲ್ಲಿ ಮೀಸಲಾತಿ ನೀಡದಂತೆ ರಾಷ್ಟ್ರದ ಪ್ರಮುಖ ಹುದ್ದೆಗಳಲ್ಲಿ ಮೀಸಲಾತಿ ಯಾಕೆ? ಅನ್ವಯಿಸಬಾರದು, ನ್ಯಾಯ ಎಲ್ಲ ಹಂತದಲ್ಲಿ ಒಂದೇ ರೀತಿಯಾಗಿರಬೇಕು ಅಂದಾಗ ಮಾತ್ರ ಮೀಸಲಾತಿ ಮತ್ತು ಮಿಸಲಾತಿಯಲ್ಲಿ ಬರುವವರು ಜೀವಂತವಾಗಿ ಉಳಿದುಕೊಳ್ಳುವ ಸಾಧ್ಯತೆ ಉಂಟು.

೧.೨. ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ

ರಾಜಕೀಯ ಸಿದ್ಧಾಂತಗಳಲ್ಲಿ ಪ್ರಜಾಪ್ರಭುತ್ವವೆಂಬುದು ಒಂದು ವ್ಯರ್ಜವಾದ ಪರಿಕಲ್ಪನೆಯಾಗಿ ಕಾಣಿಸಿಕೊಂಡಿದೆ. ಪ್ರಜಾಪ್ರಭುತ್ವ ಎಂಬ ಪದವು ಹೊಸ ಪರಿಭಾಷೆಯೇನಲ್ಲ. ಇದನ್ನು ಸುಮಾರು ೫೦೦೦ ವರ್ಷಗಳಿಂದಲೂ ಗುರುತಿಸುತ್ತಾ ಬರಲಾಗಿದೆ. ರಾಜಕೀಯ ಸಿದ್ಧಾಂತ ಕುರಿತು ಶಾಸ್ತ್ರೀಯ ಯುಗದ ಸಾಹಿತ್ಯದಲ್ಲಿ ಎಲ್ಲಿಯೂ ಕೂಡ ಈ ವಿಚಾರಕ್ಕೆ ನೇರವಾಗಿ ಸಂಬಂಧಿಸಿದ ಒಂದೇ ಒಂದು ಪುಸ್ತಕವಿಲ್ಲ, ಪ್ಲೇಟೋನ ಈ ಕಲ್ಪನೆಯನ್ನು ಹಾಸ್ಯ ಮಾಡಲಿಕ್ಕೆ ಬಳಸಿದ ಅರಿಸ್ಟಾಟಲ್ ತನ್ನ ಸಂವಿಧಾನ ವರ್ಗೀಕರಣದಲ್ಲಿ ಇದನ್ನು ನೀಚ ವರ್ಗಕ್ಕೆ ಸೇರುವಂತದ್ದು ಎಂದು ಗುರುತಿಸಿದ; ಅಲ್ಲಿಂದ ೧೯ನೇ ಶತಮಾನದವರೆಗೆ ಈ ವಿಚಾರ ಪ್ರಸ್ತಾಪವಾಗಿದ್ದು ಅಪರೂಪ. ಒಟ್ಟಿನಲ್ಲಿ ಅಂದಿನಿಂದಲೂ ಪ್ರಜಾಪ್ರಭುತ್ವ ಎಂಬ ಪರಿಭಾಷೆ ಇದೆ. ಆದರೆ ಅದು ಹೆಚ್ಚಾಗಿ ಋಣಾತ್ಮಕ ಪರಿಕಲ್ಪನೆಯಾಗಿ ಕಾಣಿಸಿಕೊಂಡಿದೆ.

ಜಗದ ನಿಯಮ ಪರಿವರ್ತನೆ, ಮಾನವ ಚರಿತ್ರೆ ಬೆಳವಣಿಗೆಯಲ್ಲಿ ಇಂತಹ ಅನೇಕ ಸಿದ್ಧಾಂತಗಳು ಬಂದು ಹೋಗಿವೆ. ಅರಸೊತ್ತಿಗೆ, ಸರ್ವಾಧಿಕಾರ, ಪ್ರಜಾಪ್ರಭುತ್ವ, ಸಮಾಜವಾದ ಉದಾರವಾದ ಇಂತಹ ಹಲವಾರು ರಾಜಕೀಯ ಸಿದ್ಧಾಂತ ಮತ್ತು ಆದರ್ಶಗಳನ್ನು ಕಾಣಬಹುದು. ಆದರೆ ಪ್ರಜಾಪ್ರಭುತ್ವದಷ್ಟು ಜನಪ್ರಿಯತೆ ಬೇರೆಯಾವ ಸಿದ್ಧಾಂತವೂ ಗಳಿಸಿಲ್ಲ, ಯಾಕೆಂದರೆ ಪ್ರಜಾಪ್ರಭುತ್ವವೂ ತನ್ನಷ್ಟಕ್ಕೆ ತಾನೇ ಅಭಿವೃದ್ಧಿಯನ್ನು ಸಾಧ್ಯ ಮಾಡಿಕೊಡುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಅದೇ ರೀತಿಯಾಗಿ ಅಭಿವೃದ್ಧಿಯೂ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಹಾಗಾಗಿ ಪ್ರಜಾಪ್ರಭುತ್ವವೂ ಕೇವಲ ಒಂದು ರಾಜಕೀಯ ಸಿದ್ಧಾಂತವಾಗಿರದೆ, ಅದು ಒಂದು ಜನರ ಜೀವನ ವಿಧಾನವಾಗಿದೆ. ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಎರಡು ಪ್ರತ್ಯೇಕ

ಪರಿಕಲ್ಪನೆಗಳಾದರೂ ಈ ಎರಡು ಪರಿಭಾಷೆಗಳು (ಇತ್ಯಾತ್ಮಕ) ಗುಣಗಳನ್ನು ಹೊಂದಿವೆ. ಉದಾಹರಣೆಗೆ ಪ್ರಜಾಪ್ರಭುತ್ವ ಎಲ್ಲರನ್ನು ಒಳಗೊಳ್ಳುತ್ತದೆ. ಆದರೆ ಜನ ಪ್ರತಿನಿಧಿಗಳ ಮೂಲಕ ಅದೇ ರೀತಿಯಾಗಿ ಅಭಿವೃದ್ಧಿ ಎಲ್ಲರನ್ನು ಒಳಗೊಳ್ಳುತ್ತದೆ. ಆದರೆ ಜನ ಪ್ರತಿನಿಧಿಗಳ ಮೂಲಕ ಡೇವಿಡ್ ಭಾಥಮ್ ಮತ್ತು ಕೆವಿನ್‌ಬಾಯ್ಲ್ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿಯನ್ನು ಮೊದಲಿಗೆ ಆರ್ಥಿಕ ಅಭಿವೃದ್ಧಿಯನ್ನು ಅಳೆಯುವ ತಲಾವರಮಾನ ಎಂಬ ಮಾನದಲ್ಲಿ ಅಳೆಯಲಾಗುವುದು ಮತ್ತು ಅದು ಜನರ ಆಳ್ವಿಕೆ, ಸ್ವಾತಂತ್ರ್ಯ ಹಾಗೂ ಜನರಿಗೆ ಎಷ್ಟರಮಟ್ಟಿಗೆ ಸ್ಪಂದಿಸುತ್ತದೆ ಎಂಬುದನ್ನು ಅವಲಂಬಿಸಿದೆ. ಇದು ರಾಜಕೀಯ ಸ್ವಾತಂತ್ರ್ಯ ನಾಗರಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. ಇದಕ್ಕೆ ಸಂಖ್ಯಾಶಾಸ್ತ್ರದ ಸಹ ಸಂಬಂಧವಿದೆ. ೧೯೯೦ರ ದಶಕದಲ್ಲಿ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ನಡುವೆ ಋಣಾತ್ಮಕ ಸಂಬಂಧ ಕಲ್ಪಿಸಿತ್ತು (ಪ್ರಿಜ್ವರ್ಸಿಕಿ ಮತ್ತು ಲಿಮನ್‌ಗಿ) ಅಂದರೆ ಅಭಿವೃದ್ಧಿಯನ್ನು ಜನರ ವರಮಾನ ಅಥವಾ ತಲಾದಾಯದ ಮೂಲಕ ಮಾಪನ ಮಾಡುವ ಕ್ರಮಗಳು ಬಂದವು, ವರಮಾನವು ಜಿ.ಡಿ.ಪಿ.ಮೂಲಕ ಅಳೆಯಲಾಯಿತು. ಜಿಡಿಪಿಗೂ ಹಾಗೂ ಜನರ ಜೀವನಕ್ಕೂ ಸಂಬಂಧವಿಲ್ಲ. ಹೀಗಾಗಿ ಪ್ರಜಾಪ್ರಭುತ್ವದ ಬಗ್ಗೆ ಜನತೆಯಲ್ಲಿ ನಿರಾಸೆ ಭಾವನೆ ಸೃಷ್ಟಿಸಿತು. ಹೀಗಾಗಿ ಪ್ರಜಾಪ್ರಭುತ್ವದಲ್ಲಿ ಸುಧಾರಣವಾದ ಮುಂಚೂಣಿಗೆ ಬಂತು. ಅಸುಧಾರಣ ವಾದವೆ ಉದಾರವಾದ ಅದೇ ಉದಾರವಾದ ಎಲ್ಲರಿಗೂ ಎಲ್ಲ ಅವಕಾಶಗಳು ಸಿಗಬೇಕು. ಮತ್ತು ಹೆಚ್ಚಿನ ಜನರಿಗೆ ಹೆಚ್ಚಿನ ಸುಖ ಎಂದು ಪ್ರತಿಪಾದಿಸಿತು. ಆದರೆ ಉದಾರವಾದವು ಜನರಲ್ಲಿ ಆಶಾಭಾವನೆ ಸೃಷ್ಟಿಸಿತು ಹೊರತು ಆಚರಣೆಗೆ ಬರಲಿಲ್ಲ. ಹೀಗಾಗಿ ಉದಾಹವಾದವು ಸಹ ಜನರ ಆಸೆಯನ್ನು ನಿರಾಸೆಗೊಳಿಸಿತು. ಪರಿಣಾಮವಾಗಿ ನವ ಉದಾರವಾದ ಇದರಲ್ಲಿ ಮುಂಚೂಣಿಗೆ ಬಂತು. ಹೀಗೆ ಒಂದು ಅಭಿಪ್ರಾಯಕ್ಕೆ ಮತ್ತೊಂದು ಅಭಿಪ್ರಾಯ, ಒಂದು ವಾದಕ್ಕೆ ಮತ್ತೊಂದುವಾದ, ಒಂದು ಸಿದ್ಧಾಂತಕ್ಕೆ ಮತ್ತೊಂದು ಸಿದ್ಧಾಂತ ರೂಪಗೊಂಡವು, ಆದರೆ ಅವು ಯಾವುವು ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕೆ ಸರಿಸಮಾನವಾಗಿ ನಿಲ್ಲಲಿಲ್ಲ, ಸಮಾಜವಾದಕ್ಕೆ ಹಿನ್ನಡೆಯಾಗಿದ್ದಂತು ನಿಜ ಆದರೆ ಪ್ರಜಾಪ್ರಭುತ್ವವು ಜನಪ್ರಿಯತೆ ಪಡೆಯಿತು. ಅಂದರೆ ಪ್ರಜಾಪ್ರಭುತ್ವದಲ್ಲಿ ಅಂತಹ ಶಕ್ತಿ ಅಡಗಿದೆ ಹಾಗಾಗಿ ಇಂದಿಗೂ ಜನರ ಜೀವನಾಡಿಯಾಗಿದೆ.

ಅಭಿವೃದ್ಧಿ ಪರಿಭಾಷೆಯನ್ನು ಈಗಾಗಲೆ ನಡೆದ ಅಧ್ಯಯನದಿಂದ ನೋಡುವುದು ಅಭಿವೃದ್ಧಿಯ ಉದ್ದೇಶ ಮತ್ತು ಅದರ ಆಯಾಮಗಳನ್ನು ವಿಶ್ಲೇಷಿಸುವುದು ಮತ್ತು ತೀರ್ಮಾನಕ್ಕೆ ಬರುವುದು, ಅಭಿವೃದ್ಧಿ ಎನ್ನುವ ಪದ ಜಗತ್ತಿಗೆ ಹೊಸ ಪರಿಭಾಷೆಯೇನಲ್ಲ. ಇದನ್ನು ಡಾರ್ವಿನನ ವಿಕಾಸವಾದ ಸಿದ್ಧಾಂತದಲ್ಲಿ ಅಭಿವೃದ್ಧಿಯ ಪಳೆಯುಳಿಕೆಯನ್ನು ಗುರುತಿಸಬಹುದು ಅದೇ ರೀತಿಯಾಗಿ ಮಾರ್ಕ್ಸ್‌ನ ಐತಿಹಾಸಿಕ ಭೌತಿಕವಾದದ ವ್ಯಾಖ್ಯೆಯ ಪ್ರಕಾರ ಬದಲಾವಣೆ ಅವಶ್ಯಕವೆಂದು ಕಂಡುಬಂದಾಗ ಬದಲಾವಣೆ ಮಾಡಲೇಬೇಕು ಎಷ್ಟೇ ಕೆಟ್ಟದ್ದಾದರೆ ಇದ್ದದ್ದನ್ನು ಇಡಲೆಬೇಕೆಂದೆನು ಇಲ್ಲ. ಕೆಟ್ಟದನ್ನು ಕಿತ್ತಿಹಾಕಬೇಕು. ಒಳ್ಳೆಯದಕ್ಕೆ ಆಸ್ಪದ ಮಾಡಿಕೊಡಬೇಕು ಆಗ ಮಾತ್ರ ಪ್ರಗತಿ ಸಾಧ್ಯ ಎಂಬುದು ಮಾರ್ಕ್ಸ್ ಅಭಿವೃದ್ಧಿಗೆ ಕೊಟ್ಟ ವ್ಯಾಖ್ಯಾನವಾಗಿದೆ.

ಅದೇ ರೀತಿಯಾಗಿ ಜಾನ್‌ರಾವಲ್ಸ್‌ನ ಸಾಮಾಜಿಕ ನ್ಯಾಯ ಸಿದ್ಧಾಂತದ (Theory of Social justice) ಮೂಲಕವು ಗುರುತಿಸಬಹುದು, ಆದರೆ ವಾಸ್ತವದಲ್ಲಿ ಡಾರ್ವಿನನ ವಿಕಾಸವಾದಕ್ಕೂ ಮಾರ್ಕ್ಸ್‌ನ ಭೌತಿಕವಾದಕ್ಕೂ ಮತ್ತು ರಾವಲ್ಸ ನ್ಯಾಯಸಿದ್ಧಾಂತಕ್ಕೂ ಸಂಬಂಧವೇ ಇಲ್ಲದ ರೀತಿಯಲ್ಲಿ ಅಭಿವೃದ್ಧಿ ಪರಿಭಾಷೆ ಮೇಲೆ ಚರ್ಚೆಗಳು ನಡೆಯುತ್ತಿವೆ. ವಸಹಾತುಕಾಲದ ಸಂದರ್ಭದಲ್ಲಿ ಅಭಿವೃದ್ಧಿಯೆನ್ನುವ ಪದವನ್ನು ಹಿಂದುಳಿದ ಮತ್ತು ಮುಂದುವರೆದ ದೇಶಗಳೆಂದು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ದೇಶಗಳೆಂದು ಗುರುತಿಸಲಾಗುತ್ತಿದೆ. ಎರಡನೇಯ ಮಹಾಯುದ್ಧದ ನಂತರ ಅನೇಕ ದೇಶಗಳು ಸ್ವತಂತ್ರ ಮತ್ತು ಸ್ವಾಯತ್ತತೆಯನ್ನು ಪಡೆದುಕೊಂಡವು, ಆಗ ಅಭಿವೃದ್ಧಿಯನ್ನು ಶ್ರೀಮಂತ ಮತ್ತು ಬಡದೇಶಗಳು ಎಂದು ಗುರುತಿಸಲಾಯಿತು. ನಂತರ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದೆ ಇರುವ ದೇಶಗಳು ಎಂದು ಕರೆಯಲಾಯಿತು. ಅಭಿವೃದ್ಧಿ ಅನಾಭಿವೃದ್ಧಿ ಎಂದು ಮೊದಲು ದೇಶಗಳ ಆರ್ಥಿಕ ಬೆಳವಣಿಗೆಗೆ ಸೀಮಿತವಾಗಿದ್ದ ಪರಿಭಾಷೆ ಇಂದು ಮಾನವ ಅಭಿವೃದ್ಧಿ ಕಡೆಗೆ ವಾಲಿರುವುದನ್ನು ಗುರುತಿಸಬಹುದು ಮಾನವನಿಗೆ ಸಂಬಂಧಿಸಿದಂತೆ ಹೇಳುವುದಾದರೆ ಮೇಲು ಕೀಳು ಶ್ರೀಮಂತ ಬಡವ, ಒಡೆಯ, ಗುಲಾಮ, ಕಾರ್ಮಿಕ ಮಾಲೀಕ ಎಂಬ ಪದಗಳಲ್ಲಿರುವ ಕ್ರಿಯೆ ಮತ್ತು ಪ್ರತಿಕ್ರಿಯೆಯ ಪಳೆಯುಳಿಕೆಗಳೆ ಇಂದಿನ ಅಭಿವೃದ್ಧಿ ಮತ್ತು ಅನಾಭಿವೃದ್ಧಿ ಪದಗಳಿಗೆ ವರ್ಗಾವಣೆ (ಸಿಪ್ಪ)ಆಗಿದೆ. ಅಭಿವೃದ್ಧಿಯ ಆಳ ಅರಿವನ್ನು ಪ್ರಾಚೀನ ಕಾಲದಿಂದಲೂ ಗುರುತಿಸಬಹುದು ಆದರೆ ೨೦ನೇ ಶತಮಾನದಲ್ಲಿ IIನೇ ಮಹಾಯುದ್ಧದ ನಂತರ ಅಭಿವೃದ್ಧಿ ಪರಿಭಾಷೆ ಹೆಚ್ಚು ಪ್ರವರ್ಧಮಾನಕ್ಕೆ ಬಂತು ಎಂಬುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ.[೧೬]

ಕಳೆದ ೬೦ ವರ್ಷಗಳಲ್ಲಿ "ಅಭಿವೃದ್ಧಿಯ-ಡೆವಲಪ್‌ಮೆಂಟಿನ ಪರಿಕಲ್ಪನೆ ಕುರಿತು ನಡೆದಷ್ಟು ತೀವ್ರವಾದ ಚರ್ಚೆ ಬೇರೆ ಯಾವ ವಿಷಯದ ಬಗ್ಗೆಯೂ ನಡೆದಿಲ್ಲ, ಯಾವ ವಿಷಯವೂ ಅಷ್ಟು ಪ್ರಶಂಸೆಯನ್ನೂ ಗಳಿಸಿಲ್ಲ; ಅಷ್ಟೊಂದು ಟೀಕೆಗೂ ಒಳಗಾಗಿಲ್ಲ, ದ್ವಿತೀಯ ಮಹಾಯುದ್ಧದ ಕೊನೆಯ ವೇಳೆಗೆ, 'ಅಭಿವೃದ್ಧಿ'ಯು ಬಡಜನತೆಯ ಕನಸುಗಳನ್ನು ಸಂಕೇತಿಸುವ ಶಬ್ದವಾಗಿತ್ತು; ಹಾಗೂ ವಸಹಾತುಶಾಹಿ ಹಸಿವು-ಶೋಷಣೆ ಮೊದಲಾದ ಇನ್ನು ಹಲವು ಬಗೆ ದುಃಖ ದುಮ್ಮಾನಗಳಿಂದ ಬಿಡುಗಡೆಗೊಳಿಸಬಹಲ್ಲ ಹೊಸ ಭವಿಷ್ಯದ ಆಶೋತ್ತರಗಳನ್ನು ಸಂಕೇತಿಸುವ ಶಬ್ದವೂ ಆಗಿತ್ತು. ಆದರೆ ಇಂದು ಕೋಟ್ಯಾಂತರ ಜನರ ಪಾಲಿಗೆ ಅಭಿವೃದ್ಧಿಯೂ ಒಂದು ಕೆಟ್ಟ ಕನಸಾಗಿ ಕಾಡುತ್ತಿದೆ. ಜಾಗತಿಕ ಉತ್ಪಾದನಾ ಶಕ್ತಿಯ ಹೆಚ್ಚಳದಿಂದಾಗಿ ಈಗ ೯ ಬಿಲಿಯನ್ ಜನರಿಗೆ ಅಗತ್ಯವಾಗುವಷ್ಟು ಆಹಾರ ಬೆಳೆಸುವುದು ಸಾಧ್ಯವಾಗಿದೆ. ಅದು ಜಗತ್ತಿನ ಈಗಿನ ಜನಸಂಖ್ಯೆಗಿಂತ ಒಂದುವರೆ ಪಟ್ಟು ಜಾಸ್ತಿ ಜನರಿಗೆ ಸಾಕಾಗುವಷ್ಟು ಆಹಾರ ಆದರೂ ಇಂದು ಜಗತ್ತಿನಲ್ಲಿ ೧ ಬಿಲಿಯನ್‌ಗಿಂತಲೂ ಜಾಸ್ತಿ ಜನರು ಹಸಿವು ಮತ್ತು ಅಪೌಷ್ಟಿಕತೆಗಳನ್ನು ಅನುಭವಿಸುತ್ತಿದ್ದಾರೆ. ಆರಂಭದ ಅಭಿವೃದ್ಧಿಯ ದೃಷ್ಟಿಕೋನ ಈಗ ಇದೆಯೇ ಅದೇ ವಸಹಾತು ಶಾಹಿ ಮತ್ತು ಉಳ್ಳವರ ಹಿತಾಸಕ್ತಿ ಕಾಪಾಡುವ ಒಂದು ಟ್ರೋಜನ್ ಕುದುರೆಯಂತೆ ಕಾಣುತ್ತದೆ, ಅದರ ಜೊತೆಗೆ ಆರ್ಥಿಕ ಅಭಿವೃದ್ಧಿಯಿಂದ ಅಪಾಯಕ್ಕೆ ಸಿಲುಕಿರುವ ಮಿಲಿಯನ್ ಗಟ್ಟಲೆ ಜನರಿಗೆ

ಯಾವ ಪರ್ಯಾಯವಿದೆ ಯಾಕೆಂದರೆ ಅಭಿವೃದ್ಧಿ ಡೆವಲಪ್‌ಮೆಂಟ್ ಎಂಬ ಪದವು ಅಮೀಬಾದಂತೆ ಬಣ್ಣ, ಆಕಾರಗಳನ್ನು ಬದಲಾಯಿಸುವ ಜಲಚರ ಅಣು ಜೀವಿಯಂತೆ, ಸಮಯ ಮತ್ತು ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥಗಳನ್ನು ಧರಿಸಬಲ್ಲದ್ದಾಗಿದೆ. ಈ ಚರ್ಚೆಗಳು ಮತ್ತು ಅವುಗಳ ಹಿಂದಿರುವ ಸಿದ್ಧಾಂತಗಳು ಪ್ರಯತ್ನಿಸುತ್ತಿವೆ. ಇದು ನಿಜವಲ್ಲ, ಹಾಗೇ ನೋಡಿದರೆ ಅಭಿವೃದ್ಧಿಗೆ ನಿರ್ದಿಷ್ಟ ರೂಪ, ಅರ್ಥ, ವ್ಯಾಖ್ಯಾನ, ಸಿದ್ಧಾಂತಗಳಿಲ್ಲ, ಈ ರೀತಿಯಿಂದ ಅಭಿವೃದ್ಧಿಯೊಂದು ದ್ರವದ ರೀತಿಯಲ್ಲಿದೆ, ದ್ರವ ಹೇಗೆ ತಾನಿರುವ ಪಾತ್ರ ತಳೆಯುತ್ತದೆಯೋ ಅದೇ ರೀತಿ ಅಭಿವೃದ್ಧಿ ಕೂಡ ಅದು ಕಾರ್ಯರೂಪಕ್ಕೆ ಬರುವ ರಾಜಕೀಯ ಪರಿಸರ (ಪೊಲಿಟಿಕಲ್ ಎಕಾನಮಿ) ರೂಪ ಪಡೆಯುತ್ತದೆ, ಈ ಹಿಂದೆ ಮತ್ತು ಈಗಲೂ ಅಭಿವೃದ್ಧಿಗೆ ನಿರ್ದಿಷ್ಟ ರೂಪಕೊಡುವ ರಾಜಕೀಯ ಸಿದ್ಧಾಂತಗಳಿವೆ ಉದಾ: ಸೊಸಿಯಲಿಸಂ ಮತ್ತು ಕ್ಯಾಪ್ಟಲಿಸಂ ಇವುಗಳು ಸೊಸಿಯಲಿಸ್ಟ್ ಅಭಿವೃದ್ಧಿ ಮತ್ತು ಕ್ಯಾಪ್ಟಲಿಸ್ಟ್ ಅಭಿವೃದ್ಧಿಯ ಹುಟ್ಟಿಗೆ ಕಾರಣವಾಗಿವೆ. ಹೀಗೆ ಅಭಿವೃದ್ಧಿಯನ್ನು ನಾನಾ ಮಗ್ಗಲುಗಳಿಂದ ವಿವರಿಸಲಾಗುತ್ತಿದೆ. ಒಂದೊಂದು ಕಾಲ ದೇಶದಲ್ಲಿ ಅದಕ್ಕೆ ಒಂದೊಂದು ಅರ್ಥವಿದೆ. ಉತ್ತರ ಗೋಲಾರ್ಧದಲ್ಲಿ (ಯುರೋಪ್ ಮತ್ತು ಅಮೇರಿಕಗಳಲ್ಲಿ) ಅಭಿವೃದ್ಧಿ ಎಂದರೆ ಮಗುವಿನ ಮಾನಸಿಕ ಬೆಳವಣಿಗೆ, ದೈಹಿಕ ಬೆಳವಣಿಗೆ, ಎದುರಾಳಿಯನ್ನು ಸೋಲಿಸುವ ತಂತ್ರ ಅಥವಾ ಯೋಜನೆ ಎಂದು ಸೂಚಿಸಬಹುದು, ವೆಬಸ್ಟರ್ ಶಬ್ದ ಕೋಶದ ಪ್ರಕಾರ ಆಜತಜಟಂಠಿಎಂಬ ಇಂಗ್ಲಿಷ್ ಭಾಷೆಯ ಕ್ರಿಯಾಪದಕ್ಕೆ ಕೊಟ್ಟಿರುವ ಒಂದು ಅರ್ಥವೆಂದರೆ ಮೊಗ್ಗು ನಿಧಾನವಾಗಿ ಅರಳಿ ಹೂವಾಗುವ ಪ್ರಕ್ರಿಯೆ. ಈ ಅರಳುವಂತಹ ಪ್ರಕ್ರಿಯೆಗೆ ವಿಕಾಸಕ್ಕೆ ಅಭಿವೃದ್ಧಿಯ ಪ್ರತಿಪಾದಕರು ಆ ಶಬ್ದವನ್ನು "ಅಭಾರಿ" (ಪರ್ಶಿಯನ್ ಭಾಷೆಯಲ್ಲಿ ವಾಸಯೋಗ್ಯವಾದ ಸ್ಥಳ) ಅರಭಿಕ್‌ಭಾಷೆಯಲ್ಲಿ "ಇಮ್ರಾನ್" (ಒಂದು ಸ್ಥಳದಲ್ಲಿ ನೆಲೆಸಿ ಸಾರ್ಥಕ ಬದುಕು ನಡೆಸುವುದು) ಇಥೋಪಿಯಾದ ಲೋರಾನ್ ಬುಡಕಟ್ಟಿ ಭಾಷೆಯಲ್ಲಿ ಪಿದ್ನಾ ಎಂದು ಕರೆಯಲಾಗುತ್ತದೆ. ಅಂದರೆ (ಕಾಲ ಮತ್ತು ತಲೆ ಮಾರುಗಳ ಮೂಲಕ ಹರಿದು ಬರುವ ಜೀವನ ಪ್ರವಾಹವನ್ನು, ಸಂಘರ್ಷ, ಹಸಿವು, ಬೇಗುದಿ ಮತ್ತು ರೋಗ ರುಜಿನಗಳಿಲ್ಲದ ಒಂದು ಸಂಪನ್ನ ಪ್ರದೇಶವನ್ನು ಸೂಚಿಸುತ್ತದೆ ಒಟ್ಟಿನಲ್ಲಿ ಡೇವಲಪ್‌ಮೆಂಟ್ ಎಂಬ ಶಬ್ದವನ್ನು ಪ್ರಾಚೀನ ನಾಗರಿಕತೆಗಳ ಭಾಷೆಗಳ ಒಳಗೂ ತುರಕಿ, ಸಮುದಾಯಗಳು ತಮ್ಮ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ದೇಶಿಯ ವಿಧಾನದಿಂದ ಅನುಸರಿಸಿಕೊಂಡು ಬಂದಿದೆ ಎಂದು ಅದು ಒಳಗೊಳ್ಳುವಂತೆ ಮಾಡಲು ಯತ್ನಿಸಲಾಗಿದೆ. ಇದನ್ನು ಇಂಗ್ಲೀಷ್‌ನಲ್ಲಿ "Development" ಎಂದು ಕನ್ನಡದಲ್ಲಿ ಅಭಿವೃದ್ಧಿ ಎಂದು ಗುರುತಿಸುತ್ತಾ ಬರಲಾಗಿದೆ. ಅಭಿವೃದ್ಧಿಗೆ ದೇಶ, ಕಾಲ, ಮಕ್ಕಳು, ಮಹಿಳೆಯರು, ಶ್ರೀಮಂತರು, ಬಡವರು, ಕಪ್ಪು-ಬಿಳುಪು, ನ್ಯಾಯ-ಅನ್ಯಾಯ ಎಂಬ ಬೇದ ಭಾವವಿಲ್ಲ ಎಲ್ಲವನ್ನು ಎಲ್ಲರನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುತ್ತದೆ. ಮಜೀದ್ ರೆಹೆನಾಮಾ ೨೦೧೦ ಇದಕ್ಕೆ ಕೊಡುವ ಎರಡು ಕಾರಣಗಳೆಂದರೆ, ಒಂದನೇಯದಾಗಿ ಗಟಿಔ ೫೦ನೇ ವರ್ಷಾಚರಣೆಯ ಸಂದರ್ಭದಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳು ಅಭಿವೃದ್ಧಿಯ ಜಾಗತಿಕಲ್ಪನೆಯನ್ನು ಅನುಮೋದಿಸಿದರು. ಅವರು ಮೊದಲು

ಹಿಂದುಳಿದಿರುವಿಕೆ ಎಂಬ ನುಡಿಗಟ್ಟನ್ನು ಚಾಲ್ತಿಗೆ ತಂದು ಅದನ್ನು ತಮ್ಮ ಉದ್ದೇಶಗಳಿಗೆ ತಕ್ಕಂತೆ ದುಡಿಸಿಕೊಳ್ಳಲು ಅನುಕೂಲವಾಗುವಂತೆ ಆಧುನಿಕ ಅರ್ಥವ್ಯವಸ್ಥೆಯ ನೇತಾರರು, ಅದಕ್ಕೆ ತಮ್ಮದೇ ಆದ ಅರ್ಥವನ್ನು ಹೆಚ್ಚಿದ್ದು ಮತ್ತು ಎಲ್ಲಾ ಬಗೆಯ ಸಮಸ್ಯೆ ಮತ್ತು ಸಂಕಷ್ಟಗಳಿಗೆ "ಹಿಂದುಳಿದಿರುವಿಕೆ" ಎಂಬ ಈ ಹೊಸ ಸಂರಚನೆಯನ್ನು ಸಂವಾದಿಯನ್ನಾಗಿ ಮಾಡುವುದರಲ್ಲಿ ಸಫಲರಾದರು, ಹೀಗಾಗಿ ಲೋಕ ಜೀವನದ ಎಲ್ಲವನ್ನು ವಿಂಗಡಿಸಿಕೊಡುವ ಯೋಜನಾ ಕ್ರಮವೆ ಪ್ರಧಾನವಾಗಿರುವ ಆಧುನಿಕ ಜಗತ್ತಿನಲ್ಲಿ ಗತಕಾಲದ ಬಳುವಳಿಯಾಗಿರುವ ಎಲ್ಲಾ ಸಂಕಷ್ಟಗಳಿಗೂ ಅಭಿವೃದ್ಧಿಯೂ ಪ್ರಶ್ನಾತೀತವಾದ ಏಕೈಕ ಪರಿಹಾರ ಎಂಬ ವಾದವನ್ನು ಮಂಡಿಸಲಾಯಿತು. ಇದನ್ನೇ ಬೇರೆ ಪದಗಳಲ್ಲಿ ವಿವರಿಸುವುದಾದರೆ, ಈ ಜಗತ್ತಿನ ಎಲ್ಲಾ ನೊಂದವರಿಗೆ "ಯಥಾಸ್ಥಿತಿಯ" ಜೀವನ ಬೇಕಾ ಅಥವಾ ಸುಖ ಜೀವನದ ಆಶ್ವಾಸನೆ ಬೇಕಾ ಎರಡರಲ್ಲಿ ಒಂದನ್ನು ಆಯ್ದುಕೊಳ್ಳುವ ಮುಕ್ತ ಸ್ವಾತಂತ್ರ ಚರಿತ್ರೆಯಲ್ಲೇ ಮೊದಲ ಬಾರಿಗೆ ಅವರಿಗೆ ಕೊಡಲಾಗಿದೆ ಎಂಬ ಪ್ರಭಾವಶಾಲಿ ಸಂದೇಶವೊಂದನ್ನು ಕೊಡಲಾಯಿತು.

ಹೀಗೆ ಅಭಿವೃದ್ಧಿ ಎಂಬ ಪದವು ಹಲವಾರು ಆಶಯಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದೆ ಎಂಬವಾದ ಮಂಡಿಸಲಾಯಿತು ಹೀಗೆ ಪ್ರಥಮ ಜಗತ್ತಿನ ರಾಷ್ಟ್ರಗಳು ತಮ್ಮ ಅಸ್ಥಿತ್ವ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಮುಂಚೂಣಿಗೆ ತಂದ ಮಂತ್ರ ದಂಡವೆ ಅಭಿವೃದ್ಧಿ ಎಂಬ ಮಂತ್ರ. ಹೀಗಾಗಿ ದ್ವಿತಿಯ ಜಗತ್ತಿನ ರಾಷ್ಟ್ರಗಳಿಗೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಬೇರೆ ಆಯ್ಕೆಗಳೆ ಇರಲಿಲ್ಲ. ಆದ್ದರಿಂದ ಅವು ಅನಿವಾರ್ಯವಾಗಿ ಅಭಿವೃದ್ಧಿ ಸಿದ್ಧಾಂತವನ್ನು ಒಪ್ಪಿಕೊಳ್ಳಲೇಬೇಕಾಯಿತು.

ಹೀಗೆ ಪಶ್ಚಿಮದಲ್ಲಿ ಮೊದಲು ಮಾಡುವ ಕೆಲಸ ಎಂದರೆ ತಮ್ಮ ವ್ಯವಸ್ಥೆಯನ್ನು ಸೈದ್ಧಾಂತೀಕರಣಗೊಳಿಸುತ್ತಾರೆ. ನಂತರ ಕಾರ್ಯ ಪ್ರವೃತ್ತರಾಗುತ್ತಾರೆ; ಆದರೆ ನಮ್ಮಲ್ಲಿ ಮೊದಲು ಕಾರ್ಯ ಪ್ರವೃತ್ತರಾಗುತ್ತಾರೆ. ನಂತರ ಸಿದ್ಧಾಂತ ರೂಪಗೊಳಿಸಲು ಪ್ರಯತ್ನಿಸುತ್ತಾರೆ. ಎಲ್ಲಿ ಸಿದ್ಧಾಂತಗಳು ಇರುವುದಿಲ್ಲವೋ ಅಲ್ಲಿ ನಾವು ಸೋಲುತ್ತೇವೆ. ಯಾಕೆಂದರೆ ಪಾಶ್ಚಿಮಾತ್ಯರು ಕಟ್ಟಿಕೊಂಡ ಧರ್ಮದ ರೀತಿ ನೀತಿಗಳೇ ಬೇರೆ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ಕಟ್ಟಿಕೊಂಡ ರೀತಿ ನೀತಿಗಳೇ ಬೇರೆ ಏನೇ ಆದರೂ ಅವರು ಒಂದು ಸಣ್ಣ ವಿಷಯವು ಸೈದ್ಧಾಂತಿಕ ರಣಗೊಳಿಸಿ ಅದನ್ನು ಆದರ್ಶವಾಗಿ ಜಾರಿಗೊಳ್ಳಿಸಲು ಪ್ರಯತ್ನಿಸುತ್ತಾರೆ.

ಆದರೆ ನಾವು ಕಟ್ಟಿಕೊಂಡ ಧರ್ಮದ ರೀತಿನೀತಿಗಳೇ ಬೇರೆ ಆರ್ಥಿಕ, ಸಾಮಾಜಿಕ ರಚನೆಯೇ ಬೇರೆ, ಏನೇ ಆದರೂ ಅಭಿವೃದ್ಧಿಯ ಪರಿಭಾಷೆ ಒಂದು ಹೊಸ ಸಾಮಾಜಿಕ ಸಂದರ್ಭವನ್ನು ಹುಟ್ಟುಹಾಕಿದ್ದಂತು ನಿಜ ಮತ್ತು ಅಭಿವೃದ್ಧಿ ಒಂದು ಸವಾಲು ಮತ್ತು ಪರಿಹಾರ ಎನ್ನುವಷ್ಟರ ಮಟ್ಟಿಗೆ ಜೀವನದಲ್ಲಿ ಹಾಸುಹೊಕ್ಕಾಗಿರುವುದಂತು ಅಷ್ಟೇ ಸೋಜಿಗದ ಸಂಗತಿ.[೧೮]

ದಲಿತರು ಜಾಗತೀಕರಣ ಮತ್ತು ಖಾಸಗೀಕರಣ ವ್ಯವಸ್ಥೆಯಲ್ಲಿ ದಲಿತ ಸಮುದಾಯಗಳನ್ನೆಲ್ಲ ಪ್ರಕ್ರಿಯಗೆ ವಿಸ್ತಾರವಾದ ಸಬಲೀಕರಣ ಪ್ರಕ್ರಿಯೋಳಗೆ ಒಳಪಡಿಸಬಲ್ಲಂಥ ನಾಯಕತ್ವ, ಸಂಘಟನೆ,

ತಾತ್ವಿಕಬಲ, ರಾಜಕೀಯ, ಆರ್ಥಿಕ ಇಚ್ಛಾಶಕ್ತಿಗಳಲ್ಲದಿರುವದರಿಂದ ದಲಿತರಿಗೆ ಬದಲಾವಣೆಯ ವಿಕಾಸದಲ್ಲಿ ಅನೇಕ ಸವಾಲುಗಳು ಎದುರಾಗತ್ತಿವೆ.

ಮೀಸಲಾತಿಯನ್ನು ಕೇಳುವದರಲ್ಲಿಯೇ ಉಳಿಸಿಕೊಳ್ಳವದರಲ್ಲಿಯೇ ಐವತ್ತು ವರ್ಷಗಳನ್ನು ಭಾರತದ ಉದ್ದಕ್ಕೂ ಕಳೆದಿದ್ದಾರೆ ಎಂದರೆ ಅವರ ಬಿಡುಗಡೆಯ ಹಾದಿಯಲ್ಲಿ ಅವರ ತಪ್ಪುಗಳು ಸಾಕಷ್ಟು ಇವೆ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಜಾತಿಗಳು ಮೀಸಲಾತಿ ಹಂಚಿಕೆಯಲ್ಲೆ ತೊಡಗಿರುತ್ತವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಈ ಮೀಸಲಾತಿ ವ್ಯವಸ್ಥೆಯಲ್ಲಿ ಕೊಟ್ಟಿರುವರು ಕೇವಲ ೧೮% ಮಾತ್ರ ಉಳಿದಂತೆ ನೂರರಲ್ಲಿ ಇನ್ನೂಳಿದ ೮೨% ಮೀಸಲಾತಿ ಯಾರಲ್ಲಿದೆ ಎಂದು ಯಾರು ಕೇಳುವುದಿಲ್ಲ. ಒಂದೊಂದು ಮಾರ್ಗದ ಮೂಲಕ ಪಾಲು ಪಡೆಯುತ್ತಿವೆ. ಮೀಸಲಾತಿ ಕೆಲವರಿಗೆ ಮಾತ್ರ ಇರುವಂತಹದಲ್ಲ. ಆದ್ದರಿಂದ ಡಾ. ಬಿ.ಆರ್ ಅಂಬೇಡ್ಕರ್ ಅವರು ಜನಸಂಖ್ಯೆಗೆ ಅನುಗುಣವಾಗಿ ಎಲ್ಲಾರಿಗೂ ಇಂತಿಷ್ಟು ಮೀಸಲಾತಿ ಎಂದು ಹಂಚಿದ್ದಾರೆ. ಆದರೆ ಈ ದೇಶದ ಅರೆಬರೆ ತಿಳುವಳಿಕೆಯುಳ್ಳವರು ಆ ಸೌವಲತ್ತು ಪಡೆದು ಅಂಬೇಡ್ಕರ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದವರಿಗೆ ಮೀಸಲಾತಿ ಕೊಟ್ಟಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಈ ದೇಶದಲ್ಲಿ ಪ್ರತಿಯೊಂದು ಜಾತಿ ಸಮುದಾಯಗಳು ಮೀಸಲಾತಿಯಿಂದಲೇ ಸರ್ಕಾರದ ಜೊತೆಗೆ ಸಂಬಂಧ ಇಟ್ಟಿಕೊಂಡಿರುವದು.

ಅಸ್ಪೃಶ್ಯರ ಮಟ್ಟಿಗೆ ಹೇಳುವುದಾದರೆ ಮೀಸಲಾತಿಯನ್ನು ಬಿಟ್ಟು ಬೇರ ಯಾವ ಪರ್ಯಾಯವನ್ನು ನಾವು ಕಂಡುಕೊಳ್ಳಲು ಸಾಧ್ಯವಾಗುತಿಲ್ಲ. ಖಾಸಗೀಕರಣದಲ್ಲಿ ಮೀಸಲಾತಿಯನ್ನು ನಾವು ಕೇಳುವುದಕ್ಕಿಂತ ಇಡಿ ಖಾಸಗಿ ಉದ್ಯಮ ವ್ಯವಸ್ಥೆಗೆ ನಮ್ಮ ಎಲ್ಲಾ ಜಾತಿಗಳನ್ನು ಸಮಪರ್ಕವಾಗಿ ಸಜ್ಜುಗೊಳಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಖಾಸಗಿ ವಲಯಕ್ಕೆ ಬದಲಿಸಬೇಕು. ಕನಿಷ್ಠ ಕೂಲಿಗೆ ಕಾರ್ಮಿಕರಾಗುವ ದಲಿತರನ್ನು ಆರ್ಥಿಕ ಶೈಕ್ಷಣಿಕ ವ್ಯವಸ್ಥೆ ಮೂಲಕ ಸಬಲೀಕರಣ ಗೊಳಿಸದಿದ್ದರೆ ಅವರ ಸಮಸ್ಯೆಗಳು ಮುಂದಿನ ಶತಮಾನಕ್ಕೆ ಮತ್ತಷ್ಟು ಹೊರೆಯಾಗುತ್ತವೆ. ಮೀಸಲಾತಿಯನ್ನು ನೀರಿಕ್ಷಿಸಿ ಅದರ ಲಾಭವನ್ನು ಹಂಚಿಕೊಳ್ಳುವ ಬದಲು ಇದೆ. ಮೀಸಲಾತಿ ವ್ಯವಸ್ಥೆಯನ್ನು ಜಾಗತಿಕ ಆರ್ಥಿಕ ವ್ಯವಸ್ಥೆಯ ವಿಕಾಸದ ಮೂಲಕ ತಮ್ಮ ಅಧಿಕಾರಕ್ಕೆ ಈ ರೀತಿ ಪುನಃರ ವಿವೇಚಿಸಬೇಕಾದ ಅಗತ್ಯ ದಲಿತರಿಗೆ ಇದೆ ಎಂದಿದ್ದಾರೆ. ಆದರೆ ಜಾಗತೀಕರಣ ಮತ್ತು ಖಾಸಗೀಕರಣ ಪ್ರಕ್ರಿಯೇಯಲ್ಲಿ ಮೀಸಲಾತಿ ಮತ್ತು ಕೆಳಜಾತಿಯವರ ಅಭಿವೃದ್ಧಿಯ ಮಾತೆ ಬೇರೇ, ವಾಸ್ತವವಾಗಿ ಸಾಮಾಜಿಕ ಬದುಕಿನ ಅಭಿವೃದ್ಧಿಯ ಮಾನದಂಡಗಳೇ ಬೇರೆ ರೂಪ ಪಡೆದುಕೊಂಡವು. ಹೀಗಾಗಿ ಖಾಸಗೀಕರಣ ವ್ಯವಸ್ಥೆಯಲ್ಲಿ ಗಣೇಶ ಮಾಡಲು ಹೋದರೆ ಅವರಪ್ಪ ಆಗುತ್ತದೆ. ಹಾಗಾಗಿ ಮೊಗಳ್ಳಿ ಗಣೇಶ ಅವರ ವಿಚಾರಗಳ ಖಾಸಗೀಕರಣ ವ್ಯವಸ್ಥೆಯಲ್ಲಿ ದಲಿತರ ಬದುಕಿಗೆ ಒಗ್ಗಿಕೊಳ್ಳುವುದಿಲ್ಲ. ಏಕೆಂದರೆ ಖಾಸಗೀಕರಣದಲ್ಲಿ ಮೀಸಲಾತಿ ಕೇಳುವುದಕ್ಕಿಂತ ಇಡಿ ಖಾಸಗಿ ಉದ್ಯಮಕ್ಕೆ ನಮ್ಮ ಎಲ್ಲ ಜಾತಿಗಳನ್ನು ಬಂಡವಾಳ ಹೂಡವ ಸಮುದಾಯವಾಗಿ ಪರಿವರ್ತಿಸಲು ಸಾಧ್ಯವಿಲ್ಲ. ಒಂದು ದೊಡ್ಡ ಉದ್ಯಮಗಳು

ಸಣ್ಣ ಉದ್ಯಮಗಳನ್ನು ನಾಶಮಾಡುತ್ತವೆ. ಜಗತ್ತಿನ ವಿವಿದಡೆಗಳಲ್ಲಿ ಸಮಾನತೆ ಹಾಗೂ ಐಕ್ಯತೆಯನ್ನು ತರುವ ವಿದ್ಯಮಾನವು ಜಾಗತಿಕರಣದಲ್ಲಿಲ್ಲ. ಹಾಗಾಗಿ ಉದ್ಯಮಗಳ ನಾಶದೊಂದಿಗೆ ದಲಿತರು ನಷ್ಟ ಮತ್ತು ಸಂಕಷ್ಟಕ್ಕಿಡಾಗುತ್ತಾರೆ ಎಂಬುದನ್ನು ನಾವು ಮರೆಯುವಂತಿಲ್ಲ.

ಅದೇ ರೀತಿಯಾಗಿ ಮೀಸಲಾತಿಯನ್ನು ಅನುಭವಿಸಿ ಅದರ ಲಾಭವನ್ನು ಹಂಚಿಕೊಳ್ಳವ ಬದಲು ಇದೇ ಮೀಸಲಾತಿ ವ್ಯವಸ್ಥೆಯನ್ನು ಜಾಗತಿಕ, ಆರ್ಥಿಕ ವಿಕಾಸದ ಮೂಲಕ ತಮ್ಮ ಅಧಿಕಾರಕ್ಕೆ ತಕ್ಕಂತೆ ಪುನರ ವಿವೇಚಿಸಬೇಕಾಗಿರುವ ಒತ್ತಡ ದಲಿತರಿಗೆ ಇದೆ ಎಂದಿದ್ದಾರೆ.[೧೯] ನಿಜ ಅದರೆ ಒಂದು ಕಾಲದಲ್ಲಿ ಮೀಸಲಾತಿಯನ್ನು ವಿರೋಧಿಸುವ ವರ್ಗ ಅಥವಾ ಜನರು ಇಂದು ಮೀಸಲಾತಿಯನ್ನು ಪಡೆದಿದ್ದು ಅಯಿತು. ಅದನ್ನು ಹಂಚಿಕೊಂಡಿದ್ದು ಆಯಿತು. ಪರಿಸ್ಥಿತಿ ಹೀಗಿರುವಾಗ ಮೀಸಲಾತಿ ಹಂಚಿಕೆಯಲ್ಲಿ ತಪ್ಪೇನಿದೆ ಹಂಚಿಕೊಂಡು ಉಣ್ಣುವುದರಲ್ಲಿ ಪರಮ ಸುಖವಿದೆ. ಇದಕ್ಕಾಗಿ ಅಲ್ಲವೆ ಸಾವಿರಾರು ವರ್ಷಗಳಿಂದ ನೋವು ಅನುಭವಿಸಿ ಹೋರಾಟ ಮಾಡಿದ್ದು ಹಾಗೂ ಹೋರಾಟ ಮಾಡುತ್ತಿರುವದು.

ಮೀಸಲಾತಿ ಜಾರಿಯಲ್ಲಿ ಪುರೋಹಿತ ಶಾಹಿಯ ಪುರೋಗಾಮಿ ಮನೋಭಾವನೆಯನ್ನು ಖಂಡಿಸುತ್ತ ಬಹುದೊಡ್ಡ ಜನ ವರ್ಗವನ್ನು ಒಳಗೊಂಡಿರುವ ಇಂಡಿಯಾದ ಸಮಾಜದಲ್ಲಿ ಅಸಮಾನತೆ ಅಂತರಗತವಾಗಿದೆ. ಮೀಸಲಾತಿ ಈ ಆಸಮಾನತೆಯನ್ನು ತೊಡೆದುಹಾಕಿ ಸಮಾಜವನ್ನು ಸಮುದಾಯ ವ್ಯವಸ್ಥೆಯ ಬಂಧನದಿಂದ ಬಿಡುಗಡೆಗೊಳಿಸುವ ಆಶಯ ಹೊಂದಿದೆ. ಭಾರತರತ್ನ ಡಾ. ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗ ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಕ್ಷೇತ್ರ ಮತ್ತು ಸರಕಾರಿ ಸೇವೆಯ ಹುದ್ದೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸಾಮಾಜಿಕ ನ್ಯಾಯವನ್ನು ಒದಗಿಸುವ ಸರಕಾರದ ಜವಾಬ್ದಾರಿ ಎಂಬ ವಿಧಿಯನ್ನು ಸೇರ್ಪಡೆ ಮಾಡಿದರು.[೨೦]

ಸಂವಿದಾನದ ಆಶಯದಂತೆ ಸರಕಾರವು ಮೀಸಲಾತಿಯನ್ನು ಪರಿಶಿಷ್ಟ ಜಾತಿಗಳಿಗೆ ಆರಂಬಿಸಿತು. ೧೯೬೨ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ದಕ್ಷಿಣ ರೈಲ್ವೆ ವರ್ಚೆಸ್ಸ್ ರಂಗಚಾರಿ ತೀರ್ಪು ಹೊರಬಿದ್ದ ನಂತರ ಪರಿಶಿಷ್ಟ ವರ್ಗದವರಿಗೆ ಸಂವಿದಾನ ದತ್ತವಾಗಿ ಹುದ್ದೆಗಳ ಬಡ್ತಿಯಲ್ಲಿ ಮೀಸಲಾತಿ ನೀಡಬೇಕಾಯಿತು. ಆದರೆ ಇತರೆ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರಿಗೆ ಮೀಸಲಾತಿ ನೀಡವ ಕಾರ್ಯ ಸರಕಾರದಿಂದ ವಿಳಂಬವಾಗಿದೆ.

ಮೀಸಲಾತಿ ಸೌಲಭ್ಯಗಳಿಂದ ವಂಚಿತರಾದ ಹಿಂದುಳಿದ ವರ್ಗಗಳಿಗೆ ಸೌಲಭ್ಯ ನೀಡುವ ಸಲುವಾಗಿ ೧೯೭೮ರಲ್ಲಿ ಜನತಾ ಸರಕಾರವು ಮಂಡಲ ಆಯೋಗ ರಚಿಸಿತು. ೧೯೯೦ರಲ್ಲಿ ಜನತಾದಳ ನೇತೃತ್ವದ ರಾಷ್ಟ್ರಿಯ ರಂಗ ಸರಕಾರವು ಮಂಡಲ ಆಯೋಗದ ಶಿಪಾರಸ್ಸಿನಂತೆ ಹಿಂದುಳಿದ ವರ್ಗಗಳಿಗೆ ಸರಕಾರಿ ಸೇವೆಯಲ್ಲಿ ಹುದ್ದೆಗಳಿಗೆ ಶೇಕಡ ೨೭ ಮೀಸಲಾತಿಯನ್ನು ಪರಿಶಿಷ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇಕಡ ೨೨.೧/೨ ಮೀಸಲಾತಿ ನೀಡುವ ಸರಾಕಾರಿ

ಆದೇಶ ಹೋರಡಿಸಿತು. ಈ ದೇಶದ ಜಾತಿವಾದಿ ಶಕ್ತಿಗಳು ಮಂಡಲ ವರದಿಯನ್ನು ವಿರೋಧಿಸಿ ದೇಶದಾದ್ಯಂತ ದೋಂಬಿ, ಗಲಬೆ ಮತ್ತು ಹಿಂಸೆ ನಡೆಸಿದರು. ಅಲ್ಲದೆ ೧೯೯೧ರಲ್ಲಿ ಕಾಂಗ್ರೇಸ್ ಸರಕಾರವು ಮೇಲ್ಜಾತಿ ಬಡವರಿಗೆ ಶೇಕಡ ೧೦ರಷ್ಟು ಮೀಸಲಾತಿಯನ್ನು ಮಂಡಲ ವರದಿ ಜಾರಿಗೊಳಿಸುವ ಆದೇಶ ಹೋರಡಿಸಿತು. ಮಂಡಲ ವಿರೋದಿಗಳು ಈ ಆದೇಶಗಳ ಕ್ರಮ ಬದ್ಧತೆಯನ್ನು ಪ್ರಶ್ನಿಸಿ ಸುಪ್ರಿಂಕೋರ್ಟ್‌ನಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದರು. ೧೯೯೨ರ ನವಂಬರ್ ೧೬ ರಂದು ಸುಪ್ರಿಂಕೋರ್ಟ್ ಮಂಡಲ ವರದಿ ಪ್ರಕರಣದ ತೀರ್ಪು ನೀಡಿ ಹಿಂದುಳಿದ ವರ್ಗಗಳಿಗೆ ಸರಕಾರಿ ನೌಕರಿಯಲ್ಲಿ ಶೇಕಡ ೨೭ರಷ್ಟು ಮೀಸಲಾತಿಯನ್ನು ಎತ್ತಿ ಹಿಡಿಯಿತು. ಅಂದರೆ ಮಂಡಲ ವರದಿಯು ಜಾತಿ ವ್ಯವಸ್ಥೆಗೆ ಮತ್ತೊಮ್ಮೆ ಅಸ್ಥಿಬಾರವನ್ನು ಹಾಕಿರುವುದು ಎಂದರೆ ತಪ್ಪಾಗಲಾರದು. ಹೀಗಾಗಿ ಮೊದಲು ಪುರೋಹಿತಶಾಹಿ ಮಾಡಿದ ಕುಟಿಲತೆಯಿಂದ ಇಂದಿಗೂ ಜಾತಿ ಪದ್ಧತಿ ಇರುವಂತೆ ಮಾಡಿದೆ ಎಂದಿದ್ದಾರೆ.

ಮೀಸಲಾತಿಗಳು ದಲಿತರ ಬದುಕಿನಲ್ಲಿ ೧೯೮೦ರ ದಶಕದ ವರೆಗೂ ಒಂದು ಗುರುತರವಾದ ಬದಲಾವಣೆಯನ್ನು ತಂದಿತು. ಆದರೆ ಅದರ ಜೊತೆ-ಜೊತೆಗೆ ಇತರರಲ್ಲಿ ಅನಗತ್ಯವಾದ ಹೆಗತನವನ್ನು ಹುಟ್ಟು ಹಾಕಿದವು. ಅದೇನು ಇದ್ದರೂ ವರ್ಷಗಳು ಉರುಳಿದಂತೆ ಮೀಸಲಾತಿಯ ಹಿಂದಿನ ವಿವೇಕವು ಬಹುಮಟ್ಟಿಗೆ ಒಪ್ಪಿತವಾಗತ್ತ ಬಂದಿತು. ಆದರೆ ೧೯೯೦ರಲ್ಲಿ ವ್ಹಿ.ಪಿ.ಸಿಂಗ್‌ರ ಒಂದು ರಾಜಕೀಯ ತಂತ್ರದ ಭಾಗವಾಗಿ ಓ.ಬಿ.ಸಿಗಳಿಗೆ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಮೀಸಲಾತಿ ಚರ್ಚೆಯನ್ನು ಒಂದು ವಿಕೃತ ರೂಪದಲ್ಲಿ ಮುನ್ನೆಲೆಗೆ ತಂದಿದ್ದಂತೂ ನಿಜ. ಈ ಎರಡು ಬಗೆಯ ಮೀಸಲಾತಿಗಳು ಭಿನ್ನ ಭಿನ್ನವಾಗಿದ್ದರು ವಾದ-ವಿವಾದಗಳಲ್ಲಿ ಎರಡು ಒಂದೆ ಬಗೆಯ ಮೀಸಲಾತಿಗಳೆಂಬಂತೆ ಚರ್ಚೆ ನಡೆದವು. ದಲಿತರನ್ನು ಮೀಸಲಾತಿ ವಾದಿಗಳೆಂದು ಇತರರನ್ನು (ಮಂಡಲ ಲಾಭ ಪಡೆದವರನ್ನೊಳಗೊಂಡತ್ತೆ ವಿರೋದಿಗಳೆಂದು ಗುರುತಿಸಲಾಯಿತು.) ಅಲ್ಲಿಂದ ಆಚೆಗೆ ಮೀಸಲಾತಿಯ ರಾಜಕೀಯ ಅದನ್ನೋಂದು ಸರ್ವರೋಗ ನಿವಾರಕ ಮದ್ದು ಎಂಬಂತೆ ಪ್ರತಿಪಾದಿಸುತಿರುವುದರಿಂದ ಇಡಿ ಮೀಸಲಾತಿ ಪರಿಕಲ್ಪನೆಯ ಪ್ರಶ್ನೆಗೋಳಗಾಗಿ ಒಂದೆಡೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯ ಲಾಭವೂ ಸಹ ಆ ಸಮುದಾಯದ ಒಂದು ಅತಿ ಸಣ್ಣ ವಿಭಾಗಕ್ಕೆ ಮಾತ್ರ ದಕ್ಕಿದೆ. ಆದರೆ ಇದೆ ಸಮುದಾಯವೇ ಮೀಸಲಾತಿಯ ಲಾಭದ ಮೇಲೆ ಸಂಪೂರ್ಣ ಏಕಸ್ವಾಮ್ಯ ಸಾದಿಸಿ. ಇಡಿ ದಲಿತ ಸಮುದಾಯವನ್ನು ಹಿಂದಿಕ್ಕಿದೆ. ಆದರೆ ಮೀಸಲಾತಿಗಳ ರಾಜಕೀಯ ಹುಟ್ಟು ಹಾಕಿದ ಹೊರೆಯನ್ನು ಮಾತ್ರ ಇದೆ ಸಮುದಾಯವೇ ಹೊರಬೇಕಾಗಿದೆ. ತಮಗಾಗಿರುವ ಎಲ್ಲಾ ಬಗೆಯ ವಂಚನೆಗಳಿಗೂ ಮೀಸಲಾತಿಯಿಂದ ಕೊಬ್ಬಿ ಮರೆಯುತ್ತಿರುವ ಈ ಸಮುದಾಯವೆ ಕಾರಣವೆಂದು ತಿಳಿಯಲಾಗುತ್ತದೆ. ಈ ಅತಂಕವೆ ಮುಂದೆ ಸಂಭಾವ್ಯ ಜಾತಿ ದೌರ್ಜನ್ಯಗಳಿಗೆ ತುಪ್ಪವನ್ನು ಸುರಿಯುತ್ತದೆ ಎಂದಿದ್ದಾರೆ.[೨೧] ಇದು ದಲಿತರ ಮಟ್ಟಿಗೆ ಸಾರ್ವತ್ರಿಕೆ ಸತ್ಯ. ಏಕೆಂದರೆ ಮಂಡಲ ವರದಿ ಜಾರಿಯಾದ ನಂತರ ಯಾರು ಮೀಸಲಾತಿಯನ್ನು ವಿರೋಧಿಸುತಿದ್ದರೋ ಅವರೆ ಮೀಸಲಾತಿಯ ವ್ಯಾಪ್ತಿಗೆ ಬೇರೆ ಬೇರೆ ಮಾರ್ಗಗಳಿಂದ

ಒಳನುಸಳಲು ಪ್ರಾರಂಬಿಸಿದರು. ಮಂಡಲ ವರದಿಯ ನಂತರ ಪರಿಶಿಷ್ಟರಿಗೆ ನೀಡಿದ ಸಂವಿದಾನಾತ್ಮಕ ಮೀಸಲಾತಿ ಬಲಹೀನವಾಗಿ ಹಿಮೋಗ್ಲೋಬಿನ್ ಇಲ್ಲದ ವ್ಯಕ್ತಿಯಂತಾಯಿತು. ಏಕೆಂದರೆ ಮೀಸಲಾತಿಯನ್ನು ಜಾರಿಗೊಳಿಸುವ ಎಲ್ಲ ಹಂತಗಳಲ್ಲಿ ಆಗ ಮೇಲ್ವರ್ಗ ಮತ್ತು ಹಿಂದುಳಿದ ವರ್ಗದವರೆ ಇದ್ದರು. ಯಾವಾಗ ಹಿಂದುಳಿದ ವರ್ಗಗಳು ಮೀಸಲಾತಿಯ ವ್ಯಾಪ್ತಿಗೆ ಬಂದರೋ ಆಗ ರಾಜಕೀಯವಾಗಿ, ಅರ್ಥಿಕವಾಗಿ, ಸಮಾಜಿಕವಾಗಿ ಜಾಗೃತಿ ಹೊಂದಿದ ಈ ವರ್ಗಗಳು ತಮ್ಮ ಅಧಿಕಾರ ಮತ್ತು ಹಣ ಪ್ರಭಾವ ಬಳಸಿ ಮೀಸಲಾತಿಯನ್ನು ಬಹುಬೇಗ ಉಪಯೋಗಿಸಿಕೊಂಡರು. ಆದರೆ ದಲಿತರಿಗೆ ನೀಡಿದ ಮೀಸಲಾತಿ ಮತ್ತು ದಲಿತರು ನಿರ್ಲಕ್ಷಕ್ಕೆ ಒಳಗಾದುರು. ಏಕೆಂದರೆ ದಲಿತರಿಗೆ ಸಾಕಷ್ಟು ಸೌಲಭ್ಯ ಇದ್ದವು. ಈಗಲೂ ಇವೆ ಆದರೆ ಜಾರಿಗೊಳಿಸುವವರಿಲ್ಲ. ಇದರ ಜೊತೆಗೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತಿಕರಣದ ಪರಿಣಾಮವಾಗಿ ಪ್ರತಿಯೊಂದು ವರ್ಗ, ಸಮುದಾಯ, ಜಾತಿಗಳು ತಮ್ಮ ಅಸ್ತಿತ್ವ ಕಂಡುಕೊಳ್ಳಲು. ಪ್ರಯತ್ನಿಸಿದರು ಖಾಸಗೀಕರಣ ಮತ್ತು ಜಾಗತಿಕರಣದಿಂದ ಮೀಸಲಾತಿ ಇದ್ದರೂ ಇಲ್ಲದಂತಾಯಿತು. ವ್ಯವಸ್ಥೆಯ ಎಲ್ಲ ಪ್ರಮುಖ ಮೂಲಭೂತ ಸೌಕರ್ಯಗಳೂ ಖಾಸಗಿಯವರ ನಿರ್ವಹಿಸಲು ಪ್ರಾರಂಬಿಸಿದರು. ಭೂಮಿ ಮತ್ತು ಬಂಡವಾಳ ಅಧಿಕಾರ ಮತ್ತು ಪ್ರಭಾವ ಇಲ್ಲದ ದಲಿತರು ಮೀಸಲಾತಿ ಎಂಬ ಗ್ರಾಮೀಣ ರಸ್ತೆಯ ಮೂಲಕ ರಾಜ್ಯ ಹೆದ್ದಾರಿ ತಲುಪುವಷ್ಟರಲ್ಲಿಯೇ ತಮ್ಮ ಶಕ್ತಿಯನ್ನು ಕಳೆದುಕೊಂಡರು. ಇನ್ನು ರಾಷ್ಟ್ರೀಯ ಹೆದ್ದಾರಿ ತಲುಪುವುದು ದೂರದ ಮಾತು. ಅಲ್ಲದೆ ಸರ್ಕಾರ ದಲಿತರಿಗೆ ಒಂದು ಸೌಲಭ್ಯವನ್ನು ನೀಡಿ ಹತ್ತನ್ನು ನೀಡಿದಂತೆ ಪ್ರಚಾರ ಮಾಡುತ್ತದೆ. ಸಾರ್ವಜನಿಕರು ಅದನ್ನು ನೂರು ಎಂದು ಭಾವಿಸಿ ಅವರ ವಿರುದ್ಧವಾಗಿ ಹಗೆತನವನ್ನು ಸಾದಿಸುತ್ತವೆ. ಸರಕಾರಿ ಸವಲತ್ತಗಳು ದಲಿತರಲ್ಲಿಯೇ ಹೆಸಿಗೆ ಹುಟ್ಟಿಸುವ ಕಾಲ ಸನ್ನಿಹಿತವಾಗಿದೆ. ಮೀಸಲಾತಿ ದೊರಣೆ ಎಲ್ಲಿಗೆ ಬಂದಿದೆ ಎಂದರೆ. ಅದು ಉಂಡ ಹಾಗೆಯೂ ಅಲ್ಲ ಹುಟ್ಟ ಹಾಗೆಯೂ ಅಲ್ಲ ಎನ್ನುವಂತಾಗಿದೆ. ಬಿಕ್ಕವವರಿಗೆ ದಕ್ಕುತ್ತಿಲ್ಲ ಕಕ್ಕುವವರಿಗೆ ದಕ್ಕುತ್ತಿದೆ. ಇತ್ತೀಚಿಗೆ ಕೇಂದ್ರ ಸರಕಾರ ಮುಸ್ಲಿಂರಿಗೆ ಶೇಕಡ ೭ರಷ್ಟು ಮೀಸಲಾತಿಯ ಪ್ರಸ್ತಾಪವನ್ನು ಮಂಡಿಸಿದೆ. ಇಲ್ಲಿಯವರಿಗೂ ಜಾತಿ ಆಧಾರದ ಮೇಲೆ ಮೀಸಲಾತಿ ನೀಡಲಾಗುತ್ತಿತ್ತು. ಒಟ್ಟಾರೆಯಾಗಿ ಮೀಸಲಾತಿ ಇಂದು ಮಾರಾಟದ ಸರಕಾಗಿದೆ. ಅದನ್ನು ಮಾರುವವರಂತೆ ಕೊಳ್ಳವವರಿದ್ದಾರೆ. ಆಳುವವರು ಮಾರಾಟ ಮಾಡುವವರಾದರೆ ಕೊಳ್ಳವವರು ವಂಚಕರಾಗಿದ್ದಾರೆ. ಅಸ್ಪೃಶ್ಯನ ಬದುಕು ತನ್ನ ಶಿಲುಬೆಯನ್ನು ತಾನೆ ಹೊತ್ತ ಏಸುವಿಗಿಂತ ಮಿಗಿಲಾದುದ್ದು. ಮಂಡಲ ವರದಿ ಜಾರಿಯೂ ಹಿಂದಿನ ಉದ್ದೇಶ ಮತ್ತು ಮಂಡಲ ವರದಿಯೂ ಮೀಸಲಾತಿಯ ದಿಕ್ಕನ್ನು ಹೇಗೆ ಬದಲಿಸಿತ್ತು ಎಂಬುದನ್ನು ವಿವರಿಸುತ್ತ. ೧೯೯೦ರಲ್ಲಿ ವ್ಹಿ.ಪಿ.ಸಿಂಗ್ ಮಂಡಲ ವರದಿಯನ್ನು ಜಾರಿಗೊಳಿಸುವ ಮೂಲಕ ಭಾರತೀಯ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಜಾತಿಯಾಧಾರಿತ ರಾಜಕಾರಣಕ್ಕೆ ಶಾಶ್ವತ ಸ್ಥಾನ ಕಲ್ಪಿಸಿಕೊಟ್ಟರು ಮಂಡಲ ವರದಿ ಕೇವಲ ಗಲಭೆ ಹಿಂಸಾಚಾರಕ್ಕೆ ಪ್ರೇರಣೆ ನೀಡಲಿಲ್ಲ. ಜೊತೆಗೆ ಸ್ವಜಾತಿ ಪ್ರೇಮವನ್ನು ಮುಖ್ಯವಾಗಿ ನಗರ ಜನರಲ್ಲಿ ಹುಟ್ಟು ಹಾಕಿತು. ಜಾತಿಗಳ ಮಧ್ಯ ಇದ್ದ ಕಂದರ ತೀವ್ರವಾಯಿತು. ಮಂಡಲ ವರದಿಯನ್ನು ಆಧರಸಿ

ಜಾರಿಗೆ ಬಂದ ಮೀಸಲಾತಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡಿತು. ಪ್ರಸ್ತುತ ಜಾತಿ ರಾಜಕಾರಣ ತನ್ನ ಹಿಡಿತವನ್ನು ಬಿಗಿಗೊಳಿಸಿದೆ ಮೀಸಲಾತಿಯಿಂದ ಲಾಭಗಳಿಸಲು ಉತ್ತರ ಪ್ರದೇಶ ಮತ್ತು ಬಿಹಾರ ನಂತರ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಲು ಹಲವಾರು ಜಾತಿಗಳ ಪೈಪೋಟಿ, ಸ್ಪರ್ದೆಗಿಳಿದಿವೆ. ರಾಜಸ್ತಾನದಲ್ಲಿರುವ ಸಾಮಾಜಿಕ ನ್ಯಾಯ ವೈಶ್ಯ ಮಹಾಸಭಾ ಮೊದಲಾದವುಗಳೂ ಈ ಒಕ್ಕೂಟದ ಉದ್ದೇಶ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅಧಿಕಾರಯುತ ಸ್ಥಾನದಲ್ಲಿರುವ ಜಾಟ್‌ಗಳಂತವರಿಗೆ ಓ.ಬಿ.ಸಿ. ಪಟ್ಟಿಯಲ್ಲಿ ಸ್ಥಾನ ಕಲ್ಪಿಸುವುದು ಓ.ಬಿ.ಸಿ ಪಟ್ಟಿಯಲ್ಲಿ ಜಾಟ್‌ಗಳು ಸೇರ್ಪಡೆಯಾದರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರಬಹುದೆಂಬ ಭಯದಿಂದ ರಾಜಪೂತಗಳು ಓ.ಬಿ.ಸಿ ಪಟ್ಟಿಯಲ್ಲಿ ಜಾತಿಗಳನ್ನು ವಿಂಗಡಿಸಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಕರ್ನಾಟಕ, ತಮಿಳುನಾಡು. ಬಿಹಾರಗಳಲ್ಲಿ ಈ ರೀತಿಯ ವಿಂಗಡಣೆಯಾಗಿರುವದನ್ನು ಗಮನಿಸಬಹುದು. ರಾಜಸ್ತಾನದಲ್ಲಿನ ಪ್ರಾಂತ್ಯದಲ್ಲಿ ನಿಜವಾಗಿಯೂ ತುಳಿತಕ್ಕೊಳಗಾಗಿರುವ ಹಿಂದುಳಿದ ವರ್ಗಗಳಾದ ಗುಜ್ಜಾರಗಳು, ಮಾಲಿಗಳು ಮತ್ತು ರಾವತ್‌ಗಳು ಮೌನವಹಿಸಿದ್ದಾರೆ. ಆದರೆ ರಜಪೂತಗಳು ಪಾರಂಪಾರಿಕ ಎದುರಾಳಿಗಳು ಎಂಬುದು ಎಲ್ಲಾರಿಗೂ ತಿಳಿದ ವಿಷಯ ಎಂದಿದ್ದಾರೆ.[೨೨]

ಇಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಮಂಡಲ ವರದಿಯು ಜಾತಿಯಾಧಾರಿತ ರಾಜಕಾರಣಕ್ಕೆ ಶಾಶ್ವತ ಸ್ಥಾನ ಕಲ್ಪಿಸಿಕೊಡುವದರ ಜೊತೆಗೆ ಜನರ ಮನಸ್ಸುಗಳ ಹೊಡೆದು ಹೊದವು. ಜಾತಿ-ಜಾತಿಗಳ ಮಧ್ಯ ವೈಷಮ್ಯವನ್ನು ಸೃಷ್ಟಿಸಿತು ಸಾಮಾಜಿಕ ನ್ಯಾಯ ಎಂಬುದು ಅದರ ತಲೆ ಬರಹ. ಆದರೆ ಅದರ ಹಿಂದಿನ ಉದ್ದೇಶ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಿದ ಶೇಕಡ ೧೮ರ ಮೀಸಲಾತಿಯನ್ನು ಬಲಹೀನಗೋಳಿಸುವುದು ಆಗಿದೆ ಎಂದರೆ ತಪ್ಪಗಲಾರದು. ಏಕೆಂದರೆ ಅವರಿಗಿದ್ದ ಮೀಸಲಾತಿ ನಮಗೆ ಯಾಕೆ ಇರಬಾರದು ಎಂಬ ದೋರಣೆಯಿಂದಲೆ ಅದನ್ನು ಜಾರಿಗೆ ತರಲಾಯಿತು. ಸಂವಿಧಾನದಲ್ಲಿ ಮೀಸಲಾತಿ ೧೦ ವರ್ಷದ ನಂತರ ನಿಂತು ಹೋಗತಕ್ಕದ್ದು ಎಂದು ಬರೆಯಲಾಗಿದೆ. ಆದರೆ ಅದನ್ನು ಹಾಗೆ ೧೦ ವರ್ಷ ೫೦ ವರ್ಷ ವಿಸ್ತರಿಸುತ್ತ ಬರಲಾಗಿದೆ. ಇದರ ಉದ್ದೇಶ ಇಷ್ಟೇ ತಾವು ಮೀಸಲಾತಿಯನ್ನು ಅನುಭವಿಸಬೇಕಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇರುವ ಮೀಸಲಾತಿ ಮುಂದುವರೆಯಬೇಕು. ಪರಿಶಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡ ಮೀಸಲಾತಿ ನಿಂತು ಹೊದರೆ ಯಾರಿಗೂ ಮೀಸಲಾತಿ ಇರುವದಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಅವಶ್ಯಕತೆ ಇಲ್ಲ. ಆದರೆ ಹಿಂದುಳಿದವರಲ್ಲಿ ಕೆಲವರು ಬಲಾಡ್ಯರಾದವರು ರಾಜಕೀಯ ಅಧಿಕಾರ ಮತ್ತು ಆಡಳಿತಾತ್ಮಕ ಅಧಿಕಾರ ಪಡೆಯುವಲ್ಲಿ ಬದಲಿ ಮಾರ್ಗವೆ ಈ ಹಿಂದುಳಿದ ವರ್ಗಗಳ ಮೀಸಲಾತಿ ಎಂಬ ಡೊಂಬರಾಟ ನಡೆಸಿವೆ. ಗಂಡ ಹೆಂಡತಿಯ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಂತೆ ಮೇಲ್ವರ್ಗ ಹಿಂದುಳಿದ ವರ್ಗಗಳ ಮಧ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮೂಕ ಪ್ರೇಕ್ಷಕರಾದರು. ಹೀಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಿರುವ ಮೀಸಲಾತಿ

ಅರ್ಥವನ್ನು ಕಳೆದುಕೊಂಡಿತು. ಒಟ್ಟಾರೆಯಾಗಿ ಮಂಡಲ ವರದಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಗೆ ವಿರುದ್ಧವಾಗಿ ಅಥವಾ ಕೌಂಟರ ಆಗಿ ಬಂದಿದೆ. ಈಗ ದಲಿತರ ಪಾಲಿಗೆ ಮೀಸಲಾತಿಯೂ ಒಂದು ಮುಳುಗುತ್ತಿರುವ ಹಡಗು ಇದ್ದಂತೆ.

ಜಾತಿಯಾಧಾರಿತ ಮೀಸಲಾತಿಗೆ ಸಂಬಂಧಿಸಿದಂತೆ ಉತ್ತರ ಭಾರತದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಅದೇ ತರಹ ಬೆಳವಣಿಗೆಗಳನ್ನು ವಿವರಿಸುತ್ತಾ ಭಾರತದಲ್ಲಿ ಜಾತಿಕಲ್ಪನೆ/ ಜಾತಿಯತೆಯನ್ನುವ ಸಾಮಾಜೀಕ ಪದ್ದತಿ ಅರಸೋತ್ತಿಗೆಯ ಕಾಲದಲ್ಲಿಯಾ ಸಹ ಜಾತಿಯು ವಿಶಿಷ್ಠ ರೀತಿಯ ವಿವಾದಕಾರಿಯಾಗಿರುವುದನ್ನು ಕಾಣಬಹುದು ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರೀಟಿಷ ಇಂಡಿಯಾದಲ್ಲಿ ಜಾತಿಪದ್ಧತಿಯನ್ನು ಹೊಗಲಾಡಿಸಲು ಪ್ರಯತ್ನಿಸಲಾಗಿದೆ. ಅದರಂತೆ ದಕ್ಷಿಣ ಭಾರತದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯ ಪ್ರಾರಂಬವಾಯಿತು ೧೯೧೬ರಲ್ಲಿ ಮದ್ರಾಸನಲ್ಲಿ ಬ್ರಾಹ್ಮಣೇತರ ಸಮ್ಮೇಳನ ನಡೆಯಿತು, ಅಲ್ಲದೆ. ಹಿಂದುಳಿದ ವರ್ಗದ ಹಿತಾಸಕ್ತಿಗೆ ಸಂಬಂಧಿಸಿದಂತೆ ಜಸ್ಟಿಕ್ ಪಾರ್ಟಿ ಎಂಬ ಸಂಘಟನೆಯನ್ನು ಸ್ಥಾಪಿಸಿದರು ಈ ಬೆಳವಣಿಗೆ ಕಾರಣವೆಂದರೆ ಮದ್ರಾಸ್ ಪ್ರಾಂತ್ಯದ ಒಟ್ಟು ಜನಸಂಖ್ಯೆಯಲ್ಲಿ ಬ್ರಾಹ್ಮಣರು ಅಲ್ಪಸಂಖ್ಯಾತರಾಗಿದ್ದರು ಆದರೆ ಆಡಳಿತದ ಎಲ್ಲಾ ಪ್ರಮುಖ ಹುದ್ದೆಗಳು ಅವರ ಪಾಲಾಗಿದ್ದವು ಹೀಗಾಗಿ ಹಿಂದುಳಿದ ವರ್ಗಗಳು ಬ್ರಾಹ್ಮಣೇತರ ಚಳುವಳಿಯ ಸಂಘಟನೆ ಅದರಲ್ಲಿ ಯಶಸ್ವಿಯನ್ನು ಕಂಡರು ಒಟ್ಟಾರೆಯಾಗಿ ಹಿಂದುಳಿದ ವರ್ಗಗಳ ಚಳುವಳಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಕಲ್ಪನೆಯನ್ನು ಹುಟ್ಟ ಹಾಕಿತು. ನಂತರ ಅದೆ ಕಲ್ಪನೆಯನ್ನು ಹಿಂದುಳೀದ ವರ್ಗಗಳು ಮತ್ತು ನಿಮ್ನ ವರ್ಗಗಳು ದುರ್ಬಲವರ್ಗಗಳೆಂದು ಬರೆಯಲಾಯಿತು ಇದನ್ನೆ ೧೯೩೫ರ ಭಾರತ ಸರಕಾರ ಕಾಯ್ದಿಯಲ್ಲ ಅನುಸೂಚಿತ ಜಾತಿಗಳು ಎಂದು ಕರೆದು ಮೀಸಲಾತಿಗೆ ಅವಕಾಶ ಕಲ್ಪಿಸಲಾಯಿತು ೧೯೩೫ರ ಭಾರತ ಸರಕಾರ ಕಾಯ್ದೆ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳುಗೆ ಶಾಸನ ಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವಂತಾಯಿತು. ಅದರಂತೆ ೧೯೫೦ರ ಸಂವಿದಾನದಲ್ಲಿ ಭಾರತದ ಪೌರತ್ವ ಹೊಂದಿದ. ಅಲ್ಪಸಂಖ್ಯಾತರಿಗೂ, ಅಂಗ್ಲೋ ಇಂಡಿಯನ್ರಿಗೂ ಯರೋಪಿಯನ್ನರಿಗೂ ಭಾರತದ ಕ್ರೈಸ್ತರಿಗೆ ಜನಾಂಗ ಮತ್ತು ಸಂಸ್ಕೃತಿಗೆ ಪ್ರಾತಿನಿದ್ಯ ಒದಗಿಸಲಾಯಿತು. ಅಂದರೆ ಬ್ರಾಹ್ಮಣೇತರರು ಎಂದರೆ ಹಿಂದುಳಿದ ವರ್ಗ ಎಂದು ಸ್ವಾತಂತ್ರ್ಯ ನಂತರ ಹಿಂದುಳಿದ ವರ್ಗಕ್ಕೆ ಬಲಹೀನ ವರ್ಗ ಎಂದು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳನ್ನು ಅತ್ಯಂತ ಹಿಂದೂಳಿದ ವರ್ಗ ಎಂದು ಪರಿಗಣಿಸಿ ಸಾಮಾಜಿಕ ರಕ್ಷಣಾ ವಿಷಯದಲ್ಲಿ ತಾರತಮ್ಯ ಮಾಡಲಾಯಿತು ನಂತರ ಈ ಕಲ್ಪನೆ ಉತ್ತರ ಭಾರತದಲ್ಲಿ ಹಿಂದುಳಿದ ವರ್ಗಗಳು ಸಹ ಮೀಸಲಾತಿಗಾಗಿ ಅಗ್ರಹಸಿದವು ೧೯೭೦ ರಲ್ಲಿ ಬಿಹಾರ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೂ ಮೀಸಲಾತಿಯ ಪರಿಚಯವಾಯಿತು. ೧೯೮೫ರ ಮಧ್ಯಪ್ರದೇಶ – ಗುಜರಾತ್ ಹಿಂದುಳಿದ ವರ್ಗಗಳ ರಕ್ಷಣೆಗಾಗಿ ಮೀಸಲಾತಿ ಜಾರಿಗೆ ತಂದವು. ಆದರೆ ಗುಜರಾತಿನಲ್ಲಿ ಹಿಂದುಳಿದ ಮತ್ತು ಮುಂದುವರೆದ ಜಾತಿ ಸಂಘಗಳು ಹುಟ್ಟಿಕೊಂಡವು ಮೀಸಲಾತಿ ವಿರೋದಿ ಗುಂಪುಗಳು ಮೀಸಲಾತಿಯನ್ನು ತೆಗೆಯಬೇಕೆಂದು ಕರೆಕೊಟ್ಟವು. ಇದೆ ಮುಂದೆ

ವಿ.ಪಿ.ಸಿಂಗ್. ಮಂಡಲ ವರದಿ ಜಾರಿಗೆ ತರಲು ಕಾರಣವಾಯಿತು. ಅದರಲ್ಲಿ ಹಿಂದುಳಿದ ವರ್ಗಗಳಿಗೆ ಸರಕಾರಿ ಹುದ್ದೆಯಲ್ಲಿ ಶೇ. ೨೭ರಷ್ಟು ಮೀಸಲಾತಿಯ ಅವಕಾಶ ಕಲ್ಪಿಸಿದ್ದು ಯಾವಗ ಮಂಡಲ ವರದಿಯ ಮೂಲಕ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾರಿಗೊಳಿಸಿತೊ ಎಲ್ಲಾ ಜಾತಿಗಳು ತಮ್ಮ ತಮ್ಮಲ್ಲಿಯೇ ಆತ್ಮ ವಿಮರ್ಶೆ ಮಾಡಿಕೊಳ್ಳತೊಡಗಿದವು. ಮೀಸಲಾತಿ ವಿರೋದ ಗುಂಪುಗಳು ಹಿಂದುಳಿದ ವರ್ಗ ಪಟ್ಟಿಯಲ್ಲಿದವರು ಎಸ್.ಸಿ./ಎಸ್.ಟಿ ಪಟ್ಟಿಗೆ ಸೇರಿಸಬೇಕೆಂಬ ಕ್ಯಾತೆ ತೆಗೆದವು. ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳು ಕ್ರಿಶ್ಚಿಯನ್ ಮತ್ತು ಬೌಧ ಧರ್ಮಕ್ಕೆ ಮತಾಂತರಗೊಳ್ಳಲು ಚಿಂತನೆ ನಡೆಸಿದವು. ಅಲ್ಲದೇ ಮತಾಂತರಗೊಂಡ ಆ ಧರ್ಮದ ದಲಿತರು ಮೀಸಲಾತಿ ನೀಡಬೇಕೆಂದು ವಾದಿಸಿದವು ಹಿಗಾಗಿ ಭಾರತದಲ್ಲಿ ಎಲ್ಲಾ ಮುಸ್ಲಿಂರು ಸಹ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಬರುವಂತಾಯಿತು. ಇದೇಲ್ಲಾ ಕೇವಲ ಓಟ್ ಬ್ಯಾಂಕಿಗಾಗಿ ನಡೆಸಿದ ಸರ್ಕಸ್ಸ್‌ನಂತೆ ನಡೆಯಿತು. ಇದು ಕೇವಲ ಮತ ಬ್ಯಾಂಕ್‌ಗಾಗಿ ಪರಿವರ್ತನೆಯಾಯಿತು ಹೊರತು ಸುಧಾರಣೆಯ ಆಶಭಾವನೆ ಕಾಣಲಿಲ್ಲ ಎಸ್.ಸಿ./ಎಸ್.ಟಿ ಹೊರತುಪಡಿಸಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು ಎಂಬ ಒಂದು ಪ್ರತೇಕ ಓಟ್ ಬ್ಯಾಂಕ್‌ನ್ನು ಒದಗಿಸಿತ್ತೇ ಹೊರತು ಜನಾಂಗದ ಅಭಿವೃದ್ದಿಗೆ ಆದ್ಯತೆಯಾಗಿ ಪರಿಗಣಿಸಲಿಲ್ಲ ಜಾತಿ, ಜಾತಿಗಳಲ್ಲಿ ಆಂತರಿಕ ಸಂಘರ್ಷ ಪ್ರಾರಂಭವಾದವು ಸ್ವಾತಂತ್ರ್ಯ ಪೂರ್ವದಿಂದಲು ಮೀಸಲಾತಿಯನ್ನು ವಿರೋದಿಸಿದ ವರ್ಗ ಸ್ವಾತಂತ್ರ್ಯ ನಂತರ ೫೦ ವರ್ಷದವರೆಗೂ ಮೀಸಲಾತಿ ವಿರುದ್ದವಾಗಿ ಈಜಿದ ವರ್ಗ ಹಿಂದೂ. ಹಿಂದೂಳಿದ ವರ್ಗ ಎಂಬ ಹೆಸರಿನಲ್ಲಿ ಮೀಸಲಾತಿಯ ರುಚಿನೋಡಿ ಇಂದು ಪ್ರತಿಯೊಂದು ಜಾತಿ ಮೀಸಲಾತಿಬೇಕೆಂದು ಕೂಗುತ್ತಿವೆ. ಇತ್ತಿಚೇಗೆ ರಾಜಸ್ತಾನದಲ್ಲಿ ಮುಖ್ಯಮಂತ್ರಿ ಅಶೋಕ ಗೆಹಲೋಟ್ ಮೇಲುವರ್ಗದ ಬಡವರಿಗಾಗಿ ಶೇ. ೧೪ ರಷ್ಟು ಉದ್ಯೋಗದಲ್ಲಿ ಮತ್ತು ಶೈಕ್ಷಣಿಕ ವಿಷಯದಲ್ಲಿ ಮೀಸಲಾತಿ ಪ್ರಮಾಣವಿದೆ ರಾಜಸ್ತಾನದಲ್ಲಿ ಶೇ ೬೩ ರಷ್ಟು ಇದೆ ಈ ಅಂಶಗಳನ್ನು ಗಮನಿಸಿದರೆ ಮೀಸಲಾತಿ ಉಪಯೋಗವಾಗುತ್ತಿರುವುದು ಯಾರಿಗೆ ಎಂಬುವುದು ಗೊತ್ತಾಗುತ್ತದೆ.[೨೩]

ದೇಶಕ್ಕೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನವೆ ಕಳೆಯುತ್ತಿದ್ದರು ನಮ್ಮ ಭಾರತೀಯ ಸಮಾಜದಲ್ಲಿ ಅತ್ಯಂತ ಕೆಳಮಟ್ಟದಲ್ಲಿ ಜೀವನ ಮಾಡುತ್ತಿರುವ ದಲಿತರ ಬದುಕಿನಲ್ಲಿ ಸುಧಾರಣೆಯ ಬೆಳಕು ಕಂಡಿಲ್ಲ ಅಲ್ಲಲ್ಲಿ ಕೆಲವು ದಲಿತ ವ್ಯಕ್ತಿಗಳು ಉನ್ನತ ಸ್ಥಾನ ಹೊಂದಿರುವನ್ನು ಬಿಟ್ಟರೆ ಬಹುತೇಕ ದಲಿತ ಕುಟುಂಬಗಳ ಆರ್ಥಿಕ ಸಾಮಾಜೀಕ ಹಾಗೂ ಶೈಕ್ಷಣಿಕ ಸ್ಥಿತಿಗಳು ನಾಲ್ಕುರು ಶತಮಾನಗಳಷ್ಟು ಹಿಂದೆಯೇ ಉಳಿದಿರೆ ಇದೆ. ಇಂತಹ ಸಂದರ್ಭದಲ್ಲಿ ಆಳುವ ಸರಕಾರಗಳು ದಲಿತರ ಏಳಿಗೆಯ ಹೆಸರಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅಬ್ಬರದ ಪ್ರಚಾರ ಮಾಡುತ್ತಾ ಕಣ್ಣೋರಿಸುವ ತಂತ್ರಗಳನ್ನು ಮಾಡುತ್ತಿವೆ. ವಾಸ್ತವವಾಗಿ ದಲಿತರ ಬದುಕು ದಿನೆ ದಿನೆ ಹದಗೆಡುತ್ತಿದ್ದರೂ ಸಮಾಜದ ಇನ್ನಿತರ ಬಡವ ದೃಷ್ಠಿಯಲ್ಲಿ ಎಲ್ಲಾ ಸವಲತ್ತುಗಳನ್ನು ದಲಿತರೇ ಕಬಳಿಸಿಕೊಂಡ ಬಲಾಡ್ಯರಾಗುತ್ತಿದ್ದಾರೆಂಬ ಸಮಾಜದ ಇನ್ನಿತರ ಬಡವ ದೃಷ್ಠಿಯಲ್ಲಿ ಎಲ್ಲಾ ಸವಲತ್ತುಗಳನ್ನು ದಲಿತರೇ ಕಬಳಿಸಿಕೊಂಡು ಬಲಾಢ್ಯರಾಗುತ್ತಿದ್ದಾರತೆಂಬ ಭಾವನೆ ಬೇರೂರುತ್ತಿದೆ.

ಆದರೆ ವಸ್ತುಸ್ಥಿತಿ ಏನಿದೆ ಎಂಬುದಕ್ಕೆ ಒಂದು ಉದಾಹರಣೆ ಪ್ರತಿಭಾವಂತ ದಲಿತರನ್ನು ಸರಕಾರಿ ಹುದ್ದೆಗಳಿಗೆ ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತೇವೆನ್ನುವ ಸರಕಾರ ನಿರ್ಧಾರ ಕೈಗೊಂಡು ಹತ್ತು ವರ್ಷಗಳೆ ಕಳೆದಿದ್ದರೂ ಈ ವರೆಗೂ ನೇರ ನೇಮಕಾತಿ ಆಗಿರುವದು ಮೂರು ಮಂದಿ ಮಾತ್ರ ಸ್ವಾಮಿ ಈ ಯೋಜನೆ ಪ್ರಾರಂಭವಾಗಿದ್ದು ೧೯೮೩ರಲ್ಲಿ ಅಂದರೆ ೯ ವರ್ಷಗಳ ಹಿಂದೆ ಈ ವರ್ಷಗಳಲ್ಲಿ ದಲಿತರಲ್ಲಿ ಮೂರು ಜನ ಪ್ರತಿಭಾವಂತರ ಮತ್ತು ಕಾಣಿಸಿಕೊಂಡಿದ್ದಾರೆಯೇ? ಪರಿಶಿಷ್ಟಜಾತಿ/ ಪರಿಶಿಷ್ಟ ವರ್ಗದ ಪ್ರತಿಭಾವಂತರಿಗೆ ಈ ಗತಿಯಾದರೆ ಇನ್ನು ಪರಿಶಿಷ್ಟ ಜಾತಿಯ ಸರಾಸರಿ ಪ್ರತಿಭಾವಂತರು ಮತ್ತು ಮುಗ್ದರ ಗತಿಯೇನು? ಈ ಬಗ್ಗೆ ಸರಕಾರ ಎನು ಹೇಳುತ್ತದೆ. ೯ ವರ್ಷಗಳ ದೀರ್ಘ ಅವಧಿಯಲ್ಲಿ ಕೇವಲ ೩ ಜನರನ್ನು ನೇಮಕ ಮಾಡುವುದಾದರೆ ಅಷ್ಟೊಂದು ಅಬ್ಬರದ ಪ್ರಚಾರ ಮಾಡಿದ್ದು ಯಾಕೆ? ಇದೊಂದು ವಿಶಿಷ್ಟ ಬಗೆಯ ಯೋಜನೆಯೆಂದು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಜಾಹಿರಾತು ಕೊಟ್ಟು ಇತರರು ಇದರ ಬಗ್ಗೆ ಸಿಟ್ಟಾಗುವಂತೆ ಹೇಳಿಬಿಡಿ. ಯಾಕೆಂದರೆ ಅಬ್ಬರದ ಪ್ರಚಾರದಿಂದ ಇವತ್ತು ಸಮಾಜದಲ್ಲಿ ವೈಷಮ್ಯ ಉಂಟಾಗಿದೆ ಎರಡನೇಯದಾಗಿ ಇದಕ್ಕೆ ಅಧಿಕಾರ ಶಾಹಿ ಅಡ್ಡಗಾಲು ಹಾಕುತ್ತಿದೆ ಕುಂಟುನೆಪಗಳನ್ನೊಡ್ಡಿ ಅನಗತ್ಯ ವಿಳಂಬ ಮಾಡುತ್ತಾ ಈ ಯೋಜನೆ ಕಾರ್ಯಗತವಾಗದ ಹಾಗೆ ನೋಡಿಕೊಳ್ಳುತ್ತಿದೆ ಎಂದ್ದಿದ್ದಾರೆ.

ಪ್ರಜಾಪ್ರಭುತ್ವ ಜಾರಿಗೆ ಬಂದಾಗಿನಿಂದಲೂ ನಮನ್ನಾಳಿದ ರಾಜಕೀಯ ಪಕ್ಷಗಳಿಗೆ ದಲಿತ ವಿಮೋಚನೆಯ ಸ್ಪಷ್ಠದಿಕ್ಸೂಚಿಗಳಿಲ್ಲದಿರುವದು ಮುಖ್ಯಕಾರಣ ಸ್ಪಷ್ಠ ಮಾರ್ಗ ಸೂಚಿಕಗಳಿಲ್ಲದೆ ಆತ್ಮವಂಚನೆಯ ಪ್ರಜಾಸತ್ತೆಗೆ ನಾವೆಲ್ಲ ದಾಳಗಳಾಗಿರುವದು ವಿಪರ್ಯಾಸ, ಅಂಬೇಡ್ಕರ್ ಅವರ ದೂರ ದೃಷ್ಠಿ ಚಿಂತನೆಯಲ್ಲಿ ಸಂವಿದಾನ ರಚನಾಸಮಿತಿ ಕೆಲಸಮಾಡದಿದ್ದರೆ. ಮೀಸಲಾತಿ ನಮ್ಮ ಸಂವಿದಾನಾತ್ಮಕ ಹಕ್ಕು ಆಗುತ್ತಿರಲಿಲ್ಲ ಮೂಲಭೂತವಾಗಿ ಸಂವಿಧಾನದ ಪ್ರಧಾನ ಆಶಯಗಳನ್ನು ತಿರಸ್ಕರಿಸುವಂತೆ ನಡೆಯುತ್ತಿರುವ ಆಡಳಿತದ ಸೋಗಲಾಡಿತನವನ್ನು ಸಂವಿಧಾನ ಅಳವಡಿಸಿಕೊಳ್ಳುವ ಮೊದಲು ಜಾರಿಯಲ್ಲಿದ್ದ ಅಲಿಖಿತ ಸಂವಿಧಾನದ ನಡುವೆ ಘಷರ್ಣೆ ಪ್ರಾರಂಭವಾಯಿತು. ಇದು ಮನು ಸ್ಮೃತಿ ಮತ್ತು ಜಾತ್ಯಾತೀತ ಸಂವಿಧಾನ ನಡುವಿನ ಹೋರಾಟ ವರ್ಣಶ್ರಮ ಮತ್ತು ಮಾನವೀಯ ಮೌಲ್ಯಗಳ ನಡುವಿನ ಸಂಘರ್ಷರ ಬಂಡವಾಳಶಾಗಿ ಮತ್ತು ಸಮಾಜವಾದ ನಡುವಿನ ತಿಕ್ಕಾಟ ಆದರೆ ಮುಖವನ್ನು ನೋಡಲೇ ಇಲ್ಲ ಕೈಗಾರಿಕೆ ನೀರಾವರಿ ಹಣಕಾಸು ಬೆಳೆವಣಿಗೆ ತೆರಿಗೆ ಸಂಗ್ರಹಗಳು ನಮ್ಮ ಅಭಿವೃದ್ಧಿಯ ಮಾನದಂಡಗಳಾದಂತೆ ಜಾತಿ ವ್ಯವಸ್ಥೆಯ ಸಡಿಲತೆ ಸಮಾಜೀಕ ಅಸಮಾನತೆ ಭೂಮಿ ಹಂಚಿಕೆ ಪ್ರಶ್ನೆಗಳು ಸಹಮಾನವರ ಮೇಲೆ ನಡೆಯುವ ಕ್ರೂರ ದೌರ್ಜನ್ಯಗಳು ದೇಶದ ಅಭಿವೃದ್ಧಿ ಸಂಕೇತಗಳಾಗಲಿಲ್ಲ. ರಿಯಾಯಿತಿಗಳ ಘೋಷಣೆಯಲ್ಲಿ ಮೀಸಲಾತಿಗಳು ಪ್ರಚಾರಕ್ಕೆ ಬಂದಂತೆ ರಿಯಾಯಿತೆಗಳ ಪ್ರಮಾಣೀಕ ಜಾರಿ ಮೀಸಲಾತಿಯನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಗಳು ಅಕೌಂಟೆಬಿಲಿಟ್ ಪಡೆಯಲಿಲ್ಲ. ಆದ್ದರಿಂದ ಸಂವಿಧಾನದ ಆಶಯಗಳಿಗೆ ಮತ್ತು ಜಾರಿಗೊಳ್ಳತ್ತಿರುವ ವ್ಯವಸ್ಥೆಗೆ ಅಜಗಜಾಂತರ ವ್ಯತ್ಯಾಸವಿದೆ.

೧.೩. ಮೀಸಲಾತಿ ಸಿದ್ಧಾಂತ ಹಾಗೂ ಆಚರಣೆ

ಮೀಸಲಾತಿ ಎಂದರೆ ಕೆಲವರ ಮೈಜುಮ್ಮೆನ್ನುತ್ತದೆ. ಕೆಲವರ ಮೈಮೇಲಿನ ಕೂದಲು ಎದ್ದು ನಿಲ್ಲುತ್ತವೆ. ಕೆಲವರಿಗೆ ಸಿಟ್ಟುಬರುತ್ತದೆ. ಕೆಲವರಿಗೆ ಭಯ ಬರುತ್ತದೆ. ಕೆಲವರಿಗೆ ದ್ವೇಷ ಭಾವನೆ ಬರುತ್ತದೆ. ಕೆಲವರು ಅಸೂಯೆ ಪಡುತ್ತಾರೆ. ಕೆಲವರಿಗೆ ತಲೆ ತಿರುಗುತ್ತದೆ, ಕೆಲವರಿಗೆ ವಾಂತಿ ಬರುತ್ತದೆ ಕೆಲವರಿಗೆ ಜೀವ ಮತ್ತು ಜೀವನವನ್ನು ಕೊಟ್ಟಿದೆ, ಬದುಕುವ ಬರವಸೆಯನ್ನು ನೀಡಿದೆ. ಅಂದರೆ ಮೀಸಲಾತಿಗೆ ಎಷ್ಟೋಂದು ಶಕ್ತಿಯಿದೆ ಮತ್ತು ಅದಕ್ಕೆ ಎಷ್ಟೋಂದು ಆಯಾಮಗಳಿವೆ ಎಂಬುದನ್ನು ಇದರಿಂದ ತಿಳಿದುಕೊಳ್ಳಬಹುದು.

ಯಾಕೆಂದರೆ ಮೇಲೆ ಹೇಳಿದ ಸಂಕಥನಗಳು ಇಂದು ಮೇಲ್ವರ್ಗಗಳಿಗೆ ಅನ್ವಯಿಸುತ್ತದೆ. ಇದೇ ಸಂಗತಿಗಳನ್ನು ಪ್ರಾಚೀನ ಕಾಲದಲ್ಲಿ ಮಧ್ಯಯುಗದಲ್ಲಿ ಮತ್ತು ಇಪ್ಪತ್ತನೇಯ ಶತಮಾನದ ಮಧ್ಯಭಾಗದವರೆಗೆ ಕೆಳವರ್ಗದವರು ಅನುಭವಿಸಿದ್ದನ್ನು ನೋಡಿದರೆ ರೋಚಕ ಕಥೆಗಳು ಭಯಾನಕ ಸಂಗತಿಗಳು ಹೊರಬರುತ್ತದೆ. ಯಾಕೆಂದರೆ ಈ ಎಲ್ಲಾ ಸಂಗತಿಗಳು ನಡೆದ್ದದ್ದು ಮನುಷ್ಯ ಮನುಷ್ಯನ ನಡುವೆ, ಬಲವಂತ ಮತ್ತು ಬಲಹೀನನ ನಡುವಿನ ಸಂಘರ್ಷದ ಪರಿಣಾಮವಾಗಿ ಮೀಸಲಾತಿ ಸಾಧನ ಜಾರಿಗೆ ತರಲಾಯಿತು. ಮನುಷ್ಯನ ಮೂಲಗುಣ ಸರ್ವಾಧಿಕರ ಎಲ್ಲವು ನನ್ನಿಂದಲೇ ನಡೆಯಬೇಕು ನಾನು ಹೇಳಿದಂತೆ ಕೇಳಬೇಕು, ಎಲ್ಲವು ನನಗೆ ಬೇಕು, ನಾನೇ ಶ್ರೇಷ್ಠ ಎಂಬುದನ್ನು ಅವನಿಗೆ ತಿಳಿಸಿಕೊಡಲು ಇಂತಹ ಆಸ್ತ್ರಗಳನ್ನು ರಾಜ್ಯವು ಜಾರಿಗೆ ತಂದಿದೆ.

ಮೀಸಲಾತಿ ಎಂಬುದು ಸರಿತಪ್ಪಿನ ತಾರ್ಕಿಕತೆಯನ್ನು ಒಳಗೊಂಡಿದೆ ನ್ಯಾಯ-ಅನ್ಯಾಯದ ಪ್ರಶ್ನೆ ಒಳಗೊಂಡಿದೆ, ಆದ್ದರಿಂದ ಇಂದಿಗೂ ಅದು ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ. ಇದರ ಜೊತೆಗೆ ಮೀಸಲಾತಿ ಕೇವಲ ಒಂದು ಪರಿಭಾಷೆ ಅಷ್ಟೇ ಅಲ್ಲ ಒಂದು ಸಿದ್ಧಾಂತವಾಗಿ ಸಹ ಮುನ್ನತಿ ಒಂದಿದೆ.

ಮೀಸಲಾತಿ ಕೊಡಲು ಕಾರಣಗಳು

ಮೀಸಲತಿ ಯಾಕೆ ಕೊಡಲಾಯಿತು, ಮತ್ತು ಅದನ್ನು ಇಂದಿಗೂ ಯಾಕೆ ಮುಂದುವರೆಸಿದ್ದಾರೆ, ಮತ್ತು ಇದು ಯಾವಾಗ ಹೋಗುತ್ತದೆ ಎಂದು ಕೆಲವರ ತಲೆಯಲ್ಲಿ ಇಂತಹ ಹುಳುಗಳು ಸದಾ ಕೊರೆಯುತ್ತಿರುತ್ತದೆ. ಮತ್ತು ಈ ರೀತಿಯ ದ್ವೇಷ ಅಸೂಯೆ ಭಾವನೆ ಮೂಡಲು ಅದಕ್ಕೆ ಎಲ್ಲರೂ ಜವಾಬ್ದಾರರು ಯಾಕೆಂದರೆ ಯಾರು ಸಹ ಅದರ ಬಗ್ಗೆ ಸರಿಯಾದ ತಿಳುವಳಿಕೆ ಮಾಹಿತಿ ನೀಡಲಿಲ್ಲ, ಅವಕಾಶ ಪಡೆಯುವವನು ಸುಮ್ಮನಾದ ಅವಕಾಶ ಪಡೆಯದವನ್ನು ದ್ವೇಷಿಸಲು ಪ್ರಾರಂಭಿಸಿದ ಹೀಗಾಗಿ ಇಂದಿಗೂ ಮೀಸಲಾತಿ ಬಗ್ಗೆ ಹಲವಾರು ಗೊಂದಲಗಳು ಸೃಷ್ಠಿಯಾಗುತ್ತಿವೆ.

ಹಿಂದೆ ಪ್ರಾಚೀನ ಕಾಲದಲ್ಲಿ ವರ್ಣ ಮತ್ತು ವರ್ಗವ್ಯವಸ್ಥೆ ಹುಟ್ಟಿಕೊಂಡಾಗ ಒಬ್ಬ ಮನುಷ್ಯ ತನ್ನಂತೆ ಇತರರು ಎಂದು ಅರಿಯದೆ ಹೋದದ್ದು ಇಂದಿನ ಜಗತ್ತಿನ ಎಲ್ಲಾ ಸಂಗತಿಗಳಿಗೆ ಕಾರಣವಾಯಿತು. ಒಬ್ಬನು ತನ್ನ ಸೇವೆಗಾಗಿ ಇನ್ನೊಬ್ಬರನ್ನು ಆಶ್ರಯಿಸುವುದು ಸಹಜ ಮತ್ತು

ಒಬ್ಬನು ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯದಲ್ಲಿ ಹಾಗಾಗಿ ಆದರೆ ಅದರಲ್ಲಿ ಅನ್ಯಾಯ, ಶೋಷಣೆ, ಬಲವಂತದ ದುಡಿಮೆ ಜೀತ, ಸಂಬಳವಿಲ್ಲದ ದುಡಿಮೆ ಮೊದಲಾದವುಗಳ ಪರಿಣಾಮವಾಗಿ ಮೀಸಲಾತಿ ಕೊಡಲು ಕಾರಣಗಳು.

ಮೀಸಲಾತಿ ಕಲ್ಪನೆ ಸಾಮಾನ್ಯವಾಗಿ ಬ್ರಿಟೀಷರ ಕಾಲಾವಧಿಯಲ್ಲಿ ಮೊಳಕೆಯೊಡೆದಂತು ನಿಜ, ಆದರೆ ಅದರ ಆಳ, ಅಗಲ, ಬೇರು ಮತ್ತು ಬೀಜಗಳನ್ನು ಹುಡುಕಲು ಹೋದರೆ ಅದು ನಮ್ಮನ್ನು ಪ್ರಾಚೀನ ಕಾಲದಕ್ಕೆ ಕರೆದೊಯ್ಯುತ್ತದೆ, ಯಾಕೆಂದರೆ ಪ್ರಾಚೀನಕಾಲದಲ್ಲಿ ಅಂದರೆ ಪ್ರಲೇಟೋ(೪೨೨) ಅರಿಸ್ಟಾಟಲ್‌ನ ಕಾಲದಲ್ಲಿ ಆಸ್ತಿ, ಅಂತಸ್ತು, ಸಂಪತ್ತು, ಸ್ಥಾನಮಾನಗಳು ಇದ್ದವರು ಮಾತ್ರ ಮತಧಾನ ಮಾಡಬಹುದಾಗಿತ್ತು ಮತ್ತು ಆಡಳಿತದಲ್ಲಿ ಭಾಗವಹಿಸಬಹುದಿತ್ತು. ಅದೇ ರೀತಿ ಭಾರತದ ಸಂದರ್ಭಕ್ಕೆ ಹೋಲಿಸಿದರೆ ಕೌಟಿಲ್ಯನ ಕಾಲದಲ್ಲಿ ಕೆಲವರಿಗೆ ಮಾತ್ರ ಆಡಳಿತದಲ್ಲಿ ಅವಕಾಶವಿತ್ತು, ಕೆಳವರ್ಗದವರಿಗೆ ಮತ್ತು ಆಸ್ತಿ ಇಲ್ಲದವರಿಗೆ ರಾಜಕೀಯದಲ್ಲಿ ಅವಕಾಶವಿರಲಿಲ್ಲ, ರಾಜ ಮತ್ತು ಪ್ರಜೆಗಳ ಮಧ್ಯ ಕೆಲವು ಭಾರಿಕಂಡಂತೆ ಕೆಲವು ಭಾರಿ ಕಾಣದಂತೆ ಸಂಗ್ರಾಮವನ್ನು ನಡೆಸಿದ್ದಾರೆ. ಈ ಸಂಗ್ರಾಮದ ಫಲವಾಗಿ ಹಲವಾರು ಸುಧಾರಣೆಗಳು ಆಡಳಿತದ ಭಾಗವಾಗಿ ಬಂದವು.

ಹೀಗೆ ಮಧ್ಯಯುಗದವರೆಗೆ ರಾಜ್ಯ ಮತ್ತು ಪ್ರಜೆಗಳ ಮಧ್ಯ ಹಲವಾರು ಸಂಘರ್ಷಗಳು ನಡೆದವು. ಉದಾ: ಇಂಗ್ಲೇಂಡಿನಲ್ಲಿ ರಾಜ ಮುತ್ತು ಪ್ರಜೆಗಳ ಮುಸುಕಿನ ಗುದ್ದಾಟದಲ್ಲಿ ೧೨೧೫ರ ಮಾಗ್ನಕಾರ್ಟ ಆ್ಯಕ್ಟ (ಜನರಿಗೆ ಹಕ್ಕುಗಳು) ಮೊದಲಬಾರಿಗೆ ಜಾರಿಗೆ ಬಂದವು. ಇಂತ ಸಂಘರ್ಷಗಳ ಜಗತ್ತಿನ ಎಲ್ಲಾ ದೇಶ ಪ್ರದೇಶಗಳಲ್ಲಿ ಆಗಿವೆ. ಆದರೆ ಸಂಘರ್ಷಗಳು ಹೆಚ್ಚು ಪ್ರ.ವರ್ದಮಾನಕ್ಕೆ ಬಂದದ್ದು ಮಧ್ಯಯುಗದಲ್ಲಿ ಯಾಕೆಂದರೆ ಧರ್ಮಯುದ್ಧಗಳು ಸಂಘರ್ಷಕ್ಕೆ ಅಸ್ಥಿಬಾರ ಹಾಕಿದವು ಜೊತೆಗೆ ಇದೇ ಕಾಲಾವಧಿಯಲ್ಲಿ ವಸಹಾತು ಶಾಹಿ ಆಡಳಿತ ಮುಂಚೂಣಿಗೆ ಬಂತು. ಈ ಹಿಂದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಣಬೇದ ನೀತಿ (ಜನಾಂಗೀಯವಾದ) ಜನಾಂಗದ ಶೋಷಣೆ ಇತ್ತು. ಅದೇ ರೀತಿಯಾಗಿ ಭಾರತೀಯ ಜಾತಿ ಪದ್ದತಿಯಿಂದ ಜನಾಂಗ ಶೋಷಣೆ ಇತ್ತು. ಆದರೆ ಮಧ್ಯಯುಗದಲ್ಲಿ ವಸಹಾತು ಶಾಹಿ ಆಡಳಿತ ಫಲವಾಗಿ ರಾಷ್ಟ್ರಗಳಿಗೆ ಪ್ರಾತಿನಿಧ್ಯ ಮತ್ತು ಸೌಲಭ್ಯ ನೀಡುವ ಕಲ್ಪನೆ ಜಾರಿಗೆ ಬಂತು, ಉದಾ: ಅಮೇರಿಕಾದಲ್ಲಿ ಮೂಲನಿವಾಸಿಗಳು ಮತ್ತು ಇಂಗ್ಲೀಷರಿಗೆ ಘರ್ಷಣೆಯ ಫಲವಾಗಿ ೧೩ ವಸಹಾತುಗಳಿಗೆ ಪ್ರಾತಿನಿಧ್ಯ ಮತ್ತು ಅವಕಾಶಗಳನ್ನು ಒದಗಿಸಲಾಯಿತು. ಅದೇ ರೀತಿ ಭಾರತದಲ್ಲಿ ಬ್ರಿಟೀಷರು ಮತ್ತು ಭಾರತೀಯರ ನಡುವಿನ ಸಂಘರ್ಷ ಫಲವಾಗಿ, ಬ್ರಿಟೀಷರು ಭಾರತದಲ್ಲಿ ದೇಶೀಯ ಸಂಸ್ಥಾನಗಳಿಗೆ ಪ್ರಾತಿನಿಧ್ಯ ಮತ್ತು ಅವಕಾಶ ಒದಗಿಸಲಾಯಿತು. ಇದರ ಜೊತೆ ಬ್ರಿಟೀಷರು ಕೋಮುವಾರು ಪ್ರಾತಿನಿಧ್ಯ ನೀಡುವುದರ ಮೂಲಕ ಮೀಸಲತಿ ಕಲ್ಪನೆಗೆ ಅಸ್ಥಿಭಾರ ಹಾಕಿದರು. ಮುಂದೆ ಡಾ.ಬಿ.ಆರ್.ಅಂಬೇಡ್ಕರ್‌ರವರು ಹೋರಾಟ ಮತ್ತು ಶ್ರಮ ಫಲವಾಗಿ ಮೀಸಲಾತಿ ಕಲ್ಪನೆ ಮೊಳಕೆಯೊಡೆಯಿತು. ಆದ್ದರಿಂದ ಡಾ.ಬಿ.ಆರ್.ಅಂಬೇಡ್ಕರರನ್ನು

ಮೀಸಲಾತಿ ಕಲ್ಪನೆ ಸಿದ್ಧಾಂತದ ಪಿತಾಮಹಾ ಹರಿಕಾರ ಎಂದು ಕರೆಯಲಾಗಿದೆ. ಅವರ ಪರಿಶ್ರಮದ ಫಲವಾಗಿ ಇಂದು ಸುಮಾರು ೧೭ ಕೋಟಿ ದಲಿತ/ಬುಡಕಟ್ಟು ಜನರ ಅನ್ನ, ಅರಿವೆ ಆಸರೆ ಅಲ್ಪಸ್ವಲ್ಪ ಕಂಡಿದುಂಟು.

೧೯೩೫ರ ಪೂನಾ ಒಪ್ಪಂದದ ಫಲವಾಗಿ ಪರಿಶಿಷ್ಟರಿಗೆ ಜಾರಿಗೆ ಬಂದ ಮೀಸಲಾತಿ ವ್ಯವಸ್ಥೆ ೧೯೫೦ರಲ್ಲಿ ಸಂವಿಧಾನದ ವ್ಯಾಪ್ತಿಗೆ ಬಂತು. ಹೀಗೆ ಮೀಸಲಾತಿ ನೀತಿಯು ಸಾರ್ವಜನಿಕ ನೀತಿಯ ಒಂದು ಭಾಗವಾಗಿ ರಾಜ್ಯಪ್ರಭುತ್ವ ಮತ್ತು ಬ್ರಿಟೀಷರು ಭಾರತದಲ್ಲಿ ಅಸ್ತಿತ್ವಕ್ಕೆ ಬಂದಿತು. ಅಪಮಾನಕ್ಕೀಡಾದ ಜನಾಂಗಕ್ಕೆ ಮಹತ್ವ ತರುವ ಉದ್ದೇಶದ ಆಗ ಜಾರಿಗೆ ತರಲಾಯಿತು ಮತ್ತು ಅದೇ ಉದ್ದೇಶಕ್ಕಾಗಿ ಈಗಲೂ ಉಳಿಸಿಕೊಳ್ಳಲಾಗಿದೆ.

ಮೀಸಲಾತಿಗೆ ಆಯ್ದುಕೊಂಡ ಮಾನದಂಡಗಳು

೧. ಸಾವಿರಾರು ವರ್ಷಗಳಿಂದ ಊರ ಹೊರಗೆ ಇದ್ದವರು

೨. ಗೋಮಾಂಸ ತಿನ್ನುವವರು (ಕೀಳುಜಾತಿಯವರು)

೩. ಕೆರೆ, ಭವಿ, ದೇವಸ್ಥಾನಗಳಲ್ಲಿ ಪ್ರವೇಶ ಇಲ್ಲದವರು

೪. ಸಾರ್ವಜನಿಕ ಹೋಟೆಲ್‌ಗಳಿಂದ ಹೊರಗೆ ಇದ್ದವರು

೫. ಜೀತ ಪದ್ಧತಿಗೆ ಬಲಿಯಾದವರು

೬. ದೌರ್ಜನ್ಯ, ಶೋಷಣೆ, ಅನ್ಯಾಯಕ್ಕೆ ಒಳಗಾದವರು

೭. ಕೊಲೆ, ಸುಲಿಗೆ, ಅತ್ಯಾಚಾರಕ್ಕೆ ಬಲಿಯಾದವರು

೮. ಭೂಮಿ ಮತ್ತು ಬಂಡವಾಳದಿಂದ ವಂಚಿತರಾದವರು

೯. ಚಲನಶೀಲತೆಯನ್ನು ಕಳೆದುಕೊಂಡ ಜಾತಿ/ಗುಂಪು

೧೦. ೫೦೦೦ ಜಾತಿಗಳಿರುವ ದೇಶದಲ್ಲಿ ಕಟ್ಟಕಡೆಯ ಜಾತಿಗೆ ಸೇರಿದ ಮನುಷ್ಯ ತನ್ನ ಮೇಲಿನ ೪೯೯೯ ಜಾತಿಗಳ ಭಾರವನ್ನು ಅನಾದಿ ಕಾಲದಿಂದಲೂ ಹೊತ್ತು ನರಳಿದ್ದಾನೆ

೧೧. ಬಾಡಿಗೆ ಎತ್ತಿನಂತೆ ಬೇರೆಯವರ ಜೀವನಕ್ಕಾಗಿಯೇ ಅವರ ಜೀವನ ಎನ್ನುವಂತೆ ಜೀವನ ಸಾಗಿಸಿದವರು

ಹೀಗೆ ಸುಮಾರು ೫೦೦೦ ಜಾತಿಗಳು ನೆಲಮೂಲದಿಂದ ಹರಿದುಹಂಚಿ ಹೋಗಿವೆ. ಒಂದು ಜಾತಿ ಇನ್ನೊಂದು ಜಾತಿಯ ಹೆಗಲ ಮೇಲೆ ನಿಂತಿರುವುದರಿಂದ ಶ್ರೇಣೀಕೃತ ಜಾತಿವ್ಯವಸ್ಥೆ ನಿರ್ಮಾಣವಾಗಿತ್ತು ಆದ್ದರಿಂದ ಹೀಗೆ ಸಾಮಾಜಿಕ ಅಂತರವನ್ನು ತುಂಬುವ ಸಲುವಾಗಿ ರಾಜಕೀಯ ಪ್ರಾತಿನಿಧ್ಯದ ಮೂಲಕ ಮೀಸಲಾತಿ ನೀಡಲಾಯಿತು. ನಂತರ ಶೈಕ್ಷಣಿಕ ಉದ್ಯೋಗದಲ್ಲಿ ಮೀಸಲಾತಿ ನೀಡಲಾಯಿತು ಆದರೆ ರಾಜಕೀಯ ಮೀಸಲಾತಿಯನ್ನು ತುಂಬುವಲ್ಲಿ ವಿಫಲವಾಗಿದೆ. ದುರ್ಬಲರು

ಪ್ರಭಲರೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಕುಂಟುಕುದುರೆಯೊಂದು ವೇಗದ ರೇಸಿನ ಕುದುರೆ ಸಮಕ್ಕೆ ಬಂದು ನಿಲ್ಲಲು ಸಾಧ್ಯವಿಲ್ಲ? ಇದು ಸಾಧ್ಯವಾಗಬೇಕೆಂದು ಸಂವಿಧಾನದ ೧೪ನೇ ವಿಧಿ ಹೇಳುತ್ತದೆ, ಇದನ್ನೇ ನಾವು ಮೀಸಲಾತಿ ಎಂದು ಹೇಳಬಹುದು ಬಲಿಷ್ಠ ಕುದುರೆಗೆ ಹೆಚ್ಚು ಭಾರ ಹೊರಿಸಿ ಓಟದ ಸ್ಪರ್ಧೆಯಲ್ಲಿ ದುರ್ಬಲ ಕುದುರೆಗೆ ೧೦೦ ಮೀಟರ್ ಇಟ್ಟು ಬಲಿಷ್ಠ ಕುದುರೆಗೆ ೧೫೦ ಮೀಟರ್ ಇಡುವುದೇ ನಿಜವಾದ ಸ್ಪರ್ಧೆ, ಅದೇ ರೀತಿಯಾಗಿ ೧೧೦೦ರೂ ಇರುವ ಶ್ರೀಮಂತನಿಗೆ ೧೦೦ರೂ ಸಹಾಯದನ ನೀಡಿದರೆ ಬಡವನಿಗೆ ೧೦೦ ರೂ ಸಹಾಯಧನ ನೀಡಿದರೆ ವ್ಯತ್ಯಾಸವೇನು ಮಾಡಿದಂತಾಗುವುದಿಲ್ಲ. ಶ್ರೀಮಂತನಿಗೆ ೧೦೦ರೂ ಸಹಾಧನ ನೀಡಿದರೆ ಬಡವನಿಗೆ ೨೦೦ರೂ ಸಹಾಯಧನ ನೀಡಬೇಕು ಅದೇ ನ್ಯಾಯ, ಇದೇ ಮೀಸಲಾತಿಯ ಮೂಲ ತಿರುಳು. ಮೀಸಲಾತಿ ಎಂದರೆ ಕಾಲಿಲ್ಲದವನಿಗೆ ನಡೆಯಲು ಕೋಲು ಇದ್ದ ಹಾಗೆ ಅಥವಾ ಕಾಲು ಇಲ್ಲದವನಿಗೆ ನಡೆಯಲು ಕೊಡುವ ಒಂದು ಕನಿಷ್ಠ ಸಾಧನವೇ ವಿನಃ ಅವನನ್ನನು ಕಾಲಿದ್ದವನ ಜೊತೆ ಸಮಾನವಾಗಿ ಸ್ಪರ್ಧಿಸಲು ಕೊಡುವ ಆಸ್ತೆಯಲ್ಲ. ಹಾಗಾಗಿ ಸಮಾಜದಲ್ಲಿ ಕಾಲು ಕಳೆದುಕೊಂಡವರು ಕೈ ಕಳೆದುಕೊಂಡವರು, ಕಣ್ಣು ಕಳೆದುಕೊಂಡವರು ಅಸ್ಪೃಶ್ಯ ಜನಾಂಗದವರಾಗಿದ್ದು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಸಲುವಾಗಿ ಸಂವಿಧಾನ ನಿರ್ಮಾಪಕರು ಸಂವಿಧಾನದಲ್ಲಿ ಮೀಸಲಾತಿ ನೀತಿ ಅಳವಡಿಸಿದರು. ಹಾಗೆಂದ ಮಾತ್ರಕ್ಕೆ ಇತರ ಜಾತಿಯವರಲ್ಲಿ ಕಾಲು ಇಲ್ಲದವರು ಇಲ್ಲವೆಂದು ಅರ್ಥವಲ್ಲ ಆದರೆ ಇತರ ಜಾತಿಯವರಿಗೆ ಕಾಲು ಮತ್ತು ಕೋಲು ಕೊಳ್ಳುವ ಸಾಮರ್ಥ್ಯ ಇದ್ದವರನ್ನು ಮೀಸಲಾತಿಯಿಂದ ಹೊರಗೆ ಇಡಲಾಗಿದೆ. ಇದು ಪ್ರಾರಂಭದಲ್ಲಿ ಇದ್ದ ಮೀಸಲಾತಿ ಬಗ್ಗೆ ಇದ್ದ ಅಭಿಪ್ರಾಯ, ಮೀಸಲಾತಿ ೧೯೪೭ರಲ್ಲಿ ಜಾರಿಯಲ್ಲಿ ಇತ್ತು, ಅದು ೧೯೫೦ರಿಂದ ಜಾರಿಗೆ ಬಂದಿದೆಯಾದರೂ ಉದ್ಯೋಗದಲ್ಲಿ ಜಾರಿಗೆ ಬಂದದ್ದು ೧೯೬೭ರಿಂದಾಚೆಗೆ, ಅದರಲ್ಲಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಜಾರಿಗೆ ಬಂದಿತು ಇಂದಿಗೂ ಇದನ್ನು ಹದ್ದಿನ ಕಣ್ಣಿನಿಂದ ನೋಡಲಾಗುತ್ತಿದೆ.[೨]

ಮೀಸಲಾತಿ ಎಂಬುದು ಸಾಮಾಜಿಕ ಅಸಮಾನತೆಯಿಂದ ಆರ್ಥಿಕ, ರಾಜಕೀಯ ಅವಕಾಶಗಳಿಂದ ವಂಚಿತರಾಗಿದ್ದ ಜನರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಅವಕಫಾಶಗಳನ್ನು ನೀಡುವುದರ ಮೂಲಕ ಅಸ್ಪೃಶ್ಯ ಸಮುದಾಯವನ್ನು ಮೇಲೆತ್ತಲು ಮೀಸಲಾತಿ ನೀತಿ ಜಾರಿಗೆ ತರಲಾಯಿತು. ಆ ಮೂಲಕ ಸಮಸಮಾಜವನ್ನು ಕಟ್ಟಬಹುದೆಂದು ಕನಸು ಕಂಡಿದ್ದ ಸಂವಿಧಾನ ನಿರ್ಮಾಪಕರು ಈ ಮೀಸಲಾತಿ ವ್ಯವಸ್ಥೆ ಕಲ್ಪಿಸಿದರು.

ಆದರೆ ಅದರೊಳಗಿನ ಸ್ತುಪ್ತ ಮನಸುಗಳು ಮಾಜಿ ಸೈನಿಕರಿಗೆ ಮೀಸಲಾತಿ, ಯೋಜನಾ ನಿರಾಶ್ರೀತರ ಮೀಸಲಾತಿ, ಅಂಗವಿಕಲರಿಗೆ ಮೀಸಲತಿ, ವಿಧವೆಯರಿಗೆ ಮೀಸಲಾತಿ ಹಿಂದುಳಿದವರಿಗೆ ಮೀಸಲಾತಿ, ಮಹಿಳಾ ಮೀಸಲಾತಿ, ಅಲ್ಪಸಂಖ್ಯಾತರಿಗೆ ಮೀಸಲಾತಿ ಈ ಕಲ್ಪನೆಗಳನ್ನು ತುಂಬಿ ಮೀಸಲಾತಿಯನ್ನು ದುರ್ಬಲಗೊಳಿಸಿದರು. ಆದರೆ ವಾಸ್ತವಿಕವಾಗಿ ಮೀಸಲಾತಿಗೂ ಸಾಮಾಜಿ ನ್ಯಾಯಕ್ಕೂ ಸಂಬಂಧವಿಲ್ಲ. ಯಾಕೆಂದರೆ ಮೀಸಲಾತಿ ಸಾಮಾಜಿಕ ನ್ಯಾಯದ ಭಾಗವಾಗಿ

ಬಂದಿಲ್ಲ, ಅದು ಅಸಮಾನತೆಯ ಭಾಗವಾಗಿ ಬಂದಿದೆ. "ಸಾಮಾಜಿಕ ಅಸಮಾನತೆ" ಮತ್ತು "ಸಾಮಾಜಿಕ ನ್ಯಾಯ" ಇವೆರಡು ಬೇರೆ ಬೇರೆ ಕಾಲಘಟ್ಟದಲ್ಲಿ ಬಂದ ಪರಿಕಲ್ಪನೆಗಳು. ಹಾಗಾಗಿ ಇವೆರಡನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಕ ಮಾಡುವ ಹಾಗಿಲ್ಲ. ಸಾಮಾಜಿಕ ಅಸಮಾನತೆಗೆ ಇರುವ ಮಾನದಂಡ ಬೇರೆ ಮತ್ತು ಸಾಮಾಜಿಕ ನ್ಯಾಯಕ್ಕೆ ಇರುವ ಮಾನದಂಡಗಳು ಬೇರೆ, ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಎಲ್ಲರೂ ಮೀಸಲಾತಿ ವ್ಯಾಪ್ತಿಗೆ ಬಂದರು.

ಅಂದರೆ ಮೀಸಲಾತಿ ಪುಗಸಟ್ಟೆ ಸಿಗುತ್ತದೆ ಅಂದರೆ ನನಗೆ ಬೇಕು ನಮ್ಮ ಅಪ್ಪನಿಗೆ ಬೇಕು, ಸತ್ತ ನಮ್ಮಜ್ಜಿಗೂ ಬೇಕು, ಇದೇ ಸಾಮಾಜಿಕ ನ್ಯಾಯ ಎಂದು ವಾದಿಸಲಾಗುತ್ತಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲತಿ ನೀಡಿದರೆ ಅಥವಾ ಮುಂದುವರೆಸಿದ ದೇಶದ ಐಕ್ಯತೆಗೆ ದಕ್ಕೆ ಬರುತ್ತದೆ ಎಂದು ವಾದಿಸಿದ ಒಂದು ಕಾಲವಿತ್ತು ಮತ್ತು ಈಗಲೂ ಮೀಸಲಾತಿಯಿಂದ ದೇಶದ ಐಕ್ಯತೆಗೆ ದಕ್ಕೆ ಬರುತ್ತದೆ ಎನ್ನುವುದಾದರೆ ಹಿಂದುಳಿದವರ್ಗದವರಿಗೆ ಮೀಸಲಾತಿ ಯಾಕೆ ಕೊಟ್ಟರು ಪರಿಶಿಷ್ಟರಿಗೆ ಮೀಸಲಾತಿ ಕೊಟ್ಟರೆ ದೇಶದ ಐಕ್ಯತೆಗೆ ಧಕ್ಕೆ ಬರುತ್ತದೆ ಎನ್ನುವುದಾದರೆ ಹಿಂದುಳಿದ ವರ್ಗದವರಿಗೆ ಮೀಸಲತಿ ಕೊಟ್ಟರೆ ದೇಶದ ಐಕ್ಯತೆಗೆ ಧಕ್ಕೆ ಬರುವುದಿಲ್ಲವಾ ಇದು ನರಿ ತಾನು ತಿಂದು ನಾಯಿ ಬಾಯಿಗೆ ಒರೆಸಿದಂತೆ ಅಲ್ಲವೆ. ಅದೇ ರೀತಿಯ ದೃಷ್ಟಾಂತವನ್ನು ನೋಡುವುದಾದರೆ ಕರ್ನಾಟಕದಲ್ಲಿ ೧೯೯೫ರಲ್ಲಿ ಹಿಂದುಳಿದ ವರ್ಗಗಳಿಗೆ ಇದ್ದ ಶೇ. ೨೭ರ ಮೀಸಲಾತಿಯಲ್ಲಿ, ಒಳಮೀಸಲಾತಿಯನ್ನು ಜಾರಿಗೆ ತರಲಾಯಿತು. ಉದಾ: ಪ್ರವರ್ಗ–I, IIA, IIB, IIIA, IIIB ಎಂದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಹಿಂದುಳಿದ ವರ್ಗಗಳಲ್ಲಿ ಒಳಮೀಸಲಾತಿ ಜಾರಿಗೊಳಿಸಲಾಯಿತು. ಆದರೆ ೨೦೦೭ರಿಂದ ಪರಿಶಿಷ್ಟಜಾತಿಗಳು ಒಳಮೀಸಲಾತಿಗಾಗಿ ಅವಿರತ ಹೋರಾಟ ಮಾಡುತ್ತಿದ್ದಾರೆ. ಆದರೆ ಇನ್ನು ಯಾವ ಪಕ್ಷ, ಸರಕಾರ ತಲೆ ಕೆಡಿಸಿಕೊಂಡಿಲ್ಲ, ಪರಿಶಿಷ್ಟರ ಒಳಮೀಸಲಾತಿ ಜಾರಿಯಾದರೆ ದಲಿತರ ಐಕ್ಯತೆ ಕೆಡುತ್ತದೆಯಂತೆ, ಇಷ್ಟಕ್ಕೂ ಒಳಮೀಸಲಾತಿಯಲ್ಲಿ ಇರುವ ಮರ್ಮ ಇಷ್ಟೇ, ಪರಿಶಿಷ್ಟ ಜಾತಿಗಳಿಗೆ ಇರುವ ಶೇ. ೧೫ರ ಮೀಸಲಾತಿಯನ್ನು ಸಂವಿಧಾನದ ಪ್ರಕಾರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ವರ್ಗೀಕರಣವಾಗಬೇಕು. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ೧೦೧ ಜಾತಿಗಳಿವೆ.

ಈ ೧೦೧ ಜಾತಿಗಳಿಗೆ ಶೇ. ೧೫ ಮೀಸಲಾತಿ ಇದೆ. ಪರಿಶಿಷ್ಟ ಜಾತಿಗಳಲ್ಲಿ ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ನ್ಯಾಯಮೂರ್ತಿ ಸದಾಶಿವ ಆಯೋಗದ ಪ್ರಕಾರ ಮಾದಿಗ ಮತ್ತು ಅದರ ಉಪಜಾತಿಗಳು ಪರಿಶಿಷ್ಟರಲ್ಲಿ ಅತಿಹೆಚ್ಚು ಇದೆ, ಅಂದರೆ ಮಾದಿಗ ಮತ್ತು ಅದರ ಉಪಜಾತಿಗಳು... ಎಂದು ನ್ಯಾಯಮೂರ್ತಿ ಸದಾಶಿವ ಆಯೋಗ ಗುರುತಿಸಿದೆ. ಈ ಜನಾಂಗ ಒಳ ಮೀಸಲಾತಿ ಪ್ರಕಾರ ಶೇ. ೬ರಷ್ಟು ಮೀಸಲಾತಿ ನಿಗದಿಪಡಿಸಲಾಗಿದೆ. ಅದೇ ರೀತಿಯಾಗಿ ಎರಡನೇ ಅತಿ ದೊಡ್ಡ ಪರಿಶಿಷ್ಟ ಜಾತಿಯೆಂದರೆ, ಹೊಲೆಯ ಮತ್ತು ಅದರ ಉಪಜಾತಿಗಳು ಇದರಲ್ಲಿ ೨೪ಜಾತಿಗಳಿವೆ ಇದಕ್ಕೆ ಶೇ. ೫ರಷ್ಟು ಮೀಸಲಾತಿ ಕಲ್ಪಿಸಿದೆ. ಒಟ್ಟು ಹೊಲೆಯ ಮತ್ತು

ಮಾದಿಗ ಉಪಜಾತಿಗಳು ಸೇರಿ ೫೧ ಜಾತಿಗಳಿವೆ. ಈ ೫೧ ಜಾತಿಗಳಿಗೆ ಶೇ. ೧೧ ಮೀಸಲಾತಿಯನ್ನು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನಿಗದಿಪಡಿಸಿದೆ ಉಳಿದ ೪೯ ಜಾತಿಗಳ ಜನ ಸಂಖ್ಯೆಯನ್ನು ದಾಟುವುದಿಲ್ಲ ಮತ್ತು ಮೀಸಲಾತಿ ಇರುವುದು ಅಸ್ಪೃಶ್ಯರಿಗಾಗಿ ಸ್ಪೃಶ್ಯರಿಗಾಗಿ ಅಲ್ಲ, ಇದರಲ್ಲಿ ಸ್ಪೃಶ್ಯ ಜಾತಿಯವರಿ ಸಿಂಹಪಾಲು ಪಡೆದಿದ್ದಾರೆಂದು ಆಯೋಗ ಅಭಿಪ್ರಾಯಪಟ್ಟಿದೆ. ಈ ಮೀಸಲಾತಿಯಿಂದ ಹೆಚ್ಚು ಲಾಭ ಪಡೆದ ಮತ್ತು ಮೀಸಲಾತಿಯ ರುಚಿನೋಡಿದ ಸ್ಪೃಶ್ಯ ಜಾತಿಗಳು ಪರಿಶಿಷ್ಟರ ೧೦೧ ಜಾತಿಗಳಲ್ಲಿ ಹೊಲೆಯ ಮತ್ತು ಮಾದಿ ಸಮುದಾಯಗಳು ಶೇ. ೧೧ರಷ್ಟು ಮೀಸಲಾತಿ ಕಬಳಿಸಿ ಉಳಿದ ೯೯ ಜಾತಿಗಳಿಗೆ ಅನ್ಯಾಯ ಮಾಡಿದ್ದಂತಾಗುತ್ತದೆ. ಬೋವಿ(ವಡ್ಡರ) ಮತ್ತು ಲಂಬಾಣಿ ಜನಾಂಗದವರು ತಕಾರಾರು ಎಬ್ಬಿಸಿದ್ದಾರೆ. ೧೯೭೭ರಲ್ಲಿ ಲಂಬಾಣಿಗರು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಯಿತು. ಅದೇ ರೀತಿಯಾಗಿ ಬೋವಿ ಅಥವಾ ವಡ್ಡರುಸ ೧೯೯೦ರ ದಶಕದಲ್ಲಿ ಸಾಮಾನ್ಯ ವರ್ಗದಿಂದ ನೇರವಾಗಿ ಪರಿಶಿಷ್ಟ ಜಾತಿ ಪಟ್ಟಿಗೆ ಬಂದರು ಕೇವಲ ಅಲ್ಪಸಮಯದಲ್ಲಿ ಬೋವಿ ಮತ್ತು ಲಂಬಾಣಿಗರು ಅತಿ ಹೆಚ್ಚು ಸರಕಾರಿ ಸೌಲಭ್ಯಗಳನ್ನು ಪಡೆದಿದ್ದಾರೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಪರಿಶಿಷ್ಟ ಜಾತಿಗಳಿಗಿರುವ ಸೌಲಭ್ಯ ಮತ್ತು ಹುದ್ದೆಗಳು ಬೋವಿ ಮತ್ತು ಲಂಬಾಣಿಗರದ್ದೆ ಸಿಂಹಪಾಲು ಪಡೆದಿದ್ದಾರೆ ಎಂದು ಆಯೋಗ ಹೇಳಿದೆ. ಪರಿಶಿಷ್ಟರ ೧೦೧ ಜಾತಿಗಳಲ್ಲಿ ಬೋವಿ ಮತ್ತು ಲಂಬಾನಿಗರೆ ಹೆಚ್ಚು ಸೌಲಭ್ಯ ಅವಕಾಶಗಳನ್ನು ಪಡೆದು ಉಳಿದ ೯೯ ಜಾತಿಗಳಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ. ಹಾಗಾದರೆ ಯಾವುದು ಸಾಮಾಜಿಕ ನ್ಯಾಯ, ಇಷ್ಟಕ್ಕೂ ಮೀಸಲಾತಿ ಬಂದದ್ದು ಅಸ್ಪೃಶ್ಯತೆ ಅಸಮಾನತೆಯ ಭಾಗವಾಗಿ ಬಂದಿದೆ, ಮೀಸಲಾತಿ ಕ್ಷೇತ್ರಗಳು ಇರುವದು ಅಸ್ಪೃಶ್ಯರಿಗಾಗಿ ಸ್ಪೃಶ್ಯರಿಗಾಗಿ ಅಲ್ಲಿ ಅತಿ ಹೆಚ್ಚು ಎಂಎಲ್ಎಗಳು ಬೋಮಿ ಮತ್ತು ಲಂಬಾಣಿ ಜನಾಂಗದವರೆ ಇದ್ದಾರೆ ಅಥವಾ ಸ್ಪೃಶ್ಯ ಜಾತಿಯವರಿದ್ದಾರೆ. ಹಾಗಾದರೆ ಎಲ್ಲಿದೆ ಸಾಮಾಜಿಕ ನ್ಯಾಯ ಯಾರನ್ನು ಕೇಳಬೇಕು ಹಿಂದುಳಿದ ವರ್ಗದಲ್ಲಿ ಒಳಮೀಸಲಾತಿ ತಂದರೆ ಐಕ್ಯತೆ ಕೆಡುವುದಿಲ್ಲ ಪರಿಶಷ್ಟರಲ್ಲಿ ಒಳಮೀಸಲಾತಿ ನೀಡಿದರೆ ಐಕ್ಯತೆ ಕೆಡುತ್ತದೆ, ಹೇಗಿದೆ ಜಾತಿಗ್ರಸ್ಥ ಸಮಾಜದ ಮನಸ್ಸುಗಳು ಅಲ್ಲದೇ ಇಂದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ದಿನಕ್ಕೊಂದು ಜಾತಿ ಮೀಸಲಾತಿ ವ್ಯಾಪ್ತಿಗೆ ಬರುತ್ತವೆ. ಮೀಸಲಾತಿ ಒಂದು ಸಂವಿಧಾನಾತ್ಮಕವಾದ ಹಕ್ಕು, ಅದನ್ನು ಯಾರು ಬೇಕಾದರೂ ಕೇಳಬಹುದು ಪಡೆಯಬಹುದು, ಆದರೆ ಇನ್ನೊಬ್ಬರದನ್ನು ಕಸಿದುಕೊಳ್ಳಬಾರದು ಮತ್ತು ಅವರಿಗೆ ನೀಡಬಾರದೆನ್ನುವುದು ನೀಚತನದ ಪರಮಾವದಿ ಅದೇ ರೀತಿಗಿಂತ ಎಸ್‌ಸಿ/ಎಸ್‌ಟಿಗೆ ಇರುವ ಬಡ್ತಿ ಮೀಸಲಾತಿಯಿಂದ ಕೂಡ ಕೆಲವು ವರ್ಗಗಳು ರಕ್ತಕಾರಿ

ಹೀಗಾಗಿ ಮೀಸಲಾತಿಯ ಪುನರ್ ವಿಮರ್ಶೆಯಾಗಬೇಕು ಮತ್ತು ಅದಕ್ಕೆ ಬದಲಾಗುತ್ತಿರುವ ಪರಿಸರ ಮತ್ತು ಸನ್ನಿವೇಶಕ್ಕನುಗುಣವಾಗಿ ಹೊಸ ಮಾನದಂಡಗಳನ್ನು ಸೃಷ್ಟಿಸುವ ಅಗತ್ಯವಿದೆ.

೧. ಮೀಸಲಾತಿಯಲ್ಲಿ ಇನ್ನು ಮುಂದೆ ಹೊಸ ಜಾತಿಗಳನ್ನು ಸೇರಿಸಬಾರದು. ಯಾಕೆಂದರೆ ಒಂದು ಜಾತಿಗೆ ನೀಡಿದರೆ ಮತ್ತೊಂದು ಜಾತಿ ಕೇಳುತ್ತದೆ ಅದೇ ಒಂದು ಉದ್ಯೋಗದಂತೆ ಮಾಡುತ್ತದೆ.

೨. ಈಗ ಪ.ಜಾತಿಯ ೧೧೧ ಜಾತಿಗಳಲ್ಲಿ ಸ್ಪರ್ಶಗಳನ್ನು ಮೀಸಲಾತಿಯಿಂದ ಹೊರಗೆ ಇಡಬೇಕು. ಉದಾ: ಹೊಲೆಯ ಮತ್ತು ಮಾದಿಗ ಜಾತಿಗಳು ಹೊರತುಪಡಿಸಿ ಉಳಿದ ಎಲ್ಲ ಸಮುದಾಯಗಳನ್ನು ಹೊರಗೆ ಇಡುವುದು. ಉದಾ: ಬೋವಿ, ಲಮಾಣಿ

೩. ಒಂದು ವೇಳೆ ಎಸ್‌ಸಿ ಪಟ್ಟಿ ಇರಲ್ಲಿ ಎನ್ನುವ ಜಾತಿಗಳು ತಪ್ಪಲ್ಲ ಪರಸ್ಪರ ಆಂತರಿಕವಾದ ಹಗಲು ಒಪ್ಪಬೇಕು ಎಸ್‌ಸಿ ಮೀಸಲಾತಿ ಲಾಭ ಪಡೆದು ಎಸ್‌ಸಿ ಅವರ ಮೀಸಲು ಒಂದೇ

೪. ಎಸ್‌ಸಿ ಪಟ್ಟಿ ಹೊಲೆಯ ಮತ್ತು ಮಾದಿಗ ಅತಿ ಹೆಚ್ಚಿನ ಜನಸಂಖ್ಯೆ ಹಾಗಾಗಿ ಅವರಿಗಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು.

ಮೀಸಲಾತಿ ಮತ್ತು ಬಡ್ತಿ ಮೀಸಲಾತಿ

ಸ್ವಾತಂತ್ರ್ಯ ಬಂದ ಕೂಡಲೆ ಭಾರತದದ್ಯಾಂತ ಎದ್ದ ಪ್ರಜಾಪ್ರಭುತ್ವದ ಅಲೆ ಎಲ್ಲವನ್ನು ವ್ಯಾಪಿಸುತ್ತ ಪ್ರಾಚೀನ ಫ್ಯೂಡಲಿಸಂನ್ನು ಕೊಚ್ಚಿಹಾಕುತ್ತದೆ ಎಂದು ಬಹುತೇಕ ದಲಿತರು, ದಮನಿತರು ಭವಿಸಿದ್ದುಂಟು. ಇನ್ನೂ ಕೆಲವರು ನಮ್ಮ ಅಸ್ಥಿತ್ವಕ್ಕೆ ದಕ್ಕೆಬರುತ್ತದೆ ಎಂದು ಹೆದರಿದ್ದು ಉಂಟು ಹೀಗಾಗಿ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ಏಕರೂಪವಾಗಿರುವುದಿಲ್ಲವೆಂಬುದು ಈಗಾಗಲೆ ಕೆಲವೊಂದು ಕ್ಷೇತ್ರಗಳಲ್ಲಿ ಸಾಭಿತಾಗಿದೆ. ಇನ್ನೂ ಅಸಮಾನತೆಯ ಭಗವಾಗಿ ಬಂದ ಮೀಸಲಾತಿ ದಾರಿ–ದಿಕ್ಕು ತಪ್ಪುತ್ತಿದೆ. ಅಸಮಾನತೆಯಲ್ಲಿ ಇರುವವರನ್ನು ಸಮಾನತೆಗೆ ತರುವ ನೆಲೆಯೇ ಮೀಸಲಾತಿ ಎಂದು ಬಾವಿಸಿ ಸಂವಿಧಾನ ನಿರ್ಮಾಪಕರು ರಾಜಕೀಯ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಿದರು.[೨೫] ಅದರಂತೆ ಸಂವಿಧಾನ ಅನುಚ್ಛೇದ ೩೩೫ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸರ್ಕಾರ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸುವ ನಿಟ್ಟಿನಲ್ಲಿ ಹಕ್ಕುಗಳನ್ನು ದಯಪಾಲಿಸಿದೆ. ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಕಾರ್ಯಗಳಿಗೆ ಸಂಬಂಧವಾದ ಸೇವೆಗಳಿಗೆ ಮತ್ತು ಪದಗಳಿಗೆ ನಿಯುಕ್ತಿ ಮಾಡುವುದರಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಧನೆಯನ್ನು ಪರ್ಯಾವಲೋಚನೆಗೆ ತೆಗೆದುಕೊಳ್ಳಬೇಕೆಂದು ವಿವರಿಸಿದೆ. ಈಗಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ಸಾರ್ವಜನಿಕ ಕ್ಷೇತ್ರಗಳಲ್ಲಿ ಹಾಗೂ ಅಂಗ ಸಂಸ್ಥೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಪರಿಶಿಷ್ಟ ಜಾತಿ–ಪಂಗಡಗಳಿಗೆ ನಿಗದಿಪಡಿಸಿದ ಮೀಸಲಾತಿ ಅನ್ವಯ ಸೇವೆಗಳಲ್ಲಿ ಸ್ಥಾನ ಕಾಯ್ದಿರಸಬೇಕೆಂದು ಉಲ್ಲೇಖಿಸಿದೆ. ನಿಯಮ ಮತ್ತು ಸಂವಿಧಾನ ವಾಸ್ತವಿಕ ನೆಲೆಯಲ್ಲಿ ನ್ಯಾಯ ಒದಗಿಸಲು ಇಲ್ಲಿಯವರೆಗೂ ಪ್ರಯತ್ನ ಮಾಡುತ್ತ ಬಂದಿದೆ. ಇದರ ಜೊತೆಗೆ ಮೀಸಲಾತಿ ಪ್ರಕಾರ ಕೆಲವು ಭಾರಿ ಕಂಡತೆ, ಕೆಲವು ಭಾರಿ ಕಾಣದಂತೆ ಅನ್ಯಾಯ ಮಾಡಲಾಗಿದೆ ಎಂದು ಸರ್ಕಾರದ ಅಂಕಿ–ಅಂಶಗಳು ಮತ್ತು ವರದಿಗಳು ಸಾದರಪಡಿಸಿವೆ. ಅದೇ ರೀತಿಯಾಗಿ ಮೀಸಲಾತಿ ಜಾರಿಯಾದಾಗಿನಿಂದಲು ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್–ಸಿ ಮತ್ತು ಗ್ರೂಪ್–ಡಿ ದರ್ಜೆಗಳಲ್ಲಿ ಪರಿಶಿಷ್ಟರಿಗೆ ನಿಗದಿತ ಪ್ರಮಾಣ ತಲುಪಿಲ್ಲ ಎಂದು ಸಹ ಸರ್ಕಾರದ ಅಂಕಿ ಅಂಶಗಳು ಹೇಳುತ್ತಿವೆ.[೨೬]

ದಲಿತರ ಒಟ್ಟು ಜನಸಂಖ್ಯೆ ೧೩.೮ ಕೋಟಿಯಾಗಿದೆ. ಇದರಲ್ಲಿ ಕಸ ಗೂಡಿಸುವ ಕೆಲಸವನ್ನು ಸೇರಿದಂತೆ ಸೇವಾ ಕ್ಷೇತ್ರದಲ್ಲಿ ದೊರಿಯುವ ಉದ್ಯೋಗ ೧೩ಲಕ್ಷ ದಾಟುವುದಿಲ್ಲ. ಎ.ಬಿ. ವರ್ಗದ ಹುದ್ದೆಗಳು ೭೨,೨೧೨ ಮತ್ತು ಸಿ ವರ್ಗದ ಹುದ್ದೆಗಳು ೧,೩೧,೮೪೧ರಷ್ಟಿದೆ ದಲಿತರ ಪೂರ್ವ ಉದ್ಯೋಗಗಳು ಆಧುನಿಕರಣಕ್ಕೆ ವಗ್ಗಿಕೊಳ್ಳಬೇಕಾಗಿದೆ ಅಥವಾ ತೃಪ್ತರಾಗಬೇಕಿದೆ ಎಂದಿದ್ದಾರೆ. ಈಗಾಗಿ ಪರಿಶಿಷ್ಟರ ದೃಷ್ಟಿಯಲ್ಲಿ ಉದ್ಯೋಗದಲ್ಲಿನ ಅಸಮಾನತೆಯ ಪರಿಣಾಮವಾಗಿ ಒಂದು ಕಾಯ್ದೆಗೆ ಮತ್ತೊಂದು ಕಾಯ್ದೆನ್ನು ಸೇರಿಸುತ್ತ ಬರಲಾಗಿದೆ.[೨೭] ಅದರಲ್ಲಿ ಪ್ರಮುಖವಾದದ್ದು ಎಂದರೆ ಸೇವೆಗಳಲ್ಲಿ ಬಡ್ತಿ ಮೀಸಲಾತಿಯಲ್ಲಿ ಶೇಕಡ ೧೮ರ ಪರಿಮಿತಿ ಮೀರಿದರು ಮೀಸಲಾತಿಯನ್ನು ಮುಂದುವರಿಸುವ ಬಗ್ಗೆ ಭಾರತದ ಸಂವಿಧಾನ ಕಾಯ್ದೆ ೨೦೦ರ ಅನ್ವಯ ಆದೇಶಿಸಲಾಗಿದೆ. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ೧.೧.೧೮೮೪ರಿಂದ ದಿನಾಂಕ ೧೨.೭.೧೯೮೯ರ ವರೆಗೆ ನಡೆದ ನೇರ ನೇಮಕಾತಿಗಳಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯಾರ್ಥಿಗಳು ಸಾಕಷ್ಟು ಲಭ್ಯವಿಲ್ಲದೆ ಇರುವುದರಿಂದ ಇತರೆಯವರಿಂದ (ಇತರೆ ಜಾತಿಗಳಿಂದ) ಭರ್ತಿಮಾಡಿದ ಹುದ್ದೆಗಳನ್ನು ಗುರುತಿಸಿ ಅಂತವುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲು ಹಾಗೂ ರಿಕ್ತಸ್ಥಾನಗಳನ್ನು ಇತರೆ ಅಭ್ಯಾರ್ಥಿಯವರಿಂದ ಭರ್ತಿ ಮಾಡುವುದರಿಂದ ಕರ್ನಾಟಕ ಸರ್ಕಾರವು ದಿನಾಂಕ ೧೨-೭-೧೯೮೯ರ ಆದೇಶದಲ್ಲಿ ಮೀಸಲು ಅಭ್ಯರ್ಥಿಗಳ ಸ್ಥಾನವನ್ನು ಬೇರೆ ಅವರಿಗೆ ನೀಡುವುದನ್ನು ತಪ್ಪು ಒಂದುವೇಳೆ ಆ ಸ್ಥಾನಕ್ಕೆ ಸೂಕ್ತ ಅಭ್ಯಾರ್ಥಿಗಳು ಸಿಗದೆ ಇದ್ದರೆ. ಬಡ್ತಿ ಮೀಸಲಾತಿ ಅನ್ವಯ ವಿವಿಧ ವೃಂಧಗಳಿಗೆ ಅಥವಾ ಹುದ್ದೆಗಳಿಗೆ ೧೯೭೮ರ ಆದೇಶದನ್ವಯ ಮುಂಬಂಡ್ತಿ ನೀಡುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯಾರ್ಥಿಗಳು ರೊಸ್ಟರ್ ಬಿಂದುವಿನ ಎದುರಾಗಿ ಲಭ್ಯವಾಗದೆ ಸಾಮಾನ್ಯ ಅಭ್ಯಾರ್ಥಿಗಳಿಂದ ಭರ್ತಿಮಾಡಿದಲ್ಲಿ ಅಂತಹ ಬ್ಯಾಕ್‌ಲಾಗ್ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಂದ ಭರ್ತಿ ಮಾಡಬೇಕೆಂದು ಸರ್ಕಾರದ ಅಧಿಸೂಚನೆ ೧-೪-೧೯೨ ಕರ್ನಾಟಕದ ಅಧಿಸೂಚನೆ ಸಿವಿಲ್ ಸೇವೆಗಳ ಸಾಮಾನ್ಯ ನೇಮಕಾತಿ ನಿಯಮಗಳು ೧೯೭೭ರ ನಿಯಮಕ್ಕೆ ತಿದ್ದುಪಡಿ ಮಾಡಿ ಜಾರಿಗೆ ತರಲಾಗಿದೆ. ಅದೇ ರೀತಿಯಾಗಿ ೧೯೭೭ರ ಸರ್ಕಾರಿ ಆದೇಶದಲ್ಲಿ ನಿಯಮ ೮ಕ್ಕೆ ತಿದ್ದುಪಡಿಮಾಡಿ ಈ ನಿಯಮ ಅನ್ವಯಿಸತಕ್ಕದ್ದು ಎಂದು ತಿಳಿಸುತ್ತದೆ. ೨೪-೬-೧೯೭ರ ಸರ್ಕಾರಿ ಆದೇಶದಲ್ಲಿ ಮುಂಬಡ್ತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಲು ರೊಸ್ಟರ್ ಅನ್ನು ನಿಗದಿಮಾಡಿ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಇಲ್ಲಿ ಪ್ರಸ್ತುತವಾಗಿ ಗಮನಿಸಬೇಕಾದ ಸಂಗತಿ ಎಂದರೆ ೧೯೭೮ರ ಬಡ್ತಿ ಆದೇಶ ೩೩ರ ಸರ್ಕಲ್‌ನಲ್ಲಿ (ಬಿಂದು)ಬರುವಂತೆ ಪರಿಶಿಷ್ಟ ಜಾತಿ ಪಂಗಡಗಳ ಅಭ್ಯರ್ಥಿಗಳು ಬಿಂದು ಬಂದಾಗ ಅಂತಹ ಸ್ಥಾನಗಳಲ್ಲಿ ಇತರೆ ಅಭ್ಯಾರ್ಥಿಗಳಿಂದ ತುಂಬಲ್ಪಟ್ಟು ಮುಂದೆ ಅಂತಹ ಹುದ್ದೆಗಳು ರಿಕ್ತವಾಗಿ ಉಳಿದು ಬ್ಯಾಕ್‌ಲಾಗ್ ಆಗಿ ಪರಿವರ್ತಿತಿವಾದ ಹುದ್ದೆಗಳನ್ನು ಮೇಲಿನ ಸರ್ಕಾರದ ಆದೇಶದಂತೆ ತುಂಬಲಾಗುತ್ತದೆ. ಈಗೆ ತುಂಬಲ್ಪಟ್ಟ ಹುದ್ದೆಗಳು ಅಂದರೆ ಬಡ್ತಿಯಾದ ಹುದ್ದೆಗಳು ಕಾಲಾಂತರದಲ್ಲಿ ಹೆಚ್ಚಾದಾಗ ಅಂದರೆ ಉದಾ: ಮೇಲ್ಮಟ್ಟದ ಹುದ್ದೆಗಳು ಹತ್ತು ಇದ್ದಾಗ ಆ

ಹುದ್ದೆಗಳಿಗೆ ರೋಸ್ಟರ್ ಬಿಂದುವಿನ ಪ್ರಕಾರ ಸಾಮಾನ್ಯ ಅಭ್ಯಾರ್ಥಿಗಳು ಕೆಳಗಿನ ಹುದ್ದೆಗಳಲ್ಲಿ ಲಭ್ಯವಿಲ್ಲದಿದ್ದಾಗ ಕೇವಲ ಪರಿಶಿಷ್ಟ ಜಾತಿ ಪಂಗಡದ ಅಭ್ಯಾರ್ಥಿಗಳು ಅರ್ಹತೆಯನ್ನು ಹೊಂದಿದಾಗ ಅಂತಹವರಿಗೆ ಸಾಮಾನ್ಯವಾಗಿ ಪದನ್ನೋತಿ ನೀಡಲಾಗುತ್ತದೆ. ಇದರಿಂದ ಸ್ವಭಾವಿಕವಾಗಿ ಹತ್ತು ಹುದ್ದೆಗಳಲ್ಲಿ ಐದು ಹುದ್ದೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರು ಇದ್ದಾಗ ಸ್ವಭಾವಿಕವಾಗಿ ಅಂತಹ ಪರಿಸ್ಥಿತಿಯಲ್ಲಿ ಮಂಜೂರಿಯಾದ ಹುದ್ದೆಗಳ ಸಂಖ್ಯೆಯಲ್ಲಿ ಅರ್ದದಷ್ಟು ಹುದ್ದೆಗಳನ್ನು ಹೊಂದುತ್ತಾರೆ. ಇಂತಹ ವಿಷಯಗಳ ವಿರುದ್ಧ ದೇಶದ ತುಂಬೆಲ್ಲ ಹೈಕೋರ್ಟ್ ಮತ್ತು ಸೂಪ್ರೀಂ ಕೋರ್ಟ್‌ಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಮೀಸಲಾತಿಯನ್ನು ಅನುಸರಿಸುವಾಗ ವಿಳಂಬ ದೋರಣೆ ಹಾಗೂ ಮೀಸಲಾತಿ ಹುದ್ದೆಗಳಲ್ಲಿ (ನೇಮಕಾತಿ ಸಂದರ್ಭದಲ್ಲಿ) ಸಕಾಪ್ಟು ಅಭ್ಯಾರ್ಥಿಗಳು ಲಭ್ಯವಿಲ್ಲದ್ದರಿಂದ ಇಲ್ಲಿಯವರೆಗೆ ಕೇವಲ ೬.೭ರಷ್ಟು ಅಭ್ಯಾರ್ಥಿಗಳಿಂದ ತುಂಬಲ್ಪಟ್ಟ ಹುದ್ದೆಗಳಾಗಿರುತ್ತವೆ. ನಿರ್ಧಿಷ್ಟಪಡಿಸಿದ ಹುದ್ದೆಗಳು ಪ್ರಾರಂಭಿಕ ಹಂತದಿಂದ ತುಂಬಲ್ಪಟ್ಟಿದ್ದೆ ಕಾಲಕಾಲಕ್ಕೆ ನೇಮಕಾತಿಗಳು ಜರಗುತ್ತಿದ್ದರೆ ಹುದ್ದೆಗಳು ಖಾಲಿ ಉಳಿಯುವ ಪ್ರಮೆಯವೇ ಬರುತ್ತಿರಲಿಲ್ಲ. ಈ ದಿಶೆಯಲ್ಲಿ ನ್ಯಾಯಲಯದಲ್ಲಿ ಬರುವ ಪ್ರಕರಣಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಪ್ರಸ್ತುತ ಭಾರತದ ಸಂವಿಧಾನದ (೮೧ ತಿದ್ದುಪಡಿ) ಕಾಯ್ದೆ ೨೦೦೦ದನ್ವಯ ಅನುಚ್ಛೇದ ೧೬(೪ಬಿ)ಅನ್ನು ಸೇರಿಸಿ ಈ ಕೆಳಗಿನಂತೆ ರಕ್ಷಣೆ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಸಿ.ಆ.ಸು.ಹಿ.೧೫ ಸ.ಹಿ.ಮ.೨೦೦೦ಬೆಂಗಳೂರು ದಿನಾಂಕ ೧೬-೨-೨೦೦೧ರ ಸುತ್ತೋಲೆ ಪ್ರಕಾರ Nothing in this article shall prevent the state from considering any unfilled vacancies of a year which are reserved for being filled up that year in the accordance with any provisions for reservation maid under clause (4) or clause (4A) as separate class of vacancies to be filled up in any succeeding year or year and such classes of vacancies shall not be considered together with vacancies of the years in the which they are being filled up for determining the ceiling of fifty percent reservation on the total number of the vacancies on that year.

ಈ ತಿದ್ದುಪಡಿಯು ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರು ಪದೊನ್ನತಿ ಹೊಂದಿ ಮುಂದಿನ ಹುದ್ದೆಗಳ ಒಟ್ಟು ಸಂಖ್ಯೆಯ ಅರ್ಧದಷ್ಟನ್ನು ಉಪಯೋಗಿಸಲು ಅನುಕೂಲ ಮಾಡಿಕೊಡಲಾಗಿದೆ. ಇದೇ ರೀತಿಯಲ್ಲಿ ಅನುಷ್ಟಾನಗೊಳ್ಳುವಾಗ ನೇಮಕಾತಿ ವಿಳಂಬ ದೋರಣೆ ಅಲ್ಲದೇ ಸ್ವಾತಂತ್ರ್ಯ ಬಂದ ಸಂದರ್ಭದ ೩-೪ ದಶಕಗಳಲ್ಲಿ ನಿರ್ಧಿಷ್ಟಪಡಿಸಿದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯಾರ್ಥಿಗಳನ್ನು ಸಾಕಷ್ಟು ಸಂಖ್ಯೆಯನ್ನು ನೇಮಕಾತಿ ಮಾಡಿಕೊಳ್ಳದಿದ್ದರಿಂದ ಉದ್ಭವಿಸಿದ ಸಮಸ್ಯೆಯ ಮೇರೆ ಸಂವಿಧಾನಕ್ಕೆ ತಿದ್ದುಪಡಿ ತಂದರು ಅದರಂತೆ ಮೇಲಿನ ತಿದ್ದುಪಡಿಯಂತೆ ಸರ್ಕಾರದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ ಹುದ್ದೆಗಳನ್ನು

ಭರ್ತಿಮಾಡುವುದು ಎಲ್ಲಾ ರಾಜ್ಯ ಸರ್ಕಾರಗಳ ಪ್ರಥಮ ಆದ್ಯತೆಯಾಗಿದೆ. ಸರ್ಕಾರದ ಆದೇಶದಲ್ಲಿ ೪-೬ ತಿಂಗಲೋಳಗಾಗಿ ಪೂರ್ಣಗೊಳಿಸತಕ್ಕದ್ದು ಎಂಬ ಅಂಶವಿದ್ದರು ಸರ್ಕಾರಗಳು ನೆಪ ಮಾತ್ರಕ್ಕೆ ತಂದು ದಶಕಗಳೆ ಕಳೆದವು. ಇಲ್ಲಿಯ ವರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಿಲ್ಲ. ನಂತರ ಸಂಸತ್ತು ಮೀಸಲಾತಿ ಆಧಾರದ ಮೇಲೆ ಬಡ್ತಿಯ ಸಂದರ್ಭದಲ್ಲಿ ತತ್ಪರಿಣಾಮದ ಜೇಷ್ಟತೆಯನ್ನು ನೀಡುವುದಕ್ಕಾಗಿ ಉಪಬಂದ ಕಲ್ಪಿಸುವ ೮೫ನೇ ತಿದ್ದುಪಡಿ ಅನ್ವಯ ಆದಿ ನಿಯಮ ೨೦೦೧ನ್ನು ೧೭-೬-೧೯೯೫ರಿಂದ ಪೂರ್ವ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಈ ತಿದ್ದುಪಡಿ ಮೂಲಭೂತವಾಗಿ ಸಂದಿಗ್ನತೆಯನ್ನು ನಿವಾರಿಸುವುದು ಮತ್ತು ಮೀಸಲಾತಿ ಆದೇಶದಲ್ಲಿ ಒಳಗೊಂಡಿರುವ ಬಡ್ತಿಯಲ್ಲಿ ಮೀಸಲಾತಿ ನೀತಿ ಇದಕ್ಕನುಗುಣವಾಗಿ ಜಾರಿಯಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು ಇತರೆ ವರ್ಗಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಜೇಷ್ಟತೆಯ ಲಭ್ಯವಿರುವಂತೆ ಈ ಹುದ್ದೆಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿದ್ದಾರೆಂದು ಕರ್ನಾಟಕ ಸರ್ಕಾರ ಸೃಷ್ಟಿಸಿದೆ.[೨]

ಬಡ್ತಿ ಮೀಸಲಾತಿ ಸಮಸ್ಯೆ ಹುಟ್ಟಿಕೊಂಡಿದ್ದು ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿಶೇಷವಾಗಿ ಲೋಕೋಪಯೋಗಿ ಹಾಗೂ ನಿರಾವರಿ ಇಲಾಖೆಗಳ ಇಂಜಿನಿಯರಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ಸಂದರ್ಭದಲ್ಲಿ ಸಂವಿಧಾನದ ಅನುಚ್ಛೇದ ೧೬(೪)ರಲ್ಲಿ ರಾಜ್ಯ ಸಿವಿಲ್ ಸರ್ವಿಸೆಸ್‌ನಲ್ಲಿ ಎಸ್.ಸಿ, ಎಸ್.ಟಿ ಅವರಿಗೆ ಮತ್ತು ಒ.ಬಿ.ಸಿ ಅವರಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಅವಕಾಶ ನೀಡಿದೆ. ಅದರಂತೆ ಪ್ರತಿ ರಾಜ್ಯಗಳು ಮೀಸಲಾತಿಗೆ ಸಂಬಂಧಿಸಿದಂತೆ ಆದೇಶಗಳನ್ನು ಹೊರಡಿಸಿವೆ. ಆದರೆ ಸಮಸ್ಯೆ ಎನಂದರೆ ಮೀಸಲಾತಿ ವಿಚಾರದಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ಏಕ ರೂಪ ನೀತಿ ಇಲ್ಲದಿರುವುದು.

ದಲಿತರಿಗೆ ಸಂವಿಧಾನ ಬದ್ದವಾಗಿ ಶೇಕಡ ೧೮ರ ಮೀಸಲಾತಿ ಇದ್ದರು ನೌಕರರಿಗೆ ಬಡ್ತಿಯಲ್ಲಿ ಇವರಿಗೆ ನ್ಯಾಯ ದೊರಕಿಲ್ಲ ಎಂಬ ಕಾರಣದಿಂದ ಇಡಿ ದೇವರಾಜ ಅರಸು ಅವರು ೧೯೭೮ ಏಪ್ರೀಲ್ ೧೧ರಂದು ಆದೇಶ ಹೊರಡಿಸಿ ದಲಿತರಿಗೆ ಬಡ್ತಿಯಲ್ಲಿ ಶೇಕಡ ೧೮% ಮೀಸಲಾತಿ ಒದಗಿಸಿ ಕೊಟ್ಟರು. ಆದರೆ ದೇವರಾಜ ಅರಸರ ನಂತರದಲ್ಲಿ ಇದು ಸಮರ್ಪಕವಾಗಿ ಜಾರಿಯಾಗಲೇ ಇಲ್ಲ. ೧೯೯೨ರಲ್ಲಿ ಎಸ್. ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಸೇವಾ ನಿಯಮಗಳ ಲಕ್ಕೆ ತಿದ್ದುಪಡಿ ಮಾಡಿ ೧೯೭೮ರಿಂದ ಬಡ್ತಿಯಲ್ಲಿ ವಂಚಿತರಾದವರಿಗೆ(ಪರಿಶಿಷ್ಟರು) ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಆದೇಶ ಹೊರಡಿಸಿದರು. ಆದರೆ ಇದು ಮತ್ತೊಂದು ವಿವಾದ ಸೃಷ್ಟಿಸಿತು. ಈ ಆದೇಶಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಲಯದಲ್ಲಿ ಪ್ರಕರಣ ದಾಖಲಾಯಿತು. ನ್ಯಾಯಲಯ ಸರ್ಕಾರದ ಆದೇಶವನ್ನು ಎತ್ತಿ ಹಿಡಿಯಿತು. ೧೯೭೮ರಿಂದ ಖಾಲಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರ ವಿಶೇಷ ಮಾರ್ಗಸೂಚಿಯನ್ನು ನೀಡಿತು. ಆದರೆ ಇತರೆ ವರ್ಗದ ಇಂಜಿನಿಯರಗಳು ಅಂದರೆ ಅವರ ಜೊತೆಯಲ್ಲಿ ಸೇವೆಗೆ

ಸೇರಿದ ಮುಂದುವರೆದ ಜಾತಿಯ ಇಂಜಿನಿಯರುಗಳು ನಾವು ಬಡ್ತಿಯಿಂದ ವಂಚಿತರಾದೆವು ಎಂದು ಚಳುವಳಿಯ ಹಾದಿ ಇಡಿದರು. ಮತ್ತು ಅದನ್ನು ಗಂಬೀರ ವಿಷಯವನ್ನಾಗಿ ಪರಿಗಣಿಸಿ ಅದರ ಬಗ್ಗೆ ಅಪಪ್ರಚಾರ ಮಾಡಿದರು. ಬಡ್ತಿಯಲ್ಲಿ ಶೇಕಡ ೧೮ರ ಮೀಸಲಾತಿ ವಿರುದ್ಧ ಶೇಕಡ ೮೨ರಷ್ಟು ಇರುವ ಇತರ ವರ್ಗಗಳ ಅವರು ಬಡ್ತಿ ಮೀಸಲಾತಿಯನ್ನು ವಿರೋಧಿಸಿದರು. ಇದರ ಜೊತೆಗೆ ೧೯೯೯ರಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ರಾಜಕೀಯ ಪಕ್ಷಗಳು ಅತೃಪ್ತಿ ವ್ಯಕ್ತಪಡಿಸಿದವು. ಹಿಂದೂಳಿದ ವರ್ಗ ಮತ್ತು ಅಲ್ಪಸಂಖ್ಯಾತ ನೌಕರರಿಗೆ ಸೇವಾ ಬಡ್ತಿಯಲ್ಲಿ ಮೀಸಲಾತಿಗೆ ಅವಕಾಶವಿಲ್ಲ ಎಂದು ೧೯೯೨ರ ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪುನೀಡಿತು. ಹಿಗಿದ್ದರು ಮೀಸಲಾತಿ ಮತ್ತು ಬಡ್ತಿ ಮೀಸಲಾತಿ ವಿರುದ್ದ ಮೇಲ್ವರ್ಗದವರ ಅಸಹನೆ ಮತ್ತು ಅಸಮಾನತೆ ಕಡಿಮೆಯಾಗಿಲ್ಲ ಮತ್ತು ಕಡಿಮೆಯಾಗುವ ಲಕ್ಷಣಗಳು ಇಲ್ಲ. ಏಕೆಂದರೆ ಇವರಿಗೆ ಮೀಸಲಾತಿಯ ಉದ್ದೇಶ ಮತ್ತು ಬಡ್ತಿ ಮೀಸಲಾತಿಯ ಉದ್ದೇಶದ ತಿರುಳು ಗೊತ್ತಿಲ್ಲ. ಮತ್ತು ಆಳ ಅರಿವಿನ ಬಗ್ಗೆಯು ಸಹ ಇವರಿಗೆ ಪರಿಜ್ಞಾನವಿಲ್ಲ. ಏಕೆಂದರೆ ೧೯೫೦ರಲ್ಲಿ ಸಂವಿಧಾನ ಜಾರಿಗೆ ಬಂದಾಗ ಅಸ್ಪೃಶ್ಯರಿಗೆ ಸಮಾಜಿಕ ಅಸಮಾನತೆಯನ್ನು ಸರಿಪಡಿಸುವ ಉದ್ದೇಶದಿಂದ ಪರಿಶಿಷ್ಟರಿಗೆ ರಾಜಕೀಯದಲ್ಲಿ ಶೇಕಡ ೧೫ ಮತ್ತು ಶೇಕಡ ೩ರಷ್ಟು ಪರಿಶಿಷ್ಟರಿಗೆ ರಾಜಕೀಯ ಮೀಸಲಾತಿಯನ್ನು ನೀಡಲಾಯಿತು. ಆದರೆ ಬಹುತೇಕ ಮೇಲ್ವರ್ಗಗಳು ಅಸಮಾನತೆ ಭಾಗವಾಗಿ ಬಂದ ಮೀಸಲಾತಿಯನ್ನು ಸಾಮಾಜಿಕ ನ್ಯಾಯವೆಂಬ ಹೆಸರಿನಲ್ಲಿ ನಮಗೂ ಮೀಸಲಾತಿ ಬೇಕೆ ಎಂದು ತಕರಾರು ಎಬ್ಬಿಸಿದವು. ಮತ್ತು ಮೀಸಲಾತಿಯನ್ನು ವಿರೋಧಿಸಿದವು. ಈ ನಿಟ್ಟಿನಲ್ಲಿ ಯಶಸ್ವಿಯಾದರು. ಆಗಾಗಿ ಇಂದು ಮೀಸಲಾತಿ ಪಟ್ಟಿಯಿಂದ ಯಾರು ಹೊರಗೆ ಉಳಿದಿಲ್ಲ. ಇದೇ ನೀತಿಯನ್ನು ಬಡ್ತಿ ಮೀಸಲಾತಿಯಲ್ಲಿ ಪಡೆಯಬಹುದು ಎಂಬ ಉದ್ದೇಶದಿಂದ ಬಡ್ತಿ ಮೀಸಲಾತಿ ವಿಚಾರದಲ್ಲಿ ಪದೆ-ಪದೆ ನ್ಯಾಯಲಯದ ಮೆಟ್ಟಿಲೇರುತ್ತಿರುವುದು ಕಂಡುಬರುತ್ತಿದೆ. ಆದ್ದರಿಂದ ಬಡ್ತಿ ಮೀಸಲಾತಿಯನ್ನು ವಿರೋಧಿಸಲು ಅಹಿಂಸ ಎಂಬ ಸಂಘಟನೆಯನ್ನು ಕಟ್ಟಿಕೊಳ್ಳಲಾಗಿದೆ. (ಅಲ್ಪಸಂಖ್ಯಾತ ಮತ್ತು ಹಿಂದುಳಿದ ಎಂಬ ಸಂಘಟನೆ) ಇಲ್ಲಿ ಮತ್ತೊಂದು ಗಮನಿಸಬೇಕಾದ ಸಂಗತಿ ಎಂದರೆ ಸಂವಿಧಾನ ಜಾರಿಗೆ ಬಂದಾಗಿನಿಂದಲೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಉದ್ಯೋಗದಲ್ಲಿ ಶೇಕಡ ೧೮ರ ಮೀಸಲಾತಿ ಇದೆ ಎಂದು ಭಾವಿಸಿದ್ದು ಮೇಲ್ವರ್ಗದವರ ತಪ್ಪು ಗ್ರಹಿಕೆ ಆಗಿದೆ. ಆದರೆ ಉದ್ಯೋಗದಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಬಂದದ್ದು ೧೯೬೭ರಲ್ಲಿ. ಅಂದರೆ ಸಂವಿಧಾನ ಜಾರಿಗೆ ಬಂದ ೧೭ ವರ್ಷದ ನಂತರ. ಇದನ್ನು ಸಹ ಮೇಲ್ವರ್ಗದವರು ಗಮನಿಸದೆ ಇದ್ದದ್ದು ಮೀಸಲಾತಿ ಮತ್ತು ಬಡ್ತಿ ಮೀಸಲಾತಿ ವಿರೋಧಿಸುವುದಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಮೀಸಲಾತಿಯ ಬಗ್ಗೆ ಪ್ರಜ್ಞಾ ಮತ್ತು ವಿದ್ಯಾವಂತರಲ್ಲಿ ಆಳವಾದ ಅರಿವಿನ ಜ್ಞಾನವಿಲ್ಲದಿರುವುದು ಈ ರೀತಿಯ ವಿರೋಧಬಾಸಕ್ಕೆ ಕಾರಣವಾಗಿದೆ.[೨೯]

ಮೀಸಲಾತಿ ಮತ್ತು ಒಳ ಮೀಸಲಾತಿ

ಸಾಮಾಜಿಕ ನ್ಯಾಯಕ್ಕಾಗಿ ಜನಸಂಖ್ಯೆ ಆಧಾರದ ಮೇಲೆ ಪರಿಶಿಷ್ಟ ಜಾತಿಯಲ್ಲಿ ೧೦೧ ಜಾತಿ ಮತ್ತು ಉಪಜಾತಿಗಳು ಮೀಸಲಾತಿ ಸೌಲಭ್ಯವನ್ನು ಹಂಚಿಕೊಳ್ಳಬೇಕು. ಯಾಕೆಂದರೆ ಮೀಸಲಾತಿಯ ವ್ಯಾಪ್ತಗೆ ಬರುವ ಎಲ್ಲಾ ಜನರಿಗೂ ಆ ಸೌಲಭ್ಯ ಸಿಕ್ಕಿಲ್ಲ ಕೆಲವೆ ಜಾತಿಗಳು ತಮ್ಮ ವರ್ಚಸಿನಿಂದ ಮೀಸಲಾತಿಯನ್ನಿ ಕಬಳಿಸುತ್ತಿವೆ ಎನ್ನುವ ವಾದ ವ್ಯಾಪಕವಾದ ಹಿನ್ನೆಲೆಯಲ್ಲಿ ೨೦೦೫. ಸೆಪ್ಟೆಂಬರ್ ತಿಂಗಳಲ್ಲಿ ಧರ್ಮಸಿಂಗ್ ನೆತೃತ್ವದ ಸರ್ಕಾರವು ನ್ಯಾಯಮೂರ್ತಿ ಎ.ಜೆ ಸದಾಶಿವ ನೆತೃತ್ವದಲ್ಲಿ ಸಮಿತಿ ರಚಿಸಿತು. ಕರ್ನಾಟಕದಲ್ಲಿ ಈವರೆಗು ಮೀಸಲಾತಿ ವರ್ಗೀಕರಣಕ್ಕಾಗಿ ೧೯೭೨ರಲ್ಲಿ ಹಾವನೂರು ಆಯೋಗ, ೧೯೮೩ರಲ್ಲಿ ವೆಂಕಟಸ್ವಾಮಿ ಆಯೋಗ, ೧೯೮೮ರಲ್ಲಿ ಚಿನ್ನಪ್ಪರೆಡ್ಡಿ ಆಯೋಗ, ದ್ವಾರಕನಾಥ ಆಯೋಗ ನಂತರ ಪರಿಶಿಷ್ಟ ಜಾತಿಗಳ ನಡುವೆ ಜನಸಂಖ್ಯೆ ಆಧಾರಿತ ಮೀಸಲಾತಿ ಹಂಚಲು ನೇಮಕವಾದ ಎ.ಜೆ ಸದಾಶಿವ ಆಯೋಗ ೨೦೦೫, ಕೇವಲ ಎರಡು ವರ್ಷ ಸಮೀಕ್ಷಾ ಕಾರ್ಯದ ಮಿತಿಯನ್ನು ಹೊಂದಿತ್ತು. ಆದರೆ ಹಣಕಾಸು ಹಾಗೂ ಇನ್ನಿತರ ಸಮರ್ಪಕ ಸೌಲಭ್ಯ ದೊರೆಯದೆ ೭ ವರ್ಷಗಳ ನಂತರ ಸಾಕಷ್ಟು ವಿಳಂಬವಾಗಿ ೨೦೧೨ರ ಜುನ್ ತಿಂಗಳಲ್ಲಿ ತನ್ನ ಶಿಫಾರಸ್ಸು ವರದಿಯನ್ನು ನೀಡಿದೆ. ಸದರಿ ಆಯೋಗ ಸರ್ಕಾರಕ್ಕೆ ನೀಡುವ ಶಿಫಾರಸ್ಸುಗಳೆನಾದರು ಜಾರಿಗೆಯಾದರೆ ಸಾಮಾಜಿಕ ನ್ಯಾಯದ ಅಡಿಯಲ್ಲಿ ಚಾರಿತ್ರಿಕ ಮೈಲುಗಲ್ಲಾಗಬಹುದು.

ಅಯೋಗವು ಪರಿಶಿಷ್ಟ ಜಾತಿಯಲ್ಲಿನ ಉಪ ಪಂಗಡಗಳನ್ನು ನಾಲ್ಕು ಗುಂಪಾಗಿ ವರ್ಗೀಕರಿಸಿ ಶೇ.೧೫ರ ಮೀಸಲಾತಿಯನ್ನು ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಿದೆ. ಅದರಂತೆ ಶೇ.೩೩.೪ರಷ್ಟಿರುವ ಎಡಗೈ(ಮಾದಿಗ)ಸಮುದಾಯಕ್ಕೆ ಶೇ.೬ರಷ್ಟು, ಶೇ.೩೩.೨ರಷ್ಟು ಇರುವ ಬಲಗೈ(ಹೊಲೆಯ) ಸಮುದಾಯಕ್ಕೆ ಶೇ.೫ರಷ್ಟು, ಶೇ.೨೩.೬೪ರಷ್ಟಿರುವ ಸ್ಪರ್ಶ ಪರಿಶಿಷ್ಟ ಸಮುದಾಯಕ್ಕೆ ಶೇ.೩ರಷ್ಟು ಹಾಗೂ ಇತರೆ ಪರುಶಿಷ್ಟರಿಗೆ ಶೆ.೧ರಷ್ಟನ್ನು ಮೀಸಲಾತಿ ಕಲ್ಪಿಸಿದೆ. ಅಲ್ಲದೆ ರಾಜ್ಯದಲ್ಲಿರುವ ೨೦.೫೪ಲಕ್ಷ ಕುಟುಂಬಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ೯೬ ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಸರ್ವೆ ಮಾಡಲಾಗಿದೆ. ಮತ್ತು ೧.೫೮ ಲಕ್ಷ ಉದ್ಯೋಗಿಗಳನ್ನು ಸಮೀಕ್ಷೆಗೆ ಒಳಪಡಿಸಿದೆ. ಈ ಸಮೀಕ್ಷೆಯ ಅಂಕಿ ಸಂಖ್ಯೆಗಳು ಪರಿಶಿಷ್ಟ ಜಾತಿಯಲ್ಲಿಯೆ ಇರುವ ಕೆಲವರು ವಂಚಿತರಾಗಿರುವ ಬಗೆಗಿನ ಮತ್ತು ಮೀಸಲಾತಿ ಸೌಲಭ್ಯವನ್ನು ಹೆಚ್ಚು ಪಡೆದಿರುವ ದೂರುಗಳಲ್ಲಿ ಹುರುಳಿಲ್ಲದಿರುವುದನ್ನ ಆಯೋಗ ಬಹಿರಂಗಪಡಿಸಿದೆ. ಬಹುಮುಖ್ಯವಾಗಿ ಪರಿಶಿಷ್ಟ ಜಾತಿಯ ಬಲಗೈಗೆ ಮತ್ತು ಎಡಗೈಗೆ ಸೇರಿದ ಸಮುದಾಯಗಳು ಮೀಸಲು ಸೌಲಭ್ಯ ಪಡೆಯುವಲ್ಲಿ ತಾರತಮ್ಯವಾಗಿದ್ದು ಜನಸಂಖ್ಯೆಯಲ್ಲಿ ಹೆಚ್ಚಿರುವ ಎಡಗೈ ಮಾದಿಗ ಸಮುದಾಯ ಪಡೆದಿರುವ ಸೌಲಭ್ಯ ಕಡಿಮೆಯೆಂದು ಆಯೋಗ ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ.

೧೯೭೬ರಲ್ಲಿ ಎಲ್.ಜಿ ಹಾವನೂರು ಆಯೋಗ ನೀಡಿರುವ ವರದಿಯಲ್ಲಿ ಮಾದಿಗ ಸಮುದಾಯಕ್ಕೆ ಶೇ.೮.೫ರಷ್ಟು ಮೀಸಲಾತಿ ನೀಡುವಂತೆ ಶಿಫಾರಸ್ಸು ಮಾಡಿತ್ತು ಹಾಗೂ ಕೆಂದ್ರದ ಹಿಂದಿನ ಪರಿಶಿಷ್ಟ

ಜಾತಿ ಪಂಗಡಗಳ ಆಯೋಗದ ಅಧ್ಯಕ್ಷ ಎಚ್ ಹನುಮಂತಪ್ಪ ನೀಡಿದ ವರದಿಯಲ್ಲಿ ಮಾದಿಗರಿಗೆ ಆದ ಅನ್ಯಾಯವನ್ನು ಬಹಿರಂಗಪಡಿಸಿತ್ತು. ೧೯೯೯ರ ವರದಿ ಪ್ರಕಾರ, ರಾಜಕೀಯ ಮೀಸಲಾತಿಯಲ್ಲಿ ಹೊಲೆಯ ಸಮುದಾಯ ೧೪ ಜನ ಶಾಸಕರನ್ನು ಮತ್ತು ೪ ಜನ ಸಚಿವರನ್ನು ಹೊಂದಿದ್ದಾರೆ. ಇದೇ ಅವಧಿಯಲ್ಲಿ ಮಾದಿಗ ಸಮುದಾಯಕ್ಕೆ ೬ ಜನ ಶಾಸಕರು, ೧ ಸಚಿವರನ್ನು ಕಾಣಬಹುದು. ದಶಕಗಳು ಕಳೆದಂತೆ ಕೆಲವು ಸ್ಪರ್ಶ ಪರಿಶಿಷ್ಟ ಜಾತಿಯ ಸಮುದಾಯಗಳು ರಾಜಕೀಯವಾಗಿ ಬಲಾಢ್ಯವಾಗಿರುವುದನ್ನ ಕಾನಬಹುದು. ಪರಿಶಿಷ್ಟ ಜಾತಿಗೆ ಸೇರಿದ ವಿವಿಧ ಸಮುದಾಯಗಳಿಗೆ ಮೀಸಲು ಸೌಲಭ್ಯಗಳ ಅವುಗಳ ಸಂಖ್ಯೆಗೆ ಅನುಗುಣವಾಗಿ ಸಿಗುವಂತಾಗಲು ಒಳಮೀಸಲಾತಿಯನ್ನು ನಿಗಧಿ ಮಾಡಿ ಆಯೋಗ ಸಲಹೆ ನೀಡಿರುವುದನ್ನು ಇಡೀ ದೇಶಕ್ಕೆ ಮಾದರಿಯಾಗಿದೆ. ಆದರೂ ಈ ಶಿಫಾರಸ್ಸುಗಳನ್ನು ಜಾರಿ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಆದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿ ಒತ್ತಡ ಹೇರಬೇಕಿದೆ. ರಾಜ್ಯ ಸರ್ಕಾರಗಳೆ ಪರಿಶಿಷ್ಟ ಜಾತಿಗಳ ಸಾಮಾಜಿಕ, ಅರ್ಥಿಕ ಅಂಶಗಳನ್ನು ಪರಿಗಣಿಸಿ ಸ್ವಯಂ ನಿರ್ಣಯ ಅಧಿಕಾರದ ಮೆಲೆ ಶಾಸನಬದ್ಧವಾದ ನಿರ್ಣಯ ಕೈಗೊಳ್ಳಲು ಯಾವ ಅಡ್ಡಿ ಇಲ್ಲದ ಪರಿಣಾಮ ಜೆಸ್ಟಿಸ್ ತಿರುಜನಾರ್ಥನಂ ೨೦೧೦ರಲ್ಲಿ ನೀಡಿದ ಶಿಫಾರಸ್ಸುಗಳನ್ನು ತಮಿಳುನಾಡು ಸರ್ಕಾರ ಜಾರಿ ಮಾಡಿದೆ. ಅಲ್ಲದೆ ಹರಿಯಾಣ, ಪಂಜಾಬ್ ಮತ್ತು ಉತ್ತರಪ್ರದೇಶ ಸರ್ಕಾರಗಳು ಅಲ್ಲಿನ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ಕಲ್ಪಿಸಿರುವ ಹಿನ್ನೆಲೆಯಲ್ಲಿ ಒಳ ಮೀಸಲಾತಿಗೆ ವಿರೋಧವಾದ ನ್ಯಾಯಮೂರ್ತಿ ಎ.ಜೆ. ಸದಾಶಿವರಾಯ ಆಯೋಗ ವರ್ಗೀಕರಿಸಿರುವ ಮೂರನೇ ಗುಂಪಿನಲ್ಲಿನ ಸ್ಪರ್ಶ ಪರಿಶಿಷ್ಟ ಜಾತಿಯಲ್ಲಿನ ಭೋವಿ(ಒಡ್ಡರು) ಹಾಗೂ ಲಂಬಾಣಿ(ಬಂಜಾರರು) ಸಮುದಾಯಗಳು ಒಳ ಮೀಸಲಾತಿಗೆ ಪ್ರಬಲವಾಗಿ ವಿರೋಧ ಪಡಿಸುವವರಾಗಿದ್ದಾರೆ. ಆಯೋಗದ ವರದಿ ಪ್ರಕಾರ ಶೇಕಡ ೬೫.೪ ರಷ್ಟಿರುವ ಮಾದಗಿ ಹೊಲೆಯ ಸಮುದಾಯಗಳಿಗೆ ಇರುವ ಸೌಲಭ್ಯಗಳನ್ನು ಕಳೆದುಕೊಳಳುವ ಸಲುವಾಗಿ ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡದಂತೆ ಒತ್ತಾಯ ಹೇರುತ್ತಿದ್ದಾರೆ. ಇವರ ಪ್ರಕಾರ ಸದಾಶಿವ ಆಯೋಗದ ವರದಿಯು ಅವೈಜ್ಞಾನಿಕ, ಅತಾರ್ಕಿಕ ಮತ್ತು ದಲಿತರನ್ನು ವಿಭಜಿಸುವ ನೀತಿಯದ್ದು ಎಂಬ ತರ್ಕವನ್ನು ಮಾಡುತ್ತಿದ್ದಾರೆ. ಅದೇ ವೇಳೆಗೆ ತಮಗಿರುವ ರಾಜಕೀಯ ಬಲದಿಂದ ತಮ್ಮ ಸಮುದಾಯಗಳಿಗೆ ಮೀಸಲಾತಿ ಸವಲತ್ತು ಹೆಚ್ಚಿಸಿಕೊಳ್ಳುವ ಕಸರತ್ತು ಮಾಡುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ ಪ್ರಸ್ತುತ ಬಿ.ಜೆ.ಪಿ ಸರ್ಕಾರದ ಅರವಿಂದ ಲಿಂಬಾವಳಿ, ಸುನೀಲ ವಲ್ಯಾಪುರೆ, ರೇವುನಾಯಕ ಬೆಳಮಗಿ ಎಲ್ಲರೂ ಸದಾಶಿವ ಆಯೋಗದ ವರದಿಯಲ್ಲಿ ಹೇಳಿರುವ ಸ್ಪರ್ಶ ಪರಿಶಿಷ್ಟ ಸಮುದಾಯದವರಾಗಿದ್ದಾರೆ. ದಲಿತ ಉಪಜಾತಿಗಳೆಲ್ಲವೂ ರಾಜಕೀಯ ಹಾಗೂ ಇನ್ನಿತರ ಕಾರಣಗಳಿಗಾಗಿ ವಿಭಜನೆಯಾಗಿ ದಶಕಗಳೇ ಕಳೆದಿವೆ. ದಲಿತರಲ್ಲಿ ಇಂದಿಗೂ ಮದುವೆ, ಸಹಭೋಜನ ವಿಚಾರಕ್ಕೆ ಬಂದಾಗ ಒಳಜಾತಿ, ಪಂಗಡ, ಕುಲ, ಬೆಳ್ಳಿ ಬೆಡಗು ಮುಂತಾದ ಪ್ರಶ್ನೆಗಳು ಉದ್ಭವಿಸುವುದು ಸಹಜ. ಸದ್ಯ ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡದಂತೆ ಬಹಿರಂಗವಾಗಿ ಹಿಂದೆ ಮೈಸೂರಿನ ರಾಜರು ಬಂಜಾರ, ಭೋವಿ, ಕೊರಮ,

ಕೊರಚ ಮುಂತಾದ ಜಾತಿಗಳನ್ನ ಪರಿಶಿಷ್ಟರ ಪಟ್ಟಿಗೆ ಸೇರಿಸಿದ್ದರು. ೧೯೩೫ರಲ್ಲಿ ೫೭ ಪುಜಾತಿಗಳನ್ನು ಹೊಂದಿದ್ದ ಪರಿಶಿಷ್ಟರ ಪಟ್ಟಿ ಪ್ರಸ್ತುತ ೧೦೧ ಜಾತಿಗಳಾಗಿವೆ. ಸಂಖ್ಯೆ ಹೆಚ್ಚಾದಂತೆಲ್ಲ ಮೂಲ ಸಮುದಾಯಗಳು ಅವಕಾಶವಂಚಿತರಾಗುವ ಸಾಧ್ಯತೆಗಳು ಹೆಚ್ಚು.[೩೦]

ಈ ಹಿನ್ನೆಲೆಯಲ್ಲಿ ದಲಿತ ಚಳುವಳಿ ಮುಂದುವರಿಯಬೇಕಾದರೆ ಪರಿಶಿಷ್ಟ ಜಾತಿಯ ಎಡ ಮತ್ತು ಬಲ ಐಕ್ಯಮತವಾಗ ಬೇಕಿತ್ತು. ಈ ಭಿನ್ನತೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಸ್ಪರ್ಶ ಪರಿಶಿಷ್ಟರು ಯಶಸ್ವಿಯಾಗಿದ್ದಾರೆ. ಇದರ ಫಲವಾಗಿ ೨–೩ ದಶಕಗಳಿಂದ ಹೊಲೆಯ ಮಾದಿಗರ ಸವಲತ್ತುಗಳನ್ನು ಕೆಲವು ಸ್ಪರ್ಶ ಪರಿಶಿಷ್ಟರು ತಮ್ಮದಾಗಿಸಿಕೊಂಡಿದ್ದಾರೆ. ಒಳ ಮೀಸಲಾತಿಯಿಂದ ನೆರೆಯ ಆಂಧ್ರ ಪ್ರದೇಶ ೬ ತಿಂಗಳ ತಮಿಳ ನಾಡು ಏಳು ತಿಂಗಳಲ್ಲಿ ಸಮೀಕ್ಷಾ ಕಾರ್ಯಪೂರ್ಣಗೊಳಿಸಿ ನಂತರ ಜಾರಿಗೊಸಿದರೆ ಕರ್ನಾಟಕದಲ್ಲಿ ಏಳು ವರ್ಷಗಳ ವಿಳಂಬವಾದ ನಂತರ ಒಳಮೀಸಲಾತಿ ಜಾರಿಗೊಳಿಸುವಲ್ಲಿ ಹಲವಾರು ಎಡರು–ತೊಡರುಗಳಿವೆ. ಹಾಗಾಗಿ ಇದರಲ್ಲಿ ಎಲ್ಲರ ಒಮ್ಮತಾಭಿಪ್ರಾಯವು ಅಗತ್ಯ.

ಪರಿಶಿಷ್ಟರ ಪಟ್ಟಿಗೆ ಇನ್ನು ಹಲವು ಜಾತಿಗಳನ್ನ ಸೇರ್ಪಡೆಯಾಗುವ ತಯಾರಿಯಲ್ಲಿವೆ. ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶೇ. ೨೨.೭೫ ಮೀಸಲಾತಿ ಪ್ರಮಾಣ ಹೆಚ್ಚುಗೊಳಿಸಿದರೆ ರಾಜ್ಯ ಸರ್ಕಾರ ಇನ್ನು ಶೇ. ೧೮ರ ಪ್ರಮಾಣದಲ್ಲಿಯೇ ಇಟ್ಟಿದೆ. ಈ ಹಿನ್ನಲೆಯಲ್ಲಿ ತಮ್ಮಲ್ಲಿರುವ ಭಿನ್ನತೆಯನ್ನು ಮರೆತು ಹೊಲೆಯ ಮಾದಿಗರು ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುವಂತೆ ಎರಡನೇ ದಲಿತ ಚಳುವಳಿಯನ್ನು ಆರಂಭಿಸಬೇಕಿದೆ. ಸಂವಿಧಾನ ನಿರ್ಮಾಪಕರು ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ಹೋಗಲಾಡಿಸುವ ಸಲುವಾಗಿ ಮೀಸಲಾತಿಯನ್ನು ಜಾರಿಗೆ ತಂದರು. ಮೀಸಲಾತಿಯು ಯಾರನ್ನು ತಲುಪಬೇಕಾಗಿತ್ತೋ? ಅವರನ್ನ ತಲುಪಿದೆಯೋ? ಇಲ್ಲವೆ ಮೀಸಲಾತಿ ಪಡೆದು ಅಸ್ಪ್ರಶ್ಯವೆನಿಸಿದವರು ೭೦ ವರ್ಷಗಳ ಧೀರ್ಘಾವಧಿಯಲ್ಲಿ ಏನನ್ನು ಪಡೆದಿದ್ದಾರೆ ಎಂಬುದೇ ಇವತ್ತಿನ ಪ್ರಶ್ನೆಯಾಗಿದೆ.

ಕೇಂದ್ರದ ಪ್ರಧಾನಮಂತ್ರಿಯ ಕಛೇರಿ ಸಹಾಯಕ ಸಚಿವ ವಿ. ನಾರಾಯಣಸ್ವಾಮಿ ಸರ್ಕಾರದ ಉನ್ನತ ಶ್ರೇಣಿ ಮಟ್ಟದ ಕಾರ್ಯದರ್ಶಿ ಜಂಟಿ ಕಾರ್ಯದರ್ಶಿ ನಿರ್ದೇಶಕರು ಒಟ್ಟು ೧೩೨೪ ಹುದ್ದೆಗಳ ಪೈಕಿ ಕೇವಲ ೩೩ ಸ್ಥಾನಗಳು ಮಾತ್ರ ಪರಿಶಿಷ್ಟ ಜಾತಿಗೆ ಸೇರುದವು ಎಂಬ ಅಘಾತಕಾರಿ ವಿಚಾರ ಹೇಳಿದ್ದಾರೆ. ಅಲ್ಲದೆ ಉನ್ನತ ಶಿಕ್ಷಣ ಸಂಸ್ಥೆಗಳಾದ ಐಐಟಿ ಮತ್ತು ಐಐಎಂ,ಏಮ್ಸ್, ಕೇಂದ್ರೀಯ ವಿ.ವಿ ಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ತಾರತಮ್ಯದಿಂದ ಕಾಣಲಾಗುತ್ತಿದ್ದೆ ಎಂದು ಹೇಳೀದ್ದಾರೆ. ಮೀಸಲಾತಿ ವಿಚಾರದ ಅಸಮಧಾನದ ಹೊಗೆ ನಮ್ಮ ಸಮಾಜದಲ್ಲಿ ಹೇಗೆ ಇರಲಿ ಏನೇ ಇರಲಿ ಘನ ಸರ್ಕಾರಗಳು ಈವರೆಗೂ ದಲಿತರಿಗೆ ಕಲ್ಪಿಸಿರುವ ಉದ್ಯೋಗಗಳೆಷ್ಟು? ಸದ್ಯ ಉನ್ನತ ಶಿಕ್ಷಣ ಹಾಗೂ ವೃತ್ತಿ ಒದಗಿಸುವ ಸರ್ಕಾರ ಅರೆಸರ್ಕಾರಿ ಸಂಸ್ಥೆಗಳಿಗೆ ಹೋಲಿಕೆ ಮಾಡಿದ್ದಲ್ಲಿ ಖಾಸಗಿ ವಲಯದ ಶಿಕ್ಷಣ ಸಂಸ್ಥೆಗಳಿಗೆ ಅಧಿಕವಾಗಿರುವುವಾಗ ಮೀಸಲಾತಿಗೆ

ಮಾನದಂಡವೇನು? ಸರ್ಕಾರಿ ಸಂಸ್ಥೆಗಳೆಲ್ಲವು ಜಾಗತೀಕರಣದ ಕಾಲಘಟ್ಟದಲ್ಲಿ ಖಾಸಗೀಕರಣ ಗೊಳ್ಳುತ್ತಿದ್ದಾಗ ಮೀಸಲಾತಿ ಪದದ ಅರ್ಥ ವಿಸ್ತಾರವಾಗಬೇಕಿದೆ. ಐಟಿ ಬಿಟಿಗಳ ಹತ್ತಿರ ಅಥವಾ ಅಂತಹ ಹಲವು ಸ್ವಾಯತ್ತಾ ಸಂಸ್ಥೆಗಳೂ ದಲಿತರನ್ನು ಹತ್ತಿರಕ್ಕೂ ಸುಳಿಯಲು ಬಿಡುತ್ತಿಲ್ಲ. ಹೀಗಿರುವಾಗ ದಲಿತರು ಖಾಸಗೀಕರಣ ನವಉದಾರೀಕರಣ ಆರಗಿಸಿಕೊಳ್ಳಬೇಕಿದೆ.

ಈಗಾಗಲೇ ರಾಜ್ಯದಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದು ಪರಿಶಿಷ್ಟರ ಸೌಲಭ್ಯ ಪಡೆಯುತಿರುವಾಗ ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಎ. ನಾರಯಾಣ ಸ್ವಾಮಿ ಉಲ್ಲೇಖ ಮಾಡಿರುವುದು ಆತಂಕಕಾರಿ ವಿಚಾರ. ಕರ್ನಾಟಕದಲ್ಲಿ ೧೪೬೨೪ಕ್ಕೂ ಹೆಚ್ಚು ಬ್ಯಾಕ್ ಲಾಗ್ ಹುದ್ದೆಗಳು ನೇಮಕವಾಗುವ ನಿಟ್ಟಿನಲ್ಲಿ ಸದಾಶಿವ ಆಯೋಗ ವರದಿ ಒಳಮೀಸಲಾತಿ ಆಧಾರದ ಮೇಲೆ ಭರ್ತಿಯಾದಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಪದಗಳಿಗೆ ಅರ್ಥ ಕಲ್ಪಿಸಿದಂತೆಯೆ ಸರಿ. ಅಂತೆಯೆ ಮೀಸಲಾತಿ ಜಾರಿಯಲ್ಲಿದಾಗ ಒಳಮೀಸಲಾತಿ ಅನಿವಾರ್ಯ. ಈ ನಿಟ್ಟಿನಲ್ಲಿ ರಾಜ್ಯದಾದ್ಯಂತ ಹಲವು ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ ಮಾದಿಗ ಮೀಸಲಾತಿ ಹೋರಾಟ ಸಮಿತಿ, ಮಾದಿಗ ದಂಡೋರ, ಆದಿಜಾಂಬವ ಮಹಾಸಭ ಇನ್ನಿತರ ಸಂಘಟನೆಗಳ ಬೇಡಿಕೆಯನ್ನು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ನೋಡಬೇಕಿದೆ.

ಮೀಸಲಾತಿ ಚರ್ಚೆ ದೇಶದಲ್ಲಿ ಹೊಸದೇನು ಅಲ್ಲ ಸ್ವತಂತ್ರ್ಯ ಪೂರ್ವದಿಂದಲೂ ಈ ಕುರಿತಂತೆ ಹಲವು ಬಗೆಯಲ್ಲಿ ಚರ್ಚೆ, ವಿಚಾರ, ವಾದ-ವಿವಾದಗಳು, ಚಿಂತನ-ಮಂಥನಗಳು ನಡೆದುಕೊಂಡೆ ಬಂದಿವೆ. ಆದರೆ ಮೀಸಲಾತಿ ನೀತಿಯನ್ನು ರಾಜಕೀಯ ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸುತ್ತಿದ್ದು. ಇದರಿಂದ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ಉಂಟಾಗುತ್ತಿದೆ ಎಂಬ ಆಕ್ಷೇಪಗಳು ಒಂದೆಡೆ ಕೇಳಿ ಬರುತ್ತಿವೆ. ಮತ್ತೊಂದು ಕಡೆ ಸ್ವತಂತ್ರ ಭಾರತದ ೭೦ ವರ್ಷಗಳಲ್ಲಿ ಹಲವು ಜಾತಿ ಸಮುದಾಯಗಳು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮತ್ತು ಉದ್ಯೋಗದಲ್ಲಿ ಹಿಂದುಳಿದ್ದಿದ್ದು ಅವುಗಳಿಗೆ ಮೀಸಲಾತಿ ಕಲ್ಪಿಸುವುದರ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಹಲವಾರು ಸಮುದಾಯಗಳು ಬೇರೆ ಬೇರೆ ರೀತಿಯಲ್ಲಿ ಒತ್ತಾಯಿಸುತ್ತ ಬರಲಾಗಿದೆ. ಆದರೆ ಮೀಸಲಾತಿಯ ಉದ್ದೇಶವೆ ಬೇಯಾಗಿತ್ತು. ಸಾಮಾಜಿಕವಾಗಿ ಶೋಷಣೆಗೆ ಒಳಗಾದ ಜನಾಂಗಕ್ಕೆ ಮೀಸಲಾತಿ ಒಂದು ಸಾಧನವಾಗಬಹುದು ಮತ್ತು ಆ ಮೂಲಕ ಶೋಷಣೆಗೆ ಒಳಗಾದ ಅಸ್ಪೃಶ್ಯರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸಾಧ್ಯವಾಗುತ್ತದೆ ಎಂದು ನಂಬಲಾಗಿತ್ತು. ಆದರೆ ಕೆಲವೆ ವರ್ಷಗಳ ನಂತರ ಮೀಸಲಾತಿಯ ಸಾಧಕ ಬಾಧಕಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಭಾರತದ ಎಲ್ಲಾ ರಾಜ್ಯಗಳಲ್ಲಿ ಏಕ ರೂಪದಲ್ಲಿ ಜಾರಿಯಿಲ್ಲ ಮತ್ತು ಕೆಲವು ರಾಜ್ಯಗಳಲ್ಲಿ ಮೀಸಲಾತಿಯನ್ನೆ ಜಾರಿಗೆ ತರುವಲ್ಲಿ ಹಿಂದೇಟು ಹಾಕಿದವು. ಅದರ ಪರಿಣಾಮವಾಗಿ ಮೀಸಲಾತಿ ಜಾರಿಗೆಯಾಗಿ ೭೦ ವರ್ಷಗಳಾದರು ಕೇದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಇನ್ನೂ ಬ್ಯಾಕ್‌ಲಾಗ್ ಹುದ್ದೆಗಳು ಹಾಗೆ

ಉಳಿದಿವೆ. ಇದನ್ನು ಮನಗಂಡ ಕೆಲವು ರಾಜ್ಯಗಳು ಸರಿದೂಗಿಸುವ ಪ್ರಯತ್ನ ಮಾಡಿದವು. ಆದರೆ ನಿರ್ಧಿಷ್ಟ ಪ್ರಮಾಣದಲ್ಲಿ ಸದ್ಯಾವಾಗಲೇ ಇಲ್ಲ. ಮತ್ತು ಮೀಸಲಾತಿ ಯಾರಿಗೆ ಜಾರಿಗೆಗೊಳಿಸಲಾಗಿತ್ತು ಅವರಿಗೆ ಅದು ತಲುಪಲಿಲ್ಲ ಎಂಬ ಅಭಿಪ್ರಾಯವು ವ್ಯಕ್ತವಾಯಿತು. ಹಾಗಾಗಿ ಕೆಲವು ರಾಜ್ಯಗಳು ಮೀಸಲಾತಿಯಲ್ಲಿಯೇ ಒಳಮೀಸಲಾತಿಯನ್ನು ಜಾರಿಗೊಳಿಸಲು ಚಿಂತನೆ ಮಾಡಿದವು. ಅಂತಹ ಪ್ರಮುಖ ರಾಜ್ಯಗಳೆಂದರೆ ಪಂಜಾಬ ಮತ್ತು ಹರಿಯಾಣ ೧೯೭೮ರಲ್ಲಿಯೇ ಒಳಮೀಸಲಾತಿಯನ್ನು ಜಾರಿಗೆಗೊಳಿಸಿದವು. ನಂತರದಲ್ಲಿ ಆಂದ್ರಪ್ರದೇಶದಲ್ಲಿ ಒಳಮೀಸಲಾತಿಯನ್ನು ಜಾರಿಗೆಗೊಳಿಸಲು ಸರ್ಕಾರ ತಿರ್ಮಾನಿಸಿತು ಆದರೆ ರಾಜ್ಯ ಉಚ್ಚ ನ್ಯಾಯಲಯವೂ ಅದನ್ನು ಮಾನ್ಯ ಮಾಡಲಿಲ್ಲ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಒಳಮೀಸಲಾತಿಗಾಗಿ ಹೋರಾಟ ವಾದ ವಿವಾದಗಳ ಮಧ್ಯೆ ೨೦೦೬ರಲ್ಲಿ ಒಳಮೀಸಲಾತಿಗೆ ಸಂಬಂಧಿಸಿದಂತೆ ಆಯೋಗವನ್ನು ನೇಮಿಸಲಾಯಿತು. ಅದಕ್ಕೆ ಹಲವಾರು ಕಾರಣಗಳನ್ನು ಮತ್ತು ಅದರ ಪರಿಣಾಮಗಳನ್ನು ವಿಶ್ಲೇಷಿಸಿ ತಿರ್ಮಾನಕ್ಕೆ ಬರಲಾಯಿತು. ಈಗ ಇರುವ ಮೀಸಲಾತಿ ಅಸ್ಪ್ರಶ್ಯ ಜಾತಿಗಳ ನಡುವೆ ಸಮಾನವಾಗಿ ಹಂಚಿಕೆಯಾಗಿಲ್ಲ ಎಂಬ ಅತೃಪ್ತಿಯ ಫಲವಾಗಿ ಹುಟ್ಟಿಕೊಂಡ ಒಳಮೀಸಲಾತಿ ಹೋರಾಟಕ್ಕೆ ಸುರ್ದೀವಾದ ಎರಡು ದಶಗಳ ಇತಿಹಾಸವಿದೆ ಜನಸಂಖ್ಯೆ ಆದಾರದಲ್ಲಿ ಮೀಸಲಾತಿ ಜಾರಿಗೆ ಬಂದಾಗೆ ಜನಸಂಖ್ಯೆಯ ಆಧಾರದಲ್ಲಿ ಒಳಮೀಸಲಾತಿ ಜಾರಿಗೆ ಬರಬೇಕೆಂಬ ಹೋರಾಟ ನಡೆಯುತ್ತಲೇ ಬಂದಿದೆ. ಜನಸಂಖ್ಯೆ ಆದಾರದ ಮೇಲೆ ಮೀಸಲಾತಿ ಜಾರಿಗೆ ಬಂದಾಗ ಮಾತ್ರ ಪ್ರಜಾಪ್ರಭುತ್ವದ ಆಶಯವಾದ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಬಂದಾಗ ಜಾತಿ ವಿನಾಶವಾಗುತ್ತದೆ. ಈ ನಿಟ್ಟಿನಲ್ಲಿ ಮಾದಿಗ ದಂಡೋರ, ದಲಿತಪರ ಸಂಘಟನೆಗಳ ಸುಧೀರ್ಘ ಹೋರಾಟಕ್ಕೆ ಮಣಿದು ಸರ್ಕಾರ ಜಸ್ಟೀಸ್ ನ್ಯಾಯಮೂರ್ತಿ ಸದಾಶಿವ ಅವರ ಅಧ್ಯಕ್ಷತೆಲ್ಲಿ ಆಯೋಗವನ್ನು ರಚಿಸಿ ವರದಿ ನೀಡುವಂತೆ ಸೂಚಿಸಿತು.

ನ್ಯಾಯಮೂರ್ತಿ ಸದಾಶಿವ ಆಯೋಗ ಸತತ ೮ ವರ್ಷಗಳ ಕಾಲ ಅಧ್ಯಯನ ನಡೆಸಿ ಪರಿಶಿಷ್ಟ ಜಾತಿಯಲ್ಲಿರುವ ೧೦೧ ಜಾತಿಗಳನ್ನು ವಿಂಗಡಿಸಿ ಮಾದಿಗ ಹಾಗೂ ಸಹ ಸಂಬಂಧಿ ೫೩, ಹೊಲೆಯ ಸಹಸಂಧಿ ೨೮, ಅಲೆಮಾರಿ ಅಸ್ಪ್ರಶ್ಯ ಹಾಗೂ ಇತರೆ ೧೬ ಜಾತಿಗಳು ಮತ್ತು ಮತ್ತು ೧೯೭೬ರಲ್ಲಿ ಉಪಜಾತಿಗಳನ್ನು ಹೊರತುಪಡಿಸಿ ೪ ಸ್ಪ್ರಶ್ಯ ಜಾತಿಗಳನ್ನು ಸೇರಿಸಿದ್ದಾರೆ. ಇದರ ಅನ್ವಯ ಪರಿಶಿಷ್ಟ ಜಾತಿಗೆ ನಿಗದಿಯಾಗಿರುವ ಶೇ.೧೫ ಮೀಸಲಾತಿ ಪೈಕಿ ಶೇ.೩೩.೪ ಜನಸಂಖ್ಯೆ ಇರುವ ಮಾದಿಗ ಮತ್ತು ಸಹಸಂಬಂಧಿ ಜಾತಿಗೆ ಶೇ.೬ ಮೀಸಲಾತಿ, ಶೇ.೩೨ ರಷ್ಟಿರುವ ಹೊಲೆಯ ಸಹಸಂಧಿ ಜಾತಿಗಳಿಗೆ ಶೇ.೫, ಶೇ.೧೦.೯೪ರಷ್ಟಿರುವ ಅಲೆಮಾರಿ, ಅಸ್ಪ್ರಶ್ಯ ಇತರೆ ಜಾತಿಗಳಿಗೆ ಶೇ.೧ ಹಾಗೂ ಶೇ.೨೩.೬೪ರಷ್ಟಿರುವ ಸ್ಪ್ರಶ್ಯ ಜಾತಿಗಳಿಗೆ ಶೇ.೩ರಷ್ಟು ಮೀಸಲಾತಿ ಕಲ್ಪಿಸಿದೆ. ಸಾಮಾಜಿಕ ಹಾಗೂ ಆರ್ಥಿಕವಾಗಿ ತಳಮಟ್ಟದಲ್ಲಿರುವ ಶೇ.೧೫ರಷ್ಟು ಮೀಸಲಾತಿ ಪಡೆಯಲೂ ಹೊಲೆಯರ ಜೊತೆಗೆ ಸ್ಪರ್ಶ ಜಾತಿಗಳಾದ ಲಂಬಾಣಿ, ಬೋವಿ, ಕೊರಮ, ಕೊರಚ ಮೊದಲಾದ ಜಾತಿಗಳೊಂದಿಗೆ ಪೈಪೋಟಿ ನಡೆಸುತ್ತಿದೆ. ಬಹುಸಂಖ್ಯಾತ ಮಾದಿಗ ಸಮುದಾಯಕ್ಕೆ

ಶೇ.೧೫ರ ಮೀಸಲಾತಿಯಲ್ಲಿ ಸಧ್ಯ ಸಿಗುತ್ತಿರುವುದು ಶೇ.೨ರಷ್ಟು ಮಾತ್ರ. ಸದಾಶಿವ ಆಯೋಗ ವರದಿ ಸಲ್ಲಿಸಿ ೬ ವರ್ಷಗಳಾಗಿವೆ, ಆದರೆ ಮೀಸಲಾತಿ ವಿರೋಧಿಸುವ ಮೇಲ್ವರ್ಗದವರು ಹಾಗೂ ಒಳ ಮೀಸಲಾತಿಗೆ ವಿರೋಧ ವ್ಯಕ್ತಪಡಿಸುತ್ತಿರುವ ಪರಿಶಿಷ್ಟ ಜಾತಿಯಲ್ಲಿನ ಕೆಲವರಿಂದ ಸದಾಶಿವ ಆಯೋಗ ವರದಿ ಜಾರಿಯಾಗಲೂ ಅಡ್ಡಿ ಉಂಟಾಗಿದೆ. ಸದಾಶಿವ ಆಯೋಗದ ವರದಿಯಿಂದ ಅಸ್ಪೃಶ್ಯ ಸಮುದಾಯಕ್ಕೆ ಅನುಕೂಲವಾಗುತ್ತದೆ ಎಂಬ ಪೂರ್ವಗ್ರಹದಿಂದ ಒಳಮೀಸಲಾತಿಯ ಬಗ್ಗೆ ಸ್ಪಷ್ಟತೆ ಇಲ್ಲದ ಮತ್ತು ಅದರ ಬಗ್ಗೆ ಗಂಧ ಗಾಳಿಗೊತ್ತಿಲ್ಲದ ರಾಜಕೀಯ ನಾಯಕರು ತಮ್ಮ ರಾಜಕೀಯ ಹಿತಾಸಕ್ತಿ ಸಾಧಿಸಲು ವರದಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಒಂದೆಡೆ ಮೀಸಲಾತಿ ವಿರೋಧಿಸುವ ಮೇಲ್ವರ್ಗ, ಇನ್ನೊಂದೆಡೆ ಒಳಮೀಸಲಾತಿ ವಿರೋಧಿಸುವ ಪರಿಶಿಷ್ಟ ಜಾತಿ ಕೆಲವರು ಮತ್ತೊಂದೆಡೆ ಒಳಮೀಸಲಾತಿ ಜಾರಿಯಾದರೆ ಸ್ಪರ್ಶ ಮತ್ತು ಅಸ್ಪರ್ಶರ ನಡುವೆ ಒಡಕು ಉಂಟಾಗುತ್ತದೆ ಎಂಬ ಕಾರಣದಿಂದ ಸಾಹಿತಿಗಳು ಹಾಗೂ ಬುದ್ಧಿಜೀವಿಗಳು ಮೌನವಹಿಸಿದ್ದಾರೆ. ದೇಶದ ಕಟ್ಟಕಡೆಯ ವ್ಯಕ್ತಿಗೂ ಸಾಮಜಿಕ ನ್ಯಾಯ ಒದಗಿಸಬೇಕು ಎಂಬುದು ಪ್ರಜಾಪ್ರಭುತ್ವದ ಆಶಯ. ಸಾಮಾಜಿಕ ನ್ಯಾಯದ ಮೂಲ ಕಲ್ಪನೆಯೇ ಮೀಸಲಾತಿ. ಮೀಸಲಾತಿ ಜಾರಿಗೆಯಲ್ಲಿದ್ದರು ಶೋಷಿತ ವರ್ಗದಲ್ಲಿ ಬಲಷ್ಠರಾದವರು ಮಾತ್ರ ಹೆಚ್ಚಿನ ಸೌಲಭ್ಯ ಪಡೆದು ಸ್ಪರ್ಶ ಪರಿಶಿಷ್ಟ ಜಾತಿಯವರಿಂದ ಅಸ್ಪೃಶ್ಯ ಪರಿಶಿಷ್ಟ ಜಾತಿಯವರು ವಂಚಿತರಾದಂತಾಗಿದೆ. ಸದಾಶಿವ ಆಯೋಗದ ವದರಿ ಜಾರಿಯಾದರೆ ಪರಿಶಿಷ್ಟರಲ್ಲಿರುವ ೧೦೧ ಜಾತಿಗಳ ಪೈಕಿ ಧ್ವನಿಯೇ ಇಲ್ಲದವರಿಗೆ ಒಳಮೀಸಲಾತಿ ನೀಡಿ ಅವರಿಗೆ ಬಲ ತುಂಬಬಹುದು. ರಾಜಕೀಯ ಪಕ್ಷಗಳು ಪರಿಶಿಷ್ಟರಲ್ಲಿ ಸ್ಪರ್ಶ ಮತ್ತು ಅಸ್ಪೃಶ್ಯವೆಂದು ವರ್ಗೀಕರಿಸಿವೆ. ಈ ಹಿಂದೆ ರಾಜಕೀಯ ಪಕ್ಷವೊಂದು ಪರಿಶಿಷ್ಟರ ಶೇ.೧೦೦ರಷ್ಟು ಜನಸಂಖ್ಯೆಯಲ್ಲಿ ಶೆ.೬೫ರಷ್ಟು ಇರುವ ಹೊಲೆ-ಮಾದಿಗ ಸಮುದಾಯಕ್ಕೆ ಮೀಸಲು ಕ್ಷೇತ್ರದಲ್ಲಿ ಟಿಕೇಟ್ ನೀಡದೆ ಸ್ಪರ್ಶ ಜಾತಿಗೆ ನೀಡಿತ್ತು. ಹೀಗಾಗಿ ಹೆಚ್ಚು ಜನಸಂಖ್ಯೆ ಇದ್ದರು ಹೊಲೆ-ಮಾದಿಗರು ಬೆರಳೆಣಿಕೆಯಷ್ಟು ಶಾಸಕರಾದರು. ಈ ಮೂಲಕ ಅಂಬೇಡ್ಕರ್ ಮಾರ್ಗವನ್ನು ಬುಡಮೇಲು ಮಾಡುವ ಕೆಲಸಕ್ಕೆ ಕೈ ಹಾಕಿತು. ಸದಾಶಿವ ಆಯೋಗ ವರದಿ ಸಲ್ಲಿಸಿದಾಗ ಅವೈಜ್ಞಾನಿಕವಾದುದು, ಪರಿಶಿಷ್ಟರಲ್ಲಿ ತಾರತಮ್ಯ ಸೃಷ್ಠಿಸುತ್ತದೆ ಎಂದೆಲ್ಲ ಮಾತುಗಳು ಕೇಳಿ ಬಂದವು. ಅಸಲಿಗೆ ಒಳಮೀಸಲಾತಿ ವಿರೋಧಿವವರು ಮತ್ತು ಅವೈಜ್ಞಾನಿಕವಾದುದ್ದು ಎನ್ನುವವರು ಪರಿಶಿಷ್ಟ ಜಾತಿಯ ಮೀಸಲಾತಿ ಪಟ್ಟಿಗೆ ಬಂದುದ್ದೇ ಅವೈಜ್ಞಾನಿಕವಾದುದ್ದು. ಹಾಗಾಗಿ ವೈಜ್ಞಾನಿಕ ನೆಲೆಗಟ್ಟಿನ ಮೆಲೆ ರಚನೆಯಾದ ಸದಾಶಿವ ಆಯೋಗದ ವರದಿ ಮತ್ತು ಜಾತಿ ಜನಗಣತಿ ವರದಿ ಮತ್ತು ಸರ್ಕಾರದ ಜನಗಣತಿ ವರದಿ ಆಧರಿಸಿ ಒಳಮೀಸಲಾತಿಯನ್ನು ಜಾರಿಗೊಳಿಸುವ ಅಗತ್ಯತೆ ಸರ್ಕಾರಕ್ಕಿದೆ ಎಂಬುದು ಮನವರಿಕೆ ಮಾಡಿಕೊಡುವಲ್ಲಿ ಎಡಗೈ ಮತ್ತು ಬಲಗೈಗಳು ವಿಫಲವಾಗಿರುವುದರಿಂದ ಕೆಲವೆ ಸ್ಪರ್ಶ ಜಾತಿಗಳು ಮೇಲುಗೈ ಸಾಧಿಸುತ್ತಿವೆ. ಹೀಗಾಗಿ ಪರಿಶಿಷ್ಟರಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆಯಾಗುತ್ತಿಲ್ಲ ಎಂಬುದು ಸಹ ಗಮನರ್ಹ ಸಂಗತಿ. ಒಳಮೀಸಲಾತಿ ಹೋರಾಟವನ್ನು ಪರಿಶಿಷ್ಟ ಪಂಗಡಗಳ ಜಾತಿ ಜಗಳವೆಂದು ನೋಡದೆ ಮಾನವಿಯ ನೆಲೆಗಟ್ಟಿನ ಮೇಲೆ ನೋಡಬೇಕಾಗಿದೆ.

ಸದಾಶಿವ ಆಯೋಗವು ಪರಿಶಿಷ್ಟ ಜಾತಿಯಲ್ಲಿರುವ ಎಲ್ಲ ಸಮುದಾಯಗಳ ಬಗ್ಗೆ ತಳಸ್ಪರ್ಶಿ ಅಧ್ಯಯನ ನಡೆಸಿ ಅಸಮಾನತೆಯ ವಾಸ್ತವ ಚಿತ್ರಣವನ್ನು ಸರ್ಕಾರದ ಮುಂದೆ ಇಟ್ಟಿದೆ. ಇದರ ಜೊತೆಗೆ ಒಳಮೀಸಲಾತಿಯ ಶಿಪಾರಸ್ಸು ಮಾಡಿರುವುದು ಸಾಮಾಜಿಕ ನ್ಯಾಯದ ಭಾಗವೇ ಸರಿ. ಹಿಂದೆ ಮಂಡಲ ವರದಿಗೆ ಸಂಬಧಪಟ್ಟ ಹೋರಾಟದಲ್ಲಿ ನೇರವಾದ ಲಾಭ ದಲಿತರಿಗೆ ಆಗದಿದ್ದರು ಆ ಹೋರಾಟಕ್ಕೆ ದಲಿತರು ನೈತಿಕ ನೆಲೆಯಲ್ಲಿ ಧ್ವನಿಯಾದರು. ಆದರೆ ಈಗ ಒಳಮೀಸಲಾತಿ ಹೋರಾಟದಲ್ಲಿ ಹಿಂದುಳಿದ ವರ್ಗದವರು ಪ್ರಜ್ಞಾವಂತರು ಅದ್ಯಾಕೋ ಧ್ವನಿಯಾಗುತ್ತಿಲ್ಲ. ಒಳಮೀಸಲಾತಿಗೆ ಅಡ್ಡಗಾಲಾಕುವುದು ಸಾಮಾಜಿಕ ನ್ಯಾಯವನ್ನು ಅಪಮಾನಗೊಳಿಸಿದಂತೆ. ಈ ಹಿಂದೆ ಸ್ಪರ್ಶ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿದಾಗ ಅವರನ್ನ ಅಪ್ಪಿಕೊಂಡಿದ್ದು ಇತಿಹಾಸ. ಆಗ ಪರಿಶಿಷ್ಟ ಜಾತಿಗೆ ಸ್ಪರ್ಶರನ್ನು ಸೇರಿಸಿದಾಗ ಅಸ್ಪೃಶ್ಯ ಸಮುದಾಯದವರು ವಿರೋಧಿಸಿದ್ದರೆ ಏನಾಗುತ್ತಿತ್ತು ಎಂಬುದನ್ನ ಅರ್ಥಮಾಡಿಕೊಳ್ಳಬೇಕೆಂಬುದು ಒಳಮೀಸಲಾತಿ ಪರ ಹೋರಾಟಗಾರರ ಕಳಕಳಿಯ ಮನವಿಯಾಗಿದೆ. ಹಾಗಾಗಿ ಪರ ಮತ್ತು ವಿರೋಧ ಎಂದು ಭಾವಿಸದೆ ಸರ್ಕಾರ ಮೀಸಲಾತಿಯ ಉದ್ದೇಶವನ್ನು ಗಮನಿಸಿ ಮತ್ತು ಇತರ ರಾಜ್ಯಗಳಲ್ಲಿ ಇರುವಂತೆ ಇಲ್ಲಿಯೂ ಜಾರಿಗೊಳಿಸಬೇಕು. ಜಾರಿಗೊಳಿಸಿದರೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿದಂತೆ ಆಗುತ್ತದೆ.

ಪ್ರಜಾಪ್ರಭುತ್ವ ಎನ್ನುವುದು ೧೩೦ ಕೋಟಿ ಭಾರತೀಯರಿಗೆ ಸಂಬಂಧಿಸಿದ್ದು. ಇದು ಕೇವಲ ಆರ್ಥಿಕ ಸ್ಥಿತಿಗತಿಯ ಸುತ್ತ ತಿರುಗುತ್ತಿರುವ ತಲಾದಾಯವನ್ನು ತೋರಿಸಿ ಹೆಮ್ಮೆಪಡುವ ಸಂಗತಿಯಲ್ಲ. ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನದ ಸಾದನೆಯನ್ನು ತೋರಿಸಿ ವಿಶ್ವದ ಮುಂದೆ ಮಂಡಿಸಿ ಹುಸಿ ಹೆಮ್ಮೆ ಪಡುವ ವಿಷಯವು ಅಲ್ಲ. ಇವೆಲ್ಲವೂ ಮುಖ್ಯವಾದರೂ ಇವುಗಳಾಚೆಗೆ ಮನುಷ್ಯ ಸಂಬಂಧಗಳಿವೆ. ಮನುಷ್ಯ ಪ್ರೀತಿಯಿದೆ. ಮೌಲ್ಯಗಳಿವೆ. ಸಾಮಾನ್ಯ ವ್ಯಕ್ತಿ ಧೈರ್ಯದಿಂದ ಬದುಕುವ ನೆಮ್ಮದಿ ಜೀವನ ಬೇಕಿದೆ. ಯಾವುದು ಸರಿ ಯಾವುದು ತಪ್ಪು ಎನ್ನುವುದು ಚರ್ಚೆ ಮತ್ತು ವಿಮರ್ಶೆ ಮೂಲಕ ಪರಿಹಾರ ಕಂಡುಕೊಳ್ಳುವುದು ಪ್ರಜಾಪ್ರಭುತ್ವದ ಲಕ್ಷಣವಾಗುತ್ತದೆ. ಆದರೆ ವಾಸ್ತವದ ಭ್ರಮೆಗಳು ಜನರನ್ನು ಬೇರೆಡೆಗೆ ಕೊಂಡೊಯ್ಯುತ್ತವೆ.[೫] ಹೀಗಾಗಿ ಪ್ರಜಾಪ್ರಭುತ್ವ ಎನ್ನುವುದು ತಳಮಟ್ಟದಿಂದ ಅರ್ಥೈಸಲ್ಪಡಬೇಕು. ಹೊರತು ಮೇಲ್ಮಟ್ಟದಿಂದ ಅಲ್ಲ. ಇದರ ಭಾಗವಾಗಿಯೇ ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆ ಮತ್ತು ಹೊರಗೊಳ್ಳುವಿಕೆ ಪರಿಕಲ್ಪನೆಗಳು ಮುಂಚೂಣಿಗೆ ಬಂದವು. ಆದರೂ ಸಹ ಪ್ರಜಾಪ್ರಭುತ್ವ ಪೂರ್ಣ ಪ್ರಮಾಣದಲ್ಲಿ ಅಥವಾ ಅರ್ಥ ವಿವರಣೆ ನೀಡುವುದರಲ್ಲಿ ಇನ್ನು ಸಾಧ್ಯವಾಗಿಲ್ಲ.

ಒಟ್ಟಿನಲ್ಲಿ ನಾವಿಂದು ಅರ್ಥಮಾಡಿಕೊಳ್ಳಬೇಕಾದುದ್ದು. ಎಲ್ಲರನ್ನು ಒಳಗೊಳ್ಳದ ಆಡಳಿತನೀತಿ ಪ್ರಜಾಪ್ರಭುತ್ವವಾಗಲಾರದು. ಮೀಸಲಾತಿ ಸಮಾಜವಾದಿ ನೆಲೆ, ಆಲೋಚನೆ ಅಷ್ಟೇ ಅಲ್ಲ ಪ್ರಜಾಪ್ರಭುತ್ವದ ಅರ್ಥ ಪರಿಪೂರ್ಣತೆಗೆ ಇದು ಅನಿವಾರ್ಯ. ಸಮಾಜದ ಎಲ್ಲರನ್ನು ಒಳಗೊಳ್ಳದ ಆಡಳಿತ

ಪ್ರಜಾಪ್ರಭುತ್ವವಾಗಲು ಹೇಗೆ ಸಾಧ್ಯ. ಇದೇ ವಾದ ಉತ್ಪಾದನ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ದಲಿತರನ್ನು ಮಹಿಳೆಯರನ್ನು ಧಾರ್ಮಿಕ ಅಲ್ಪಸಂಖ್ಯಾತರನ್ನು ಹೊರಗಿಟ್ಟು ದೇಶಕಟ್ಟಲು ಸಾಧ್ಯವಿದೆಯೆ. ಪ್ರತಿಭೆ ಜ್ಞಾನ, ಹಲವು ಹತ್ತು ನೆಲೆಗಳಿಂದ ಮೂಡಿಬರುತ್ತದೆ. ಅದನ್ನು ಅಳೆಯುವ ಅಳತೆಗೋಲು ಅಂಕಪಟ್ಟಿಯಾಗಲಾರದು, ಕಾಡು ಕುರಬ ಜೇನುಕುರುಬ, ಬೆಟ್ಟಕುರುಬ, ಇರುಳಿಗರನ್ನೂ ಹೊರಗಿಟ್ಟು ಭಾರತದ ಅರಣ್ಯ ನೀತಿ ರೂಪಿಸುತ್ತೇವೆ. ರೈತರೇ ಇಲ್ಲದ ಬೆಳೆ ಬೆಳೆಯಲೂ ಬಂಡವಾಳಗಾರರು ಮುಂದಾಗಿದ್ದಾರೆ. ಹಸುಗಳಿಲ್ಲದೆ ಹಾಲು ಉತ್ಪಾದಿಸಲು ಹವಣಿಸುತ್ತಿದ್ದಾರೆ. ಅದೇರೀತಿಯಾಗಿ ಕರಾವಳಿಯ ಬೆಸ್ತರಿಲ್ಲದೆ ಕರಾವಳಿ ಯೋಜನೆ ರೂಪಿಸಲಾಗುತ್ತಿದೆ. ನೂರಾರು ಕೋಟಿ ಖರ್ಚು ಮಾಡಿ ಉಪಗ್ರಹ ಉಡಾವಣೆ ಮಾಡುತ್ತೇವೆ. ಅವು ಭೂಮಿ ಮೇಲೆ ಮತ್ತು ಸಾಗರದ ಜೀವಿಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತೇವೆ. ಅವು ಸಂಗ್ರಹಾಲಯದಲ್ಲಿಯೇ ಉಳಿಯುತ್ತವೆ. ಈ ಮಾಹಿತಿ ಬೆಸ್ತರಿಗೆ ಅನುಕೂಲವಾಗುವಾಗೆ ಹಾಗೂ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ಮಾರ್ಗದರ್ಶನವಾಗಬೇಕಾಗಿತ್ತು. ಆದರೆ ವಾಸ್ತವಾಗಿ ಬೆಸ್ತರಿಗೆ ಮೀಸಲಾತಿ ಪರಿಹಾರ ಎಂದು ಎಲ್ಲಾರು ವಾದಿಸುತ್ತಾರೆ. ಮೀಸಲಾತಿ ಇರುವುದು ಸಮಾಜದ ಒಳತಿಗಾಗಿ ಹೊರತು ಬೆಸ್ತರಿಗಾಗಿ ಅಲ್ಲ. ಬಂಡವಾಳಗಾರರು ಬೆಸ್ತನ ಸಹಜ ಪ್ರತಿಭೆಯಿಂದ ಕೋಟ್ಯಾಂತರ ಲಾಭಗಳಿಸುತ್ತಾರೆ.ಆದರೆ ಇಲ್ಲಿ ಅವನ ಪ್ರತಿಭೆಯನ್ನು ಲಾಭಕ್ಕಾಗಿ ಬಳಸಿಕೊಳ್ಳುತ್ತವೆ. ವಾಸ್ತವದಲ್ಲಿ ಅವರ ದುಸ್ಥಿತಿಗೆ ಮೀಸಲಾತಿ ಇಲ್ಲದಿರುವುದು ಎಂಬ ಅಭಿಪ್ರಾಯವನ್ನು ಮುಂದೆ ತರಲಾಗುತ್ತದೆ. ಹೀಗೆ ಕೆಲವು ಸಂದರ್ಭಗಳಲ್ಲಿ ವಾಸ್ತವಿಕತೆನ್ನು ಮರೆಮಾಚಿರುವುದು ಕಂಡುಬರುತ್ತದೆ.[೩೦] ಪ್ರಜಾಪ್ರಭುತ್ವ ಈ ರೀತಿಯ ಅಸಮರ್ಪಕಗಳ ನಡುವೆ ಗಟ್ಟಿಯಾಗುವುದಿಲ್ಲ. ಆದ್ದರಿಂದ ಸಂಕಥನಗಳು ಮತ್ತು ವಾದಗಳು ಪ್ರಜಾಪ್ರಭುತ್ವದ ಪ್ರತಿಫಲನಗಳಲ್ಲ. ಅವುಗಳು ಮೇಲ್ಜಾತಿಯ, ಮೇಲ್ವರ್ಗದ ಯಜಮಾನಿಕೆಗಳನ್ನು ಗಟ್ಟಿಗೊಳಿಸುವ ಒಂದು ಚೌಕಟ್ಟು ಭಾರತದ ಪ್ರಜಾಪ್ರಭುತ್ವ ಗಟ್ಟಿಯಾಗಬೇಕಾದರೆ ಸಂಕಥನದೊಂದಿಗೆ ಯಜಮಾನಿಕೆಗಳನ್ನು ಬದಲಾಯಿಸಬೇಕಾಗಿದೆ.[೩೧]

ಕೊನೆ ಟಿಪ್ಪಣಿ

೧. ಮುನಿವೆಂಕಟಪ್ಪ, ೨೦೦೮, ಮೀಸಲಾತಿ ಒಂದು ಅವಲೋಕನ, ಪ್ರಸಾದ ಏಜೆನ್ಸಿಸ್ ೯೦೭/ ೫ #೪ನೇ ಮುಖ್ಯರಸ್ತೆ ೧ನೇ ಕ್ರಾಸ್ ವಿದ್ಯಾರಣ್ಯಪುರಂ ಮೈಸೂರು, ಪು. ೭೯.

೨. ಸಮತ, ಜಾತಿ ವಿನಾಶ ವೇದಿಕೆ ಮುಖಪತ್ರಿಕೆ, ೧೯೯೯ ಡಿಸೆಂಬರ್, ಸಂಖ್ಯೆ೧ ಸಂಪಾದಕ ಮಂಡಳಿ ಕೇರಾಫ್ ಅರುಳಸೆಲ್ವಾ # ೭೭೩/೨ನೇ ಅಡ್ಡರಸ್ತೆ ಲಕ್ಷ್ಮಣರಾವ್ ನಗರ, ಬೆಂಗಳೂರು, ಪು.೩

೩. ಸಮತ, ಜಾತಿ ವಿನಾಶ ವೇದಿಕೆ ಮುಖಪತ್ರಿಕೆ, ೨೦೦೦, ಡಿಸೆಂಬರ್, ಸಂಖ್ಯೆ೧ ಸಂಪಾದಕ ಮಂಡಳಿ ಕೇರಾಫ್ ಅರುಳಸೆಲ್ವಾ # ೭೭೩/೨ನೇ ಅಡ್ಡರಸ್ತೆ ಲಕ್ಷ್ಮಣರಾವ್ ನಗರ, ಬೆಂಗಳೂರು, ಪು.೮

೪. ಮುನಿವೆಂಕಟಪ್ಪ, ೨೦೦೮, ಮೀಸಲಾತಿ ಒಂದು ಅವಲೋಕನ, ಪ್ರಸಾದ ಏಜೆನ್ಸಿಸ್ ೯೦೭/ ೫ #೪ನೇ ಮುಖ್ಯರಸ್ತೆ ೧ನೇ ಕ್ರಾಸ್ ವಿದ್ಯಾರಣ್ಯಪುರಂ ಮೈಸೂರು, ಪು. ೭೮.

೫. ಕೊಟ್ರೇಶಪ್ಪ. ಸಿ, ೨೦೧೦, ಅಂಬೇಡ್ಕರವರ ರಾಜಕೀಯ ಪಕ್ಷಗಳು ಮತ್ತು ಸಿದ್ಧಾಂತಗಳು, ನಿರಂತರ ರೆವ್ಕೊ ಲೆಔಟ್ ಪ್ರಕಾಶನ, ವಿಜಯನಗರ, ಬೆಂಗಳೂರು, ಪು. ೪೨.

೬. ಮೋಗಳ್ಳಿ ಗಣೇಶ, ೨೦೦೬, ಉರಿದಾವೋ ನೇಗಿಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಪು. ೭೮.

೭. ಮುನಿವೆಂಕಟಪ್ಪ, ೨೦೦೮, ಮೀಸಲಾತಿ ಒಂದು ಅವಲೋಕನ, (ಜಾತಿ ಪದ್ಧತಿ ಮತ್ತು ಅಸ್ಪೃಶತೆ ಭವನಧಾಸ ಕನ್ನಡಕ್ಕೆ ಶೀವಸ್ವಾಮಿ ಲೇಖನ) ಪ್ರಸಾದ ಏಜೆನ್ಸಿಸ್ ೯೦೭/೫ # ೪ನೇ ಮುಖ್ಯರಸ್ತೆ ೧ನೇ ಕ್ರಾಸ್ ವಿದ್ಯಾರಣ್ಯಪುರಂ ಮೈಸೂರು, ಪು.೩೦

೮. ಚಂದ್ರ ಪೂಜಾರಿ ಎಂ., ೨೦೦೫, (ಸಂ), ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ, ಪತ್ರಿಕೆ ಸಂ–೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.

೯. ಮುನಿವೆಂಕಟಪ್ಪ, ೨೦೦೮, ಮೀಸಲಾತಿ ಒಂದು ಅವಲೋಕನ, (ಜಾತಿ ಪದ್ದತಿ ಮತ್ತು ಅಸ್ಪೃಶತೆ ಭವನಧಾಸ ಕನ್ನಡಕ್ಕೆ ಶೀವಸ್ವಾಮಿ ಲೇಖನ) ಪ್ರಸಾದ ಏಜೆನ್ಸಿಸ್ ೯೦೭/೫ # ೪ನೇ ಮುಖ್ಯರಸ್ತೆ ೧ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು, ಪು. ೧೦೫

೧೦. ಮೋಗಳ್ಳಿ ಗಣೇಶ, ೨೦೦೯, ಉರಿದಾವೋ ನೇಗಿಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಪು. ೭೮.

೧೧. ದಾಸನೂರು ಕೂಸಣ್ಣ, ೨೦೦೫, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ, ಮಾಂತಗ ಪ್ರಕಾಶನ, ಮೈಸೂರು, ಪು. ೧೮

೧೨. ಚಂದ್ರ ಪೂಜಾರಿ ಎಂ., ೨೦೧೧, ರಾಜಕೀಯ ಬಡತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೩. ವಿದ್ಯಾಸಾಗರ ಐ.ಎಸ್, ೨೦೦೬, ಅಂಬೆಡ್ಕರ್ ಮತ್ತು ಮಾನವಿಯ ಮೌಲ್ಯಗಳು, ಸಮೇದ ಪ್ರಕಾಶನ ೧೨/೧ ಅಮರಾಪಲ್ಲಿ ಎಂ.ಎಸ್.ಕೆ ಮಿಲ್ ಗುಲ್ಬಾರ್ಗಾ, ಪು. ೧೩೧.

೧೪. ಚಿನ್ನಸ್ವಾಮಿ ಸೋಸಲೆ, ೨೦೧೦, ಡಾ. ಅಂಬೆಡ್ಕರ್ ಮತ್ತು ಸಮಕಾಲಿನ ದಲಿತರು (ಅಂಬೆಡ್ಕರ್ ವಿಚಾರಧಾರೆ ಒಂದು ವಿಮರ್ಶಾತ್ಮಕ ಲೇಖನ, ಡಿ.ಆರ್.ನಾಗರಾಜ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಪು.೧೪೨

೧೫. ಸಮತ, ಜಾತಿ ವಿನಾಶ ವೇದಿಕೆ, ಮುಖಪತ್ರಿಕೆ ೧೯೯೯ ಡಿಸೆಂಬರ್, ಸಂಖ್ಯೆ ೧ ಸಂಪಾದಕ ಮಂಡಳಿ, ಬೆಂಗಳೂರು, ಪು. ೪

೧೬. ವಿನಯ ಲಾಲ್, ಅಶೀಶ್ ನಂದಿ (ಮೂಲ) ರಾಜಶೇಖರ ಜಿ. (ಅನು), ೨೦೧೬, ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಪು. ೧೧೦

೧೭. ಚಂದ್ರ ಪೂಜಾರಿ ಎಂ., ೨೦೧೪, ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಬಳ್ಳಾರಿ,

೧೮. ಮೊಗಳ್ಳಿ ಗಣೇಶ, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೧೯. ಮಂಜುನಾಥ ಬೇವಿನಕಟ್ಟಿ, ೨೦೦೯, ವಾಲ್ಮೀಕಿ ಸಮುದಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೦. ಆನಂದ್ ತೇಲ್ ತುಂಬ್ಡೇ, ೨೦೦೯, ಖೈರ್ಲಾಂಜಿ, ಲಂಕೇಶ ಪ್ರಕಾಶನ, ಬೆಂಗಳೂರು, ಪು. ೧೨೨

೨೧. ಸತ್ಯಪ್ರಕಾಶ್ ಎಂ.ಆರ್., (ಸಂ) ಹೆಚ್.ಟಿ.ಪೋತೆ, ಮೀಸಲಾತಿ ಸಮಸ್ಯೆ ಸವಾಲುಗಳು, ೨೦೧೬ ತಿಪ್ಪಾಂಬ ಪ್ರಕಾಶನ, ಗುಲಬರ್ಗ, ಪು.೧೮೧

೨೨. ಶ್ರೀನಿವಾಸ ಎಂ.ಎನ್., ೨೦೦೨, ಕಲೆಕ್ಟೆಡ್ ಎಸ್ಸೇ, ಆಕ್ಸ್‌ಫರ್ಡ್ ಯುನಿರ್ವಸಿಟಿ, ಪ್ರೆಸ್, ನ್ಯೂಡೆಲಿ.

೨೩. ವೀರಯ್ಯ ಡಿ.ಎಸ್., ೨೦೦೫, ದಲಿತ ಚಿಂತನೆ, ವೈಚಾರಿಕ ಲೇಖನಗಳ ಸಂಕಲನ, ಸ್ವಪ್ನ ಬುಕ್‌ಹೌಸ್ ತುಂಗಾ ಕಾಂಪ್ಲೆಕ್ಸ್ ಗಾಂಧಿನಗರ, ಬೆಂಗಳೂರು, ಪು.೭೬

೨೪. ಈರಾಪುರ ಎಚ್.ವೈ, ೨೦೧೧, ದಲಿತರು ಮತ್ತು ಮೀಸಲಾತಿ ಉಪನ್ಯಾಸಮಾಲೆ ೫೪೯, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. ೮೯-೯೬

೨೫. ವಿನಯಾ ಒಕ್ಕುಂದ, ಯಾರಿಗೆ ಬಂತು ಎಲ್ಲಿಗೆ ಬಂತು ಸ್ವಾತಂತ್ರ್ಯ, ೧೪.೮.೨೦೧೪, ವಿಜಯ ಕರ್ನಾಟಕ ದಿನಪತ್ರಿಕೆ, ಪು.೬

೨೬. ಲಕ್ಷ್ಮಣ್ ತೆಲಗಾವಿ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಏಕೀಕರಣೋತ್ತರ ಚಳುವಳಿ ಸಂಪುಟ-೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೧೩೧

೨೭. ವಾರ್ತಾಭಾರತಿ, ದಿನಪತ್ರಿಕೆ, ಒಳಮೀಸಲಾತಿ ಸಾಮಾಜಿಕ ನ್ಯಾಯ, ೨೫.೦೯.೨೦೧೨, ಮಂಗಳೂರು.

೨೮. ಶ್ರೀನಿವಾಸ ಉಗಮ, ಸಾಮಾಜಿಕ ನ್ಯಾಯದ ತಳಹದಿ ಒಳಮೀಸಲಾತಿ, ಕನ್ನಡ ದಿನಪತ್ರಿಕೆ, ದಿನಾಂಕ ೧೫.೧೨.೨೦೧೬, ಪು.೭

೨೯. ಬಸವರಾಜ ಜಿ.ವಿ., ೧೯.೦೯.೨೦೧೫, ಕರ್ನಾಟಕದಲ್ಲಿ ಅಪೌಷ್ಟಿಕತೆ, ಪ್ರಜಾವಾಣಿ ದಿನಪತ್ರಿಕೆ,

೩೦. ವಸು ಮಳಲಿ, (ಕಳ್ಳುಬಳ್ಳಿ) ಮೀನಿ ಹಿಡಿಯುವ ಬೆಸ್ತನಿಗೂ ಮೀಸಲಾತಿ, ಪ್ರಜಾವಾಣಿ, ಕನ್ನಡ ದಿನಪತ್ರಿಕೆ ೦೪.೦೨.೨೦೧೪, ಪು.೬

೩೧. ಮುಜಾಫರ ಅಸ್ಸಾದಿ, ಮೀಸಲಾತಿ ಹಿಂದಿನ ಸೂಕ್ಷ್ಮತೆ ಮತ್ತು ಮನಸುಗಳು, ಪ್ರಜಾವಾಣಿ, ಕನ್ನಡ ದಿನಪತ್ರಿಕೆ ೧೪.೦೫.೨೦೦೮, ಪು.೬

ಅಧ್ಯಾಯ ನಾಲ್ಕು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿ

೪.೧. ಪರಿಶಿಷ್ಟರ ಆರ್ಥಿಕ ಅಭಿವೃದ್ಧಿಗಾಗಿರುವ ಕಾರ್ಯಕ್ರಮಗಳು

೪.೧.೧. ಕೇಂದ್ರ ಸರ್ಕಾರದ ಯೋಜನೆಗಳು

೪.೧.೨. ರಾಜ್ಯ ಸರ್ಕಾರದ ಯೋಜನೆಗಳು

೪.೨. ಸಂವಿಧಾನಿಕ ಕ್ರಮಗಳು

೪.೩. ಸಂವಿಧಾನದಲ್ಲಿ ಒಟ್ಟು ಅರ್ಥವ್ಯವಸ್ಥೆಯ ಸಂಘಟನೆ

೪.೪. ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟರ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಕ್ರಮಗಳು

೪.೫. ಕರ್ನಾಟಕ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟರ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಕ್ರಮಗಳು

೪.೬. ಅಧ್ಯಯನ ಕ್ಷೇತ್ರದಲ್ಲಿ ಪರಿಶಿಷ್ಟರ ಆರ್ಥಿಕಾಭಿವೃದ್ಧಿ ಚಿತ್ರಣ

ಅಧ್ಯಾಯ ನಾಲ್ಕು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿ

ಭಾರತ ದೇಶವು ಒಂದು ಜಾತ್ಯತೀತ ರಾಷ್ಟ್ರ. ಹಲವಾರು ವೈವಿಧ್ಯಮಯವಾದ ಭಾಷೆ, ಸಂಸ್ಕೃತಿ, ಧರ್ಮ, ಸಂಪ್ರದಾಯ, ಜಾತಿ ಮುಂತಾದ ವೈರುಧ್ಯಗಳ ನಡುವೆ ಜನರು ಜೀವಿಸುತ್ತಿದ್ದಾರೆ. ಇಂತಹ ವೈರುಧ್ಯಗಳ ನಡುವೆ ಕೆಲವು ಜನರು ನಿಕೃಷ್ಣ ಜೀವನವನ್ನು ಸಾಗಿಸುತ್ತಿದ್ದಾರೆ. ಇದರಲ್ಲಿ ನಗರ, ಗ್ರಾಮೀಣ ಪ್ರದೇಶಗಳ ಪರಿಚಯವಿಲ್ಲದ ಸಮುದಾಯಗಳು ಸೇರಿವೆ. ಭಾರತದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಒಂದು ಜಾತಿ ಸಮುದಾಯ ಇನ್ನೊಂದು ಸಮುದಾಯಕ್ಕಿಂತ ಭಿನ್ನವಾಗಿ ಗುರುತ್ತಿಸಿಕೊಳ್ಳುತ ಬಂದಿವೆ. ಇದಕ್ಕೆ ಹಲವಾರು ಕಾರಣಗಳುಂಟು ಸಂಸ್ಕೃತಿ ಮತ್ತು ಧರ್ಮಗಳು ಜನರನ್ನು ಅತ್ಯಂತ ಕಟ್ಟು ನಿಟ್ಟಾದ ನಿಯಮಗಳಿಂದಲೆ ನೋಡುವ ಪ್ರವೃತ್ತಿ ಮುಂದುವರೆದಿದೆ. ಪರಿಣಾಮವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಪೃಶ್ಯತೆ-ಅಸ್ಪೃಶ್ಯತೆ ಪರಿಭಾಷೆಗಳು ಹುಟ್ಟಿಕೊಂಡವು ನಂತರ ಬ್ರೀಟಿಷರ ಅಳ್ವಿಕೆಯಲ್ಲಿ ಪರಿಶಿಷ್ಟ ಜಾತಿ(Scheduled Cast) ಮತ್ತು ಪರಿಶಿಷ್ಟ ಪಂಗಡಗಳು (Scheduled Tribey) ಎಂಬ ಪರಿಭಾಷೆಗಳನ್ನು ಸೃಷ್ಟಿಸಿದರು. ಬ್ರೀಟಿಷರು ಸಹ ಜನರು ಮತ್ತು ಧರ್ಮಗಳನ್ನು ಒಂದಾಗಲು ಬಿಡಲಿಲ್ಲ. ಹಾಗಾಗಿ ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿ ಇಂದಿಗೂ ಮುಂದುವರೆದಿದೆ. ಅದೇ ರೀತಿಯಾಗಿ ಸ್ವಾತಂತ್ರ್ಯ ನಂತರ ಸಂವಿಧಾನಿಕ ವ್ಯವಸ್ಥೆ ಜಾರಿಗೆ ಬಂತು. ಆಗ ಜಾತಿ ಸಂವಿಧಾನದ ವ್ಯಾಪ್ತಿಗೆ ಬಂತು. ಹಾಗಾಗಿ ಜಾತಿ ವ್ಯವಸ್ಥೆಯನ್ನ ಹೋಗಲಾಡಿಸಲು ಸರಕಾರ ಅನೇಕ ಕಾನೂನುಗಳು ಜಾರಿಗೆ ತಂದವು ಸ್ವಲ್ಪಮಟ್ಟಿಗೆ ಫಲಕಾರಿಯಾಗಿರುವುದುಂಟು. ಒಂದು ಕಾನೂನಿಗೆ ಮತ್ತೊಂದು ಕಾನೂನು ರೂಪಗೊಳ್ಳತ್ತ, ಮೆಲ್ನೋಟಕ್ಕೆ ಅಂತಹ ಕಾನೂನುಗಳು ಆರ್ಥಿಕ, ಸಾಮಾಜಿಕ, ರಾಜಕೀಯ, ಅವಕಾಶಗಳನ್ನು ಒದಗಿಸಿವೆ. ಆದರೆ ಅದರ ಪರಿಣಾಮಕಾರಿಯಾಗಿ ನಿರ್ಮೂಲನೆ ಪ್ರಯತ್ನಗಳು ನಡೆಯಲೆ ಇಲ್ಲ. ಹಾಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಇಂದಿಗೂ ಸರಕಾರದ ಯೋಜನೆಗಳನ್ನು ನಂಬಿ ಬದುಕುವಂತಾಗಿದೆ.

ಜನಸಂಖ್ಯೆ ಮತ್ತು ಉದ್ಯೋಗ, ಜನಸಂಖ್ಯೆ ಮತ್ತು ಆರ್ಥಿಕ ಭದ್ರತೆ, ಜನಸಂಖ್ಯೆ ಮತ್ತು ಸಾಮಾಜಿಕ ಭದ್ರತೆಯನ್ನು ವಿಶ್ಲೇಷಣೆಗೆ ಒಳಪಡಿಸಿದರೆ ಅಜಗಜಾಂತರ ವ್ಯತ್ಯಾಸಗಳು ಗೋಚರಿಸುತ್ತದೆ. ಹಾಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಅಭದ್ರತೆಯ ಸ್ಥಿತಿಯನ್ನು ಎದುರಿಸುತ್ತಿವೆ.

೨೦೧೧ರ ಜನಗಣ ಪ್ರಕಾರ ಭಾರತದ ಜನಸಂಖ್ಯೆ ೧,೨೧,೦೯ ಮಿಲಿಯನ್ ಪರಿಶಿಷ್ಟ ಜಾತಿಯ ಜನಸಂಖ್ಯೆ ೧೬೬,೬೩೫,೭೦೦ ಅಂದರೆ ಶೇ. ೧೬.೨ ಅದೇ ರೀತಿಯಾಗಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣ ೮೪,೩೨೬,೨೪೦ ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. ೮.೨ ರಷ್ಟು ಪ್ರಮಾಣದ ಜನಸಂಖ್ಯೆಯನ್ನು ಇದುವರೆಗೆ ಜಾತಿ ಹಿನ್ನೆಲೆ ಮತ್ತು ಬುಡಕಟ್ಟು ಹಿನ್ನಲೆಯಲ್ಲಿ ನೋಡುತ್ತಿದ್ದಾರೆ, ಅಲ್ಲದೆ ಇದುವರೆಗಿನ ಅಧ್ಯಯನಗಳು ಮತ್ತು ಅಧ್ಯಯನಕಾರರು ಪರಿಶಿಷ್ಟ ಜಾತಿಗಳನ್ನು ಜಾತಿ ಹಿನ್ನಲೆಯಲ್ಲಿ ಬುಡಕಟ್ಟುಗಳನ್ನು ಬುಡಕಟ್ಟು ಮತ್ತು ಜಾನಪದದ ಹಿನ್ನಲೆಯಲ್ಲಿ ನೋಡುತ್ತಿದ್ದಾರೆ. ಅವರ ಮೂಲ ಸಮಸ್ಯೆಗಳು ಹಾಗೂ ಅವರ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುತ್ತಿಲ್ಲ, ಹೇಗೆ ನಮ್ಮ ಪ್ರಧಾನ ಧಾರೆಯ ಇತಿಹಾಸಗಳು ಹೇಗೆ ತಪ್ಪುಮಾಡುತ್ತಾ ಬಂದಿವೆ ಎಂಬುದನ್ನು ಇದರಿಂದ ಕಾಣಬಹುದು(ಮೋಹನ ಕುಮಾರ ೨೦೧೪). ಕರ್ನಾಟಕ ಬುಡಕಟ್ಟು ಮತ್ತು ಅಭಿವೃದ್ಧಿ ಭಾರತದಲ್ಲಿ ಬುಡಕಟ್ಟು ಸಮುದಾಯಗಳು ಅಭಿವೃದ್ಧಿಗಾಗಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಗಿರಿಜನ ಉಪ ಯೋಜನೆಯಡಿ ಭಾರತ ಸೌಕರ್ಯಗಳನ್ನು ಒದಗಿಸುತ್ತಿದೆ. ಇದರ ಉಪಯೋಗವನ್ನು ಭಾರತದ ೨೧ ರಾಜ್ಯಗಳು ಹಾಗೂ ೪ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಾಸವಿರುವ ಬುಡಕಟ್ಟುಗಳ ಸರ್ವತೋಮುಖ ಬೆಳವಣಿಗಾಗಿ ಕೇಂದ್ರದಿಂದ ಅನುಮೊದನೆ ಪಡೆದು ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸುತ್ತಿವೆ. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯದಲ್ಲಿ ೨೮ ಅಭಿವೃದ್ಧಿ ಇಲಾಖೆ ಹಾಗೂ ನಿಗಮ ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ ೭.೫ ರಷ್ಟು ಪರಿಶಿಷ್ಟ ಪಂಗಡಗಳು ಹಾಗೂ ಶೇ. ೨೨.೧೦ (೨೦೧೫ ರಿಂದ) ರಷ್ಟನ್ನು ಪರಿಶಿಷ್ಟ ಜಾತಿಗಳಿಗೆ ಮೀಸಲಿಟ್ಟು ಅವರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೌಲಭ್ಯವನ್ನು ಒದಗಿಸುತ್ತೇವೆ.

ಪರಿಶಿಷ್ಟ ಪಂಗಡಗಳಿಗೆ ಇರುವ ಸಂವಿಧಾನಾತ್ಮಕ ಸೌಲಭ್ಯಗಳು ಭಾರತದ ಸಂವಿಧಾನವು ಎಲ್ಲಾ ಜಾತಿ ಜನಗಳಿಗೆ ಸಮಾನವಾದ ಅವಕಾಶಗಳನ್ನು ಒದಗಿಸಿದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಸಮಾನ ಅವಕಾಶ ರಾಜಕೀಯ ಪ್ರಾತಿನಿಧ್ಯ ಆರ್ಥಿಕ ನೆರವಿಗೆ ಸಂವಿಧಾನ ಮಾತ್ರ ಸಾಮಾನ್ಯ ಕಾಯ್ದೆಗಳ ಮೂಲ ಅವರ ಅಭಿವೃದ್ಧಿಗೆ ಇವತ್ತು ಸಂವಿಧಾನದ ೧೫ನೇ ವಿಧಿ ಪ್ರಕಾರ ಜಾತಿ ೧ ಮತ್ತು ಪಂಥ ಜನಾಂಗ ಬೇದ ಭಾವವಿಲ್ಲದೆ ಬುಡಕಟ್ಟು ಜನಾಂಗವನ್ನು ಒಳಗೊಂಡಂತೆ ಎಲ್ಲರೂ ಸಮಾನರು ಸಂವಿಧಾನದ ೧೬(೪ಎ) ವಿಧಿಗಳ ಪ್ರಕಾರ ಶೇ. ೩ ರಷ್ಟು ಮೀಸಲಾತಿ ನೀಡಲಾಗಿದೆ. ಸಂವಿಧಾನದ ೩೩೦,೩೩೨ ಮತ್ತು ೩೩೪ನೇ ವಿಧಿಯ ಪ್ರಕಾರ ಲೋಕಸಭೆ ಮತ್ತು ರಾಜ್ಯವಿಧಾನ ಸಭೆಗಳಲ್ಲಿ ಮೀಸಲು ಸ್ಥಾನಗಳನ್ನು ಒದಗಿಸಲಾಗಿದೆ. ಸಂವಿಧಾನದ ೧೫(೪ಎ) ಮತ್ತು ೧೬(೨ಎ) ವಿಧಿಗಳ ಪ್ರಕಾರ ಬುಡಕಟ್ಟುಗಳು ಶೈಕ್ಷಣಿಕ ಅಭಿವೃದ್ಧಿ ಅವಕಾಶಗಳನ್ನು ರಾಜ್ಯಗಳು ನೀಡುವಂತೆ ಸೂಚಿಸಲಾಗಿದೆ. ಸಂವಿಧಾನದ ೨೭೫ ನೇ ವಿಧಿಯು ಭಾರತದ ಸಂಚಿತ ನಿಧಿಯಿಂದ ಆದಿವಾಸಿ ಕಲ್ಯಾಣಕ್ಕಾಗಿ ರಾಜ್ಯಗಳಿಗೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡಬಹುದಾಗಿದೆ. ಸಂವಿಧಾನದ ೩೪೦ ನೇ ವಿಧಿಯ ಪ್ರಕಾರ

ಪರಿಶಿಷ್ಟ ಪಂಗಡಗಳ ಅಧಿಕ ಜನಸಂಖ್ಯೆ ಇರುವಲ್ಲಿ ಆಯುಕ್ತರನ್ನು ನೇಮಿಸಬಹುದು. ಅದೇ ರೀತಿಯಾಗಿ ಸಂವಿಧಾನದ ೨೨೪ನೇ ವಿಧಿಯ ಪ್ರಕಾರ ಅನುಸೂಚಿತ ಪ್ರದೇಶಗಳು ಮತ್ತು ಬುಡಕಟ್ಟು ಪ್ರದೇಶಗಳ ಆಡಳಿತದ ಬಗ್ಗೆ ಸಲಹೆಗಳನ್ನು ನೀಡಲಾಗಿದೆ.

ಸಂವಿಧಾನದ ೩೪೨ನೇ ವಿಧಿಯ ಪ್ರಕಾರ ಪರಿಶಿಷ್ಟ ಪಂಗಡಗಳ ಗುಂಪಿಗೆ ಹೊಸ ಪಂಗಡಗಳನ್ನು ಸೇರಿಸಲು ಅವಕಾಶ ಕಲ್ಪಿಸಿದೆ. ಹಾಗೇ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಸಂವಿಧನಾತ್ಮಕ ಅವಕಾಶಗಳನ್ನು ನೀಡಲಾಗಿದೆ. ಸಂವಿಧಾನವು ಆರ್ಥಿಕ ಅಭಿವೃದ್ಧಿಯಲ್ಲಿ ಸಾಮಾಜಿಕವಾಗಿ ಬದುಕುವ ಮತ್ತು ಭದ್ರತೆಯನ್ನು ಒದಗಿದೆ.

ಭಾರತ ಸರಕಾರವು ಬುಡಕಟ್ಟಗಳ ಅಭಿವೃದ್ಧಿಗಾಗಿ ನೇಮಿಸಿದ ಆಯೋಗಗಳು

೧) ೧೯೬೧ ದೇಬರ್ ಅಯೋಗ

೨) ೧೯೬೨ ಹರಿಸಿಂಗ್ ಸಮಿತಿ

೩) ೧೯೭೬ ರಾಷ್ಟ್ರೀಯ ಕೃಷಿ ಆಯೋಗ

೪) ೧೯೭೮ ಅರಣ್ಯ ಮತ್ತು ಆದಿವಾಸಿ ಅಭಿವೃದ್ಧಿ ಖಾತೆ ರಾಜ್ಯಮಂತ್ರಿಗಳ ಸಮ್ಮೇಳನ ನಿರ್ಣಯಗಳು

೫) ೧೯೮೨ ರಾಯಭರ್ಮನ್ ಆಯೋಗದ ವರದಿ

೬) ೧೯೯೬ ಭೂರಿಯಾ ಆಯೋಗ

೧೯೬೧ ದೇಬರ್ ಆಯೋಗ

೧) ಅರಣ್ಯ ಉತ್ಪನ್ನಗಳ ಮೇಲೆ ಆದಿವಾಸಿ ಸಮುದಾಯಗಳ ಸಂಪೂರ್ಣ ಅಧಿಕಾರ ಗಣ್ಯವಾದ ಹಾಡಿಗಳಲ್ಲಿ ವಾಸಿಸುವ ಆದಿವಾಸಿಗಳ ಭೂಮಿ ರಕ್ಷಿಸಿ ಮೂಲಭೂತ ಸೌಲಭ್ಯ ಒದಗಿಸುವುದು.

೧೯೬೭ ಹರಿಸಿಂಗ್ ಸಮಿತಿ

೧) ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ಉದ್ಯೋಗ ಸಿಗುವಂತೆ ಮಾಡುವುದು.

೨) ಸಹಕಾರಿ ಸಂಘಗಳನ್ನು ಸ್ಥಾಪಿಸಿ ಸ್ವ-ಸಾಮರ್ಥ್ಯದಿಂದ ನಿರ್ವಹಿಸುವಂತೆ ಮಾಡುವುದು.

೧೯೭೬ ರಾಷ್ಟ್ರೀಯ ಕೃಷಿ ಆಯೋಗದ ಶಿಪಾರಸ್ಸುಗಳು

೧) ಸರಕಾರ ಅರಣ್ಯೀಕರಣ ಮಾಡುವುದಕ್ಕಿಂತ ಆದಿವಾಸಿಗಳಿಗೆ ಕೃಷಿ ಭೂಮಿ ನೀಡಬೇಕು.

೨) ಒಂದು ಕಡೆ ನೆಲೆನಿಂತು ಕುಮ್ರಿ ಬೇಸಾಯ ಪದ್ಧತಿ ಕೈಗೊಳ್ಳಲು ಅವರಿಗೆ ಇಷ್ಟವಿದ್ದಕಡೆ ಕೃಷಿ ಭೂಮಿ ನೀಡಬೇಕು.

೧೯೭೮ ಆದಿವಾಸಿಗಳ ಅಭಿವೃದ್ಧಿಗಾಗಿ ಮಂತ್ರಿಗಳ ಶಿಪಾರಸ್ಸುಗಳು

೧) ಅರಣ್ಯ ಉಪ ಉತ್ಪನ್ನಗಳನ್ನು ಸಂಗ್ರಹಿಸಿ ಅವುಗಳನ್ನು ನಿರ್ಧಾರ ಅವುಗಳನ್ನು ಸಾಗರ ಸಂಘಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು

೨) ಪಾರಂಪರಿಕವಾಗಿ ಅವಲಂಬಿಸಿದ ಕೃಷಿ ಭೂಮಿಯನ್ನು ಕಾನೂನುಬದ್ಧವಾಗಿರದವರಿಗೆ ಸಲ್ಲಿಸಬೇಕು.

೧೯೮೭ ರಾಯಭರ್ಮನು ಆಯೋಗ

೧) ಅರಣ್ಯ ಪ್ರದೇಶಗಳನ್ನು ರಕ್ಷಿತ ಅರಣ್ಯ ಪ್ರದೇಶಗಳಾಗಿಸಬಹುದು. ಆದರೆ ಅಲ್ಲಿಂದ ಅಥವಾ ಆದಿವಾಸಿಗಳನ್ನು ಒಕ್ಕಲೆಬ್ಬಿಸುವಂತಿಲ್ಲ. ಸ್ಥಳಾಂತರಿಸಬೇಕು. ಕಾನೂನುಬದ್ಧ ರೀತಿಯಲ್ಲಿ ಸ್ಥಳಾಂತರಿಸಬೇಕು.

೨) ಸ್ಥಳಾಂತರಗೊಂಡ ಆದಿವಾಸಿಗಳಿಗೆ ಉತ್ತಮ ಸೌಲಭ್ಯ ಕಲ್ಪಿಸಬೇಕು.

೩) ರಾಷ್ಟ್ರೀಯ ಉದ್ಯಾನವನಗಳನ್ನು ಅಭಯಾರಣ್ಯಗಳು ಮತ್ತು ಜೈವಿಕ ಉದ್ಯಾನವನಗಳು ಆದಿವಾಸಿಗಳ ನೆಲೆಗಳ ಸಮೀಪದಲ್ಲಿರುವಂತೆ ಸರಕಾರ ಯಾವುದೇ ಯೋಜನೆಗಳನ್ನು ರೂಪಿಸಕೂಡದು.[೧]

ಸಂವಿಧಾನದಲ್ಲಿ ಪ್ರಜೆಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಭರವಸೆ / ಖಾತರಿಪಡಿಸಲಾಗಿದೆ. ಅದರಲ್ಲಿ ಈ ರೀತಿಯಾಗಿ ಸಾರಲಾಗಿದೆ. "ಭಾರತದ ಪ್ರಜೆಗಳಾದ ನಾವು ನಮ್ಮ ದೇಶವನ್ನು ಒಂದು ಸ್ವಾತಂತ್ರ್ಯ, ಸಾರ್ವಭೌಮ, ಜಾತ್ಯತೀತ, ಸಮಾಜವಾದಿ, ಪ್ರಜಾಸತ್ತಾತ್ಮಕ, ಗಣರಾಜ್ಯವನ್ನಾಗಿ ರೂಪಿಸಲು ಅದರ ಸಮಸ್ತ ಪೌರರಾದ ನಾವು ಆರ್ಥಿಕ, ಸಾಮಾಜೀಕ, ರಾಜ್ಯಕೀಯ ನ್ಯಾಯ ಸ್ವಾತಂತ್ರ್ಯ ನಂಬಿಕೆ, ಅಭಿವ್ಯಕ್ತಿ, ಎಲ್ಲರಿಗೂ ಸಮಾನತೆ ಮತ್ತು ಸಮಾನ ಅವಕಾಶಗಳು ದೊರೆಯುವಂತೆ ಸೋದರತ್ವ, ಹಾಗೂ ಸಾಮೂಹಿಕ ಗೌರವಾದರಣೆಗಳು ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುತ್ತೇವೆ ಎಂದು ದಿನಾಂಕ ೨೬ ನವೆಂಬರ್ ೧೯೪೯ರಂದು ಈ ಸಂವಿಧಾನವನ್ನು ನಮ್ಮದನ್ನಾಗಿ ಆತ್ಮಾರ್ಪಿಸಿ ಕೊಂಡಿದ್ದೇವೆ / ಪ್ರತಿಜ್ಞೆ / ಪ್ರಮಾಣ ಮಾಡಿದ್ದೇವೆ ಎಂದು ಸಾರುತ್ತದೆ.

ಸಂವಿಧಾನದಲ್ಲಿ ಆರ್ಥಿಕ ನ್ಯಾಯ ಎಂದರೆ ಹಸಿವೆಯಿಂದ ಬಳಲುತ್ತಿರುವವರಿಗೆ ಅನ್ನವನ್ನು ಒದಗಿಸುವುದು ಮತ್ತು ಬೆತ್ತಲೆಯಿಂದ ತಿರುಗವವರಿಗೆ ಬಟ್ಟೆಯನ್ನು ಒದಗಿಸುವದು ಎಂಬ ಅರ್ಥವನ್ನು ನೀಡುತ್ತದೆ, ಸಾಮಾಜಿಕ ಸಮಾನತೆ ಎಂದರೆ ಸಮಾಜದಲ್ಲಿ ಎಲ್ಲರು ಸಮಾನರು ಜಾತಿ, ಧರ್ಮ, ಪಂಗಡ, ಲಿಂಗ ಮೊದಲಾದವುಗಳ ತಾರತಮ್ಯವಿಲ್ಲದೆ ಎಲ್ಲರು ಎಲ್ಲದರಲೂ ಸಮಾನರು ಎಲ್ಲರೂ ರಾಜಕೀಯ ಉದ್ಯೋಗ ಅವಕಾಶಗಳನ್ನು ಎಲ್ಲರಿಗೂ ದೊರೆಯುವಂತೆ ವ್ಯವಸ್ಥೆಗೊಳಿಸಲಾಗಿದೆ ಅದರಂತೆ, ಸಂವಿಧಾನದ ೧೦ನೇ ವಿಧಿಯಲ್ಲಿ ಭಾರತದ ಪೌರರಿಗೆ ಪೌರತ್ವ ವಿಷಯದಲ್ಲಿ ಎಲ್ಲಾರೂ ಸಮಾನರು ಎಂದು ಸಾರುತ್ತದೆ.[೨]

ಸಂವಿಧಾನದಲ್ಲಿನ ಒಟ್ಟು ಅರ್ಥವ್ಯವಸ್ಥೆಯ ಸಂಘಟನೆ

ಸಂವಿಧಾನದಲ್ಲಿ ಪ್ರಜೆಗಳಿಗೆ ಆರ್ಥಿಕ ಅವಕಾಶಗಳಿಗೆ ಸಂಬಂಧಿಸಿದಂತೆ ಎಲ್ಲಾರೂ ಸಮಾನತೆ ಸಾದಿಸುವ ಉದ್ದೇಶದಿಂದ ಹಕ್ಕು ನೀಡಿ ರಕ್ಷಣೆಯನ್ನು ಒದಗಿಸಲಾಗಿದೆ. ಸಂವಿಧಾನದ ೧೪ ನೇ ವಿಧಿ ಸಮಾನತೆಯ ಹಕ್ಕನ್ನು ನೀಡಿದೆ, ಕಾನೂನಿನ ದೃಷ್ಠಿಯಲ್ಲಿ ಎಲ್ಲಾರೂ ಸಮಾನರು ಪ್ರಧಾನಿಯಿರಲಿ ಕೂಲಿಯವನಾಗಲಿ ಇಬ್ಬರು ಸಮಾನರು ಎಂಬುದನ್ನ ಸಾದರಪಡಿಸುತ್ತದೆ. ಸಂವಿಧಾನದ ೧೯ (ಎಫ್) ವಿಧಿಯ ಪ್ರಕಾರ ಆಸ್ತಿಯ ಹಕ್ಕು ಮೂಲಭೂತ ಹಕ್ಕು ಪರಿಗಣಿಸಿಲಾಗಿದೆ ಆದರೆ ೧೯೭೮ ಜನತಾ ಸರಕಾರವು ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕು ಪಟ್ಟಿಯಿಂದ ೪೪ ತಿದ್ದುಪಡಿ ಮೂಲಕ ತೆಗೆದುಹಾಕಲಾಯಿತು, ಆಸ್ತಿಯ ಹಕ್ಕು ಈಗ ಕೇವಲ ಕಾನೂನುಬದ್ಧ ಹಕ್ಕಾಗಿದೆ ಎಂದು ಸಂವಿಧಾನದ ೨೦೦ (ಎ) ವಿಧಿಯಲ್ಲಿ ಸೇರಿಸಲಾಗಿದೆ. ಸಂವಿಧಾನದ ೧೯ (ಜಿ) ಅನುಚ್ಛೇದನ ವಿಧಿಯಲ್ಲಿ ಪ್ರತಿಯೊಬ್ಬ ಪ್ರಜೆ ತನಗೆ ಸರಿ ಎನಿಸಿದ ವೃತ್ತಿ, ಕಸಬು, ವ್ಯಾಪಾರ ಮತ್ತು ವ್ಯವಹಾರ ಸ್ವಾತಂತ್ರ್ಯದ ಮತ್ತು ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ಖಾತರಿ ಪಡಿಸುತ್ತದೆ. ಮೂಲ ಸಂವಿಧಾನದಲ್ಲಿ ನಾಲ್ಕನೇ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಾತ್ಮಕ ತತ್ವಗಳು ಎಂಬ ಪ್ರತ್ಯೇಕ ಅಧ್ಯಾಯದಲ್ಲಿ ಆರ್ಥಿಕ ಸಾಮಾಜಿಕ ಗುರಿಗಳನ್ನು ಸಾಧಿಸಲು ಭಾರತ ಸಂವಿಧಾನ ಐರಿಸ್ ಸಂವಿಧಾನದಿಂದ ಪ್ರೇರಿತಗೊಂಡು ಈ ಭಾಗವನ್ನು ಉಳಿಸಿಕೊಳ್ಳಲಾಗಿದೆ. ಈ ಭಾಗವನ್ನು ಆರ್ಥಿಕ ಪ್ರಜಾ ರಾಜ್ಯದ ಸ್ಥಾಪನೆಗಾಗಿ ಸಾಧನ ಎಂದು ಸಹ ಕರೆಯಲಾಗಿದೆ. ೩೮ನೇ ವಿಧಿಯ ಜನತೆಯ ಕಲ್ಯಾಣಕ್ಕಾಗಿ ರಾಜ್ಯವು ಶ್ರಮಿಸಿ ಸಾಮಾಜಿಕ ಸನ್ನಿವೇಶ ಅಥವಾ ವಾತಾವರಣ ಸೃಷ್ಟಿಸಬೇಕು ಎಂಬ ಸಂದೇಶವಾಗಿದೆ. ೩೮ (೧) ಜೀವನದ ಎಲ್ಲಾ ಸಂಸ್ಥೆಗಳಲ್ಲಿ ಸಾಮಾಜಿಕ ಆರ್ಥಿಕ. ಮತ್ತು ಕಾಪಾಡುವದು ಸರ್ವರ ಏಳ್ಗೆಗಾಗಿ ಅತ್ಯುತ್ತಮ ರೀತಿಯಲ್ಲಿ ನೇರವಾಗುವಂತೆ ಸಮುದಾಯದ ಎಲ್ಲಾ ಜನರಿಗೆ ಸಂಪನ್ಮೂಲಗಳ ಮಾಲಿಕತ್ವ ಮತ್ತು ನಿಯಂತ್ರಣವನ್ನು ಹಂಚಲು ಮತ್ತು ಸರ್ವರ ಹಿತಕ್ಕೆ ಧಕ್ಕೆಯಾಗದಂತೆ ಸಂಪತ್ತು ಮತ್ತು ಉತ್ಪಾದನಾ ಸಾದನಗಳನ್ನು ಕೇಂದ್ರೀಕೃತವಾಗುವುದನ್ನು ತಪ್ಪಿಸಬೇಕು.

೩೯ (ಎ) ನೇ ಅನುಚ್ಛೇದ ಸಮಾನ ನ್ಯಾಯ ಮತ್ತು ಉಚಿತ ಕಾನೂನು/ನೆರವು

೩೯ (ಬಿ) ನೇ ಅನುಚ್ಛೇದ ಆರ್ಥಿಕೆ ಹಂಚಿಕೆಗೆ ಅವಕಾಶ

೩೯ (ಸಿ) ನೇ ಅನುಚ್ಛೇದ ಸಂಪತ್ತು ಕೆಲವೆ ಜನರಲ್ಲಿ ಕೇಂದ್ರೀಕೃತವಾಗಬಾರದು

೩೯ (ಲ) ನೇ ಅನುಚ್ಛೇದ ಸಮಾನ ಕೆಲಸಕ್ಕೆ ಸಮಾನ ವೇತನ

೩೯ (ಇ) ನೇ ಅನುಚ್ಛೇದ ಕೆಲಸಕ್ಕೆ ಬೇಕಾಗುವ ಅಗತ್ಯ ಮಾನವಿಯ ನೆರವು/ಪರಿಸರ ಸೃಷ್ಟಿಸಬೇಕು.

೩೯ (ಎಫ್) ನೇ ಅನುಚ್ಛೇದ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ರಾಜ್ಯವು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು.

೪೧ ಅನುಚ್ಛೇದ ಪೌರನು ತನಗೆ ಸರಿ ಎನಿಸಿದ ಉದ್ಯೋಗ ಶಿಕ್ಷಣ ಪಡೆಯುವ ಮತ್ತು ಸರಕಾರದ ಧನ ಸಹಾಯ ಪಡೆಯುವ ಹಕ್ಕು ಇದೆ ಮತ್ತು ೪೨, ೪೩, ೪೩ ಎ ಕಾರ್ಮಿಕರಿಗೆ ಅಗತ್ಯ ಮಾನವೀಯ ಮತ್ತು ಆರ್ಥಿಕ ನೆರವು ನೀಡಬೇಕು.

೪೪ ಅನುಚ್ಛೇದ ಏಕರೂಪ ಸಿವಿಲ್‌ಕೋಡ್ ಜಾರಿಗೆ ಬರುವಂತೆ ಪ್ರಯತ್ನಿಸಬೇಕು.

೪೫ ಅನುಚ್ಛೇದ ೬–೧೪ ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಚಣದ ಅವಕಾಶ.

೪೬ ಅನುಚ್ಛೇದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಯ ಅಭಿವೃದ್ಧಿಗೊಳಿಸಿ ಅವರು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಕ್ರಮಕೈಗೊಳ್ಳಬೇಕು.

೪೭ ಅನುಚ್ಛೇದ ಜನರ ಜೀವನ ಮಟ್ಟ ಮತ್ತು ಪೌಷ್ಠಿಕತೆಯ ಮಟ್ಟವನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ರಾಜ್ಯದ ಕರ್ತವ್ಯವಾಗಿದೆ.

೪೮ ಅನುಚ್ಛೇದ ಕೃಷಿ ಮತ್ತು ಪಶು ಸಂಗೋಪನೆಯನ್ನು ವೈಜ್ಞಾನಿಕತೆಯಲ್ಲಿ ಅಭಿವೃದ್ಧಿಗೊಳಿಸಿ ಗೋಹತ್ಯೆಯ ನಿಷೇಧಿಸಬೇಕು.

೪೮ ಅನುಚ್ಛೇದ ಎ ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಅರಣ್ಯ ಮತ್ತು ವನ್ಯಜೀವಿಗಳ ರಕ್ಷಿಸಬೇಕು ಎಂದು ಸಂವಿಧಾನದಲ್ಲಿ ಜನರ ಜೀವನಮಟ್ಟ, ಅಭಿವೃದ್ಧಿ ಮತ್ತು ಸಮಾನತೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ.

ಒಟ್ಟಾರೆಯಾಗಿ ರಾಜ್ಯನೀತಿ ನಿರ್ದೇಶಾತ್ಮಕ ತತ್ವಗಳು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತವೆ. ಅದರೂ ಇವು ನ್ಯಾಯ ರಕ್ಷಿತ ಹಕ್ಕುಗಳಲ್ಲ ಎಂದು ಸಂವಿಧಾನ ದೃಢಪಡಿಸಿದೆ.

ಸಂ : ೩೬ ನೇ ವಿಧಿಯ ಪರಿಭಾಷೆಯಲ್ಲಿ ರಾಜ್ಯ ನೀತಿ ನಿರ್ದೇಶಾತ್ಮಕ ತತ್ವಗಳು ನ್ಯಾಯ ರಕ್ಷಿತ ಹಕ್ಕು ಅದನ್ನು ರಾಜ್ಯವು ಜಾರಿಗೊಳಿಸಿಲ್ಲ ಎಂದು ನ್ಯಾಯಲಯಕ್ಕೆ ಹೋಗಿ ದಾವೆ ಹೂಡುವಾದಾಗಲಿ / ಪರಿಹಾರ ಪಡೆಯುವ ಹಾಗಿಲ್ಲ ಆದರೂ ಇವು ರಾಜ್ಯಕ್ಕೆ ಮೂಲಭೂತ ನಿಯಮಗಳಾಗಿವೆ ಎಂದು ಸಾರುತ್ತದೆ. ಆದ್ದರಿಂದ ಸಂವಿಧಾನದಲ್ಲಿರುವ ರಾಜ್ಯ ನೀತಿ ನಿರ್ದೇಶತ್ಮಾಕ ತತ್ವಗಳು ಎಂದು ಬಣ್ಣಿಸಲಾಗಿದೆ. ಬ್ಯಾಂಕಿನಲ್ಲಿ ಹಣವಿಲ್ಲದಾಗ ಚೆಕ್ ನೀಡಿದಂತೆ. ಒಟ್ಟಾರೆಯಾಗಿ ಸಂವಿಧಾನ ೪ನೇ ಭಾಗದಲ್ಲಿ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ಕಾನೂನು ಯೋಜನೆಗಳನ್ನು ರೂಪಿಸುವಂತಾಯಿತು. ಅಲ್ಲದೆ ಸಂವಿಧಾನದ ಭಾಗ ೧೦ರಲ್ಲಿ ಅನುಸೂಚಿತ ಮತ್ತು ಬುಡಕಟ್ಟು ಪ್ರದೇಶಗಳ ಆಡಳಿತ ನಿಯಂತ್ರಣ ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ಸಂಬಂಧಿಸಿದಂತೆ. ೨೪೪ ಎ ಅಸ್ಸಾಂನಲ್ಲಿರುವ ಕೆಲವು ಬುಡಕಟ್ಟು ಪ್ರದೇಶಗಳನ್ನೊಳ ಗೊಂಡಂತೆ ಸ್ವಾತಂತ್ರ್ಯ ರಾಜ್ಯದ ರಚನೆ ಮತ್ತು ಅದಕ್ಕಾಗಿ ಸ್ಥಳೀಯ ವಿಧಾನ ಮಂಡಲವನ್ನು

ಅಥವಾ ಮಂತ್ರಿಮಂಡಲವನ್ನು ಅಥವಾ ಅವೆರಡನ್ನು ಸೃಷ್ಟಿಸುವುದು. ಅಲ್ಲದೆ ಸಂವಿಧಾನದ ೩೩೮ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನಾಂಗದ ಅಭಿವೃದ್ಧಿಗಾಗಿ ರಾಷ್ಟ್ರಪತಿಗಳು ರಾಷ್ಟ್ರೀಯ ಆಯೋಗ ಅಥವಾ ವಿಶೇಷ ಅಧಿಕಾರಿಯನ್ನು ನೇಮಿಸಬಹುದು.

೩೩೯ನೇ ವಿಧಿ ಅನುಸೂಚಿ ಪ್ರದೇಶ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಸಂಬಂಧದಲ್ಲಿ ಒಕ್ಕೂಟದ ನಿಯಂತ್ರಣ.

೩೪೦ನೇ ವಿಧಿಯ ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಅನ್ವೇಷಣೆ ಮಾಡುವುದಕ್ಕಾಗಿ ಅಯೋಗದ ನೇಮಕಾತಿ, ಅಂದರೆ ಹಿಂದುಳಿದ ವರ್ಗಗಳ ಸ್ಥಿತಿಗಳ ಸುಧಾರಿಸಲು ರಾಷ್ಟ್ರಪತಿಗಳು ಜನಾಂಗದ ಅಭಿವೃದ್ಧಿಗಾಗಿ ಒಂದು ಆಯೋಗವನ್ನು ನೇಮಕ ಮತ್ತು ವಿಶೇಷ ಅಧಿಕಾರಿಗಳನ್ನು ನೇಮಿಸಬಹುದು.[೩] "ದಲಿತ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಇರುವ ಸಂವಿಧಾನಿಕ ಕ್ರಮಗಳು ಮತ್ತು ಸಂರಕ್ಷಣಾ ಕ್ರಮಗಳು. ೧ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಅಭಿವೃದ್ಧಿಗೆ ಇರುವ ಸಂವಿಧಾನವು ಭಾರತದ ನಿವಾಸಿಗಳೆಲ್ಲರಿಗೂ ಅಂದರೆ ಪ್ರಜೆಗಳೆಲ್ಲರಿಗೂ ಸಾಮಾಜಿಕ, ರಾಜಕಿಯ, ಆರ್ಥಿಕ ಅವಕಾಶಗಳನ್ನು ಒದಗಿಸಿದೆ. ಅದರಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಶೋಷಣೆ ಮತ್ತು ಅನ್ಯಾಯದಿಂದ ಮುಕ್ತವಾಗಲು ಸಂರಕ್ಷಣಾ ಕ್ರಮಗಳ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸಿದೆ. ಅದರಂತೆ ಸಂವಿಧಾನದ ೪೬ನೇ ಅನುಚ್ಛೇದದ ಪ್ರಕಾರ ರಾಜ್ಯದ ದುರ್ಬಲ ವರ್ಗಗಳ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಜಾಗೂರಕತೆಯಿಂದ ವೃದ್ಧಿಗೊಳಿಸತಕ್ಕದು ಗಿರಿಜನರ ಅಭಿವೃದ್ಧಿಗಾಗಿ ಸಂವಿಧಾನ ನಿರ್ಮಾಪಕರು ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಇಂತಹ ಕ್ರಮಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು.

೧). ಸಂರಕ್ಷಣಾ ಕ್ರಮಗಳು

೨)ಅಭಿವೃದ್ಧಿಯ ಕ್ರಮಗಳು ಸಂರಕ್ಷಣಾ ಕ್ರಮಗಳನ್ನು ಮೂರು ವಿಧವಾಗಿ ವರ್ಗೀಕರಿಸಬಹುದು

೧)ಸಾಮಾಜಿಕ ಸಂರಕ್ಷಣಾ ಕ್ರಮಗಳು

ಸಂವಿಧಾನದಲ್ಲಿ ೧೭.೨೩.೨೪ನೇ ಅನುಚ್ಛೇದದಲ್ಲಿ ಹಾಗೂ ೨೫ (೨) ಬಿ ಅನುಚ್ಛೇದದಲ್ಲಿ ಅವಕಾಶ ಕಲ್ಪಿಸಿದೆ.

೨. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂರಕ್ಷಣೆ

ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ತಮ್ಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಅಭಿವ್ಯಕ್ತಗೊಳಿಸಲು ಸಂವಿಧಾನದ ೧೫ (೪) ೨೯ನೇ ವಿಧಿಯಲ್ಲಿ ಹಾಗೂ ೪೯ನೇ ಅನುಚ್ಛೇದದಲ್ಲಿ ಇಂತಹ ಅವಕಾಶಗಳನ್ನು ಒದಗಿಸಿದೆ.

೩. ರಾಜಕೀಯ ಸಂರಕ್ಷಣೆಗಳು

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳು ರಾಜಕೀಯ ಸ್ವಾತಂತ್ರ್ಯ ಮತ್ತು ಪ್ರಾತಿನಿಧ್ಯ ಒದಗಿಸುವ ದೃಷ್ಟಿಯಿಂದ ಸಂವಿಧಾನದ ೧೩೦ ಸ್ಥಾನಗಳು ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದೆ ಹಾಗೂ ಅವರ ರಾಜಕೀಯ ಅಭಿವೃದ್ಧಿಗೆ ಅವಕಾಶಕಲ್ಪಿಸಿದೆ. ಅಭಿವೃದ್ಧಿಯ ಕ್ರಮಗಳು ಅಲ್ಲದೆ ಸಂವಿಧಾನದ ೭೩ ಮತ್ತು ೨೭ನೇ ತಿದ್ದುಪಡಿ ಮೂಲಕ ೨೪೩ನೇ ವಿಧಿಯಲ್ಲಿ ಸ್ಥಳೀಯ ಸರಕಾರದ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಸ್ಥಾನಗಳು ಮೀಸಲು ಇಡುವುದರ ಜೊತೆಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅನುಸೂಚಿತ ಜಾತಿ ಬುಡಕಟ್ಟುಗಳಿಗೆ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಕ್ರಮಗಳನ್ನು ಅನುಚ್ಛೇದ ೨೭೫(೧) ಮತ್ತು ೩೩೯ (೨)ರಲ್ಲಿ ಈ ಜನಾಂಗದ ಆರ್ಥಿಕ ಹಿತಾಸಕ್ತಿಗಾಗಿ ಮತ್ತು ಅಭಿವೃದ್ಧಿಗಾಗಿ ಸೂಕ್ತ ಕ್ರಮ/ಯೋಜನೆಗಳನ್ನು ಕೈಗೊಂಡು ಅವರನ್ನು ಆರ್ಥಿಕ ಶೋಷಣೆಯಿಂದ ರಕ್ಷಿಸಬೇಕು ಮತ್ತು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ವಿವರಿಸಲಾಗಿದೆ.

ಇತರ ಸಂವಿಧಾನಾತ್ಮಕ ಸಂರಕ್ಷಣಾ ಕ್ರಮಗಳು ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸಂವಿಧಾನಾತ್ಮಕ ರಕ್ಷಣೆ ಭದ್ರತೆಯನ್ನು ಖಾತರಿ ಪಡಿಸಿದೆ. ಈ ಜನಾಂಗದ ಹಿತಾಸಕ್ತಿ ಅಭಿವೃದ್ಧಿ ಮತ್ತು ರಕ್ಷಣೆ ಸಂಬಂಧಿಸಿದಂತೆ ಶಾಸಕಾಂಗ ಸಂವಿಧಾನ ತಿದ್ದುಪಡಿ ಮೂಲಕ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಸಂಸತ್ತಿಗೆ ಮತ್ತು ರಾಷ್ಟ್ರಪತಿಯವರಿಗೆ ವಿಶೇಷ ಅಧಿಕಾರವನ್ನು ನೀಡಿದೆ. ಸಂವಿಧಾನದ ೧೮(೪) ಅನುಚ್ಛೇದದ ಪ್ರಕಾರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರತ್ಯೇಕ ಸವಲತ್ತುಗಳಿಗಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. ಅದೇ ರೀತಿಯಾಗಿ ೧೫ನೇ ಅನುಚ್ಛೇದವು ಜಾತಿ, ಧರ್ಮ, ಲಿಂಗ, ಜನ್ಮಸ್ಥಳ, ವಾಸ, ಮೂಲ ವಂಶ ಮೊದಲಾದವುಗಳ ಆಧಾರದ ಮೇಲೆ ಪ್ರಜೆಗಳಿಗೆ ಯಾವುದೇ ತಾರತಮ್ಯ ಮಾಡಬಾರದು. ಹಾಗೆಯೇ ಸಂವಿಧಾನದ ೧೫(೪) ಉಪವಿಧಿಯ ಪ್ರಕಾರ ಸಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುದೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಪರಿಶಿಷ್ಟ ಜಾತಿ ಬುಡಕಟ್ಟುಗಳಿಗೆ ರಾಜ್ಯವು ಯಾವುದೇ ಉಪಬಂಧವನ್ನು ಮಾಡುವಂತೆ ಪ್ರತಿಬಂಧಿಸತಕ್ಕದ್ದಲ್ಲ.

೧೫(೪) ಅನುಚ್ಛೇದದ ಪ್ರಕಾರ ಹಿಂದುಳಿದಿರುವ ಎಂದರೆ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವುದು ಆದರೆ ಬಾಲಾಜೀ V/S ಸ್ಟೇಟ್ ಆಫ್ ಮೈಸೂರು ಕೇಸಿನಲ್ಲಿ (೧೯೬೩) ಸುಪ್ರೀಂಕೋರ್ಟ ೧೫(೪) ಅನುಚ್ಛೇದ ಮೂಲಗಳು ಕಲ್ಪಿಸಿದ ಮೀಸಲಾತಿಯು ಶೇ ೫೦ ರೊಳಗೆ ಮಾತ್ರ ಇರಬೇಕು ಎಂದು ಅದಕ್ಕಿಂತ ಹೆಚ್ಚಿಗಿರುವ ಮೀಸಲಾತಿಯನ್ನು ಸಂವಿಧಾನದ ವಿರೋಧಿ ಕ್ರಮವೆಂದು ಸುಪ್ರಿಂಕೋರ್ಟ ತೀರ್ಪು ನೀಡಿದೆ. ಅದರಂತೆ ೧೫(೫) ಅನುಚ್ಛೇದದ ಪ್ರಕಾರ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಯು ಸೇರಿದಂತೆ ಇತರ ಖಾಸಗಿ ಅನುಧಾನಿತ ಹಾಗೂ ಅನುದಾನರಹಿತ

ಶಿಕ್ಷಣ ಸಂಸ್ಥೆಗಳಲ್ಲಿ ಎಸ್.ಸಿ./ಎಸ್.ಟಿ., ಓ.ಬಿ.ಸಿ.ಗಳಿಗೆ ಮೀಸಲಾತಿಯನ್ನು ನೀಡಬೇಕೆಂದು ಸಂವಿಧಾನದ ೯೩ನೇ ತಿದ್ದುಪಡಿಯ ಕಾನೂನು ಹೇಳುತ್ತದೆ. ಅದೇ ರೀತಿಯಾಗಿ ಸಂವಿಧಾನದ ೧೬(೪) ಅನುಚ್ಛೇದವು ಉದ್ಯೋಗ ಹಾಗೂ ಸಾರ್ವಜನಿಕ ಸೇವೆಗಳಲ್ಲಿ ಗಿರಿಜನರಿಗೆ ಅವಕಾಶ ನೀಡುವುದಕ್ಕಾಗಿ ಕೆಲವು ಸ್ಥಾನಗಳನ್ನು ಮೀಸಲಿರಿಸಿದೆ. ಅದರ ಪ್ರಕಾರ ರಾಜವು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮತ್ತು ದುರ್ಬಲ ವರ್ಗದವರಿಗೆ ಸೇವೆಯಲ್ಲಿ ಹಾಗೂ ನೇಮಕಾತಿಯಲ್ಲಿ ಸೂಕ್ತ ಪ್ರಮಾಣದಲ್ಲಿ ಮೀಸಲಾತಿ ನೀಡಬೇಕು ಎಂದು ಸಾರುತ್ತಿದೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಸರಕಾರವೆ ಮೀಸಲಾತಿ ನೀತಿಯನ್ನು ಗಾಳಿಗೆ ತೂರಿದ ಸಂಗತಿಗಳನ್ನು ಕಾಣಬಹುದು. ಉದಾಹರಣೆಗೆ ಇವತ್ತಿಗೂ ೨೬ ಸಾವಿರ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ ಅವುಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ಸರಕಾರವೆ ಸ್ಪಷ್ಟಪಡಿಸಿದರೆ. ಆದರೆ ಸ್ವಾತಂತ್ರ್ಯ ಬಂದು ೭೦ ವರ್ಷಗಳಾದರೂ ಇನ್ನು ಕ್ರಮಕೈಗೊಂಡಿಲ್ಲ ಮತ್ತು ಸೂಕ್ತ ಅಭ್ಯರ್ಥಿಗಳು ಇಲ್ಲ ಎಂಬ ಕಾರಣಗಳನ್ನು ನೀಡಿ ರಿರ್ಜರ್ವೇಶನ್ ಎಂಬ ಕಾನೂನಿನ ಮೂಲಕ ಅನ್ಯಾಯ ಮಾಡಲಾಗುತ್ತದೆ. ಇದೇ ಅಭಿಪ್ರಾಯವನ್ನು ೧೯೬೭ ಜನರಲ್ ಮ್ಯಾನೇಜರ V/S ರಂಗಾಚಾರಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ ತಿಳಿಸುತ್ತದೆ. ಸಂವಿಧಾನದ ೧೯ (೫) ಅನುಚ್ಛೇದವು ಸಂವಿಧಾನವು ಪ್ರಜೆಗಳಿಗೆ ತಮಗೆ ಇಷ್ಟಬಂದ ಪ್ರದೇಶದಲ್ಲಿ ವಾಸಿಸುವ ಹಾಗೂ ವೃತ್ತಿಯನ್ನು ಕೈಗೊಳ್ಳುವ ವ್ಯಾಪಾರ ಮಾಡುವ ಹಕ್ಕುಗಳನ್ನು ಕಲ್ಪಿಸಿದೆ ಆದರೆ ೧೯(೫) ಅನುಚ್ಛೇದ ಪ್ರಕಾರ ಗಿರಿಜನರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸೇರಿದ ಆಸ್ತಿಯನ್ನು ಕೊಂಡುಕೊಳ್ಳವುದನ್ನು ಹಾಗೂ ಆ ಪ್ರದೇಶದಲ್ಲಿ ವಾಸಿಸುವುದನ್ನು ನಿಷೇಧಿಸಲಾಗಿದೆ. ಬುಡಕಟ್ಟ ಜನರು ಸಾಮಾನ್ಯವಾಗಿ ಆರ್ಥಿಕವಾಗಿ ಹಿಂದುಳಿದವರೂ ಆಗಿರುವುದರಿಂದ ಅವರು ಅನಕ್ಷರತೆ ಹಾಗೂ ಮುಗ್ಧತೆಯ ಲಾಭ, ದುರ್ಲಭ ಪಡೆದು ಅವರ ಆಸ್ತಿಯನ್ನು ಇತರರು ಕಬಳಿಸಬಹುದು ಎಂಬ ಉದ್ದೇಶದಿಂದ ಬುಡಕಟ್ಟು ಜನರಿಂದ ಬುಡಕಟ್ಟೆತರರಿಗೆ ಆಸ್ತಿ ವರ್ಗಾಯಿಸುವುದನ್ನು ನಿಷೇಧಿಸಲಾಗಿದೆ. ಅದೇ ರೀತಿಯಾಗಿ ಸಂವಿಧಾನದ ೨೩ನೇ ಅನುಚ್ಛೇದವು ಬಲತ್ಕಾರದ ದುಡಿಮೆ, ಸಂಬಳವಿಲ್ಲದ ಉಚಿತ ದುಡಿಮೆಯನ್ನು ಶೋಷಣೆ ಎಂದು ಪರಿಗಣಿಸಿದೆ ಬುಡಕಟ್ಟು ಜನಾಂಗದ ಬಹುತೇಕ ಜನರು ಬಲತ್ಕಾರ/ಒತ್ತಾಯದ ದುಡಿಮೆ ಹಾಗೂ ಶೋಷಣೆಗೆ ಒಳಗಾಗಿರುವುದರಿಂದ ಆ ಜನಾಂಗಕ್ಕೆ ಸಂಬಂಧಿಸಿದಂತೆ ಇದು ಬಹು ಉಪಯೋಗಕರವಾದ ಸಂವಿಧಾನದ ಅನುಚ್ಛೇದನವಾಗಿದೆ. ಅದರಂತೆ ೨೯ನೇ ಅನುಚ್ಛೇದವು ಸಹ ಭಾಷಾ ಅಲ್ಪಾಸಂಖ್ಯಾತ ಪ್ರಜೆಗಳು ತಮ್ಮ ಭಾಷೆ ಸಂಸ್ಕೃತಿ ಹಾಗೂ ಲಿಪಿಯನ್ನು ರಕ್ಷಿಸಿಕೊಳ್ಳುವ ಅವಕಾಶವನ್ನು ಒದಗಿಸಿದೆ ಮತ್ತು ಸಂವಿಧಾನದ ೪೬ನೇ ಅನುಚ್ಛೇದವು ಅನುಸೂಚಿತ ಜಾತಿ/ಬುಡಕಟ್ಟು ಹಾಗೂ ದುರ್ಬಲ ವರ್ಗದವರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ರಾಜ್ಯ ಸರಕಾರಗಳು ಕ್ರಮ ಕೈಗೊಳ್ಳಬೇಕು. ಇವು ರಾಜ್ಯ ನೀತಿ ನಿರ್ದೇಶಾತ್ಮಕ ತತ್ವಗಳು ಯಾವ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಹಾಗಾಗಿ ದುರ್ಬಲ ವರ್ಗದವರು ದುರ್ಬಲರಾಗಿ ಮುಂದವರೆಯುವಂತಾಯಿತು. ಅದೇ ರೀತಿಯಾಗಿ ಸಂವಿಧಾನದ ೧೯೪ನೇ ಅನುಚ್ಛೇದವು ಗಿರಿಜನರು ಅಧಿಕವಾಗಿರುವ ಬಿಹಾರ, ಒರಿಸ್ಸಾದಲ್ಲಿ

ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಹಾಗೂ ಮದ್ಯ ಪ್ರದೇಶ ರಾಜ್ಯಗಳಲ್ಲಿ ಗಿರಿಜನರ ಅಭಿವೃದ್ಧಿ ಹಾಗೂ ಕ್ಷೇಮಪಾಲನೆಗಾಗಿ ಮಂತ್ರಿಮಂಡಲದಲ್ಲಿ ಒಬ್ಬ ಮಂತ್ರಿಯನ್ನು ಸರಕಾರದಲ್ಲಿ ನೇಮಿಸತಕ್ಕದ್ದು ಈ ಮಂತ್ರಿಯು ಕೇವಲ ಬುಡಕಟ್ಟುಜನರು ಜನಾಂಗದ ಅಭಿವೃದ್ಧಿಗಾಗಿ ಎಳಿಗಾಗಿ ಕಾರ್ಯನಿರ್ವಹಿಸತಕ್ಕದು ಎಂದು ಅದರಂತೆ ಬಿಹಾರದಿಂದ ಜಾರ್ಖಂಡ್ ಪ್ರತ್ಯೇಕ ರಾಜ್ಯವಾಗಿ ಸಂವಿಧಾನದ ೧೦೫ನೇ ತಿದ್ದುಪಡಿ ಮೂಲಕ ಹೊಸರಾಜ್ಯವನ್ನು ಸೃಷ್ಟಿಸಲಾಯಿತು. ಆಗ ಬಿಹಾರ ಸರಕಾರದ ಮಂತ್ರಿ ಮಂಡಲದಲ್ಲಿ ಗಿರಿಜನರ ಹಿತರಕ್ಷಣಾ ಮಂತ್ರಿ ಶಾಖೆಯನ್ನು ಅಳವಡಿಸಿ ಅಧಿಕೃತಗೊಳಿಸಿದರು. ಅಲ್ಲದೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ರಾಜಕೀಯ ಪ್ರಾತಿನಿಧ್ಯ ಒದಗಿಸುವ ಉದ್ದೇಶದಿಂದ ಮತ್ತು ಡಾ. ಬಿ.ಆರ್. ಅಂಬೇಡ್ಕರವರ ಅವಿರತ ಶ್ರಮದಿಂದ ಸಂವಿಧಾನದ ೩೩೦, ೩೩೨ ಹಾಗೂ ೩೩೪ ಅನುಚ್ಛೇದಗಳ ಪ್ರಕಾರ ವಿಧಾನಸಭೆಯ ಪಟ್ಟಿಯಲ್ಲಿ ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಸ್ಥಾನಗಳ ಮೀಸಲಾತಿಗೆ ಅವಕಾಶ ಕಲ್ಪಿಸಿದೆ. ೩೩೨ನೇ ಅನುಚ್ಛೇದವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ವಿಧಾನಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡಬೇಕು. ಅದೇ ರೀತಿಯಾಗಿ ೩೩೪ನೇ (ಅನುಚ್ಛೇದವು ಲೋಕಸಭೆ ಮತ್ತು ವಿಧಾನ ಸಭೆಯಲ್ಲಿ ಮೀಸಲಾಗಿರುವ ಸ್ಥಾನಗಳು. ೧೦ ವರ್ಷಗಳ ನಂತರ ನಿಂತು ಹೋಗತಕ್ಕದು ಎಂದು ಆನಂತರ ೪೦ ವರ್ಷಗಳ ನಂತರ ರದ್ದಾಗತಕ್ಕದು ಎಂದು ವಿವರಿಸಿದೆ ಅಂದರೆ ಸಾಮಾನ್ಯವಾಗಿ ಮೊದಲ ಹತ್ತು ವರ್ಷಕ್ಕೆ ಮೀಸಲಾತಿಯನ್ನು ಅನುಸರಿಸಿದರು. ಆದರೆ ೩೩೪ನೇ ವಿಧಿಯನ್ನು ತಿದ್ದುಪಡಿ ಮಾಡಿ ಇದನ್ನು ೧೯೯೦ರ ವರೆಗೂ ವಿಸ್ತರಿಸಿದರು ಈಗ ಮತ್ತೆ ೧೦ ವರ್ಷಗಳವರಿಗೆ ವಿಸ್ತರಿಸಲಾಗಿದೆ. ಆದರೆ ದುರಂತವೆಂದರೆ ರಾಜಕೀಯ ಮೀಸಲಾತಿಯಿಂದ ಕೆಲವೆ ಜನರು ಸಿರಿವಂತರಾದರು. ಇವರನ್ನು ದಲಿತ ಜನಾಂಗದಿಂದ ಬೇರ್ಪಡಿಸಿ ಅವರನ್ನು ಒಂದು ವರ್ಗವಾಗಿ ತೆಗೆದು ಕೊಳ್ಳುವಷ್ಟರ ಮಟ್ಟಿಗೆ ಈ ರಾಜಕೀಯ ಮೀಸಲಾತಿ ಉಪಯೋಗ ಆಗದಿರುವುದು ದಲಿತ ಜನಾಂಗ ಸಮಸ್ಯೆಗೆ ಉತ್ತರವಲ್ಲ, ಹಾಗೂ ಅಸ್ಪೃಶ್ಯತೆಯನ್ನು ತೊಡೆದು ಹಾಕುವಲ್ಲಿ ಸಮರ್ಥ ಮಾರ್ಗವೂ ಅಲ್ಲ. ಆದರೂ ಮೀಸಲಾತಿ ಯೋಜನೆಯು ದಲಿತರನ್ನು ಉತ್ತಮ ಜೀವನಕ್ಕೆ ದಾರಿಯಾಗಿದೆ. ಅದರಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನಾಂಗದವರ ಅಭಿವೃದ್ಧಿ ಕ್ರಮಗಳ ಬಗ್ಗೆ ಅಧ್ಯಯನ ನಡೆಸಲು ಪ್ರತ್ಯೇಕ ಅಧಿಕಾರಿಯನ್ನು ನೇಮಿಸುವ ಅವಕಾಶ ಕಲ್ಪಿಸಿದೆ ಎಸ್.ಸಿ. / ಎಸ್.ಟಿ. ಗಳಿಗೆ ಒದಗಿಸಿರುವ ಭದ್ರತೆ ಹಾಗೂ ಸ್ಥಿತಿಗಳ ವರದಿಯನ್ನು ತಯಾರಿಸಿ ರಾಷ್ಟ್ರಪತಿಗಳಿಗೆ ಒಪ್ಪಿಸುವದು ಈ ಅಧಿಕಾರಿಯ ಜವಾಬ್ದಾರಿಯಾಗಿ ರಾಷ್ಟ್ರಪತಿಗಳ ಕ್ರಮಕೈಗೊಳ್ಳಬಹುದು ಅದೇ ರೀತಿಯಾಗಿ ೩೩೯ (೧) ಅನುಚ್ಛೇದವು ಸಂವಿಧಾನ ಜಾರಿಗೆ ಬಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಎಸ್.ಸಿ./ಎಸ್.ಟಿ. ಗಳಿರುವ ಪ್ರಾಂತ್ಯಗಳ ಆಡಳಿತ ಮೇಲೆ ವರದಿಯನ್ನು ತಯಾರಿಸಲು ಒಂದು ಆಯೋಗವನ್ನು ರಚಿಸಬೇಕು ಈ ಆಯೋಗವು ಪ್ರದೇಶಗಳ ಆಳ್ವಿಕೆ ಮತ್ತು ಬುಡಕಟ್ಟು ಜನಾಂಗದವರ ಸಂರಕ್ಷಣೆಗಾಗಿ ತೆಗೆದುಕೊಂಡು ತೀರ್ಮಾನಗಳ ಕುರಿತು ಸವಿಸ್ತಾರವಾದ ವರದಿಯನ್ನು ತಯಾರಿಸಿ ರಾಷ್ಟ್ರಪತಿಯವರಿಗೆ ಒಪ್ಪಿಸತಕ್ಕದ್ದು. ಈ ವಿಷಯದಲ್ಲಿ ಯಾವ ರಾಷ್ಟ್ರಪತಿಯೂ

ಸಹ ಕ್ರಾಂತಿಕಾರಕ ಸುಧಾರಣೆ ಅಥವಾ ಬದಲಾವಣೆಯನ್ನು ತರಲು ಪ್ರಯತ್ನಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ನೇಮಿಸಲಾಗಿದೆ. ಅದರ ಕಾರ್ಯ ಮತ್ತು ಕೆಲಸದ ಸ್ವರೂಪವು ಬದಲಾಗಿಲ್ಲ. ಹೀಗಾಗಿ ಎಸ್.ಸಿ. / ಎಸ್.ಟಿ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಕೊಳ್ಳಲು ಹೊಸ ಹೊಸ ಕಾಯ್ದೆಗಳು ಹೆಚ್ಚುತ್ತಾ ಹೋಗುತ್ತವೆ. ಅದರ ಪರಿಹಾರ ಮಾತ್ರ ಇನ್ನು ಸಿಕ್ಕಿಲ್ಲ. ಅದೇ ರೀತಿಯಾಗಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂವಿಧಾನದ ೨೭೫(೧)ನೇ ಅನುಚ್ಛೇದ ಮತ್ತು ೩೩೯(೨) ಅನುಚ್ಛೇದಗಳಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿದೆ. ೨೭೫(೨)ನೇ ಅನುಚ್ಛೇದವು ರಾಜ್ಯ ಸರಕಾರಗಳು ಗಿರಿಜನರು ಅಭಿವೃದ್ಧಿಗೆ ಕೈಗೊಳ್ಳುವ ಕಾರ್ಯಕ್ರಮಕ್ಕೆ ಸಹಾಯ ಮಾಡಲು ಕೇಂದ್ರ ಸರಕಾರವು ಗ್ರಾಂಟ್ ಇನ್ ಎಡ್ (ಅನುದಾನ) ಗಳನ್ನು ನೀಡುತ್ತಾರೆ. ಆದರಂತೆ ೩೩೯(೨) ಅನುಚ್ಛೇದದ ಪ್ರಕಾರ ಕೇಂದ್ರ ಸರಕಾರವು ಗಿರಿಜನ ಅಭಿವೃದ್ಧಿ ಸಂರಕ್ಷಣೆಗಾಗಿ ರೂಪಿಸಿದಂತಹ ಯೋಜನೆಗಳನ್ನು ಗಿರಿಜನರುವ ಪ್ರದೇಶದಲ್ಲಿ ಜಾರಿಗೊಳಿಸಬೇಕೆಂದು ರಾಜ್ಯ ಸರಕಾರಗಳಿಗೆ ಆದೇಶಿಸುತ್ತದೆ.[೪]

ಸಂವಿಧಾನ ಜಾರಿಗೆ ಬಂದಾಗಿನಿಂದಲೂ ಭಾರತವು ಸಮಾಜವಾದಿ, ಜಾತ್ಯತೀತ ರಾಷ್ಟ್ರ, ಪ್ರಜಾಸತ್ತಾತ್ಮಕ, ಗಣರಾಜ್ಯ ನ್ಯಾಯ ಸಮಾನತೆ, ಸೋಹದರತ್ವ ಎಂಬ ದೃಷ್ಟಿಕೋನದಿಂದಲೇ ನೋಡುತ್ತ ಹೊರಟಿದ್ದೇವೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಇಷ್ಟಾದರೆ ಸಾಲದು. ಅದನ್ನು ನಾವು ಹೊಸ ದೃಷ್ಟಿಕೋನದಿಂದ ನೋಡುವ ಅವಶ್ಯಕತೆ ಇದೆ ಎಂದಿದ್ದು ನಾವು ಇಲ್ಲಿಯವರಿಗೆ ಯೋಜನೆ ಇವೆ ಕಾರ್ಯಕ್ರಮಗಳು ಅದೇ ಭಾಷಣ ಮಾಡುತ್ತ ಬಂದಿದ್ದೇವೆ. ಇದರಲ್ಲಿ ಏನು ಮಾರ್ಪಾಡು / ಬದಲಾವಣೆ ಮಾಡಿಕೊಂಡಿಲ್ಲ. ಸಂವಿಧಾನ ಒಂದು ತಲೆಮಾರು ಕಳೆದರು ಸಂವಿಧಾನದಲ್ಲಿರುವ ಅಂಶಗಳಿಗೆ ಹೊಸ ಪರಿಭಾಷೆಯನ್ನು ಕಂಡುಕೊಳ್ಳಲೆ ಇಲ್ಲ ಇದರಲ್ಲಿಯೇ ಅಲ್ಪ ಸ್ವಲ್ಪ ಬದಲಾವಣೆಗಳು ಮಾಡುತ್ತಾ ಮತ್ತು ತೇಪೆಹಾಕುವ ಕೆಲಸ ಮಾಡುತ್ತಾ ಬಂದಿದ್ದೇವೆ ಒಂದಕ್ಕೂ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಅವುಗಳನ್ನು ಒಳ್ಳೆಯ ದೃಷ್ಟಿಕೋನದಿಂದ ಜಾರಿಗೊಳಿಸದೆ ಇರುವುದು ಮತ್ತೊಂದು ಪರ್ಯಾವಲೋಚನೆಗೆ ಎಡಮಾಡಿಕೊಡುತ್ತದೆ.

ನಮ್ಮ ಸಂವಿಧಾನವನ್ನು ಜಗತ್ತಿನಲ್ಲಿಯೇ ಉತ್ತಮ ಸಂವಿಧಾನ ಎಂದು ಕರೆಯಲಾಗಿದೆ. ಇಷ್ಟೊಂದು ವಿವರವಾಗಿ ಎಲ್ಲಾ ವಿಷಯಗಳ ಬಗ್ಗೆ ವಿವರಿಸಲಾಗಿದೆ. ಆದರೆ ಅದನ್ನು ಜಾರಿಗೊಳಿಸುವ ಕ್ರಮ ಮಾತ್ರ ಸರಿಯಾಗಿಲ್ಲ. ಆರ್ಥಿಕ ನ್ಯಾಯ ಒದಗಿಸುವ ದೃಷ್ಟಿಯಿಂದ ವಿಶೇಷ ಉಪಬಂಧಗಳನ್ನು ಅಳವಡಿಸಿದೆ, ಹಿಂದುಳಿದ ವರ್ಗಗಳನ್ನು ಗುರುತಿಸಿ ಪಟ್ಟಿ ಮಾಡಿ ಅವರಿಗೆ ಸೂಕ್ತ ರಕ್ಷಣೆ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಬೇಕಾದ ಕ್ರಮಗಳನ್ನು ಜಾರಿಗೆ ತಂದು ಜಾರಿ ಮಾಡಬೇಕೆಂದು ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಇರುವ ೩೩೮ರ ಸಂರಕ್ಷಣೆಯಂತೆ ಸಂವಿಧಾನದಲ್ಲಿ ಹಿಂದುಳಿದ ವರ್ಗಗಳಿಗೆ

೩೪೦ನೇ ಅನುಚ್ಛೇದವು ಸಂರಕ್ಷಣಾ ಕ್ರಮಗಳನ್ನು ಒದಗಿಸಿದೆ. ಸಂವಿಧಾನದ ೪೬ನೇ ಅನುಚ್ಛೇದವು ಎಸ್.ಸಿ. / ಎಸ್.ಟಿ. ಮತ್ತು ಇತರ ದುರ್ಬಲ ವರ್ಗ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿ ಎಲ್ಲಾರಿಗೂ ಸಾಮಾಜಿಕ ನ್ಯಾಯ ಒದಗಿಸಿ ಶೋಷಣೆಯಿಂದ ರಕ್ಷಿಸಬೇಕು ಎಂದು ನಿರ್ದೇಶಿಸುತ್ತದೆ.

ಅನುಚ್ಛೇದ ೩೪೦(೧) ಪ್ರಕಾರ ಭಾರತದ ರಾಜ್ಯ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಒಕ್ಕಲು ಕೇಂದ್ರ ಸರಕಾರಕ್ಕೆ ಶಿಪಾರಸ್ಸು ಮಾಡಲು ಒಂದು ರಾಷ್ಟ್ರೀಯ ಆಯೋಗವನ್ನು ರಾಷ್ಟ್ರಪತಿಗಳು ನೇಮಿಸಬಹುದು. ಆಯೋಗವನ್ನು ನೇಮಿಸುವ ಆದೇಶದಲ್ಲಿ ಆಯೋಗವು ಅನುಸರಿಸಬೇಕಾದ ಪ್ರಕ್ರೀಯೇಯನ್ನು ನಿರ್ಧಿಷ್ಟ ಪಡಿಸಬೇಕು. ಅನುಚ್ಛೇದ ೩೪೦(೨)ರ ಪ್ರಕಾರ ರಾಷ್ಟ್ರಪತಿ ಆದೇಶ ಪಡೆದು ನೇಮಕಗೊಂಡ ಆಯೋಗವು ತನಗೆ ಒಪ್ಪಿಸಿದ ವಿಷಯಗಳ ಬಗ್ಗೆ ಅನ್ವೇಷಣೆ ಮಾಡಬೇಕು ಮತ್ತು ಆ ಆಯೋಗವು ಹಿಂದುಳಿದ ವರ್ಗಗಳು ಅನುಭವಿಸುತ್ತಿರುವ ತೊಂದರೆಗಳನ್ನು ಅನ್ವೇಷಣೆ ಮಾಡಿದ ಮೇಲೆ ಎಲ್ಲವನ್ನು ದಾಖಲಿಸಿ ಅವುಗಳಿಗೆ ಸೂಕ್ತ ಪರಿಹಾರಗಳ ರೂಪದಲ್ಲಿ ಶಿಫಾರಸ್ಸುಗಳನ್ನು ಒಳಗೊಂಡ ವರದಿಯನ್ನು ರಾಷ್ಟ್ರಪತಿಗಳಿಗೆ ಒಪ್ಪಿಸಬೇಕು. ಆ ಮೂಲಕ ಅವರ ಹಿತಾಸಕ್ತಿಯನ್ನು ರಕ್ಷಿಸಬೇಕು ಎಂದು ಖಾತರಿಪಡಿಸಿದೆ. ಅನುಚ್ಛೇದ ೩೪೦ (೩) ರ ಪ್ರಕಾರ ಆಯೋಗವು ಒಪ್ಪಿಸಿದ ವರದಿ ಪ್ರಗತಿಯ ಆಧಾರದ ಮೇಲೆ ಕೈಗೊಂಡ ಕ್ರಮವನ್ನು ವಿವರಿಸುವ ಒಂದು ವಿವರಣೆ ಪತ್ರದೊಂದಿಗೆ ರಾಷ್ಟ್ರಪತಿಯು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವ ವ್ಯವಸ್ಥೆ ಮಾಡಬೇಕು. ಸಂವಿಧಾನದ ಅನುಚ್ಛೇದ ೩೪೦ ರ ಅಡಿಯಲ್ಲಿ ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಅಧ್ಯಯನ ನಡೆಸಿ ಸಮಸ್ಯೆಗಳನ್ನು ನಿವಾರಿಸಲು ಭಾರತ ಸರಕಾರ ಈ ಕೆಳಗಿನ ಆಯೋಗಗಳನ್ನು ನೇಮಿಸಿ ಅವರ ಸಮಸ್ಯೆ ಮತ್ತು ಪ್ರಗತಿ ಪರಿಶಿಲನೆಗಾಗಿ ಕಾಲಕಾಲಕ್ಕೆ ಆಯೋಗಗಳನ್ನು ನೇಮಿಸಲಾಯಿತು. ಮಂಡಲ ಆಯೋಗ ೧೯೭೮ ರಲ್ಲಿ ಜನತಾ ಸರಕಾರವು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಒದಗಿಸುವ ಉದ್ದೇಶದಿಂದ ಆಗಿನ ಕೇಂದ್ರಮಂತ್ರಿಯಾಗಿದ್ದ ಬಿ.ಪಿ ಮಂಡಲ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತು. ಈ ವರದಿಯು ೧೯೯೨ ಜಾರಿಗೆ ಬಂದು ಹಿಂದುಳಿದ ವರ್ಗಗಳಿಗೆ ಸಂವಿಧಾನದಲ್ಲಿ ೨೭ ಒಳ ಮೀಸಲಾತಿಯನ್ನು ಒದಗಿಸಿತು. ಆರ್. ಎನ್. ಆರ್ ಪ್ರಸಾದ ಆಯೋಗ ೧೯೯೩ ಇದು ಸಹ ಮಂಡಲ ವರದಿಯ ಪರಾಮರ್ಶಿಸಿ ಯತವತ್ತಾಗಿ ಅದೇ ಶಿಪಾರಸ್ಸುಗಳನ್ನು ಮಾಡಿದೆ. ಸಂವಿಧಾನದ ೩೪೦ರ ಅನುಚ್ಛೇದದ ಅಡಿಯಲ್ಲಿ ಕರ್ನಾಟಕ ಸರಕಾರ ಈ ಕೆಳಗಿನಂತೆ ಆಯೋಗಗಳನ್ನು ರಚಿಸಿತು.

೧) ನಾಗನಗೌಡ ಆಯೋಗ ೧೯೬೦

೨) ಎಲ್ ಜಿ ಹಾವನೂರು ಆಯೋಗ ೧೯೭೨

೩) ಓ ಚಿನ್ನಪ್ಪರೆಡ್ಡಿ ಅಯೋಗ ೧೯೮೮

ಸಂವಿಧಾನ ೩೪೦ ಅಡಿಯಲ್ಲಿ ನೇಮಕಗೊಳ್ಳುವ ಆಯೋಗಗಳು ಹಿಂದುಳಿದ ವರ್ಗಗಳಿಗೆ ಉದ್ಯೋಗ ಅವಕಾಶ ಕಲ್ಪನೆ ಬೇಕಾದ ಮೀಸಲಾತಿ ಮತ್ತು ಇತರ ಸೌಲಭ್ಯಗಳು ಮತ್ತು ಅವರಿಗೆ ನೀಡಬೇಕಾದ ರಕ್ಷಣೆ ಮೊದಲಾದವುಗಳ ಬಗ್ಗೆ ಶಿಫಾರಸ್ಸು ಮಾಡುತ್ತವೆ.

ಪಂಚವಾರ್ಷಿಕ ಯೋಜನೆಗಳು ಆರ್ಥಿಕ ಯೋಜನೆಗಳು ಎಂಬುದು ಇಪ್ಪತ್ತನೆಯ ಒಂದು ಪ್ರಮುಖ ಬೆಳವಣಿಗೆಯಾಗಿದ್ದು, ಇಂದು ಜಗತ್ತಿನಲ್ಲಿ ಎಲ್ಲರ ಗಮನಸೆಳೆದಿದೆ. ಆರ್ಥಿಕ ಯೋಜನೆಗಳ ಯುಗಕ್ಕೆ ಸೋವಿಯತ್ ರಷ್ಯ ಮೊಟ್ಟಮೊದಲ ಬಾರಿಗೆ ತಳಪಾಯ ಹಾಕಿತು. ೧೯೨೯-೩೨ರ ನಡುವೆ ಸಂಭವಿಸಿದ ಪ್ರಪಂಚದ ಮಹಾ ಆರ್ಥಿಕ ಮುಗ್ಗಟ್ಟಿನಿಂದಾಗಿ ಅನೇಕ ಆರ್ಥಿಕ ವ್ಯವಸ್ಥೆಗಳನ್ನು ಅಸ್ತವ್ಯಸ್ತಗೊಳಿಸಿತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಹಾನಿಗಳನ್ನ ಸರಿಪಡಿಸಲು ಎಲ್ಲಾ ದೇಶಗಳು ಒಂದು ಹೊಸ ವ್ಯವಸ್ಥೆಯ ಉಗಮಕ್ಕೆ ಕಾರಣವಾಯಿತು. ಇದೇ ವೇಳೆಯಲ್ಲಿ ೨೦ನೇ ಶತಮಾನದಲ್ಲಿ ಬೆಳೆವಣಿಗೆ ಕಂಡ ಕಲ್ಯಾಣ ರಾಜ್ಯದ ಪರಿಕಲ್ಪಲನೆಯ ಯೋಜನೆ ಆರ್ಥಿಕ ಅಭಿವೃದ್ಧಿ ಅನಿವಾರ್ಯಗೊಳ್ಳಿಸಿತು ಹೀಗೆ ವಿವಿದ ಕಾರಣಗಳಿಂದಾಗಿ ಆರ್ಥಿಕ ಯೋಜನೆಗಳ ಮಹತ್ವ ಹೆಚ್ಚಿತು ರಷ್ಯಾ ದೇಶವನ್ನು ಆರ್ಥಿಕ ಯೋಜನೆಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರೆಪಿಸಿತು ಪರಿಣಾಮವಾಗಿ ಅಮೇರಿಕಾ, ಬ್ರಿಟನ್, ಇಟಲಿ, ಜರ್ಮನಿ ಮುಂತಾದ ದೇಶಗಳು ಯೋಜನೆಗಳನ್ನು ಕಾರ್ಯಗತಮಾಡಲು ಮುಂದಾದವು. ಭಾರತವು ಕೂಡ ಈ ವಿಷಯದಲ್ಲಿ ಹಿಂದೆ ಬಿಳಲಿಲ್ಲ ಸ್ವಾತಂತ್ರ್ಯ ನಂತರ ತೀವ್ರ ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಒತ್ತುನೀಡಿ ಯೋಜನೆಗಳ ಯುಗವನ್ನು ಆರಂಭಿಸಿದ್ದು ಇಂತಹ ಯೋಜನೆಗಳು ೧೯೫೧ರಿಂದ ಆರಂಭಿಸಿತು. ಅದರಂತೆ ಕರ್ನಾಟಕದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಸಹ ಜಾರಿಗೆ ತರಲಾಯಿತು.

ಅಭಿವೃದ್ಧಿ ಸಂಬಂಧಿಸಿದಂತೆ ಮತ್ತು ಪಂಚವಾರ್ಷಿಕ ಯೋಜನೆಗಳ ಸಾಧಕ ಭಾದಕ ವಿಶ್ಲೇಷಿಸಿದರೆ ಒಂದು ಭಾಷೆ, ಸಂಸ್ಕೃತಿ, ಚರಿತ್ರೆ ಇತ್ಯಾದಿಗಳ ನೆಲೆಯಲ್ಲಿ ತನ್ನ ಪ್ರತ್ಯೇಕತೆಯನ್ನು ಸಾಧಿಸಿ ಪ್ರತ್ಯೇಕ ರಾಜ್ಯ ಪಡೆದ ಕರ್ನಾಟಕ ಪಂಚಾವಾರ್ಷಿಕ ಯೋಜನೆಗಳಲ್ಲಿ ತನ್ನ ಪ್ರತ್ಯೇಕತೆಯನ್ನು ಬಳಿಸಿಕೊಂಡಿಲ್ಲ. ಇದರಲ್ಲಿ ಕೇಂದ್ರ ಸರಕಾರ ಮುಂಚೂಣೆಗೆ ತಂದ ಅಭಿವೃದ್ಧಿ ಮಾದರಿ ಹಾಗೂ ಯೋಜನೆಗಳನ್ನು ಯಾಥಾ ರೂಪದಲ್ಲಿ ಅಥವಾ ಸಣ್ಣ ಪುಟ್ಟ ಬದಲಾವಣೆಯೋಂದಿಗೆ ಕರ್ನಾಟಕ ಅನುಸರಿಸಿದೆ. ಉತ್ಪಾದನ ಪ್ರಮಾಣ ಹೆಚ್ಚಿಸುವುದಕ್ಕೆ ಈ ಮಾದರಿ ಹೆಚ್ಚಿನ ಒತ್ತು ನೀಡುತ್ತದೆ. ಉತ್ಪಾದನಾ ಸಂಬಂಧಗಳನ್ನು ಸುಧಾರಿಸುವುದಕ್ಕೆ ಅಥವಾ ಉತ್ಪಾದನಾ ಪರಿಕರಗಳನ್ನು ಸಾಮಾಜೀಕರಣಗೋಳಿಸುವುದಕ್ಕೆ ಈ ಮಾದರಿಯಲ್ಲಿ ವಿಶೇಷ ಅವಕಾಶವಿಲ್ಲ ಎರಡು ಹಲವಾರು ಕಾರಣಗಳಿಂದಾಗಿ ಪ್ರತ್ಯೇಕ ಯೋಜನೆಗಳನ್ನು ರೂಪಿಸಿಕೊಳ್ಳಲು ಕರ್ನಾಟಕಕ್ಕೆ ಸಾಧ್ಯವಾಗಲಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರಕಾರ ಅಧಿಕಾರದಲ್ಲಿದ್ದದ್ದು ಆ ಪ್ರತ್ಯೇಕತೆಯನ್ನು ಸಾಂಸ್ಕೃತಿಕವಾಗಿ ಕಟ್ಟಿಕೊಂಡಿರುವುದು. ಇತ್ಯಾದಿಗಳು ಪ್ರತ್ಯೇಕ ಯೋಜನೆಗಳನ್ನು ರೂಪಿಸಿಕೊಳ್ಳುವಲ್ಲಿ ಪ್ರಮುಖ ಪಡೆಗಳಾದವು. ಮೂರು ಕೇಂದ್ರ ಅನುಸರಿಸಿದ ಅಭಿವೃದ್ಧಿ ಮಾದರಿಯಲ್ಲಿ ಭೂಮಿ ಬಂಡವಾಳ

ಮತ್ತು ಆಧುನಿಕ ಸ್ಕಿಲ್ ಪ್ರಮುಖ ಪಾತ್ರ ವಹಿಸುತ್ತದೆ. ಅಂದರೆ ಭೂಮಿ ಬಂಡವಾಳ ಮತ್ತು ಆಧುನಿಕ ಸ್ಕಿಲ್ ಇದ್ದವರಿಗೆ ಮಾತ್ರ ಕೇಂದ್ರ ಅನುಸರಿಸಿದ ಅಭಿವೃದ್ಧಿ ಮಾದರಿಯನ್ನು ಹೆಚ್ಚಿನ ಲಾಭ ಪಡೆಯಲು ಸಾಧ್ಯ. ಈ ಮೂರರಲ್ಲಿ ಭೂಮಿ ಬಂಡವಾಳ ಮತ್ತು ಸ್ಕಿಲ್ ಒಂದು ಇಲ್ಲದೆದ್ದರೆ. ಇಂತಹ ಮಾದರಿಯಿಂದ ಹೊರಗೆ ಉಳಿಯಬೇಕಾಗುತ್ತದೆ. ಇದೇ ಮಾದರಿಯನ್ನು ಏಕರೂಪದಲ್ಲಿ ಕಾರ್ಯಗತಗೊಳಿಸಲು ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ವಿನಿಯೋಜನೆ ಮಾಡಿದೆ. ಇದರಿಂದ ಕರ್ನಾಟಕದಲ್ಲಿ ಭೂಮಿ, ಬಂಡವಾಳ ಆಧುನಿಕ ಸ್ಕಿಲ್ ಇದ್ದವರು ಯೊಜನೆಗಳ ಹೆಚ್ಚಿನ ಲಾಭ ಮತ್ತು ಇಲ್ಲದವರು ಒಂದ್ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಿಜವಾಗಿಯೂ ಕರ್ನಾಟಕದಲ್ಲಿ ಪಂಚವಾರ್ಷಿಕ ಯೋಜನೆಗಳಿಂದ ಅಂತಹ ಹೇಳಿಕೊಳ್ಳುವಂತಹ ಸಾಧನೆ ಕಂಡುಬರುವುದಿಲ್ಲ ಅಥವಾ ಅಗಿಲ್ಲ ಕೇವಲ ಜಗತ್ತಿನ ಭೌತಿಕ ವಸ್ತುಗಳನ್ನು ಉತ್ಪಾದಿಸಿದರಷ್ಟೇ ಸಾಲದು ನಮಗೆ ಉತ್ತಮ ಉನ್ನತ ಜೀವನ ಮಟ್ಟಗಳು ಬೇಕು. ಮತ್ತು ಮನುಷ್ಯನ ರಚನಾತ್ಮಾಕ ಶಕ್ತಿ ಅವನ ಸಾಹಾಸ ಪ್ರವೃತ್ತಿಗಳಿಗೆ ಯೋಜನೆಗಳು ಪ್ರೇರಕ ಶಕ್ತಿಯಾಗಬೇಕು ಅಂದರೆ ಪಂಚವಾರ್ಷಿಕ ಯೋಜನೆಗಳ ದೃಷ್ಟಿಕೋನಗಳು ಬದಲಾಗಬೇಕಾದ ಅನಿರ್ವಾತೆ ಇದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಯತ್ನಿಸಲಾಯಿತು. ಬಹುತೇಕವಾಗಿ ಯೋಜನೆಗಳು ಪಂಚವಾರ್ಷಿಕ ಯೋಜನೆಗಳೆಂದು ಟೀಕೆಗೆ ಒಳಗಾದವು. ಆದ್ದರಿಂದ ೧೦ನೇ ಪಂಚವಾಷಿಕ ಯೋಜನೆಯವರಿಗೂ ಈ ಜನಾಂಕ್ಕೆ ಮೀಸಲಿಟ್ಟ ಹಣವನ್ನು ವಿಶ್ಲೇಷಿಸಿದರೆ. ಇಲ್ಲಿಯವರೆಗೂ ಸಾಧಿಸಿದ ಮತ್ತು ಸಾದಿಸದೇ ಇರುವ ಕೆಲವೊಂದು ಸಾಕ್ಷ್ಯಚಿತ್ರಗಳು ಗೋಚರಿಸುತ್ತವೆ. ಅದನ್ನು ಈ ಕೆಳಗಿನಂತೆ ತೋರಿಸಲಾಗಿದೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೇಯಲ್ಲಿ ಭೂಮಾಲಿಕರಿಗೂ ಬಂಡವಾಳದಾರರಿಗೂ ಮತ್ತು ದೀನದಲಿತರಿಗೆ ಮೀಸಲಿಟ್ಟ ಆ ಹಣವನ್ನು ಶೇಕಡವಾರುಗಳಿಗೆ ಹೊಲಿಸಿ ಹತ್ತನೇ ಪಂಚವಾರ್ಷಿಕ ಯೋಜನೆಯವರೆಗೂ ವಿವರ ನೀಡಿದ್ದಾರೆ.

ಪಂಚವಾರ್ಷಿಕ ಯೋಜನೆಗಳಲ್ಲಿ ಭೂಮಿ, ಬಂಡವಾಳ ಮತ್ತು ಆಧುನಿಕ ಕೌಶಲ್ಯ ಇದ್ದವರು ಮತ್ತು ಇಲ್ಲದವರಿಗೆ ದಕ್ಕಿದ ಪಾಲು. ೧೯೫೬–೬೧ರ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲಿಕರಿಗೆ, ಬಂಡವಾಳದಾರರಿಗೆ ಮತ್ತು ದೀನದಲಿತರಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ಈ ರೀತಿಯಾಗಿ ವಿಂಗಡಿಸಲಾಗಿದೆ. ಭೂಮಾಲಿಕರ ಪಾಲು ೫೨.೫೨ ಕೋಟಿ ಶೇ. ೩೬.೧೮ ಬಂಡವಾಳದಾರರ ಪಾಲು ೭೯ ಕೋಟಿ ರೂಪಾಯಿ ಶೇ. ೮.೧೩ ಆದರೆ ದೀನದಲಿತರಿಗೆ ದಕ್ಕಿದ ಪಾಲು ೦೪.೩೧ ಶೇ. ೦೨೯೬ ಅದೇ ರೀತಿಯಾಗಿ ೧೯೬೧–೬೬ರ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲೀಕರ ಪಾಲು ೮೬.೪೬ ಕೋಟಿ ಶೇ. ೩೪.೫೮ ಬಂಡವಾಳದಾರರ ಪಾಲು ೧೫.೮ ಕೋಟಿ ರೂಪಾಯಿ ಶೇ. ೦೬.೩೪ ಆದರೆ ದೀನದಲಿತರಿಗೆ ಪಾಲು ೦೫.೭೨ ಶೇ. ೦೨.೨೮ ಅದೇ ರೀತಿಯಾಗಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಮಾಲಿಕರ ಪಾಲು. ೧೯೬೬–೭೪೭ರ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭೂ

ಮಾಲಿಕರ ಪಾಲು ೧೭೯.೫ ಕೋಟೀ ಶೇ ೫೧.೧೫ ಬಂಡವಾಳವಾಳದಾರರ ಪಾಲು ೧೫.೨೫. ಕೋಟಿ ರೂಪಾಯಿ ಶೇ ೦೫.೨೧ ಆದರೆ ದೀನದಲಿತರಿಗೆ ದಕ್ಕಿದ ಪಾಲು ೦೫.೧೦ ಶೇ. ೦೨.೩೦ ಆದೇ ರೀತಿಯಾಗಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲಿಕರ ಪಾಲು. ೧೯೭೪-೭೯ರ ಐದನೇ ಪಂಚಾವಾರ್ಷಿಕ ಯೋಜನೆಯಲ್ಲಿ ಭೂಮಾಲಿಕರ ಪಾಲು ೫೯೦ ಕೋಟಿ ಶೇ. ೪೩.೭೦ ಬಂಡವಾಳದಾರರ ಪಾಲು ೫೪ ಕೋಟಿ ರೂಪಾಯಿ ಶೇ. ೪.೦೦ ಆದರೆ ಧೀನದಲಿತರಿಗೆ ದಕ್ಕಿದ ಪಾಲು ೩೪ ಶೇ. ೦೨.೫೧ ಅದೇ ರೀತಿಯಾಗಿ ಐದನೇಯ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲಿಕರ ಪಾಲು ೧೬೭೯-೮೬ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಮಾಲಿಕರ ಪಾಲು ೮೫೬.೧೫ ಕೋಟಿ ಶೇ. ೩೬.೨೦ ಬಂಡವಾಳದಾರರ ಪಾಲು ೧೬೮ ಕೋಟಿ ರೂಪಾಯಿ ಶೇ. ೨.೧೦ ಆದರೆ ದೀನದಲಿತೆರಿಗೆ ದಕ್ಕಿದ ಪಾಲು ೧೬೧.೯೫ ಕೋಟಿ ಶೇ. ೬೮೪. ಈ ಅವಧಿಯನ್ನು ಬಿಟ್ಟರೆ ಉಳಿದ ಯಾವ ಸಂದರ್ಭದಲ್ಲಿಯೂ ಸಹ ಶೇ ೬ಕ್ಕಿಂತ ಹೆಚ್ಚು ಹಣ ಮೀಸಲಿರಿಸಲಿಲ್ಲ ೧೯೮೫-೯೦ ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಮಾಲೀಕರ ಪಾಲು ೧೩೫೨ ಕೋಟಿ ಶೇ. ೨೫.೦೨ ಬಂಡವಾಳದಾರರ ಪಾಲು ೪೫೪.೮೮ ನಕೋಟಿ ರೂಪಾಯಿ ಶೇ. ೦೮.೨೫ ಆದರೆ ಧಿನದಲಿತರಿಗೆ ದಕ್ಕಿದ ಪಾಲು ೩೧೫.೯೦ ಕೋಟಿ ಶೇ. ೦೫೭೪. ೧೯೯೦-೯೫ರ ಎಂಟನೇಯ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲೀಕರ ಪಾಲು ೩೫೯೩ ಕೋಟಿ ಶೇ. ೩೦.೭೮ ಬಂಡವಾಳದಾರರ ಪಾಲು ೧೦೫೩.೧ ಕೋಟಿ ರೂಪಾಯಿ ಶೇ. ೦೯.೨೦ ಆದರೆ ದೀನದಲಿತರಿಗೆ ದಕ್ಕಿದ ಪಾಲು ೪೯೨.೨೯ ಕೋಟಿ ೦೪.೧೦. ೧೯೯೭-೦೨ ಒಂಬತ್ತನೇಯ ಪಂಚವಾರ್ಷಿಕ ಯೋಜನೆಯಲ್ಲಿ ಭೂ ಮಾಲೀಕರ ಪಾಳು ೯೨೬೭ ಕೋಟಿನ ಶೇ. ೪೦.೩ ಬಂಡವಾಳದಾರ ಪಾಲು ೧೦೩೬ ಕೋಟಿ ಶೇ. ೪.೩೮ ಆದರೆ ದೀನದಲಿತರಿಗೆ ದಕ್ಕಿದ ಪಾಲು ೧೩.೨೫ ಕೋಟಿ ಶೇ. ೦೫.೬೬ ಅದೇ ರೀತಿಯಾಗಿ ಒಂಭತ್ತನೆಯ ಪಂಚವಾಷಿಕ ಯೋಜನೆಯಲ್ಲಿ ಭೂಮಾಲಿಕರ ಪಾಲು ೨೦೦೨-೦೭ ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭೂಮಾಲೀಕರ ಪಾಲು ೨೦೫೫೯.೪೪ ಕೋಟಿ ಶೇ. ೪೦.೪೩ ಬಂಡವಾಳಗಾರರ ಪಾಲು ೧೭೭೧.೦೮ ಕೋಟಿ ರೂಪಾಯಿ ಶೇ. ೦೩.೪೮. ಆದರೆ ದೀನದಲಿತರಿಗೆ ದಕ್ಕಿದ ಪಾಲು ೨೧೯೪ ಕೋಟಿ ಶೇ. ೦೪.೩೧ ಮೀಸಲಿರುವುದನ್ನು ಕಾಣಬಹುದು.[೫]

ಪರಿಶಿಷ್ಟರಿಗಾಗಿ ಇರುವ ರಾಜ್ಯ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳು

ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಲ್ಲಾ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರಗೆ ವಸತಿ ನಿಲಯಗಳಲ್ಲಿ ಪ್ರವೇಶ ನೀಡುವುದು ಸರ್ಕಾರದ ನೀತಿಯಾಗಿರುತ್ತದೆ.

- ಸಮಾಜ ಕಲ್ಯಾಣ ಇಲಾಖೆಯಡಿ ಒಟ್ಟು ೧೨೩೧ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೆಯೇ ಪರಿಶಿಷ್ಟ ವರ್ಗದ ೨೨೪ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ.

• ಮೆಟ್ರಿಕ್ ನಂತರದ ವಿದ್ಯಾನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ರೂ. ೧೫೦೦/- ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ರೂ. ೧೪೦೦/- ಮಾಸಿಕ ಭೋಜನ ವೆಚ್ಚ ನೀಡಲಾಗುವುದು.

• ವಿದ್ಯಾರ್ಥಿ ನಿಲಯದಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ವಸ್ತುಗಳಾದ ಸಮವಸ್ತ್ರ, ಪಠ್ಯಪುಸ್ತಕ, ಸೋಪು, ಎಣ್ಣೆ, ಟೂತ್‌ಪೇಸ್ಟ್, ಕ್ಷೌರದ ವೆಚ್ಚ, ಕ್ರೀಡಾಸಾಮಾಗ್ರಿಗಳು, ಗ್ರಂಥಾಲಯ ಸೌಲಭ್ಯ, ವಿಶೇಷ ಭೋಧನೆ, ಸ್ಪೋಕನ್ ಇಂಗ್ಲೀಷ್ ಇತ್ಯಾದಿ ಸೌಲಭುಗಳನ್ನು ಒದಗಿಸಲಾಗುತ್ತದೆ.

ವಸತಿ ಶಾಲೆಗಳು

• ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಸರ್ಕಾರವು ವಸತಿ ಶಾಲೆಗಳನ್ನು ಸ್ಥಾಪಿಸಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಇವುಗಳನ್ನು ನಿರ್ವಹಿಸಲಾಗುತ್ತದೆ.

• ಹೋಬಳಿಗೊಂದು ವಸತಿ ಶಾಲೆ ಎಂಬ ನೀತಿಯನ್ನು ಸರ್ಕಾರವು ಜಾರಿಗೆ ತಂದಿರುತ್ತದೆ. ಸದರಿ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ೬ರಿಂದ ೧೦ನೇ ತರಗತಿವರೆಗೆ ವಸತಿ ಸಹಿತ ಶಿಕ್ಷಣ ನೀಡುತ್ತಿದ್ದು, ಹೆಚ್ಚಿನ ವಸತಿ ಶಾಲೆಗಳು ಆಂಗ್ಲ ಮಾಧ್ಯಮವಾಗಿರುತ್ತದೆ. ಪ್ರಸ್ತುತ ೫೦೧ ಪರಿಶಿಷ್ಟ ಜಾತಿ ವಸತಿ ಶಾಲೆಗಳು, ೧೫೩ ಪರಿಶಿಷ್ಟ ಪಂಗಡದ ವಸತಿ ಶಾಲೆಗಳು ಹಾಗೂ ೬೦ ಪದವಿ ಪೂರ್ವ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು ೧,೬೩,೫೦೦ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

• ಈ ವಸತಿ ಶಾಲೆಗಳು ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳೆಂದು ಹೆಸರಿಸಲ್ಪಟ್ಟಿದ್ದು, ಎಲ್ಲ ಮೂಲಭೂತ ಸೌಲಭ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಸದರಿ ವಸತಿ ಶಾಲೆಗಳ ಪ್ರತಿವರ್ಷದ ಎಸ್.ಎಸ್.ಎಲ್.ಸಿ. ಫಲಿತಾಂಶ ಶೇಕಡ ೯೫ಕ್ಕಿಂತ ಹೆಚ್ಚಿರುತ್ತದೆ. ತರಗತಿ ೧ರಿಂದ ೫ ಬಾಲಕರು ೧೦೦೦/-, ಬಾಲಕಿಯರು ೧೧೦೦/-. ತರಗತಿ ೬ರಿಂದ ೭ ಬಾಲಕರು ೧೧೫೦/-, ಬಾಲಕಿಯರು ೧೨೫೦/-. ತರಗತಿ ೮ನೇ ತರಗತಿ ಬಾಲಕರು ೧೨೫೦/-, ಬಾಲಕಿಯರು ೧೩೫೦/-, ವಾರ್ಷಿಕ ವಿದ್ಯಾರ್ಥಿ ವೇತನದ ದರ(ಕೇಂದ್ರ ಸರ್ಕಾರ), ನಿರ್ವಹಣ ವೆಚ್ಚ ಬಾಲಕರು ೧೫೦೦, ಬಾಲಕಿಯರು ೩೫೦೦/-, ಅಡ್‌ಹಾಕ್ ವೆಚ್ಚ, ಬಾಲಕರು ೭೫೦/-, ಬಾಲಕಿಯರು ೧೦೦೦/- ಒಟ್ಟು ಬಾಲಕರು ೨೨೫೦/-, ಬಾಲಕಿಯರು ೪೫೦೦/-.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ

• ೧ ರಿಂದ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉತ್ತೇಜನ ನೀಡುವ ದೃಷ್ಟಿಯಿಂದ ಹಾಗೂ ಅರ್ಧದಲ್ಲಿ ಶಾಲೆ ಬಿಡುವ ಪ್ರವೃತ್ತಿಯನ್ನು ತಡೆಗಟ್ಟಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದ್ದು ವಿವರ ಈ ಕೆಳಕಂಡಂತಿದೆ.

ಕೋಷ್ಟಕ ೪.೧. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನದ ಮಾಹಿತಿ

ವರ್ಷ	ವಿದ್ಯಾರ್ಥಿಗಳ			ಖರ್ಚು		
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
೨೦೧೩-೧೪	೬೫೦೪೨೩	೨೨೪೨೫೯	೮೭೪೬೮೨	೩೯.೨೭	೧೪.೨೮	೫೩.೬
೨೦೧೪-೧೫	೮೯೦೫೪೧	೨೩೭೨೧೮	೧೧೨೭೭೫೯	೬೪.೨೯	೧೫.೩೮	೭೯.೭
೨೦೧೫-೧೬	೬೨೨೩೧೭	೨೩೧೨೦೩	೮೫೩೫೨೦	೬೦.೪೧	೩೧.೫೧	೯೧.೯
೨೦೧೬-೧೭	೧೦೮೪೬೬೮	೩೫೦೩೨೩	೧೪೩೪೯೯೧	೧೨೨.೫	೫೧.೭೩	೧೭೫
ಒಟ್ಟು	೩೨೪೭೯೪೭	೧೦೪೩೦೦೩	೪೨೯೦೯೫೨	೨೮೬.೫೧	೧೧೨.೯	೩೯೯.೪

ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಪ್ರೋತ್ಸಾಹಧನ

- ೧೯೭೭-೭೮ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿದ್ದ, ವಿದ್ಯಾರ್ಥಿ ನಿಲಯದಲ್ಲಿನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿತ್ತು.
- ೧೯೯೧ರಲ್ಲಿ ಸದರಿ ಯೋಜನೆಯನ್ನು ಡೇಸ್ಕಾಲರ್‌ಗಳಿಗೂ ವಿಸ್ತರಿಸಲಾಗಿದೆ.
- ಈ ಯೋಜನೆಗೆ ಆದಾಯಮಿತಿ ಹಾಗೂ ಜಾತಿಯ ನಿರ್ಬಂಧವಿರುವುದಿಲ್ಲ.
- ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳ ಪ್ರೋತ್ಸಾಹಧನಕ್ಕೆ ಅರ್ಹರಾಗಿರುತ್ತಾರೆ.

ವಿವರ	ಡೇಸ್ಕಾಲರ್ (೧ರಿಂದ ೧೦ನೇ ತರಗತಿ)	ಹಾಸ್ಟೆಲ್‌ಸ್ಕಾಲರ್
ನಿರ್ವಹಣಾ ವೆಚ್ಚ	ಮಾಸಿಕ ರೂ. ೧೧೦/- ರಂತೆ	ಮಾಸಿಕ ರೂ. ೨೦೦/- ರಂತೆ
	೧೦ ತಿಂಗಳು ವಾರ್ಷಿಕ ರೂ.೧೧೦೦/-	೧೦ತಿಂಗಳು ವಾರ್ಷಿಕ ರೂ.೨೦೦೦/-
ಅಡ್‌ಹಾಕ್ ವೆಚ್ಚ	ಮಾಸಿಕ ರೂ.೭೫೦/-	ಮಾಸಿಕ ರೂ.೧೦೦೦/-
	ವಾರ್ಷಿಕ ರೂ.೧೮೫೦/-	ವಾರ್ಷಿಕ ರೂ.೮೦೦೦/-

ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಮಗಡದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡಲು ವಿದ್ಯಾರ್ಥಿ ವೇತನ ನೀಡಲು ಶಿಲ್ಕ ಮರುಪಾವತಿ ಸೌಲಭ್ಯಗಳನ್ನು ನೀಡಲಾಗುವುದು.

* ವಾರ್ಷಿಕ ಆದಾಯ ರೂ.೨.೫೦ ಲಕ್ಷದ ಮಿತಿಯೊಳಗಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ.೧೦೦ ರಷ್ಟು ಶುಲ್ಕ ಮರುಪಾವತಿ ಮಾಡಲಾಗುತ್ತದೆ.
* ವಾರ್ಷಿಕ ಆದಾಯ ರೂ. ೨.೫೦ ಲಕ್ಷದಿಂದ ರೂ.೧೦.೦೦ ಲಕ್ಷದಲೊಳಗಿರುವ ವೃತ್ತಿಪರ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖೆಯು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಡಿ ಶುಲ್ಕ ಮರುಪಾವತಿ ಮಾಡುತ್ತಿದೆ.
* ೨೦೦೯-೧೦ನೇ ಸಾಲಿನಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಆನ್‌ಲೈನ್ ಮೂಲಕ ಮಂಜೂರು ಮಾಡಲಾಗುತ್ತಿದೆ.
* ಡೇಸ್ಕಾಲರ್‌ಗಳಿಗೆ ನಿರ್ವಹಣಾ ವೆಚ್ಚವನ್ನು ಅವರು ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿಸಲಾಗುತ್ತಿದೆ.
* ಕಾಲೇಜುಗಳಿಗೆ ಪಾವತಿಸಬೇಕಾದ ಭೋಧನಾ ಹಾಗೂ ಇತರೆ ಶುಲ್ಕಗಳನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಪಾವತಿಸಲಾಗುತ್ತಿದೆ.

ವರ್ಷ	**ಅರ್ಥಿಕ ಸಾಧನೆ**	**ಭೌತಿಕ ಸಾಧನೆ**
೨೦೧೩-೧೪	೨೫೦.೯೮	೨೫೮೩೭೦
೨೦೧೪-೧೫	೩೪೬.೫೭	೩೧೩೦೩೧
೨೦೧೫-೧೬	೩೨೮.೬೪	೩೧೨೩೧೬
೨೦೧೬-೧೭	೩೩೬.೮೨	೨೯೨೧೭೧

(ರೂ. ಕೋಟಿ ಗಳಲ್ಲಿ)

ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಾಗಿದ್ದಲ್ಲಿ ನಿರ್ವಹಣಾ ವೆಚ್ಚವನ್ನು ಆಯಾ ಹಾಸ್ಟೆಲ್‌ಗಳಿಗೆ ಪಾವತಿಸಲಾಗುತ್ತದೆ. ಶುಲ್ಕ ಮರುಪಾವತಿ ಸೌಲಭ್ಯವನ್ನು ಅನುದಾನಿತ/ ಅನುದಾನರಹಿತ/ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೂ ಪವತಿಸಲಾಗುತ್ತಿದೆ.

ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ

* ಐ.ಐ.ಟಿ./ಐ.ಐ.ಎಂ/ಎನ್.ಐ.ಟಿ./ಐ.ಐ.ಎಸ್.ಸಿ. ಮುಂತಾದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಾರ್ಷಿಕ ಆದಾಯ ರೂ.೨.೫೦ ಲಕ್ಷದ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ. ೧.೦೦ ಲಕ್ಷ ಧನಸಹಾಯ ನೀಡಲಾಗುತ್ತಿದೆ.

ಬುಕ್‌ಬ್ಯಾಂಕ್ ಯೋಜನೆ

* ವೈದ್ಯಕೀಯ/ ಇಂಜನಿಯರಿಂಗ್/ಪಶುವೈದ್ಯಕೀಯ/ಕೃಷಿ/ಪಲಿಟೆಕ್ನಿಕ್/ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೆರವಾಗುವ ದೃಷ್ಠಿಯಿಂದ

ಆಯಾ ಕಾಲೇಜುಗಳ ಗ್ರಂಥಾಲಯಗಳಿಗೆ ಈ ಕೆಳಗಿನ ದರಗಳಲ್ಲಿ ಪುಸ್ತಕಗಳನ್ನು ಸರಬರಾಜು ಮಾಡಲಾಗುತ್ತಿದೆ.

• ಈ ಪುಸ್ತಕಗಳನ್ನು ಶೇಖರಿಸಿಡಲು ರೂ. ೨೦೦೦/- ವೆಚ್ಚದಲ್ಲಿ ಕಪಾಟು ಹಾಗೂ ರೂ. ೧೦೦/- ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ.

ಕೋರ್ಸ್	ದರ
ವೈದ್ಯಕೀಯ/ ಇಂಜಿನಿಯರಿಂಗ್	೭೫೦೦/-
ಪಶುವೈದ್ಯಕೀಯ	೫೦೦/-
ಕೃಷಿ	೪೫೦೦/-
ಪಲಿಟೆಕ್ನಿಕ್	೨೪೦೦/-
ಸ್ನಾತಕೋತ್ತರ (ವೈದ್ಯಕೀಯ/ ಇಂಜಿನಿಯರಿಂಗ್/ಎಲ್.ಎಲ್.ಬಿ) ಎಲ್.ಎಲ್.ಎಂ./ಸಿ.ಎ./ಎಂ.ಬಿ.ಎ./ಬಯೋಸೈನ್ಸಸ್ (ಪ್ರತಿ ವಿದ್ಯಾರ್ಥಿಗೆ ೧ ಸೆಟ್)	೫೦೦೦/-

ಪ್ರತಿಭಾ ಪುರಸ್ಕಾರ

• ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಬಹುಮಾನದ ಮೊತ್ತವನ್ನು ನೀಡಲಾಗುತ್ತಿದ್ದು ಇದಕ್ಕೆ ಯವುದೇ ಆದಾಯ ಮಿತಿ ಇರುವುದಿಲ್ಲ.

ವರ್ಷ	ಆರ್ಥಿಕ ಸಾಧನೆ	ಭೌತಿಕ ಸಾಧನೆ
೨೦೧೩-೧೪	೨೯.೩೩	೩೪೧೪೯
೨೦೧೪-೧೫	೪೦.೨೯	೪೧೭೨೪
೨೦೧೫-೧೬	೯೯.೫೭	೫೧೧೧೯
೨೦೧೬-೧೭	೧೪೭.೨೫	೯೮೮೮೨

(ರೂ. ಕೋಟಿಗಳಲ್ಲಿ)

ವರ್ಗ	ಶೇಕಡವಾರು	ಬಹುಮಾನದ ಮೊತ್ತ
ಎಸ್.ಎಸ್.ಎಲ್.ಸಿ	೬೦%– ೭೫%	೭೫೦೦/ ೧೫೦೦೦/-
ಪಿ.ಯು.ಸಿ	೭೫% ಹಾಗೂ ಅಧಿಕ	೨೦೦೦೦/-
ಪದವಿ	೬೦% ಹಾಗೂ ಅಧಿಕ	೨೫೦೦೦/-
ಸ್ನಾತಕೋತ್ತರ	೬೦% ಹಾಗೂ ಅಧಿಕ	೩೦೦೦೦/-
ವೃತ್ತಿಪರ ಪದವಿ	೬೦% ಹಾಗೂ ಅಧಿಕ	೩೫೦೦೦/-

ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಮಕ್ಕಳ ಪ್ರವೇಶಾತಿ

• ಕುಟುಂಬದ ವಾರ್ಷಿಕ ಆದಾಯ ರೂ. ೨.೦೦ ಲಕ್ಷದೊಳಗಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ದೃಷ್ಠಿಯಿಂದ ಪ್ರತಿಷ್ಠಿತ ಶಾಲೆಗಳಲ್ಲಿ ೫ ರಿಂದ ೧೦ನೇ ತರಗತಿವರೆಗೆ ಪ್ರವೇಶ ನೀಡಲಾಗುತ್ತದೆ. ಸದರಿ ವಿದ್ಯಾರ್ಥಿಗಳ ಸಂಪೂರ್ಣ ಶಿಕ್ಷಣ ವೆಚ್ಚವನ್ನು ಸರ್ಕಾರ ಭರಿಸುತ್ತದೆ.

ವರ್ಷ	ಅರ್ಥಿಕ ಸಾಧನೆ	ಭೌತಿಕ ಸಾಧನೆ
೨೦೧೩-೧೪	೧೦.೦೦	೧೯೭೫
೨೦೧೪-೧೫	೧೫.೦೦	೨೦೪೨
೨೦೧೫-೧೬	೫.೦೦	೧೭೮೭
೨೦೧೬-೧೭	೫.೦೦	೨೦೦೦

(ರೂ. ಕೋಟಿಗಳಲ್ಲಿ)

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತರುವ ವಿದ್ಯಾರ್ಥಿಗಳಿಗೆ ಧನಸಹಾಯ

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಧನಸಹಾಯವನ್ನು ನೀಡುತ್ತಿದ್ದು, ಪ್ರವೇಶ ಶುಲ್ಕ, ನಿರ್ವಹಣಾ ವೆಚ್ಚ, ವಿಮಾನ ಪಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ. ವಾರ್ಷಿಕ ಆದಾಯ ರೂ. ೬.೦೦ ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳ ಪೂರ್ಣ ವೆಚ್ಚವನ್ನು ಸರ್ಕಾರ ಭರಿಸುತ್ತಿದ್ದು. ರೂ. ೬.೦೦ ಲಕ್ಷದಿಂದ ರೂ. ೧೫.೦೦ ಲಕ್ಷ ವಾರ್ಷಿಕ ಆದಾಯ ಮಿತಿಯೊಳಗಿರುವ ವಿದ್ಯಾರ್ಥಿಗಳ ಶೇ. ೫೦ ರಷ್ಟು ವೆಚ್ಚವನ್ನು ಸರ್ಕಾರ ಭರಿಸುತ್ತಿದೆ.

ಮೂಲಭೂತ ಸೌಕರ್ಯಗಳು

ಸಮುದಾಯ ಭವನಗಳ ನಿರ್ಮಾಣ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸಾಂಸ್ಕೃತಿಕವಾಗಿ ಒಗ್ಗೂಡಲು ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಆಚರಣೆಗೆ ಅನುಕೂಲವಾಗುವಂತೆ ಸಮುದಾಯ ಭವನಗಳು/ ಡಾ. ಬಿ.ಆರ್. ಅಂಬೇಡ್ಕರ್ ಭವನ/ ಡಾ. ಬಾಬು ಜಗಜೀವನರಾಮ್ ಭವನ/ ವಾಲ್ಮೀಕಿ ಭವನಗಳ ನಿರ್ಮಾಣವನ್ನು ಇಲಾಖೆಯಿಂದ ಮಾಡಲಾಗುತ್ತಿದ್ದು, ಈ ಕೆಳಗಿನಂತೆ ಅನುದಾನ ಮಂಜೂರು ಮಾಡಲಾಗುತ್ತಿದೆ. ವಿವರ ಮಂಜೂರು ಮಾಡುವ ಅನುದಾನ ಜಿಲ್ಲಾ ಮಟ್ಟ ೩.೫೦ ಕೋಟಿ ತಾಲ್ಲೂಕು ಮಟ್ಟ ೧.೫೦ ಕೋಟಿ ಹೋಬಳಿ ಮಟ್ಟ ೫೦.೦೦ ಲಕ್ಷ ಗ್ರಾಮಮಟ್ಟ ೧೨.೦೦ ಲಕ್ಷ.

ಕೋಷ್ಟಕ ೪.೨. ಸಮುದಾಯ ಭವನಗಳ ನಿರ್ಮಾಣ

ವರ್ಷ	ಆರ್ಥಿಕ ವೆಚ್ಚ			ಭೌತಿಕ ವೆಚ್ಚ		
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
೨೦೧೩-೧೪	೮೮	೨೫	೧೧೩	೬೨೮	೨೧೩	೮೪೧
೨೦೧೪-೧೫	೪೦	೩೦	೭೦	೮೦೮	೮೦	೮೮೮
೨೦೧೫-೧೬	೧೦೦	೩೦	೧೩೦	೧೭೫೭	೭೨	೧೮೨೭
೨೦೧೬-೧೭	೧೦೦	೨೬.೩	೧೨೬	೧೯೨೭	೪೩	೧೯೭೦
ಒಟ್ಟು	೩೨೮	೧೧೧.೩	೪೩೯	೫೧೨೦	೪೦೮	೫೫೨೮

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೆರವಾಗುವ ದೃಷ್ಟಿಯಿಂದ ಶಾಲಾ/ ಕಾಲೇಜು/ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾನಕ್ಕಾಗಿ ಗರಿಷ್ಠ ರೂ.೫೦.೦೦ ಲಕ್ಷಗಳಷ್ಟು ಧನಸಹಾಯ ನೀಡಲಾಗುತ್ತಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಧನಸಹಾಯ

ವಿಶ್ವವಿದ್ಯಾಲಯಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಗರಿಷ್ಠ ರೂ.೨.೦೦ ಕೋಟಿಗಳಷ್ಟು ಧನ ಸಹಾಯವನ್ನು ನೀಡಲಾಗುತ್ತದೆ.

ಕಾಲೋನಿ ಅಭಿವೃದ್ಧಿ ಕಾರ್ಯಕ್ರಮ

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಕಾಂಕ್ರೀಟ್ ರಸ್ತೆ, ಕುಡಿಯುವ ನೀರು, ಚರಂಡಿ, ವಿದ್ಯುದ್ಧೀಕರಣ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ವರ್ಷ	ಅನುದಾನದ ಮೊತ್ತ		
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
೨೦೧೩-೧೪	೨೪೬.೧೫	೧೨೫.೦೦	೩೭೧.೧೫
೨೦೧೪-೧೫	೧೬೧.೧೪	೧೩೪.೦೦	೨೯೫.೧೪
೨೦೧೫-೧೬	೧೫೬.೦೦	೧೦೦.೦೦	೨೫೬.೦೦
೨೦೧೬-೧೭	೨೦೦.೦೦	೪೩.೦೦	೨೪೩.೦೦
ಒಟ್ಟು	೭೬೩.೨೯	೪೦೨.೦೦	೧೧೬೫.೨೯

ತರಬೇತಿ ಕಾರ್ಯಕ್ರಮ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ

ಯು.ಪಿ.ಎಸ್./ ಕೆ.ಪಿ.ಎಸ್.ಸಿ/ ಬ್ಯಾಂಕಿಂಗ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನವದೆಹಲಿ, ಹೈದ್ರಾಬಾದ್ ಹಾಗೂ ಕರ್ನಾಟಕ ರಾಜ್ಯದ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ಪೂರ್ವಭಾವಿ ತರಬೇತಿಯನ್ನು ನೀಡಲಾಗುತ್ತಿದೆ. ೬ ರಿಂದ ೯ ತಿಂಗಳವರಗೆ ನಡೆಯುವ ತರಬೇತಿಯ ತರಬೇತಿ ಶುಲ್ಕ ಮತ್ತು ಶಿಷ್ಯವೇತನವನ್ನು ಸರ್ಕಾರದಿಂದ ಪಾವತಿಸಲಾಗುತ್ತಿದೆ. ಪ್ರತಿ ಅಭ್ಯರ್ಥಿಗೆ ಅಂದಾಜು ರೂ.೧.೦೦ ಲಕ್ಷದಿಂದ ೨.೫೦ ಲಕ್ಷದವರೆಗೆ ವೆಚ್ಚ ತಗಲುತ್ತದೆ.

ವರ್ಷ	ಆರ್ಥಿಕ ಸಾಧನೆ	ಭೌತಿಕ ಸಾಧನೆ
೨೦೧೩-೧೪	೧೦.೦೦	೧೯೭೫
೨೦೧೩-೧೪	೮.೮೨	೨೫೮೧
೨೦೧೪-೧೫	೧೮.೭೩	೨೬೭೯
೨೦೧೫-೧೬	೨೧.೦೦	೩೩೩೩
೨೦೧೬-೧೭	೨೭.೮೧	೩೩೭೬

(ರೂ. ಕೋಟಿಗಳಲ್ಲಿ)

ಜಿ.ಎನ್.ಎಂ. ಮತ್ತು ಬಿ.ಎಸ್.ಸಿ ನರ್ಸಿಂಗ್ ತರಬೇತಿ ಕಾರ್ಯಕ್ರಮ

ಹೆಚ್ಚಿನ ಉದ್ಯೋಗ ಅವಕಾಶವುಳ್ಳ ಜಿ.ಎನ್.ಎಂ ಮತ್ತು ಬಿ.ಎಸ್.ಸಿ. ನರ್ಸಿಂಗ್ ಕೋರ್ಸಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದ್ದು, ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ. ೩೫.೦೦/ ವರೆಗಿನ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ. ಕೋರ್ಸ್‌ನ ಅವಧಿ ೩೧/೨ ವರ್ಷಗಳಿಂದ ೪ ವರ್ಷ.

ಕೌಶಲ್ಯಾಭಿವೃದ್ಧಿ ತರಬೇತಿ

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಗಳಲ್ಲಿ ಕನಿಷ್ಟ ೬ ತಿಂಗಳಿನಿಂದ ೧ ವರ್ಷದವರೆಗಿನ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿದೆ. ಕೋರ್ಸ್ ಫೀ ಮತ್ತು ಸ್ಟೈಪೆಂಡ್‌ನ್ನು ಸರ್ಕಾರದಿಂದ ಪಾವತಿಸಲಾಗುತ್ತಿದೆ.

- ಪ್ರತಿಷ್ಠಿತ ತರಬೇತಿ ಸಂಸ್ಥೆಗಳಾದ ಸಿಪೆಟ್, ಇಸಿ.ಐ.ಎಲ್, ಎ.ಟಿ.ಡಿಸಿ. ಎನ್.ಐ.ಎಫ್.ಟಿ ಮತ್ತು ಜಿ.ಟಿ.ಟಿ.ಸಿ ಮೂಖಾಂತರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವೃತ್ತಿಪರ ತರಬೇತಿ ನೀಡಲಾಗುತ್ತದೆ. ಇದಲ್ಲದೆ ಬಾರಿ ವಾಹನ ಚಲನೆಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬಾರಿ ವಾಹನ ತರಬೇತಿ ನೀಡಲಾಗುತ್ತದೆ. ೨೦೧೭-೧೮ನೇ ಸಾಲಿನಲ್ಲಿ ೧ ಲಕ್ಷ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ತರಬೇತಿ ನೀಡಲು ೧೦೦ ಕೋಟಿ ಅನುದಾನ ಮೀಸಲಿಡಲಾಗಿದೆ.

- ಕಾನೂನು ಪದವಿದರರಿಗೆ ಶಿಷ್ಯವೇತನ ಕಾನೂನು ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ನೆರವಾಗುವ ದೃಷ್ಟಿಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾನೂನು ಪದವಿದರರಿಗೆ ೪ ವರ್ಷಗಳ ಕಾಲ ಮಾಸಿಕ ೫೦೦೦ ರೂಪಾಯಿ ಶಿಷ್ಯವೇತನ ನೀಡಲಾಗುತ್ತದೆ. ಕಾನೂನು ಪದವಿದರರು ಹಿರಿಯ ನ್ಯಾಯವಾದುಗಳಿಂದ ಕಾನೂನು ತರಬೇತಿಯನ್ನು ಈ ಸಂದರ್ಭದಲ್ಲಿ ಪಡೆಯಬೇಕಾಗಿರುತ್ತದೆ. ಇದಲ್ಲದೆ ಕಛೇರಿ ಪ್ರಾರಂಭಿಸಲು ೫೦೦೦ ಸಹಾಯಧನ ನೀಡಲಾಗುತ್ತದೆ.

ಸಾಮಾಜಿಕ ಅಭಿವೃದ್ಧಿ ಕಾರ್ಯಗಳು

PCR Act 1955 (ನಾಗರಿಕ ಹಕ್ಕುಗಳ ರಕ್ಷಣೆ ಕಾಯ್ದೆ) ಮತ್ತು POA Act 1989 (ದೌರ್ಜನ್ಯ ತಡೆ ಅಧಿನಿಯಮ) ಅನುಷ್ಠಾನ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ನಡೆದರೆ ಅವರನ್ನು ದೌರ್ಜನ್ಯದಿಂದ ರಕ್ಷಿಸಿ ಪರಿಹಾರವನ್ನು ನೀಡಲು ಮತ್ತು ಸಾಮಾಜಿಕ ಪಿಡಿಗಿಗಾರಿರುವ ಅಸ್ಪೃಶ್ಯತೆಯ ನಿವಾರಣೆಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಅಂತರ್‌ಜಾತಿ ವಿವಾಹವಾಗುವ ದಂಪತಿಗಳಿಗೆ ಪ್ರೋತ್ಸಾಹ ಧನ, ವಿಚಾರ ಗೋಷ್ಠಿ ಮತ್ತು ಕಮ್ಮಟಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ಮೇಲ್ಕಾಣಿಸಿದ ಕಾಯ್ದೆಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ಅಂತರ್ ಜಾತಿ ವಿವಾಹ ಎಂದರೆ ಪರಿಶಿಷ್ಟ ಜಾತಿಯ ಯುವಕರು ಇತರೆ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಗೆ ೨ ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನ.

ಪರಿಶಿಷ್ಟ ಜಾತಿಯ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿ ೩ ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನ. ಇದಕ್ಕೆ ಅಂತರ್‌ಜಾತಿ ವಿವಾಹವಾದ ೧ ವರ್ಷದೊಳಗೆ ಅರ್ಜಿ ಸಲ್ಲಿಸಬೇಕು. ಅಂತರ್‌ಜಾತಿ ವಿವಾಹವನ್ನು ನೋಂದಾಯಿಸಬೇಕು. ಯುವತಿಯರ ವಯಸ್ಸು ೧೮-೪೨ ವರ್ಷ ಇರಬೇಕು. ಯುವಕರ ವಯಸ್ಸು ೨೧-೪೫ ವರ್ಷ ಇರಬೇಕು.

ಆದಾಯದ ಮಿತಿ ವಾರ್ಷಿಕ ೨ ಲಕ್ಷ ರೂಪಾಯಿಗಳು. ಈ ಪ್ರೋತ್ಸಾಹ ಧನದ ಹಣವನ್ನು ೨ ಕಂತುಗಳಲ್ಲಿ ನೀಡಲಾಗುತ್ತದೆ. ಪ್ರೋತ್ಸಾಹ ಧನವು ೫೦% ನಗದು ರೂಪದಲ್ಲಿ ೫೦% ಎನ್.ಎಸ್.ಸಿ (ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರ)ದ ಮೂಲಕ ಇಬ್ಬರ ಹೆಸರಿನಲ್ಲಿ ಠೇವಣಿ ಇಡಲಾಗುವುದು.

ವರ್ಷ	ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಧನ		ವಿಚಾರಗೋಷ್ಠಿ ಮತ್ತು ಕಮ್ಮಟಗಳು	
	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
೨೦೧೩-೧೪	೭.೬೧	೭೯೦	೧	೪೦
೨೦೧೪-೧೫	೧೦.೯	೨೦೪೧	೫	೧೩೦
೨೦೧೫-೧೬	೧೨.೨	೧೨೮೫	೫	೪೯೪
೨೦೧೬-೧೭	೧೮.೬	೨೧೪೫	೫	೯೯೩
ಒಟ್ಟು	೪೯.೨೮	೬೭೬೧	೧೬	೧೬೫೭

ಅಸ್ಪೃಶ್ಯತೆಯ ನಿವಾರಣೆಗಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು

ವಿಚಾರಗೋಷ್ಠಿ ಮತ್ತು ಕಮ್ಮಟಗಳ ಆಯೋಜನೆ

ಜನಸಾಮಾನ್ಯರಲ್ಲಿ ಅಸ್ಪೃಶ್ಯತೆಯ ನಿವಾರಣೆ ಬಗ್ಗೆ ಹಾಗೂ ದೌರ್ಜನ್ಯ ಪ್ರತಿಬಂಧ ಕಾಯ್ದೆ ಬಗ್ಗೆ ಅರಿವು ಮೂಡಿಸಲು ವಿಚಾರ ಸಂಕಿರಣ ಹಾಗೂ ಕಮ್ಮಟಗಳನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗುತ್ತದೆ.

ವರ್ಷ	ಆರ್ಥಿಕ ವೆಚ್ಚ	ಸಂತ್ರಸ್ತರ ಸಂಖ್ಯೆ
೨೦೧೩-೧೪	೪.೦೦	೨೨೭೭
೨೦೧೪-೧೫	೧೦.೦೦	೧೯೨೮
೨೦೧೫-೧೬	೧೦.೦೦	೨೦೪೧
೨೦೧೬-೧೭	೧೦.೦೦	೧೯೧೨

ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪರಿಹಾರ

ಸರ್ಕಾರದ ಆದೇಶ ಸಂಖ್ಯೆ: ಸಕಇ ೩೭ ಎಸ್ಸಿಪಿ ೨೦೧೬ ದಿನಾಂಕ: ೨೦-೦೬-೨೦೧೬ ರನ್ವಯ ೪೭ ಅಪರಾಧಗಳಡಿ ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪರಿಷ್ಕೃತ ದರದಲ್ಲಿ ಪರಿಹಾರ ನೀಡಲಾಗುತ್ತಿದೆ.

ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪುನರ್ವಸತಿ

ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪುನರ್ವಸತಿ ಕಾರ್ಯಕ್ರಮವನ್ನು ಇಲಾಖೆಯಿಂದ ಮಾಡಲಾಗುತ್ತಿದ್ದು, ವಸತಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಜಾಗೃತಿ ಮತ್ತು ಉಸ್ತುವಾರಿ ಸಮಿತಿಗಳ ಮೂಲಕ ಮೇಲ್ವಿಚಾರಣೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಂದುಕೊರತೆಗಳ ನಿವಾರಣೆ ಮತ್ತು ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪರಿಹಾರ ನೀಡುವ ಬಗ್ಗೆ ಮೇಲ್ವಿಚಾರಣೆಗಾಗಿ ಉಪವಿಭಗೀಯ/ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕ್ರಮವಾಗಿ ಸಹಾಯಕ ಆಯುಕ್ತರು/ಜಿಲ್ಲಾಧಿಕಾರಿಗಳು/ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡಿಸಿ ಪರಿಶೀಲನೆ ಮಾಡಲಾಗುತ್ತದೆ.

ಸರಳ ವಿವಾಹ ಯೋಜನೆ

ಸರ್ಕಾರದ ಆದೇಶ ಸಂಖ್ಯೆ: ಸಕಇ ೨೬೨ ಎಸ್‌ಎಲ್‌ಪಿ ೨೦೧೫ ದಿನಾಂಕ: ೧೧.೦೮.೨೦೧೫ ರನ್ವಯ ಈ ಕಾರ್ಯಕ್ರಮವನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯನ್ವಯ ನೋಂದಾಯಿತ ಸಂಘ-ಸಂಸ್ಥೆಗಳು ವ್ಯವಸ್ಥೆ ಮಾಡುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾಗುವ ಕುಟುಂಬದ ವಾರ್ಷಿಕ ವರಮಾನ ರೂ. ೨.೦೦ ಲಕ್ಷ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ದಂಪತಿಗಳಿಗೆ ರೂ. ೫೦೦೦೦/- ಪ್ರೋತ್ಸಾಹಧನ ನೀಡಲಾಗುತ್ತಿದೆ.

ವಿವಾಹ ಮರು ವಿವಾಹಕ್ಕೆ ಪ್ರೋತ್ಸಾಹಧನ

೨೦೧೭-೧೮ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿಧವೆಯರಿಗೆ ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ಮದುವೆಯಾದಲ್ಲಿ ಅಂತಹ ದಂಪತಿಗಳಿಗೆ ರೂ. ೩.೦೦ ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ. ವಿಧವೆಯ ವಯೋಮಿತಿ ೧೮ರಿಂದ ಗರಿಷ್ಠ ೪೨ ವರ್ಷ, ವಿವಾಹವಾಗುವ ವರನ ವಯೋಮಿತಿ ೨೧ರಿಂದ ೪೫ ವರ್ಷ, ಮರು ವಿವಾಹದ ಬಗ್ಗೆ ನೋಂದಾಯಿಸತಕ್ಕದ್ದು, ವಿವಾಹವಾದ ೧ ವರ್ಷದೊಳಗೆ ಅರ್ಜಿ ಸಲ್ಲಿಸಬೇಕು. ಸರಳ ವಿವಾಹ ಪ್ರೋತ್ಸಾಹಧನ ಪಡೆದಿದ್ದಲ್ಲಿ ಅಂತಹ ದಂಪತಿಗಳಿಗೆ ೨.೫೦ ಲಕ್ಷ ರೂ.ಗಳ ಪ್ರೋತ್ಸಾಹ ಧನ, ಅಂತರ್‌ಜಾತಿ ಪ್ರೋತ್ಸಾಹ ಧನ ಪಡೆದಿರುವವರು ಇದಕ್ಕೆ ಅರ್ಹರಲ್ಲ.

ಒಳ ಪಂಗಡಗಳ ಅಂತರ್‌ಜಾತಿ ವಿವಾಹ

೨೦೧೭-೧೮ ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಯುವಕ/ ಯುವತಿಯರು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಉಪ ಜಾತಿಗಳ ಯುವಕ/ ಯುವತಿಯರನ್ನು ವಿವಾಹವಾದಲ್ಲಿ ರೂ. ೨.೦೦ ಲಕ್ಷ ಪ್ರೋತ್ಸಾಹಧನ ನೀಡಲಾಗುತ್ತಿದೆ. ವಯೋಮಿತಿ-ಯುವಕ ೨೧ರಿಂದ ೪೫ ವರ್ಷ ಹಾಗೂ ಯುವತಿ ೧೮ ರಿಂದ ೪೨ ವರ್ಷ, ದಂಪತಿಗಳ ವಾರ್ಷಿಕ ಆದಾಯ ರೂ. ೨.೦೦ ಲಕ್ಷ ಮೀರಿರಬಾರದು, ಅಂತರ್‌ಜಾತಿ ವಿವಾಹ/ ವಿಧವಾ ಮರು ವಿವಾಹ ಪ್ರೋತ್ಸಾಹಧನ ಪದೆದವರು ಇದಕ್ಕೆ ಅರ್ಹರಲ್ಲ, ಸರಳ ವಿವಹ ಪ್ರೋತ್ಸಾಹಧನ ಪಡೆದಿದ್ದಲ್ಲಿ ಅಂತಹ ದಂಪತಿಗಳಿಗೆ ೧.೫೦ ಲಕ್ಷ ರೂ. ಗಳ ಪ್ರೋತ್ಸಾಹಧನ ನೀಡಲಾಗುವುದು.

ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ/ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದ್ದು. ಕಾರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಹಾಗೂ ಡಾ. ಬಾಬು ಜಗಜೀವನರಾಮ್ ಚರ್ಮ ಕೈಗಾರಿಕೋದ್ಯಮ ಅಭಿವೃದ್ಧಿ ನಿಗಮಗಳು ಆಯಾ ಸಮುದಾಯಗಳ ಆರ್ಥಿಕಾಭಿವೃದ್ಧಿಗೆ ಕೈಜೋಡಿಸುತ್ತವೆ.

ಭೂಒಡೆತನ ಯೋಜನೆ

ಸದರಿ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಭೂರತರಿಗೆ ಕೃಷಿ ಭೂಮಿಯನ್ನು ಖರೀದಿಸಿ ನೀಡಲಾಗುತ್ತಿದೆ. ರೂ. ೧೫.೦೦ ಲಕ್ಷ ಘಟಕ ವೆಚ್ಚವಿದ್ದು, ಶೇ. ೫೦ರಷ್ಟು ಸಹಾಯಧನ ಹಾಗೂ ಶೇ. ೫೦ರಷ್ಟು ಸಾಲವನ್ನು ೬% ಬಡ್ಡಿದರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ/ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ನೀಡಲಾಗುತ್ತಿದೆ. ಈ ಯೋಜನೆಯಡ್ಡಿ ಜಮೀನನ್ನು ಮಹಿಳಾ ಫಲಾನುಭವಿಗಳ ಹೆಸರಿಗೆ ನೋದಣಿ ಮಾಡಲಾಗುತ್ತಿದ್ದು, ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

ಕೋಷ್ಟಕ ೪.೩. ಭೂ ಒಡೆತನ ಯೋಜನೆ: ಕಳೆದ ನಾಲ್ಕು ವರ್ಷದ ಸಾಧನೆ

ವರ್ಷ	ಭೌತಿಕ ಸಾಧನೆ			ಆರ್ಥಿಕ ಸಾಧನೆ		
	ಪರಿಶಿಷ್ಟ ಜಾತಿ	ಪರಿಶಷ್ಟ ವರ್ಗ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಒಟ್ಟು
೨೦೧೩-೧೪	೭೩೩	೨೭೬	೧೦೦೯	೩೦.೬	೧೨.೫	೪೩
೨೦೧೪-೧೫	೩೩	೧೧೨	೧೪೭	೧.೭	೫.೭೬	೭.೪೬
೨೦೧೫-೧೬	೧೧೧೭	೧೯೬	೧೩೧೩	೬೩.೭	೧೧	೭೪.೭
೨೦೧೬-೧೭	೧೦೪೦	೩೮೬	೧೪೨೬	೭೧.೬	೪೮.೭	೧೨೦
ಒಟ್ಟು	೨೯೨೫	೯೭೦	೩೮೯೫	೧೬೮	೭೭.೯	೨೪೬

ಗಂಗಾ ಕಲ್ಯಾಣ ಯೋಜನೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಸದರಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ರೂ. ೨.೫೦ ಲಕ್ಷ ಸಾಹಾಯಧನ ಹಾಗೂ ಶೇ. ೬% ಬಡ್ಡಿದರದಲ್ಲಿ ರೂ. ೫೦೦೦೦/- ಸಾಲವನ್ನು ನೀಡಲಾಗುತ್ತಿದೆ. ಅಂತರ್ಜಲ ಮಟ್ಟ ಕಡಿಮೆ ಇರುವ ಜಿಲ್ಲೆಗಳಲ್ಲಿ ರೂ.೩.೫೦ ಲಕ್ಷ ಸಹಾಯಧನ ನೀಡಲಾಗುತ್ತಿದೆ.

ಕೊಳವೆಬಾವಿ ಕೊರೆಯುವುದು, ಪಂಪ್ ಅಳವಡಿಕೆ ಮತ್ತು ವಿದ್ಯುದೀಕರಣವನ್ನು ನಿಗಮದ ವತಿಯಿಂದಲೇ ನಿರ್ವಹಿಸಲಾಗುತ್ತದೆ.

ಕೋಷ್ಟಕ ೪.೪. ಗಂಗಾ ಕಲ್ಯಾಣ ಯೋಜನೆ: ಕಳೆದ ನಾಲ್ಕು ವರ್ಷದ ಸಾಧನೆ

ವರ್ಷ	**ಭೌತಿಕ ಸಾಧನೆ**			**ಆರ್ಥಿಕ ಸಾಧನೆ**		
	ಪರಿಶಿಷ್ಟ ಜಾತಿ	**ಪರಿಶಷ್ಟ ವರ್ಗ**	**ಒಟ್ಟು**	**ಪರಿಶಿಷ್ಟ ಜಾತಿ**	**ಪರಿಶಿಷ್ಟ ವರ್ಗ**	**ಒಟ್ಟು**
೨೦೧೩-೧೪	೧೦೯೬೮	೭೮೫೪	೧೮೮೨೨	೧೬೮.೧	೨೯.೭೬	೧೯೭.೮
೨೦೧೪-೧೫	೯೬೨೧	೫೯೫೬	೧೫೫೭೭	೧೧೮.೩	೧೬.೦೩	೧೩೪.೩
೨೦೧೫-೧೬	೧೦೬೨೪	೫೭೩೫	೧೬೩೫೯	೧೦೦.೧	೨೬.೨೧	೧೨೬.೪
೨೦೧೬-೧೭	೧೦೫೯೫	೬೨೦೫	೧೬೮೦೦	೧೬೦.೫	೫೯.೬೫	೨೨೦.೧
ಒಟ್ಟು	**೪೧೮೦೮**	**೨೫೭೫೦**	**೬೭೫೫೮**	**೫೪೭**	**೧೩೧.೭**	**೬೭೮.೬**

ಸ್ವಯಂ ಉದ್ಯೋಗಕ್ಕೆ ಸಹಾಯಧನ

ಸ್ವಯಂ ಉದ್ಯೋಗ ಕೈಗೊಳ್ಳುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಮತ್ತು ಸಹಾಯಧನ ಸೌಲಭ್ಯವನ್ನು ಈ ಕೆಳಗಿನ ದರದಲ್ಲಿ ನೀಡಲಾಗುತ್ತಿದೆ.

ಸ್ವಸಹಾಯ ಸಂಘದ ಸದಸ್ಯರಿಗೆ ಕಿರುಸಾಲ ಯೋಜನೆ

ಸ್ವಸಹಾಯ ಸಂಘಗಳ ಸದಸ್ಯರಿಗೆ ರೂ. ೫೦೦೦/- ಸಾಲ ಹಾಗೂ ರೂ.೧೦೦೦೦/- ಸಹಾಯ ಧನವನ್ನು ನೀಡಿ ಸ್ವದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುತ್ತಿದೆ.

ಕಿರು ಸಾಲ ಯೋಜನೆ

ವೈಯಕ್ತಿಕವಾಗಿ ಸ್ವಯಂ ಉದ್ಯೋಗ ಮಾಡುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ರೂ. ೫೦೦೦/- ಸಾಲ ಹಾಗೂ ರೂ. ೧೦೦೦೦/- ಸಹಾಯಧನವನ್ನು ನೀಡಿ ಸ್ವಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುತ್ತಿದೆ.

ಹೈನುಗಾರಿಕೆ

ಸದರಿ ಯೋಜನೆಯಡಿ ೨ ಹಸುಗಳನ್ನು ನೀಡಲಾಗುತ್ತಿದ್ದು, ೫೦% ಸಾಲ ಮತ್ತು ೫೦% ಸಹಾಯ ಧನ (ಗರಿಷ್ಟ ರೂ೫೦೦೦೦/-) ನೀಡಲಾಗುತ್ತಿದೆ. ೨೦೧೭-೧೮ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ೧ ಲಕ್ಷ ಹಸು/ಎಮ್ಮೆ/ಕುರಿ/ಮೇಕೆ ಘಟಕಗಳನ್ನು ರೂ.೪೦,೦೦೦/- ಘಟಕದ ವೆಚ್ಚದಲ್ಲಿ ರೂ. ೨೫,೦೦೦/- ಸಹಾಯ ಧನ ಮತ್ತು ರೂ. ೧೫೦೦೦/- ಸಾಲದ ರೂಪದಲ್ಲಿ ಭರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಮೂಲಕ ಲಂಬಾಣಿ ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ.

ಡಾ. ಬಾಬು ಜಗಜೀವನರಾಂ ಚರ್ಮ ಉದ್ಯಮ ಅಭಿವೃದ್ಧಿ ನಿಗಮ

ಸದರಿ ನಿಗಮದ ಮೂಲಕ ಚರ್ಮ ಉದ್ಯಮದಲ್ಲಿ ತೊಡಗಿರುವವರಿಗೆ ಉದ್ಯಮದ ಅಭಿವೃದ್ಧಿಗಾಗಿ ಸಾಲ, ಸಹಾಯಧನ, ಮಾರುಕಟ್ಟೆ ಸೌಲಭ್ಯ ಇತ್ಯಾದಿಗಳನ್ನು ಒದಗಿಸಲಾಗುತ್ತದೆ. ಸ್ವಯಂ ಉದ್ಯೋಗಕ್ಕಾಗಿ ಚರ್ಮ ಕುಟೀರಗಳನ್ನುರೂ. ೪೦೦೦೦/–ದಿಂದ ರೂ. ೧.೦೦ ಲಕ್ಷದವರೆಗಿನ ವೆಚ್ಚದಲ್ಲಿ ನೀಡಲಾಗುತ್ತಿದೆ.

ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಸಫಾಯಿ ಕರ್ಮಚಾರಿಗಳ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದ್ದು, ಸಫಾಯಿ ಕರ್ಮಚಾರಿಗಳ ಅವಲಂಬಿತರಿಗೆ ಆರೋಗ್ಯ ಸೌಲಭ್ಯ ಮತ್ತಿತರ ಸವಲತ್ತುಗಳನ್ನು ನೀಡಲಾಗುತ್ತಿದೆ. ಕಳೆದ ೨ ವರ್ಷಗಳಲ್ಲಿ ವಿವಿಧ ಕಾರ್ಯಕ್ರಮಗಳಿಗೆ ರೂ.೬೦,೦೦ ಕೋಟಿ ಅನುದಾನ ಒದಗಿಸಲಾಗೆದೆ.

ಬಡ್ಡಿ ಸಹಾಯಧನ ಕಾರ್ಯಕ್ರಮ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ/ಸಹಕಾರಿ ಬ್ಯಾಂಕ್‌ಗಳಿಂದ ಹೊಸ ಉದ್ಯಮಗಳ ಪ್ರಾರಂಭ ಹಾಗೂ ಉದ್ಯಮಗಳ ನವೀಕರಣಕ್ಕಾಗಿ ಸಾಲ ಪಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಬಡ್ಡಿ ಸಹಾತಧನ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು, ಗರಿಷ್ಟ ರೂ. ೧೦.೦೦ ಕೋಟಿ ಸಾಲಕ್ಕೆ ೪% ಬಡ್ಡಿಯನ್ನು ಸರ್ಕಾರದ ವತಿಯಿಂದ ಪಾವತಿಸಲಾಗುತ್ತಿದೆ.

ಕೋಷ್ಟಕ ೪.೫. ಬಡ್ಡಿ ಸಹಾಯಧನ ಕಾರ್ಯಕ್ರಮ: ಕಳೆದ ನಾಲ್ಕು ವರ್ಷದ ಸಾಧನೆ

ವರ್ಷ	ಭೌತಿಕ ಸಾಧನೆ			ಆರ್ಥಿಕ ಸಾಧನೆ		
	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	೧೦೬.೫
೨೦೧೩-೧೪	೨೦೦	೭೯	೨೭೯	೭೫.೪೪	೩೧.೦೮	೧೦೪.೭
೨೦೧೩-೧೫	೨೦೪	೭೫	೨೭೯	೭೮.೧೫	೨೬.೫೩	೧೯೮.೭
೨೦೧೪-೧೬	೨೮೧	೯೬	೩೭೭	೧೪೯.೮	೪೮.೯೨	೧೯೮.೭
೨೦೧೫-೧೭	೨೨೧	೧೦೨	೩೨೩	೧೭೯.೪	೬೬.೫೨	೨೪೫.೯
ಒಟ್ಟು	೯೦೬	೩೫೨	೧೨೫೮	೪೮೨.೮	೧೭೩.೧	೬೫೫.೮

ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ ೨೦೧೩

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನಿಷ್ಠಾನಗೊಳಿಸಲು ಕರ್ನಾಟಕ ಸರ್ಕಾವು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ –೨೦೧೩ನ್ನು ೨೦೧೪–೧೫ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ.

ಸದರಿ ಅಧಿನಿಯಮದ ಅನ್ವಯ ಒಂದು ಆರ್ಥಿಕ ವರ್ಷದಲ್ಲಿ ಖರ್ಚಾಗದೇ ಉಳಿಯುವ ಅನುದಾನ ಲೆಕ್ಕಪರಿಶೋಧನೆಯ ನಂತರ ಮುಂದಿನ ಆರ್ಥಿಕ ವರ್ಷದ ಆಯುವ್ಯಕ್ಕೆ ಸೇರ್ಪಡೆಯಾಗುತ್ತದೆ. ಸದರಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡದೆ ಉದ್ದೇಶ ಪೂರ್ವಕವಾಗಿ ನಿರ್ಲಕ್ಷಿಸುವ ಅಧಿಕಾರಿಗಳ ವಿರುದ್ಧ ಕನೂನುಬದ್ಧ ಕ್ರಮಕೈಗೊಳ್ಳಲು ಅವಕಾಶವಿರುತ್ತದೆ.

ಉಪಯೋಜನೆಯಡಿ ಒದಗಿಸಿರುವ ಅನುದಾನ ವಿವರ

೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆಯ ಪೈಕಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಶೇ.೧೭.೧೫ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ೬.೯೫ ರಷ್ಟಿದೆ. ಅದರಂತೆ ಒಟ್ಟು ಆಯವ್ಯಯದ ಪೈಕಿ ಶೇ. ೨೪.೧ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭ್ಯುದ್ಯಯಕ್ಕಾಗಿ ಮೀಸಲಾಗಿಡುವುದು.

ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಹಾಗೂ ಕಾಯ್ದೆ ಜಾರಿಗೆ ಬಂದ ನಂತರ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಒದಗಿಸಿದ ಅನುದಾನದ ತುಲನಾತ್ಮಕ ವಿವರ

ಕೋಷ್ಟಕ ೪.೬. ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ

ವರ್ಷ	ಒಟ್ಟು ಯೋಜನಾ ಗಾತ್ರ	ನಿಗದಿಪಡಿಸಿದ ಅನುದಾನ			ಖರ್ಚು		
		ಎಸ್.ಸಿ/ಎಸ್.ಟಿ	ಟಿ.ಎಸ್.ಪಿ	ಒಟ್ಟು	ಎಸ್.ಸಿ/ಎಸ್.ಟಿ	ಟಿ.ಎಸ್.ಪಿ	ಒಟ್ಟು
೨೦೦೮-೦೯	೨೬೧೮೮.೫೩	೩೨೩೨.೪೪	೧೨೬೩.೯	೪೪೯೬.೩	೨೫೭೫.೬೮	೯೮೮.೭೬	೩೫೬೪.೪
೨೦೦೯-೧೦	೨೯೫೦೦	೨೯೧೬.೫೯	೧೧೧೪	೪೦೩೦.೬	೨೪೫೭.೪೬	೯೧೬.೧೫	೩೩೭೩.೬
೨೦೧೦-೧೧	೩೧೦೫೦	೩೨೬೮	೧೩೪೪.೨	೪೬೧೨.೨	೨೯೨೬	೧೧೧೬.೬	೪೦೪೨.೬
೨೦೧೧-೧೨	೩೮೦೭೦	೪೬೩೩.೩೩	೧೮೬೭	೬೫೦೦.೪	೩೯೩೧.೫೬	೧೪೭೧	೫೪೦೨.೫
೨೦೧೨-೧೩	೪೨೦೩೦	೫೧೨೫	೨೦೭೫.೬	೭೨೦೦.೬	೪೧೯೮.೫೧	೧೬೭೯.೮	೫೮೭೮.೩
ಒಟ್ಟು	೧೬೬೮೩೮.೫೩	೧೯೧೭೫.೪೧	೭೬೬೪.೭	೨೬೮೪೦	೧೬೦೮೯.೨೧	೬೧೭೨.೨೯	೨೨೨೬೧.೫

ಕೋಷ್ಟಕ ೪.೭. ಪರಿಶಿಷ್ಟರಿಗೆ ನೀಡಿದ ಅನುದಾನದ ವಿವರ

ವರ್ಷ	ಒಟ್ಟು ಯೋಜನಾ ಗಾತ್ರ	ನಿಗದಿಪಡಿಸಿದ ಅನುದಾನ			ಖರ್ಚು		
		ಎಸ್.ಸಿ/ಎಸ್.ಟಿ	ಟಿ.ಎಸ್.ಪಿ				
೨೦೧೩-೧೪	೪೮೬೮೫	೬೧೩೫.೫೭	೨೪೮೦.೭೪	೮೬೧೬.೩೧	೫೨೫೩.೩೧	೧೯೩೯.೭೭	೭೧೯೩.೦೮
೨೦೧೪-೧೫	೬೫೬೦೦	೧೧೫೧೯	೪೩೧೫.೧೮	೧೫೮೩೪.೧೭	೧೦೧೬೩.೯	೩೮೩೪.೪೧	೧೩೯೯೮.೩
೨೦೧೫-೧೬	೭೨೫೯೬.೮೧	೧೧೭೭೩.೫	೪೫೮೨.೭೨	೧೬೩೫೬.೨೬	೧೧೨೫೯.೫	೪೩೪೪೪.೯	೧೫೬೦೪.೪
೨೦೧೬-೧೭	೭೫೬೬೫	೧೪೨೫೩.೩	೫೬೩೧.೬೭	೧೯೮೮೪.೯೩	೧೨೯೯೮.೪	೫೧೦೨.೩	೧೮೧೦೦.೭
೨೦೧೭-೧೮	೧೮೬೫೬೧	೧೯೭೧೧.೫	೭೯೯೨.೦೩	೨೭೭೦೩.೫೪	ಕಾರ್ಯಕ್ರಮಗಳು	ಅನುಷ್ಠಾನ ಪ್ರಗತಿಯಲ್ಲಿದೆ.	ಕಾಯ್ದೆಜಾರಿಗೆ ಬಂದ ನಂತರ
ಒಟ್ಟು	೪೪೯೧೦೭.೮	೬೩೩೯೨.೯	೨೫೦೦೨.೩	೮೮೩೯೫.೨೧	೩೯೮೭೨.೨	೧೫೩೪೯.೬	೫೫೩೩೧.೮

ಎಸ್.ಸಿ/ಎಸ್.ಟಿ/ಟಿಎಸ್.ಪಿ ಯೋಜನೆಯಡಿ ವಿವಿಧ ಇಲಾಖೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳು

ಕೈ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಉಪಕರಣಗಳು ಹನಿ ನೀರಾವರಿ ಮತ್ತು ತುಂತುರು ನೀರವರಿ ಘಟಕಗಳು / ಗ್ರೀನ್‌ಹೌಸ್, ಪಾಲಿಹೌಸ್ ಇತ್ಯಾದಿ ಸೌಲಭ್ಯಗಳನ್ನು ಶೇಕಡ ೯೦ರ ಸಹಾಯಧನದಲ್ಲಿ ನಿಡಲಾಗುತ್ತದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಪ್ರತಿ ಲೀಟರ್ ಹಾಲಿಗೆ ರೂ. ೫/-ರಂತೆ ಪ್ರೋತ್ಸಾಹಧನ ಹಾಲುಕರೆಯುವ ಹಸು ಎಮ್ಮೆ ಘಟಕಕ್ಕೆ ಶೇ. ೫೦ರಷ್ಟು ಸಹಾಯಧನ ನೀಡಲಾಗುತ್ತದೆ. ಪಶುವೈದ್ಯಕೀಯ ಮತ್ತು ಮೀನುಗಾರಿಕೆ ಕೋರ್ಸ್‌ಗಳಿಗೆ ಶುಲ್ಕ ಮರುಪಾವತಿ ಹಾಗೂ ಉಚಿತ ಲ್ಯಾಪ್‌ಟಾಪ್ ವಿತರಣೆ. ಆಡು/ಕುರಿ ಘಟಕಕ್ಕೆ ಸಹಾಯಧನ ಹಾಗೂ ವಿಮಾ ಸೌಲಭ್ಯ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ವಸತಿ ಸೌಲಭ್ಯ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಸಣ್ಣ ದೋಣಿ ಮತ್ತು ಬಲೆ ವಿತರಣೆ.

ಲೋಕೋಪಯೋಗಿ ಇಲಾಖೆ

ಪರಿಶಿಷ್ಟ ಜಾತಿ ಉಪಯೋಜನೆ/ ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಪ.ಜಾತಿ/ ಪ.ಪಂಗಡದ ಕಾಲೋನಿಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮತ್ತು ಇತರೆ ಮೂಲಭೂತ ಸೌಲಭ್ಯ ಗಳನ್ನು ಒದಗಿಸಲಾಗುತ್ತದೆ.

ನೀರಾವರಿ ಇಲಾಖೆ

ನೀರಾವರಿ ಸೌಲಭ್ಯಕ್ಕಾಗಿ ಏತ ನೀರಾವರಿ, ತೆರೆದಬಾವಿ ಇತ್ಯಾದಿ ಸೌಲಭ್ಯಗಳನ್ನು ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣದ ಆಧಾರದ ಮೇಲೆ ನೀಡಲಾಗುತ್ತದೆ. ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ರಸ್ತೆ ಸಮುದಾಯಭವನ ಇತ್ಯಾದಿ ಮೂಲಭೂತ ಸೌರ್ಕಗಳನ್ನು ಒದಗಿಸಲಾಗುತ್ತದೆ.

ಸಹಕಾರ ಇಲಾಖೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಪಡೆದ ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ಹಾಗೂ ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೊಂದಣೆ ಶುಲ್ಕ ನೀಡಲಾಗುತ್ತದೆ. ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೊಂದಿರುವ ಶುಲ್ಕ ನೀಡಲಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಯಶಸ್ವಿನಿ ಯೋಜನೆಯಡಿಯಲ್ಲಿ ಆರೋಗ್ಯ ಸೌಲಭ್ಯ ನೀಡಲಾಗುತ್ತದೆ. ಪರಿಶಿಷ್ಟ ಪಂಗಡ ಉಪಯೋಜನೆಯಡಿ ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಆರ್ಥಿಕ ಸೌಲಭ್ಯ ನೀಡಲಾಗುತ್ತದೆ.

ಕಾರ್ಮಿಕ ಉದ್ಯೋಗ ಮತ್ತು ತರಬೇತಿ ಇಲಾಖೆ

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಐ.ಟಿ.ಐ ವಿದ್ಯರ್ಥಿಗಳಿಗೆ ಉಚಿತ ಟೂಲ್‌ಕಿಟ್ ವಿತರಣೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರಯವ ಖಾಸಗಿ ಐ.ಟಿ.ಐಗಳಿಗೆ ಆರ್ಥಿಕ ಸಹಾಯ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಉದ್ಯೋಗಿಗಳಿಗೆ ಇ.ಪಿ.ಫ್ ಇ.ಎಸ್.ಐ ವಂತಿಗೆಯನ್ನು ಪ್ರಸ್ತಕ ಸಾಲಿನಿಂದ ಸರ್ಕಾರದಿಂದ ಭರಿಸಲಾಗುತ್ತಿದೆ.

ಪ್ರವಾಸೋಧ್ಯಮ ಇಲಾಖೆ

ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಗರಿಷ್ಟ ರೂ.೩.೦೦ ಲಕ್ಷ ಸಹಾಯಧನದಲ್ಲಿ ಪ್ರವಾಸಿ ಟ್ಯಾಕ್ಸಿಗಳನ್ನು ನೀಡಲಾಗುತ್ತಿದ್ದು ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಲದ ರೂಪದಲ್ಲಿ ಭರಿಸಲಾಗುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಗೈಡ್ ತರಬೇತಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕೈಗಾರಿಕಾ ಶೆಡ್/ನಿವೇಶನ ಹಂಚಿಕೆಯಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೀಸಲಿರಿಸಲಾಗಿದೆ. ಕೈಗಾರಿಕಾ ಅಭಿವೃದ್ಧಿ ಮಂಡಳಿ/ನಿಗಮಗಳಿಂದ ಕೈಗಾರಿಕಾ ಶೆಡ್/ನಿವೇಶನ ಪಡೆಯಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ. ೩.೨೫ ಲಕ್ಷದವರಿಗೆ ಘಟಕ ವೆಚ್ಚ ನೀಡಲಾಗುತ್ತಿದೆ.

ಇಂಧನ ಇಲಾಖೆ

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿ ಕೊರೆಸುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ಹಾಗೂ ಸಾಮೂಹಿಕ ಶೌಚಾಲಯ ನಿರ್ಮಾಣ ಮಾಡಲಾಗುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ.

ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಇಲಾಖೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಮರುಪಾವತಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್

ವಿತರಣೆ. ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ, ಸಮವಸ್ತ್ರ, ಶೂ, ಸೈಕಲ್ ಇತ್ಯಾದಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋದನಾ ವೆಚ್ಚ ಪಾವತಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳ ಆವರಣದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಗುತ್ತಿದೆ. ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಶಾಲಾ ಕಟ್ಟಡಗಳ ಆಧುನೀಕರಣ ಹಾಗೂ ಮೇಲ್ದರ್ಜೇಗೇರಿಸಲು ಅನುದಾನ ಅನುದಾನ ಬಿಡುಗಡೆ ಮಾಡಲಗುತ್ತದೆ.

ವೈದ್ಯಕೀಯ ಶಿಕ್ಷಣ ಇಲಾಖೆ

ವಾರ್ಷಿಕ ವರಮಾನ ರೂ.೨.೫೦ ಲಕ್ಷದಿಂದ ರೂ.೧೦.೦೦ ಲಕ್ಷದವರೆಗಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಂ.ಬಿ.ಬಿ.ಎಸ್ ಬಿ.ಡಿ.ಎಸ್ ಮತ್ತು ಇತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೇಕಡ ೫೦ ರಷ್ಟು ಪ್ರವೇಶ ಶುಲ್ಕ ಮರುಪಾವತಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ. ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ, ಸಮವಸ್ತ್ರ, ಹಾಗೂ ಸ್ಟೆತೋಸ್ಕೋಪ್‌ಗಳನ್ನು ವಿತರಣೆ ಮಾಡಲಾಗುತ್ತಿದೆ. ವಿಶ್ವವಿದ್ಯಾಲಯಗಳ ಆವರಣದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ಸರ್ಕಾರಿ/ಸ್ವಾಯತ್ತ ವೈದ್ಯಕೀಯ ಸಂಸ್ಥೆ, ವೈದ್ಯಕೀಯ ಕಾಲೇಜುಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಸೌಲಭ್ಯ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸಂಚಾರಿ ಆರೋಗ್ಯ ಘಟಕಗಳ ನಿರ್ವಹಣೆ ಮಾಡಲಾಗುತ್ತಿದೆ. ಆರೋಗ್ಯ ವಿಮೆ. ಸೇವೆ ಹಾಗೂ ಹೆಚ್.ಐ.ವಿ ರೋಗಿಗಳಿಗೆ ಉಚಿತ ವೈದ್ಯಕೀಯ ಸೌಲಭ್ಯ ಮಾಡಲಾಗುತ್ತಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಭಾಗ್ಯಲಕ್ಷ್ಮಿ ಯೋಜನೆ

ಮೊದಲನೆಯ ಮತ್ತು ಎರಡನೆಯ ಹೆಣ್ಣುಮಗುವಿಗೆ ರೂ. ೧೯೩೦೦/- ಮತ್ತು ರೂ. ೧೮೩೫೦/-ರ ದರದಲ್ಲಿ ಜೀವವಿಮಾ ಬಾಂಡ್ ನೀಡಲಾಗುತ್ತಿದ್ದು ಮಗುವಿಗೆ ೧೮ ವರ್ಷ ತುಂಬಿದಾಗ ರೂ. ೧.೦೦ ಲಕ್ಷ ಪಾವತಿಯಾಗುತ್ತದೆ. ದೇವದಾಸಿ ಹಾಗೂ ಲೈಂಗಿಕ ಕಾರ್ಯಕರ್ತೆಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ದೇದಾಸಿಯರಿಗೆ ವಸತಿ ನಿರ್ಮಾಣ ಹಾಗೂ ಪಿಂಚಣಿ ಸೌಲಭ್ಯ. ಐ.ಡಿ.ಎಸ್-ರಾಷ್ಟ್ರೀಯ ಪೌಷ್ಠಿಕ ಆಹಾರ ಯೋಜನೆ, ವಿಕಲಚೇತನ ಮಕ್ಕಳಿಗೆ ವಿದ್ಯಾರ್ಥಿವೇತನ ಹಾಗೂ ಉಚಿತ ಉಪಕರಣಗಳನ್ನು ಒದಗಿಸಲಾಗುತ್ತಿದೆ. ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಆರ್ಥಿಕ ಉನ್ನತಿಗೆ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ವಸತಿ ಇಲಾಖೆ

ಡಾ. ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆ ಹಾಗೂ ಇತರ ವಸತಿ ಯೋಜನೆಗಳಡಿ ಗ್ರಾಮೀಣ ಪ್ರದೇಶಗಳಲ್ಲಿ ರೂ. ೧.೭೫ ಲಕ್ಷ ಹಾಗೂ ನಗರಪ್ರದೇಶಗಳಲ್ಲಿ ರೂ. ೨.೦೦ ಲಕ್ಷ ಘಟಕ ವೆಚ್ಚದಲ್ಲಿ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತದೆ.

ನಗರಾಭಿವೃದ್ಧಿ ಇಲಾಖೆ

ಖಾಯಂ ಪೌರಕಾರ್ಮಿಕರಿಗೆ ಮನೆ ನಿರ್ಮಾಣಕ್ಕೆ ರೂ. ೬.೦೦ ಲಕ್ಷ ಸಹಾಯಧನ ನೀಡಲಾಗುತ್ತದೆ. ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಗರ ನೀರುಪೂರೈಕೆ ಕಾರ್ಯಕ್ರಮಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ನಗರಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಜನವಸತಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುತ್ತದೆ.

ಕಂದಾಯ ಇಲಾಖೆ

ಸಾಮಾಜಿಕ ಭದ್ರತಾ ಯೋಜನೆಯಡಿ ವೃದ್ಧಾಪ್ಯ ವೇತನ ವಿಧವಾ ವೇತನ ಇತ್ಯದಿ ಪಿಂಚಣಿಗಳನ್ನು ನೀಡಲಾಗುತ್ತದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪತ್ರಿಕೋದ್ಯಮಗಳಿಗೆ ಮಾಧ್ಯಮ ಕಿಟ್ ವಿತರಣೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರ್ದೇಶಕರು ನಿರ್ಮಿಸುವ ಚಲನಚಿತ್ರಗಳ ಬಿಡುಗಡೆ ರೂ.೧೦.೦೦ ಲಕ್ಷ ಸಹಾಯಧನ. ಪರಿಶಿಷ್ಟ ಜಾತಿ ಉಪಯೋಜನೆ/ಪರಿಶಿಷ್ಟ ಪಂಗಡದ ಉಪಯೋಜನೆ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

ಯುವಜನ ಸಬಲೀಕರಣ ಮತ್ತು ಕ್ರಿಡಾ ಇಲಾಖೆ

ರಾಜ್ಯ/ರಾಷ್ಟ್ರಮಟ್ಟ ಹಾಗೂ ಅಂತರಾಷ್ಟ್ರೀಯ ಮಟ್ಟದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ರೂ. ೧.೦೦ರಿಂದ ೫.೦೦ ಲಕ್ಷದವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ವ್ಯಾಯಾಮಶಾಲೆ(ಜಿಮ್) ಸ್ಥಾಪನೆಗೆ ರೂ. ೨.೦೦ ಲಕ್ಷದವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಕ್ರೀಡಾ ವಸತಿ ಶಾಲೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯ ಮತ್ತು ವಸತಿ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ನೀಡಲಾಗುತ್ತದೆ.

ಯೋಜನೆ ಇಲಾಖೆ

ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳಾದ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಬಯಲುಸೀಮೆ ಅಭಿವೃದ್ಧಿ ಮಂಡಳಿ ಮೂಲಕ ಮಟ್ಟದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕಾರ್ಯಗಳಾದ ಕಾಂಕ್ರೀಟ್ ಹಾಗೂ ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನ ಗೊಳ್ಳಿಸಲಾಗುತ್ತದೆ.

ಅರಣ್ಯ ಇಲಾಖೆ

ಅರಣ್ಯ ಮತ್ತು ಅರಣ್ಯ ಹಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಉಚಿತ ಎಲ್‌ಪಿಜಿ ಗ್ಯಾಸ್ ಸೌಲಭ್ಯ. ಅರಣ್ಯದ ಹಂಚಿನ ಪ್ರದೇಶದಿಂದ ಹೊರಗೆ ಬಂದು ವಾಸಿಸುವ ಪರಿಶಿಷ್ಟ ಪಂಗಡದ ಕುಟುಂಬಗಳ ಪುನರ್ವಸತಿಗೆ ರೂ. ೧೦.೦೦ ಲಕ್ಷ ಧನಸಹಾಯ

ಸಾರಿಗೆ ಇಲಾಖೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಭಾರೀ ವಾಹನ ಚಾಲನಾ ತರಬೇತಿ ಮೀಸಲು ಕ್ಷೇತ್ರಗಳಲ್ಲಿ ಬಸ್ ನಿಲ್ದಾಣಗಳ ನಿರ್ಮಾಣ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಸೌಲಭ್ಯ ಒದಗಿಸಲಾಗಿದೆ.[೬]

ದಲಿತರ ಅಭಿವೃದ್ಧಿಯೇ ಆಗಿಲ್ಲ ಎನ್ನವ ವಾದವನ್ನು ಸುಲಭದಲ್ಲಿ ತಿರಸ್ಕರಿಸಬಹುದು. ಈ ವಾದವನ್ನು ಮಾತ್ರ ತಿರಿಸ್ಕರಿಸುವುದಲ್ಲ ಅಭಿವೃದ್ಧಿಯಾಗಿಲ್ಲ ಎನ್ನುವವರನ್ನು ತಿರಿಸ್ಕರಿಬಹುದು. ಜೊತೆಗೆ ಸುಮಾರು ಆರು ದಶಕಗಳಿಂದ ಉದ್ಯೋಗ, ಶಿಕ್ಷಣ, ರಾಜಿಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮೀಸಲಾತಿ ನೀಡಿರುವ ಹಿನ್ನೆಲೆಯಲ್ಲಿ ದಲಿತರ ಬದುಕು ಬದಲೇ ಆಗಿಲ್ಲವೆಂದು ವಾದಿಸುವುದು ಎಷ್ಟು ಸರಿ ಎನ್ನುವ ಪ್ರಶ್ನೆಕೂಡ ಇದೆ. ನಾನು ದಲಿತರ ಬದುಕು ಬದಲೇ ಆಗಿಲ್ಲವೆಂದು ವಾದಿಸುತ್ತಿಲ್ಲ ಆದರೆ ನನ್ನ ಪ್ರಶ್ನೆ ಇರುವುದು ಇವರ ಬದುಕಲ್ಲಾದ ಬದಲಾವಣೆಗಳನ್ನು ಎರಡು ರೀತಿಯಲ್ಲಿ ಮಾಪನ ಮಾಡಬಹುದು. ಒಂದು, ದಲಿತರ ಇಂದಿನ ಬದುಕನ್ನು ಅವದ್ದೇ ಹಿಂದಿನ ಬದುಕಿಗೆ ಹೋಲಿಸಿ ತೀರ್ಮಾನಿಸುವುದು. ಎರಡು, ದಲಿರತರ ಬದುಕಲ್ಲಾದ ಬದಲಾವಣೆಗಳನ್ನು ದಲಿತೇತರ ಬದುಕಲ್ಲಾದ ಬದಲಾವಣೆಗಳೊಂದಗೆ ಹೋಲಿಸಿ ನೋಡಿ ತೀರ್ಮಾನಕ್ಕೆ ಬರುವುದು. ಈ ಎರಡು ವಿಧಾನಗಳಲ್ಲಿ ಮೊದಲ ವಿಧಾನದಿಂದ ದಲಿತರ ಬದುಕಲ್ಲಾದ ಬದಲಾವಣೆಗಳನ್ನು ಪರಿಶೀಸಿದರೆ ಖಂಡಿತವಾಗಿಯೂ ಸಾಕಷ್ಟು ಬದಲಾವಣೆಗಳನ್ನು ನೋಡಬಹುದು. ೧೯೦೧ರಲ್ಲಿ ಮೈಸೂರು ಪ್ರಾಂತದಲ್ಲಿ ಬ್ರಾಹ್ಮಣರ ಸಾಕ್ಷರತಾ ಪ್ರಮಾಣಶೇ.೬೮ ಇದ್ದ ಸಂದರ್ಭದಲ್ಲಿ ಪರಿಷ್ಟ ಜಾತಿಯ ಸಾಕ್ಷರತಾ ಪ್ರಮಾಣ ಶೇಕಡಾ ಒಂದುರಷ್ಟು ಇರಲಿಲ್ಲ. ಆದರೆ ಇಂದು ದಲಿತರ ಸಾಕ್ಷರತಾ ಪ್ರಮಾಣ ತುಂಬಾ ಸುಧಾರಿಸಿದೆ. ೨೦೧೧ರ ಸೆನ್ಸಸ್ ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರತಾ ಪ್ರಮಾಣ ಶೇ.೭೫ರಷ್ಟಿರುವಾಗ ದಲಿತರ ಸಾಕ್ಷರತಾ ಪ್ರಮಾಣ ಶೇ.೬೫ರಷ್ಟಿದೆ.

ಇದೇ ರೀತಿಯಲ್ಲಿ ಎಪ್ಪತ್ತರ ದಶಕದಲ್ಲಿ ಸಿ ಪಾರ್ವತಮ್ಮನವರ (೧೯೮೪) ಕರ್ನಾಟಕದ ದಲಿತಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಸ್ಥಿತಿಗಳನ್ನು ಅಧ್ಯಯನ ಮಾಡುವಾಗ ದಲಿತರ ಉದ್ಯೋಗಗಳನ್ನು ಪಟ್ಟಿ ಮಾಡಿದ್ದಾರೆ. ಆ ಸಂದರ್ಭದಲ್ಲಿ ಶೇ. ೭೦ಕ್ಕಿಂತಲೂ ಹೆಚ್ಚಿನ ದಲಿತರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಡಗಿಸಿಕೊಂಡಿದ್ದರು. ಅಂದರೆ ಬಹುತೇಕರು ಕೃಷಿ ಕಾರ್ಮಿಕರಾಗಿದ್ದರು. ಇತ್ತೀಚಿನ ದಲಿತರ ಅಭಿವೃದ್ಧಿ ಕುರಿತ ಅಧ್ಯಯನವೊಂದರ ಪ್ರಕಾರ ೨೦೦೭ರಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.

೩೦ಕ್ಕೆ ಇಳಿದಿದೆ. ಬದಲಾವಣೆ ಕೇವಲ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಸೀಮಿತವಾಗಿಲ್ಲ, ಎಲ್ಲ ಉದ್ಯೋಗಗಳು ಬದಲಾಗಿವೆ. ಎಪ್ಪತ್ತರ ದಶಕದಲ್ಲಿ ಕೃಷಿಯ ನಂತರ ಅತೀ ಹೆಚ್ಚು ಜನರು (ಶೇ.೧೧ರಷ್ಟು) ಚರ್ಮ, ಚಪ್ಪಲಿ, ಶೂ ಹೊಲಿಯುವ ಕೆಲಸದಲಲಿ ತೊಡಗಿಸಿಕೊಂಡಿದ್ದರು. ಆದರೆ ಇಂದು ಈಕೆಲಸಗಳಲ್ಲಿ ಶೇಕಡ ಒಂದಕ್ಕಿಂತಲೂ ಕಡಿಮೆ ಜನರನ್ನು ನೋಡಬಹುದು. ಎಪ್ಪತ್ತರ ದಶಕಲ್ಲಿ ಕರಕುಸಲ, ಕುಂಬಾರಿಕೆ, ತಮಟೆ, ವಾಲಗ, ಪೂಜಾರಿಕೆ, ತೋಟಿ, ತಳವಾರ, ನೇಕಾರ, ಗಾರೆ, ಕಟ್ಟಡ ಮುಂತಾದ ಕೆಲಸಗಳಲ್ಲಿ ಹೆಚ್ಚುಕಡಿಮೆ ಶೇ. ೧೭ರಷ್ಟು ಜನ ತೊಡಗಿಸಿ ಕೊಂಡಿದ್ದರು. ಆದರೆ ಇಂದು ಚಪ್ಪಲಿ, ಶೂ (ಶೇ.೦.೫೧) ಮತ್ತು ಕಟ್ಟಡದ ಕೆಲಸ (ಶೇ.೩) ಬಿಟ್ಟರೆ ಇನ್ನುಳಿದ ಕೆಲಸಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ದಲಿತರು (ಶೇ.೧ರಷ್ಟು) ಆಧುನಿಕ ಕೆಲಸಗಳಲ್ಲಿ ಇದ್ದುರು. ಆದರೆ ಇಂದು ಎಲ್ಲ ಉದ್ಯೋಗಳಲ್ಲೂ – ಡ್ರೈವರ್‌ಗಳು, ಪ್ಲಂಬರ್, ಫಿಟ್ಟರ್, ಇಲೆಕ್ಟ್ರೀಶಿಯನ್, ಸೈನಿಕರು, ನರ್ಸ್, ಪೋಸ್ಟ್‌ಮೆನ್, ಟೀಚರ್, ಪೋಲಿಸ್, ಪ್ರಸ್ ಮತ್ತು ಇಲೆಕ್ಟ್ರಾನಿಕ್ ಮಿಡಿಯಾ, ಸಮಾಜ ಸೇವೆ, ಕ್ಲರ್ಕ್, ಡಾಕ್ಟರ್, ಇಂಜಿನೀಯರ್, ಲಾಯರ್, ಪ್ರೋಫೆಸರ್ ಮುಂತಾದ ಕೆಲಸಗಳಲ್ಲಿ – ದಲಿತರನ್ನು ನೋಡಬಹುದು.

ಒಂದು ಕಾಲದಲ್ಲಿ ದಲಿತರ ಅತ್ಯಲ್ಪ ಸಂಖ್ಯೆಯ ಜನರಲ್ಲಿ ಭೂಮಿ ಇತ್ತು. ಆದರೆ ಇಂದು ಶೇ.೪೫ರಷ್ಟು ಅಥವಾ ೧೩.೮೭ ಲಕ್ಷ ದಲಿತ ಕುಟುಂಬಗಳು (ಬುಡಕಟ್ಟುಗಳನ್ನು ಸೇರಿಸಿಕೊಂಡು) ಭೂಮಿ ಹೊಂದಿದೆ. ಕರ್ನಾಟಕದಲ್ಲಿ ಒಟ್ಟು ೧೨೦.೮೮ ಲಕ್ಷ ಹೆಕ್ಟೇರು ಕೃಷಿ ಭೂಮಿ ಇದ್ದರೆ ಇದರಲ್ಲಿ ೧೭.೭೯ ಲಕ್ಷ ಹೆಕ್ಟೇರು ಅಥವಾ ಶೇ. ೧೪.೭೧ರಷ್ಟು ಕೃಷಿ ಭೂಮಿ ದಲಿತರ ಸ್ವಾಧೀನ ಇದೆ. (ಕರ್ನಾಟಕ ಸರಕಾರ, ೨೦೧೩). ಪ್ರತಿನೂರು ರೂಪಾಯಿ ಸಾಲದಲ್ಲಿ ನಲ್ವತ್ತು ರೂಪಯಿಗಳನ್ನು ಆದ್ಯತಾ ವಲಯಕ್ಕೆ ನೀಡಬೇಕು. ಆದ್ಯತಾ ವಲಯಕ್ಕೆ ನೀಡಿವ ನಲ್ವತ್ತು ರೂಪಾಯಿಗಳಲ್ಲಿ ಹತ್ತು ರೂಪಾಯಿಗಳನ್ನು ಸಮಾಜದ ಬಲಹೀನರಿಗೆ ಅಥವಾ ಬಡವರಿಗೆ ನೀಡಬೇಕು. ಬಲಹೀನರಿಗೆ ನೀಡುವ ಹತ್ತು ರೂಪಾಯಿಗಳಲ್ಲಿ ಹೆಚ್ಚು ಕಡಿಮೆ ಶೇ. ೩ರಷ್ಟು ಅಥವಾ ಮೂರು ರೂಪಾಯಿಗಳು ದಲಿತರಿಗೆ ತಲುಪತ್ತದೆ. ೧೯೯೨ರಲ್ಲಿ ವಿವಿಧ ಮೂಲಗಳಿಂದ ಸಾಲ ಪಡೆದ ದಲಿತರಲ್ಲಿ ಶೇ. ೬೧ರಷ್ಟು ದಲಿತರು ಸಂಘಟಿತ ಅಂದರೆ ಬ್ಯಾಂಕ್, ಸೋಸೈಟಿ ಮುಂತಾದ ಮೂಲಗಳಿಂದ ಸಾಲ ಪಡೆದಿದ್ದಾರೆ. ಹೀಗೆ ದಲಿತರ ಇಂದಿನ ಅಭಿವೃದ್ಧಿಯನ್ನು ಅವರದ್ದೇ ಹಿಂದಿನ ಅಭಿವರದ್ಧಿ ಸ್ಥಿತಿಗತಿಗೆ ಹೋಲಿಸಿದರೆ ಖಂಡಿತವಾಗಿಯೂ ಸುಧಾರಣೆ ಇದೆ.

ಈ ಬಗೆಯ ಬದಲಾವಣೆಗಳನ್ನು ಎಲ್ಲ ಸಮುದಾಯಗಳಲ್ಲೂ ಕಾಣಬಹುದು. ಇಡೀ ವ್ಯವಸ್ಥೆಯಲ್ಲಿ ಇಷ್ಟೊಂದು ಬದಲಾವಣೆಗಳಾಗುವಾಗ ವ್ಯವಸ್ಥೆಯೊಳಗಿರುವ. ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಪ್ರಭಾವಿಸಲ್ಪಡುತ್ತಾರೆ. ಆದರೆ ಈ ಪ್ರಭಾವ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಅಡಿಮೇಲು ಮಾಡುವಂತೆಹುದೇ ಅಥವಾ ವ್ಯವಸ್ಥೆಯ ಮೂಲಗುಣಗಳನ್ನು ಯಥಾರೂಪದಲ್ಲಿರಿಸಿ ಕೊಂಡು ಮೇಲ್ಪದರದರಲ್ಲಿ ನಡೆಯುತ್ತಿರುವ ಬದಲಾವಣೆಗಳೇ ಎನ್ನುವುದು ಮುಖ್ಯ. ಕೆಲವೊಂದು

ಗುಣಲಕ್ಷಣಗಳನ್ನು ನೋಡಿದರೆ. ಇಡೀ ಪರಿವರ್ತನೆ ಮಫಲ್ಪದಕ್ಕೆ ಸೀಮಿತಗೊಂಡ ಚಿತ್ರಣ ಲಭ್ಯವಾಗುತ್ತದೆ. ಇಂದು ಕೂಡ ಅಭಿವೃದ್ಧಿಯ ಯಾವುದೆ ಸೂಚ್ಯೂಂಕದಲ್ಲೂ ಶಿಕ್ಷನ, ಆರೋಗ್ಯ, ವಸತಿ, ಕುಡಿಯುವ ನೀರು, ಉದ್ಯೋಗ, ನೈರ್ಮಲ್ಯ, ಭೂಹಿಡುವಳಿ, ವ್ಯಾಪಾರ, ಉದ್ದಿಮೆ, ಆದಾಯ ಮುಂತಾದ ಸೂಚ್ಯಾಂಕಗಳಲ್ಲಿ ದಲಿತೇತರರಿಗೆ ಹೋಲಿಸಿ ನೋಡಿದಾಗ ದಲಿತರು ಏಣಿಯ ಬುಡದಲ್ಲಿರುವ ಉದಾರಣೆಗಳು ಹೆಚ್ಚಿವೆ. ಎಲ್ಲ ಉದ್ಯೋಗಗಳಲ್ಲು ದಲಿತರಿದ್ದಾರೆ. ಆದರೆ ಎಲ್ಲ ಉದ್ಯೋಗಗಳನ್ನು ಅವುಗಳು ಹೊಂದಿರುವ ಆದಾಯ, ಅಧಿಕಾರ ಮತ್ತು ಸ್ಥಾನಮಾನಗಳ ಮಾನದಂಡದಿಂದ ಶ್ರೇಣೀಕರಿಸಿದರೆ ಅತೀ ಹೆಚ್ಚು ಸಂಖ್ಯೆ ದಲಿತರನ್ನು ಏಣಿಯ ಬುಡದಲ್ಲಿರುವ ಉದ್ಯೋಗಗಳಲ್ಲಿ ನೋಡಬಹುದು. ಅಷ್ಟು ಮಾತ್ರವಲ್ಲ ಕೆಲವು ಕೆಲಸಗಳಲ್ಲಿ ಉದಾಹರಣೆಗೆ ಸಫಾಯಿ ಕರ್ಮಚಾರಿ ಕೆಲಸದಲ್ಲಿ ದಲಿತೇತರರನ್ನು ನೋಡುವುದು ಕಷ್ಟ. ಇದೇ ರೀತಿಯಲ್ಲಿ ಪ್ರತಿ ಊರಲ್ಲಿ ಕೇರಿ ಇದ್ದಂತೆ ಪ್ರತಿ ಪೇಟೆಯಲ್ಲೊಂದು ಅಥವಾ ಹಲವು ಕೊಳಚೆ ಪ್ರದೇಶಗಳಿವೆ. ಊರ ಕೇರಿಯಲ್ಲಿ ದಲಿತರಿದ್ದಂತೆ ಪ್ರತಿ ಕೊಳಚೆ ಪ್ರದೇಶದಲ್ಲಿ ದಲಿತರೆ ಹೆಚ್ಚಿದ್ದಾರೆ. ಅತ್ಯಂತ ಬಡವರಲ್ಲಿ ದಲಿತರ ಸಂಖ್ಯೆ ಹೇಗೆ ಹೆಚ್ಚಿದೆಯೋ ಅದೇ ರೀತಿ ಅನುಕೂಲಸ್ಥರ ಪಟ್ಟಿಯಲ್ಲಿ ದಲಿತರ ಸಂಖ್ಯೆ ಅತ್ಯಂತ ಕಡಿಮೆ ಇದೆ ಎನ್ನುವುದನ್ನು ಈ ಪುಸ್ತಕದ ಮೊದಲ ಭಾಗದಲ್ಲಿ ನೀಡಿದ ಅಂಕಿಅಂಶಗಳು ಎತ್ತಿ ತೋರಿಸುತ್ತಿದೆ.

ಉದ್ಯೋಗದ ಪ್ರಶ್ನೆಯೊಂದಿಗೆ ಜೋತುಕೊಂಡಿರುವ ಮತ್ತೊಂದು ಅಂಶ ಉದ್ಯೋಗದಲ್ಲಿ ದಲಿತರಿಗಿರುವ ಮೀಸಲಾತಿ ಪ್ರಶ್ನೆ. ದಲಿತೇತರರಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಓದಿದ ಎಲ್ಲ ದಲಿತರು ಮೀಸಲಾತಿ ಕಾರಣದಿಂದ ಒಂದಲ್ಲ ಒಂದು ಸರಕಾರಿ ಕೆಲಸ ಗಿಟ್ಟಿಸುತ್ತಾರೆನ್ನುವ ನಂಬಿಕೆ ಇದೆ. ಇದರಷ್ಟು ದೊಡ್ಡ ತಪ್ಪು ಕಲ್ಪನೆ ಬೇರೊಂದಿಲ್ಲ. ಕರ್ನಾಟಕ ಸರಕಾರದ ಅಂಕಿಅಂಶಗಳ ಪ್ರಕಾರ ೨೦೧೪ರ ವೇಳಗೆ ಕರ್ನಾಟಕದಲ್ಲಿ ಒಟ್ಟು ೫೩೫೫೪೯ ಸರಕಾರಿ ನೌಕರರಿದ್ದಾರೆ. ಇದರಲ್ಲಿ ೯೪೦೧೩ ಅಥವಾ ಶೇ.೧೭ರಷ್ಟು ಪರಿಶಿಷ್ಟ ಜಾತಿ ನೌಕರರಿದ್ದಾರೆ. ದಲಿತ ಸರಕಾರ ನೌಕರರ ಸಂಖ್ಯೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿರುವ ದಲಿತ ಜನಸಂಖ್ಯೆಗೆ ಹತ್ತಿರ ಇದೆ. ಆದರೆ ದಲಿತರ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸರಕಾರಿ ನೌಕರಿ ಹೊಂದಿರುವ ದಲಿತರ ಸಂಖ್ಯೆ ಕಡಿಮೆ ಇದೆ. ಕರ್ನಾಟಕದ ದಲಿತರ ಒಟ್ಟು ಜನಸಂಖ್ಯೆ ಒಂದು ಕೋಟಿಗೆ ಮೀರಿ ಇದೆ. ದಲಿತರ ಒಟ್ಟು ಸಂಖ್ಯೆಗೆ ಹೋಲಿಸಿದರೆ ಶೇ.೧ರಷ್ಟು ದಲಿತರು ಕೂಡ ಸರಕಾರಿ ನೌಕರಿ ಹೊಂದಿಲ್ಲ. ಇನ್ನು ಇವರಲ್ಲಿ ಬಹುತೇಕ (ಹೆಚ್ಚುಕಡಿಮೆ ಶೇ.೪೦ರಷ್ಟು) ಸಿ ಮತ್ತು ಡಿ ಗ್ರೂಪ್ ನೌಕರಾಗಿದ್ದಾರೆ. ಇದೇ ರೀತಿಯಲ್ಲಿ ದಲಿತರ ಭೂಮಿ ಪ್ರಶ್ನೆ ಕೂಡ. ಕರ್ನಾಟಕದಲ್ಲಿ ನಡೆದ ಮೂರು ಭೂಸುಧಾರಣೆಯಿಂದ ಇವರಿಗೆ ದೊಡ್ಡ ಲಾಭಗಳಾಗಿಲ್ಲ. ಅದಕ್ಕೆ ಬಹುಮುಖ್ಯ ಕಾರಣ ಭೂಸುಧಾರಣಾ ಕಾಯಿದೆಗಳು ಗೇಣಿ ಸುಧಾರಣೆ ಅಥವಾ ಗೇಣಿದಾರರನ್ನು ಹೊಲದೊಡೆಯ ಮಾಡುವ ಉದೇಶ ಹೊಂದಿದ್ದವು. ಅವು ಯಾವುವು ಕೂಡ ಭೂರಹಿತರಿಗೆ ಭೂಮಿ ಹಂಚುವ ಉದ್ದೇಶದಿಂದ ಜಾರಿಗೊಂಡಿಲ್ಲ.

ಗೇಣಿ ಸುಧಾರಣೆ ಅಥವಾ ಭೂಸುಧಾರಣೆ ಸಂದರ್ಭದಲ್ಲಿ ಹೆಚ್ಚುವರಿ ಭೂಮಿ ಘೋಷಣೆಯಾಗಿ ಆ ಹೆಚ್ಚುವರಿ ಭೂಮಿಯನ್ನು ಸರಕಾರ ಸ್ವಾಧಿನಪಡಿಸಿಕೊಂಡು ಹಂಚಿದಾಗ ಮೊದಲ ಆದ್ಯತೆ ದಲಿತರಿಗೆ ನೀಡಬೇಕೆನುವ ನಿಯಮ ಕಾಯಿದೆಗಳಲ್ಲಿತ್ತು.

ಐವತ್ತರ ದಶಕದಲ್ಲಿ ಇನಾಂ ರದ್ಧತಿ ಮಸೂದೆಗೆ ಹೆಚ್ಚುವರಿ ಭೂಮಿ ಗುರುತಿಸುವ ಉದ್ದೇಶ ಇರಲಿಲ್ಲ. ಆದರೆ ೧೯೬೫ರಲ್ಲಿ ಬಂದ ಭೂಸುಧಾರಣೆ ಮಸೂದೆ ಕುಟುಂಬವೊಂದು ಹೊಂದಬಹುದಾದ ಗರಿಷ್ಠ ಭೂಹಿಡುವಳಿಯನ್ನು ಗುರುತಿಸಿ ಹೆಚ್ಚುವರಿ ಭೂಮಿಯಮ್ಮು ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶ ಹೊಂದಿತ್ತು. ಆದರೆ ಗರಿಷ್ಠ ಭೂಮಿತಿ ಎಷ್ಟಿತ್ತೆಂದರೆ ಒಣ ಭೂಪ್ರದೇಶದಲ್ಲಿ (ಕರ್ನಾಟಕದ ಮೂರನೇ ಎರಡು ಬಾಗ ಒಣ ಭೂಪ್ರದೇಶವಾಗಿದೆ) ಹತ್ತು ಜನರಿರುವ ಕುಟುಂಬವೊಂದು ಹತ್ತಿರ ಹತ್ತಿರ ಐನೂರು ಎಕರೆ ಭೂಮಿ ಹೊಂದಲು ಸಾಧ್ಯವಿತ್ತು. ಇಂತಹ ಸ್ಥಿತಿಯಲ್ಲಿ ಹೆಚ್ಚುವರಿ ಭೂಮಿ ಘೋಷಣೆಯ ಕನಸು ನನಸಾಗಲು ಸಾಧ್ಯವಿರಲಿಲ್ಲ. ಇನ್ನು ೧೯೭೪ರ ಭೂಸುಧಾರಣ ಮಸೂದೆ ಕುಟುಂಬವೊಂದು ಹೊಂದಬಹುದಾದ ಗರಿಷ್ಠ ಭೂಮಿತಿಯನ್ನು ನೀರಾವರಿ ಪ್ರದೇಶದಲ್ಲಿ ಹತ್ತು ಎಕರೆಗೆ ಸೀಮಿತಗೊಳಿಸಿತ್ತು. ಆದರೆ ಕುಟುಂಬದ ವ್ಯಾಖ್ಯಾನ ತುಂಬಾ ಸಡಿಲವಾಗಿತ್ತು. ತಂದೆ, ತಾಯಿ ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳ ಮಾತ್ರ ಕುಟುಂಬದ ವ್ಯಾಖ್ಯಾನದೊಳಗೆ ಬರುತ್ತಿದ್ದರು. ಮೆಜಾರಿಟಿಗೆ ಬಂದ ಮಕ್ಕಳು, ಕುಟುಂಬದ ಯಜಮಾನನ ತಂದೆ, ತಾಯಿ ಇವರೆಲ್ಲ ಪ್ರತ್ಯೇಕ ಕುಟುಂಬವಾಗುತ್ತಿದ್ದರು. ಜೊತೆಗೆ ಕಾಫಿ, ಟೀ, ರಬ್ಬರ್ ಇತ್ಯಾದಿ ಪ್ಲಾಂಟೇಶನ್ ಬೆಳೆಗಳನು ಗರಿಷ್ಠ ಮಿತಿಯಿಂದ ಹೊರಗಿಡಲಾಗಿತ್ತು. ಈ ಎಲ್ಲ ಕಾರಣಗಳಿಂದ ಘೋಷಣೆಯಾದ ಹೆಚ್ಚುವರಿ ಭೂಮಿ ಕಡಿಮೆ ಇತ್ತು. ಘೋಷಣೆಯಾದ ಒಟ್ಟು ಹೆಚ್ಚುವರಿ ಭೂಮಿ ೨೯೪೧೫೭ ಎಕರೆಗಳು. ಘೋಃಎಯಾದ ಎಲ್ಲ ಹೆಚ್ಚುವರಿ ಭೂಮಿಯ ಅರ್ಧದಷ್ಟು ಅಥವಾ ೧೫೪೨೯೩ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದೆ.

ಸ್ವಾಧೀನಪಡಿಸಿಕೊಂಡ ಭುಮಿಯಲ್ಲಿ ೧೦೪೩೭ ಎಕರೆ ಭೂಮಿಗಳನ್ನು ಭೂರಹಿತರಿಗೆ ವಿತರಣೆ ಮಾಡಿದೆ. ಹೀಗೆ ವಿತರಣೆಯಾದ ಭೂಮಿಯಲ್ಲಿ ದಲಿತರು (ಬುಡಕಟ್ಟುಗಳನ್ನು ಸೇರಿಸಿಕೊಂಡು) ೬೨೮೯೧ ಎಕರೆ ಭೂಮಿ ಪಡೆದಿದ್ದಾರೆ. ಹೀಗೆ ವಿತರಣೆಯಾದ ಬಹುತೇಕ ಭೂಮಿ ಕೃಷಿ ಯೋಗ್ಯವಲ್ಲ. ಇಂದು ಕೂಡ ದಲಿತರು ಹೊಂದಿರುವ ಭೂಮಿಯಲ್ಲಿ ಒಣ ಭೂಮಿ ಪ್ರಮಾಣವೇ (ಶೇ.೮೩ರಷ್ಟು) ಹೆಚ್ಚಿದೆ. ದಲಿತರಲ್ಲಿ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿಗಳ ಸಂಖ್ಯೆ ಕೂಡ ಹೆಚ್ಚಿದೆ. ಹೀಗೆ ಅಲ್ಪಸ್ವಲ್ಪ ಭೂಮಿ ಇದ್ದರೂ ಭೂರಹಿತ ಕಾರ್ಮಿಕರಂತೆ ಬದುಕುವ ಅನಿವಾರ್ಯತೆ ಬಹುತೇಕ ದಲಿತರಿಗಿದೆ. ಹಲವು ದಶಕಗಳ ಅಭಿವೃದ್ಧಿ ನಂತರವೂ ಶಿಕ್ಷಣ, ಉದ್ಯೋಗ, ರಾಜಕೀಯ ಮಿಸಲಾತಿಗಳ ನಂತರವೂ ದಲಿತರ ಸ್ಥಿತಿ ಏಕೆ ಮೂಲಭೂತವಾಗಿ ಪರಿವರ್ತನೆಗೊಳ್ಳಲಿಲ್ಲ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಈ ಪ್ರಶ್ನೆಗೆ ಉತ್ತರ ಬೇಕಾದರೆ ನಮ್ಮ ಪ್ರಜಾಪ್ರಭುತ್ವವನ್ನು ಪರಿಶೀಲಿಸುವ. ಏಕೆಂದರೆ ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಯಲ್ಲಿ ನಾವು ಆರಿಸಿ ಕಳುಹಿಸಿದ ಜನಪ್ರತಿನಿಧಿಗಳೇ

ನಮ್ಮ ಬದುಕನ್ನು ರೂಪಿಸುವ ಅಥವಾ ನಾಶ ಮಾಡುವ ಪಾಲಿಸಿಗಳನ್ನು ಜಾರಿಗೆ ತರುವುದು. ಈ ದೃಷ್ಟಿಯಿಂದ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿಗಳ ನಡುವೆ ನೇರ ಸಂಬಂಧ ಇದೆ. ಪ್ರಜಾಪ್ರಭುತ್ವದ ಗುಣಮಟ್ಟ ಉತ್ತಮವಾದ್ದರೆ ಅಭಿವೃದ್ದಿಯ ಗುಣಮಟ್ಟ ಉತ್ತಮವಾಗಿರುತ್ತದೆ. ಇದೇ ರೀತಿಯಲ್ಲಿ ಪ್ರಜಾಪ್ರಭುತ್ವದ ಗುಣಮಟ್ಟ ಕಳಪೆಯಾದರೆ ಅಭಿವೃದ್ದೀ ಗುಣಮಟ್ಟ ಕೂಡ ಕಳಪೆಯಾಗುತ್ತದೆ.

ಶಿಕ್ಷಣ, ಆರೋಗ್ಯ ನೀತಿಗಳು ಸಡಿಲಗೊಂಡ ಇಂದು ಬಂಡವಾಳ ಹೂಡಲು ಶಕ್ತರಾಗಿರುವ ಯಾರೂ ಕೂಡ ಶಿಕ್ಷಣ, ಅರೋಯ ಸಂಸ್ಥೆಗಳನ್ನು ಆರಂಭಿಸಬಹುದು. ಈ ಎರಡೂ ಕ್ಷೇತ್ರಗಳು ದೊಡ್ಡ ಪ್ರಮಾಣದಲ್ಲಿ ಖಾಸಗಿ ಬಂಡವಾಳ ಆಕರ್ಷಿಸುತ್ತವೆ. ಇಲ್ಲೂ ಬಂಡವಾಳ ಹೂಡಿದವರ ಆಸಕ್ತಿಗಳನ್ನು ರಕ್ಷಿಸಲು ಸರಕಾರ ತೆಗೆದುಕೊಳ್ಳುವ ಕ್ರಮಗಳಿಗೆ ಹೋಲಿಸಿದರೆ ಈ ಸಂಸ್ಥೆಗಳಲ್ಲಿ ದುಡಿಯುವ ಕೆಲಸಗಾರರ ಹಾಗೂ ಗ್ರಾಹಕರ ಆಸಕ್ತಿಗಳನ್ನು ಎಕ್ಷಿಸುವ ಕ್ರಮಗಳು ತುಂಬಾ ಕಡಿಮೆ ಇವೆ. ಸಮಾಜದ ಎಲ್ಲರಿಗೂ ಗುಣಮಟ್ಟದ ಉನ್ನತ ಶಿಕ್ಷಣ ನೀಡುವ ಉದ್ದೇಶದಿಂದ ಶಿಕ್ಷನದ ಕಾಸಗೀಕರಣ ನಡೆದಿದೆ. ಖಾಸಗೀಕರಣದ ಈ ಉದ್ದೇಶ ಈಡೇರಿದೆಯೇ ಎಂದು ಕೇಳಿದರೆ ಇಲ್ಲವೆನ್ನುವ ಉತ್ತರ ಖಚಿತ. ೨೦೧೪ರ ವೇಳೆ ಉನ್ನತ ಶಿಕ್ಷಣಯೊಗ್ಯ ವಯಸ್ಸಿನ(೧೮–೨೩ ವಯಸ್ಸಿನ) ಪ್ರತಿ ನೂರು ವಿದ್ಯಾರ್ಥಿಗಳಲ್ಲಿ ಕೇವಲ ೨೦ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆ. ಎಲ್ಲ ಸಮುದಾಯಗಳಿಂದ ಇದೇ ಪ್ರಮಾಣದಲ್ಲಿ ಪ್ರವೇಶ ಪಡೆದಿಲ್ಲ. ದಲಿತರ ಶೇ.೧೨ ಬುಡಕಟ್ಟುಗಳ ಶೇ.೫ ಮುಸ್ಲಿಮರ ಶೇ.೭ ಮುಸ್ಲಿಮೇತ ಅಲ್ಪಸಂಖ್ಯಾತರ ಶೇ.೩ ಹಿಂದುಳಿದ ಜಾತಿಗಳ ಶೇ.೩೦ ಮತ್ತು ಮೇಲ್ಜಾತಿಗಳ ಶೇ.೪೩ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ (ಮಿನಿಸ್ಟ್ರಿ ಆಫ್ ಹ್ಯೂಮನನ್ ರಿಸೋರ್ಸ್ ಡೆವಲಪ್‌ಮೆಂಟ್. ೨೦೧೩, ಭಾರತ ಸರಕಾರ, ೨೦೧೩). ಸಕಾರಿ ಶಿಕ್ಷಣ ಸಂಸ್ಥೆಗಳು ಒಂದೆರಡು ಸಾವಿರ ಫೀಸ್ ಚಾರ್ಜ್ ಮಾಡುವ ಕೋರ್ಸ್‌ಗಳಿಗೆ ಖಾಸಗಿ ಸಂಸ್ಥೆಗಳು ಒಂದೆರಡು ಲಕ್ಷ ರೂ ಗಳ ಫೀಸ್ ಚಾರ್ಜ್ ಮಾಡುತ್ತಿವೆ. ಇದರಿಂದ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ಅರ್ಧಕ್ಕಿಂತಲೂ ಹೆಚ್ಚಿನ ಸೀಟುಗಳು ಶೇಕಡ ಹತ್ತರಿಂದ ಇಪ್ಪತ್ತರಷ್ಟಿರುವ ಶ್ರೀಮಂತರ ಮತ್ತು ಮೇಲ್‌ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಲಾದರೆ ಅತ್ಯಲ್ಪ ಪ್ರಮಾಣದ (ಶೇ..೪ರಷ್ಟು) ಸೀಟುಗಳು ಬಡ ವಿದ್ಯಾರ್ಥಿಗಳ ಪಾಲಾಗಿದೆ.

ಆರೋಗ್ಯ ಕ್ಷೇತ್ರದ ವೈಫಲ್ಯವನ್ನು ಕೇಂದ್ರ ಸರಕಾರ ನೇಮಕ ಮಾಡಿದ ಪಾರ್ಲಿಮೆಂಟರಿ ಸ್ಟೇಂಡಿಂಗ್ ಕಮಿಟಿ ಆನ್ ಹೆಲ್ತ್ ಆಯಮಡ್ ಫಾಮಿಲಿ ವೆಲ್‌ಫೇರ್ (೨೦೧೬) ವರದಿ ಬಿಚ್ಚಿಟ್ಟಿದೆ. ಈ ವರದಿ ಪ್ರಕಾರ ವೈದ್ಯಕೀಯ ನೆರವಿಲ್ಲದ ಕಾರಣ ಪ್ರತಿ ವರ್ಷ ಭಾರತದಲ್ಲಿ ಕನಿಷ್ಠ ಒಂದು ಮಿಲಿಯ ಜನರ ಸಾಯುತ್ತಿದ್ದಾರೆ. ಅರ್ಧಕ್ಕಿಂತಲೂ ಹೆಚ್ಚಿನ (೭೦೦ ಮಿಲಿಯ) ಜನರಿಗೆ ತಜ್ಞ ವೈದ್ಯರ ಸೆವೆ ಲಭ್ಯವಿಲ್ಲ. ಅಲ್ಪಸಂಖ್ಯೆಯಲ್ಲಿರುವ (ಶೇ.೮೦ರಷ್ಟು) ಸ್ಪೆಷಲಿಸ್ಟ್‌ಗಳು ನಗರ ಪ್ರದೇಶದ ಅನುಕೂಲಸ್ಥರ ಸೇವೆಗೆ ಟೊಂಕಕಟ್ಟಿ ನಿಂತಿದ್ದಾರೆ. ನಮ್ಮ ನೆರೆಹೊರೆಯ ಸಣ್ಣಪುಟ್ಟ ದೇಶಗಳಿಗೆ ಹೋಲಿಸಿದರೂ ನಮ್ಮ ಆರೋಗ್ಯ ಕ್ಷೇತ್ರದ ಸ್ಥಿತಿ ತುಂಬಾ ಕಳಪೆ ಇದೆ. ಹುಟ್ಟುವ ಪ್ರತಿ ಸಾವಿರ

ಮಕ್ಕಳಲ್ಲಿ ಐದು ವರ್ಷದೊಳಗೆ ಸಾಯುವ ಮಕ್ಕಳ ಪ್ರಮಾಣ ನೇಪಾಳದಲ್ಲಿ ೫೦, ಭೂತಾನ್‌ಲ್ಲಿ ೫೪, ಬಾಂಗ್ಲಾದೇಶದಲ್ಲಿ ೪೬, ಚೈನಾದಲ್ಲಿ ೧೫, ಶ್ರೀಲಂಕಾದಲ್ಲಿ ೧೨ ಇದ್ದರೆ ನಮ್ಮಲ್ಲಿ ೬೧ ಇದೆ. ಬಹುತೇಕ ಮಕ್ಕಳ ಡೈರಿಯಾ, ನ್ಯೂಮೊನಿಯಾ ಇತ್ಯಾದಿ ಸಣ್ಣಪುಟ್ಟ ರೋಗಗಳಿಂದ ಸಾಯುತ್ತವೆ. ಇದೇ ರೀತಿಯಲ್ಲಿ ಹೆರಿಗೆ ಸಂದರ್ಭದಲ್ಲಿ ಸಾಯುವ ತಾಯಂದಿರ ಪ್ರಮಾಣ ಕೂಡ ಭಾರತದಲ್ಲಿ ಹೆಚ್ಚಿದೆ. ಆರೋಗ್ಯ ಕ್ಷೇತ್ರದ ಮೇಲೆ ಸರಕಾರ ಅತ್ಯಲ್ಪ ಮೊತ್ತ ಮಿನಿಯೋಜಿಸುವುದರಿಂದ ಮೂರು ಹೊತ್ತಿನ ಊಟಕ್ಕೆ ಪರದಾಡುವವರು ಕೂಡ ತಮ್ಮ ಆದಾಯದ ಅರ್ಧಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಆರೋಗ್ಯಕ್ಕಾಗಿ ಕರ್ಚು ಮಾಡಬೇಕಾಗಿದೆ. ಅನಾರೋಗ್ಯ ಹಾಗೂ ಅದಕ್ಕೆ ಮಾಡುವ ದುಬಾರಿ ಆಸ್ಪತ್ರೆ ವೆಚ್ಚದಿಂದ ಪ್ರತಿ ವರ್ಷ ೬೩ ಮಿಲಿಯ ಜನರು ಬಡವರಾಗುತ್ತಿದ್ದಾರೆ.

ಜನರ ಆರೋಗ್ಯದ ಇಂತಹ ಚಿಂತಾಜನಕ ಸ್ಥಿತಿಗೆ ಹಲವು ಕಾರಣಗಳನ್ನು ಪಾರ್ಮಿಮೆಂಟರಿ ಸಮಿತಿ (೨೦೧೬) ಪಟ್ಟಿ ಮಾಡಿದೆ. ಅವುಗಳಲ್ಲಿ ಕೆಲವು ಪ್ರಮುಖ ಕಾರಣಗಳು ಇಂತಿವೆ. ಡಾಕ್ಟರ್‌ಗಳ ಕೊರತೆ, ಖಾಸಗೀಕರಣದ ಪ್ರಭಾವ, ಆರೋಗ್ಯ ಸೌಲಭ್ಯ ಪೂರೈಕೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಂತರ, ಬಡತನ ಇತ್ಯಾದಿ ಕಾರಣಗಳನ್ನು ಸಮಿತಿ ಪಟ್ಟಿ ಮಾಡಿದೆ. ವರ್ಲ್ಡ್ ಹೆಲ್ತ್ ಆರ್ಗನೈಸೇಶನ್‌ನ ನಿಯಮ ಪ್ರಕಾರ ಪ್ರತಿ ಸಾವಿರ ಜನರಿಗೊಬ್ಬ ಡಾಕ್ಟರ್ ಇರಬೇಕು. ನಮ್ಮಲ್ಲಿ ೧೬೭೪ ಜನರಿಗೆ ಒಬ್ಬ ಡಾಕ್ಟರ್ ಇದ್ದಾರೆ. ಅಗತ್ಯವಿಉವಷ್ಟು ಡಾಕ್ಟರ್‌ಗಳು ತರಬೇತುಗೊಳಿಬೇಕಾದರೆ ಪ್ರತಿ ವರ್ಷ ನೂರು ಕಾಲೇಜುಗಳಂತೆ ಮುಂದಿನ ಐದು ವರ್ಷಗಳಲ್ಲಿ ೫೦೦ ಮೆಡಿಕಲ್ ಕಾಲೇಜುಗಳನ್ನು ಆರಂಭಿಸಬೇಕೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ಮೆಡಿಕಲ್ ಕಾಲೇಜು ಆರಂಭಿಸಲು ಕನಿಷ್ಟ ೨೦೦ ಕೋಟಿ ವಿನಿಯೋಜಿಸಬೇಕು. ವರ್ಷಕ್ಕೆ ಇಪ್ಪತ್ತು ಸಾವಿರ ಕೋಟಿಯಂತೆ ಐದು ವರ್ಷಕ್ಕೆ ಒಂದು ಲಕ್ಷ ಕೋಟಿ ರೂಗಳನ್ನು ಮೆಡಿಕಲ್ ಕಾಲೇಜು ಆರಂಭಿಸಲು ಸರಕಾರ ವಿನಿಯೋಜಿಸಬೇಕು. ಆದರೆ ಸರಕಾರ ಇಷ್ಟೊಂದು ದೊಡ್ಡ ಮೊತ್ತವನ್ನು ವಿನಿಯೋಜಿಸಲು ಮಾಡುತ್ತಿಲ್ಲ.

ಸರಕಾರ ಆರೋಗ್ಯ ಕ್ಷೇತ್ರದ ಮೇಲೆ ವಿನಿಯೋಜಿಸಲು ವಿಫಲವಾದ ಕಾರಣ ದೊಡ್ಡ ಪ್ರಮಾಣದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ಮತ್ತು ಅಸ್ಪತ್ರೆಗಳು ವ್ಯಾಪಾರ ನಡೆಸುತ್ತವೆ. ಇಂದು ದೇಶದಲ್ಲಿರುವ ಒಟ್ಟು ೪೭೯ ಮೆಡಿಕಲ್ ಕಾಲೇಜುಗಳಲ್ಲಿ ಅರ್ಧಕ್ಕಿಂತಲು ಹೆಚ್ಚನ್ನು (೨೧೫) ಖಾಸಗಿ ಶಿಕ್ಷಣ ಸಂಸ್ಥೆಗಳು ಆರಂಭಿಸಿವೆ. ಶೇಕಡ ೭೦ರಷ್ಟು ಡಾಕ್ಟ್ರರ್‌ಗಳು ಇಂದು ಖಾಸಗಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಬಹುತೇಕರು (ಶೇ.೭೦ರಷ್ಟು) ಪೇಟೆ ಪಟ್ಟಣಗಳ ಅನುಕೂಲಸ್ಥರಿಗೆ ಆರೋಗ್ಯ ಸೇವೆ ನೀಡಲು ಪೈಪೋಟಿ ನಡೆಸುತ್ತಿದ್ದಾರೆ. ೨೦೧೪ರಲ್ಲಿ ಶೇ.೭೦ರಷ್ಟು ಹೊರರೋಗಿಗಳು ಮತ್ತು ಶೇ. ೬೦ರಷ್ಟು ಒಳರೋಗಿಗಳು ಖಾಸಗಿ ಕ್ಷೇತ್ರದ ಡಾಕ್ಟ್ರರ್‌ಗಳ ಸೇವೆಯನ್ನು ಅವಲಂಭಿಸಿದ್ದಾರೆ. ಖಾಸಗಿ ಕ್ಷೇತ್ರದಲ್ಲಿ ವೈದ್ಯಕೀಯ ಸೇವೆ ನೀಡುವವರಲ್ಲಿ ಅಧಿಕೃತ ಮೆಡಿಕಲ್ ಶಿಕ್ಷಣ ಇಲ್ಲದವರ ಸಂಖ್ಯೆಯೂ ಹೆಚ್ಚಿದೆ. ಇಂತವರ ಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿದೆ.

ಆರೋಗ್ಯ, ಶಿಕ್ಷಣ ಕ್ಷೇತ್ರಗಳ ಸರಕಾರ ಮಾಡುವ ವಿನಿಯೋಜನೆ ದಿನೇ ದಿನೇ ಕಡಿಮೆಯಾಗುತ್ತಿದೆ. ಸರಕಾರ ಈ ಎರಡು ಕ್ಷೇತ್ರಗಳಲ್ಲೂ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದೆ. ಖಾಸಗಿ ಬಂಡವಾಳಿಗರು ಖರೀದಿಸುವ ಶಕ್ತಿ ಇದ್ದವರಿಗೆ ಮಾತ್ರ ಸೇವೆ ನೀಡುತ್ತಿದ್ದಾರೆ. ಇದರಿಂದಾಗಿ ತಳಸ್ತರದ ಎಲ್ಲರ ಶಿಕ್ಷಣ, ಆರೋಗ್ಯಗಳು ಕುಸಿದಿದೆ. ದಲಿತರು ಏಣಿಯ ಬುಡದಲ್ಲಿವುದರಿಂದ ಅವರ ಸ್ಥಿತಿ ಇನ್ನೂ ಬಿಗಡಾಯಿಸಿದೆ.

ತೊಂಬತ್ತರ ನಂತರ ಅಥವಾ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ನಂತರ ಉತ್ಪಾದನಾ ಪರಿಕರ ಮತ್ತು ಸರಕುಸೇವೆಗಳ ವಿತರಣೆ ಮಾರುಕಟ್ಟೆ ನಿಯಮಕ್ಕೆ ಒಳಗಾಗಿದೆ ಎನ್ನುವ ಚಿತ್ರಣ ಇದೆ. ಮಾರುಕಟ್ಟೆಯ ಸಾಮಾನ್ಯ ತಿಳುವಳಿಕೆ ಪ್ರಕಾರ ಬೇಡಿಕೆ ಮತ್ತು ಪೂರೈಕೆಗಳು ಉತ್ಪಾದನಾ ಪರಿಕರ ಮತ್ತು ಸರಕುಸೇವೆಗಳ ವಿಲೇವಾರಿಯನ್ನು ತೀರ್ಮಾನಿಸುತ್ತವೆ. ವ್ಯಕ್ತಿಯ ಖರೀದಿಸುವ ಶಕ್ತಿ ಮತ್ತು ಅವರು ಅನುಭವಿಸುವ ಸರಕುಸೇವೆ ಅಥವಾ ಉತ್ಪಾದನಾ ಪರಿಕರಗಳ ನಡುವೆ ನೇರ ಸಂಬಂಧ ಕಲ್ಪಿಸಲಾಗಿದೆ. ಅಂದರೆ ಅನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸುತ್ತಿದ್ದಾರೆ ಮತ್ತು ಅನಾನುಕೂಲಸ್ಥರು ಸರ್ಕಾರದ ಕೃಪೆಯಲ್ಲಿ ಬದುಕುತ್ತಿದ್ದಾರೆ ಎನ್ನುವ ಚಿತ್ರಣ ಇದೆ. ಆದರೆ ಕಾರ್ಯರೂಪದಲ್ಲಿರುವ ಮಾರುಕಟ್ಟೆ ಚಿತ್ರಣವೇ ಬೇರೆ ಇದೆಯೆಂದು ಮೇಲಿನ ಪುರಾವೆಗಳು ಸೂಚಿಸುತ್ತಿವೆ. ಸಂಕುಚಿತ ಪ್ರಜಾಪ್ರಭುತ್ವದ ಮೇಲೆ ಹಿಡಿತ ಹೊಂದಿರುವ ಮೇಲ್ವರ್ಗ ಅಭಿವೃದ್ಧಿ ಮತ್ತು ಮಾರುಕಟ್ಟೆಗಳನ್ನು ತನ್ನ ಅಸಕ್ತಿಗೆ ಪೂರಕವಾಗಿ ಕಟ್ಟಿಕೊಂಡಿದೆ. ಇವರು ಜಾರಿಗೊಳಿಸುವ ಅಭಿವೃದ್ಧಿ ನೀತಿಗಳಲ್ಲಿ ಮತ್ತು ಕಟ್ಟಿಕೊಂಡ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಕಡಿಮೆ ಪೂರೈಕೆ ಇರುವ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳ ವ್ಯವಹಾರ ಮಾರುಕಟ್ಟೆ ನಿಯಮದಿಂದ ಹೊರಗಿದೆ. ಇವೆಲ್ಲವನ್ನು ಸರಕಾರವೇ ಮುಂದೆ ನಿಂತು ಅಗ್ಗದ ದರದಲ್ಲಿ ಅನುಕೂಲಸ್ಥರಿಗೆ ನೀಡುತ್ತಿದೆ. ಇದೇ ಸಂದರ್ಭದಲ್ಲಿ ತಳಸ್ತರದ ಜನರು ಮಾರುಕಟ್ಟೆ ದರದಲ್ಲಿಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳನ್ನು ಖರೀದಿಸುತ್ತಿದ್ದಾರೆ. ಬೇಡಿಕೆಗಿಂತ ಪೂರೈಕೆ ಹೆಚ್ಚಿರುವ ದುಡಿಯುವ ಜನರು ಮಾತ್ರ ಮಾರುಕಟ್ಟೆ ನಿಯಮನುಸಾರ ಬಿಕರಿಯಾಗುತ್ತಿದ್ದಾರೆ.[೨]

ಕೋಷ್ಟಕ ೪.೮. ವರ್ಗವಾರು ಕೃಷಿ ಭೂ ಹಿಡುವಳಿಗಳ ವಿವರ ಕೃಷಿ ಗಣತಿ ೨೦೧೦-೧೧

(ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ, ಹಿಡುವಳಿಗಳು ಸಂಖ್ಯೆಗಳಲ್ಲಿ)

ಕ್ರಸಂ	ಜಿಲ್ಲೆಯ ಹೆಸರು	ಒಟ್ಟು ಕೃಷಿ ಭೂ ಹಿಡುವಳಿಗಳು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರೆ	
		ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
೧	೨	೩	೪	೫	೬	೭	೮	೯	೧೦
೧	ಬಾಗಲಕೋಟೆ	೨೨೭೭೩೧	೪೮೭೧೧೭	೨೧೨೧೨	೨೯೫೯೦	೯೬೫೭	೧೭೨೬೪	೧೯೬೮೧೭	೪೩೯೩೧೮
೨	ಬೆಂಗಳೂರು. ನ	೮೦೬೧೫	೭೯೩೪೫	೭೦೫೩	೪೭೧೦	೭೯೪	೬೩೭	೭೨೬೭೮	೭೩೪೫೨
೩	ಬೆಂಗಳೂರು ಗ್ರಾ	೧೭೮೮೬೫	೧೫೨೦೩೪	೧೫೬೦೫	೧೩೩೯೩	೬೧೭೬	೪೮೯೫	೧೫೩೦೨೮	೧೩೩೬೬೧೫
೪	ಬೆಳಗಾವಿ	೫೩೦೯೩೫	೯೯೨೨೯೦	೩೬೭೬೮	೪೦೩೧೦	೨೧೯೩೫	೩೩೪೩೩	೪೭೨೧೧೦	೯೧೫೧೨೩
೫	ಬಳ್ಳಾರಿ	೨೭೫೧೩೫	೫೨೭೫೨೬	೩೫೨೪೬	೫೦೪೫೭	೪೨೬೭೫	೭೫೩೧೬	೧೯೬೩೦೩	೪೦೮೦೨೮
೬	ಬೀದರ್	೨೫೦೯೮೫	೪೫೧೭೭೫	೨೯೨೮೭	೪೧೨೭೩	೨೩೨೦೫	೩೬೧೮೮	೧೯೮೪೧೯	೩೭೩೩೮೬
೭	ವಿಜಯಪುರ	೩೪೨೨೦೩	೯೫೦೩೩೨	೪೭೪೪೦	೯೯೧೭೮	೨೬೩೧	೫೯೮೨	೨೯೨೦೯೪	೮೪೪೫೦೦
೮	ಚಾಮರಾಜನಗರ	೨೧೨೧೯೬	೨೧೫೧೪೨	೪೦೦೮೫	೩೩೦೩೪	೧೨೦೩೩	೯೭೪೭	೧೫೯೬೩೨	೧೭೦೭೧೨
೯	ಚಿಕ್ಕಬಳ್ಳಾಪುರ	೨೧೪೪೬೨	೨೨೬೩೫೬	೩೩೮೫೪	೩೦೫೩೪	೨೪೫೭೮	೨೨೭೫೬	೧೫೫೯೨೩	೧೭೦೯೦೪
೧೦	ಚಿಕ್ಕಮಗಳೂರು	೨೨೩೪೭೭	೩೧೩೩೭೭	೨೪೩೦೭	೨೨೭೭೩	೩೯೩೦	೩೯೯೦	೧೯೩೮೭೪	೨೭೩೦೦೪
೧೧	ಚಿತ್ರದುರ್ಗ	೨೯೦೫೭೭	೫೬೦೭೭೭	೪೪೧೫೨	೬೪೧೭೬	೪೬೪೧೭	೮೯೮೩೪	೧೯೯೮೬೦	೪೦೨೨೨೫
೧೨	ದಕ್ಷಿಣ ಕನ್ನಡ	೨೦೯೦೯೭	೧೭೮೪೧೫	೧೦೫೩೯	೫೪೦೮	೯೬೧೮	೬೫೮೫	೧೮೮೦೯೩	೧೬೪೫೦೩
೧೩	ದಾವಣಗೆರೆ	೨೮೨೬೭೭	೪೧೩೬೮೬	೩೬೬೭೭	೪೪೪೬೨	೩೦೧೫೭	೪೧೭೧೧	೨೧೪೪೦೯	೩೨೩೪೬೩
೧೪	ಧಾರವಾಡ	೧೪೩೨೨೫	೩೪೨೯೭೮	೪೯೭೮	೭೫೮೦	೫೧೪೬	೯೧೧೨	೧೩೨೮೯೭	೩೨೪೮೬೧
೧೫	ಗದಗ	೧೬೩೪೬೬	೩೯೦೨೬೫	೧೩೦೫೨	೨೦೪೩೮	೮೦೦೮	೧೪೫೯೧	೧೪೨೦೮೯	೩೫೩೪೩೨

೧	೨	೩	೪	೫	೬	೭	೮	೯	೧೦
೧೬	ಕಲಬುರುಗಿ	೩೯೫೪೯೭	೯೩೭೫೫೭	೭೦೨೦೩	೧೨೪೮೭೨	೩೯೨೦	೮೧೩೦	೩೨೧೧೦೪	೮೦೨೬೨೭
೧೭	ಹಾಸನ	೪೩೫೬೮೧	೪೬೩೫೦೦	೬೦೧೬೨	೪೫೫೦೮	೫೮೦೧	೫೫೦೭	೩೬೯೧೩೯	೪೦೮೮೫೦
೧೮	ಹಾವೇರಿ	೨೧೮೩೫೧	೩೭೬೯೧೮	೧೬೬೮೭	೨೧೩೫೪	೧೭೮೪೨	೨೫೦೧೪	೧೮೩೪೬೭	೩೨೯೨೨೦೬
೧೯	ಕೊಡಗು	೬೮೮೮೧	೧೬೭೮೬೧	೨೮೨೩	೨೦೧೭	೧೧೪೧	೯೮೧	೬೪೪೯೦	೧೫೪೫೧೩
೨೦	ಕೋಲಾರ	೨೩೬೮೫೫	೨೩೩೯೨೩	೪೧೫೮೨	೩೫೧೫೩.	೯೮೫೨	೨ಇ+೦೫	೧೮೫೦೩೧	೧೮೯೧೦೪
೨೧	ಕೊಪ್ಪಳ	೨೧೮೧೦೨	೪೩೩೪೪೮	೧೯೨೭೦	೨೭೯೩೪	೨೨೧೫೮	೪೧೬೨೮	೧೭೬೬೪೦	೩೬೨೯೨
೨೨	ಮಂಡ್ಯ	೩೯೫೭೬೬	೩೦೯೪೩	೩೬೩೭೫	೧೯೯೮೬	೨೩೮೩	೧೫೩೯	೩೫೪೬೬೪	೨೮೩೯೯೩
೨೩	ಮೈಸೂರು	೩೮೫೨೨೬	೩೬೮೫೩೦	೬೪೭೩೫	೪೮೧೦೧	೩೮೧೭೫	೩೦೫೯೨	೨೮೨೬೨೪	೨೮೭೮೯೨
೨೪	ರಾಯಚೂರು	೩೩೨೦೩೩	೬೯೫೭೮೭	೪೨೦೧೪	೬೮೧೯೨	೬೦೩೯೯	೧ಇ+೦೫	೨೨೯೬೦೯	೫೧೧೧೭೬
೨೫	ರಾಮನಗರ	೨೭೧೪೪೮	೨೦೨೫೬೬	೨೫೮೬೬	೧೬೭೭೫	೨೦೩೮	೧೭೨೦	೨೪೩೩೮೧	೧೮೩೮೧೦
೨೬	ಶಿವಮೊಗ್ಗ	೨೧೪೦೦೮	೨೬೨೨೯೮	೨೧೬೮೯	೨೧೪೪೪	೪೫೪೩	೪೮೧೮	೧೮೭೪೯೬	೨೩೪೭೩೮
೨೭	ತುಮಕೂರು	೪೧೪೪೨೮	೬೭೬೩೮೮	೫೩೧೬೫	೬೩೭೨೫	೨೭೨೭೯	೪೨೦೮೯	೩೩೩೭೩೮	೫೭೯೨೪೮
೨೮	ಉಡುಪಿ	೨೦೦೪೮೫	೧೪೯೬೧೭	೫೦೮೧	೨೩೬೩	೬೨೬೬	೪೮೯೪	೧೮೮೫೯೫	೧೪೦೧೩೯
೨೯	ಉತ್ತರ ಕನ್ನಡ	೧೯೨೮೨೨	೧೪೯೯೬೬	೭೦೪೭	೫೩೨೩	೨೪೨೮	೨೬೩೦	೧೮೨೮೩೯	೧೪೧೨೭೧
೩೦	ಯಾದಗಿರಿ	೨೨೬೪೫೮	೪೪೨೨೭೨	೪೩೦೨೬	೬೪೧೪೫	೨೧೩೪೮	೩೮೫೨೭	೧೬೨೦೦೧	೩೩೯೩೨೨
	ರಾಜ್ಯ	೭೮೩೨೧೮೯	೧೨೧೬೧೪೫೨	೯೧೩೯೮೫	೧೦೭೪೨೦೮	೪೭೨೫೬೧	೭೦೫೧೬೫	೬೪೩೩೦೧೭	೧೦೩೦೯೧೫೫

ಆರ್ಥಿಕ ಸ್ಥಿತಿಯ ಪ್ರಮುಖ ನಿರ್ಧಾರಕ ಅಂಶಗಳೆಂದರೆ ಭೂಮಿ ಮತ್ತು ಉದ್ಯೋಗ. ಅದರಲ್ಲಿ ಅತ್ಯಂತ ಮುಖ್ಯವಾದುದ್ದು ಭೂಮಿ. ಅದರಂತೆ ಕರ್ನಾಟಕದಲ್ಲಿ ಹಿಡುವಳಿದಾರರು ಮತ್ತು ಭೂಹಿಡುವಳಿಗಳ ಸಂಖ್ಯೆಯನ್ನು ಗಮನಿಸಿದರೆ ಸಾಮಾಜಿಕ ಗುಂಪುಗಳಲ್ಲಿ ಬಾರಿ ಪ್ರಮಾಣದ ವ್ಯತ್ಯಾಸ ಕಂಡುಬರುತ್ತದೆ.

೨೦೧೦-೧೧ರ ಕೃಷಿ ಗಣತಿ ಸೇರಿದಂತೆ ಇದುವರೆಗೂ ಒಂಬತ್ತು ಕೃಷಿಗಣತಿಗಳಾಗಿವೆ. ಕರ್ನಾಟಕದಲ್ಲಿ ಸರಾಸರಿ ಭೂಹಿಡುವಳಿ ವಿಸ್ತೀರ್ಣ ಕಡಿತಗೊಳ್ಳುತ್ತಿದೆ. ೧೯೭೦-೭೧ರಲ್ಲಿ ಸರಾಸರಿ ಭೂಹಿಡುವಳಿ ೩.೨೦ ಹೆಕ್ಟೇರ್‌ದಿಂದ ೧೯೯೫-೯೬ರಲ್ಲಿ ೧.೯೫ ಹೆಕ್ಟೇರ್‌ಗೆ ಮತ್ತು ೨೦೧೦-೧೧ರಲ್ಲಿ ಇಳಿಮುಖವಾಗಿ ೧.೫೫ ಹೆಕ್ಟೇರ್‌ಗೆ ಇಳಿಮುಖವಾಗಿದೆ. ಒಟ್ಟು ೭೮.೩೨ ಲಕ್ಷ ಭೂಹಿಡುವಳಿದಾರರ ಪೈಕಿ ಅತಿಸಣ್ಣ (ಶೇ. ೪೯.೧) ಹಾಗೂ ಸಣ್ಣ (ಶೇ.೨೭.೩) ಹಿಡುವಳಿದಾರರು ಶೇ. ೭೬ರಷ್ಟು ಇದ್ದು ಶೇ. ೪೦.೦೫ರಷ್ಟು ಭೂಹಿಡುವಳಿಯನ್ನು ಹೊಂದಿರುತ್ತಾರೆ. ಅರೆಮಧ್ಯಮ ಹಿಡುವಳಿದಾರರು (ಶೇ. ೧೬) ಮಧ್ಯಮ ಹಿಡುವಳಿದಾರರು (ಶೇ.೬.೫) ಹಾಗೂ ದೊಡ್ಡ ಹಿಡುವಳಿದಾರರು (ಶೇ. ೧) ಒಟ್ಟಾರೆ ಶೇ. ೨೩.೨ರಷ್ಟಿದ್ದು, ಇವರ ಹಿಡುವಳಿ ಶೇ. ೬೦ರಷ್ಟಿರುತ್ತದೆ. ವಿವಿಧ ವರ್ಗದ ಹಿಡುವಳಿದಾರರು ಸರಾಸರಿ ಭೂಹಿಡುವಳಿ ವಿಸ್ತೀರ್ಣವನ್ನು ವಿಶ್ಲೇಷಿಸಿದರೆ ಅತಿಸಣ್ಣ ಹಿಡುವಳಿದಾರರ ಸರಾಸರಿ ಕ್ಷೇತ್ರ ೧೯೯೫-೯೬ರಲ್ಲಿ ೦.೪೮ಹೆಕ್ಟೇರ್, ೨೦೦೫-೦೬ರಲ್ಲಿ ೦.೫೫ ಹೆಕ್ಟೇರ್ ಹಾಗೂ ೨೦೧೦-೧೧ರಲ್ಲಿ ೦.೪೮ ಹೆಕ್ಟೇರ್‌ಗೆ ಇಳಿದಿದೆ. ಅದೇರೀತಿ ದೊಡ್ಡ ಹಿಡುವಳಿದಾರರ ಸರಾಸರಿ ಕ್ಷೇತ್ರ ೧೯೯೫-೯೬ರಲ್ಲಿ ೧೫.೦೨ ಹೆಕ್ಟೇರ್‌ದಿಂದ ೨೦೧೦-೧೧ರಲ್ಲಿ ೧೪.೭೧ ಹೆಕ್ಟೇರ್‌ಗೆ ಇಳಿದಿದೆ. ಅದೇ ರೀತಿ ಸಾಮಾಜಿಕ ಗುಂಪುಗಳಲ್ಲಿಯೂ ಸಹ ಭೂಹಿಡುವಳಿಗಳ ಸಂಖ್ಯೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ.[೮]

೧೯೫೫, ೧೯೬೧, ೧೯೮೬ರ ಕರ್ನಾಟಕ ಭೂಸುಧಾರಣಾ ಕಾಯ್ದೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ರಕ್ಷಿಸುವಲ್ಲಿ ಹಿಂದೆ ಬಿದ್ದವು. ೧೯೮೬ರ ಮಾರ್ಚ ಕೊನೆ ವೇಳೆಗೆ ಕರ್ನಾಟಕದಲ್ಲಿ ಪ್ರತಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಂಚಿದ ಹೆಚ್ಚುವರಿ ಭೂಮಿಯನ್ನು ಸೂಚಿಸುತ್ತಾ ಗುಲ್ಬರ್ಗಾ ಜಿಲ್ಲೆಯಲ್ಲಿ ೪೬೫೦೧ ಎಕರೆ ಹೆಚ್ಚುವರಿ ಭೂಮಿ ಇದ್ದು, ಅದರಲ್ಲಿ ೨೬೦೭೪ ಎಕರೆಯನ್ನು ಸ್ವಾಧಿನಪಡಿಸಿಕೊಂಡು ೧೧೭೩೫ ಎಕರೆ ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹಂಚಲಾಗಿತ್ತು. ಆದರೆ ಕರ್ನಾಕದಲ್ಲಿಯೇ ಅತೀ ಹೆಚ್ಚು ಹೆಚ್ಚುವರಿ ಭೂಮಿಯನ್ನು ರಾಯಚೂರು ಜಿಲ್ಲೆ ಹೊಂದಿದೆ. ಅಂದರೆ, ೮೬೪೨೦ ಎಕರೆ ಹೆಚ್ಚುವರಿ ಭುಮಿ ಇದ್ದು, ಅದರಲ್ಲಿ ೩೪೭೨೭ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದರಲ್ಲಿ ಕೇವಲ ೧೩೬೬೮ ಎಕರೆ ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಹಂಚಲಾಗಿದೆ. ಹೀಗಾಗಿ ರಾಯಚೂರು ಜಿಲ್ಲೆಯಲ್ಲಿ ಭೂಹೀನ ದಲಿತರ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣಬಹುದು. ಹೆಚ್ಚುವರಿ ಭೂಮಿ ಮತ್ತು ಸ್ವಾಧೀನಪಡಿಸಿಕೊಂಡಿದ್ದು ಮತ್ತು ಅದರಲ್ಲಿ ಹಂಚಿದ್ದನ್ನು ಗಮನಿಸಿದರೆ ಭೂಹೀನರ ಸಂಖ್ಯೆ ಎಷ್ಟಿರಬಹುದೆಂಬುದು ಗೋಚರಿಸುತ್ತದೆ.

ಇತರರ ರಾಷ್ಟ್ರಗಳಲ್ಲಿರುವಂತೆ ಭಾರತದಲ್ಲಿ ಭೂ ಸುಧಾರಣೆಗಳು ಸಂಪತ್ತಿನ ಹಂಚಿಕೆ ಆದಾಯದ ಹೆಚ್ಚಳ, ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಭೂರಹಿತ ಕಾರ್ಮಿಕರಿಗೆ ಭೂಮಿಯ ಮರುಹಂಚಿಕೆ ಹಿಡುವಳಿದಾರರು ಮತ್ತು ಸಣ್ಣ ರೈತರಿಗೆ ಭೂಮಿಯನ್ನು ಕೈಗೊಳ್ಳುವ ಸಾರ್ವಜನಿಕ ನೀತಿಯಾಗಿ ಪ್ರತಿಬಿಂಬಿತವಾಗಿವೆ. ಆದರೆ ಭಾರತದಲ್ಲಿ ಮತ್ತೊಂದು ಸಮಸ್ಯೆ ಎಂದರೆ ಭೂ ಸುಧಾರಣೆಗಳನ್ನು ಗುನ್ನಾರ್ ಮೀರ್ಡಾಲ್ ಹೇಳುವಂತೆ "ಮೃದುರಾಜ್ಯ" ಹೇಳುವಂತೆ ಅಂದರೆ ಆಜ್ಞಾಪೂರಿತ ಸರ್ಕಾರದ ಬಲದಿಂದ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತರಬೇಕಿತ್ತು. ಆದರೆ ಆ ಪ್ರಯತ್ನ ಸರಕಾರ ಮಾಡಲೇ ಇಲ್ಲ. ಆದರೆ ರಷ್ಯಾ, ಚೀನಾ, ಇಟಲಿ ಹಾಗೂ ಜಪಾನಿನಂತಹ ರಾಷ್ಟ್ರಗಳಲ್ಲಿ ತೀಕ್ಷ್ಣವಾದ ಕ್ರಮಗಳನ್ನು ಕೈಗೊಂಡು ಅವುಗಳನ್ನು ಜಾರಿಗೆ ತರಲಾಯಿತು. ಆದರೆ ಭಾರತದಲ್ಲಿ ಎಂದೆಂದೂ ಅಂತಹ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದಿದ್ದಾರೆ. ಆದ್ದರಿಂದ ನಮ್ಮ ದೇಶದಲ್ಲಿ ಭೂ ನೀತಿ ಅನುಷ್ಠಾನ ಕಾಯ್ದೆಗಳನೆಲ್ಲ ಬಿಟ್ಟು ಏಳುವುದಿಲ್ಲ. ಇದನ್ನು ಸರಿಪಡಿಸದೇ ಹೋದಲ್ಲಿ ಭೂಹೀನರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಇದರ ಜೊತೆಗೆ ಭೂ ಕಬಳಿಕೆಯಂತಹ ಪ್ರಕರಣಗಳು, ಒತ್ತುವರಿ ಪ್ರಕರಣಗಳು ಮತ್ತು ಡಿನೋಟಿಫೈ ಪ್ರಕರಣಗಳನ್ನು ಸರಿಪಡಿಸುವ ಅಗತ್ಯವಿದೆ.[೯]

ಕೋಷ್ಟಕ ೪.೯. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂಹಿಡುವಳಿ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮಾಲಿಕತ್ವವನ್ನು ಹೊಂದಿರುವ ಸ್ವಂತ ಭೂಮಿಯಲ್ಲಿ ನೀರಾವರಿ ಭೂಮಿಯ ವಿವರ	ಒಂದು ಎಕರೆ	೩೬	೩೬	೪೨	೪೨	೪೫	೪೫
	ಮೂರು ಎಕರೆ ಯಿಂದ ಐದು ಎಕರೆ	೧೫	೧೫	೨೦	೨೧	೧೫	೧೫
	ಐದು ಎಕರೆಯಿಂದ ಹತ್ತು ಎಕರೆ	೧೦	೧೦	೮	೮	೧೫	೧೫
	ಟೆಲ್ಯಾಂಡ್	೩೯	೩೯	೩೦	೩೦	೨೫	೨೫
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರು ಭೂಮಿಯಲ್ಲಿ ಮಾಲಿಕತ್ವವನ್ನು ಹೊಂದುವ ಮೂಲಕ ನೀರಾವರಿ ಭೂಮಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೩೬.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೧೫.೦೦ ರಷ್ಟು ಕುಟುಂಬಗಳು ಸಹ ೩ ರಿಂದ ೫ ಎಕರೆ ಭೂಮಿಯನ್ನು ಹೊಂದಿದ್ದಾರೆ. ಅಲ್ಲದೇ, ಶೇ. ೧೦.೦೦ ರಷ್ಟು ಕುಟುಂಬಗಳು ೫–

೧೦ ಎಕರೆ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದು ಬಂದಿದೆ ಹಾಗೂ ಶೇ.೩೯.೦೦ ರಷ್ಟು ಕುಟುಂಬಗಳು ಟೇಲ್ಯಾಂಡ್ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡು ಬಂದಿದೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೪೨.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ನಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೨೦.೦೦ರಷ್ಟು ಕುಟುಂಬಗಳು ಸಹ ೩ರಿಂದ ೫ ಎಕರೆ ಭೂಮಿಯನ್ನು ಹೊಂದಿದ್ದಾರೆ. ಅಲ್ಲದೇ, ಶೇ. ೦೮.೦೦ರಷ್ಟು ಕುಟುಂಬಗಳು ೫–೧೦ ಎಕರೆ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದು ಬಂದಿದೆ ಹಾಗೂ ಶೇ. ೩೦.೦೦ರಷ್ಟು ಕುಟುಂಬಗಳು ಟೇಲ್ಯಾಂಡ್ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡು ಬಂದಿದೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೫.೦೦ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೧೫.೦೦ರಷ್ಟು ಕುಟುಂಬಗಳು ಸಹ ೩ರಿಂದ ೫ ಎಕರೆ ಭೂಮಿಯನ್ನು ಹೊಂದಿದ್ದಾರೆ. ಅಲ್ಲದೇ, ಶೇ. ೧೫.೦೦ರಷ್ಟು ಕುಟುಂಬಗಳು ೫–೧೦ ಎಕರೆ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದುಬಂದಿದೆ ಹಾಗೂ ಶೇ. ೨೫.೦೦ರಷ್ಟು ಕುಟುಂಬಗಳು ಟೇಲ್ಯಾಂಡ್ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಅಂಶದಲ್ಲಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ನೀರಾವರಿ ಭೂಮಿಯನ್ನು ಹೊಂದಿರುವಲ್ಲಿ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ಹೆಚ್ಚಿನ ನೀರಾವರಿ ಭೂಮಿಯನ್ನು ಹೊಂದಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ದೇವದುರ್ಗ ತಾಲೂಕು ಕೃಷ್ಣ ಮೆಲ್ದಂಡೆ ಯೋಜನೆ(ನಾರಯಣ್‌ಪೂರ್ ಬಲದಂಡೆ ಕಾಲುವೆ) ಮತ್ತು ಸಿಂಧನೂರು ತಾಲೂಕಿನಲ್ಲಿ ತುಂಗಾಭದ್ರ ಕಾಲುವೆಯಿಂದ ನೀರಿನ ಅರಿವು ಹೆಚ್ಚಾಗಿರುವುದರಿಂದ ಅಲ್ಲಿ ನೀರಾವರಿ ಪ್ರಮಾಣ ಹೆಚ್ಚಾಗಿದೆ ಎನ್ನಬಹುದಾಗಿದೆ. ಕೊನೆಯದಾಗಿ ನೀರಾವರಿಯನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಂಡಂತೆ ರೈತರ ತಮ್ಮ ಜಮೀನಿನಲ್ಲಿ ಮೆಕ್ಕೆಜೋಳ, ಕಡಲೆ, ರಾಗಿ, ಕಬ್ಬು ಮತ್ತು ಭತ್ತ ಇನ್ನಿತರ ವಿವಿಧ ಬೆಳೆಗಳನ್ನು ಬೆಳೆಯುದರ ಜೊತೆಗೆ ಅಲ್ಲಿ ವಾಸ ಮಾಡುವ ಭೂಮಿರಹಿತರಿಗೂ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಯನ್ನು ಮಾಡಿಕೊಂಡು ದುಡಿಯುತ್ತಾ ತಮ್ಮ ಜೀವನವನ್ನು ಘನತೆಯಿಂದ ಸಾಗಿಸಬಹುದಾಗಿದೆ ಎಂದು ತಿಳಿಯಲಾಗಿದೆ.

ಕೋಷ್ಟಕ ೪.೧೦. ಪರಿಶಿಷ್ಟರು ಹೊಂದಿರುವ ಖುಷ್ಕಿ ಭೂಹಿಡುವಳಿ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮಾಲಿಕತ್ವವನ್ನು ಹೊಂದಿರುವ ಸ್ವಂತ ಭೂಮಿಯಲ್ಲಿ ಒಣ ಭೂಮಿಯ ವಿವರ	ಒಂದು ಹೆಕ್ಟರ್	೬೩	೬೩	೬೪	೬೪	೫೯	೫೯
	ಮೂರು ಎಕರೆ ಯಿಂದ ಐದು ಎಕರೆ	೩೫	೩೫	೧೮	೧೮	೨೨	೨೨
	ಐದು ಎಕರೆ ಯಿಂದ ಹತ್ತು ಎಕರೆ	೨	೨	೧೭	೧೭	೧೮	೧೮
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರು ಭೂಮಿಯಲ್ಲಿ ಮಾಲಿಕತ್ವವನ್ನು ಹೊಂದುವ ಮೂಲಕ ಒಣ ಭೂಮಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೬೩.೦೦ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಒಣ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೩೫.೦೦ರಷ್ಟು ಕುಟುಂಬಗಳು ಸಹ ೩ ರಿಂದ ೫ ಎಕರೆ ಒಣ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡು ಬಂದಿದೆ. ಅಲ್ಲದೇ, ಶೇ. ೦೨.೦೦ರಷ್ಟು ಕುಟುಂಬಗಳು ೫–೧೦ ಎಕರೆ ಒಣ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದು ಬಂದಿದೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೬೪.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಒಣ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೧೮.೦೦ರಷ್ಟು ಕುಟುಂಬಗಳು ಸಹ ೩ ರಿಂದ ೫ ಎಕರೆ ಒಣ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡು ಬಂದಿದೆ. ಅಲ್ಲದೇ, ಶೇ. ೧೭.೦೦ರಷ್ಟು ಕುಟುಂಬಗಳು ೫–೧೦ ಎಕರೆ ಒಣ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದು ಬಂದಿದೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೫೬.೦೦ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಒಣ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೨೨.೦೦ರಷ್ಟು ಕುಟುಂಬಗಳು ಸಹ ೩ ರಿಂದ ೫ ಎಕರೆ ಒಣ ಭೂಮಿಯನ್ನು ಹೊಂದಿದ್ದಾರೆ ಎಂದು ಕಂಡುಬಂದಿದೆ. ಅಲ್ಲದೇ, ಶೇ. ೧೮.೦೦ರಷ್ಟು ಕುಟುಂಬಗಳು ೫–೧೦ ಎಕರೆ ಒಣ ಭೂಮಿಯನ್ನು ಹೊಂದಿರುವುದಾಗಿ ತಿಳಿಸಿರುವುದು ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ಅಂಶಗಳನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳನ್ನು ಗಮನಿಸಿದಾಗ ಲಿಂಗಸೂರು ತಾಲೂಕಿಗಿಂತ ದೇವದುರ್ಗ ಮತ್ತು ಸಿಂಧನೂರು

ತಾಲೂಕಿನಲ್ಲಿ ೧ ಎಕರೆ ಭೂಮಿಯನ್ನು ಹೊಂದಿರುವುದು ಅಲ್ಲದೇ ೫ ರಿಂದ ೧೦ ಎಕರೆ ಭೂಮಿಯನ್ನು ಹೊಂದಿರುವುದು ಹೆಚ್ಚಿನ ಸಂಖ್ಯೆಯಲ್ಲಿಯಿರುವುದನ್ನ ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಜನರು ನೀರಾವರಿ ಮತ್ತು ಒಣ ಭೂಮಿಯನ್ನು ಹೊಂದಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವುದನ್ನ ಅಧ್ಯಯಗಳಿಂದ ತಿಳಿಯಲಾಗಿದೆ. ಆದರೂ ನೀರಾವರಿ ಪ್ರದೇಶಗಿಂತ ಒಣ ಭೂಮಿಯನ್ನ ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವದನ್ನ ಸಹ ಕಾಣಲಾಗಿದೆ. ಮೂರು ತಾಲೂಕಿನಲ್ಲಿ ಸರಾಸರಿ ಒಣ ಭೂಮಿಯ ಪ್ರಮಾಣ ಹೆಚ್ಚಾಗಿದ್ದು ಇದರಿಂದ ಪರಿಶಿಷ್ಟರು ತಮ್ಮ ಜೀವನವನ್ನ ಬೇರೆಯವರ ಹತ್ತಿರ ಹೋಗಿ ದುಡಿದು ಜೀವನವನ್ನ ಸಾಗಿಸುವಂತಹ ಸಂಗತಿಯನ್ನ ಕಾಣಲಾಗಿದೆ. ಇಲ್ಲಿ ಮುಖ್ಯವಾಗಿ ತಿಳಿಯುವ ಅಂಶವೆಂದರೆ, ಮೂರು ತಾಲುಕುಗಳಿಗೆ ನದಿ ನೀರಿನ ಸೌಲಭ್ಯವಿದ್ದರೂ ಅದರ ಬಳಕೆಯನ್ನು ಸದುಪಯೋಗ ಮಾಡಿಕೊಳ್ಳದೆ ಅದರಿಂದ ಇಲ್ಲಿ ವಾಸಿಸುವ ಜನರ ಜೀವನ ದುಃಸ್ಥಿತಿಯಿಂದ ಕೂಡಿರುವುದನ್ನ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೧. ಪರಿಶಿಷ್ಟರು ಹೊಂದಿರುವ ನೀರಾವರಿ ಭೂಹಿಡುವಳಿ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮಾಲಿಕತ್ವವನ್ನು ಹೊಂದಿ ಸರ್ಕಾರ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯ ವಿವರ	ಒಂದು ಹೆಕ್ಟರ್	೯೭	೯೭	೯೧	೯೧	೯೫	೯೫
	ಮೂರು ಎಕರೆ ಯಿಂದ ಐದು ಎಕರೆ	೩	೩	೯	೯	೫	೫
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರು ಭೂಮಿಯಲ್ಲಿ ಮಾಲಿಕತ್ವವನ್ನು ಹೊಂದುವ ಮೂಲಕ ಸರ್ಕಾರ ನೀಡುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೯೭.೦೦ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೦೩.೦೦ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೯೧.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ.

೦೯.೦೦ ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೯೫.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೦೫.೦೦ ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳನ್ನು ನೋಡಿದಾಗ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಕಡಿಮೆ ಪ್ರಮಾಣದಲ್ಲಿ ಅಲ್ಲದೇ ೩ ರಿಂದ ೫ ಎಕರೆ ಭೂಮಿಯನ್ನು ಹೊಂದಿರುವುದನ್ನು ಕಾಣಲಾಗಿದೆ. ಎರಡು ತಾಲೂಕಿನಲ್ಲಿ ಪರಿಶಿಷ್ಟರಾದವರು ತಕ್ಕಮಟ್ಟಿಗೆ ಶಿಕ್ಷಣವನ್ನು ಬಲ್ಲವರಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಭೂಮಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಗಮನಿಸ ಬೇಕಾದ ಸಂಗತಿಯೆಂದರೆ, ಪರಿಶಿಷ್ಟರಿಗೆ ಬೇರೆಯವರಂತೆ ಘನತೆಯ ಜೀವನವನ್ನು ಮಾಡಬೇಕಾಗಿರು ವುದರಿಂದ ಸರ್ಕಾರ ಭೂರಹಿತರಿಗೆ ಭೂಮಿಯನ್ನು ಕೊಡುವ ಮೂಲಕ ಸಾಮಾಜಿಕ ನ್ಯಾಯವನ್ನು ಮನಗಾಣಲಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಮೂರು ತಾಲೂಕಿನ ಪರಿಶಿಷ್ಟರಲ್ಲಿ ನೋಡಲಾಗಿದೆ. ಇಂತಹ ವಿದ್ಯಮಾನದಿಂದ ಪರಿಶಿಷ್ಟರ ಜೀವನ ಸ್ಥಿತಿಯು ಶೋಚನಿಯವಾಗಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ.

ಕೋಷ್ಟಕ ೪.೧೨. ಪರಿಶಿಷ್ಟರು ಹೊಂದಿರುವ ಗೇಣಿ ನೀಡಿದ ಭೂಹಿಡುವಳಿ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮಾಲಿಕತ್ವವನ್ನು ಹೊಂದಿ ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯ ವಿವರ	ಒಂದು ಹೆಕ್ಟರ್	೫೩	೫೩	೭೧	೭೧	೫೪	೫೪
	ಮೂರು ಎಕರೆ ಯಿಂದ ಐದು ಎಕರೆ	೨೯	೨೯	೨೧	೨೧	೨೩	೨೩
	ಐದು ಎಕರೆ ಯಿಂದ ಹತ್ತು ಎಕರೆ	೧೮	೧೮	೮	೮	೨೩	೨೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರು ಭೂಮಿಯಲ್ಲಿ ಮಾಲಿಕತ್ವವನ್ನು ಹೊಂದಿ ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ

ಶೇ. ೧೦೦ ರಷ್ಟರಲ್ಲಿ ಶೇ. ೫೩.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೨೮.೦೦ ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಹಾಗೂ ಶೇ. ೧೯.೦೦ ರಷ್ಟು ಕುಟುಂಬಗಳು ೫ ರಿಂದ ೧೦ ಎಕರೆ ಗೇಣಿ ನೀಡಿರುವ ನೀರಾವರಿ ಭೂಮಿಯನ್ನು ಹೊಂದಿರುವುದಾಗಿದೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೭೧.೦೦ ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೨೧.೦೦ ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಹಾಗೂ ಶೇ. ೦೮.೦೦ ರಷ್ಟು ಕುಟುಂಬಗಳು ೫ ರಿಂದ ೧೦ ಎಕರೆ ಗೇಣಿ ನೀಡಿರುವ ನೀರಾವರಿ ಭೂಮಿಯನ್ನು ಹೊಂದಿರುವುದಾಗಿದೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೫೪.೦೦ರಷ್ಟು ಕುಟುಂಬಗಳು ಒಂದು ಹೆಕ್ಟರ್‌ರಷ್ಟು ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎಂದಿದ್ದಾರೆ. ಅದರಂತೆ, ಶೇ. ೨೩.೦೦ರಷ್ಟು ಕುಟುಂಬಗಳು ೩ ರಿಂದ ೫ ಎಕರೆ ಗೇಣಿ ನೀಡಿರುವ ಭೂಮಿಯಲ್ಲಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ. ಹಾಗೂ ಶೇ. ೨೩.೦೦ರಷ್ಟು ಕುಟುಂಬಗಳು ೫ ರಿಂದ ೧೦ ಎಕರೆ ಗೇಣಿ ನೀಡಿರುವ ನೀರಾವರಿ ಭೂಮಿಯನ್ನು ಹೊಂದಿರುವುದಾಗಿದೆ.

ಒಟ್ಟಾರೆಯಾಗಿ, ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗೇಣಿ ಭೂಮಿಯನ್ನು ಹೊಂದಿರುವುದನ್ನ ಕಾಣಲಾಗಿದೆ. ಅಂದರೆ, ಲಿಂಗಸೂರು ಪ್ರದೇಶದಲ್ಲಿ ನೀರಾವರಿಯ ಪ್ರಮಾಣ ಹೆಚ್ಚಾಗಿದ್ದರಿಂದ ಪರಿಶಿಷ್ಟರು ಭೂಮಿಯನ್ನು ಗೇಣಿಯಾಗಿ ಪಡೆದು ಬೆಳವಣಿಗೆಯನ್ನು ಕಾಣಬೇಕು ಎನ್ನುವ ದೃಷ್ಟಿಯಿಂದ ಗೇಣಿಯನ್ನು ಪಡೆಯುತ್ತಾರೆ. ಮುಂದುವರಿದು, ಹೊಲದಲ್ಲಿ ಕಡಲೆ, ಭತ್ತ, ಮೆಕ್ಕೆ ಜೋಳ ಮತ್ತು ಕಬ್ಬು ಇನ್ನಿತರ ಬೆಳೆಗಳನ್ನು ಬೆಳೆಯುದರ ಹಿನ್ನೆಲೆಯಾಗಿ ಅವುಗಳನ್ನ ಸರಿಯಾಗಿ ಬೆಳೆಯದೆ ಅದರಿಂದ ನಷ್ಟವನ್ನು ಅನುಭವಿಸುತ್ತಾರೆ. ಹಾಗಾಗಿ ಅಂತಹ ನಷ್ಟದಿಂದ ಆರೋಗ್ಯಕರ ಜೀವನವನ್ನು ನಡೆಸಲಿಕ್ಕೆ ಸಾಧ್ಯವಾಗದೆ ಇರುವುದನ್ನ ನೋಡಲಾಗಿದೆ.

ಕೋಷ್ಟಕ ೪.೧೩. ಪರಿಶಿಷ್ಟರಿಗೆ ಕೃಷಿ ಇಲಾಖೆಯಿಂದ ಸಿಗುವ ಸೌಲಭ್ಯಗಳ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಕೃಷಿ ಇಲಾಖೆಯಿಂದ ಸಹಾಯಧನ ಸಿಕ್ಕಿದೆಯಾ	ಸಿಕ್ಕಿದೆ	೩೨	೩೨	೩೬	೩೬	೫೩	೫೩
	ಇಲ್ಲಾ	೬೮	೬೮	೬೪	೬೪	೪೭	೪೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕೃಷಿ ಇಲಾಖೆಯಿಂದ ಸಿಕ್ಕಂತಹ ಸೌಲಭ್ಯಗಳ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೨.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಸಿಕ್ಕಿದೆ ಎಂದಿದ್ದಾರೆ. ಅಲ್ಲದೇ, ಶೇ. ೬೮.೦೦ರಷ್ಟು ಕುಟುಂಬಗಳು ಯಾವ ಸಹಾಯಧನ ಸಿಕ್ಕಿಲ್ಲ ಎಂದಿದ್ದಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೬.೦೦ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಸಿಕ್ಕಿದೆ ಎಂದಿದ್ದಾರೆ. ಅಲ್ಲದೇ, ಶೇ. ೬೪.೦೦ರಷ್ಟು ಕುಟುಂಬಗಳು ಯಾವ ಸಹಾಯಧನ ಸಿಕ್ಕಿಲ್ಲ ಎಂದಿದ್ದಾರೆ. ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೩.೦೦ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಸಿಕ್ಕಿದೆ ಎಂದಿದ್ದಾರೆ. ಅಲ್ಲದೇ, ಶೇ. ೪೭.೦೦ರಷ್ಟು ಕುಟುಂಬಗಳು ಯಾವ ಸಹಾಯಧನ ಸಿಕ್ಕಿಲ್ಲ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಹಾಯಧನವನ್ನು ಪಡೆದಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಅಂದಾಗೆ, ಇಂತಹ ಸಹಾಯಧನವು ಸಿಕ್ಕಿದೆ ಆದರೂ ಅದರಿಂದ ಪರಿಶಿಷ್ಟ ರೈತರು ರೂಟವೇಟರ್, ಗೊಬ್ಬರ, ಬೀಜ ಮತ್ತು ಕೀಟನಾಶಕ ಜೊತೆಗೆ ಹನಿ ನೀರಾವರಿ ಮತ್ತು ಗಂಗಾ ಕಲ್ಯಾಣಿಯಂತಹ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟರಿಗೆ ಇರುವಂತಹ ಸಹಾಯಧನಗಳು ಪರಿಶಿಷ್ಟರ ಮೂಲಕ ಸಾಮಾನ್ಯ ಜನರಿಗೆ ಉಪಯುಕ್ತವಾಗಿವೆ

ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ, ಪರಿಶಿಷ್ಟರ ಜೀವನವು ಶೋಚನೀಯವಾಗಿ ಇರುವುದರಿಂದ ಬಂದಂತಹ ಉಪಕರಣಗಳನ್ನ ಹಾಗೂ ಯೋಜನೆಯ ಸಾಮಾಗ್ರಿಗಳನ್ನು ಇದ್ದಂತ ಅವರಿಗೆ ಹಣಕ್ಕಾಗಿ ಮಾರಾಟ ಮಾಡಿ ತಮ್ಮ ಜೀವನವನ್ನು ನಡೆಸುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. ಅಲ್ಲದೇ ದೇವದುರ್ಗ ಮತ್ತು ಲಿಂಗಸೂರಿನ ಗ್ರಾಮೀಣ ಪ್ರದೇಶದಲ್ಲಿ ಶಾಸಕರು ಮೀಸಲಾತಿ ಆಧಾರದ ಮೇಲೆ ಆಯ್ಕೆಯಾಗಿದ್ದರೂ ಪರಿಶಿಷ್ಟರಿಗೆ ಹೆಚ್ಚಿನ ಆದ್ಯತೆಯನ್ನು ನೀಡದೆ ಸಾಮಾನ್ಯ ಜನರಿಗೆ ಹೆಚ್ಚು ಹೆಚ್ಚಾಗಿ ಮಾನ್ಯತೆ ನೀಡುವುದನ್ನು ಮನಗಣಲಾಗಿದೆ. ಇಂತಹ ಒಂದು ವಾತಾವರಣದಲ್ಲಿ ಸಹಾಯಧನವನ್ನು ಪಡೆಯಬೇಕಾದರೆ ತುಂಬಾ ಕಷ್ಟಪಡಬೇಕಾದ ಸಂದರ್ಭ ಎದುರಿಸಬೇಕಾಗುತ್ತದೆ ಎಂದು ತಮ್ಮ ಅಳಲನ್ನು ಹೇಳಿಕೊಂಡಿದ್ದಾರೆ. ಕೊನೆಯದಾಗಿ ಮೇಲಿನ ಅಭಿಪ್ರಾಯವನ್ನು ನೋಡಿದಾಗ ಯಾರು ಬಲಾಢ್ಯರಾಗಿರುತ್ತಾರೆಯೋ ಅಂತಹವರಿಗೆ ಮಾತ್ರ ಯೋಜನೆಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ. ಅಂದ್ಹಾಗೆ, ಇಷ್ಟೂ ಇಲಾಖೆಯಲ್ಲಿರುವಂತಹ ಕೆಟ್ಟ ಆಡಳಿತ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾದ ಅವಶ್ಯಕತೆಯಿದೆ ಎನ್ನಲಾಗುತ್ತದೆ.

ಕೋಷ್ಟಕ ೪.೧೪. ಕೃಷಿ ಇಲಾಖೆಯಿಂದ ಸಿಗುವ ಸೌಲಭ್ಯ ವಂಚಿತರಾದವರ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಒಂದು ವೇಳೆ ಸೌಲಭ್ಯಗಳು ಸಿಗದಿದ್ದಕ್ಕೆ, ಇರುವ ಕಾರಣಗಳಾವುವು?	ಅದರ ಬಗ್ಗೆ ಅರಿವು ಇಲ್ಲ	೪೩	೪೩	೩೭	೩	೪೧	೪೧
	ಲಂಚ ಕೊಡಲು ಆಗುವುದಿಲ್ಲ	೨೧	೨೧	೧೬	೧೬	೨೪	೨೪
	ಕೇಳಲು ಹೋಗಿಲ್ಲ	೩೬	೩೬	೪೭	೪೭	೩೫	೩೫
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕೃಷಿ ಇಲಾಖೆಯಿಂದ ಸೌಲಭ್ಯಗಳಿಂದ ವಂಚಿತಗೊಂಡಿರುವುದಕ್ಕೆ ಇರುವಂತಹ ಕಾರಣಗಳನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೪೩.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಅಥವಾ ಸೌಲಭ್ಯಗಳು ಸಿಗದೆ ಇದಕ್ಕೆ ಯೋಜನೆಯ ಬಗ್ಗೆ ಅರಿವು ಇಲ್ಲದಿದಕ್ಕೆ ಸಿಕ್ಕಿಲ್ಲ ಎಂದು ಹೇಳಿಕೊಂಡಿದ್ದಾರೆ.

ಅಲ್ಲದೇ, ಶೇ. ೨೧.೦೦ ರಷ್ಟು ಕುಟುಂಬಗಳು ನಮಗೆ ಸಹಾಯಧನ ಸಿಗದೆಯಿದಕ್ಕೆ ಸೌಲಭ್ಯವನ್ನು ಪಡೆಯಲು ಲಂಚ ಕೊಡಲು ಆಗದಿದಕ್ಕೆ ಯೋಜನೆಯ ಲಾಭವನ್ನು ಪಡೆದಿಲ್ಲ ಎಂದಿದ್ದಾರೆ. ಅದಲ್ಲದೇ, ಶೇ. ೩೬.೦೦ ರಷ್ಟು ಕುಟುಂಬಗಳು ಯೋಜನೆಯ ಲಾಭವನ್ನು ಪಡೆಯಬೇಕಾದರೆ ಲಂಚ ಕೊಡಲು ಆಗದೆ ಮತ್ತು ಅದರ ಬಗ್ಗೆ ಅರಿವು ಇಲ್ಲದಿದ್ದರಿಂದ ಸೌಲಭ್ಯಗಳನ್ನು ಕೇಳಲಿಕ್ಕೆನೇ ಹೋಗಿಲ್ಲ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಅಥವಾ ಸೌಲಭ್ಯಗಳು ಸಿಗದೆ ಇದಕ್ಕೆ ಯೋಜನೆಯ ಬಗ್ಗೆ ಅರಿವು ಇಲ್ಲದಿದಕ್ಕೆ ಸಿಕ್ಕಿಲ್ಲ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೧೬.೦೦ ರಷ್ಟು ಕುಟುಂಬಗಳು ನಮಗೆ ಸಹಾಯಧನ ಸಿಗದೆ ಇದಕ್ಕೆ ಸೌಲಭ್ಯವನ್ನು ಪಡೆಯಲು ಲಂಚ ಕೊಡಲು ಆಗದಿದಕ್ಕೆ ಯೋಜನೆಯ ಲಾಭವನ್ನು ಪಡೆದಿಲ್ಲ ಎಂದಿದ್ದಾರೆ. ಅದಲ್ಲದೇ, ಶೇ. ೪೭.೦೦ ರಷ್ಟು ಕುಟುಂಬಗಳು ಯೋಜನೆಯ ಲಾಭವನ್ನು ಪಡೆಯಬೇಕಾದರೆ ಲಂಚ ಕೊಡಲು ಆಗದೆ ಮತ್ತು ಅದರ ಬಗ್ಗೆ ಅರಿವು ಇಲ್ಲದಿದ್ದರಿಂದ ಸೌಲಭ್ಯಗಳನ್ನು ಕೇಳಲಿಕ್ಕೆನೇ ಹೋಗಿಲ್ಲ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೪೧.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಇಲಾಖೆಯಿಂದ ಸಹಾಯಧನ ಅಥವಾ ಸೌಲಭ್ಯಗಳು ಸಿಗದೆಯಿದಕ್ಕೆ ಯೋಜನೆಯ ಬಗ್ಗೆ ಅರಿವು ಇಲ್ಲದಿದಕ್ಕೆ ಸಿಕ್ಕಿಲ್ಲ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೨೪.೦೦ ರಷ್ಟು ಕುಟುಂಬಗಳು ನಮಗೆ ಸಹಾಯಧನ ಸಿಗದೆಯಿದಕ್ಕೆ ಸೌಲಭ್ಯವನ್ನು ಪಡೆಯಲು ಲಂಚ ಕೊಡಲು ಆಗದಿದಕ್ಕೆ ಯೋಜನೆಯ ಲಾಭವನ್ನು ಪಡೆದಿಲ್ಲ ಎಂದಿದ್ದಾರೆ. ಅದಲ್ಲದೇ, ಶೇ. ೩೫.೦೦ ರಷ್ಟು ಕುಟುಂಬಗಳು ಯೋಜನೆಯ ಲಾಭವನ್ನು ಪಡೆಯಬೇಕಾದರೆ ಲಂಚ ನೀಡಲು ಆಗದೆ ಮತ್ತು ಅದರ ಬಗ್ಗೆ ಅರಿವು ಇಲ್ಲದಿದ್ದರಿಂದ ಸೌಲಭ್ಯಗಳನ್ನು ಕೇಳಲಿಕ್ಕೆನೇ ಹೋಗಿಲ್ಲ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೇಲಿನ ಅಂಶವನ್ನು ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಯನ್ನು ಪಡೆಯುವಲ್ಲಿ ವಿಫಲಗೊಂಡಿರುವುದನ್ನ ನೋಡಲಾಗಿದೆ. ಮುಂದುವರಿದು, ಅದರ ಬಗ್ಗೆ ಅರಿವು ಇಲ್ಲ ಮತ್ತು ಯೋಜನೆಯನ್ನು ಪಡೆಯಲಿಕ್ಕೆ ತಂಬಾ ಲಂಚವನ್ನು ಕೇಳುತ್ತಾರೆ. ಹಾಗಾಗಿ ಅದರ ಸಂಪರ್ಕಕ್ಕೆ ಹೋಗಿಲ್ಲ ಎಂಬಂತಹ ಕಾರಣಗಳನ್ನು ನೀಡಿರುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸಮಾಜದಲ್ಲಿ ದುರ್ಬಲರನ್ನ ಸಬಲರನ್ನಾಗಿ ಮಾಡಲಿಕ್ಕೆ ಸರ್ಕಾರದ ವತಿಯಿಂದ ಹಲವಾರು ಸೌಲಭ್ಯಗಳನ್ನ ನೀಡಲಾಗಿದೆ. ಮುಂದುವರಿದು, ಲಿಂಗಸೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರು ಇರುವುದರಿಂದ ಅವರಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿದ್ದು ಜೊತೆಗೆ ಜೀವನವನ್ನ ನಡೆಸಿಕೊಂಡು ಹೋಗುವದೆ ಒಂದು ದುಸ್ತರವಾದಾಗ ಯೋಜನೆಯನ್ನು ಪಡೆಯಲಿಕ್ಕೆ ಅವರಿಂದ ಸಾಧ್ಯವಾಗದ

ಮಾತಾಗಿದೆ. ಹಾಗಾಗಿ ಇಲಾಖೆಯಿಂದ ಸಿಗುವಂತಹ ಸಹಾಯಧನಗಳು ಮತ್ತು ಸೌಲಭ್ಯಗಳಿಂದ ವಂಚಿತಗೊಂಡಿರುವುದನ್ನ ಅಧ್ಯಯನಗಳಿಂದ ತಿಳಿಯಲಾಗಿದೆ. ಇಂತಹ ಕಾರಣಗಳನ್ನ ಸರಿಸುಮಾರಾಗಿ ಮೂರು ತಾಲೂಕುಗಳಲ್ಲಿಯೂ ಸಹ ಕೇಳಲಾಗಿದೆ. ಇವತ್ತಿನ ಸಂದರ್ಭದಲ್ಲಿ ಪರಿಶಿಷ್ಟರು ಸರ್ಕಾರ ನೀಡುವ ಅನ್ನಭಾಗ್ಯದಂತಹ ಸೌಲಭ್ಯಗಳ ಮೇಲೆ ಅವಲಂಬಿತರಾಗಿದ್ದು ಅದರಿಂದ ಜೀವನವನ್ನು ನಡೆಸಿಕೊಂಡು ಹೋಗುವಾಗ ಸರ್ಕಾರದಿಂದ ಬರುವ ಇನ್ನಿತರ ಯೋಜನೆಯನ್ನು ಪಡೆಯಲಿಕ್ಕೆ ಹಣವನ್ನು ವ್ಯಯ ಮಾಡಲಿಕ್ಕೆ ಎಲ್ಲಿಂದ ತರುವಂತಹ ಕಾರ್ಯವನ್ನು ಮಾಡಿಯಾರು ಎಂದು ತಿಳಿದು ಬಂದಿದೆ.

ಕೋಷ್ಟಕ ೪.೧೫. ಪರಿಶಿಷ್ಟರ ದುಡಿಮೆಗೆ ಸಂಬಂಧಿಸಿದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಕುಟುಂಬಕ್ಕೆ ಆಧಾರ ಯಾವುದು?	ಭೂಮಿ	೧೯	೧೯	೪೦	೪೦	೩೭	೩೭
	ಸ್ವಯಂ ಉದ್ಯೋಗ	೧೩	೧೩	೨೧	೨೧	೨೬	೨೬
	ಕೂಲಿ	೫೮	೫೮	೩೯	೩೯	೩೭	೩೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರು ತಮ್ಮ ಜೀವನಕ್ಕೆ ಯಾವ ಆಧಾರವನ್ನು ಮಾಡಿಕೊಂಡಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೧೯.೦೦ ರಷ್ಟು ಕುಟುಂಬಗಳು ನಮ್ಮ ಜೀವನಕ್ಕೆ ಭೂಮಿಯನ್ನ ಆಧಾರವಾಗಿ ಮಾಡಿಕೊಂಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೧೩.೦೦ ರಷ್ಟು ಕುಟುಂಬಗಳು ನಾವು ನಮ್ಮ ಜೀವನಕ್ಕೆ ಸ್ವಯಂ ಉದ್ಯೋಗವನ್ನ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ ಎಂದಿದ್ದಾರೆ. ಅದಲ್ಲದೇ, ಶೇ. ೫೮.೦೦ ರಷ್ಟು ಕುಟುಂಬಗಳು ತಮ್ಮ ಜೀವನಕ್ಕಾಗಿ ಕೂಲಿಯನ್ನ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೪೦.೦೦ ರಷ್ಟು ಕುಟುಂಬಗಳು ನಮ್ಮ ಜೀವನಕ್ಕೆ ಭೂಮಿಯನ್ನ ಆಧಾರವಾಗಿ ಮಾಡಿಕೊಂಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೨೧.೦೦ ರಷ್ಟು ಕುಟುಂಬಗಳು ನಾವು ನಮ್ಮ ಜೀವನಕ್ಕೆ ಸ್ವಯಂ ಉದ್ಯೋಗವನ್ನ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ ಎಂದಿದ್ದಾರೆ. ಅದಲ್ಲದೇ, ಶೇ. ೩೯.೦೦ರಷ್ಟು ಕುಟುಂಬಗಳು ತಮ್ಮ ಜೀವನಕ್ಕಾಗಿ ಕೂಲಿಯನ್ನ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯವನ್ನು

ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೭.೦೦ ರಷ್ಟು ಕುಟುಂಬಗಳು ನಮ್ಮ ಜೀವನಕ್ಕೆ ಭೂಮಿಯನ್ನ ಆಧಾರವಾಗಿ ಮಾಡಿಕೊಂಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೨೬.೦೦ರಷ್ಟು ಕುಟುಂಬಗಳು ನಾವು ನಮ್ಮ ಜೀವನಕ್ಕೆ ಸ್ವಯಂ ಉದ್ಯೋಗವನ್ನ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ ಎಂದಿದ್ದಾರೆ. ಅದಲ್ಲದೇ, ಶೇ. ೩೭.೦೦ರಷ್ಟು ಕುಟುಂಬಗಳು ತಮ್ಮ ಜೀವನಕ್ಕಾಗಿ ಕೂಲಿಯನ್ನ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ ಅಂಶಗಳನ್ನ ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಜೀವನಕ್ಕೆ ಕೂಲಿಯನ್ನ ಮಾಡಿಕೊಂಡು ಜೀವನ ಸಾಗಿಸುತ್ತಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಗಳು ಹೆಚ್ಚಿನ ಪ್ರಮಾದಲ್ಲಿ ನೀರಾವರಿಯಾಗಿದ್ದು ಆದರೆ ದೇವದುರ್ಗದಲ್ಲಿ ಇದರ ಪ್ರಮಾಣ ಕಡಿಮೆಯಾಗಿದ್ದು ಸರ್ಕಾರದಿಂದ ಬರುವ ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಅವಲಂಬನೆಯಾಗಿ ದಿನದ ಕೂಲಿಗಾಗಿ ಪರಿತಪಿಸುವಂತಹ ಸಂದರ್ಭಗಳು ಬಂದೊಗುತ್ತವೆ ಎಂಬ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ಭೂಮಿ ಮತ್ತು ಸ್ವಯಂ ಉದ್ಯೋಗ ಎರಡು ಮಧ್ಯಮ ಹಾಗೂ ಉನ್ನತ ಮಟ್ಟದ ಜೀವನವನ್ನ ಸಾಗಿಸಬಹುದು ಆದರೆ, ಕೂಲಿಯನ್ನ ಮಾಡುವದು ಕೆಳ ಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಕೂಲಿ ಮಾಡಿ ನಮ್ಮ ಜೀವನವನ್ನ ಸಾಗಿಸುವುದು ತುಂಬಾ ಶೋಚನೀಯವಾಗಿದೆ ಎಂಬ ಅಭಿಪ್ರಾಯವನ್ನ ಹೇಳುತ್ತಾರೆ.

ಕೋಷ್ಟಕ ೪.೧೬. ವರ್ಷದಲ್ಲಿ ಸಿಗುವ ಕೂಲಿ ದಿನಗಳ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಕೃಷಿ ಉದ್ಯೋಗ ವರ್ಷದಲ್ಲಿ ಎಷ್ಟು ಸಿಗುತ್ತದೆ?	೫೦ ರಿಂದ	೩೨	೩೨	೨೧	೨೧	೧೬	೧೬
	೧೦೦ ರಿಂದ ೧೫೦ ದಿನಗಳು	೬೪	೬೪	೫೩	೫೩	೪೭	೪೭
	೧೫೦ ರಿಂದ ೨೦೦ ದಿನಗಳು	೪	೪	೨೬	೨೬	೩೭	೩೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕೃಷಿ ಉದ್ಯೋಗ ಎಷ್ಟು ಸಿಗುತ್ತದೆ ಎಂಬ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೨.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಉದ್ಯೋಗ ವರ್ಷದಲ್ಲಿ ೫೦ ರಿಂದ ೧೦೦ ದಿನಗಳು ಸಿಗುತ್ತವೆ ಎಂದಿದ್ದಾರೆ. ಅಲ್ಲದೇ, ಶೇ. ೬೪.೦೦ರಷ್ಟು ಕುಟುಂಬಗಳು ೧೦೦ ರಿಂದ ೧೫೦ ದಿನಗಳು ಸಿಗುತ್ತವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೦೪.೦೦ರಷ್ಟು ಕುಟುಂಬಗಳು ೧೫೦ ರಿಂದ ೨೦೦ ದಿನಗಳು ಸಿಗುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೨೧.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಉದ್ಯೋಗ ವರ್ಷದಲ್ಲಿ ೫೦ ರಿಂದ ೧೦೦ ದಿನಗಳು ಸಿಗುತ್ತವೆ ಎಂದಿದ್ದಾರೆ. ಅಲ್ಲದೇ, ಶೇ. ೫೩.೦೦ ರಷ್ಟು ಕುಟುಂಬಗಳು ೧೦೦ ರಿಂದ ೧೫೦ ದಿನಗಳು ಸಿಗುತ್ತವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೨೬.೦೦ ರಷ್ಟು ಕುಟುಂಬಗಳು ೧೫೦ ರಿಂದ ೨೦೦ ದಿನಗಳು ಸಿಗುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೧೬.೦೦ ರಷ್ಟು ಕುಟುಂಬಗಳು ನಮಗೆ ಕೃಷಿ ಉದ್ಯೋಗ ವರ್ಷದಲ್ಲಿ ೫೦ ರಿಂದ ೧೦೦ ದಿನಗಳು ಸಿಗುತ್ತವೆ ಎಂದಿದ್ದಾರೆ. ಅಲ್ಲದೇ, ಶೇ. ೪೭.೦೦ ರಷ್ಟು ಕುಟುಂಬಗಳು ೧೦೦ರಿಂದ ೧೫೦ ದಿನಗಳು ಸಿಗುತ್ತವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೩೭.೦೦ರಷ್ಟು ಕುಟುಂಬಗಳು ೧೫೦ ರಿಂದ ೨೦೦ ದಿನಗಳು ಸಿಗುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ, ಮೇಲಿನ ಮಾಹಿತಿಯನ್ನು ಪರಿಗಣಿಸಿದಾಗ ಸಿಂಧನೂರು ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ದೇವದುರ್ಗ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಕೆಲಸಗಳು ಸಿಗದೆಯಿರುವುದರಿಂದ ತಮ್ಮ ಜೀವನವನ್ನು ದುಃಸ್ಥಿತಿಯಲ್ಲಿರುವದನ್ನ ಮನಗಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರು ಇರುವುದರಿಂದ ತಾವು ಯಾವ ಜಮೀನನ್ನು ಹೊಂದದೆ, ಹೊಂದಿದ್ದರೂ ಅವರು ಒಣ ಭೂಮಿ ಇದ್ದು ಅದರಿಂದ ಯಾವ ಬೆಳೆಯನ್ನು ಪಡೆಯದೆ ಇರುವುದರಿಂದ ಅನಿವಾರ್ಯವಾಗಿ ಕೂಲಿಗೆ ಹೋಗುವ ಸಂದರ್ಭದಿಂದ ಕೂಲಿ ಕೆಲಸಗಳು ಹೆಚ್ಚಾಗಿ ಸಿಗದೆಯಿದ್ದಕ್ಕೆ ತಮ್ಮ ಜೀವನವನ್ನು ನಡೆಸಲು ಬೇರೆ ಊರಿಗೆ ಹೋಗಿ ಕೆಲಸವನ್ನು ಮಾಡುವಂತಹ ವ್ಯವಸ್ಥೆಯನ್ನು ನೋಡಲಾಗಿದೆ. ಅಂತಹ ಕೂಲಿ ಕೆಲಸಗಳಿಗೆ ಹೋಗುವುದಕ್ಕೆ ಮಾಲೀಕರಿಂದ ೧೦೦ರಿಂದ ೨೦೦ ರೂ.ವರೆಗೆ ಕೂಲಿಯನ್ನು ಪಡೆಯವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಣಲಾಗಿದೆ. ಇಂತಹ ಒಂದು ಸಣ್ಣ ಕೂಲಿಯಿಂದ ತಮ್ಮ ಘನತೆಯ ಜೀವನವನ್ನು ಸಾಗಿಸುವುದು ಆಗದೆ ಇರುವುದರಿಂದ ಮತ್ತೊಬ್ಬರ ಮೇಲೆ ಅವಲಂಬಿತರಾಗಿದ್ದುಕೊಂಡು ಆರೋಗ್ಯದ ಜೀವನವನ್ನು ನಡೆಸಿಕೊಂಡು ಹೋಗುವುದರಲ್ಲಿ ವಿಫಲಗೊಂಡಿರುವುದನ್ನು ಕ್ಷೇತ್ರಧ್ಯಾಯನದ ಮೂಲಕ ತಿಳಿದು ಬಂದಿದೆ.

ಕೋಷ್ಟಕ ೪.೧೭. ಉದ್ಯೋಗ ಖಾತ್ರಿಯಲ್ಲಿ ನೋಂದಾಯಿಸಿದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಸರು ನೊಂದಾಯಿಸಿದ್ದೀರಾ?	ನೊಂದಾಯಿಸಿದ್ದೇವೆ	೧೩	೧೩	೨೧	೨೧	೧೭	೧೭
	ಇಲ್ಲಾ	೮೭	೮೭	೭೯	೭೯	೮೩	೮೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಸರ್ಕಾರಿ ಯೋಜನೆಯಾದ ಉದ್ಯೋಗ ಖಾತ್ರಿ ಯೋಜನೆಯ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೧೩.೦೦ ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಸರನ್ನ ನೋಂದಾಯಿಸಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೮೭.೦೦ ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ತಮ್ಮ ಹೆಸರನ್ನ ನೋಂದಾಯಿಸಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೨೧.೦೦ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಸರನ್ನ ನೋಂದಾಯಿಸಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೭೯.೦೦ ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ತಮ್ಮ ಹೆಸರನ್ನ ನೋಂದಾಯಿಸಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೧೭.೦೦ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಸರನ್ನ ನೋಂದಾಯಿಸಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೮೩.೦೦ರಷ್ಟು ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ತಮ್ಮ ಹೆಸರನ್ನ ನೋಂದಾಯಿಸಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆ ಮೇಲಿನ ಅಂಶಗಳನ್ನ ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಸರಿಸುಮಾರು ಒಂದೇ ಪ್ರಮಾಣದಲ್ಲಿ ಖಾತ್ರಿ ಯೋಜನೆಯಲ್ಲಿ ಹೆಸರನ್ನ ನೋಂದಾಯಿಸದೆಯಿರುವುದನ್ನ ನೋಡಲಾಗಿದೆ. ಹಾಗೆಯೇ ಹೆಸರನ್ನ ನೋಂದಾಯಿಸಿರುವುದರ ಎಲ್ಲಾ ಕೂಲಿಕಾರರಿಗೂ ತಮ್ಮ ಹೆಸರಿನ ಮೇಲೆ ಜಾಬ್ ಕಾರ್ಡ್‌ನ್ನ ಹೊಂದಿರುವುದನ್ನ ಗಮನಿಸಲಾಗಿದೆ. ಅಲ್ಲದೇ ಕೂಲಿಕಾರರಿಗೆ ಮೀಸಲಾದ ಜಾಬ್ ಕಾರ್ಡ್‌ಗಳು ತಮ್ಮ ಬಳಿ ಇರದೆ ಅವುಗಳು ಗುತ್ತಿಗೆದಾರರ ಹತ್ತಿರ ಇರುವುದನ್ನ ಸಹ ಮನಗಾಣಲಾಗಿದೆ. ಅವುಗಳನ್ನ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಇಟ್ಟುಕೊಂಡು ಕೂಲಿಕಾರರಿಗೆ ಸರ್ಕಾರ ನೀಡುವ ಪೂರ್ಣಕಾಲಿಕ ಕೆಲಸವನ್ನ ಕೊಡದೆ ಕೆಲವು ದಿನದ ಕೆಲಸವನ್ನು ಕೊಟ್ಟು ಅವರ ಜಾಬ್ ಕಾರ್ಡ್‌ಗೆ ಇಂತಿಷ್ಟು ಎಂಬ ಒಂದು

ಮೊತ್ತ(ಕೂಲಿ)ವನ್ನು ಕುಟುಂಬದಲ್ಲಿ ಯಾರು ಕೆಲಸವನ್ನು ಮಾಡಿರುವುತ್ತಾರಯೋ ಅವರ ಕೈಯಲ್ಲಿಯೇ ಕೂಲಿಯನ್ನು ಕೊಡುವುದರ ಮೂಲಕ ಪೂರ್ಣಕಾಲಿಕ ಕೂಲಿ ದಿನಗಳನ್ನಾಗಿ ಪೂರೈಸಲಾಗುತ್ತದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೪.೧೮. ಪರಿಶಿಷ್ಟ ಜಾತಿ, ಪಂಗಡಗಳ ಸಾಲಕ್ಕೆ ಸಂಬಂಧಿಸಿದ ವಿವರಗಳು

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಲೇವದೇವಿಗಾರರಿಂದ ಸಾಲ, ಉದ್ದೇಶ, ಸಾಲಕ್ಕೆ ಬಡ್ಡಿ ಮತ್ತು ಮರುಪಾವತಿ ಮೊತ್ತವೆಷ್ಟು?	ಪಡೆದಿದ್ದಾರೆ	೮೪	೮೪	೬೩	೬೩	೭೧	೭೧
	ಇಲ್ಲಾ	೧೬	೧೬	೩೭	೩೭	೨೯	೨೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ತಮ್ಮ ಜೀವನ ಆಧಾರಕ್ಕಾಗಿ ಲೇವಾದೇವಿ/ಮಾಲೀಕರಿಂದ ಸಾಲವನ್ನ ಪಡೆದಿರುವ ವಿವರವನ್ನು ತೋರಿಸಲಾಗಿದೆ. ದೇಶವು ಗ್ರಾಮೀಣ ಪ್ರದೇಶಗಳಿಂದ ಕೂಡಿದ ರೈತರ ನಾಡಾಗಿದೆ ಅಂದರೆ, ರೈತ ತಮ್ಮ ಹಲವಾರು ಕಷ್ಟಗಳ ಮಧ್ಯ ತಮ್ಮ ಜೀವನವನ್ನ ಸೂಸುತ್ರವಾಗಿ ನಡೆಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದ್ದಾನೆ. ಅಂದರೆ, ವರ್ಷ ಪೂರ್ತಿ ಮಳೆಯಿಲ್ಲದೇ ರೈತ ಕಂಗಾಲಾಗಿ ಬೆಳೆಗಳನ್ನ ಬೆಳೆಯದೆ ತಮ್ಮ ಬೆಳೆಗಳನ್ನ ಉಳಿಸಿಕೊಳ್ಳುವುದಕ್ಕಾಗಿ ಬೇರೆಯವರ ಹತ್ತಿರ ತಮ್ಮ ಜಮೀನಿನಲ್ಲಿ ಬೆಳೆಯುವ ಬೆಳೆಗಾಗಿ, ಮೊದಲು ಮಾಡಿದ ಸಾಲವನ್ನ ತೀರಿಸಿಕೊಳ್ಳುವುದಕ್ಕಾಗಿ ಮತ್ತು ಹಬ್ಬ ಹರಿದಿನಗಳಿಗಾಗಿ ಸಾಲವನ್ನ ಪಡೆಯುವ ಉದ್ದೇಶವನ್ನಿಟ್ಟುಕೊಂಡು ಜೀವನ ಸಾಗಿಸುತ್ತಿದ್ದಾರೆ. ಅದರಲ್ಲಿ ಆಯಾಯಾ ಗ್ರಾಮವಾರು ಸಾಲವನ್ನು ನೋಡಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೮೪.೦೦ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೧೬.೦೦ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೩.೦೦ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೩೭.೦೦ ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ

ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೭೧.೦೦ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೨೯.೦೦ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಹಾಗೆಯೇ ಮುಂದುವರಿದು ೧೦,೦೦೦ ದಿಂದ ಹಿಡಿದು ೨೦,೦೦೦ ಮತ್ತು ೨೦,೦೦೦ದಿಂದ ೫೦,೦೦೦ ದವರೆಗೆ ಸಾಲವನ್ನ ಪಡೆದು ಅದಕ್ಕೆ ಲೇವಾದೇವಿಗಾರ/ಮಾಲೀಕರಿಂದ ಶೇ. ೨ರಿಂದ ಶೇ. ೫ ರವರೆಗೆ ಬಡ್ಡಿಯನ್ನ ವಿಧಿಸಿರುವುದನ್ನ ಅಧ್ಯಯನದ ಸಂದರ್ಭದಲ್ಲಿ ನೋಡಲಾಗಿದೆ. ಇದರ ಆಧಾರದ ಮೇಲೆಯೇ ತಾವು ಪಡೆದಂತಹ ಸಾಲವನ್ನ ಸಮೀಕ್ಷೆಗೆ ಒಳಪಟ್ಟ ಎಲ್ಲಾ ಸಂದರ್ಶಕರು ಸಾಲವನ್ನು ಮರುಪಾವತಿ ಮಾಡದೆ ಇರುವುದನ್ನ ಕ್ಷೇತ್ರಧ್ಯಾಯನದ ಮೂಲಕ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ಅಂಕಿ–ಅಂಶಗಳನ್ನ ಗಮನಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೂ ಸಹ ಸರಿ ಸುಮಾರು ಒಂದೇ ಹಾದಿಯಲ್ಲಿ ಸಾಲವನ್ನು ಪಡೆದಿರುವುದು ಅಲ್ಲದೇ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಸಾಲವನ್ನು ಪಡೆದಿರುವುದನ್ನ ಕಂಡುಕೊಳ್ಳಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸಾಲವನ್ನ ಪಡೆಯುದರ ಉದ್ದೇಶ ತಾವು ಮಾಡಿಕೊಂಡ ಜೀವನಕ್ಕೆ ಆಧಾರವು ಸರಿಯಾದ ರೀತಿಯಲ್ಲಿ ಸ್ಪಂದಿಸದೆ ಹೋದಾಗ ಅವರು ವಿಫಲತೆಯನ್ನ ಕಂಡುಕೊಂಡಾಗ ಮಾತ್ರ ಬೇರೆಯವರ ಹತ್ತಿರ ಸಾಲವನ್ನ ಪಡೆಯುತ್ತಾರೆ. ಅಂದರೆ, ಸಾಲವನ್ನ ಪಡೆದು ತಮ್ಮ ಉದ್ಯೋಗದಲ್ಲಿ ಬೆಳವಣಿಗೆಯನ್ನು ಕಾಣದೆಯಿದ್ದಾಗ ಸಾಲದ ಋಣ ಹಾಗೆಯೇ ಉಳಿಯುತ್ತದೆ ಅಂತಹ ಸಂದರ್ಭದಲ್ಲಿ ರೈತನಿಗೆ ಸಾಲದ ಹೊರೆಯನ್ನು ಹೊತ್ತು ಸಾಲದಬಾಧೆಯಿಂದ ಸಾವನ್ನು ಅಥವಾ ನಿಕೃಷ್ಟ ಜೀವನವನ್ನ ನಡೆಸಿಕೊಂಡು ಹೋಗುವ ಮೂಲಕ ತಮ್ಮ ಬದುಕನ್ನು ಘನತೆಯಲ್ಲಿ ನಡೆಸುವುದರ ವಿಫಲತೆಯನ್ನು ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೯. ಸ್ತ್ರೀಶಕ್ತಿ ಸಂಘದಲ್ಲಿ ತೊಡಗಿದ ಮಹಿಳಾ ಸದಸ್ಯರು

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಸ್ತ್ರೀಶಕ್ತಿ ಸಂಘದಿಂದ ಸಾಲ, ಉದ್ದೇಶ, ಸಾಲಕ್ಕೆ ಬಡ್ಡಿ ಮತ್ತು ಮರುಪಾವತಿ ಮೊತ್ತವೆಷ್ಟು?	ಪಡೆದಿದ್ದಾರೆ	೫೩	೫೩	೨೪	೨೪	೩೧	೩೧
	ಇಲ್ಲಾ	೪೭	೪೭	೭೬	೭೬	೬೯	೬೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಸಾಲವನ್ನ ಪಡೆಯುವ ಕೆಲವು ವಿಧಾನದಲ್ಲಿ ಸ್ತ್ರೀ ಶಕ್ತಿ ಸಂಘದಿಂದ ಪಡೆಯುವ ವಿವಿರವನ್ನು ತೋರಿಸಲಾಗಿದೆ. ಅಂದರೆ ದೇಶದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಹಿಂದುಳಿದ ಪ್ರದೇಶವಾಗಿದ್ದರಿಂದ ಅದರಲ್ಲಿಯೂ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಅತ್ಯಂತ ಹಿಂದುಳಿದ ತಾಲೂಕಾಗಿದೆ. ಹಾಗೆಯೇ, ಅಂತಹ ಒಂದು ಪ್ರದೇಶದಲ್ಲಿ ಪರಿಶಿಷ್ಟರ ಜೀವನವನ್ನ ನೋಡಿದಾಗ ಶೋಚನೀಯವಾಗಿರುವುದು ಕಂಡು ಬರುತ್ತದೆ. ಅವರ ಜೀವನವನ್ನ ನಡೆಸಿಕೊಂಡು ಹೋಗುವುದು ಕನಿಷ್ಟ ಮಟ್ಟದಲ್ಲಿ ಭೂಮಿಯನ್ನ ಹೊಂದಿರುವುದು ಅಲ್ಲದೇ ಕೂಲಿಯನ್ನೆ ತಮ್ಮ ಮುಖ್ಯ ಜೀವನದ ಭಾಗವಾಗಿ ನೋಡಲಾಗುತ್ತದೆ. ಅಭಿವೃದ್ಧಿಯ ಮಾನದಂಡಗಳಾದ ಶಿಕ್ಷಣ, ಆರೋಗ್ಯ ಮತ್ತು ವರಮಾನ ವೃದ್ಧಿಯನ್ನ ಕೂಲಿ ಮಾಡಿ ಮಾಡುವುದು ದೂರದ ಮಾತಾಗಿದೆ ಎಂಬ ಅಭಿಪ್ರಾಯವನ್ನ ಕಾಣಲಾಗಿದೆ. ಇಂತಹ ವಾತಾವರಣದಲ್ಲಿ ಕೂಲಿಯನ್ನೆ ನಂಬಿ ಕೂಡುವಂತಿಲ್ಲ ಎಂದು ಧೈರ್ಯದ ಮೇಲೆ ಸ್ತ್ರೀ ಸಂಘಗಳ ಮೂಲಕ ಸಾಲವನ್ನ ತಾವು ಬಿತ್ತಿದ್ದಂತಹ ಬೆಳೆಗಳಿಗೆ ಗೊಬ್ಬರ, ಕ್ರಿಮಿನಾಶಕ, ಈ ಮೊದಲು ಬೇರೆಯವರ ಹತ್ತಿರ ಸಾಲವನ್ನ ಪಡೆದವರಿಗೆ ಸಾಲವನ್ನ ತೀರಿಸಲಿಕ್ಕೆ ಇನ್ನಿತರ ಉದ್ದೇಶಗಳಿಗಾಗಿ ಸಾಲವನ್ನ ಪಡೆಯಲಾಗುತ್ತದೆ ಎಂದಿದ್ದಾರೆ. ಮುಂದುವರಿದು, ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೩.೦೦ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೪೭.೦೦ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೨೪.೦೦ ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೭೬.೦೦ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೧.೦೦ರಷ್ಟು ಕುಟುಂಬಗಳು ಬೇರೆಯವರ ಹತ್ತಿರ ಸಾಲವನ್ನ ಪಡೆಯಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೬೯.೦೦ರಷ್ಟು ಕುಟುಂಬಗಳು ನಾವು ಯಾವ ಸಾಲವನ್ನ ಪಡೆದಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಹಾಗೆಯೇ ಮುಂದುವರಿದು ೧೦,೦೦೦ ದಿಂದ ಹಿಡಿದು ೨೦,೦೦೦ ಮತ್ತು ೨೦,೦೦೦ ದಿಂದ ೫೦,೦೦೦ ದವರೆಗೆ ಸಾಲವನ್ನ ಪಡೆದು ಅದಕ್ಕೆ ಸ್ತ್ರೀಶಕ್ತಿ ಸಂಘಗಳಿಂದ ಶೇ. ೨ ರಿಂದ ಶೇ. ೫ ರವರೆಗೆ ಬಡ್ಡಿಯನ್ನ ವಿಧಿಸಿ ಪಡೆದಿರುವುದನ್ನ ಅಧ್ಯಯನದ ಸಂದರ್ಭದಲ್ಲಿ ನೋಡಲಾಗಿದೆ. ಇದರ ಆಧಾರದ ಮೇಲೆಯೇ ತಾವು ಪಡೆದಂತಹ ಸಾಲವನ್ನ ಸಮೀಕ್ಷೆಗೆ ಒಳಪಟ್ಟ ಎಲ್ಲಾ ಸಂದರ್ಶಕರು ಸಾಲವನ್ನು ಮರುಪಾವತಿ ಮಾಡದೆ ಇರುವುದನ್ನ ಕ್ಷೇತ್ರಧ್ಯಾಯನದ ಮೂಲಕ ತಿಳಿದು ಬಂದಿದೆ.

ಒಟ್ಟಾರೆಯಾಗಿ, ಮೇಲಿನ ಅಂಶವನ್ನ ಆಧಾರಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ದೇವದುರ್ಗ

ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀ ಸಂಘದಿಂದ ಸಾಲವನ್ನ ಪಡೆದಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಗ್ರಾಮೀಣ ಪ್ರದೇಶದಿಂದ ಕೂಡಿದ ಸಮಾಜದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೈತರೇ ಇದ್ದು ಅವರಲ್ಲಿರುವ ಅನಕ್ಷರತೆ, ಆಡಳಿತದ ಬಗ್ಗೆ ಅರಿವು ಇಲ್ಲದಿರುವುದು ಇನ್ನಿತರ ಅಂಶಗಳಿಂದ ಸಮಾಜದ ಮುಖ್ಯವಾಹಿನಿಗೆ ಬರುವುದು ತುಂಬಾ ವಿರಳತೆಯಿಂದ ಕೂಡಿದೆ. ಗ್ರಾಮೀಣ ಜನರ ಹತ್ತಿರ ಸಾಲವನ್ನು ಪಡೆಯುವಾಗ ಬೇರೆಯವರ ಹತ್ತಿರ ಕೇಳಿದರೂ ಅವರು ನಮ್ಮ ಆದಾಯದ ಮೂಲವನ್ನ ನೋಡಿ ಕೊಡದೆಯಿರುವ ಪ್ರಸಂಗಗಳು ಎದುರಾದವು. ಹಾಗಾಗಿ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕೂಲಿಕಾರ ಅಥವಾ ರೈತನ ಬಳಿ ಯಾವುದಾರೂ ಆದಾಯದ ಮೂಲಗಳು ಇದ್ದರೆ ಸಾಲವನ್ನು ಕೊಡುವಂತಹ ವ್ಯವಸ್ಥೆ ಎಲ್ಲಾ ಸಂದರ್ಭದಲ್ಲಿಯೂ ನಿರ್ಮಾಣಗೊಂಡಿದೆ ಎನ್ನಬಹುದಾಗಿದೆ. ಅಂದರೆ, ಅವರ ಬಳಿ ಯಾವ ಆಸ್ತಿಗಳು ಇಲ್ಲಾ ಅಂದಾಗ ಅವರಿಗೆ ಸಾಲ ದೊರೆಯುವುದು ದೂರದ ಮಾತಾಗಿದೆ. ಒಂದು ವೇಳೆ ಸಾಲ ದೊರೆಯದೆ ಹೋದಾಗ ಅವರ ಅನಿವಾರ್ಯದ ಕೆಲಸ ಕಾರ್ಯಗಳು ನಿಂತು ಅದರಿಂದ ತಮ್ಮ ಅಭಿವೃದ್ಧಿಯಿಂದ ದೂರ ಉಳಿಯುವಂತೆ ಮಾಡುತ್ತದೆ. ಹೀಗಾಗಿ ಸಾಲಕೊಡುವ ನಿಯಮಗಳು ಸರಳಿಕರಣಗೊಳಿಸಿದರೆ ಜನರು ಆರ್ಥಿಕ ಅಭಿವೃದ್ಧಿಯ ಪ್ರಧಾನಧಾರೆಗೆ ಬರಲು ಸಾಧ್ಯವಾಗುತ್ತದೆ.

ಕೊನೆ ಟಿಪ್ಪಣಿ

೧. ಮೋಹನ್‌ಕುಮಾರ, ೨೦೧೪, ಕರ್ನಾಟಕ ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಗಾಯತ್ರಿ ಪ್ರಕಾಶನ, ಬಳ್ಳಾರಿ, ಪು. ೨೩, ೮೧-೮೩

೨. ಬಿಂದೇಶ್ವರ ಪಾಠಕ್ ಮತ್ತು ಶ್ರೀವಾಸ್ತವ ಬಿ.ಎನ್., ೧೯೯೯, ಕಾನ್‌ಸ್ಟಿಟ್ಯೂಷನಲ್ ಸೇಪಗಾಡ್ಸರ್ ಫಾರ್ ವೀಕರ್ ಸೆಕ್ಸನ್ಸ್ ಆ್ಯಂಡ್ ಮೈನರಿಟಿಸ್ ಇನ್ ಇಂಡಿಯಾ, ಕಾನ್ಸಪ್ಟೆ ಪಬ್ಲಿಕೇಶನ್ ಕಂಪನಿ, ನ್ಯೂಡೆಲ್ಲಿ, ಪು. ೨೯-೪೧

೩. ಸ್ಪರ್ಧಾಜಗತ್ತು ಬಳಗ ಮಾಸಿಕ ಪತ್ರಿಕೆಯ ಭಾರತ ಸಂವಿಧಾನ ವಿಶೇಷ ಸಂಚಿಕೆ, ೨೦೧೩, ಚಂದನ ಪಬ್ಲಿಕೇಷನ್ ಮತ್ತು ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪು. ೩೧-೩೨

೪. ಶಿವರಾಂ ಎನ್.ಆರ್. ೨೦೧೦, ಭಾರತ ಸಂವಿಧಾನ, ಚಿಂತನ ಪ್ರಕಾಶನ, ಬೆಂಗಳೂರು, ಪು.೧೨೧

೫. ಚಂದ್ರ ಪೂಜಾರಿ ಎಂ., ೨೦೧೦, ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಪು. ೭೩-೭೪

೬. ನುಡಿದಂತೆ ನಡೆದಿದ್ದೇವೆ ಸಾಧನೆಯ ನಾಲ್ಕು ವರ್ಷಗಳು ಕರ್ನಾಟಕ ವಾರ್ತೆ, ನಿರ್ದೇಶಕರರು ವಾರ್ತಾ ಮತ್ತು ಪ್ರಚಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೈಪಿಡಿ ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೨೬, ೨೮-೩೦

೭. ಕರ್ನಾಟಕ ಕೈಪಿಡಿ, ೨೦೧೫, ಕರ್ನಾಟಕ ಗ್ಯಾಜೆಟಿಯರ್ ಇಲಾಖೆ, ಬೆಂಗಳೂರು, ಪು. ೧೬೬-೧೬೭

೮. ಚಂದ್ರ ಪೂಜಾರಿ ಎಂ., ೨೦೧೬, ದಲಿತ ಮಾನವ ಅಭಿವೃದ್ಧಿ, ದಲಿತ ಹಕ್ಕುಗಳ ಸಮಿತಿ ಕರ್ನಾಟಕ, ಬೆಂಗಳೂರು, ಪು. ೨

೯. ಕುಮಾರು ಕೆ.ಎಂ., ೨೦೦೮, ಕರ್ನಾಟಕ ರೈತರ ಚಳುವಳಿ, ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ. ಪು. ೮೪

ಅಧ್ಯಾಯ ಐದು

ಅಸ್ಪೃಶ್ಯತೆ ಮತ್ತು ಮೀಸಲಾತಿ ಕ್ಷೇತ್ರಗಳು

೫.೧. ಪ್ರಜಾಪ್ರಭುತ್ವ ಮತ್ತು ರಾಜಕೀಯ ಪ್ರತಿನಿಧ್ಯ

೫.೨. ಅಸ್ಪೃಶ್ಯತೆ ಭಾರತದ ಅನುಭವಗಳು

೫.೩. ಅಸ್ಪೃಶ್ಯತೆಯ ನಿವಾರಾಣೆಗೆ ಇರುವ ಕ್ರಮಗಳು

೫.೪. ಅಸ್ಪೃಶ್ಯತೆಯ ಭಾಗವಾಗಿ ಬಂದ ಮೀಸಲಾತಿ ಕ್ಷೇತ್ರಗಳು

೫.೫. ಮೀಸಲಾತಿ ಕ್ಷೇತ್ರಗಳಲ್ಲಿ ಅಸ್ಪೃಶ್ಯತೆ ಮತ್ತು ನಿವಾರಣೆ

೫.೬. ಅಧ್ಯಯನ ಕ್ಷೇತ್ರದಲ್ಲಿ ಅಸ್ಪೃಶ್ಯತೆ

ಅಧ್ಯಾಯ ಐದು

ಅಸ್ಪೃಶ್ಯತೆ ಮತ್ತು ಮೀಸಲಾತಿ ಕ್ಷೇತ್ರಗಳು

ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನದ ಶೀರ್ಷಿಕೆ ಸಂಬಂಧಿಸಿದಂತೆ ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಅಸ್ಪೃಶ್ಯತೆ, ಪ್ರಜಾಪ್ರಭುತ್ವ ಮೀಸಲಾತಿ ಕ್ಷೇತ್ರಗಳು ಪರಿಶಿಷ್ಟರ ರಾಜಕೀಯ ಸಬಲೀಕರಣ ಮತ್ತು ಪ್ರಾತಿನಿಧ್ಯವನ್ನು ಕುರಿತು ಚರ್ಚಿಸಲಾಗಿದೆ.

ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ನಿಕಟವಾದ ಸಂಬಂಧವಿದೆ. ಎಲ್ಲಿ ಪ್ರಜಾಪ್ರಭುತ್ವ ವಿರುತ್ತದಯೋ ಅಲ್ಲಿ ಎಲ್ಲರಿಗೂ ರಾಜಕೀಯ ಪಾಲ್ಗೊಳ್ಳುವಿಕೆ ಅಥವಾ ಭಾಗವಹಿಸುವಿಕೆಗೆ ಅವಕಾಶವಿರುತ್ತದೆ. ಆದರೆ ವ್ಯತ್ಯಸವೇನೆಂದರೆ ಪ್ರಜಾಪ್ರಭುತ್ವವು ಎಲ್ಲರನ್ನೂ ಕೈಬಿಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ. ಈ ಆರಿಸಿಕೊಳ್ಳುವ ಪ್ರಕ್ರಿಯೆಯನ್ನು ವಾಸ್ತವದಲ್ಲಿ ಅರ್ಹತೆ ಸಾಮರ್ಥ್ಯವೆಂದು ಗುರುತಿಸುತ್ತದೆ. ಇದನ್ನೆ ಮುಂದುವರೆದು ಪ್ರಾತಿನಿಧ್ಯ ಎಂದು ಕರೆಯುತ್ತೇವೆ. ಹಾಗಾಗಿ ಪ್ರಜಾಪ್ರಭುತ್ವವದಲ್ಲಿ ರಾಜಕೀಯ ಪ್ರಾತಿನಿಧ್ಯವು ಒಬ್ಬ ವ್ಯಕ್ತಿಯ ಅಸ್ತಿತ್ವ ಸಮುದಾಯದ ಅಸ್ತಿತ್ವ, ರಾಜ್ಯದ ಅಸ್ತಿತ್ವ, ರಾಷ್ಟ್ರದ ಅಸ್ತಿತ್ವವನ್ನು ಕಾಪಡಿಕೊಳ್ಳುವುದಕ್ಕಾಗಿ ರಾಜಕೀಯ ಪ್ರಾತಿನಿಧ್ಯ ಎಂಬ ಕಲ್ಪನೆಯನ್ನು ಇಪ್ಪತ್ತನೆ ಶತಮಾನದಲ್ಲಿ ಮುಂಚೂಣಿಗೆ ಬಂತು. ಈಗ ಇದನ್ನು ಅಧಿಕಾರದಿಂದ ದೂರ ಉಳಿದವರು, ಅಧಿಕಾರದಿಂದ ವಂಚಿತರಾದವರು, ರಾಜಕೀಯ ಶೋಷಣೆಗೆ ಒಳಪಟ್ಟವರು ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪ್ರಾತಿನಿಧ್ಯ ಅಥವಾ ರಾಜಕೀಯ ಭಾಗವಿಸುವಿಕೆಯನ್ನು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವುದು ಸೂಕ್ತವೆನಿಸುತ್ತದೆ.

ಪ್ರಜಾಪ್ರಭುತ್ವ ಎಂಬುದು ಒಂದು ಜನಪ್ರಿಯ ಸರ್ಕಾರ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಗಾಗಿ ಎಲ್ಲರು ಅದನ್ನು ಇಷ್ಟಪಡುತ್ತಾರೆ. ಆದರೆ ಇದು ಕೂಡ ಕೆಲವೊಂದು ದೋಷಗಳನ್ನು ತನ್ನಲ್ಲಿಯೇ ಹುದಗಿಸಿಕೊಂಡಿದೆ ಎಂಬುದನ್ನು ಅನೇಕ ದಾರ್ಶನಿಕರು ಅಭಿಪ್ರಾಯ ಪಟ್ಟಿದ್ದಾರೆ. ರೂಸೊ ನಂತಹ ದಾರ್ಶನಿಕರು ಪ್ರತಿಯೊಬ್ಬ ವ್ಯಕ್ತಿ ಬೆಳೆಯುತ್ತ ಬಂದಂತೆ ಸಮಾಜದ ಸಂಕೋಲೆಯಲ್ಲಿ ಸಿಲುಕುವ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಮಾತನಾಡಿದ್ದಾನೆ. ಮತ್ತೊಂದು ಕಡೆ ಕಾರ್ಲ್‌ಮಾರ್ಕ್ಸ್‌ನಂತಹ ದಾರ್ಶನಿಕರು "ಜಗತ್ತಿನ ಕಾರ್ಮಿಕರೆ ಒಂದಾಗಿ ನಿಮ್ಮ ಬಂಧನವನ್ನು

ಹೊರತುಪಡಿಸಿ ಬೇರೆ ಏನನ್ನು ಕಳೆದುಕೊಳ್ಳುವುದಿಲ್ಲ" ಎಂದು ಕರೆಕೊಟ್ಟಿದ್ದು ಮನುಷ್ಯ ಸಾವಿರಾರು ವರ್ಷಗಳಿಂದ ಆಯ್ಕೆ-ತಿರಸ್ಕಾರದ ಪರಿವೆಯಿಲ್ಲದೆ ಯಾವುದೊ ಒಂದು ಪ್ರಭುತ್ವಕ್ಕೆ ಪಟ್ಟಾಭದ್ರ ಹಿತಾಸಕ್ತಿಗೆ ಅಧೀನವಾಗಿ ಬದುಕಿರುವ ಬಗ್ಗೆ ಆಧಾರಗಳಿವೆ. ಪ್ರಜಾಪ್ರಭುತ್ವ ಎನ್ನುವುದು ಒಂದು ರಾಜಕೀಯ ವ್ಯಾಜ್ಯ. ಇದು ಮಾತ್ರ ಬದುಕುಳಿಯಬಹುದಾದ ಒಂದು ರಾಜಕೀಯ ಸತ್ವ, ಶಕ್ತಿ ರಾಜಕೀಯ, ಸಾಮಾಜಿಕ ವಿಕಾಸದಲ್ಲಿ ಸರ್ವಾಧಿಕಾರ ದೊರೆಗಳು ಟಕ್ಕಾ-ಟಕ್ಕಿಯಾದಾಗ ಗೆಲವು ಪ್ರಜಾಪ್ರಭುತ್ವದೇ ಆಗಿತ್ತು ಎನ್ನುವುದು ಈಗ ಇತಿಹಾಸ. ಗ್ರೀಕ್ ದಾರ್ಶನಿಕರ ಪ್ರಕಾರ ಪ್ರಜಾಪ್ರಭುತ್ವ ಎನ್ನುವುದು ಜನತೆಯ ಆಳ್ವಿಕೆ ಅಧಿಕಾರ ಇದನ್ನು ಫರಿದ್ ಜಕಾರಿಯ ತಮ್ಮ ಗ್ರಂಥವಾದ ದ ಫ್ಯೂಚರ್ ಆಫ್ ಫ್ರೀಡಮ್ ಎನ್ನುವುದರಲ್ಲಿ ಡೆಮಾಕ್ರೇಟೈಜೆಶನ್ ಎಂದು ಕರೆದಿದ್ದಾರೆ. ಈ ಪ್ರಕ್ರಿಯೆಯಲ್ಲಿ ರಾಜಕೀಯ ಮೀರಿದ ಒಂದು ಸತ್ಯ ಸ್ಥಾಪಿತವಾಗುತ್ತದೆ. ಜಡವಾಗಿರುವ ಸತ್ಯ ಏಣಿಶ್ರೇಣಿಗಳು ಮುರಿದು ಬಿಳುತ್ತವೆ. ಮುಚ್ಚಿದ ಬಾಗಿಲಗಳು ಥಟ್ಟನೆ ಕದ ತೆರೆದುಕೊಳ್ಳುತ್ತವೆ. ಮುಖ್ಯವಾಗಿ ಜನಸಮೂಹದ ಒತ್ತಡ ಸಾಮಾಜಿಕ ಬದಲಾವಣೆ ಸಂಗತಿಯಾಗಿ ನಿರ್ಣಾಯಕ ಪಾತ್ರವಹಿಸುವುದು ಹುಸಿ ಹೋಗಿಲ್ಲ ಎನ್ನುವುದು ಅಷ್ಟೇ ಸತ್ಯವಾದದ್ದು. ಹಾಗಾಗಿ ಪ್ರಜಾಪ್ರಭುತ್ವ ಜನಪ್ರಿಯತೆಯನ್ನುಗಳಿಸಿಕೊಂಡು ಜನಪ್ರಿಯ ಸರ್ಕಾರವಾಗಿ ಮುಂದುವರೆಯುತ್ತಿರುವುದು ಅಷ್ಟೇ ಮಹತ್ವದ್ದಾಗಿದೆ.[೧]

ಒಂದು ದೇಶದ ವೈವಿಧ್ಯಮಯ ಸಾಮಾಜಿಕ ಮತ್ತು ರಾಜಕೀಯ ಬಲಗಳಿಗನುಸಾರವಾಗಿ ವಿವಿಧ ಬಗೆಯ ಸರ್ಕಾರದ ವ್ಯವಸ್ಥೆಗಳು ರೂಪುಗೊಳ್ಳುತ್ತವೆ. ರಾಜಕೀಯ ಅಧಿಕೃತವಾಗಿ ಆರಂಭ ಗೊಂಡಾಗಿನಿಂದಲೇ ಅತ್ಯುತ್ತಮ ಸರ್ಕಾರ ರಚನೆಯ ಬಗ್ಗೆ ಹುಡುಕಾಟವು ಶುರುವಾಗುತ್ತದೆ. ಆ ಹಿನ್ನೆಲೆಯಲ್ಲೆ ಜನರ ಹಿತಾಸಕ್ತಿಯನ್ನು ರಕ್ಷಿಸಬಹುದಾದ ಪ್ರಜಾಪ್ರಭುತ್ವ ಸರಕಾರ ವ್ಯವಸ್ಥೆಯು ಅನೇಕ ದೇಶಗಳಲ್ಲಿ ಸ್ವೀಕರಿಸಲ್ಪಟ್ಟಿದೆ. ಭಾರತವು ಸ್ವತಂತ್ರ ಪಡೆದ ನಂತರ ಸಂಸದೀಯ ಸರ್ಕಾರ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾತಂತ್ರವೆನಿಸಿಕೊಂಡ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ಮತ್ತು ಪ್ರಜೆಗಳು ರಾಜಕೀಯ ಪ್ರಾತಿನಿಧ್ಯತೆಗೆ ಸಂಬಂಧಿಸಿದಂತೆ ಹಲವು ಅಭಿಪ್ರಾಯಗಳಿವೆ. ಆದರೆ ಜನ ಸಾಮಾನ್ಯರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವು ಒಂದು ಸಾಂಸ್ಥಿಕ ವ್ಯವಸ್ಥೆಯಾಗಿದ್ದು, ರಾಜಕೀಯ ಅಧಿಕಾರವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಜಾತಿ, ಮತ, ಲಿಂಗ, ಧರ್ಮ, ವರ್ಗಗಳ ತಾರತಮ್ಯವಿಲ್ಲದೆ ಪ್ರತಿಯೋರ್ವ ಅರ್ಹ ಪೌರನು ಭಾಗವಹಿಸಲು ಅವಕಾಶ ನೀಡುತ್ತದೆ. ಪ್ರಜಾಪ್ರಭುತ್ವವೆಂದರೆ ಪ್ರತಿಯೊಬ್ಬರಿಗೂ ಪಾಲು ಇರುವ ಒಂದು ಸರಕಾರ ಎಂಬುದಾಗಿ ಪ್ರೊ. ಸೀಲೆ ಹೇಳಿದ್ದಾರೆ. ಇಲ್ಲಿ ಆಡಳಿತ ಅಧಿಕಾರವು ಒಂದು ನಿರ್ದಿಷ್ಟ ವರ್ಗ ಅಥವಾ ಸಮುದಾಯಗಳ ಕೈಯಲ್ಲಿ ಅಪರಿಮಿತವಾಗಿರದೆ, ಇಡೀ ಸಮುದಾಯದ ಎಲ್ಲ ಸದಸ್ಯರ ಕೈಯಲ್ಲಿರುತ್ತದೆ. ಪ್ರಜಾತಂತ್ರದ ಕೇಂದ್ರ ಬಿಂದುವೇ ಆಯ್ಕೆಯ ಸ್ವಾತಂತ್ರ್ಯ ಮತ್ತು ಈ ಆಯ್ಕೆಯು ಯಾರು ಆಡಳಿತ ನಡೆಸಬೇಕೆಂಬುವುದನ್ನು ನಿರ್ಧರಿಸುತ್ತದೆ. ಇಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ವಿಶೇಷ ಮನ್ನಣೆ ಇದೆ ಎನ್ನುವುದು ಗಮನಾರ್ಹ.

ಪ್ರಜಾಪ್ರಭುತ್ವದಲ್ಲಿ ವೈಶಿಷ್ಟ್ಯತೆಯೆಂದರೆ ರಾಜಕೀಯ ಅಧಿಕಾರವು ಜನರು ಪಾಲುಗೊಳ್ಳುವುದರ ಮೂಲಕ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸುವ ವ್ಯವಸ್ಥೆ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಅಂತೆಯೇ ಸರಕಾರದ ನಿಯಂತ್ರಣವೂ ಜನಸಮುದಾಯದ ಅಧೀನದಲ್ಲಿರುತ್ತದೆ. ಈ ಹಿನ್ನೆಲೆಯಿಂದ ಒಂದು ಉತ್ತಮ ಸರಕಾರವು ರಚನೆಯಾಗಬೇಕಾದರೆ ಮುಖ್ಯವಾಗಿ ನಾಲ್ಕು ವಿಧಾನಗಳು ಅಗತ್ಯ.

೧. ಅಭಿಪ್ರಾಯಗಳ ಸಹ ಅಸ್ತಿತ್ವ ಮತ್ತು ರಾಜಕೀಯ ಪಕ್ಷಗಳ ಸಹಕಾರಯುತ ಬೆಂಬಲಗಳು,

೨. ಮುಕ್ತವಾಗಿ ಚರ್ಚಿಸುವ ಹಕ್ಕುಗಳು/ಅವಕಾಶಗಳು,

೩. ವಯಸ್ಕ ಮತದಾನ ಪದ್ಧತಿ

೪. ಚುನಾವಣೆಗಳು.

ಇಂತಹ ಒಂದು ರಾಜಕೀಯ ವ್ಯವಸ್ಥೆಯು ಪರಿಪೂರ್ಣತೆಯನ್ನು ಸಾಧಿಸಬೇಕಾದರೆ ಸಾಮಾಜಿಕ ವ್ಯವಸ್ಥೆಯೂ ಸಹ ಪ್ರಜಾಪ್ರಭುತ್ವ ದೃಷ್ಟಿಕೋನವನ್ನು ಹೊಂದಿರಬೇಕಾದ ಅಗತ್ಯವಿದೆ. ಅಂದರೆ, ಸಮಾಜದ ಅವಿಭಾಜ್ಯ ಅಂಗವೆನಿಸಿಕೊಂಡ ಪ್ರತೀ ವ್ಯಕ್ತಿಯೂ ಸಾರ್ವಜನಿಕ ಚರ್ಚೆಗಳಿಗೆ ತನ್ನ ಅಭಿಪ್ರಾಯಗಳ ಕೊಡುಗೆಗಳನ್ನು ನೀಡುವಂತಾಗಬೇಕು. ಜಾತಿ, ಮತ, ಲಿಂಗ, ಧರ್ಮ ಇತ್ಯಾದಿಗಳ ಬಗೆಗಿನ ವಿಭಜನೆಗಳನ್ನು ಮೀರಿ ಸಂವಿಧಾನದ ನೆಲೆಯಿಂದ ಪಡೆದ 'ಸಮಾನ ಪೌರತ್ವಕ್ಕೆ' ಮನ್ನಣೆಯನ್ನು ಪಡೆಯಬೇಕು. ಪ್ರತಿಯೋರ್ವನು ತನ್ನ ಚಟುವಟಿಕೆಗಳಿಗೆ ನೈತಿಕ ಹೊಣೆಗಾರಿಕೆಗಳನ್ನು ಇಟ್ಟುಕೊಂಡಿರಬೇಕು. ಪ್ರಜೆಗಳು ಆರಿಸಿದ ಜನಪ್ರತಿನಿಧಿಗಳು ಸರ್ಕಾರದಲ್ಲಿ ಕಾರ್ಯ ನಿರ್ವಹಿಸುವಾಗ ನೈತಿಕ ಹೊಣೆಗಾರಿಕೆಯು ಅನಿವಾರ್ಯವಾಗುವ ಅಂಶ ಎನ್ನುವುದನ್ನು ಗಮನಿಸಬೇಕು.

ರಾಜಕೀಯ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಗಳೆರಡನ್ನೂ ಒಂದು ದೇಶದೊಳಗೆ ಸಾಧಿಸಬೇಕಾದರೆ ಜನ ಸಮುದಾಯಗಳ ಸಂಬಂಧಗಳೂ ಸಹ ಮುಖ್ಯ. ವ್ಯಕ್ತಿತ್ವದ ಶ್ರೀಮಂತಿಕೆಯನ್ನು ಬೆಳೆಸಬೇಕಾದರೆ ಸಂಘಟಿತ ಜೀವನ, ವಿವಿಧ ಗುಂಪು, ವರ್ಗಗಳ ನಡುವೆ ಸಹಜವಾಗಿ ಸೆಳೆಯಲ್ಪಡುವ ಸೌಹಾರ್ದತೆಯ ಅಗತ್ಯವೂ ಇದೆ. ಭಾರತವು ಒಂದೇ ಸಮುದಾಯದ ರಾಷ್ಟ್ರವಲ್ಲ. ಇಲ್ಲಿ ಸಾಂಸ್ಕೃಿಕ ಬಹುತ್ವವಿದೆ, ಕಾರ್ಯವೈಖರಿಗಳಲ್ಲಿ ವೈವಿಧ್ಯತೆ ಇದೆ. 'ಅಲ್ಪಸಂಖ್ಯಾತ', 'ಬಹುಸಂಖ್ಯಾತ' ಇತ್ಯಾದಿ ನಿರ್ದಿಷ್ಟವಾಗಿ ಗುರುತಿಸಲ್ಪಡುವ ಗುಂಪುಗಳಿವೆ. ಇವುಗಳಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ರಾಜಕೀಯ ಪ್ರಕ್ರಿಯೆಗಳಲ್ಲಿ ಸಮಾನವಾಗಿ ಪಾಲ್ಗೊಳ್ಳುವ ಅವಕಾಶವಿರುವುದರಿಂದಲೇ ಪ್ರಜಾಪ್ರಭುತ್ವವು ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಜನರ ಪಾಲುಗೊಳ್ಳುವಿಕೆಗೆ ವಿಶೇಷ ಮಹತ್ವವಿದೆ. ಇಲ್ಲಿ ಪ್ರಜೆಗಳೇ ನಿಜವಾದ ಪ್ರಭುಗಳು. ಇಲ್ಲಿ ಪ್ರಜೆಗಳ ಸಹಮತ ಮತ್ತು ಬೆಂಬಲವಿಲ್ಲದೆ ತೆಗೆದುಕೊಳ್ಳಲಾದ ಯಾವುದೇ ನಿರ್ಧಾರಗಳು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳ್ಳಲಾರವು. ಆದ್ದರಿಂದ ಆಯ್ಕೆಗೊಂಡಂತಹ ಸರಕಾರಗಳು ರೂಪಿಸುವ ಪ್ರತಿಯೊಂದು

ನಿರ್ಣಯಗಳು ಜನರ ಆಸೆ, ಆಕಾಂಕ್ಷೆ, ಆಶೋತ್ತರಗಳಿಗೆ ಸ್ಪಂದಿಸಬೇಕು. ಇಲ್ಲಿ ಜನಪ್ರತಿನಿಧಿ ಜನರ ಧ್ವನಿಯಾಗಿ ಕೆಲಸ ಮಾಡಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು. ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಜನಮನ್ನಣೆ ಎಷ್ಟೊ ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯತೆ ಈ ರೀತಿ ರೂಪಿಸಲ್ಪಟ್ಟ ನಿರ್ಧಾರಗಳನ್ನು ಪರಿಣಾಮವಾಗಿ ಅನುಷ್ಠಾನಗೊಳಿಸುವಂತಹ ಸಂದರ್ಭಗಳಲ್ಲೂ ಸಹ ಜನರ ಪಾಲುಗೊಳ್ಳುವಿಕೆ ಮತ್ತು ಬೆಂಬಲ ಅಗತ್ಯ. ಈ ಕಾರಣದಿಂದಲೆ ಪ್ರಜಾಪ್ರಭುತ್ವವೆನ್ನುವುದು ಇತರ ಸರ್ಕಾರ ವ್ಯವಸ್ಥೆಗಳಾದ ನಿರಂಕುಶ ಆಳ್ವಿಕೆ, ಮಿಲಿಟರಿ ಆಡಳಿತ ಇತ್ಯಾದಿಗಳಿಂದ ವಿಭಿನ್ನವಾಗಿದ್ದು ಜನಪ್ರಿಯ ಸರ್ಕಾರವಾಗಿ ವಿಶ್ವದ ಅನೇಕ ದೇಶಗಳಲ್ಲಿ ವ್ಯವಸ್ಥಿತಗೊಂಡಿದೆ. ಸ್ವಾತಂತ್ರೋತ್ತರ ಭಾರತಕ್ಕೆ ಸೂಕ್ತ ರಾಜಕೀಯ ವ್ಯವಸ್ಥೆಯನ್ನು ನಿರ್ಧರಿಸುವ ಸಂದರ್ಭದಲ್ಲಿ ಸಂವಿಧಾನದ ನಿರ್ಮಾಪಕರು ಪ್ರಜಾಪ್ರಭುತ್ವವನ್ನು ಆರಿಸಿಕೊಂಡು ಜನರ ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯತೆಗೆ ವಿಶೇಷ ಮನ್ನಣೆ ನೀಡಿದ್ದಾರೆ.

ರಾಜಕೀಯ ಭಾಗವಹಿಸುವಿಕೆಯ ವಿವಿಧ ದೃಷ್ಟಿಕೋನಗಳು

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಭಾಗವಹಿಸುವಿಕೆಯೆಂಬುವುದು ರಾಜ್ಯದ ಪ್ರತಿಯೊಬ್ಬ ಸದಸ್ಯನಾದ ಪೌರ/ನಾಗರಿಕನ ಹಕ್ಕು ಮತ್ತು ಕರ್ತವ್ಯ ಎರಡೂ ಹೌದು. ಪ್ರತಿಯೊಬ್ಬ ಪೌರನು 'ಆಳುವವ' ಎಂಬ ಅರ್ಥದಲ್ಲಿ ರಾಜ್ಯದ ಪ್ರತಿಯೊಂದು ಆಗುಹೋಗುಗಳಲ್ಲಿ ಭಾಗಿಯಾಗುವ ಅವಕಾಶ/ಹಕ್ಕನ್ನು ಹೊಂದಿರುತ್ತಾನೆ. ಪ್ರಜೆಗಳ ಸಹಮತ ಅಥವಾ ಬೆಂಬಲವಿಲ್ಲದೆ ಪ್ರಾತಿನಿಧಿಕ ಸರಕಾರಗಳು ಯಾವುದೇ ನಿರ್ಧಾರ, ನೀತಿ ಅಥವಾ ಧೋರಣೆಗಳನ್ನು ರೂಪಿಸಲು ಸಾಧ್ಯವಿಲ್ಲ. ಒಂದು ವೇಳೆ ಈ ರೀತಿಯ ದುಸ್ಸಾಹಕ್ಕೆ ಅವುಗಳು ಇಳಿದರೆ ಜನ ಬೆಂಬಲ ಮತ್ತು ಅಧಿಕಾರಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ಜನರ ಸಕ್ರಿಯ ಪಾಲುಗೊಳ್ಳುವಿಕೆಯು ಪ್ರಜಾತಂತ್ರ ವ್ಯವಸ್ಥೆಯ ಯಶಸ್ವೀ ಆಚರಣೆಗೆ ಅನಿವಾರ್ಯವೆಂಬುವದರಲ್ಲಿ ಯಾವುದೇ ಅನುಮಾನವಿಲ್ಲ. ರಾಜಕೀಯ ಪ್ರಕ್ರಿಯೆಗಳಲ್ಲಿ ಪ್ರಜೆಗಳ ಭಾಗವಹಿಸುವಿಕೆಯಿಂದಾಗಿ ರಾಜ್ಯ ಪ್ರತಿಯೊಂದು ಆಗುಹೊಗುಗಳಲ್ಲಿ ಪ್ರಜೆಗಳ ಧ್ವನಿಗೆ ಪ್ರಾಧಾನ್ಯತೆ ಸಿಗುವುದು ಮಾತ್ರವಲ್ಲದೆ, ಆಡಳಿತ ಯಾವ ದಿಸೆಯಲ್ಲಿ ಪಾಲ್ಗೊಳುವಿಕೆಯಿಂದಾಗಿ ಸರ್ಕಾರಕ್ಕೆ ಅಧಿಕಾರಕ್ಕೆ ಹೆಚ್ಚಿನ ಒಂದು ಬದ್ಧತೆ ಮತ್ತು ಜನಾನುಮತಿ ಲಭ್ಯವಾಗುತ್ತದೆ. ಇದರಿಂದಾಗಿ ಪ್ರಜಾಪ್ರಭುತ್ವದ ಆಚರಣೆ ಮತ್ತಷ್ಟೂ ಅರ್ಥಪೂರ್ಣವಾಗುತ್ತದೆ.

ಆಧುನಿಕ ಪ್ರಜಾಪ್ರಭುತ್ವಗಳೆಲ್ಲವೂ 'ಪ್ರಾತಿನಿಧಿಕ ಅಥವಾ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಗಳು. ಇಲ್ಲಿ ಮತದಾನರೆಂದರೆ ದೇಶದ ಸಮಸ್ತ ಪೌರರು ಆಗಿರುತ್ತಾರೆ. ಪರಮಾಧಿಕಾರದ ಸ್ಥಾನವೇ ಇಲ್ಲಿದೆ. ಒಂದು ಶಾಸನ ಸಭೆಗೆ ಚುನಾಯಿಸಲ್ಪಟ್ಟ ಅಭ್ಯರ್ಥಿಯು ಜನರ ಆಶೋತ್ತರಗಳಿಗೆ ಮತ್ತು ರಾಜ್ಯವು ಸ್ಪಂದಿಸಬಹುದಾದ ರೀತಿ–ನೀತಿಗಳಿಗೆ ಅಧಿಕೃತ ರೂಪ ನೀಡುವ ನಾಯಕನ ಸ್ಥಾನವನ್ನು ಪಡೆಯುತ್ತಾನೆ. ರಾಜಕೀಯ ಪಕ್ಷಗಳು, ಜನರು ಮತ್ತು ಸರ್ಕಾರದ ನಡುವಣ ಸಂಪರ್ಕ ಸೇತುವಾಗಿ ಕೆಲಸ ಮಾಡುತ್ತದೆ.

ಪ್ರಜೆಗಳು ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಏಕರೂಪವಾಗಿಲ್ಲ ಈ ದೇಶದಲ್ಲಿ ರಾಜಕೀಯ ವ್ಯವಸ್ಥೆಯು ವಿಕೇಂದ್ರೀಕೃತಗೊಂಡಿದೆ. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಲು ಅವಕಾಶ ಮಾಡಿಕೊಡುವುದಲ್ಲದೆ ಪ್ರಜಾಪ್ರಭುತ್ವದ ಬೇರುಗಳು ವ್ಯಾಪಕವಾಗಿ ಗಟ್ಟಿಗೊಳ್ಳಲು ಸ್ಥಳೀಯ ಸ್ವ-ಸರ್ಕಾರ ವ್ಯವಸ್ಥೆಗಳು ಅನುಕೂಲಕಾರಿ ವಾತಾವರಣವನ್ನು ಸೃಷ್ಟಿಸಿವೆ.

ರಾಜಕೀಯ ಭಾಗವಹಿಸುವಿಕೆ ಎಂಬ ವಿಚಾರವು ರಾಜ್ಯಶಾಸ್ತ್ರದ ವಿದ್ವಾಂಸರುಗಳಿಗೆ ಹೊಸತೇನಲ್ಲ. ರಾಜಕೀಯ ಚಿಂತಕರುಗಳು ಜನರು ಹೇಗೆ ಮತ್ತು ಯಾವ ಕಾರಣಕ್ಕಾಗಿ ರಾಜಕೀಯದಲ್ಲಿ ಪಾಲುಗೊಳ್ಳುತ್ತಾರೆ ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನಿರಂತರವಾಗಿ ಶೋಧಿಸುತ್ತಿದ್ದರು. ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಹಲವು ಚಿಂತಕರ ಅಭಿಪ್ರಾಯಗಳು ಅಭಿವ್ಯಕ್ತಿಗೊಂಡಿವೆ.

ಆರಂಭದಲ್ಲಿ 'ಪೊಲಿಟಿಕಲ್ ಪಾರ್ಟಿಸಿಪೇಶನ್' ಅಥವಾ ರಾಜಕೀಯ ಭಾಗವಹಿಸುವಿಕೆ ಎಂಬ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕು. ಇಲ್ಲಿ ಎರಡು ಪದಗಳಿವೆ. ಪ್ಯಾರಿ ಎಂಬ ವಿದ್ವಾಂಸನ ಪ್ರಕಾರ 'ಪಾರ್ಟಿಸಿಪೇಶನ್' ಅಥವಾ ಭಾಗವಹಿಸುವಿಕೆ ಎಂಬ ಪದದ ಅರ್ಥವೇನೆಂದರೆ, ಅದೊಂದು ಪಾಲುಗೊಳ್ಳುವ ಪ್ರಕ್ರಿಯೆ ಅಥವಾ ಇತರರ ಜತೆಗೆ ಹಂಚಿಕೊಂಡು ಮಾಡುವ ಕಾರ್ಯ ಎಂಬುದಾಗಿ ತಿಳಿಸಿದ್ದಾನೆ. ಭಾಗವಹಿಸುವಿಕೆ ಎಂಬುದು ಒಂದು ಸಾಮಾನ್ಯ ಪದವಾಗಿದೆ. ಆದರೆ 'ರಾಜಕೀಯ' ಎಂಬ ಪದವನ್ನು 'ಭಾಗವಹಿಸುವಿಕೆ' ಪದದ ಮೊದಲು ಸೇರಿಸಿದಾಗ ತಕ್ಕಮಟ್ಟಿನ ಗೊಂದಲವೇರ್ಪಡುತ್ತದೆ. ಪ್ಯಾರಿಯ ಪ್ರಕಾರ, ರಾಜಕೀಯ ಮತ್ತು ಭಾಗವಹಿಸುವಿಕೆ ಎಂಬ ಎರಡು ಪದಗಳನ್ನು ಜತೆ ಸೇರಿಸಿದಾಗ, ಯಾವುದಾದರೂ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಎಂಬ ಸ್ಪಷ್ಟ ಅರ್ಥ ಅದಕ್ಕೆ ಬರುತ್ತದೆ. ಪ್ಯಾರಿಯ ಮಾತುಗಳಲ್ಲೆ ಹೇಳುವುದಾದರೆ, "ಯಾವಾತನಿಗೆ ಸರಕಾರದ ನೀತಿ ನಿರೂಪಣೆಯನ್ನು ಪ್ರಭಾವಿಸುವ ತಾರ್ಕಿಕ ನಿರೀಕ್ಷೆ ಅಥವಾ ಕೊನೆಯ ಪಕ್ಷ ತನ್ನ ಧ್ವನಿ ಈ ನೀತಿ ನಿರೂಪಣೆಯ ಪ್ರಕ್ರಿಯೆಯಲ್ಲಿ ಕೇಳಿಸುವಂತೆ ಆಗಿಸುತ್ತಾನೋ ಅವನೇ ರಾಜಕೀಯ ಸಹಭಾಗಿ ಎನಿಸುತ್ತಾನೆ. ಈ ರಾಜಕೀಯ ಸಹಭಾಗಿಗಳು ಮತದಾನದಂತಹ ಸಾಧಾರಣ ರಾಜಕೀಯ ಕಾರ್ಯದಿಂದ ಆರಂಭಿಸಿ ಸರ್ಕಾರದಲ್ಲಿ ಸಂಪುಟ ದರ್ಜೆಯ ಸಚಿವ ಸ್ಥಾನವನ್ನು ಅಲಂಕರಿಸುವವರೆಗಿನ ತನಕದ ಕಾರ್ಯಗಳಲ್ಲಿ ಭಾಗವಹಿಸಬಹುದಾಗಿದೆ".

ರಾಜ್ಯಶಾಸ್ತ್ರದ ಪಿತಾಮಹನಾದ ಅರಿಸ್ಟಾಟಲನು ತನ್ನ ಮೇರು ಕೃತಿಯಾದ 'ಪಾಲಿಟಿಕ್ಸ್'ನಲ್ಲಿ ಪಟ್ಟಣ ರಾಜ್ಯಗಳನ್ನು ಸ್ವಾವಲಂಬಿಯನ್ನಾಗಿ ಮಾಡುವ ಚರ್ಚೆಗಳು, ತೀರ್ಮಾನಗಳಲ್ಲಿ ಯಾರು ಭಾಗಿಗಳಾಗುತ್ತಾರೋ ಅವರಿಗೆ ಪೌರನೆಂಬುದಾಗಿ ಪರಿಗಣಿಸಿದ್ದಾನೆ. ಅಧುನಿಕ ರಾಜ್ಯ ಶಾಸ್ತ್ರದ ಸಾಹಿತ್ಯ ಹಾಗೂ ಬರವಣಿಗೆಯಲ್ಲಿ ಸಿಡ್ನಿ ವರ್ಬಾ, ಶ್ಲೋಜ್‌ಮಾನ್, ಬ್ರಾಡಿ ಮತ್ತು ನೀ ಮೊದಲಾದ ವಿದ್ವಾಂಸರುಗಳು ರಾಜಕೀಯ ಭಾಗವಹಿಸುವಿಕೆಗಳನ್ನು ಪೌರರ ಬೇಡಿಕೆ ಮತ್ತು ಅಗತ್ಯಗಳನ್ನು ನೀತಿ ನಿರೂಪಕರಿಗೆ ಸಂವಹಿಸುವ ಮತು ಅವರ ಅವಶ್ಯತೆಗಳನ್ನು ಪೂರೈಸುವಂತೆ ಒತ್ತಡವನ್ನು ಬೀರುವ ತಂತ್ರ ಅಥವಾ ಸಾಧನವೆಂಬುದಾಗಿ ಪರಿಗಣಿಸಿದ್ದಾರೆ.

ರಾಜಕೀಯ ಭಾಗವಹಿಸುವಿಕೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಅಮೇರಿಕಾದ ಪಂಡಿತನಾದ ಲೆಸ್ಟರ್ ಮಿಲ್ ಬ್ರಾತ್ ಪ್ರಕಾರ "ಒಬ್ಬ ರಾಜಕೀಯ ವ್ಯಕ್ತಿಯ ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಪ್ರಭಾವ ಬೀರಬಹುದಾದ ಅತ್ಯಂತ ಪ್ರಮುಖ ಅಂಶವೆಂದರೆ ಆತನ ಶಿಕ್ಷಣ ಮಟ್ಟವಾಗಿದೆ". ಹೆಚ್ಚಿಗೆ ಶಿಕ್ಷಿತರಲ್ಲಿ ದೇಶದ ರಾಜಕೀಯ ಸಂಗತಿಗಳ ಕುರಿತು ಆಳವಾದ ಪರಿ ಜ್ಞಾನವಿರುವುದು ಮಾತ್ರವಲ್ಲದೆ, ರಾಜಕೀಯ ಪ್ರಕ್ರಿಯೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಬೇಕಾದ ಆತ್ಮವಿಶ್ವಾಸವು ತನ್ನಲ್ಲಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಿಲ್ ಬ್ರಾತ್‌ನ ಪ್ರಕಾರ "ರಾಜಕೀಯ ಭಾಗವಹಿಸುವಿಕೆಯಲ್ಲಿ ಅಡಕವಾಗಿರುವ ಚಟುವಟಿಕೆಗಳನ್ನು ಮುಖ್ಯವಾಗಿ ಮೂರು ಗುಂಪುಗಳಾನ್ನಾಗಿ ವಿಂಗಡಿಸಬಹುದಾಗಿದೆ. ಮೊದಲನೆಯದಾಗಿ, ರಾಜಕೀಯ ಪಕ್ಷಗಳ ಮಾಮೂಲಿ ಕಾರ್ಯ ಚಟುವಟಿಕೆಗಳಾದ ರಾಜಕೀಯ ಹುದ್ದೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಭಾಗವಹಿಸುವುದು, ಶಾಸಕಾಂಗ ಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದು, ಪಕ್ಷಕ್ಕಾಗಿ ನಿಧಿ ಸಂಗ್ರಹದಲ್ಲಿ ತೊಡಗುವುದು, ಪಕ್ಷದ ಸದಸ್ಯತ್ವ ಹೆಚ್ಚಿಸುವುದಕ್ಕಾಗಿ ಆಂದೋಲನಗಳಲ್ಲಿ ತೊಡಗುವುದು, ಎಲ್ಲೆಲೊ ಪಕ್ಷದ ಸಭೆಗಳನ್ನು ಸಂಘಟಿಸಿ ಸಾರ್ವಜನಿಕ ಅಭಿಪ್ರಾಯ ಪಕ್ಷಕ್ಕೆ ಹಿತಕಾರವಾಗಿ ಮೂಡಿಬರುವಂತೆ ಮಾಡುವುದು, ಇತ್ಯಾದಿಗಳಿಗೆ ಗ್ಲಾಡಿಟೋರಿಯಲ್(ಮಾಮೂಲಿ) ಕಾರ್ಯಾಚಟುವಟಿಕೆ ಗಳೆಂದು ಕರೆದಿದ್ದಾನೆ. ಅವನ ಪ್ರಕಾರ ಸ್ಥಿತಿಯಂತರಗೊಳ್ಳುತ್ತಿರುವ ರಾಜಕೀಯ ಭಾಗವಹಿಸುವಿಕೆಯಲ್ಲಿ ಒಳಗೊಂಡಿರುವ ಪಕ್ಷಗಳ ಹಿತೈಷಿಗಳ ಮತ್ತು ಬೆಂಬಲಿಗರ ರಾಜಕೀಯ ಚಟುವಟಿಕೆಗಳಾದ ನೇತಾರುಗಳ ಭಾಷಣ ಕಾರ್ಯಕ್ರಮಗಳಿಗೆ ಹಾಜರಾಗುವುದು, ಉದಾರಾವಾಗಿ ಪಕ್ಷಕ್ಕೆ ದೇಣಿಗೆ ನೀಡುವುದು, ಪಕ್ಷದ ನಾಯಕರೊಂದಿಗೆ ಸಂಪರ್ಕವಿರಿಸಿಕೊಳ್ಳುವುದು, ಇತ್ಯಾದಿಗಳು. ಮೂರನೆಯ ರೂಪದ ಚಟುವಟಿಕೆಗಳಿಗೆ ಆತ ಪ್ರೇಕ್ಷಕ ರೂಪೀ ಚಟುವಟಿಕೆಗಳೆನ್ನುತ್ತಾನೆ. ಅವುಗಳಲ್ಲಿ ಮತದಾನ ಮಾಡುವುದು, ಇನ್ನೊಬ್ಬರ ಮತದಾನದ ಮೇಲೆ ಪ್ರಭಾವ ಬೀರುವುದು, ರಾಜಕೀಯ ಪ್ರಚೋದನೆಗಳಿಂದ ಪ್ರಭಾವಿತಗೊಳ್ಳುವುದು, ರಾಜಕೀಯ ಪಕ್ಷದ ಲಾಂಛನಗಳನ್ನು ಧರಿಸುವುದು, ಪಕ್ಷದ ಪ್ರಕಟಣಾ ಪತ್ರಗಳನ್ನು ಹಂಚುವುದು, ಇತ್ಯಾದಿಗಳು ಮುಖ್ಯವಾದವುಗಳು

ಮಿಲ್ ಬ್ರಾತ್ ಪ್ರಕಾರ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ೩ರಷ್ಟು ಪಾಲಿನ ಜನ ಮೇಲೆ ಉಲ್ಲೇಖಿಸಿದ ಮೊದಲನೆಯ ವರ್ಗದ ರಾಜಕೀಯ ಭಾಗವಹಿಸುವಿಕೆಯ ಚಟುವಟಿಕೆಗಳಲ್ಲೂ, ಶೇಕಡಾ ೭ರಿಂದ ೯ರಷ್ಟು ಜನ ಎರಡನೆಯ ವರ್ಗದ ರಾಜಕೀಯ ಭಾಗವಹಿಸುವಿಕೆಯ ಚಟುವಟಿಕೆಗಳಲ್ಲೂ ತೊಡಗಿರುತ್ತಾರೆ. ಒಬ್ಬ ವ್ಯಕ್ತಿ ಕೇವಲ ಒಂದೇ ರೀತಿಯ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕೆಂಬ ಯಾವ ನಿರ್ಬಂಧವೂ ಇರೂವುದಿಲ್ಲ. ಬದಲಾಗಿ ಏಕಕಾಲದಲ್ಲಿ ಎಲ್ಲ ರೀತಿಯ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ರಾಜಕೀಯ ಭಾಗವಹಿಸುವಿಕೆ ಪ್ರಕ್ರಿಯೆಯು ಬದಲಾಗುತ್ತಿರುತ್ತದೆ. ಅವನ ಪ್ರಕಾರ ಅಮೇರಿಕಾದ ಒಟ್ಟು ಜನಸಂಖ್ಯೆಯಲ್ಲಿ

ಸುಮಾರು ೧/೩ ಪಾಲಿನಷ್ಟು ಜನರಿಗೆ ರಾಜಕೀಯ ಚಟುವಟಿಕೆಗಳಲ್ಲಿ ಯಾವುದೆ ಆಸಕ್ತಿ ಇಲ್ಲ. ಮಿಲ್ಬ್ರಾತ್ನ ಈ ವಿಶ್ಲೇಷಣೆಯು ರಾಜಕೀಯ ಭಾಗವಹಿಸುವಿಕೆಯ ಸ್ವರೂಪದ ಕುರಿತು ಬೆಳಕು ಚೆಲ್ಲುತ್ತದೆ.

ಅಲ್ಪಸಂಖ್ಯಾತರಲ್ಲಿ 'ಎರ್ಥನಿಸಿಟಿ' ಅಥವಾ 'ಜನಾಂಗೀಯ ಭಾವ'ವೆನ್ನುವುದು ರಾಜಕೀಯ ಭಾಗವಹಿಸುವಿಕೆಯಲ್ಲಿ ಪ್ರಭಾವ ಬೀರುತ್ತದೆ ಎನ್ನುವುದು ಟೆರ್ಚೆಕ್ ರೋನಾಲ್ಡ್‌ರವರ ಅಭಿಪ್ರಾಯವಾಗಿರುತ್ತದೆ. ತಮ್ಮ ಸಮುದಾಯದ ವ್ಯಕ್ತಿಯೊಬ್ಬರು ರಾಜಕೀಯ ಪ್ರಾತಿನಿಧ್ಯತೆಗೆ ತೊಡಗಿಸಿಕೊಳ್ಳುತ್ತಾರೆಂದರೆ ಒಟ್ಟು ಆ ಸಮುದಾಯದ ರಾಜಕೀಯ ಮತದಾನದ ಪ್ರಕ್ರಿಯೆಗಳು ಹೆಚ್ಚುತ್ತವೆ. ಉತ್ತಮ ಫಲಿತಾಂಶಗಳು ದಲಿತರಾದವರಲ್ಲಿ ಒಬ್ಬರ ಪ್ರಾತಿನಿಧ್ಯತೆ ತರಬಹುದು ಎಂಬ ಕಲ್ಪನೆಗಳು ಜನರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ, ಜೊತೆಗೆ ತಮ್ಮ ಸಮುದಾಯದಲ್ಲಿ ಚುನಾವಣಾ ಕಣಕ್ಕೆ ಸಿದ್ಧರಾಗದೆ ಇದ್ದಲ್ಲಿ ಅಥವಾ ನಾಯಕತ್ವವಿಲ್ಲವೆಂದಾದರೆ ರಾಜಕೀಯ ವ್ಯವಸ್ಥೆಗಳ ಲಾಭ ಪಡೆಯಲಾಗುವುದಿಲ್ಲವೆಂಬ ಆಲೋಚನೆಗಳು ಸಹ ಸಂಭಾವ್ಯ ಸಹಭಾಗಿಗಳಲ್ಲಿ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಿಸಲು ಕಾರಣವಾಗುತ್ತದೆ. ಒಟ್ಟು ರಾಜಕೀಯ ವ್ಯವಸ್ಥೆಯಿಂದ ಕೇವಲ ಮತ ಚಲಾಯಿಸುವುದರಿಂದ ಹೆಚ್ಚಿನ ಬದಲಾವಣೆ ತರಲು ಸಾಧ್ಯವಿಲ್ಲವೆಂಬ ನಂಬಿಕೆಯು ಇತರ ಸಮುದಾಯದ ಜನರಲ್ಲಿ ಇರುವಂತೆಯೆ ದಲಿತರಲ್ಲಿಯೂ ಇದೆ ಎನ್ನುವ ವಿಷಯವನ್ನು ಗಮನಿಸಬೇಕು.

ಪ್ರಜಾಪ್ರಭುತ್ವದಲ್ಲಿ ಜನರ ಭಾಗವಹಿಸುವಿಕೆ ಎನ್ನುವುದು ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಇದಕ್ಕೆ ಪುರುಷ-ಮಹಿಳೆ, ಶ್ರೀಮಂತ- ಬಡವ, ಬಹುಸಂಖ್ಯಾತ-ಅಲ್ಪಸಂಖ್ಯಾತ ಇತ್ಯಾದಿ ಬೇಧಗಳಿಲ್ಲ. ದೇಶದ ಸಂವಿಧಾನಿಕ ನಿಯಮಗಳನ್ನು ವಾಸ್ತವಿಕವಾಗಿ ಕಾರ್ಯಗತ ಗೊಳಿಸುವ ನಿಟ್ಟಿನಲ್ಲಿ ಎಲ್ಲ ಸಮುದಾಯಗಳ ಪ್ರಾತಿನಿಧ್ಯತೆಯು ಅಗತ್ಯ. ನಾಯಕತ್ವದ ಆಯ್ಕೆ ಪ್ರಜಾಪ್ರಭುತ್ವದ ಜೀವನಾಡಿಯಾಗಿ ಕೆಲಸ ಮಾಡುತ್ತದೆ ಸಾರ್ವಜನಿಕವಾಗಿ ತೊಡಗಿಸಿಕೊಳ್ಳುವುದು ಮನುಷ್ಯನ ಮೂಲ ಸ್ವಭಾವವೆಂದು ಅರಿಸ್ಟಾಟಲ್ ಅಭಿವ್ಯಕ್ತಿಸಿದ್ದು ಈ ಹಿನ್ನೆಲೆಗಳಿಂದ ಪುಷ್ಟೀಕರಣವನ್ನು ಪಡೆಯುತ್ತದೆಯಾದರೂ ಒಂದು ದೇಶದೊಳಗೆ ಬಹುಸಂಖ್ಯಾತರ ಪ್ರಭಾವ, ಪಾಲ್ಗೋಳ್ಳುವಿಕೆ, ನಿಯಂತ್ರಣ ಮುಂತಾದವುಗಳ ನಡುವೆ ತಳಸಮುದಾಯದವರು ಎನಿಸಿಕೊಂಡ ಜನರು ಸಕ್ರಿಯವಗಿ ಪಾಲ್ಗೊಳ್ಳಲು ಎಡರು ತೊಡರುಗಳಿವೆಯೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ.[೨]

ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದಲ್ಲಿ ಹೆಚ್ಚಿನ ನಂಬಿಕೆ ಇರಿಸಿಕೊಂಡಿದ್ದರು. ಈ ದೃಷ್ಟಿಯಿಂದ ಪ್ರಜಾಪ್ರಭುತ್ವ ಮಾದರಿಯ ಪಾರ್ಲಿಮೆಂಟರಿ ಸರ್ಕಾರದ ಸಮರ್ಥಕರಾಗಿದ್ದರು. ಪ್ರಪಂಚದಲ್ಲಿದ್ದ ಪ್ರಜಾಪ್ರಭುತ್ವದ ಬಗೆಗೆನ ವಾದಗಳನ್ನು ಅವರು ಒಪ್ಪಿರಲಿಲ್ಲ. ವಾಲ್ಟೆರ್ ಬ್ಯಾಜಟನ್ 'ಚರ್ಚೆಯ ಮೂಲಕ ವಾದ ಸರಕಾರ'. ಮತ್ತು ಅಬ್ರಹಾಂ ಲಿಂಕನ್ ಜನತೆಯಿಂದ ಜನತೆಗಾಗಿ ಜನತೆಯ' ಸರಕಾರ ಎಂಬ ವ್ಯಾಖ್ಯೆಗಳನ್ನು ಅವರು ಒಪ್ಪುವುದಿಲ್ಲ. ಅಷ್ಟೇ ಅಲ್ಲ ಜಾರ್ಜ್ ಬರ್ನಾಡ್‌ಷಾ ಹೇಳುವ ಭೇದ ಭಾವವಿಲ್ಲದೆ ಪ್ರತಿಯೊಬ್ಬನ ಹಿತಕ್ಕನುಗುಣವಾದ ಸಾಮಾಜಿಕ ವ್ಯವಸ್ಥೆಯೆ ಪ್ರಜಾಪ್ರಭುತ್ವ'

ಎಂಬ ವ್ಯಾಖ್ಯೆಯನ್ನು ಅವರು ಒಪ್ಪಲಿಲ್ಲ. According to Dr. Ambedkar- Democracy means-"A from and method of Government where by revolutionary changes in the economic and social life of the people are brought about without bloodshed." ಅವರ ಪ್ರಕಾರ ಪ್ರಜಾಸತ್ತೆಯು ಜನತೆಯ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿ ಬದಲಾವಣೆಗಳನ್ನು ರಕ್ತಪಾತವಿಲ್ಲದೆ ತರುವ ಸರಕಾರದ ರೂಪ ಮತ್ತು ವಿಧಾನವಾಗಿದೆ.

ಅಂಬೇಡ್ಕರ್ ಅವರ ಪ್ರಕಾರ ಪ್ರಜಾಸತ್ತೆ ಸಫಲವಾಗಲು ಸಮಾನತೆ ಅತ್ಯವಶ್ಯವಾಗಿದೆ. ಪ್ರಜಾಸತ್ತೆ ಸಫಲವಾಗಬೇಕದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ನೆಲೆಗೊಳಿಸುವುದು ಅಷ್ಟೇ ಮುಖ್ಯವಾದುದೆಂದು ಅವರು ಪ್ರತಿಪಾದಿಸುತ್ತಾರೆ. ಪ್ರಜಾಸತ್ತಾತ್ಮಕ ಮೌಲ್ಯಗಳು ಜನತೆಯ ಆಲೋಚನೆ ಮತ್ತು ಕ್ರಿಯೆಯ ಭಾಗವಾಗಿದ್ದರೆ ರಾಜಕೀಯ ಪ್ರಜಾಸತ್ತೆ ಅಭದ್ರವಾಗುತ್ತದೆ. ಎಂದು ಅವರು ಪ್ರತಿಪಾದಿಸುತ್ತಾರೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಕೆಳಗಿನ ಅಂಶಗಳನ್ನು ಅನುಸರಿಸಲು ಅಂಬೇಡ್ಕರ್ ಕರೆ ಕೊಡುತ್ತಾರೆ:

೧. ರಾಜಕೀಯ ಪ್ರಜಾಪ್ರಭುತ್ವವೂ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದಿಂದ ಕೂಡಿರಬೇಕು. ಅಂದರೆ ಸಮಾಜದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಇರಬಾರದು. ಏಕೆಂದರೆ ಸಾಮಾಜಿಕ ಪ್ರಜಾಪ್ರಭುತ್ವವೂ ರಾಜಕೀಯ ಪ್ರಜಾಪ್ರಭುತ್ವದ ಮೂಲ ಬುನಾದಿಯಾಗಿದೆ.

೨. ಪ್ರಜಾಪ್ರಭುತ್ವವೂ ಒಬ್ಬ ವ್ಯಕ್ತಿ, ಒಂದು ಮತ ಮತ್ತು ಒಂದೇ ಮೌಲ್ಯವೆಂಬ ತತ್ವದ ಆಧಾರದ ಮೇಲೆ ನಿಂತಿರಬೇಕು.

೩. ರಾಜಕೀಯ ಪ್ರಜಾಪ್ರಭುತ್ವವೂ ನಾಲ್ಕು ಆಧಾರಗಳ ಮೇಲೆ ಅವಲಂಬಿಸಿರಬೇಕಾಗುತ್ತದೆ.

i) ವ್ಯಕ್ತಿಯು ತನ್ನಷ್ಟಕೆ ತಾನು ಒಂದು ಗುರಿ

ii) ವ್ಯಕ್ತಿಯ ಕೆಲವು ಹಸ್ತಾಂತರಗೊಳಿಸಲಾಗದ ಹಕ್ಕುಗಳನ್ನು ಸಂವಿಧಾನದಿಂದಲೆ ಖಾತರಿಗೊಳಿಸಬೇಕು.

iii) ಒಂದು ವಿಶೇಷವಾದ ಹಕ್ಕು ಪಡೆಯಲು ವ್ಯಕ್ತಿಯು ತನ್ನ ಸಂವಿಧಾನಾತ್ಮಕ ಹಕ್ಕುಗಳನ್ನು ತ್ಯಜಿಸಬಾರದು.

iv) ರಾಜ್ಯವು ಇತರರನ್ನು ಆಳಲು ಖಾಸಗಿ ವ್ಯಕ್ತಿಗಳಿಗೆ ಅಧಿಕಾರವನ್ನು ಹಸ್ತಾಂತರಿಸ ಬಾರದು.

೪. ಎಲ್ಲಾ ನಾಗರಿಕರಿಗೆ ಸಮಾನ ಅವಕಾಶಗಳನ್ನು ಮತ್ತು ಮಾನವ ಹಕ್ಕುಗಳನ್ನು ಒದಗಿಸುವುದೇ ಪ್ರಜಾಪ್ರಭುತ್ವದ ಮುಖ್ಯ ಉದ್ದೇಶವಾಗಿದೆ.[೩]

ಜಾತಿ ಪರಿಭಾಷೆಯನ್ನು ಈಗಾಗಲೇ ನಡೆದ ಅಧ್ಯಯನದಿಂದ ನೋಡುವುದು ಮತ್ತು ವಿಶ್ಲೇಷಿಸಿ ತೀರ್ಮಾನಕ್ಕೆ ಬರಲಾಗಿದೆ. ಜಾತಿಯನ್ನು ಪರಿಭಾಷೆಯ ದೃಷ್ಟಿಯಿಂದ ನೋಡುವುದಾದರೆ ಜಾತಿ ಒಂದು ನಿರ್ದಿಷ್ಟ ಕಾಲಘಟ್ಟ ಅಥವಾ ಪ್ರದೇಶದಲ್ಲಿ ಹುಟ್ಟಿದಲ್ಲ ಅದು ಭಾರತೀಯ

ಸಾಮಾಜಿಕ ವ್ಯವಸ್ಥೆಯೊಂದಿಗೆ ಅನೌಪಚಾರಿಕವಾಗಿ ಹರಿದು ಬಂದ ವ್ಯವಸ್ಥೆಯಾಗಿದೆ. ಆಯಾ ಸಾಮಾಜಿಕ ಸಂದರ್ಭದಲ್ಲಿ ಜಾತಿ ವ್ಯವಸ್ಥೆಗೆ ಅನೇಕ ಅಂಶಗಳು ಪುಷ್ಟಿ ನೀಡಿವೆ. ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿ ಉಚ್ಚ-ನೀಚ ಎನ್ನುವ ಕಲ್ಪನೆಗಳು ಜಾತಿ ವ್ಯವಸ್ಥೆಗೆ ಪುಷ್ಟಿಯನ್ನು ನೀಡಿದರೆ, ವೇದ-ಉಪನಿಷತ್ ಕಾಲದಲ್ಲಿ ವರ್ಣವ್ಯವಸ್ಥೆಗೆ ಇಂದಿನ ಜಾತಿವ್ಯವಸ್ಥೆಗೆ ಸೃಷ್ಟಿಯನ್ನು ನೀಡಿದವು. ಅದಕ್ಕೆ ಧರ್ಮ ಎಂಬ ರಕ್ಷಾ ಕವಚವು ಸೇರಿಕೊಂಡಿದೆ. ಇದು ಕೇವಲ ಭಾರತಕ್ಕೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ಜಗತ್ತಿನ ಎಲ್ಲ ಸಮಾಜಗಳಲ್ಲಿ ಅಸಮಾನತೆ ಎಂಬುದು ಇದೆ. ಆದರೆ ಪಾಶ್ಚಿಮಾತ್ಯ ಸಮಾಜಗಳಲ್ಲಿ ವರ್ಣಭೇದ ಪದ್ಧತಿಯಿದ್ದರೆ ಭಾರತದಲ್ಲಿ ಜಾತಿಪದ್ಧತಿ ಇದೆ. ವರ್ಣ ಪದ್ಧತಿ ಜಾತಿವ್ಯವಸ್ಥೆಯಷ್ಟೇ ಕ್ರೂರ, ಅಮಾನವೀಯವಾದುದು. ಆದರೆ ಎರಡನ್ನು ಒಂದೆ ತಕ್ಕಡಿಯಲ್ಲಿ ತೂಗುವ ಹಾಗಿಲ್ಲ ಯಾಕೆಂದರೆ ವರ್ಣಪದ್ಧತಿಯಿಂದ ಪಾಶ್ಚಿಮಾತ್ಯ ಸಮಾಜಗಳು ತಮ್ಮನ್ನು ತಾವು ತಿದ್ದಿಕೊಂಡು ತಮ್ಮ ಸಮಾಜ ತಮ್ಮ ತಪ್ಪುಗಳನ್ನು ತಮ್ಮ ವ್ಯವಸ್ಥೆಯನ್ನು ತಿದ್ದಿ ಸರಿಪಡಿಸಿಕೊಂಡು ಅಭಿವೃದ್ಧಿಯತ್ತ ಸಾಗಿರುವ ನಿದರ್ಶನಗಳು ನಮ್ಮ ಮುಂದೆ ಇವೆ ಆದರೆ ಭಾರತದ ಸಂದರ್ಭದಲ್ಲಿ ಇಂತಹ ವ್ಯವಸ್ಥೆ ಯಾವ ಸಂದರ್ಭದಲ್ಲಿಯೂ ಕಾಣಲಿಲ್ಲ. ಅದಕ್ಕೆ ಹಲವಾರು ವಿದ್ವಾಂಸರು ಜಾತಿ ವ್ಯವಸ್ಥೆಗೆ ತಮ್ಮದೆ ಅದೇ ಪರಿಭಾಷೆಯನ್ನು ಕಟ್ಟಿಕೊಟ್ಟಿದ್ದಾರೆ.

ಜಾತಿ ಒಂದು ಮುಚ್ಚಿದ ವ್ಯವಸ್ಥೆ. ಭಾರತೀಯ ಸಮಾಜದ ಒಂದು ಅವಿಭಾಜ್ಯ ಅಂಗ. ಅದಕ್ಕೆ ಕಾರಣ ಭಾರತೀಯ ಸಮಾಜದಲ್ಲಿ ವರ್ಣವ್ಯವಸ್ಥೆ. ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವಹಿಸಿದೆ. ಇಲ್ಲಿನ ವರ್ಣ ವ್ಯವಸ್ಥೆಗೆ ಕೆಲವು ವೃತ್ತಿಗಳು ಇಂಬುಕೊಟ್ಟಿರುವುದನ್ನು ಗಮನಿಸಬಹುದು. ಅದು ಆಯಾ ಕಾಲಘಟ್ಟದಲ್ಲಿ ತನ್ನ ಸ್ವರೂಪವನ್ನು ಬದಲಿಸುತ್ತಾ, ಕೆಲವೊಂದು ಬಾರಿ ಕಂಡಂತೆ ಕೆಲವೊಂದು ಬಾರಿ ಕಾಣದಂತೆ ಕಾರ್ಯನಿರ್ವಹಿಸುತ್ತಿದೆ. ಜಾತಿ ಅಸಮಾನತೆ ಎಂಬುದು ಭಾರತೀಯ ಸಮಾಜಕ್ಕೆ ಅಂಟಿದ ರೋಗ ಎಂದು ಹಲವಾರು ವಿದ್ವಾಂಸರು, ಅಧ್ಯಯನಗಳು ಸಾದರಪಡಿಸಿದೆ. ಸಾಮಾಜಿಕ ಅಸಮಾನತೆ (ದೇವಸ್ಥಾನ, ಕೆರೆ, ಬಾವಿ, ಹೋಟೇಲ್‌ಗಳಲ್ಲಿ) ಕೆಳಜಾತಿಯವರಿಗೆ ನಿರ್ಬಂಧ ಹಾಕುವುದು ಸಾಂಸ್ಕೃತಿಕ ಅವಕಾಶಗಳು ಇಲ್ಲದಂತೆ ಶೋಷಣೆ ಮಾಡುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಬೆಳೆದುಬಂದಿದೆ. ಅದೇ ರೀತಿಯಾಗಿ ಆರ್ಥಿಕ ಅಸಮಾನತೆ ಭೂಮಿ, ಬಂಡವಾಳ, ಮತ್ತು ಉದ್ಯೋಗದಲ್ಲಿ ಕೆಳಜಾತಿಯವರಿಗೆ ವಂಚಿಸಿ ಬಲಿಷ್ಠ ಸಮುದಾಯಗಳು ಸಾಮಾಜಿಕವಾಗಿ ಬಲಹೀನವಾದ ಸಮುದಾಯಗಳಿಗೆ ಅವಕಾಶ ದೊರೆಯದಂತೆ ಹುನ್ನಾರುಗಳನ್ನು ಮಾಡಿರುವುದು ಹಲವಾರು ರೀತಿಯಲ್ಲಿ ಗುರುತಿಸಬಹುದು. ಜಾತಿ ಅಸಮಾನತೆಯನ್ನುವುದು ಅದು ಎಲ್ಲೋ ನಡೆಯುವ ಪ್ರಕ್ರಿಯೆಯಲ್ಲಿ ಅದು ಸಮಾಜದಲ್ಲಿ ನಡೆಯುವ ಪ್ರಕ್ರಿಯೆ ಮತ್ತು ಮನುಷ್ಯ ಮತ್ತು ಮನುಷ್ಯನ ಮಧ್ಯ ನಡೆಯುವ ಪ್ರಕ್ರಿಯೆ. ಜಾತಿಪದ್ಧತಿ ಅನುಸರಿಸುವುದು ತಪ್ಪು ಎಂದು ಎಲ್ಲರಿಗೂ ಗೊತ್ತಿದೆ ಆದರೆ ಅದನ್ನು ಇಂದಿಗೂ ಉಳಿಸಿಕೊಂಡು ಬರಲಾಗುತ್ತಿದೆ. ಕಾರಣ ಜಾತಿಯಂತೆ ಉಳಿಸಿಕೊಂಡು ಬರುವುದರಲ್ಲಿ ಕೆಲವರ ಅಸ್ತಿತ್ವ ಇದೆ ಮತ್ತು ಕೆಲವರು ಬದುಕು ಇದೆ. ಉದಾ: ಕಾರ್ಮಿಕ ಇಲ್ಲದಿದ್ದರೆ ಮಾಲಿಕ ಇಲ್ಲ. ಹಾಗಾಗಿ ಮಾಲಿಕ ಉಳಿಯಬೇಕೆಂದರೆ

ಕಾರ್ಮಿಕ ಇರಲೇಬೇಕು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಗ ವ್ಯವಸ್ಥೆ ಮತ್ತು ವರ್ಣವ್ಯವಸ್ಥೆ ಈಗಲೂ ಉಳಿಸಿಕೊಂಡು ಬರುತ್ತಿವೆ. ಆರ್ಥಿಕ ಹಂಚಿಕೆ ಮತ್ತು ಆದಾಯ ಹೆಚ್ಚಳದಿಂದ ಜಾತಿ ಪದ್ಧತಿ ಹೋಗುತ್ತಿದೆ ಎಂಬ ವಿದ್ವಾಂಸರ ಮತ್ತು ಅಧ್ಯಯನಗಳ ಮತ್ತು ವರದಿಗಳನ್ನು ಜಾತಿ ಸುಳ್ಳಾಗಿಸಿದೆ.

ಭಾರತದಲ್ಲಿ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಮತ್ತು ಸಾಮಾಜಿಕ ಸಮಾನತೆ ತರುವಲ್ಲಿ ಜಾತಿ ಅಂದೋಲನಗಳು ಮತ್ತು ಸಾಮಾಜಿಕ ಚಳುವಳಿಗಳ ಪಾತ್ರ ಮರೆಯುವಂತಿಲ್ಲ. ಅಂತಹ ಚಳುವಳಿಗಳು ಹಲವಾರು ಕಾಲಾಘಟ್ಟದಲ್ಲಿ ನಡೆದಿರುವುದನ್ನು ಕಾಣಬಹುದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ

ಜಾತಿ ಎಂಬುದು ಭಾರತದ ಒಂದು ವಿಶಿಷ್ಟ ಸಾಮಾಜಿಕ ವ್ಯವಸ್ಥೆಯಾಗಿದೆ. ಅದು ಬೇರೆ ಎಲ್ಲಿಯೂ ಇಲ್ಲದ ಒಂದು ವ್ಯವಸ್ಥೆಯಾಗಿದೆ ಎಂದು ಕೆಲವರು ಹೇಳುತ್ತಾರೆ. ಈ ವಿಚಾರದಲ್ಲಿ ಡಿ.ಡಿ.ಕೊಸಂಬಿಯವರ ಮಾನವ ವಿಕಾಸಶಾಸ್ತ್ರ ಹಾಗೂ ಇತಿಹಾಸ ಎರಡು ಸಮನ್ವಯಗೊಳಿಸಿ ಭಾರತದ ಸಾಮಾಜಿಕ ಜೀವನದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಜಾತಿ ಪದ್ಧತಿ ಹರಿದು ಬಂದಿರುವ ರೀತಿಯನ್ನು ನೋಡಿದರೆ ಜಾತಿ ಪದ್ಧತಿಯ ಬಗ್ಗೆ ಬೆಳಕು ಚೆಲ್ಲದ ಭಾರತೀಯ ಇತಿಹಾಸದ ಬರವಣಿಗೆಯೂ ನಮ್ಮ ನಾಡಿನ ಬಗ್ಗೆ ಏನು ಹೇಳಿದಂತಾಗುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾ ಜಾತಿ ಎಂದರೆ ಅದೊಂದು ಸಾಮಾಜಿಕ ವ್ಯವಸ್ಥೆ ಅದನ್ನು ಗುರುತಿಸುವುದು ಅದರ ಕ್ರಿಯಾವಿಧಿಗಳಿಂದ ವಂಶ ಪಾರಂಪರಿಕ ಕ್ರಿಯೆಗಳು, ಅಂತರ ವಿವಾಹಗಳು, ವಾರಸುದಾರಿಕೆ ಶುದ್ಧ-ಅಶುದ್ಧ ತುಲನೆಯ ಪರಿಕಲ್ಪನೆಯೂ ಜಾತಿ ಪರಿಕಲ್ಪನೆಯಲ್ಲಿ ಮುಖ್ಯವಾದ ಅಂಶವಾಗಿದೆ. ಮತ್ತು ಅವು ಅನುಸರಿಸುವ ವಿಶಿಷ್ಟ ಕ್ರಿಯಾದಿಗಳು ಜಾತಿಯನ್ನು ಗುರುತಿಸುವ ಲಕ್ಷಣಗಳಾಗಿವೆ. ಲೂಯಿ ಡ್ಯೂ ಮೊಂಟ್ ತನ್ನ (Human Hiraracy) ಮಾನವ ಶ್ರೇಣಿ ಎಂಬ ಕೃತಿಯಲ್ಲಿ ಹೇಳುವ ಪ್ರಕಾರ ಜಾತಿಯೊಳಗಿನ ಮೇಲು-ಕೀಳು ಅಂತಸ್ತುಗಳ ತತ್ವವು ಜಾತಿವ್ಯವಸ್ಥೆಯ ತಿರುಳು, ಹೃದಯವು ಆಗಿದೆ ಅದಿಲ್ಲದಿದ್ದರೆ ಜಾತಿವ್ಯವಸ್ಥೆ ಇರಲಾರದು ಎಂದು ಡೂಮಾಂಟ್ ತೋರಿಸಿಕೊಟ್ಟಿದ್ದಾರೆ. ಅದೇ ರೀತಿಯಾಗಿ ಡಾ.ಎಂ.ಚಂದ್ರಪೂಜಾರಿಯವರ ಸಂಶೋಧನಾ ಪರಿಭಾಷೆಯೆಂಬ ಗ್ರಂಥದಲ್ಲಿ ಜಾತಿಯನ್ನು ಬ್ರಿಟೀಷರು ಭಾರತಕ್ಕೆ ಬಂದ ಮೇಲೆ ಆರಂಭದಲ್ಲಿ ಇಲ್ಲಿನ ಜನರನ್ನು ಅರ್ಥ ಮಾಡಿಕೊಳ್ಳುವುದು ಅವರಿಗೆ ದೊಡ್ಡ ಸಮಸ್ಯೆಯಾಗಿತ್ತು, ಚರ್ಮದ ಬಣ್ಣದ ನೆಲೆಯಲ್ಲಿ ಜನರನ್ನು ವಿಂಗಡಿಸುವುದು ಅವರಿಗೆ ಪರಿಚಯವಿತ್ತು ಆದರೆ ಇಲ್ಲಿ ಹೆಚ್ಚು ಕಡಿಮೆ ಎಲ್ಲರ ಬಣ್ಣ ಒಂದೇ ಆಗಿತ್ತು. ಆದರೂ ಜನರಲ್ಲಿ ಸಾಕಷ್ಟು ಭಿನ್ನತೆಗಳಿದ್ದವು. ಜನರನ್ನು ಗುರುತಿಸಲು ಮಾನದಂಡಗಳನ್ನು ರೂಪಿಸಿಕೊಂಡರು ಉಡುಗೆ ತೊಡುಗೆ, ಊಟ ಉಪಚಾರ ದೇವರು, ಧರ್ಮ, ಆಚಾರ, ವಿಚಾರ, ಉದ್ಯೋಗ ಇತ್ಯಾದಿ ಮಾನದಂಡಗಳನ್ನು ಬಳಸಿಕೊಂಡು ಜಾತಿ ಪರಿಭಾಷೆಯನ್ನು ರೂಪಿಸಿಕೊಂಡರು. ಜಾತಿ ಎನ್ನುವ ಪರಿಭಾಷೆ ಬ್ರಿಟೀಷರ ಕೊಡುಗೆ ಎನ್ನುವ ವಾದ ಇದೆ. ಜಾತಿ ಪರಿಭಾಷೆ ಬ್ರಿಟೀಷರ ಕೊಡುಗೆಯಲ್ಲಿ ಚಾರಿತ್ರಿಕವಾಗಿ ರೂಪಗೊಂಡ ನಮ್ಮದೇ ಸಮಾಜದ ಕೊಡುಗೆ ಎನ್ನುವ ವಾದವು

ಇದೆ. ನಮ್ಮ ವರ್ಣ ಪದ್ಧತಿ ಜಾತಿ ಪದ್ಧತಿಯ ಮೂಲ ಕಾಲಕ್ರಮೇಣ ಅದು ಜಾತಿಯಾಗಿ ಬದಲಾಯಿತೆಂದು ವಾದಿಸುವವರಿದ್ದಾರೆ. ಜಾತಿ ಪರಿಭಾಷೆ ಯಾರ ಸೃಷ್ಟಿ ಎನ್ನುವ ಚರ್ಚೆಗಿಂತ ಇಂದು ಜಾತಿ ಪರಿಭಾಷೆಯನ್ನು ಯಾವ ಅರ್ಥದಲ್ಲಿ ಬಳಸಬಹುದು ಎನ್ನುವ ಚರ್ಚೆ ನಮ್ಮ ಉದ್ದೇಶಕ್ಕೆ ಹೆಚ್ಚು ಮಹತ್ವದ್ದು ಹಾಗೇಯೇ ಮುಂದುವರೆದು ಜಾತಿಯನ್ನು ಶ್ರೇಣೀಕರಣಗೊಳಿಸಲು ಬಳಸಿದ ಮಾನದಂಡ ಏಣಿ ಶ್ರೇಣಿಗಳನ್ನು Ideological ಆಗಿ ಕಟ್ಟಿಕೊಳ್ಳಲಾಗಿದೆ. ಅವುಗಳ ಹಿಂದೆ ಆರ್ಥಿಕ ಅಥವಾ ಅಧಿಕಾರದ ಪ್ರಭಾವ ಇರಬೇಕಿಂದಲ್ಲ. ಆತನ ವಾದ ಆದ್ದರಿಂದಲೆ ನಮ್ಮಲ್ಲಿ ಏನೇನು ಆರ್ಥಿಕ ಸಂಪನ್ಮೂಲ ಇಲ್ಲದ ಅಥವಾ ರಾಜಕೀಯ ಅಧಿಕಾರವಿಲ್ಲದ ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದರೆ, ರಾಜಕೀಯ ಇರುವ ಮತ್ತು ಆರ್ಥಿಕ ಒಡೆತನವಿರುವ ರಾಜರು ಬ್ರಾಹ್ಮಣರಿಗಿಂತ ಕೆಳಗಿದ್ದಾರೆ ಎಂದು ವಾದಿಸಲಾಯಿತು, ಎಂ.ಎನ್. ಶ್ರೀನಿವಾಸ್ ಅವರ ಸಂಸ್ಕೃತ ಸಿದ್ಧಾಂತ ಹೆಚ್ಚು ಕಡಿಮೆ ಡ್ಯೂಮೊನ ಸಿದ್ಧಾಂತದಿಂದ ಪ್ರಭಾವಿತಗೊಂಡಿದೆ ಎನ್ನಬಹುದು ಎಂದಿದ್ದಾರೆ. ಅದೇ ರೀತಿಯಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತದಲ್ಲಿ ಜಾತಿಪದ್ಧತಿ ಆರ್ಥಿಕ ಸಂಪನ್ಮೂಲ ಮತ್ತು ರಾಜಕೀಯ ಅಧಿಕಾರಿಗಳು ಕೂಡ ಧರ್ಮಕ್ಕೆ ತಳುಕು ಹಾಕಿಕೊಂಡಿವೆ. ಜಾತಿಪದ್ಧತಿ ಹೋಗಬೇಕೆಂದರೆ ಧರ್ಮ ಹೋಗಬೇಕು. ಧರ್ಮಕ್ಕೆ ಅಂಟಿಕೊಂಡ ಜಾಡ್ಯ ಹೋಗದ ಹೊರತು ಜಾತಿ ಹೋಗದು ಎಂದಿದ್ದಾರೆ. ಆದ್ದರಿಂದಲೇ ಹಿಂದು ಧರ್ಮದಲ್ಲಿ ಅಸ್ಪೃಶ್ಯರು ಕ್ರೈಸ್ತ ಧರ್ಮ, ಬೌದ್ಧಧರ್ಮ ಮತ್ತು ಮಧ್ಯಯುಗದಲ್ಲಿ ಮುಸ್ಲಿಂ ಅರಸರ ಕಿರುಕುಳ ಮತ್ತು ಕಂದಾಯ ಕಟ್ಟಲಾರದೆ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು[೪] ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತೀಯ ಸಮಾಜವು ಮಧ್ಯಯುಗದ ಸಂದರ್ಭದಲ್ಲಿ ವಾಸ್ತವಿಕವಾಗಿ ಜಾತಿ ಅಭಿಮಾನ ಇದ್ದೇ ಇತ್ತು. ಜಾತಿ ವ್ಯವಸ್ಥೆ ಪಿತೃ ಮೂಲದಿಂದ ಬಂದ ವ್ಯವಸ್ಥೆಯಾಗಿತ್ತು. ಹಾಗೂ ಕೆಳಜಾತಿಯವರಲ್ಲಿ ಕೆಲವರು ತಾವು ಮೇಲು-ಕೀಳು ಎನ್ನುವ ಭಾವನೆ ಇತ್ತು. ಈ ಮಧ್ಯಯುಗದ ೫೦೦ ವರ್ಷಗಳ ಮುಸ್ಲಿಂ ಆಳ್ವಿಕೆಯಲ್ಲಿ ಕೆಳಜಾತಿಗಳಿಗೆ ನೀರು, ಆಹಾರ ಉದ್ಯೋಗ ಮುಂತಾದವುಗಳ ಮೇಲೆ ನಿರ್ಬಂಧ ಇದ್ದದ್ದು ನಿಜ ಎಂದು ಇತಿಹಾಸಕಾರ ಅಲ್ಬರೂನಿ ಅಭಿಪ್ರಾಯಪಟ್ಟಿದ್ದಾರೆ. ಇದರ ತಾತ್ಪರ್ಯ ಅಂದರೆ ಆಡಳಿತ ಯಾರದೆ ಇರಲಿ, ಆಡಳಿತ ಅಧಿಕಾರ ಯಾವುದೇ ಇರಲಿ ಅದು ಬದಲಾಗಬಹುದು ಆದರೆ ಜಾತಿ ವ್ಯವಸ್ಥೆ ಬದಲಾಗಲಿಲ್ಲ ಮತ್ತು ಜಾತಿ ವ್ಯವಸ್ಥೆ ಎಲ್ಲಾ ಕಾಲದಲ್ಲಿ ಎಲ್ಲರನ್ನು ಕುರುಡಾಗಿಸುತ್ತಾ ಬಂದಿದೆ. ಆದ್ದರಿಂದ ಒಂದು ವರ್ಗವೆಂಬ ಕಲ್ಪನೆ ಸ್ವಯಂ ಪ್ರಜ್ಞೆಯೂ ಮೊದಲಿನಿಂದಲೂ ದುರ್ಬಲವಾಗಿಯೇ ಉಳಿದಿದೆ.[೫]

ಅದೇ ರೀತಿಯಾಗಿ ಜಾತಿವ್ಯವಸ್ಥೆ ಸಮಸ್ಯೆ ಸವಾಲುಗಳು ಎಂಬ ಗ್ರಂಥದಲ್ಲಿ ಜಾತಿ ವರ್ಣ ವ್ಯವಸ್ಥೆಗೆ ಬುನಾದಿಯಾಗಿದ್ದ ಕ್ರಿಯಾತ್ಮಕ ಸಿದ್ಧಾಂತ ಬಹುದೀರ್ಘ ಕಾಲದಿಂದ ಬದುಕಿ ಬಂದಿದೆ. ಜನಮಾನಸದ ಮೇಲಿನ ಅದರ ಹಿಡಿತ ಇಂದಿಗೂ ಸಡಿಲಗೊಂಡಿಲ್ಲ. ಜಾತಿ ವ್ಯವಸ್ಥೆಯ ತೀವ್ರತೆಯನ್ನು ಕಡಿಮೆ ಮಾಡಲು ಕೈಗೊಳ್ಳುವ ಕ್ರಮಗಳಿಗೆ ಜಾತಿಯನ್ನು ಆಧಾರಭೂತವಾಗಿ ಪರಿಗಣಿಸುವುದರಿಂದ

ನಾವು ಜಾತಿವ್ಯವಸ್ಥೆ ವಿರುದ್ಧ ಸಮರ ಸಾರುವೆವೋ, ನಮಗರಿವಿಲ್ಲದೆ ಅದೇ ಗಿಡದ ಬುಡಕ್ಕೆ ನಿರೆರೆದು ಅದಕ್ಕೆ ಹೊಸ ಬದುಕಿನ ಸಾಧ್ಯತೆಯೂ ಕಲ್ಪಿಸಿಕೊಡುತ್ತೇವೆ ಎನ್ನುವುದು ಇದರ ಅರ್ಥ. ಜಾತಿಯನ್ನು ಆಧಾರವಾಗಿಟ್ಟುಕೊಂಡು ತೆಗೆದುಕೊಳ್ಳುವ ಯಾವುದೇ ಕ್ರಮ ಸ್ಥಾಪಿತ ಹಿತಾಸಕ್ತಿಗೆ ಕುಮ್ಮಕ್ಕು ಕೊಡುತ್ತದೆ ಎಂಬುದು ಇದರ ತೀರ್ಮಾನ. ಆದ್ದರಿಂದ ಇವರ ಪ್ರಕಾರ ಜಾತಿ ವ್ಯವಸ್ಥೆ ವಿರುದ್ಧ ತೆಗೆದುಕೊಳ್ಳುವ ಕ್ರಮಗಳಿಗೆ ಸಾಮಾಜಿಕ ಆರ್ಥಿಕ ಹಿಂದುಳಿದಿರುವಿಕೆ ನಿದರ್ಶನವಾಗಬೇಕೆ ಹೊರತು ಜಾತಿಯಲ್ಲಿ ಎಂದಿದ್ದಾರೆ.[೬]

ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ದೇಶವು ಅನುಸರಿಸಬೇಕಾದ ವಿಧಿಯು ತಲುಪಬೇಕಾದ ಗುರಿಯನ್ನು ಸವಿಸ್ತರವಾಗಿ ವಿವರಿಸಲಾಗಿದೆ. ಜಾತಿಪದ್ಧತಿಯನ್ನು ಹೋಗಲಾಡಿಸಲು ಸಂವಿಧಾನದ IIIನೇ ಭಾಗದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಸಂವಿಧಾನದ ೧೪ನೇ ಕಾನೂನಿನ ಮುಂದೆ ಎಲ್ಲರೂ ಸಮಾನರೆಂದು ಸಾರುತ್ತದೆ. ಅದೇ ರೀತಿಯಾಗಿ ೧೫ನೇ ವಿಧಿಯು ತಾರತಮ್ಯ ನಿಷೇಧಿಸುತ್ತದೆ. ಅಂದರೆ ಜಾತಿ, ಧರ್ಮ, ಲಿಂಗ, ಭಾಷೆ, ಜನ್ಮಸ್ಥಳ ಮತ್ತು ಹುಟ್ಟಿನ ಆಧಾರದ ಮೇಲೆ ಸಾರ್ವಜನಿಕ ಅವಕಾಶಗಳಲ್ಲಿ ತಾರತಮ್ಯ ಮಾಡುವಂತಿಲ್ಲ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶವನ್ನು ನಿರಾಕರಿಸುವಂತಿಲ್ಲ ಎಂದು ಸಾರುತ್ತದೆ. ಅದೇ ರೀತಿಯಾಗಿ ೧೬ನೇ ವಿಧಿಯು ಸಾರ್ವಜನಿಕ ರಂಗದಲ್ಲಿ ಎಲ್ಲರಿಗೂ ಉದ್ಯೋಗ ಅವಕಾಶವನ್ನು ಕಲ್ಪಿಸಿದೆ. ೧೬(೪)ನೇ ಉಪಜಾತಿಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶೇ. ೧೫ ಮತ್ತು ಶೇ. ೭ರಷ್ಟು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿದೆ. ಇದರ ಜೊತೆಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಆದರೆ ಇದುವರೆಗೆ ಕೇಂದ್ರ ಸರಕಾರ ಮತ್ತು ರಾಜ್ಯಗಳಲ್ಲಿ ಶೇ ೧೮ರ ಪ್ರಮಾಣದಲ್ಲಿ ಪರಿಶಿಷ್ಟರಿಗೆ ಉದ್ಯೋಗ ದಕ್ಕಿಲ್ಲ ಮತ್ತು ಇದುವರೆಗೂ ಕೇಂದ್ರ ಸರಕಾರದಲ್ಲಿ ೧.೨೫ ಸಾವಿರ ಹುದ್ದೆಗಳು ಬ್ಯಾಕ್‌ಲಾಗ್ ಹಿಂಬಾಕಿ ಹುದ್ದೆಗಳು ಉಳಿದಿದೆ. ಅದರಂತೆ ಸ್ವಾತಂತ್ರ ಬಂದು ೬೫ ವರ್ಷಗಳಾದರೂ ಕೇಂದ್ರದಲ್ಲಿ ಬಡ್ತಿ ಮೀಸಲಾತಿ ಜಾರಿಗೊಳಿಸಿಲ್ಲ. ೨೦೧೪ರಲ್ಲಿ ಸರ್ವೋಚ್ಛ ನ್ಯಾಯಾಲಯ ಬಡ್ತಿ ಮೀಸಲಾತಿಗೆ ಆಸ್ತು ನೀಡಿದೆ. ಆದರೆ ಇದುವರೆಗೆ ಅದರ ಬಗ್ಗೆ ಕ್ರಮಕೈಗೊಂಡಿಲ್ಲ, ಅದಕ್ಕೆ ಕಾರಣ ಜಾತಿ ತಾರತಮ್ಯ ಮತ್ತು ಕೆಳಜಾತಿಗಳ ಬಗ್ಗೆ ಇದ್ದ ನಿರ್ಲಿಪ್ತ ಎಂದು ಹೇಳದೆ ವಿಧಿಯಿಲ್ಲ, ಯಾಕೆಂದರೆ ಜಾತಿ ತಾರತಮ್ಯ ಮತ್ತು ಇಲ್ಲಿಯವರೆಗೆ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಮುನ್ನಡೆಸಿದ ಉದಾಹರಣೆಗಳಿವೆ. ಸಂವಿಧಾನದ ೧೭ನೇ ವಿಧಿಯು ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ. ೧೯೫೫ರಲ್ಲಿ ಅಸ್ಪೃಶ್ಯತೆಯ ಶಿಕ್ಷಾರ್ಹ ಅಪರಾಧ ಎಂದು ಸಾರಲಾಯಿತು. ಆದರೂ ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿದೆ. ಸಂವಿಧಾನದ ೨೩ನೇ ವಿಧಿ ಬಲವಂತದ ದುಡಿಮೆ ಮತ್ತು ಮಾನವ ಶೋಷಣೆಯನ್ನು ನಿಷೇಧಿಸುತ್ತದೆ. ಆದರೆ ಪರಿಶಿಷ್ಟರ ವಿಷಯದಲ್ಲಿ ಇದು ನಿರಂತರ ನಡೆಯುವಂತಹದು. ಬಲವಂತದ ದುಡಿಮೆ, ಜೀತಪದ್ಧತಿ, ಕೂಲಿ ಇಲ್ಲದೆ ಕೆಲಸ, ದೌರ್ಜನ್ಯ ಮುಂತಾದವು ನಡೆಯುತ್ತಲೇ ಇವೆ. ಪರಿಶಿಷ್ಟ ಜಾತಿಗಳಿಗೆ ಆರ್ಥಿಕ ಬಲ ಒದಗಿಸುವ ದೃಷ್ಟಿಯಿಂದ ಸಂವಿಧಾನದ ೪ನೇ

ಭಾಗದಲ್ಲಿ ರಾಜ್ಯ ನೀತಿ ನಿರ್ದೇಶನಾತ್ಮಕ ತತ್ವಗಳಲ್ಲಿ ಪರಿಶಿಷ್ಟ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯವು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ನಿರ್ದೇಶನ ನೀಡುತ್ತದೆ. ಆದರೆ, ಅವು ರಾಜ್ಯಕ್ಕೆ ಬಿಟ್ಟ ವಿಷಯವಾಗಿದ್ದರಿಂದ ಮತ್ತು ಅವು ರಚನಾತ್ಮಕ ಕಾರ್ಯಗಳಾಗಿವೆ. ಯಾವ ಕಡೆ ಹೋದರೂ ಜಾತಿಯ ಕರಾಳ ಸ್ವರೂಪ ಇರುವುದನ್ನು ಭಾರತೀಯ ಸಮಾಜ ಇನ್ನು ಉಳಿಸಿಕೊಂಡು ಬಂದಿದೆ. ಸಾಮಾಜಿಕ ಪರಿವರ್ತನೆಯಾಗದೆ ಸಮಾಜ ಪರಿವರ್ತನೆಯಾಗುವುದಿಲ್ಲ. ಸಮಾಜ ಪರಿವರ್ತನೆಯಾಗದ ಹೊರತು ಸಮಾಜ ಅಭಿವೃದ್ಧಿ ಹೊಂದುವುದಿಲ್ಲ. ಮಾನವೀಯತೆ ಸಂವಿಧಾನಾತ್ಮಕ ಕಾನೂನುಗಳು ಸಾಮಾನ್ಯ ನ್ಯಾಯಾಂಗದ ಕಾನೂನುಗಳು ಸಹ ಜಾತಿವ್ಯವಸ್ಥೆಯನ್ನು ಹೋಗಲಾಡಿಸಲು ಸಾಕಷ್ಟು ಪ್ರಯತ್ನ ಮಾಡುತ್ತಾ ಸಾಕಷ್ಟು ಬದಲಾವಣೆಯಾಗಿದೆ.

ಜಾತಿಪದ್ಧತಿ ಎನ್ನುವುದು ಆಚರಣೆ ಎನ್ನುವುದು ನಿರ್ವಾತದಲ್ಲಿ ನಡೆಯುವ ಕ್ರಿಯೆಯಲ್ಲ. ಅದು ಒಂದು ಸಾಮಾಜಿಕ ಚೌಕಟ್ಟಿನಲ್ಲಿ ನಡೆಯುವ ಸಂಗತಿಯಾಗಿದೆ. ಈ ಸಾಮಾಜಿಕ ರಚನೆಯನ್ನು ನಿರ್ಲಕ್ಷಿಸಿ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ನಾವು ಕಟ್ಟಿಕೊಂಡ ಸಾಮಾಜಿಕ ರಚನೆ ರೂಪಿಸಿಕೊಂಡ ಕಾಯಿದೆಗಳಲ್ಲಿ ದೋಷವಿದೆಯೆಂದು ಭಾವಿಸಬೇಕಾಗುತ್ತದೆ.

ಈ ಮೇಲಿನ ವಾದ-ವಿವಾದಗಳು ಈ ರೀತಿಯಾಗಿ ವಿಶ್ಲೇಷಿಸಬಹುದಾಗಿದೆ.

ಮೊದಲನೆಯದಾಗಿ: ಈಗಾಗಲೇ ಮೇಲೆ ವಿವರಿಸಿದ ಅಧ್ಯಯನಗಳು ಪರಾಮರ್ಶಿಸಿದಾಗ ಭಾರತದಲ್ಲಿ ಜಾತಿ ಪದ್ಧತಿಯಂತೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಣಬೇಧ ನೀತಿ ಇದೆ. ಸಾಧ್ಯವಾದಷ್ಟರಮಟ್ಟಿಗೆ ವರ್ಣಬೇಧ ನೀತಿಯನ್ನು ಕೊನೆಗಾಣಿಸಿ ಅನೇಕ ರಾಷ್ಟ್ರಗಳು ಅಭಿವೃದ್ಧಿಯತ್ತ ಸಾಗಿವೆ; ಆದರೆ ಭಾರತದಲ್ಲಿ ಜಾತಿಪದ್ಧತಿ ಕೊನೆಗಾಣಿಸಲು ಸಾಧ್ಯವಾಗಿಲ್ಲ. ಏಕೆಂದರೆ ವರ್ಣಬೇಧ ನೀತಿಯಿಂದ ಜಾಗತೀಕ ಸಮುದಾಯದ ದೊಡ್ಡಮಟ್ಟದ ಕೊಡುಗೆ ಇದೆ. ಅದಕ್ಕೆ ಐತಿಹಾಸಿಕ ಕಾರಣಗಳು ಇವೆ. ೧೨೧೫ರ ಮ್ಯಾಗ್ನಕಾರ್ಟ ಆ್ಯಕ್ಟ್ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರತಿಪಾದಿಸಿತು. ೧೭೭೬ರಲ್ಲಿ ಅಮೇರಿಕ ಕ್ರಾಂತಿ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಪ್ರತಿಪಾದಿಸಿತು. ಅದೇ ರೀತಿಯಾಗಿ ೧೭೮೯ರ ಪ್ರಾನ್ಸ್ ಮಹಾಕ್ರಾಂತಿ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವವನ್ನು ಪ್ರತಿಪಾದಿಸಿತು. ೧೯೧೭ರ ರಷ್ಯಾಕ್ರಾಂತಿ ಸಮಾನ ಕೆಲಸಕ್ಕೆ ಸಮಾನ ಕೂಲಿ ತತ್ವ ಪ್ರತಿಪಾದಿಸಿತು. ೧೯೨೦ರಲ್ಲಿ ವುಡ್ರೋ ವಿಲ್ಸನ್ ೧೬ ಅಂಶಗಳ ರೂಪಿಸಲ್ಪಟ್ಟ ಲೀಗ್ ಅಫ್ ನೇಶನ್ ವರ್ಣಭೇದ ನೀತಿಯನ್ನು ಜಾಗತೀಕ ಸಮಸ್ಯೆಯೆಂದು ಸಾರಿತು.

೧೯೪೫ರಲ್ಲಿ ವಿಶ್ವಸಂಸ್ಥೆ ವರ್ಣಬೇಧ ನೀತಿ. ಜಾಗತಿಕ ಸಮಸ್ಯೆ ಮತ್ತು ಮಾನವೀಯತೆಗೆ ವಿರುದ್ಧವಾದುದು ಎಂದು ಸಮರ ಸಾರಿದೆ. ಅದಕ್ಕೆ ಪೂರಕವೆಂಬಂತೆ ೧೯೪೮ರಲ್ಲಿ ಮಾನವ ಹಕ್ಕುಗಳ ಘೋಷಣೆಯಲ್ಲಿ ವರ್ಣಭೇದ ನೀತಿ ಕೊನೆಗಾಣಿಸುವಲ್ಲಿ ಮಹತ್ವ ಪಾತ್ರವಹಿಸಿವೆ. ಯಾಕೆಂದರೆ ವರ್ಣಬೇಧ ನೀತಿ ಜಾಗತೀಕ ಸಮಸ್ಯೆ ಎಂದು ಘೋಷಿಸಿದೆ. ಜಾತಿ ಸಮಸ್ಯೆ ಜಾಗತೀಕ ಸಮಸ್ಯೆ ಎಂದು ಘೋಷಿಸಿದ್ದರೆ ಜಾತಿ ಸಮಸ್ಯೆಯನ್ನು ಕೊನೆಗೊಳಿಸಬಹುದು.

೨ನೇ ವಾದ ಎಂದರೆ ಭಾರತದಲ್ಲಿ ಜಾತಿ ಸಮಸ್ಯೆ ಕೊನೆಗಾಣಿಸಲು ಕೆಲವು ಸಂದರ್ಭದಲ್ಲಿ ಧಾರ್ಮಿಕ ಆಂದೋಲನಗಳು, ಸಾಮಾಜಿಕ ಆಂದೋಲನಗಳು ಪುನರ್ ಜೀವನ ಕಾಲದಲ್ಲಿ ಅನೇಕ ನಡೆದವು ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಿದ್ದು ಉಂಟು. ನಂತರ ಅಂಬೇಡ್ಕರ ಪ್ರಭಾವದಿಂದ ಸಂವಿಧಾನದಲ್ಲಿ ಮೀಸಲಾತಿ ಮೂಲಕ ಜಾತಿಪದ್ಧತಿ ಹೋಗಲಾಡಿಸಲು ಪ್ರಯತ್ನಿಸಲಾಗಿದೆ. ಆದರೆ ಜಾತಿ ಪದ್ಧತಿ ಹೋಗಲಾಡಿಸಲು ಮೀಸಲಾತಿಗೆ ಒಂದೇ ಪರಿಹಾರ ಎಂದು ಭಾವಿಸಲಾಗಿದೆ. ಮೀಸಲಾತಿ ಒಂದು ಸಾಮಾಜಿಕ ಸಂರಕ್ಷಣೆಗೆ ಒಂದು ಸಾಧನವೇ ಹೊರತು, ಅದೇ ಗುರಿಯಲ್ಲ ಎಂಬುದನ್ನು ಗ್ರಹಿಸುವಲ್ಲಿ ಎಡವಿದ್ದೇವೆ.

ಅಸ್ಪೃಶ್ಯತೆ ಭಾರತದ ಅನುಭವಗಳು

ಅಸ್ಪೃಶ್ಯತೆ ಕಾನೂನು ಬಾಹಿರ ಎಂದು ಸಂವಿಧಾನದಲ್ಲಿ ಸಾರಲಾಗಿದೆ. ಅದರೆ ಅದರ ಅನುಭವಗಳು ಮಾತ್ರ ಹೊಸ ರೂಪಡೆಯುತ್ತಲೇ ಇವೆ. ಇದಕ್ಕೆ ಐತಿಹಾಸಿಕವಾಗಿ ಏನೇ ಕಾರಣಗಳಿದ್ದರೂ ಅದರ ಉದ್ದೇಶ ಇಷ್ಟೇ ಅದು ಕೇವಲ ಅಸ್ಪೃಶ್ಯತೆಯ ಸಮಸ್ಯೆಯಲ್ಲ. ಅಧಿಕಾರ ಅಂದರೆ ಬಡವರು ಶ್ರೀಮಂತರಾಗಬಾರದು, ಬಲಹೀನ ಬಲವಂತನಾಗಬಾರದು, ಅಳಿಸಿಕೊಳ್ಳುವವರು, ಅಳುವವರಾಗ ಬಾರದು, ಕೊಂಡುಕೊಳ್ಳುವವರು ಉತ್ಪಾದನೆ ಮಾಡಬಾರದು, ದುಡಿಯವವರು ಧಣಿಗಳಾಗಬಾರದು, ಭೂಹೀನರು ಭೂ ಒಡೆಯರಾಗಬಾರದು, ಅಜ್ಞೆ ಪಾಲಿಸುವವರು ಪ್ರಶ್ನೆ ಕೇಳಬಾರದು ಎಂಬ ಮೊದಲಾದ ಅಂಶಗಳು ಅಸ್ಪೃಶ್ಯತೆಯೊಂದಿಗೆ ತಳುಕು ಹಾಕಿಕೊಂಡಿವೆ. ಇದರ ಭಾಗವಾಗಿಯೇ ಗುಲಾಮಗಿರಿ ಪದ್ಧತಿ, ಜೀತಪದ್ಧತಿ, ಕಾರ್ಮಿಕಪದ್ಧತಿ ಮತ್ತು ಕೂಲಿ ವ್ಯವಸ್ಥೆಯು ಜಾರಿಗೆ ಬಂದಿತ್ತು. ಆದರೆ ಕಾಲದ ಚರಿತ್ರೆಯಲ್ಲಿ ಸ್ಥಿತಂತ್ಯರಗೊಂಡವು ಪರಿಣಾಮವಾಗಿ ಸಮಾಜವು ಹೊಸ ಹೊಸ ವಿಧಾನಗಳನ್ನು ಶೋಧಿಸುತ್ತಲೇ ಮುಂದುವರಿಯಿತ್ತು. ಪ್ರಜಾಪ್ರಭುತ್ವ ಮತ್ತು ಸಂವಿಧಾನಿಕ ವ್ಯವಸ್ಥೆ ಜಾರಿಗೆ ಬಂದ ಮೇಲೆ ಶ್ರೀಮಂತರು ಹತಾಶರಾಗಿದ್ದಂತು ನಿಜ. ಯಾಕೆಂದರೆ ಯಾವುವು ಶ್ರೀಮಂತರ ಕೈಗೆ ಅಷ್ಟೊಂದು ಸುಲಭವಾಗಿ ಸಿಗುತ್ತಿಲ್ಲ. ಹಾಗಾಗಿ ರಾಜಕೀಯ ವ್ಯವಸ್ಥೆಯ ಮೂಲಕ ಬಲಹೀನ ವರ್ಗಗಳನ್ನು ಮಣಿಸಲು ಪ್ರಯತ್ನಿಸಿದರೆ. ಮತ್ತೊಂದು ಕಡೆಯಿಂದ ಉತ್ಪಾದನಾ ವಿಧಾನ ಮೂಲಕ ಬಹುಸಂಖ್ಯಾತರಾದ ಅಸ್ಪೃಶ್ಯರನ್ನು ಕೆಳವರ್ಗದವರನ್ನು ಹತ್ತಿಕ್ಕಲು ಪ್ರಯತ್ನ ಮಾಡುತ್ತಲೇ ಇದ್ದಾರೆ. ಯಾಕೆಂದರೆ ಅವರ ಕೆಲಸಕಾರ್ಯಗಳಿಗೆ ವೈಭೋಗ ಜೀವನಕ್ಕೆ ದುಡಿಯುವ ಕೈಗಳು ಕೆಲಸಕ್ಕೆ ಬೇಕು ಇದಕ್ಕಾಗಿ ರಾಜಕೀಯ ವ್ಯವಸ್ಥೆ ಮತ್ತು ಪ್ರಾಬಲ್ಯವುಳ್ಳವು. ಭಾರತದಲ್ಲಿ ಬಹುಸಂಖ್ಯಾತರ ದಲಿತರನ್ನು ಪರತಂತ್ರ ವ್ಯವಸ್ಥೆಯಲ್ಲಿ (ಪರಾವಲಂಬಿಗಳಾಗಾಗಿ) ದೂಡಲು ನಿರಂತರ ಪ್ರಯತ್ನ ಮಾಡುತ್ತಾ ಸದ್ಯಕ್ಕಾಗಿ ಶಿಕ್ಷಣ ವ್ಯವಸ್ಥೆ ಬದಲಿಸುವದು ಉದಾ: ಸಿ.ಬಿ.ಎಸ್.ಸಿ. ಪಠ್ಯಕ್ರಮ ಎನ್.ಸಿ.ಆರ್.ಟಿ. ಪಠ್ಯಕ್ರಮ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಶುಲ್ಕ ಹೆಚ್ಚು ಮಾಡಿ ಅವುಗಳ ಹತ್ತಿರ ದಲಿತರು ಸುಳಿಯಬಾರದು ಮತ್ತು ಕನಸು ಕಾಣುಬಾರದು ಎಂಬ ತಂತ್ರಗಾರಿಕೆ ಮಾಡುವುದು. ಅದೇ ಹಾದಿಯಾಗಿ ಉದ್ಯೋಗ ಸಿಗದಂತೆ ಮಾಡವ ದೃಷ್ಟಿಯಿಂದ ಸಂಸ್ಕೃತ, ಬೋಧನೆ, ಸಂಗೀತ, ಇಂಗ್ಲೀಷ್ ಕಡ್ಡಾಯ ಮೊದಲಾದವುಗಳ ಮೂಲಕ ಅವಕಾಶ ಪಡೆಯುದಂತೆ ಹುನ್ನಾರು ಮಾಡುತ್ತಿದ್ದರೆ.

ಆದರೆ ಇವುಗಳೆಲ್ಲವನ್ನು ಮೆಟ್ಟಿನಿಲ್ಲುವ ಶಕ್ತಿ ದಲಿತರಿಗಿದೆ ಇಂತಹ ವಿದ್ಯೆಗಳನ್ನು ಅವರು ಹುಟ್ಟಿನಿಂದಲೆ ಕಲಿತು ಬಂದಿದ್ದಾರೆ. ಉದಾಹರಣೆಗೆ ಒಂದು ಬೆಕ್ಕಿನಮರಿಯನ್ನು ಕಾಲುವೆಯಲ್ಲಿ ಹಾಕಿದರೆ ಅದು ಈಜಿ ದಡಸೇರುತ್ತದೆ. ಅದೇ ರೀತಿ ಕರುವನ್ನು ನೀರಿನಲ್ಲಿ ತಳ್ಳಿದರೆ ಅದು ಈಜಿ ದಡಸೇರುತ್ತದೆ. ಹೀಗೆ ದಲಿತರು ಸಮಾಜ ಎಂಬ ನದಿಯಲ್ಲಿ ದಲಿತರು ಈಜು ಕಲೆಯನ್ನು ಹುಟ್ಟಿನಿಂದಲೇ ಕಲಿತ್ತಿದ್ದಾರೆ. ಆದರೆ ಶ್ರೀಮಂತರಿಗೆ ಈಜಲು ಸಾಧನ ಸಲಕರಣೆಗಳು ಬೇಕು, ಈಜಲು ತರಬೇತಿ ಬೇಕು, ಅದಕ್ಕೊಂದು ಪಠ್ಯಕ್ರಮ ಬೇಕು, ಒಬ್ಬ ಕಲಿಸುವ ಅಥವಾ ತರಬೇತುದಾರ ಬೇಕು ಹಣ ಬೇಕು ಇವ್ಯಾವು ಇಲ್ಲದ ದಲಿತರು ಎಷ್ಟೊಂದು ಬಲಿಷ್ಠವಾಗಿದ್ದಾರೆ ಎಂಬ ಹತಾಸೆಯಿಂದ ಅವರ ಮೇಲೆ ಹಲ್ಲೆಗಳು, ದೈಹಿಕ ಹಿಂಸೆಗಳು ನೀಡುತ್ತಿದ್ದಾರೆ. ಇಂತಹ ಪ್ರಕರಣಗಳು ಭಾರತದಾದ್ಯಂತ ಈಗ ನಡೆಯುವ ಹೊಸ ವಿಧಾನಗಳಾಗಿವೆ.

ಉತ್ಪಾದನಾ ವ್ಯವಸ್ಥೆ ಮೇಲೆ, ಅಧಿಕಾರದ ಚುಕ್ಕಾಣಿ ಮೇಲೆ, ಹಿಡಿತ ಸಾಧಿಸಲು ಸಾಧ್ಯವಾಗುತ್ತಿಲ್ಲ ಹಾಗಾಗಿ ಮೇಲ್ವರ್ಗ ಅಥವಾ ಶ್ರೀಮಂತರಲ್ಲಿ ಅಲ್ಪಸಂಖ್ಯಾತ ಮನೋಭಾವ ಕಾಡುತ್ತಿದೆ. ಹಾಗಾಗಿ ಬಹುಸಂಖ್ಯಾತರಾದ ದಲಿತರನ್ನು ಅಧಿಕಾರದಿಂದ ದೂರ ಇಡಲು ಆನೇಕ ಪ್ರಯತ್ನ ಮಾಡುತ್ತ ಬಂದಿದ್ದಾರೆ. ಅಂತಹ ಪ್ರಯತ್ನಗಳಲ್ಲಿ ಪ್ರಮುಖವಾದವುಗೆಳೆಂದರೆ ೨೦೦೯ರಲ್ಲಿ ಕೊಲೆ, ಸುಲಿಗೆ, ಅಪಹರಣ, ಡಕಾಯಿತಿ-ದರೊಡೆ ಅಸ್ತಿಗೆಬೆಂಕಿ, ಹಲ್ಲೆ, ಹಕ್ಕುಗಳ ಉಲ್ಲಂಘನೆ, ಅಸ್ಪೃಶ್ಯತೆ ಇತರೆ ಕಾರಣಗಳಿಂದ ಒಟ್ಟು ೩೩,೫೯೪ ಪ್ರಕರಣಗಳು ದಾಖಲಾಗಿವೆ. ೨೦೧೦- ೩೨,೭೧೨ ಪ್ರಕರಣಗಳು, ೨೦೧೧ರಲ್ಲಿ ೩೩,೭೧೯ ಪ್ರಕರಣಗಳು, ೨೦೧೨ರಲ್ಲಿ ೩೩,೬೫೫ ಪ್ರಕರಣಗಳು, ೨೦೧೩ರಲ್ಲಿ ೩೯,೪೦೮ ಪ್ರಕರಣಗಳು. ಅದೇ ರೀತಿಯಾಗಿ ೨೦೧೪ರಲ್ಲಿ ೪೭,೦೬೪ಗಳು ದಾಖಲಾಗಿವೆ. ಒಟ್ಟು ೨೦೦೯-೨೦೧೪ರವರೆಗೆ ಕೇವಲ ೬ ವರ್ಷಗಳ ಅವಧಿಯಲ್ಲಿ ೨,೨೦,೧೫೨ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ನಾಗರಿಕ ಹಕ್ಕಗಳ ರಕ್ಷಣಾ ಕಾಯ್ದೆ ಅಡಿ ದಾಖಲಾದ ದೂರು, ಅಸ್ಪೃಶ್ಯತೆ ನಿವಾರಣಾ ಕಾಯ್ದೆ ಅಡಿ ದಾಖಲಾದ ದೂರುಗಳು ಎಂಬುದಾಗಿ ಎನ್.ಸಿ.ಆರ್.ಬಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.[೬] ಈ ಎಲ್ಲ ಪ್ರಕರಣಗಳು ದಲಿತರ ಏಳಿಗೆಯನ್ನು ಸಹಿಸದೆ ಹತಾಸೆಗೊಂಡವರು ತಮ್ಮ ಅಂಗಿಯನ್ನು ಹರಿದುಕೊಳ್ಳದೆ ಬೇರೆಯವರ ಅಂಗಿಯನ್ನು ಹರಿಯುತ್ತಿದ್ದಾರೆ. ದಲಿತ ಸಮುದಾಯ ಇಂತಹ ಕೃತ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಎಚ್ಚರದಿಂದ ಇರಬೇಕಾದ ಅಗತ್ಯತೆ ಇದೆ.

ಆಂಧ್ರ ಪ್ರದೇಶದ ಅಧ್ಯಯನ

೧೯೭೭ರಲ್ಲಿ ನಡೆದ ಅಧ್ಯಯನದಲ್ಲಿ ೬ ಹಳ್ಳಿಗಳಿಂದ ಸುಮಾರು ೫೯೬ ದಲಿತರನ್ನು ಸಂದರ್ಶಿಸಲಾಗಿತ್ತು. ಬಹುಪಾಲು ದಲಿತರಿಗೆ ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸಲಾಗಿತ್ತು. ಸಾರ್ವಜನಿಕ ರಸ್ತೆಗಳಲ್ಲಿ ದಲಿತ ಕುಟುಂಬಗಳ ಮದುವೆಯ ಮೆರವಣಿಗೆಯನ್ನು ನಿಷೇಧಿಸಲಾಗಿತ್ತು. ಸವರ್ಣೀಯರ ಮನೆಗಳಲ್ಲಿ, ವಠಾರಗಳಲ್ಲಿ ಮಾತ್ರ ದೊರಕುತ್ತಿತ್ತು ಮತ್ತು ಅಲ್ಲಿ ದಲಿತರಿಗೆ ಪ್ರವೇಶ ನಿಷಿದ್ಧವಾಗಿತ್ತು. ಮೂಲಭೂತ ಸೌಲಭ್ಯಗಳ ಬಳಕೆಗಾಗಿ ತಮ್ಮ ಹಕ್ಕನ್ನು ಪ್ರತಿಪಾದಿಸುದ ಪರಿಶಿಷ್ಟ

ಜಾತಿಯ ಸಮುದಾಯಗಳ ಮೇಲೆ ಹಲ್ಲೆ ಮಾಡಲಾಗುತ್ತಿತ್ತು, ಅವರ ಮನೆಗಳನ್ನು ಲೂಟಿ ಮಾಡಲಾಗುತ್ತಿತ್ತು. ಹಕ್ಕನ್ನು ಕೇಳಿದವರ ಕುಟುಂಬದ ಮೇಲೆ ಹಿಂಸೆ, ಅತ್ಯಾಚಾರ, ಕೊಲೆ ಅಪಹರಣದ ಪ್ರಕರಣಗಳು ಸಾಮಾನ್ಯವಾಗಿದ್ದವು. ಅಲ್ಲದೆ ಚುನಾವಣೆಯ ಸಂದರ್ಭದಲ್ಲಿ ಮತಚಲಾವಣೆಗೆ ಅಡ್ಡಿಪಡಿಸುವುದು, ಮುಂತಾದ ಪ್ರಕರಣಗಳು ಅಸ್ಪೃಶ್ಯತೆಯ ಕರಾಳ ಸ್ವರೂಪದ ಚಿತ್ರಣವನ್ನು ನೀಡುತ್ತದೆ.[೮]

ಭಾರತದಲ್ಲಿ ಅಸ್ಪೃಶ್ಯತೆಯನ್ನು ಮನು ಸೃಷ್ಟಿಸಿದ ಶಾಸನ ಎಂದು ಅಭಿಪ್ರಾಯಪಡುತ್ತ ಬರಲಾಗಿದೆ. ಆದರೆ ವಾಸ್ತವದ ವೈರುಧ್ಯಗಳಿಗೆ ಒಂದು ಕಾರಣ ಗತ ವ್ಯವಸ್ಥೆಯ ಲಕ್ಷಣಗಳು ಇಂದಿಗೂ ಮುಂದುವರೆಯುತ್ತ ಬಂದಿವೆ. ಇದಕ್ಕೆ ಕಾರಣವೆಂದರೆ ನಮ್ಮ ರಾಷ್ಟ್ರೀಯ ಚಳುವಳಿಯ ದೌರ್ಬಲ್ಯಗಳು. ಆ ಚಳುವಳಿ ಆಧುನಿಕ ಪೂರ್ವಯುಗದ ಜಮೀನ್ದಾರಿ ಒಡೆತನದ ಸಂಸ್ಕೃತಿಯನ್ನು ಎದುರಿಸಲಾರದೆ ಹೋಯಿತು. ಜಗತ್ತಿನಾದ್ಯಂತ ಅನೇಕ ದೇಶಗಳಲ್ಲಿ ನಡೆದ ಆಧುನಿಕ ಚಳುವಳಿಗಳು ಅಂದು ಅಸ್ತಿತ್ವದಲ್ಲಿದ್ದ ರಾಜರ ಆಡಳಿತವನ್ನು ಜಮೀನ್ದಾರಿ ಸಂಬಂಧಗಳನ್ನು ನಾಶಮಾಡಿ, ಸ್ವಾತಂತ್ರ್ಯ, ಸಮಾನತೆ, ಸೋದರತ್ವ ಎಂಬ ಮೌಲ್ಯಗಳನ್ನು ಮುಂದಕ್ಕೆ ತಂದವು. ಆದರೆ ಅದು ಭಾರತದಲ್ಲಿ ಸಾಧ್ಯವಾಗಲಿಲ್ಲ. ಆಧುನಿಕಪೂರ್ವ ಸಮಾಜದಲ್ಲಿ ಭೂಮಿಯ ಸಂಬಂಧಗಳು ಅರಸೊತ್ತಿಗೆಯ ಲಕ್ಷಣಗಳು ಮುಂದುವರಿಯುತ್ತಲೇ ಬಂದವು. ಅವುಗಳ ಫಲವಾಗಿಯೇ ಅಸ್ಪೃಶ್ಯತೆಯಂತಹ ಸಾಮಾಜಿಕ ದುರಾಚರಗಳು, ಸಾಮಾಜಿಕ ಅಸಮಾನತೆಗಳು ಇಂದಿಗೂ ಜೀವಂತವಾಗಿ ಉಳಿದುಕೊಂಡಿವೆ.

ಆದರೆ ಅಸ್ಪೃಶ್ಯತೆ ಆಚರಣೆಯನ್ನು ಸರ್ಕಾರ ಮತ್ತು ಸಂವಿಧಾನಗಳು ನಿಷೇಧಿಸಿವೆ. ಆದರೆ ಇಂದಿಗೂ ಸಹ ಹೇಗೆ ಮತ್ತು ಯಾವ ಯಾವ ವಿಧಾನಗಳ ಮೂಲಕ ಉಳಿಸಿಕೊಂಡು ಬರಲಾಗುತ್ತಿದೆ ಎಂಬುದನ್ನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಆಯೋಗ ಬಿಡುಗಡೆ ಮಾಡಿದ ವರದಿಗಳಲ್ಲಿ ಈಗಲೂ ಸಹ ದೇಶದ ಅನೇಕ ಕಡೆಗಳಲ್ಲಿ ಅಸ್ಪೃಶ್ಯತೆ ಮುಂದುವರಿಯುತ್ತಲೇ ಇದೆ ಎಂದು ಬಹಿರಂಗಪಡಿಸಿದೆ. ಬಹುಸಂಖ್ಯಾತ ದಲಿತರು ಬೀದಿಗಳಲ್ಲಿ, ದೂರದ ಹೊಲಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಕರುಣಾನಿಧಿ ಅವರು ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದಾಗ 'ಸಮತುವ' ಪುರಗಳೆಂಬ ಕಾಲೋನಿಗಳನ್ನು ಏರ್ಪಾಡು ಮಾಡಿದರು. ರಾಜ್ಯ ಸರ್ಕಾರ ಕಟ್ಟಿಸಿದ ಈ ಕಾಲೋನಿಯಲ್ಲಿ ಜಾತಿ ಭೇದಗಳಿಲ್ಲದೆ ಅವಕಾಶ ಕಲ್ಪಿಸಲಾಯಿತು. ಆದರೆ ಎರಡು ವರ್ಷ ಕಳೆಯುವ ಹೊತ್ತಿಗೆ ದಲಿತರ ಮನೆಗಳಿಗೆ ನೀಲಿ ಬಣ್ಣ ಹಚ್ಚಿದರು.

ಆಂಧ್ರ ಪ್ರದೇಶದಲ್ಲಿ ದಲಿತರನ್ನು ಯಾವ ಯಾವ ರೀತಿಯಲ್ಲಿ ಧಮನ ಮಾಡಲಾಗುತ್ತದೆ ಎಂಬುದನ್ನು ಗುರುತಿಸುತ್ತ ದಲಿತರ ಪ್ರಜ್ಞೆ ಮತ್ತು ದಲಿತ ಚಳುವಳಿಯನ್ನು ಧಮನಮಾಡುವ ಭಾಗವಾಗಿ ದಲಿತ ಮಹಿಳೆಯರ ಮೇಲೆ ದೌರ್ಜನ್ಯ ಮಾಡುತ್ತಲೆ ಬಂದಿದ್ದಾರೆ. ೨೦೦೨ ಮತ್ತು ೨೦೦೩ ರಲ್ಲಿ ಆಂಧ್ರ ಪ್ರದೇಶದ ದಲಿತರ ಮೇಲೆ ಕರಾವಳಿ ಆಂಧ್ರದಲ್ಲಿ ೨೭ ದೌರ್ಜನ್ಯಗಳು ಹಾಗೂ ರಾಯಲಸೀಮಾ ಆಂಧ್ರದಲ್ಲಿ ೧೯ ತೆಲಂಗಾಣದಲ್ಲಿ ೪೨ ಇವು ಅಸ್ಪೃಶ್ಯರನ್ನು ಮಟ್ಟಹಾಕಲೆಂದೇ

ನಡೆದ ದೌರ್ಜನ್ಯಗಳಾಗಿವೆ. ಅದೇ ರೀತಿಯಾಗಿ ೧೯೯೯-೨೦೦೩ರ ನಡುವೆ ಆಂಧ್ರಪ್ರದೇಶದಲ್ಲಿ ೭೩೩ ದೌರ್ಜನ್ಯಗಳು ಜಾತಿಯ ಕಾರಣಕ್ಕಾಗಿ ಮತ್ತು ಜೀವನೋಪಾಯ ಸೌಲಭ್ಯ ಕೇಳಿದ್ದಕ್ಕಾಗಿ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ೧೯೭೦ರಲ್ಲಿ ಕೇವಲ ಭೂಮಿಯ ತಗಾದೆಗಳಲ್ಲಿ ದೇಶದಾದ್ಯಂತ ೧೧೭ ಮಂದಿ ದಲಿತರನ್ನು ಹತ್ಯೆ ಮಾಡಲಾಗಿದೆ. ೧೯೬೬-೯೬ರಲ್ಲಿ ಮಹಾರಾಷ್ಟ್ರದಲ್ಲಿ ೬೩, ಉತ್ತರ ಪ್ರದೇಶದಲ್ಲಿ ೩೩೨, ಪಂಜಾಬಿನಲ್ಲಿ ೭೩, ಗುಜರಾತಿನಲ್ಲಿ ೩೪ ಜನ ದಲಿತರು ಹತ್ಯೆಗಳಿಗೆ ಗುರಿಯಾದವರು ಎಂದು ಕೇಂದ್ರ ಗೃಹ ಇಲಾಖೆ ವರದಿ ಪ್ರಕಟಿಸಿದೆ. ಅದೇ ರೀತಿಯಾಗಿ ಅವರು ಕುಡಿಯುವ ನೀರಿನಲ್ಲಿ ಬಾವಿಗಳಲ್ಲಿ ಮಲಮೂತ್ರಗಳನ್ನು ಹಾಕುವುದು. ಪ್ರಾಣಿಗಳ ಕಳೆಬರಗಳನ್ನು ಹಾಕುವುದು, ಬೆಳೆಗಳನ್ನು ನಾಶ ಮಾಡುವುದು. ಮದುವೆ ಮೆರವಣಿಗೆ ಹೋಗದಂತೆ ಅಡ್ಡಿ ಪಡಿಸುವುದನ್ನು ನಿರಂತರವಾಗಿ ಮಾಡುತ್ತಲೆ ಬಂದಿದ್ದಾರೆ, ದಲಿತರ ಮೂಲ ಸಮಸ್ಯೆಯೆಂದರೆ ಐಕ್ಯತೆ, ಹಣಬಲ, ಹಾಗಾಗಿ ಇದು ಅವರ ದೌರ್ಬಲ್ಯವೆನಿಸುತ್ತದೆ. ಅದು ಇತರ ಸಮಸ್ಯೆಗಳಿಗೂ ಮೂಲವಾಗಿ ಕಾಡುತ್ತವೆ.

ಒಡಿಸ್ಸಾದ ಅಧ್ಯಯನ

೧೯೮೭-೮೮ರ ಅವಧಿಯಲ್ಲಿ ಎರಡು ಗ್ರಾಮಗಳಿಂದ ೬೫ ದಲಿತರನ್ನು ಸಂದರ್ಶನ ಮಾಡಲಾಗಿತ್ತು. ಎರಡು ಗ್ರಾಮಗಳಲ್ಲಿ ಪರಿಶಿಷ್ಟ ಜಾತಿಯ ಸಮುದಾಯಗಳ ಕೇರಿಯನ್ನು ಸವರ್ಣೀಯರ ವಾಸಸ್ಥಾನದಿಂದ ಪ್ರತ್ಯೇಕಿಸಲಾಗಿತ್ತು. ಆರಾ ಎರಡು ಗ್ರಾಮಗಳಲ್ಲಿ ಶೇ. ೮೦ ರಷ್ಟು ದಲಿತರಿಗೆ ಸಾರ್ವಜನಿಕ ಬಾವಿ, ಕೊಳವೆ ಬಾವಿಗಳಿಂದ ಕುಡಿಯುವ ನೀರಿನ ಸೌಲಭ್ಯವನ್ನು ನಿರಾಕರಿಸಲಾಗಿತ್ತು. ಅದೇ ರೀತಿಯಾಗಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಬಾವಿಗಳನ್ನು ಗುರುತಿಸಲಾಗಿತ್ತು. ಗ್ರಾಮದ ಸಮುದಾಯಗಳಿಗೆ ಕ್ಷೌರದ ಅಂಗಡಿ ದೇವಸ್ಥಾನ, ಅಗಸರ ಸೇವೆಗಳಲ್ಲಿ ಸೇವೆ ನಿಷಿದ್ಧವಾಗಿತ್ತು. ಗ್ರಾಮ ಸಭೆಗಳಲ್ಲಿ ಶೇ. ೬೪ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕತೆ ಮತ್ತು ಅಸಮಾನತೆಯನ್ನು ತೋರಿಸಲಾಗುತ್ತಿತ್ತು. ಶೇ.೮೦ರಷ್ಟು ಹೋಟೆಲುಗಳಲ್ಲಿ, ಶೇ.೭೦ರಷ್ಟು ಅಂಗಡಿಗಳಲ್ಲಿ, ಶೇ.೮೦ರಷ್ಟು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿಷೇಧಗೊಳಿಸಲಾಗಿತ್ತು. ಅದೂ ಹೇಗೋ ಶಾಲೆ ಮತ್ತು ಆರೋಗ್ಯ ಕೇಂದ್ರಗಳಿಗೆ ಪ್ರವೇಶಕ್ಕೆ ಅಭ್ಯಂತರವಿರಲ್ಲಿಲ್ಲ. ಉತ್ತರ ಭಾರತದಲ್ಲಿ ಇದು ಕೇವಲ ಒಡಿಸ್ಸಾ ರಾಜ್ಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ ಬಹುತೇಕ ರಾಜ್ಯಗಳಲ್ಲಿ ಇದರ ಸ್ವರೂಪದಲ್ಲಿ ವ್ಯತ್ಯಾಸವನ್ನು ಕಂಡರೂ ಅದರ ಉದ್ದೇಶ ಮಾತ್ರ ಒಂದೇ ಆಗಿರುತ್ತದೆ. ಎಂಬುದು ಅಧ್ಯಯನದ ಸಾರಂಶವಾಗಿದೆ.

ಗುಜರಾತ್ ಅಧ್ಯಯನ

ಅಸ್ಪೃಶ್ಯತೆ ಆಚರಣೆಯನ್ನು ಅಧ್ಯಯನ ಮಾಡಲು ೧೯೭೬ರಲ್ಲಿ ೬೯ ಗ್ರಾಮಗಳಲ್ಲಿ ಅಧ್ಯಯನ ಕೈಗೊಳ್ಳಲಾಗಿತ್ತು. ಶೇ.೧೧ರಷ್ಟು ಪ್ರಮಾಣದ ಗ್ರಾಮೀಣ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಶಿಕ್ಷಕರು ಇದ್ದರು. ದಕ್ಷಿಣ ಗುಜರಾತನ್ನು ಹೊರತುಪಡಿಸಿ ಇನ್ನಿತರ ಭಾಗಗಳಲ್ಲಿ ದಲಿತ ಶಿಕ್ಷಕರಿಗೆ ಸವರ್ಣೀಯರ ಕಾಲೋನಿಗಳಲ್ಲಿ ಮನೆ ಬಾಡಿಗೆಗೆ ನೀಡುತ್ತಿರಲಿಲ್ಲ. ಶೇ.೨೩ರಷ್ಟು ಪರಿಶಿಷ್ಟ ಜಾತಿ ಸಮುದಾಯಗಳಿಗೆ

ಮೇಲ್ಜಾತಿಯ ಕಾಲೋನಿಗಳಿಗೆ ಪ್ರವೇಶ ಇರಲಿಲ್ಲ. ಶೇ.೯ರಷ್ಟು ಪ್ರಮಾಣದಲ್ಲಿ ಅಂಚೆ ಕಚೇರಿ ಶೆ.೩೦ರ ಪ್ರಮಾಣದಲ್ಲಿ ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಮತ್ತು ಶೆ.೭೫ರ ಪ್ರಮಾಣದಲ್ಲಿ ದಲಿತರಿಗೆ ದೇವಸ್ಥಾನದ ಒಳಗಿನ ಪ್ರಾಂಗಣದಲ್ಲಿ ಪ್ರವೇಶವಿರಲಿಲ್ಲ. ೪೬ ಗ್ರಾಮಗಳಲ್ಲಿ ದಲಿತರಿಗೆ ಪ್ರತ್ಯೇಕ ಕುಡಿಯುವ ನೀರಿನ ವ್ಯವಸ್ಥೆ ಇತ್ತು. ಅಹಮದಬಾದಿನ ಹಳ್ಳಿಯೊಂದರಲ್ಲಿ ದಲಿತ ಸಮುದಾಯದ ಆಟೋ ಡ್ರೈವರ್ ಸವರ್ಣೀಯ ಸರಪಂಚನಿಂದ ಬಾಡಿಗೆ ಕೇಳಿದಾಗ ಡ್ರೈವರನ್ನು ಥಳಿಸಲಾಗಿತ್ತು. ಇದು ವಿರಳ ಘಟನೆಯಲ್ಲ ಗುಜರಾತಿನಲ್ಲಿ ಇಂತಹ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಶೇ.೭೦ರಷ್ಟು ಕ್ಷೌರಿಕರು ದಲಿತರಿಗೆ ಕ್ಷೌರ ಮಾಡಲು ನಿರಾಕರಿಸುತ್ತಾರೆ, ಹೀಗೆ ಗುಜರಾತ್, ಒರಿಸ್ಸಾ, ಹರಿಯಾಣ, ಜಾರ್ಖಂಡ, ಮಧ್ಯಪ್ರದೇಶ ಮೊದಲಾದವುಗಳಲ್ಲಿ ಅಸ್ಪೃಶ್ಯತೆಯನ್ನು ಬಹಳ ಕ್ರೂರ ರೀತಿಯಲ್ಲಿ ಆಚರಿಸಿಕೊಂಡು ಬರಲಾಗುತ್ತದೆ.[೯]

ಕರ್ನಾಟಕದ ಅಧ್ಯಯನ

ಕರ್ನಾಟಕದಲ್ಲಿ ಅಸ್ಪೃಶ್ಯತೆಯನ್ನು ೧೯೭೩-೭೪ರಲ್ಲಿ ಅಧ್ಯಯನಕ್ಕಾಗಿ ೭೬ ಗ್ರಾಮಗಳನ್ನು, ೩೮ ನಗರ ಪ್ರದೇಶಗಳನ್ನು, ೩೩೩೦ ಕಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಇದರಲ್ಲಿ ಶೇ.೭೩ರಷ್ಟು ಕುಟುಂಬಗಳು ಪರಿಶಿಷ್ಟ ಜಾತಿ ಕುಟುಂಬಗಳಾಗಿದ್ದುವು. ಇದರಲ್ಲಿ ಶೇ. ೬೦ರಷ್ಟು ಕುಟುಂಬಗಳಿಗೆ ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸಲಾಗಿತ್ತು. ಶೇ.೫೦ರಷ್ಟು ಕುಟುಂಬಗಳನ್ನು ಹೋಟೆಲು ಅಂಗಡಿಗಳಿಗೆ ಪ್ರವೇಶ ನಿರಾಕರಿಸಲಾಗಿತ್ತು. ಇದರ ಪ್ರಮಾಣ ಶೇ.೬ ರಷ್ಟು ನಗರ ಪ್ರದೇಶಗಳಲ್ಲಿತ್ತು. ಗ್ರಾಮಗಳಲ್ಲಿ ಶೇ. ೫೦ ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ದಲಿತರಿಗೆ ಕ್ಷೌರ ಮತ್ತು ಬಟ್ಟೆ ಹೊಗೆಯುವ ಸೇವೆಯನ್ನು ನಿರಾಕರಿಸಲಾಗಿದೆ. ೭೦ರ ದಶಕದ ಆರಂಭದ ದಿನಗಳವರೆಗೂ ಹತ್ತರಲ್ಲಿ ಒಬ್ಬ ದಲಿತ ವ್ಯಕ್ತಿಗೆ ಗ್ರಾಮದಲ್ಲಿ ಅಂಗಡಿಗಳ ಪ್ರವೇಶ ನಿರಾಕರಿಸಲಾಗಿತ್ತು ಮತ್ತು ಹತ್ತರಲ್ಲಿ ಒಬ್ಬ ದಲಿತ ಶುಭ್ರವಾದ ಬಟ್ಟೆಯನ್ನು ತೊಡುವುದು ಕಷ್ಟವಾಗಿತ್ತು. ತೊಟ್ಟ ವ್ಯಕ್ತಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದ. ೨೦ ವರ್ಷಗಳ ನಂತರ ಅಂದರೆ ೧೯೯೫ರ ಸುಮಾರಿಗೆ ಮತ್ತೊಂದು ಅಧ್ಯಯನವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಸುಮಾರು ೫೨ ಗ್ರಾಮಗಳಿಂದ ೯೪೧ ಜನರ ಪ್ರತಿಕ್ರಿಯೆಗಳನ್ನು ದಾಖಲಿಸಿಕೊಳ್ಳಲಾಯಿತು. ರಾಜಕೀಯ ಕ್ಷೇತ್ರದಲ್ಲಿ ತಾರತಮ್ಯ ನೀತಿ ಗಣನೀಯವಾಗಿ ಕುಗ್ಗಿತ್ತು. ಇದರ ಹೊರತಾಗಿ ಈ ಎರಡು ದಶಕಗಳಲ್ಲಿ(೧೯೭೪-೯೫) ಅಂತಹ ಗಮರ್ನಾಹ ಬದಲಾವಣೆಗಳು ಆಗಿರಲಿಲ್ಲ. ಇಪ್ಪತ್ತು ವರ್ಷಗಳ ನಂತರವು ನಾಲ್ಕರಲ್ಲಿ ಮೂರು ವ್ಯಕ್ತಿಗಳಿಗೆ ದೇವಸ್ಥಾನಗಳಲ್ಲಿ ಪ್ರವೇಶವಿರಲಿಲ್ಲ. ಧಾರ್ಮಿಕ ಕಾರ್ಯಗಳಿಗೆ ಭಾಗವಹಿಸಲು ಅವಕಾಶವಿರಲಿಲ್ಲ. ಸಾಮಾಜಿಕವಾಗಿ ಬೆರೆಯುವಿಕೆ ಮತ್ತು ಅಂತರ್ ಜಾತಿಯ ಸಂಬಂಧಗಳಿಗೆ ಅವಕಾಶವಿರಲಿಲ್ಲ. ಮೂಕ್ಕಾಲು ಭಾಗದ ದಲಿತರಿಗೆ ಗ್ರಾಮದ ನೀರಿನ ಟ್ಯಾಂಕ್‌ನ ಬಳಕೆಗೆ ನಿರಾಕರಿಸಲಾಗಿತ್ತು. ಸವರ್ಣೀಯರ ಮನೆಗಳಲ್ಲಿ ನೀರನ್ನು ಕುಡಿಯುವುದು ನಿಷಿದ್ದವಾಗಿತ್ತು. ಇದೆಲ್ಲ ಬೆಳವಣಿಗೆಗಳು ನಡೆದಿದ್ದು ಇಪ್ಪತ್ತನೆ ಶತಮಾನದ ಕೊನೆಯಭಾಗ ಮತ್ತು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಸಂದರ್ಭದಲ್ಲಿ ಎನ್ನವುದು ವಿಶೇಷ.[೧೦]

ಕರ್ನಾಟಕದ ಪ್ರಾದೇಶಿಕ ಸ್ಥಿತಿಗತಿಯನ್ನು ಪಂಚಾಯಿತಿಗಳ ಮೂಲಕ ಅಧ್ಯಯನ ಮಾಡಲು ಪ್ರಯತ್ನಿಸಿದ್ದಾರೆ. ವಿಶೇಷವಾಗಿ ದಲಿತರ ಸ್ಥಿತಿಗತಿಯನ್ನು ಕುರಿತು ಉಡುಪಿ ಜಿಲ್ಲೆಯ ಪಂಚಾಯಿತಿಗಳಲ್ಲಿ ಮೀಸಲಾತಿ ಕುರಿತು ಮತ್ತು ಮೀಸಲಾತಿ ಮೂಲಕ ಆಯ್ಕೆಯಾದ ಅಸ್ಪೃಶ್ಯರ ಸ್ಥಿತಿಗತಿಯನ್ನು ವಿಶ್ಲೇಷಣೆಗೆ ಒಳಪಡಿಸುತ್ತ ಉಡುಪಿ ಜಿಲ್ಲೆಯಲ್ಲಿ ಹಳೆಯ ತಲೆಮಾರಿ ದಲಿತರಿಗಿಂತ ಹೊಸ ತಲೆಮಾರಿನ ದಲಿತರು ಉತ್ತಮ ಸ್ಥಿತಿಯಲ್ಲಿದ್ದಾರೆ. ಯಾಕೆಂದರೆ ಶಿಕ್ಷಣ ಮತ್ತು ಉದ್ಯೋಗ ಸ್ವಲ್ಪಮಟ್ಟಿಗೆ ಅವರಲ್ಲಿ ಪ್ರಜ್ಞೆ ಮೂಡಿಸಿದ್ದು ನಿಜ. ಆದರೆ ಹಳೆಯ ತಲೆಮಾರಿನ ದಲಿತರು ಎಲ್ಲಾರೀತಿಯಿಂದಲೂ ಶೋಷಣೆಗೆ ಒಳಗಾಗಿದ್ದಾರೆ. ದೇವಸ್ಥಾನ, ಮನೆ, ಮಠ, ಮಂದಿರಗಳಲ್ಲಿ ನಿಷೇಧಕ್ಕೊಳಗಾಗಿದ್ದಾರೆ. ಶಾಲೆ, ಕೆರೆ, ಬಾವಿ ಮತ್ತು ಧಾರ್ಮಿಕವಾಗಿಯೂ ಸಹ ಅವರ ಸ್ಥಿತಿ ಚಿಂತಾಜನಕವಾಗಿದೆ. ಇದು ಉಡುಪಿ ಜಿಲ್ಲೆಯ ಒಂದು ಋಣಾತ್ಮಕ ಚಿತ್ರಣವಾದರೆ ಇನ್ನು ಧನಾತ್ಮಕ ರೂಪದಲ್ಲಿ ಬಂದ ಮೀಸಲಾತಿ ದಲಿತರಲ್ಲಿ ರಾಜಕೀಯ ಪ್ರಜ್ಞೆ ಮತ್ತು ನಾಯಕತ್ವ ಬೆಳೆಸಿದ್ದು ಸಹ ಅಷ್ಟೇ ನಿಜ. ಆದರೆ ಅದು ಮೇಲ್ವರ್ಗದ ಕಪಿಮುಷ್ಟಿಯಲ್ಲಿದೆ ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ. ಕರ್ನಾಟಕದಲ್ಲಿ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಪ್ರಾದೇಶಿಕವಾಗಿ ನೋಡುವುದಾದರೆ ಅಂತಹ ವ್ಯತ್ಯಾಸವೇನು ಕಾಣುವುದಿಲ್ಲ. ಅದರ ಸ್ವರೂಪ ಮಾತ್ರ ಪ್ರದೇಶ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಒಂದೇ ರೀತಿಯಾಗಿ ಗೋಚರಿಸುತ್ತದೆ.[೧೧]

ಕೋಲಾರ ಜಿಲ್ಲೆಯ ಎರಡು ಗ್ರಾಮಗಳ ಅಧ್ಯಯನದಲ್ಲಿ(ಮಾರ್ಜೇನಹಳ್ಳಿ ಅರಳಹಳ್ಳಿ) ದಲಿತರ ರಾಜಕೀಯ ಸ್ಥಿತಿ ಮತ್ತು ಭಾಗವಹಿಸುವಿಕೆಯನ್ನು ಕ್ಷೇತ್ರಕಾರ್ಯದ ಮೂಲಕ ಅನಾವರಣಗೊಳಿಸಿದ್ದಾರೆ. ಮಾರ್ಜೇನಹಳ್ಳಿಯಲ್ಲಿ ಒಟ್ಟು ಒಂದುನೂರ ಇಪ್ಪತ್ತು ಮನೆಗಳಿವೆ. ಇದರಲ್ಲಿ ಎಂಬಂತ್ತು(ಶೇ. ೬೬.೬೬) ಪರಿಶಿಷ್ಟ ಜಾತಿಯ ಮನೆಗಳಾಗಿವೆ. ಬಹುತೇಕ ಕುಟುಂಬಗಳು ಸಣ್ಣ ಹಿಡುವಳಿದಾರರು, ಕೇವಲ ಎರಡು ಮನೆಗಳು ಮಾತ್ರ ೧೦ ಎಕರೆ ಜಮೀನು ಹೊಂದಿರುವುದು ಬಿಟ್ಟರೆ ಸಮೀಕ್ಷೆಯಲ್ಲಿ ದೊರೆತ ಮಾಹಿತಿ ಪ್ರಕಾರ ೩೦ ಜನ ರೈತರಲ್ಲಿ ೨೫ ಜನ ರೈತರು ಎರಡು ಎಕರೆಗಿಂತ ಕಡಿಮೆ ಭೂಮಿ ಹೊಂದಿದವರು. ಉಳಿದ ೫ ಜನರಲ್ಲಿ ಶೇ.೬.೬೬ ರಷ್ಟು ಜಮೀನು ಹೊಂದಿದ್ದಾರೆ ಉಳಿದವರು ೫ ಎಕರೆಗಿಂತ ಹೆಚ್ಚು ಮತ್ತು ೧೦ ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದಾರೆ. ಗ್ರಾಮ ಲಕ್ಷಣ ಎಂದರೆ ಇಡೀ ಜನಸಂಖ್ಯೆಯ ಶೇ ೬೬.೬೬ರಷ್ಟು ಪರಿಶಿಷ್ಟ ಜಾತಿ, ಇದ್ದಾರೆ. ಉಳಿದಂತೆ ಕುರುಬ, ಗೊಲ್ಲ, ಈಡಿಗ, ಒಕ್ಕಲಿಗ, ಮತ್ತು ಪರಿಶಿಷ್ಟ ಪಂಗಡರವರು ಇದ್ದಾರೆ. ಜನಸಂಖ್ಯೆ ದೃಷ್ಟಿಯಿಂದ ಅತೀ ಕಡಿಮೆ ಸಂಖ್ಯೆಯಲ್ಲಿರುವ ಒಕ್ಕಲಿಗರ ಪ್ರಭಾವ ಎದ್ದು ಕಾಣುತ್ತದೆ. ಬಹುತೇಕವಾಗಿ ಯಾವುದೇ ಕೆಲಸಗಳಿಗೆ ದಲಿತರು ಒಕ್ಕಲಿಗರನ್ನು ಆಶ್ರಯಿಸಬೇಕಾಗಿದೆ. ಈ ಮೇಲ್ವರ್ಗದವರ ಜನಸಂಖ್ಯೆ ಮಾರ್ಜೇನಹಲ್ಲಿಯಲ್ಲಿ ಶೇ.೧೦ಕ್ಕಿಂತ ಜಾಸ್ತಿ ಇಲ್ಲ. ಆದರೂ ಅಲ್ಪಸಂಖ್ಯಾತರಾದ ಒಕ್ಕಲಿಗರೇ ಯಜಮಾನಿಕೆ ಮಾಡುತ್ತಾರೆ. ಮೇಲ್ಜಾತಿಯವರು ಹೊಂದಿರುವ ರಾಮ ದೇವರ ಗುಡಿಗೆ ದಲಿತರ ಪ್ರವೇಶವಿಲ್ಲ. ಆದರೆ ಪರಿಶಿಷ್ಟರು ಹೊಂದಿರುವ ಯಲ್ಲಮ್ಮ ದೇವಸ್ಥಾನಕ್ಕೆ ಹೋಗಬಹುದು. ವಿಶೇಷವೆಂದರೆ ಶೇ.೬೬ರಷ್ಟು ದಲಿತರು ಶೇ೩೦ರಷ್ಟು ಸವರ್ಣೀಯರು

ಇದ್ದಾರೆ. ಗ್ರಾಮದ ಎಲ್ಲಾ ನೀತಿ ನಿರ್ಧಾರ ಪ್ರಕ್ರಿಯೆಯಲ್ಲಿ ಸವರ್ಣೀಯರದ್ದೆ ನಿರ್ಣಾಯಕ ಪಾತ್ರ, ಅಂದರೆ ಇದು ಅಸ್ಪೃಶ್ಯತೆಯ ಕರಾಳ ಸ್ವರೂಪವನ್ನು ತೋರಿಸುತ್ತದೆ. ಆದರೆ ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತರು ಆಳುತ್ತಾರೆ, ಅಲ್ಪಸಂಖ್ಯಾತರು ಆಳಿಸಿಕೊಳ್ಳುತ್ತಾರೆ ಎಂಬ ಅಭಿಪ್ರಾಯವು ಬದಲಿಸಿ ಕೊಳ್ಳಬೇಕಾದ ಸಂದಿಗ್ಧತೆ ಉಂಟಾಯಿತು. ಅಂದರೆ ಪರಿಶಿಷ್ಟ ಜಾತಿಯವರೇ ಬಹುಸಂಖ್ಯಾತರು. ಆದರೆ ಜನಸಂಖ್ಯೆಗೂ ಆ ಜನಾಂಗದ ಚಲನೆಗೂ ಸಂಬಂಧವಿಲ್ಲ. ಪ್ರಜಾಪ್ರಭುತ್ವ ಪದ್ಧತಿಯ ವಯಸ್ಕ ಮತದಾನ ವಿಧಾನದಲ್ಲಿ ಜನಸಂಖ್ಯಾ ಬಲವಿರುವ ಜಾತಿಗಳೇ ಚಲನೆವೊಂದುತ್ತವೆ. ಎಂಬ ಅಭಿಪ್ರಾಯವು ಬದಲಿಸಿಕೊಳ್ಳಬೇಕಾಗುತ್ತದೆ. ಅಂದರೆ ಜಾತಿ ಸಾಮಾಜಿಕ ಸ್ಥಾನಮಾನ ನಿರ್ಧರಿಸಿದರೆ ಆಸ್ತಿ ನೀತಿ ನಿರ್ಧಾರ ಪ್ರಕ್ರಿಯೆಯನ್ನು ನಿರ್ಧರಿಸುತ್ತದೆ. ಹಿಗಾಗಿ ದಲಿತರು ದಲಿತರಾಗಿಯೇ ಇದ್ದಾರೆ ಹೊರತು ಬಲಿತರಾಗಿ ಗೋಚರಿಸುವುದಿಲ್ಲ.[೧೨]

ಶಾಂತಕುಮಾರಿ.ಕೆ, ೨೦೧೫, ರಾಜ್ಯದಲ್ಲಿ ನಲುಗುತ್ತಿರುವ ೨೯ ಸಾವಿರ ದಲಿತಕೇರಿಗಳು ಎಂಬ ಶೀರ್ಷಿಕೆಯಲ್ಲಿ ಕರ್ನಾಟಕದಲ್ಲಿ ೨೧ನೆಯ ಶತಮಾನದಲ್ಲಿ ದಲಿತರ ಸ್ಥಿತಿಯನ್ನು ಅನಾವರಣ ಗೊಳಿಸುತ್ತ ರಾಜ್ಯದಲ್ಲಿ ಇನ್ನೂ ಕೂಡ ದಲಿತಕೇರಿಗಳು ಹೆಚ್ಚು ಕಮ್ಮಿ ಹಾಗೆಯೇ ಉಳಿದುಕೊಂಡಿವೆ. ಇದು ದಲಿತರನ್ನು ನೋಡುವ ದೃಷ್ಟಿಕೋನ ಬದಲಾಗಿಲ್ಲ ಎನ್ನುವ ಪರಿಪಾಠವನ್ನು ತೋರಿಸುತ್ತದೆ. ಇಂತಹ ಅನೇಕ ನಿದರ್ಶನಗಳು ಆಗಾಗ ಗೋಚರಿಸುತ್ತವೆ. ಇದರ ಜೊತೆಗೆ ಶಿಕ್ಷಣ ಪಡೆದ ದಲಿತರನ್ನು ಸಂಶಯದಿಂದ ನೋಡುವುದು, ಒಳ್ಳೆಯ ಬಟ್ಟೆ ಹಾಕಿಕೊಂಡು ಊರಲ್ಲಿ ನಿರ್ಭಯವಾಗಿ ಓಡಾಡುವ ಪರಿಸ್ಥಿತಿ ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲವಾಗಿದೆ. ಅಂದರೆ ಅಸ್ಪೃಶ್ಯರು ಮೇಲೆ ಬರುವುದು, ಚೆನ್ನಾಗಿರುವುದು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.[೧೩]

ರಾಯಚೂರು ಜಿಲ್ಲೆಯ ಇತಿಹಾಸವನ್ನು ಮೆಲುಕು ಹಾಕುತ್ತಾ ಕರ್ನಾಟಕ ಶಾಸನಗಳಲ್ಲಿ ರಾಯಚೂರು ಜಿಲ್ಲೆಯ ಶಾಸನಗಳ ಮೂಲಕ ಅಸ್ಪೃಶ್ಯತೆಯ ಆಚರಣೆಯನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ರಾಯಚೂರು ಜಿಲ್ಲೆಯ ಆರ್ಥಿಕ, ಸಾಮಾಜಿಕ ಜೀವನ, ಧಾಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳ ಬಗ್ಗೆ ವಿವರಣೆ ನೀಡುತ್ತಾ ರಾಯಚೂರು ಜಿಲ್ಲೆಯಲ್ಲಿ ಕ್ರಿ.ಶ ೧೯೭೯ರಲ್ಲಿ ಅಂತ್ಯಜರಿಗೆ ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟ ಪದ್ಧತಿ ಆಚರಣೆಯಲ್ಲಿತೆಂದು ಲಿಂಗಸೂಗೂರು ತಾಲೂಕು, ಕರಡಕಲ್ಲು ಶಾಸನದ ಮೂಲಕ ಉಲ್ಲೇಖಿಸಿದ್ದಾರೆ. ಕ್ರಿ.ಶ ೧೯೭೯ರಲ್ಲಿ ಚಾಲುಕ್ಯರ ಅರಸ ತ್ರಿಭುವನ ಕಾಲದಲ್ಲಿ ಕರಡಕಲ್ಲಿನ ಸೂಕ್ಷ್ಮ ಬೆಟ್ಟ ಮೊದಲಾದ ತಪೋವನದಲ್ಲಿ ವ್ಯಾಪಾರಿಗಳಿಗೆ ಕೆಲವು ಕಟ್ಟಳೆಗಳನ್ನ ವಿಧಿಸಿದ್ದರು. ಅದ್ಯಾವುದೆಂದರೆ ಅಂತ್ಯಜರು ಹಂದಿ, ನಾಯಿಗಳನ್ನ ತರಬಾರದು ಅವರು ಮದುವೆ ಬಂಡಿಯಲ್ಲಿ ಕುಳಿತು ಸವಾರಿ ಬರಬಾರದು, ಹಾಗೆ ಬಂದಿದ್ದಾದರೆ ೧೨ ಬಂಗಾರದ ನಾಣ್ಯವನ್ನು ದಂಡ ಸಲ್ಲಿಸುವರು. ಅಂತ್ಯಜಾತಿಯವರು 'ಯಾರದೊಡ ಮಂಗಡಿ ಬೀದಿಯೊಳಗೆ ಮದುವೆಯಾಗಲು ಬಂಡಿಯನೇರಿ ಬರಸಲ್ಲದು ಬಂದನಪ್ಪಡೆ ಪನ್ನೆರಡು ಗದ್ಯಾಣ ಪನ್ನ ದಣಮಂತುರುವನು' ಎಂಬುದು ಶಾಸನದ ಭಾಷೆಯಾಗಿದೆ. ಅಡಪದರಿಗೆ ದಾನ, ಅಂತ್ಯಜರಿಗೆ ಒಂದೆಡೆ ಸಾಮಾಜಿಕ ಬಹಿಷ್ಕಾರ ವಿಧಿಸಿದರೆ ಮತ್ತೊಂದು ಕಡೆ ನಾಯಿಂದ ಜಾತಿಯವರಿಗೆ

ಸಾಮಾಜಿಕವಾಗಿ ಪುರಸ್ಕರಿಸಿ ಸ್ಥಾನಮಾನ ಕಲ್ಪಿಸಿಕೊಟ್ಟ ವಿಚಾರ ಮಸ್ಕಿ ಮತ್ತು ಮಾನ್ವಿ ಶಾಸನಗಳು ಉಲ್ಲೇಖಿಸುತ್ತವೆ. ವಿಜಯನಗರದ ಸದಾಶಿವರಾಯನಿಗೆ ಸಂಬಂಧಿಸಿದ ೨ ಬೇರೆ ಬೇರೆ ಕಾಲದಲ್ಲಿ ಬಂದಿವೆ. ನಾಯಿಂದ ವೃತ್ತಿಯ ತಿಮೋಜ, ಕೊಂಡೋಜ, ಬದ್ರೋಜ, ಇವರ ಕೋರಿಕೆಯ ಮೇರೆಗೆ ಒಂದು ಗ್ರಾಮವನ್ನು ದಾನ ಕೊಟ್ಟ ವಿಚಾರ ಕ್ರಿ.ಶ ೧೫೪೭ರ ಮಸ್ಕಿ ಶಾಸನ ವಿವರಿಸುತ್ತದೆ. ಕ್ರಿ.ಶ. ೧೫೫೩ರಲ್ಲಿ ಮಾನ್ವಿಯ ಶಾಸನದಲ್ಲಿ ಅದೇ ಮೂರು ಜನ ನಾಯಿಂದರಿಗೆ ವೃತ್ತಿಸುಂಕ ಬಿಟ್ಟ ವಿಚಾರ ಉಲ್ಲೇಖವಾಗಿದೆ. ಈ ಅಂಶಗಳನ್ನು ಗಮನಿಸಿದಾಗ ರಾಯಚೂರು ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಜಾತಿ ಪದ್ಧತಿ ಅಸ್ಥಿತ್ವದಲ್ಲಿತೆಂದು ತಿಳಿದು ಬರುತ್ತದೆ. ಮತ್ತು ಅಂತ್ಯಜರಿಗೆ ಯಾವ ಕಾಲದಲ್ಲಿ ಅನುಕಂಪದ ಅಲೆ ಕಾಣಬರಲಿಲ್ಲ ಇದು ಚರಿತ್ರೆಯಲ್ಲಿ ಜನಾಂಗವೊಂದಕ್ಕೆ ಬಗೆದ ದ್ರೋಹವೆಂದು ಹೇಳಬಹುದು.

ಅದೇ ರೀತಿಯಾಗಿ ಮಧ್ಯಕಾಲದಲ್ಲಿ ಅಸ್ಪೃಶ್ಯತೆಯ ಕರಾಳ ಸ್ವರೂಪ ಅಸ್ಥಿತ್ವದಲ್ಲಿತೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಮಧ್ಯಕಾಲದ ೫೦೦ ವರ್ಷಗಳ ಮುಸ್ಲೀಮರ ಆಳ್ವಿಕೆಯಲ್ಲಿ ಜಾತಿ ಪದ್ಧತಿ ಸ್ವರೂಪ ಸ್ವಲ್ಪ ಬಿನ್ನವಾಗಿ ಕಾಣಿಸುತ್ತದೆ, ಯಾಕೆಂದರೆ ಮುಸ್ಲೀಂ ಅರಸರು ಹಿಂದುಗಳಿಗೆ ತಲೆಗಂದಾಯ ವಿಧಿಸುತ್ತಿದ್ದರು. ಅದೇ ರಿತಿಯಾಗಿ ಮೇಲ್ವರ್ಗದ ಜನರಿಗೆ ಉನ್ನತ ಹುದ್ದೆಗಳು ಮತ್ತು ಅವಕಾಶಗಳು ಇದ್ದವು. ಹಾಗಾಗಿ ಜಾತಿ ಪದ್ಧತಿಯಿಂದ ಕೆಳವರ್ಗದವರು ಕೇವಲ ಸೇವೆಗೆ ಮಾತ್ರ ಸೀಮಿತವಾಗಿ ತಮ್ಮ ಜೀವನವನ್ನು ಸಾಗಿಸುವ ಪ್ರವೃತ್ತಿಯನ್ನು ರೂಡಿಸಿಕೊಂಡರು ಎಂದು ಮಧ್ಯಕಾಲದ ಜಾತಿ ಪದ್ಧತಿಯನ್ನು ಇತಿಹಾಸದಲ್ಲಿ ಉಲೇಖಿಸಲಾಗಿದೆ.[೧೪]

ಕರ್ನಾಟಕದಲ್ಲಿ ಜಾತಿ ಪದ್ಧತಿಯು ಸಂಧಿಗ್ದತೆಯಲ್ಲಿ ಸಿಲುಕಿ ಶೋಷಣೆಗೆ ಒಳಗಾದ ಜನರು ಸಂಕ್ರಮಣ ಕಾಲದಲ್ಲಿ ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ರಾಯಚೂರು ಜಿಲ್ಲೆಯ ಇಡಪನೂರು ಗ್ರಾಮದ ಹರಿಜನರ ಮೇಲಿನ ದೌರ್ಜನ್ಯ ಪ್ರಕರಣದ ಚಿತ್ರಣವನ್ನು ನೀಡುತ್ತ ಇಡಪನೂರು ಗ್ರಾಮ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲಾ ಕೇಂದ್ರದಿಂದ ೩೦ ಕಿ.ಮಿ ದೂರದಲ್ಲಿದೆ. ಈ ಗ್ರಾಮವು ಆಧುನಿಕ ರಸ್ತೆ ಸೌಲಭ್ಯ ಹಾಗೂ ಆಧುನಿಕರಣದ ಗಂಧ ಗಾಳಿಯಿಂದ ಸ್ವಲ್ಪ ದೂರವಿದೆ. ಗ್ರಾಮದಲ್ಲಿ ಸುಮಾರು ೪೦೦ ಕುಟುಂಬಗಳಿವೆ. ಒಟ್ಟು ೧೦೦೦೦ ಜನಸಂಖ್ಯೆಯನ್ನು ಹೊಂದಿದೆ. ೧೮೦ ಹರಿಜನ ಕುಟುಂಬಗಳು, ನಾಯಕರು, ಮುಸ್ಲಿಮರು ಹರಿಜನರನ್ನು ಹೊರತುಪಡಿಸಿ ೩೦೦೦ ಜನಸಂಖ್ಯೆ ಇದೆ, ಇಲ್ಲಿ ಸಹಜವಾಗಿ ಹರಿಜನರು ಅಲ್ಪಸಂಖ್ಯಾತರಾಗಿದ್ದಾರೆ. ೧೯೯೨ ಮೇ ೨೩ರ ಹರಿಜನರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ೩ ಜನ ಹರಿಜನರು ದೌರ್ಜನ್ಯಕ್ಕೆ ಬಲಿಯಾದರು. ಘಟನೆಗೆ ಕಾರಣ ಇಷ್ಟೆ. ಕೃಷಿ ಉತ್ಪನ್ನ ಮಾರುಕಟ್ಟೆ(ಎ.ಪಿ.ಎಂ.ಸಿ)ಯ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಹರಿಜನ ಅಭ್ಯರ್ಥಿ ಆಯ್ಕೆಯಾಗಿದ್ದ. ಆದರೆ ಮೀಸಲು ಕ್ಷೇತ್ರದಿಂದ ಪ್ರಭಾಕರನ್ ಎಂಬ ಮತ್ತೊಬ್ಬ ಹರಿಜನ ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದ. ಇದರಿಂದ ಕೋಪಗೊಂಡ ಹಿಂದುಳಿದ ವರ್ಗದವರು ಈಗಾಗಲೆ ಪರಿಶಿಷ್ಟ

ಜಾತಿಗೆ ಸೇರಿದ ಅಭ್ಯರ್ಥಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿದ್ದಾನೆ. ನೀನು ಯಾಕೆ ನಾಮಪತ್ರ ಸಲ್ಲಿಸುತ್ತಿಯಾ ಎಂದರು ಮತ್ತು ನೀನು ಒಬ್ಬ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವನು. ನೀನು ಎಸ್.ಸಿ. ಅಲ್ಲ ಎಂದು ಕ್ಯಾತೆತೆಗೆದರು. ಆಗ ಪ್ರಭಾಕರನ್ ನಾನು ಕ್ರಿಶ್ಚಿಯನ್ ಅಲ್ಲ ನನಗೆ ಆಧರ್ಮದ ಬಗ್ಗೆ ನಂಬಿಕೆ ಗೌರವ ಇದೆ. ನಾನು ಮೂಲತಹ ಎಸ್.ಸಿ. ಎಂದು ಹೇಳಿದ. ಆದರೆ ಅದಕ್ಕೆ ಅವರು ಒಪ್ಪಲಿಲ್ಲ. ಮತ್ತೆ ಪ್ರಭಾಕರನ್ ಒಂದು ವೇಳೆ ನಾನು ಕ್ರಿಶ್ಚಿಯನ್ ಅನ್ನುವುದಾದರೆ ನಿಮ್ಮ ಹೋಟೆಲುಗಳಲ್ಲಿ ನನಗೆ ಕುಡಿಯಲು ಒದು ಕಪ್ ಚಹಾ ಕೊಡಿ. ನಾನು ನಾಮಪತ್ರ ವಾಪಸ್ ತೆಗೆದುಕೊಳ್ಳುತ್ತೇನೆ ಎಂದನು. ಇದರಿಂದ ಕೊಪಗೊಂಡ ಹಿಂದುಳಿದ ವರ್ಗದ ಮುಖಂಡರೆಲ್ಲ ಸಭೆ ಸೇರಿ ಹರಿಜನ ಕೇರಿ ಮೇಲೆ ದಾಳಿಮಾಡಲು ತಿರ್ಮಾನಿಸಿದರು. ಅಲ್ಲದೆ ಪಕ್ಕದ ಹಳ್ಳಿಗಳಿಗೂ ಪ್ರಚಾರ ಮಾಡಿದರು. ನಾಳೆ ಬೆಳಿಗ್ಗೆ ೬ ಗಂಟೆಯ ಸುಮಾರಿಗೆ ದಾಳಿ ಮಾಡಲು ಕೂಟ ರಚಿಸಿಕೊಂಡರು ಮತ್ತು ಯಾವುದೇ ಹಿಂದುಳಿದ ವರ್ಗದವರು ದಾಳಿ ಮಾಡಲು ಬರುವುದಿಲ್ಲವೋ ಅವರಿಗೆ ೫೦೦೦ರೂಪಾಯಿ ದಂಡ ಎಂದು ತಿಳಿಸಲಾಗಿತ್ತು. ಅಲ್ಲದೆ ಘಟನೆಯ ಖರ್ಚಿಗೆಂದು ಒಂದು ಮನೆಗೆ ೫೦೦೦ ರೂಪಾಯಿ ದೇಣಿಗೆ ಸಂಗ್ರಹಿಸಿ ಸುಮಾರು ೫೦೦ ಜನರು ಹರಿಜನ ಕೇರಿಯನ್ನು ಸುತ್ತುವರಿದು ಬೆಳಗಿನ ಜಾವ ೬ ಗಂಟೆಗೆ ಮಲಗಿದ್ದ ಹರಿಜನರ ಮೇಲೆ ಮಹಿಳೆಯರು, ಮಕ್ಕಳು, ಮುದಕರು ಎನ್ನದೆ ಮಾರಕಾಸ್ತ್ರಗಳಿಂದ ಮನಸೋ ಇಚ್ಚೆ ಥಳಿಸಿದರು. ಈ ಪ್ರಕರಣದ ವಿಶೇಷತೆಯೆಂದರೆ ಹಿಂದುಳಿದ ವರ್ಗದ ಮಹಿಳೆಯರು ಮತ್ತು ಮಕ್ಕಳು ಹರಿಜನರ ಕಣ್ಣಿಗೆ ಖಾರದ ಪುಡಿಯನ್ನು ಎರಚುತ್ತಿದ್ದರು, ಪುರುಷರು ಹೊಡೆಯುತ್ತಿದ್ದು. ಅದರಲ್ಲಿ ಇಬ್ಬರು ತಪ್ಪಿಸಿಕೊಂಡು ಓಡಿ ಹೋಗಿ ಪೋಲಿಸರಿಗೆ ದೂರು ಸಲ್ಲಿಸಿದರು. ಪೋಲಿಸರು ಗ್ರಾಮಕ್ಕೆ ಆಗಮಿಸಿದಾಗ ಹಿಂದುಳಿದ ವರ್ಗದವರು ಗಾಮಕ್ಕೆ ಬಾರದಂತೆ ತಾಕಿತ್ತುಮಾಡಿದರು. ಅಲ್ಲದೆ ಪೋಲಿಸರ ಮೇಲೆ ಕಲ್ಲು ಮತ್ತು ಖಾರದ ಪುಡಿಯನ್ನು ಎರಚಲಾಯಿತು. ಅದರಲ್ಲಿ ೬ ಜನ ಪೋಲಿಸರಿಗೆ ಗಂಭೀರ ಸ್ವರೂಪದ ಗಾಯಾಗಳಾದವು. ತಕ್ಷಣ ಪೋಲಿಸರು ಲಾಠಿಚಾರ್ಜ್ ಮತ್ತು ಅಶ್ರುವಾಯು ಪ್ರಯೋಗಿಸಿದರು. ಈ ಘಟನೆ ನಿಲ್ಲುವ ವೇಳೆಗೆ ಸಾವಿರ ಜನ ಹರಿಜನರು ಊರು ಬಿಟ್ಟು ಓಡಿಹೋಗಿದ್ದರು. ಈ ಘಟನೆಯ ಗುಂಡಿನ ದಾಳಿಯಲ್ಲಿ ಮೂರು ಜನ ಹಿಂದುಳಿದ ವರ್ಗದವರು ಸಾವಿಗಿಡಾದರು. ಇಬ್ಬರಿಗೆ ಗಂಭೀರ ಸ್ವರೂಪದ ಗಾಯಾಗಳಾಗಿ ಆಸ್ಪತ್ರೆಯಲ್ಲಿ ಅಸುನೀಗಿದರು. ಅಲ್ಲದೆ ಘಟನೆಗೆ ಸಂಬಂಧಿಸಿದಂತೆ ೨೪ ಜನ ಹಿಂದುಳಿದ ವರ್ಗದವರನ್ನು ಬಂಧಿಸಲಾಯಿತು. ಆದರೆ ಈ ಘಟನೆಯಿಂದ ಹರಿಜನರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆಗೆ ಒಳಗಾಗಿ ಸತ್ತುಹೋದರು. ಇನ್ನೂ ಕೆಲವರು ಸಂತ್ರಸ್ಥರಾಗಿ ಅಜ್ಞಾತ ಸ್ಥಳದಲ್ಲಿ ಜೀವನ ಸಾಗಿಸಿದರು. ಈ ಘಟನೆಯ ಮತ್ತೊಂದು ವಿಶೇಷತೆಯೆಂದರೆ ಇಲ್ಲಿಯವರೆಗೂ ಭಾರತದಲ್ಲಿ ಮೇಲ್ವರ್ಗದ ಹಿಂದುಗಳು ಮಾತ್ರ ಹರಿಜನರ ಅಥವಾ ಅಸ್ಪೃಶ್ಯರ ಮೇಲೆ ದಾಳಿ ದೌರ್ಜನ್ಯ ಮಾಡುತ್ತಿದರು. ಆದರೆ ಮುಸ್ಲಿಮರು ಹಿಂದುಳಿದ ವರ್ಗಗಳ ಹಿಂದುಗಳ ಜೊತೆ ಸೇರಿ ದಾಳಿಮಾಡಿದ್ದು ಮತ್ತು ಬೆಂಬಲಿಸಿದ್ದನ್ನು ಕಂಡರೆ ಜಾತಿ ಪದ್ಧತಿಯು ಇತರ ಧರ್ಮದವರಿಗೂ ಪರಿಶಿಷ್ಟ ಜಾತಿಯವರನ್ನು ಹತ್ತಿಕ್ಕಲು ಬಳಸುವ

ಸಾಧನದಂತಿದೆ ಎಂದು ಹೇಳಬಹುದು. ಜಾತಿ ಪದ್ಧತಿಯಿಂದ ಏನೆಲ್ಲ ದುರಂತಗಳು ನಡೆದಿವೆ, ನಡೆಯುತ್ತಿವೆ ಎಂಬುದು ಭಾರತ ಸಂದರ್ಭದಲ್ಲಿ ಜಾತಿ ವ್ಯವಸ್ಥೆಗೆ ಇರುವ ಬಲವನ್ನು ತೋರಿಸುತ್ತದೆ.[೧೪]

ಈ ಘಟನೆ ನಡೆದಿದ್ದು ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ಹೊಸ್ತಿಲಲ್ಲಿ ಅಂದರೆ ಇಪ್ಪತನೆ ಶತಮಾನದ ಅಂತ್ಯ ಭಾಗದಲ್ಲಿ ಮತ್ತು ನಾಗರಿಕ ಪ್ರಜಾಪ್ರಭುತ್ವ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಕೆಳವರ್ಗದವರು ಸಂವಿಧಾನ ಬದ್ದ ಅವಕಾಶಗಳನ್ನು ಪಡೆಯುವಾಗ ಏನೆಲ್ಲ ಅವಗಡಗಳು ಸಂಭವಿಸುತ್ತವೆ ಎಂದರೆ ಅವು ಪ್ರಜಾಪ್ರಭುತ್ವವನ್ನು ನಾಚಿ ನೀರಾಗಿಸುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಬಂದಾಗ ಮತದಾರರ ವರ್ತನೆ (ವೋಟಿಂಗ್ ಬಿಹೆವಿಯರ್) ಹೇಗೆ ಬದಲಾಗಿತ್ತದೆಯೋ ಹಾಗೆಯೆ ಕೆಳವರ್ಗದವರ ಅಧಿಕಾರ ಅಸ್ಥಿತ್ವದ ಪ್ರಶ್ನೆ ಬಂದಾಗ ಜಾತಿವರ್ತನೆಯು(ಕ್ಯಾಸ್ಟ್ ಬಿಹೆವಿಯರ್) ಬದಲಾಗುತ್ತದೆ. ಭಾರತದಲ್ಲಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಶೇ. ೨೪ರಷ್ಟಿದೆ. ಭಾರತದಂತಹ ಜಾತ್ಯತೀತ ರಾಷ್ಟ್ರದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಮರು ಬಹುಸಂಖ್ಯಾತರಾದ ಪರಿಶಿಷ್ಟರ ಮೇಲೆ ಅಲ್ಪಸಂಖ್ಯಾತ ಹಿಂದುಳಿದ ವರ್ಗದವರ ಜೊತೆಹೋಗಿ ದೌರ್ಜನ್ಯ ಮಾಡುತ್ತಾರೆ ಎಂದರೆ ಹರಿಜನರ ಅಥವಾ ಪರಿಶಿಷ್ಟರ ಬದುಕು ಎಲ್ಲಿಗೆ ಬಂದಿರಬೇಕು. ಒಂದು ರಾಷ್ಟ್ರದ ಬಲ ಮತ್ತು ಅಭಿವೃದ್ಧಿಯೆಂದರೆ ಅದರ ಶುದ್ದ ಜೀವನ, ವ್ಯವಹಾರಿಕ ಪ್ರಾಮಾಣಿಕತೆ ಉನ್ನತ ಮಟ್ಟದ ನೈತಿಕ ಸಾಮರ್ಥ್ಯ ಸಾರ್ವತ್ರಿಕ ಅಂತಃಕರಣ, ಸರಳ ರೂಢಿಗಳ ಧೈರ್ಯ, ಸತ್ಯ ಸಂದತೆ, ಒಳ್ಳೆಯ ಗುಣಗಳು, ಹಾಗೂ ಬುದ್ದಿಮತ್ತೆಯಿಂದ ಕೂಡಿದ ಸರಿಯಾದ ಸಾವಧಾನದ ನಿರ್ಣಯಗಳನ್ನು ಅವಲಂಬಿಸಿರುತ್ತದೆ. ಅಸ್ಪೃಶ್ಯತೆಗೆ ಸಂಕೀರ್ಣವಾದ ನೆಲೆಗಳಿವೆ. ಜೀವ ವಿರೋಧಿ ಭಾವನೆಗಳು ಕೊನೆಗೊಳ್ಳಬೇಕು. ಯಾಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಅಲಿಖಿತ ಸಂವಿಧಾನವಿದೆ. ಉತ್ತಮ ಜೀವನ ನಡೆಸಬೇಕೆನ್ನುವ ಮಹಾದಾಸೆ ಒಂದೆಡೆಯಾದರೆ, ದಿನದ ಗಂಜಿಗೂ ಪರದಾಡಬೇಕಾದ ಜೀವದಾಸೆ ಇನ್ನೊಂದೆಡೆ. ಈ ಎರಡು ಸಂದಿಗ್ಧತೆಯಲ್ಲಿ ಅಸ್ಪೃಶ್ಯರ ಜೀವನದ ಹಾದಿ ದುರ್ಗಮವಾಗಿದೆ. ಕರ್ನಾಟಕದಲ್ಲಿ ಈಗಲೂ ಸಹ ಅಸ್ಪೃಶ್ಯತೆಯ ಆಚರಣೆಯ ಜೀವಂತಿಕೆ ನಿದರ್ಶನಗಳು ಗೋಚರಿಸುತ್ತಲೆ ಇದೆ. ಪ್ರ.ವಾಣಿ. ೨೦೧೪ ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲ್ಲೂಕಿನ ತಾಳೂರಿನಲ್ಲಿ ದಲಿತರಿಗೆ ಕ್ಷೌರ ಮಾಡಿದರೆ ಸವರ್ಣೀಯರು ಬರುವುದಿಲ್ಲ ಎಂಬ ಕಾರಣದಿಂದ ದಲಿತರಿಗೆ ಕ್ಷೌರ ನಿರಾಕರಣೆ ಮಾಡಲಾಯಿತು. ಅದೇ ರೀತಿಯಾಗಿ ಹಗರಿಬೊಮ್ಮನಹಳ್ಳಿ ಮತ್ತು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಮರಕುಂಬಿಯಲ್ಲಿ ದಲಿತರಿಗೆ ಕ್ಷೌರ ನಿರಾಕರಣೆ ಮಾಡಲಾಯಿತು. ಹೀಗೆ ನಿರಾಕರಣೆ, ದೌರ್ಜನ್ಯ, ಬಹಿಷ್ಕಾರ ನಿರಂತರವಾಗಿ ಗೋಚರಿಸುತ್ತವೆ.

ಅಸ್ಪ್ರಶ್ಯತೆ ನಿವಾರಣೆಗಾಗಿ ಇರುವ ಸಂವಿಧಾನಿಕ ಕ್ರಮಗಳು

ಸಮಾನ ಸಮಾಜದ ಸ್ಥಾಪನೆ ಸಂವಿಧಾನದ ಮುಖ್ಯ ಆಶಯ ಅದಕ್ಕಾಗಿ ಹಲವು ಹಂತಗಳಲ್ಲಿ ಈ ಉದ್ದೇಶವನ್ನು ಈಡೇರಿಸಲು ಸಂವಿಧಾನ ಬದ್ಧ ಕ್ರಮಗಳ ಮೂಲಕ ಪ್ರಯತ್ನಿಸಲಾಗಿದೆ.

ಸಂವಿಧಾನದ ೧೪, ೧೫, ೧೬, ೧೭ನೆಯ ವಿಧಿಯು ಸಮಾನತೆ ತಾರತಮ್ಯ ನಿಷೇಧ ಉದ್ಯೋಗದ ಹಕ್ಕು ಮತ್ತು ಅಸ್ಪ್ರಶ್ಯತೆಯನ್ನು ನಿಷೇದಿಸಲಾಗಿದೆ. ಎಂದು ಸಾರುತ್ತವೆ. ಅದೇ ರೀತಿಯಾಗಿ ಅಸ್ಪ್ರಶ್ಯತೆಯ ಆಚರಣೆಯನ್ನು ಅಪರಾಧ ಎಂದು ಸಾರಲಾಗಿದೆ. ಸಂವಿಧಾನದ ೨೩ನೆಯ ವಿಧಿಯು ಎಲ್ಲಾ ಜಾತಿ, ಧರ್ಮದವರಿಗೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಕ್ಕನ್ನು ನೀಡಿದೆ ಅದೇ ರೀತಿಯಾಗಿ ೨೯ನೆಯ ವಿಧಿಯು ಶೋಷಣೆ ವಿರುದ್ಧ ಹಕ್ಕನ್ನು ನೀಡಿದೆ. ಸಂವಿಧಾನದ ೨೫ (೨) (ಬಿ) ವಿಧಿಯ ಪ್ರಕಾರ ರಾಜ್ಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಕ್ಷಣೆಯನ್ನು ಒದಗಿಸಬೇಕು ಎಂದು ಪ್ರತಿಪಾದಿಸುತ್ತದೆ. ಅದೇ ರೀತಿಯಾಗಿ ಸಂವಿಧಾನದ ೩೩೦ ಮತ್ತು ೩೩೩ನೆಯ ವಿಧಿಯು ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಒದಗಿಸಲಾಗಿದೆ. ಶಾಸಕಾಂಗದ ಪ್ರಾತಿನಿಧ್ಯವು ಜಾತಿ ಅಸಮಾನತೆಯ ಭಾಗವಾಗಿ ಮೀಸಲಾತಿ ಕ್ಷೇತ್ರಗಳು ಪರಿಶಿಷ್ಟರಿಗೆ ಲಭ್ಯವಾದವು. ಅದೇ ರೀತಿಯಾಗಿ ಸಂವಿಧಾನದ ೩೩೮ನೆಯ ವಿಧಿಯ ಪ್ರಕಾರ ರಾಷ್ಟ್ರಪತಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಸ್ಥಾಪಿಸಲು ಕ್ರಮಕೈಗೊಳ್ಳುತ್ತಾರೆ. ಹೀಗೆ ಸಂವಿಧಾನದಲ್ಲಿ ಪರಿಶಿಷ್ಟರಿಗೆ ಸಂಬಂಧಿಸಿದಂತೆ ಅನೇಕ ಸಂವಿಧಾನ ಕ್ರಮಗಳು ಜಾರಿಗೆ ತರಲಾಗಿದೆ. ಹೀಗಾಗಿ ೩೪೧ನೆಯ ವಿಧಿಯು ರಾಷ್ಟ್ರಪತಿಗಳು ಹೊಸಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬಹುದು. ೩೩೫ನೆಯ ವಿಧಿಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ದ್ವಿತಿಯ ದರ್ಜೆಯ ಹುದ್ದೆಗಳಿಗೆ ಸಂಬಂಧಿಸಿದಂತೆ ನೇರ ನೇಮಕಾತಿ ಮಾಡಿಕೊಳ್ಳಬೇಕು ಎಂದು ಸಾರುತ್ತದೆ. ಹೀಗಾಗಿ ಪರಿಶಿಷ್ಟರ ಹಿತರಕ್ಷಣೆಗಾಗಿ ಸಂವಿಧಾನದ ಅನೇಕ ಉಪಬಂಧಗಳನ್ನು ಅಳವಡಿಸಲಾಗಿದೆ.

ಶಾಸನಬದ್ಧ ಕ್ರಮಗಳು

ನಾಗರೀಕ ಹಕ್ಕು ರಕ್ಷಣಾ ಕಾಯ್ದೆ ೧೯೫೫. ಜೀತಪದ್ಧತಿ ನಿರ್ಮೂಲನ ಕಾಯ್ದೆ ೧೯೭೬, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ವಿರೋಧಿ (ಅಟ್ರಾಸಿಟಿ) ಕಾಯ್ದೆ ೧೯೮೯. ರಾಷ್ಟ್ರೀಯ, ಸಫಾಯಿ ಕರ್ಮಾಚಾರಿ ಕಾಯ್ದೆ ೧೯೯೩. ಸಫಾಯಿ ಕರ್ಮಾಚಾರಿಗಳ ಉದ್ಯೋಗ ಮತ್ತು ಪುನರ್ವಸತಿ ೧೯೯೫. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ೧೯೯೦. ರಾಷ್ಟ್ರೀಯ ಮಾನವ ಹಕ್ಕುಗಳ ರಕ್ಷಣೆ ಕಾಯ್ದೆ ೧೯೯೩.

ಅಸ್ಪ್ರಶ್ಯತೆಯನ್ನು ಹೋಗಲಾಡಿಸಲು ಆಯಾ ಕಾಲಘಟ್ಟದಲ್ಲಿ ಸಂವಿಧಾನಿಕ ಕ್ರಮಗಳ ಜೊತೆಗೆ ಶಾಸನ ಬದ್ಧ ಕ್ರಮಗಳನ್ನು ಕೂಡ ಜಾರಿಗೆ ತರಲಾಗಿದೆ. ಹೀಗಾಗಿ ಸಂವಿಧಾನದ ಕಾಯ್ದೆ ಮತ್ತು ಸಾಮಾನ್ಯ ಕಾಯ್ದೆಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಅಂತವುಗಳಲ್ಲಿ ಪ್ರಮುಖವಾದವುಗಳೆಂದರೆ. ೧೯೫೫ರ ನಾಗರಿಕ ರಕ್ಷಣಾ ಕಾಯ್ದೆ ೧೫(ಎ) ವಿಧಿಯ ಪ್ರಕಾರ ಭಾರತ ಸರ್ಕಾರವು ಈ ಹಕ್ಕಿನ ರಕ್ಷಣೆಯ ಹೊಣೆಹೊತ್ತಿದೆ. ಅಸ್ಪ್ರಶ್ಯತೆ

ಆಚರಣೆ ನಿವಾರಣೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಸ ಕಾಯ್ದೆ ಜಾರಿಗೆ ತರಬೇಕು. ಇದರ ನಿವಾರಣೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳು ಹೊಸ ಮಾನದಂಡ ಮತ್ತು ಕಾನೂನುಗಳನ್ನು ಜಾರಿಗೆ ತರಬಹುದು. ಈ ಕಾಯ್ದೆಯ ಜಾರಿ ಮತ್ತು ಜವಾಬ್ದಾರಿಯನ್ನು ಅದರ ಸಾಧಕ-ಬಾಧಕಗಳ ಬಗ್ಗೆ ಭಾರತದ ಬೇರೆ ಬೇರೆ ರಾಜ್ಯಗಳು ಬೇರೆ ಬೇರೆ ಇಲಾಖೆಯ ಮೂಲಕ ಜಾರಿಗೊಳಿಸಲಾಗುತ್ತಿದೆ. (ಗುಪ್ತಾ ಹೆಚ್.ಸಿ ೧೯೯೧) (೨೮೮) ಅದೇ ರೀತಿಯಾಗಿ ೧೯೫೫ರ ನಾಗರೀಕ ಹಕ್ಕುಗಳ ರಕ್ಷಣಾ ಕಾಯ್ದೆ ೧೫(ಎ) ಪ್ರಕಾರ ಅಸ್ಪ್ರಶ್ಯತೆಯ ಆಚರಣೆ ಮೂಲಕ ದೌರ್ಜನ್ಯಕ್ಕೊಳಗಾದ ಅಥವಾ ಬಲಿಯಾದವರಿಗೆ ಪರಿಹಾರ ಒದಗಿಸಬೇಕು. ಅವಶ್ಯಕವೆನಿಸಿದರೆ ಅವರಿಗೆ ಪುನರ್ವಸತಿ ಕಲ್ಪಿಸಿ ಅದರ ಮೇಲ್ವಿಚಾರಣೆ ಮಾಡಬೇಕು ಇದರ ಆಧಾರದ ಮೇಲೆ ಅಟ್ರಾಸಿಟಿ ಕಾಯ್ದೆಯನ್ನು ಬಿಹಾರ, ಗುಜರಾತ್, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯಗಳು ಜಾರಿಗೆ ತಂದವು. ಪ್ರತಿಯೊಂದು ಜಿಲ್ಲೆಯಲ್ಲಿ ಇದರ ಬಗ್ಗೆ ಮೇಲ್ವಿಚಾರಣೆ ಮಾಡಲು ಒಬ್ಬ ಕಾನೂನು ಸಲಹಗಾರರನ್ನು ನೇಮಿಸಿದವು. ಮತ್ತು ದೌರ್ಜನ್ಯ, ಗಲಭೆ, ಹಿಂಸೆಗೆ ಬಲಿಯಾದವರ ರಕ್ಷಣೆಗಾಗಿ ಒಬ್ಬ ನ್ಯಾಯದೀಶನನ್ನು ಸರ್ಕಾರ ನೇಮಿಸುತ್ತದೆ. ಅಂತಹ ಸಂದರ್ಭದಲ್ಲಿ ಹಾನಿಗೊಳಗಾದವರು ಕಾನೂನಿನ ಮೂಲಕ ರಕ್ಷಣೆ ಮತ್ತು ಪರಿಹಾರ ಪಡೆಯಲು ಅರ್ಹರು ಎಂದು ಈ ಕಾನೂನು ಸಾರುತ್ತದೆ. ಇದರ ಜೊತೆಗೆ ಉಚಿತ ಕಾನೂನು ಸಲಹೆ ಪಡೆಯಲು ಅವಕಾಶವಿದೆ. ಹಾಗಾಗಿ ನಾಗರಿಕ ಕಾಯ್ದೆಯು ಪರಿಶಿಷ್ಟರ ಹಿತಕಾಯುವಲ್ಲಿ ಒಂದು ಮಹತ್ವದ ಮೈಲುಗಲ್ಲು ಎಂದು ಪರಿಗಣಿಸಲಾಗಿದೆ. ಇಂದಿಗೂ ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ೧೯೫೫ ನಾಗರೀಕ ಹಕ್ಕುಗಳ ರಕ್ಷಣೆ ಕಾಯ್ದೆ ಪ್ರಕಾರ ಹಲವಾರು ಸುಧಾರಣ ಕ್ರಮಗಳನ್ನು ಮತ್ತು ಅಭಿವೃದ್ಧಿಯ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ.[೧೬]

ಉಪಾಧ್ಯಯ ಎಚ್.ಸಿ ೧೯೯೧ (೨೯೪). ಉತ್ತರಪ್ರದೇಶದಲ್ಲಿ ನಾಗರೀಕ ಹಕ್ಕುಗಳ ಮತ್ತು ಜಾರಿಯ ನಿರ್ವಹಣೆಯನ್ನು ಕಾನೂನು ಇಲಾಖೆಗೆ ವಹಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ೧೯೮೨ ರಿಂದ ೧೯೮೩ ಕಾನೂನು ಮತ್ತು ಸಹಾಯಧನವನ್ನು ನೀಡುತ್ತ ಬಂದಿದೆ. ಹಾಗೆಯೇ ಅಸ್ಪ್ರಶ್ಯತೆ ಆಚರಣೆ ನಿಷೇದಿಸಿದೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರಿವೆ. ಆದ್ದರಿಂದ ಅದರ ಜಾರಿಯನ್ನು ಅನೇಕ ಕಾರ್ಯಕ್ರಮಗಳ ಮೂಲಕ ಜಾರಿಗೆ ತರುತ್ತಿದೆ. ಮಧ್ಯಪ್ರದೇಶ ಸರ್ಕಾರವು ಅಸ್ಪ್ರಶ್ಯತೆ ಆಚರಣೆ ಬಗ್ಗೆ ಚಲನಚಿತ್ರಗಳು ಮತ್ತು ಬೀದಿ ನಾಟಕಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳು ಹಮ್ಮಿಕೊಂಡಿದೆ.

೧೯೬೨ ಅಕ್ಟೋಬರ್ ೨ ರಿಂದ ಗುಜರಾತ್ ಸರ್ಕಾರವು ಗಾಂಧಿಸಪ್ತಾಹ ಎಂಬ ಕಾರ್ಯಕ್ರಮದ ಮೂಲಕ ಅಸ್ಪ್ರಶ್ಯತೆಯ ನಿವಾರಣೆ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸುತ್ತ ಬರುತ್ತಿದೆ. ಕೇರಳದಲ್ಲಿ ಹರಿಜನ ಕಲ್ಯಾಣ ಇಲಾಖೆ ಎಂಬ ಪ್ರತ್ಯೇಕ ವಿಭಾಗವು ಅಸ್ಪ್ರಶ್ಯತೆ ಆಚರಣೆ ಬಗ್ಗೆ ಚಲನಚಿತ್ರ ಮತ್ತು ಕಾರ್ಯಕ್ರಮ ಆಯೋಜಿಸುವ ಮೂಲಕ ಅರಿವು ಮೂಡಿಸುತ್ತದೆ. ಕೇರಳ

ಸರ್ಕಾರವು ಈ ರೀತಿಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ೧೯೮೪ ರಿಂದ ಕಾರ್ಯನಿರ್ವಹಿಸುತ್ತದೆ. ಮತ್ತು ೧೯೮೪ ಅಕ್ಟೋಬರ್ ೨ರಿಂದ ೬ರ ವರೆಗೆ ಸೋಶೀಯಲ್ ಸಾಲಿಡಾರಿಟಿ ಫೋರ್ಟ್ ನೈಟ್ ಕಾರ್ಯಕ್ರಮ ಆಯೋಜಿಸಿ ಅರಿವು ಮೂಡಿಸುತ್ತದೆ. ಮಧ್ಯಪ್ರದೇಶ ಸರ್ಕಾರವು ನಾಗರೀಕ ಹಕ್ಕುಗಳ ಸಪ್ತಾಹ ಎಂಬ ಕಾರ್ಯಕ್ರಮವನ್ನು ೧೯೮೪ ನವೆಂಬರ್ ೨೬ ರಿಂದ ಡಿಸೆಂಬರ್ ೨ ರವರೆಗೂ ಅಸ್ಪ್ರಶ್ಯತೆ ನಿವಾರಣ ಬಗ್ಗೆ ಕಾರ್ಯಕ್ರಮ ನಿವಾರಿಸುತ್ತ ಬಂದಿದೆ. ಅಲ್ಲದೆ ಪಂಚಾಯತ್ ಮಟ್ಟದಲ್ಲಿ ಇದರ ಬಗ್ಗೆ ಅರಿವು ಮೂಡಿಸಲು ಶ್ರಮಿಸಿದ ಸಾಧಕರಿಗೆ ನಗದು ಬಹುಮಾನ ನೀಡುವ ಯೋಜನೆ ಜಾರಿಗೆ ತಂದಿದೆ.

ತಮಿಳುನಾಡು ಸರ್ಕಾರವು (ಆದಿ ದ್ರಾವಿಡ ವೆಲ್‌ಫರ್ ವೀಕ್) ಇವರ ಅಭಿವೃದ್ಧಿ ಸಪ್ತಾಹ ಎಂಬ ಕಾರ್ಯಕ್ರಮದ ಮೂಲಕ ಅಸ್ಪ್ರಶ್ಯತೆಯ ನಿವಾರಣೆಗಾಗಿ ಅರಿವು ಮೂಡಿಸುವುದು ಮತ್ತು ಬಿತ್ತಿ ಚಿತ್ರದ ಮೂಲಕ ಚಲನಚಿತ್ರದ ಮೂಲಕ, ಬೀದಿ ನಾಟಕಗಳ ಮೂಲಕ, ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತ ಬಂದಿದೆ. ಇದನ್ನು ತೀರ್ಥಯಾತ್ರ ಕಾರ್ಯಕ್ರಮ ಎಂದು ಕರೆಯಲಾಗುತ್ತದೆ. ಹೀಗೆ ಅಸ್ಪ್ರಶ್ಯತೆ ಆಚರಣೆ ಬಗ್ಗೆ ತಮಿಳುನಾಡು ಸರ್ಕಾರವೂ ೧೯೮೪ ಜನವರಿ ೨೪ ರಿಂದ ೩೦ರವರೆಗೂ ಅಂದರೆ ಒಂದು ವಾರದವರೆಗೂ ಅಸ್ಪ್ರಶ್ಯತಾ ಸಪ್ತಾಹ ಎಂದು ಆಚರಿಸುತ್ತ ಬರಲಾಗುತ್ತಿದೆ.

ಉತ್ತರಪ್ರದೇಶದಲ್ಲಿ ಅಸ್ಪ್ರಶ್ಯತೆ ನಿವಾರಣೆ ಬಗ್ಗೆ ಸರ್ಕಾರವು ಪಬ್ಲಿಸಿಟಿ ಆಂಡ್ ಪ್ರಪೊಗೊಂಡಾ ಯುನಿಟ್ ಎಂಬ ಘಟಕದ ಮೂಲಕ ಬಿತ್ತಿಚಿತ್ರ, ಗೋಡೆ ಬರಹ, ಕರಪತ್ರ, ಮುಂತಾದವುಗಳ ಮೂಲಕ ನಿರಂತರವಾಗಿ ಯೋಜನೆ ಕಾರ್ಯಕ್ರಮ ಆಯೋಜಿಸುವ ಮೂಲಕ ಪ್ರಯತ್ನ ಮಾಡುತ್ತಿದೆ.

ಪಶ್ಚಿಮಬಂಗಾಳ ಸರ್ಕಾರವು ೧೯೮೪, ೧೯೮೫ ರಿಂದ ಓರಿಯಂಟೇಷನ್ ಟ್ರೈನಿಂಗ್ ಆಫ್ ಬ್ಲಾಕ್ ಲೆವಲ್ ಇನಸ್ಪೆಕ್ಟರ್ ಎಂಬ ಕಾರ್ಯಕ್ರಮದ ಮೂಲಕ ನಾಗರೀಕ ಹಕ್ಕುಗಳ ರಕ್ಷಣೆಗಾಗಿ ಪ್ರಯತ್ನ ಮಾಡಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ಜಾತಿ ಅಸಮಾನತೆಗೆ ಸಂಬಂಧಿಸಿದಂತೆ ಸ್ಥಳೀಯ ಘಟಕಗಳ ಮೂಲಕ ಮಾಹಿತಿ ಸಂಗ್ರಹಿಸಿ ಕ್ರಮಕೈಗೊಳ್ಳುವ ವಿಧಾನ ಈ ಸರ್ಕಾರವು ಮಾಡುತ್ತ ಬಂದಿದೆ.

ಚಂಡಿಗಡದಲ್ಲಿ ಅಸ್ಪ್ರಶ್ಯತ ಆಚರಣೆಯನ್ನು ಕ್ರೈಂ ಅಗೆನೆಷ್ಟ್ ಗಾಡ್ ಆಂಡ್ ಮ್ಯಾನ್ ಎಂಬ ಘೋಷ ವ್ಯಾಖ್ಯವಿರುವ ಕ್ಯಾಲಂಡರ್ ಮತ್ತು ಡೈರಿಗಳನ್ನು ಈ ಸರ್ಕಾರವು ಮುದ್ರಿಸಿ ವಿತರಿಸುತ್ತದೆ. ಹೀಗಾಗಿ ಅಸ್ಪ್ರಶ್ಯತೆ ನಿವಾರಣೆಯ ಬಗ್ಗೆ ಈ ಸರ್ಕಾರವು ಈ ರೀತಿಯಾದ ಕ್ರಮಕೈಗೊಂಡಿದ್ದು ಭಾರತದಲ್ಲಿ ಮೊದಲು ಎಂದು ಹೇಳಬಹುದು. ಏಕೆಂದರೆ ಕ್ಯಾಲೆಂಡರ್‌ನಲ್ಲಿ ಮುದ್ರಿಸಿ, ಡೈರಿಗಳಲ್ಲಿ ಮುದ್ರಿಸಿ ವಿಷಯಗಳನ್ನು ಮನೆ–ಮನೆಗೆ ತಲುಪಿಸುವಲ್ಲಿ ಇದೊಂದು ಮಹತ್ವದ ಅಂಶವೆಂದು ಪರಿಗಣಿಸಿದೆ.

ಕರ್ನಾಟಕದಲ್ಲಿ ನಾಗರಿಕ ಹಿತರಕ್ಷಣ ಘಟಕ ಎಂಬ ಪ್ರತ್ಯೇಕ ಘಟಕವನ್ನು ಸ್ಥಾಪಿಸಿ ಅಸ್ಪ್ರಶ್ಯತಾ ಆಚರಣೆ ಬಗ್ಗೆ ಜಾಗೃತಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಿ ಪರಿಶಿಷ್ಟರ

ಹಿತರಕ್ಷಣೆ ಕಾಯುವ ಜವಾಬ್ದಾರಿಯನ್ನು ಹೊತ್ತಿದೆ. ಅದೇರೀತಿಯಾಗಿ ಪ್ರತಿಯೊಂದು ಇಲಾಖೆಗಳು ಅಸ್ಪ್ರಶ್ಯರಿಗೆ ಇರುವ ಸಂವಿಧಾನಿಕ ನಿಯಮಗಳನ್ನು ಪಾಲಿಸಬೇಕು ಎಂದು ಆದೇಶಿಸುತ್ತದೆ. ಇದರ ಜವಾಬ್ದಾರಿಯನ್ನು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ವಹಿಸಲಾಗಿದೆ. ಕರ್ನಾಟಕದಲ್ಲಿ ಅಸ್ಪ್ರಶ್ಯತೆ ದೌರ್ಜನ್ಯ, ದಬ್ಬಾಳಿಕೆ, ಅನ್ಯಾಯ ಮತ್ತು ಅತ್ಯಾಚಾರಗಳಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯೇ ಮೇಲ್ವಿಚಾರಣೆ ಮತ್ತು ನಿರ್ವಹಣೆ ಮಾಡುತ್ತದೆ.[೧೭]

ಕರ್ನಾಟಕದಲ್ಲಿ ಅಸ್ಪ್ರಶ್ಯತೆಯ ನಿವಾರಣೆಗಾಗಿ ತೆಗೆದುಕೊಂಡ ಕ್ರಮಗಳು

ಅಸ್ಪೃಶ್ಯತೆಯ ನಿವಾರಣೆಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರ ಕರ್ನಾಟಕದಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಗಳು ಯೋಜನೆಗಳು ಜಾರಿಗೆ ತರುವುದರ ಹಿಂದೆ ಸಾಮಾಜಿಕ ಚಳುವಳಿ ಮತ್ತು ಧಾರ್ಮಿಕ ಆಂದೋಲನಗಳ ಪಾತ್ರವನ್ನು ಅಲ್ಲಗಳಿಯುವಂತಿಲ್ಲ. ಉದಾಹರಣೆಗೆ ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯದಲ್ಲಿ ಬ್ರಾಹ್ಮಣೇತರ ಚಳುವಳಿ ಮಹರಾಷ್ಟ್ರದಲ್ಲಿ ಮಹರ್ ಚಳುವಳಿ ಮದ್ರಾಸ್‌ನಲ್ಲಿ ದ್ರಾವಿಡ ಚಳುವಳಿ ಕೇರಳದಲ್ಲಿ ನಾಯರ ಚಳುವಳಿ ಮೊದಲಾದವು ಪ್ರಮುಖ ಪಾತ್ರವಹಿಸಿದವು. ಸ್ವಾತಂತ್ರ್ಯ ನಂತರ ಪರಿಶಿಷ್ಟ ಜಾತಿಗಳ(ಒಕ್ಕೂಟ) ಚಳುವಳಿ ಕರ್ನಾಟಕದಲ್ಲಿ ೧೯೭೦ರ ದಶಕದಲ್ಲಿ ದಲಿತ ಚಳುವಳಿಯ ಪಾತ್ರವು ಅವಿಸ್ಮರೀಣವಾದದ್ದು. ಹೀಗಾಗಿ ಕಾಯ್ದೆಗಳ ಹಿಂದೆ ಚಳುವಳಿಯ ಪಾತ್ರ ದೊಡ್ಡಮಟ್ಟದ್ದು ಇದೆ ಎಂದರೆ ತಪ್ಪಾಗಲಾರದು. ಅದರ ಭಾಗವಾಗಿ ಬಂದ ಸಾಮಾನ್ಯ ಕಾಯ್ದೆಗಳು ಪರಿಶಿಷ್ಟರ ಹಿತಕಾಯುವಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಅಲ್ಪಸ್ವಲ್ಪ ಮಟ್ಟಿಗೆ ನೆಮ್ಮದಿ ಮತ್ತು ಪರಿಹಾರ ಒದಗಿಸಿದ್ದು ಉಂಟು.

PCR ACT ೧೯೫೫: ನಾಗರೀಕ ಹಕ್ಕುಗಳ ರಕ್ಷಣೆ ಕಾಯ್ದೆ, PO ACT ೧೯೮೯: ದೌರ್ಜನ್ಯ ತಡೆ ಕಾಯ್ದೆ, ಅಸ್ಪ್ರಶ್ಯತೆ ಕಾರಣಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ನಡೆಯುವ ದೌರ್ಜನ್ಯ ರಕ್ಷಿಸಿ ಪರಿಹಾರವನ್ನು ನೀಡಲು ಮತ್ತು ಸಾಮಾಜಿಕ ಪಿಡುಗು ಆಗಿರುವ ಅಸ್ಪ್ರಶ್ಯತೆಯ ನಿವಾರಣೆಗಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅರಿವು ಮೂಡಿಸುವ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಇದನ್ನು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಹಂತಗಳಲ್ಲಿ ನಡೆಸಲಾಗುತ್ತದೆ. ಅದರಲ್ಲಿ ಪ್ರಮುಖವಾದವುಗಳು ಎಂದರೆ ವಿಚಾರ ಸಂಕಿರಣ, ಕಮ್ಮಟಗಳು, ಸಂವಾದ, ಪ್ರಚಾರ, ಚಲನಚಿತ್ರ, ಬಿತ್ತಿಪತ್ರ, ಬೀದಿನಾಟಕ ಮುಂತಾದವುಗಳ ಮೂಲಕ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ತಾಲೂಕ, ಜಿಲ್ಲಾ, ಮತ್ತು ರಾಜ್ಯ ಮಟ್ಟದಲ್ಲಿ ಆಯೋಜನೆ ಮಾಡಲಾಗುತ್ತದೆ. ಅಸ್ಪ್ರಶ್ಯತೆ ನಿವಾರಣೆ ಮತ್ತು ಮೇಲ್ವಿಚಾರಣೆ ಹೊಣೆಯನ್ನು ಸಮಾಜ ಕಲ್ಯಾಣ ನಿಯಂತ್ರಿಸಿ ನಿರ್ದೇಶಿಸುತ್ತದೆ.

ದೌರ್ಜನ್ಯಕ್ಕೊಳಗಾದವರಿಗೆ ಪರಿಹಾರ: ಅಸ್ಪ್ರಶ್ಯತೆ ಕಾರಣಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ, ಬಹಿಷ್ಕಾರ, ಮಾನಹಾನಿ ಮತ್ತು ನಿಷೇಧಕ್ಕೊಳಗಾದ ಸಂತ್ರಸ್ಥರಿಗೆ

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ ಸ.ಕಾ.ಇ. ೩೭ ಎಸ್.ಸಿ.ಎ ೨೦೧೬ ದಿನಾಂಕ ೨೦-೦೬-೨೦೧೬ರ ಅನ್ವಯ ೪೭ ಅಪರಾಧಗಳ ಅಡಿ ದೌರ್ಜನ್ಯಕ್ಕೊಳಗಾದ ಸಂತ್ರಸ್ಥರಿಗೆ ಪರಿಷ್ಕೃತ ದರದಲ್ಲಿ ಪರಿಹಾರ ನೀಡಲಾಗುತ್ತದೆ. ಅದೇ ರೀತಿಯಾಗಿ ದೌರ್ಜನ್ಯಕ್ಕೊಳಗಾದ ಸಂತ್ರಸ್ಥರಿಗೆ ಪುನರ್ವಸತಿ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆ ಮೂಲಕ ಜಾರಿಗೊಳಿಸಲಾಗುತ್ತದೆ.

ಜಾಗೃತಿ ಮತ್ತು ಉಸ್ತುವಾರಿ ಸಮಿತಿಗಳ ಮೂಲಕ ಮೇಲ್ವಿಚಾರಣೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಂದು ಕೊರತೆಗಳ ನಿವಾರಣೆ ಮತ್ತು ದೌರ್ಜನ್ಯಕ್ಕೊಳಗಾದ ಸಂತ್ರಸ್ಥರಿಗೆ ಪರಿಹಾರ ನೀಡುವ ಬಗ್ಗೆ ಮೇಲ್ವಿಚಾರಣೆ ಸಮಿತಿಯನ್ನು ರಚಿಸಲಾಗಿದೆ. ತಾಲ್ಲೂಕ ಮಟ್ಟದಲ್ಲಿ ತಹಸೀಲ್ದಾರರು ಮತ್ತು ಸಮಾಜ ಕಲ್ಯಾಣ ಅಧಿಕಾರಿಗಳು ಮತ್ತು ನೇತೃತ್ವದಲ್ಲಿ ಮೇಲ್ವಿಚಾರಣ ಸಮಿತಿ ಇರುತ್ತದೆ. ಅದೇ ರೀತಿಯಾಗಿ ಉಪ ವಿಭಾಗ ಅಧಿಕಾರಿ ನೇತೃತ್ವದಲ್ಲಿ ಮೇಲ್ವಿಚಾರಣ ಸಮಿತಿ ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮೇಲ್ವಿಚಾರಣ ಸಮಿತಿ ಇರುತ್ತದೆ. ಸಹಾಯಕ ಆಯುಕ್ತರು ಮತ್ತು ಜಿಲ್ಲಾ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಅಸ್ಪ್ರಶ್ಯತೆ ಮತ್ತು ದೌರ್ಜನ್ಯದ ಬಗ್ಗೆ ಕ್ರಮಕೈಗೊಳ್ಳುವ ಮತ್ತು ಪರಿಹಾರ ನೀಡುವ ಅಧಿಕಾರ ಹೊಂದಿದ್ದಾರೆ. ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದ್ದು. ಮೂರು ಮತ್ತು ಆರು ತಿಂಗಳಿಗೊಮ್ಮೆ ಸಮಿತಿ ಸಭೆ ನಡೆಸಿ ಪರಿಶೀಲನೆ ಮಾಡಲಾಗುತ್ತದೆ. ಈ ವಿಷಯದ ಬಗ್ಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯನ್ನು ಬಳಸಿಕೊಳ್ಳಲಾಗುತ್ತದೆ. ಹಾಗಾಗಿ ಅಸ್ಪ್ರಶ್ಯತೆ ನಿವಾರಣೆ ಬಗ್ಗೆ ಸ್ಥಳೀಯ ಮಟ್ಟದಿಂದ ರಾಜ್ಯ ಮಟ್ಟದ ವರೆಗೆ ಮೇಲ್ವಿಚಾರಣ ಸಮಿತಿಗಳನ್ನು ನೇಮಿಸಲಾಗಿದೆ. ಆದರೆ ಸಮಿತಿಯ ಕಾರ್ಯಗಳ ಬಗ್ಗೆ ಅಸಮಾಧಾನ ಮತ್ತು ಅತೃಪ್ತಿಗಳು ಹಾಗಾಗಿ ವ್ಯಕ್ತವಾಗುತ್ತಲಿವೆ. ಇನ್ನೂ ಸಮರ್ಪಕವಾಗಿ ಜಾರಿಗೊಳಿಸುವ ಮತ್ತು ಅಸ್ಪ್ರಶ್ಯತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ.

ಕೋಷ್ಟಕ ೫.೧. ದೌರ್ಜನ್ಯಕ್ಕೊಳಗಾದವರಿಗೆ ನೀಡಿದ ಪರಿಹಾರ (ಕೋಟಿ ರೂಗಳಲ್ಲಿ)

ವರ್ಷ	ಸಂತ್ರಸ್ಥರ ಸಂಖ್ಯೆ	ಆರ್ಥಿಕ ವೆಚ್ಚ
೨೦೧೩-೧೪	೨೨೭೭	೪.೦೦
೨೦೧೪-೧೫	೧೯೨೮	೧೦.೦೦
೨೦೧೫-೧೬	೨೦೪೧	೧೦.೦೦
೨೦೧೬-೧೭	೧೯೧೨	೧೦.೦೦

ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಅಸ್ಪ್ರಶ್ಯತೆ, ದೌರ್ಜನ್ಯ, ದಬ್ಬಾಳಿಕೆ, ಮತ್ತು ಬಹಿಷ್ಕಾರದಂತಹ ಪ್ರಕರಣಗಳು ನಡೆಯುತ್ತಿವೆ ಎಂಬುದು ಗೋಚರಿಸುತ್ತದೆ. ಹೀಗಾಗಿ ಅಸ್ಪ್ರಶ್ಯತೆ ಎಂಬುದು ಇಂದಿಗೂ ಸಹ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ ಎಂದು ಹೇಳಬಹುದು.

ಏಕೆಂದರೆ ಕೇವಲ ನಾಲ್ಕು ವರ್ಷಗಳಲ್ಲಿ ೮೧೫೪ ಪ್ರಕರಣಗಳು ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇದು ಅಸ್ಪ್ರಶ್ಯತೆಯ ಒಂದು ಮಗ್ಗಲನ್ನು ಪ್ರತಿಬಿಂಬಿಸುತ್ತದೆ. ಇದಕ್ಕೆ ಹಲವಾರು ಆಯಾಮಗಳಿವೆ ಈ ಆಯಾಮಗಳ ಮೂಲಕ ನೋಡಿದರೆ ಇನ್ನೂ ಭಯಂಕರವಾದ ಮಾಹಿತಿಗಳು ಲಭ್ಯವಾಗುತ್ತವೆ.

ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ

ಅಸ್ಪ್ರಶ್ಯತೆ ನಿವಾರಣೆ ಮತ್ತು ಸಾಮಾಜಿಕ ಸಮಾನತೆ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಅಂತರಜಾತಿ ವಿವಾಹವಾಗುವು ಯುವಕರಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಪರಿಶಿಷ್ಟ ಜಾತಿಯ ಯುವಕರು ಇತರೆ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ಸರ್ಕಾರವು ೨ ಲಕ್ಷ ರೂಪಾಯಿಗಳನ್ನು ಪ್ರೋತ್ಸಾಹಧನ ನೀಡುತ್ತದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿಯ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿ ೩ ಲಕ್ಷ ರೂಪಾಯಿಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಈ ರೀತಿಯಾಗಿ ವಿವಾಹವಾದ ಯುವಕರಿಗೆ ಅಂತರಜಾತಿ ವಿವಾಹವಾದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಬೇಕು. ಮತ್ತು ಇಂತಹ ವಿವಾಹಗಳನ್ನು ಉಪನೊಂದಾಣಿ ಕಛೇರಿಯಲ್ಲಿ ನೋಂದಣಿ ಮಾಡಿಸಬೇಕು. ಪ್ರೋತ್ಸಾಹಧನ ಪಡೆಯಲು ಯುವತಿಯರ ವಯಸ್ಸು ಸರ್ಕಾರಿ ನಿಯಮದಂತೆ ೧೮-೪೨ ಇರಬೇಕು. ಯುವಕರದ್ದು ೨೧-೪೫ ವಯಸ್ಸು ಇರಬೇಕು. ಈ ಪ್ರೋತ್ಸಾಹಧನ ಪಡೆಯಲು ಆದಾಯದ ಮಿತಿ ವಾರ್ಷಿಕ ೨ ಲಕ್ಷ ರೂಪಾಯಿಗಳು ಇರಬೇಕು. ಇದನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ. ಇದರಲ್ಲಿ ಪ್ರತಿಶತ ೫೦% ಭಾಗದಷ್ಟು ನಗದು ರೂಪದಲ್ಲಿ ಉಳಿದ ಅರ್ಧ ಹಣವನ್ನು ಎನ್.ಎಸ್.ಸಿ ಬಾಂಡ್ ಅಂದರೆ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರ ರೂಪದಲ್ಲಿ ಎಫ್.ಡಿ ಮಾಡಲಾಗುತ್ತದೆ. ಈ ಹಣವು ಯುವಕ ಮತ್ತು ಯುವತಿಯ ಜಂಟಿ ಖಾತೆಯಲ್ಲಿ ಜಮೆ ಮಾಡಲಾಗುತ್ತದೆ. ಹೀಗೆ ಅಸ್ಪ್ರಶ್ಯತೆ ಮತ್ತು ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಮಹತ್ವದ ಮೈಲಿಗಲ್ಲು ಎಂದು ಹೇಳಬಹುದು.

ಒಳಪಂಗಡಗಳ ಅಂತರಜಾತಿ ವಿವಾಹ

ಸಂವಿಧಾನ ಜಾರಿಗೆ ಬಂದ ೭೦ ವರ್ಷಗಳ ಇತಿಹಾಸದಲ್ಲಿ ಕರ್ನಾಟಕ ಸರ್ಕಾರದ ಮಹತ್ವದ ಕಾರ್ಯಕ್ರಮಗಳಲ್ಲಿ ಇದು ಅತ್ಯಂತ ಮಹತ್ವದ ಕಾರ್ಯಕ್ರಮವಾಗಿದೆ. ಏಕೆಂದರೆ ಈ ಹಿಂದೆ ಪ್ರಸ್ತಾಪಿಸಿದಂತೆ ಯಾವುದೇ ಒಂದು ಕಾಯ್ದೆ ಕಾನೂನು ಕಾರ್ಯಕ್ರಮಗಳು ಜಾರಿಗೆ ಬರಬೇಕಾದರೆ ಅದರ ಹಿಂದೆ ಸಾಮಾಜಿಕ ಚಳುವಳಿಯ ಪಾತ್ರ ಇರುತ್ತದೆ ಎಂದು ಪ್ರಸ್ತಾಪಿಸಲಾಗಿತ್ತು. ಕರ್ನಾಟಕ ಸರ್ಕಾರವು ಒಳಪಂಗಡ ಅಂತರಜಾತಿಯ ವಿವಾಹ ಜಾರಿಗೆ ತರುವಲ್ಲಿ ಮೀಸಲಾತಿ ಮತ್ತು ಒಳಮೀಸಲಾತಿಗೆ ಸಂಬಂಧಿಸಿದಂತೆ ಅನ್ವಯಿಸಿ ಹೇಳಬಹುದು. ಏಕೆಂದರೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಅಸ್ಪೃಶ್ಯ ಜಾತಿಗಳು ಇವೆ ಮತ್ತು ಸ್ಪರ್ಶಜಾತಿಗಳು ಇವೆ. ಅದೇ ರೀತಿಯಾಗಿ ಪರಿಶಿಷ್ಟ ಪಂಗಡ ಪಟ್ಟಿಗಳಲ್ಲಿಯೂ ಇವೆ. ಇದರಲ್ಲಿರುವ ಜಾತಿಗಳಲ್ಲಿಯೂ ಮಡಿವಂತಿಕೆಯನ್ನು

ಆಚರಿಸುತ್ತವೆ. ಹಾಗಾಗಿ ಒಳಗಿರುವ ತಾರತಮ್ಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡ ತೀರ್ಮಾನವು ಮಹತ್ವದ್ದು ಎಂದು ಹೇಳಲೇ ಬೇಕು ಇದನ್ನು ಕರ್ನಾಟಕ ಸರ್ಕಾರವು ೨೦೧೭-೧೮ನೇ ಸಾಲಿನಲ್ಲಿ ಜಾರಿಗೆ ತಂದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕ ಯುವತಿಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕ ಯುವತಿಯರನ್ನು ವಿವಾಹವಾದಲ್ಲಿ ೨ ಲಕ್ಷ ರೂಪಾಯಿಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಇದಕ್ಕೆ ವಯೋಮಿತಿ ಯುವಕರಿಗೆ ೨೫-೪೫ ವರ್ಷಗಳು ಮತ್ತು ಯುವತಿಯರಿಗೆ ೧೮-೪೨ ವರ್ಷಗಳು ಇರಬೇಕು. ದಂಪತಿಗಳ ವಾರ್ಷಿಕ ಆದಾಯ ೨ ಲಕ್ಷರೂಪಾಯಿಗಳಿಗೆ ಮೀರಿರಬಾರದು. ಅಂತರಜಾತಿ ವಿವಾಹ ವಿಧವಾ ಮರುವಿವಾಹ, ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ. ಸರಳ ವಿವಾಹ ಪ್ರೋತ್ಸಾಹಧನ ಪಡೆದಿದ್ದಲ್ಲಿ ಅಂತಹ ದಂಪತಿಗಳಿಗೆ ೧.೫೦ ಲಕ್ಷ ರೂಪಾಯಿಗಳ ಪ್ರೋತ್ಸಾಹಧನ ನೀಡಲಾಗುವುದು.[೧೮]

ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯ ಬಗ್ಗೆ ನಡೆದ ಚರ್ಚೆಗಳು

ರಾಜಕೀಯ ಪ್ರಾತಿನಿಧಿತ್ವ ಪ್ರಜಾಪ್ರಭುತ್ವ ಯಶಸ್ಸಿನ ಅಂಶಗಳಲ್ಲಿ ಒಂದು ಪ್ರಮುಖವಾದ ವಿಷಯ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರನ್ನು ಒಳಗೊಳ್ಳುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರುವುದೇ ಒಂದು ಮಹಾಕ್ರಾಂತಿಕಾರಕ ಬೆಳವಣಿಗೆಯಾಗಿದೆ. ಅಸಮಾನತೆಯ ಸಮಾಜ ಸ್ಪೃಶ್ಯ-ಅಸ್ಪೃಶ್ಯ ಸಮುದಾಯಗಳ ಶೋಷಣೆ, ದೌರ್ಜನ್ಯ ಇವುಗಳಿಂದ ಕೂಡಿರುವ ಸಮಾಜದಲ್ಲಿ ಪ್ರಾತಿನಿಧಿತ್ವವನ್ನು ರಾಜಕೀಯ ಸಮಾನತೆಯ ಆಧಾರದಲ್ಲಿ ರೂಪಗೊಳಿಸುವುದರಲ್ಲಿ ಸ್ವತಂತ್ರ ಚಳುವಳಿಯಷ್ಟೇ ಮುಖ್ಯವೆನಿಸಿದೆ. ರಾಜಕೀಯ ಪ್ರಾತಿನಿಧಿತ್ವದ ಚಳುವಳಿಯನ್ನು ಈ ದೇಶ ಕಂಡಿತ್ತು ಸಾಮಾಜಿಕ ಶಕ್ತಿಗಳು ಹೇಗಿತ್ತು ಎಂಬುದನ್ನು ಇಡೀ ಜಗತ್ತಿಗೆ ಪರೋಕ್ಷವಾಗಿ ಮತ್ತು ಭಾರತೀಯರಿಗೆ ನೇರವಾಗಿ ತಿಳಿಸಿದ ಚಳುವಳಿಯು ಇದಾಗಿತ್ತು. ಭಾರತದ ಇತಿಹಾಸದಲ್ಲಿ ಇಂತಹ ಹೊಸ ಚರಿತ್ರೆಯನ್ನು ಸೃಷ್ಟಿಸಿದ್ದು ಡಾ. ಬಿ.ಆರ್. ಅಂಬೇಡ್ಕರ್ ಅವರ ಹೋರಾಟ ಶ್ರಮದಿಂದ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ರಾಜಕೀಯ ಪ್ರಾತಿನಿಧ್ಯ ಹೊಂದಲು ಸಾಧ್ಯವಾಯಿತು. (ಸೋಮಶೇಖರ್ ಜೆ, ಶಶಿಕುಮಾರ ಡಿ.ಜೆ., ಜರ್ನಲ್ ಆಫ್ ಕರ್ನಾಟಕ, ೨೦೦೯, ಭಾರತ ಇತಿಹಾಸದಲ್ಲಿ ಜಾತಿ ಮತ್ತು ವರ್ಣ ವ್ಯವಸ್ಥೆಯ ವಿರುದ್ಧ ಧಾರ್ಮಿಕ ಆಂದೋಲನಗಳು ಸಾಮಾಜಿಕ ಸುಧಾರಣಾ ಚಳುವಳಿಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಅದರಲ್ಲಿ ಬುದ್ಧ, ಬಸವಣ್ಣ, ಮಹಾತ್ಮ ಜ್ಯೋತಿ ಬಾ ಪುಲೆ ಕೊಲ್ಲಾಪುರ ಸಂಸ್ತಾನದ ರಾಜ ಛತ್ರಪತಿ ಸಾಹುಮಹಾರಾಜ, ಮೈಸೂರು ಸಂಸ್ಥಾನದ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್, ಕೇರಳದಲ್ಲಿ ನಾರಾಯಣ ಗುರು, ತಮಿಳುನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ಅಯ್ಯಾಂಗಾರ್ ಮುಂತಾದವರು ಸಾಮಾಜಿಕ ಪರಿವರ್ತನಾ ಹರಿಕಾರರು, ಅದೇ ರೀತಿಯಾಗಿ ಇಪ್ಪತ್ತನೇ ಶತಮಾನದ ಮಹಾನ್ ಸಾಮಾಜಿಕ ಪರಿವರ್ತನಾಕಾರ ಎಂದರೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಮೊದಲು ದೇಶ, ಭಾಷೆಯನ್ನು ಆಳವಾಗಿ ಅಧ್ಯಯನ ಮಾಡಿ ವಿಸ್ತೃತ ವರದಿಯನ್ನು ತಯಾರಿಸಿ ಸಾಕ್ಷಾಧಾರಗಳೊಂದಿಗೆ ವಾದ ಮಂಡಿಸುತ್ತಿದ್ದರು ದೇಶದ ಏಳ್ಗೆಗೆ

ಮೊದಲ ಅಡ್ಡಿಯಾದದ್ದು ಜಾತಿ ಮತ್ತು ಅಸಮಾನತೆ ಈ ವಿಷಯವನ್ನು ಅವರು ಮೊದಲು ಕೈಗೆತ್ತಿಕೊಂಡರು ಅದಕ್ಕಾಗಿ ಅಂಬೇಡ್ಕರ್ ಅವರು ರಾಜಕೀಯ ಅಧಿಕಾರವನ್ನು ಪಡೆಯಲು ಚಳುವಳಿಯನ್ನು ರೂಪಿಸಿದರು ಮತ್ತು ಅದರಲ್ಲಿಯ ಯಶಸ್ವಿಯನ್ನು ಕಂಡರು.

ಸೌಥ್‌ಬರೋ ಸಮಿತಿ

ಭಾರತದಲ್ಲಿ ಮೊದಲಬಾರಿಗೆ ಮತದಾನದ ಹಕ್ಕಿನ ಬಗ್ಗೆ ಚರ್ಚೆ ಮತ್ತು ತೀರ್ಮಾನ ತೆಗೆದುಕೊಳ್ಳಲು ಬ್ರಿಟೀಷ್ ಸರಕಾರ ನೇಮಿಸಿದ ಸಮಿತಿಯೇ ಸೌತ್ ಬರೋ ಸಮಿತಿ. ಬ್ರಿಟೀಷ್ ಭಾರತದ ರಾಜಕೀಯದಲ್ಲಿ ಮತದಾನದ ಹಕ್ಕನ್ನು ಜಮೀನ್ದಾರರು ತೆರಿಗೆ ಪಾವತಿದಾರರಿಗೆ ಮತ್ತು ಶೈಕ್ಷಣಿಕ ಮಟ್ಟ ಅಂದರೆ ವಿದ್ಯಾರ್ಹತೆಯನ್ನು ಮಾನದಂಡವಾಗಿಟ್ಟುಕೊಂಡು ಮತದಾನದ ಹಕ್ಕನ್ನು ನೀಡಲಾಗುತ್ತಿತ್ತು. ಬಹು ಸಂಖ್ಯಾತರಾದ ಅಸ್ಪೃಶ್ಯರು ಹಿಂದುಳಿದ ವರ್ಗ ಮತ್ತು ಮುಸ್ಲಿಂರನ್ನು ಕಡೆಗಣಿಸಲಾಗಿತ್ತು. ಈ ವಸ್ತು ಸ್ಥಿತಿಯನ್ನು ತಿಳಿಯಲು ಬ್ರಿಟೀಷ್ ಸರಕಾರ ಭಾರತದಲ್ಲಿ ಮತದಾನದ ಹಕ್ಕನ್ನು ವಿಸ್ತರಿಸುವ ಉದ್ದೇಶದಿಂದ ರೈಟ್ ಆನರೆಬಲ್ ಲಾರ್ಡ್ ಸೌಥ್‌ಬರೋ ಎಂಬುವವರ ನೇತೃತ್ವದಲ್ಲಿ ಚುನಾವಣಾ ಹಕ್ಕಿನ ಸಮಿತಿಯನ್ನು ೧೯೧೭ರಲ್ಲಿ ನೇಮಿಸಿತು. ಇದು ಭಾರತದಲ್ಲಿ ರಚನೆಯಾದ ಮೊದಲ ಮತದಾನ ಹಕ್ಕಿನ ಸಮಿತಿ (ಜೆ.ಸೋಮಶೇಖರ ಮತ್ತು ಶಶಿಕುಮಾರ ಡಿ.ಜೆ. ಜರ್ನಲ್ ಆಫ್ ಕರ್ನಾಟಕ ಡಿ. ೨೦೦೯) ಇದರಲ್ಲಿ ಭಾರತೀಯರಿಗೆ ಚುನಾವಣೆಗಳಲ್ಲಿ ಭಾಗವಹಿಸುವ ಹಾಗೂ ಮತ ಚಲಾಯಿಸುವ ಸಂಬಂಧದಲ್ಲಿ ನಾಯಕರ ಭಿನ್ನಾಭಿಪ್ರಾಯ ಬಗೆಹರಿಸಲು ಮತ್ತು ಭಾರತದ ಆಡಳಿತ, ರಾಜಕೀಯ ಹಾಗೂ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದಾಗಿತ್ತು.

ಈ ಸಮಿತಿಯಲ್ಲಿ ಶ್ರೀನಿವಾಸಶಾಸ್ತ್ರಿ ಮತ್ತು ಸುರೇಂದ್ರನಾಥ ಬ್ಯಾನರ್ಜಿ ಸದಸ್ಯರಾಗಿದ್ದರು, ಡಾ.ಬಾಬುರಾಜೇಂದ್ರ ಪ್ರಸಾದ್, ಮೋತಿಲಾಲ್ ನೆಹರು ಮತ್ತು ಮದನ ಮೋಹನ್ ಮಾಳವಿಯವರು ಸಾಕ್ಷಿಗಳಾಗಿದ್ದರು.[೯] ಈ ಮೇಲಿನ ಸಮಿತಿಯ ಮುಂದೆ ಅಂಬೇಡ್ಕರ್ ಅವರ ಸಮಿತಿಯು ಸಮರ್ಥವಾದ ಮಂಡಿಸಿದರು. ಈ ಸಮಿತಿ ಮುಂದೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಅಸ್ಪೃಶ್ಯರ ಮತದಾನ ಹಕ್ಕಿಗಾಗಿ ನೀಡಿದ ಸಾಕ್ಷಿ ಅವರ ರಾಜಕೀಯ ಬರವಣಿಗೆಯ ಪ್ರಥಮ ಪ್ರಬಂಧ ಇವರು ೧೯೧೯ ಜನವರಿ ೨೭ರಂದು ಸಮಿತಿಯ ಮುಂದೆ ಮೌಖಿಕ ಹೇಳಿಕೆಯನ್ನು ಈ ರೀತಿಯಾಗಿ ನೀಡಿದ್ದಾರೆ.

ಭಾರತದಲ್ಲಿ ಜನಪ್ರಿಯ ಸರಕಾರ ರಚಿಸುವಾಗ ಈ ಸಮಿತಿಯ ಅಭಿಪ್ರಾಯ ಮತ್ತು ವ್ಯಕ್ತಿಗಳ ಪ್ರಾತಿನಿಧ್ಯಕ್ಕೆ ಇವೆರಡಕ್ಕೂ ಅವಕಾಶವಿರಬೇಕು. ಚುನಾವಣಾ ಪದ್ಧತಿ ಮತ್ತು ಮತ ಕ್ಷೇತ್ರ ರಚಿಸುವಾಗ ಇವುಗಳಿಗೆ ಅವಕಾಶವೇ ಇಲ್ಲದೆ ಹೋದರೆ ಜನಪ್ರಿಯ ಸರಕಾರದ ಉದ್ದೇಶ ಈಡೇರುವುದಿಲ್ಲ. ಭಾರತೀಯರು ಜಾತಿ ಪಂಗಡಗಳಾಗಿ ವಿಭಜನೆಗೊಂಡಿರುವುದರಿಂದ ಪ್ರಾತಿನಿಧಿಕತ್ವಕ್ಕೆ ಯೋಗ್ಯರಲ್ಲ ಎನ್ನುವುದಾದರೆ ಅಮೇರಿಕಾದಲ್ಲಿಯೂ ಸಹ ವಿವಿಧ ಭಾಷೆ, ಧಾರ್ಮಿಕ, ಮತ್ತು ನೈತಿಕ ಕಟ್ಟಳೆಗಳ

ಪರಂಪರೆ ಹೊಂದಿದ್ದಾರೆ. ಸಾಮಾಜಿಕ ವಿಭಜನೆಯಿಂದಾಗಿ ಯಾವುದಾದರೂ ರಾಷ್ಟ್ರ ಪ್ರತಿನಿಧಿ ಸರಕಾರ (Representative Govt) ಅಸಮರ್ಥ ಎನ್ನುವುದಾದರೆ ಭಾರತಕಷ್ಟೇ ಯಾಕೇ ಅಮೇರಿಕಾವು ಸಹ ಅಸಮರ್ಥವಾಗಬೇಕು. ಅಲ್ಲಿಯೂ ಸಹ ಸಾಮಾಜಿಕ ಗುಂಪು/ವರ್ಗಗಳಿದ್ದರೂ ಅದು ಪ್ರತಿನಿಧಿ ಸರಕಾರಕ್ಕೆ ಯೋಗ್ಯವಾಗಿದೆ ಎಂದರೆ ಭಾರತದಲ್ಲಿ ಏಕೆ ಸಾಧ್ಯವಿಲ್ಲ ಎಂಬ ನಿಲುವನ್ನು ವ್ಯಕ್ತಪಡಿಸಿದ್ದರು. ಹೀಗಾಗಿ ಧರ್ಮ, ಜಾತಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಸ್ಪೃಶ್ಯರಿಗೆ ಹಕ್ಕನ್ನು ನಿರಾಕರಿಸಲಾಗಿದೆ. ಹಾಗಾಗಿ ಅವರ ನಿಜವಾದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಇತರರಿಂದ ಸಾಧ್ಯವಿಲ್ಲ, ಈ ಕಾರಣದಿಂದಾಗಿ ಅವರಿಗೆ ಮತದಾನದ ಹಕ್ಕನ್ನು ನೀಡಲು ಇರುವ ಮಾನದಂಡಗಳನ್ನು ಸಡಿಲಗೊಳಿಸಿ ಅವರಿಗೆ ಮತದಾನದ ಹಕ್ಕನ್ನು ನೀಡುವ ಮೂಲಕ ಅವರ ಪ್ರಾತಿನಿಧ್ಯಕ್ಕೆ ಅವಕಾಶ ನೀಡಬೇಕು ಎಂದು ಪ್ರತಿಪಾದಿಸಿದರು. ಆದರೆ ಇದರಲ್ಲಿ ಮಾರ್ಲೆ–ಮಿಂಟೋ ಸುಧಾರಣೆಗಳ ಮೂಲಕ ಮುಸ್ಲಿಂರಿಗೆ ಕೋಮುವಾರು ಪ್ರಾತಿನಿಧ್ಯಕ್ಕೆ ಅವಕಾಶ ನೀಡಲಾಯಿತು. ಆದರೆ ಅಸ್ಪೃಶ್ಯರಿಗೆ ಮಾತ್ರ ನಾಮಕರಣ ಸದಸ್ಯತ್ವಕ್ಕೆ ಒಪ್ಪಿಗೆ ನೀಡಿತು. ಆದರೆ ಈ ವಿಷಯದಲ್ಲಿ ಕಾಂಗ್ರೇಸ್ ನಡೆಯನ್ನು ಕಟ್ಟುವಾಗಿ ಟೀಕಿಸಿದರು. ನಾಮಕರಣ ಪದ್ಧತಿಯು ಅಸ್ಪೃಶ್ಯರ ದೃಷ್ಟಿಯಿಂದ ಒಳಿತಲ್ಲ, ಅಲ್ಲದೆ ಇದು ಪ್ರತಿನಿಧಿಗಳ ಸ್ವಾತಂತ್ರಕ್ಕೆ ದಕ್ಕೆ ತರುತ್ತದೆ. ಈ ಪದ್ಧತಿ ಆಯ್ಕೆ ಮಾಡಿದವರ ಮತ್ತು ಆ ಪಕ್ಷಕ್ಕೆ ವಿಧೇಯನಾಗಿರಬೇಕಾಗಿರುತ್ತದೆ. ಅಥವಾ ಗುಣವಂತನಾಗಬೇಕಾಗುತ್ತದೆ. ಅದೇ ರೀತಿಯಾಗಿ ಇದು ಅಸ್ಪೃಶ್ಯರ ರಾಜಕೀಯ ಶಿಕ್ಷಣ ನೀಡುವಲ್ಲಿ ವಿಫಲವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಸ್ಪೃಶ್ಯರ ಬಗ್ಗೆ ಅಂಬೇಡ್ಕರ್ ಅವರು ಹೊಂದಿದ್ದ ಕಾಳಜಿಯ ಫಲವಾಗಿ ಮುಂದೆ ೧೯೧೯ರಲ್ಲಿ ಮಾಂಟೆಗೋ ಚೆಮ್ಸ್‌ಫರ್ಡ ಕಾಯ್ದೆ ಮೂಲಕ ನಿಮ್ನ ವರ್ಗದ ಅಸ್ಥಿತ್ವವನ್ನು ಮಾನ್ಯ ಮಾಡುತ್ತದೆ. ಇಲ್ಲಿಯೂ ಸಹ ನಾಮಕರಣ ಪದ್ಧತಿಯನ್ನು ಬೆಂಬಲಿಸಿತು. ಆದರೆ ಅಂಬೇಡ್ಕರ್ ಅದನ್ನು ಒಪ್ಪುವುದಿಲ್ಲ. ಅದೇ ರೀತಿಯಾಗಿ ೧೯೨೧ರಲ್ಲಿ ರಚನೆಯಾದ ವೃದ್ದಿಮಾನ್ ಸಮಿತಿಯು ಸಹ ನಿಮ್ನವರ್ಗದವರ ಪ್ರಾತಿನಿಧಿತ್ವವು ಸರಿಯಾದ ಪ್ರಮಾಣದಲ್ಲಿ ದೊರಕಿಲ್ಲವೆಂದು ಅಭಿಪ್ರಾಯಪಟ್ಟಿತ್ತು. ಆದರೂ ಇದು ಅಂಬೇಡ್ಕರ್ ಅವರಿಗೆ ರಾಜಕೀಯ ರಂಗದಲ್ಲಿ ಸಿಕ್ಕ ಮೊದಲ ಜಯವಾಗಿದೆ. ಅಂದರೆ ಇದರಲ್ಲಿ ಅಂಬೇಡ್ಕರರು ಎರಡು ಜನಾಂಗದ ವಿರೋಧವನ್ನು ಕಟ್ಟಿಕೊಂಡು ಈಜಿದರು ಒಂದು ಭಾರತದ ಮೇಲ್ಜಾತಿ ಹಿಂದುಗಳು ಎರಡನೆಯದಾಗಿ ಮೇಲ್ಜಾತಿಗಳಿಗೇಕೆ ಜಾತಿಗಳಿಗೆ ಪೆಟ್ಟುಕೊಡುವ ಬ್ರಿಟೀಷರಿಂದ ಹೀಗಾಗಿ ಎರಡು ಜನಾಂಗ ಅಂದರೆ ಬ್ರಿಟೀಷರಿಗೆ ಮತ್ತು ಭಾರತೀಯರಿಗೆ ಅಂಬೇಡ್ಕರ್ ಕೇಳುವುದರಲ್ಲಿ ನ್ಯಾಯವಿದೆ ಎಂಬಂತೆ ಅವರು ತಮ್ಮ ವಿಚಾರವನ್ನು ಅಸ್ಪೃಶ್ಯರಿಗೆ ಪ್ರಾತಿನಿಧ್ಯ ಮತ್ತು ಮತದಾನದ ಹಕ್ಕನ್ನು ಒದಗಿಸಿಕೊಟ್ಟರು.[೨೦]

ಸೈಮನ್ ಕಮೀಶನ್

೧೯೧೯ರ (ಮಾಂಟಗೋ ಚೆಮ್ಸ್‌ಫರ್ಡ್) ಭಾರತ ಸರಕಾರ ಕಾಯಿದೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಪರಿಶೀಲಿಸಲು ಮತ್ತು ಭಾರತಕ್ಕೆ ಸ್ವಯಂ ಆಡಳಿತ ನೀಡಲು ಕಾಲ

ಪರಿಪಕ್ವವಾಗಿದೆಯೇ ಎಂದು ತಿಳಿದುಕೊಳ್ಳುವುದಕ್ಕಾಗಿ ಸರ್‌ಜಾನ್‌ಸೈಮನ್ ಎಂಬುವವರ ನೇತೃತ್ವದಲ್ಲಿ ೭ಜನರ ಒಳಗೊಂಡ ಒಂದು ಆಯೋಗವನ್ನು ನವೆಂಬರ್ ೮ ೧೯೨೭ರಂದು ಬ್ರಿಟೀಷ್ ಸರಕಾರವು ರಚನೆ ಮಾಡಿತು. ಆ ಆಯೋಗವು ಭಾರತಕ್ಕೆ ಬಂದು ತನ್ನ ಕಾರ್ಯ ಕೈಗೊಂಡ ಸಮದರ್ಭದಲ್ಲಿ ಮೇ ೨೯ ೧೯೨೯ರಂದು ಬಾಂಬೆಯಲ್ಲಿ ಸೈಮನ್ ಆಯೋಗದ ಮುಂದೆ ಶೋಷಿತ ಸಮುದಾಯದ ಎಲ್ಲರಿಗೂ ಮತದಾನದ ಹಕ್ಕು ನೀಡಬೇಕು ಶಾಸನ ಸಭೆಗಳಲ್ಲಿ ಅವರಿಗೆ ಮೀಸಲು ಸ್ಥಾನ ನೀಡಬೇಕೆಂದು ಆಗ್ರಹಿಸಿದರು. ನಾಮಕರಣ ಪದ್ಧತಿ ಇರಲೇ ಬಾರದು ಈ ಪದ್ಧತಿ ಪರಾಧೀನತೆಯನ್ನು ಸಾರುತ್ತದೆ ಎಂದು ಒತ್ತಿ ಹೇಳಿದರು.

ಬಾಂಬೆ ವಿಧಾನಸಭೆಯಲ್ಲಿ ೧೪೦ ಸ್ಥಾನಗಳಲ್ಲಿ ೨೨ ಸ್ಥಾನಗಳನ್ನು ಅಸ್ಪೃಶ್ಯರಿಗೆ ನೀಡಬೇಕೆಂದು ವಾದಿಸಿದರು, ವಯಸ್ಕ ಮತದಾನ ಪದ್ಧತಿ ಜಾರಿಗೆ ಬರಬೇಕು. ಮತ್ತು ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿರಬೇಕು ಎಂದು ಆಗ್ರಹಿಸಿದರು ಅಂಬೇಡ್ಕರ ವಾದ ಮತ್ತು ಅಂದಿನ ಬೆಳವಣಿಗೆ ಬಗ್ಗೆ ಅಂದಿನ ಸ್ವಾತಂತ್ರ್ಯ ಚಳುವಳಿಯಲ್ಲಿದ್ದ ಬಹುತೇಕ ನಾಯಕರ ಈ ಆಯೋಗವನ್ನು ವಿರೋಧಿಸಿದರು. ಶೋಷಿತ ಸಮುದಾಯಗಳನ್ನು ಜಾತಿವಾರು ಅಧ್ಯಯನ ಮಾಡುವುದು ಮತ್ತು ಗುರುತಿಸುವುದು ಅವರ್ಯಾರಿಗೂ ಇಷ್ಟವಿರಲಿಲ್ಲ. ಸೈಮನ್ ಕಮಿಶನ್ ವಿರುದ್ಧ "ಸೈಮನ್‌ಗೋಬ್ಯಾಕ್" ಎಂದು ರಾಷ್ಟ್ರದಾದ್ಯಂತ ಪ್ರತಿಭಟನೆ ರೂಪಿಸಿದರು. ಮುಗ್ಧ ಜನರು ಇದನ್ನು ಸ್ವಾತಂತ್ರ್ಯ ಹೋರಾಟವೆಂದು ಭಾವಿಸಿದರು. ಶೋಷಿತರ ಹಕ್ಕುಗಳ ಜಾರಿಯಲ್ಲಿ ಇದೊಂದು ಮಹತ್ತರವಾದ ಸಮಿತಿ ಎಂದು ಅರಿತಿದ್ದ ಅಂಬೇಡ್ಕರರು ಈ ಸಮಿತಿಯನ್ನು ವಿರೋಧಿಸದಂತೆ ಶೋಷಿತರಿಗೆ ಮನವಿ ಮಾಡಿದರು. ಮುಂದೆ ಅಂಬೇಡ್ಕರವರ ಸಾಮಾಜಿಕ ಕಳಕಳಿಯನ್ನು ಮತ್ತು ಶೋಷಿತರ ಪರ ಹೋರಾಟವನ್ನು ಮೆಚ್ಚಿ ಬ್ರಿಟೀಷ್ ಸರಕಾರವೇ ಅವರನ್ನು ೧೯೨೯ರಲ್ಲಿ ಮುಂಬೈ ವಿಧಾನಪರಿಷತ್‌ಗೆ ನಾಮಕರಣ ಮಾಡುತ್ತದೆ. ಇದು ಅಂಬೇಡ್ಕರ ಅವರ ರಾಜಕೀಯ ಹೋರಾಟಕ್ಕೆ ಸಿಕ್ಕ ಜಯವಾಗಿತ್ತು, ಅಲ್ಲದೆ ಅಂಬೇಡ್ಕರರಿಗೆ ನೈತಿಕ ಬಲ ತುಂಬಿದ್ದ ಸೈಮನ್ ಕಮೀಶನ್ ಎಂಬುದು ವಿಶೇಷ.[೨೧]

ಮೊದಲನೆಯ ದುಂಡುಮೇಜಿನ ಸಮ್ಮೇಳನ

ಭಾರತಕ್ಕೆ ಸಂವಿಧಾನ ರಚನೆ, ಸಂವಿಧಾನ ಸ್ವರೂಪ ಮತ್ತು ಸಂವಿಧಾನಕ್ಕೆ ತರಬೇಕಾಗಿರುವ ಮಾರ್ಪಾಡುಗಳನ್ನು ಚರ್ಚಿಸುವ ಉದ್ದೇಶದಿಂದ ಭಾರತದಲ್ಲಿನ ಹಲವಾರು ದೃಷ್ಟಿ ಕೋನವುಳ್ಳ ನಾಯಕರನ್ನು ಒಳಗೊಂಡ ದುಂಡುಮೇಜಿನ ಸಮ್ಮೇಳನವನ್ನು ಅಂದಿನ ಕಾರ್ಮಿಕ ಪಕ್ಷದ ಪ್ರಧಾನಿಯಾಗಿದ್ದ ಮ್ಯಾಕ್‌ಡೊನಾಲ್ಡ್ ಅವರ ಅಧ್ಯಕ್ಷತೆಯಲ್ಲಿ ಮೊದಲನೆಯ ದುಂಡು ಮೇಜಿನ ಸಮ್ಮೇಳನವನ್ನು ಲಂಡನಿನಲ್ಲಿ ಕರೆಯಲಾಗಿತ್ತು, ಇದರಲ್ಲಿ ೮೯ ಪ್ರತಿನಿಧಿಗಳು ಭಾಗವಹಿಸಿದ್ದರು, ಅದರಲ್ಲಿ ೧೬ ಪ್ರತಿನಿಧಿಗಳು ಬ್ರಿಟೀಷ್ ರಾಜಕೀಯ ಪಕ್ಷಗಳಿಂದ ೫೩ಜನ ಬ್ರಿಟೀಷ್ ಭಾರತದಿಂದ ಮತ್ತು ೨೦ ಜನ ಭಾರತೀಯ ರಾಜ ಪ್ರತಿನಿಧಿಗಳಿಂದ ಭಾಗವಹಿಸುವ ಮೂಲಕ ಪ್ರಥಮ ದುಂಡುಮೇಜಿನ ಸಮ್ಮೇಳನವು ಡಿಸೆಂಬರ್ ೧೪ ೧೯೩೦ರಲ್ಲಿ ಪ್ರಾರಂಭವಾಯಿತು. ಈ ಸಮ್ಮೇಳನದಲ್ಲಿ

ಅಂಬೇಡ್ಕರ ಮತ್ತು ರಾವ್‌ಬಹೂದ್ದೂರ್ ಶ್ರೀನಿವಾಸ ನಿಮ್ನ ವರ್ಗದ ಪ್ರತಿನಿಧಿಗಳಾಗಿದ್ದರು. ಈ ಸಮ್ಮೇಳನದಲ್ಲಿ ಅಂಬೇಡ್ಕರರು ಮತ್ತು ಅವರ ಸಹೋದ್ಯೋಗಿಗಳು ರಾವ್‌ಬಹುದ್ದೂರು ಮತ್ತು ಶ್ರೀನಿವಾಸ ಅವರು ೪.೩೦.೦೦೦ ನಿಮ್ನವರ್ಗದ ಪ್ರತಿನಿಧಿಗಳಾಗಿದ್ದೇವೆಂದು ಅಸ್ಪೃಶ್ಯರ ಬಗ್ಗೆ ತಿಳಿಸುತ್ತ ತಮ್ಮ ಕಾಳಜಿಯನ್ನು ಭಾರತೀಯ ಸಮಾಜದಲ್ಲಿ ಅಸ್ಪೃಶ್ಯರಿಗೆ ಗುಲಾಮಗಿರಿಯ ಸ್ಥಾನ ನೀಡಲಾಗಿದೆ. ನಾಗರಿಕ ಹಕ್ಕುಗಳು ಸಹ ಅವರಿಗೆ ನಿರಾಕರಿಸಲಾಗಿದೆ. ಅಸ್ಪೃಶ್ಯರ ಸ್ಥಿತಿಗೆ ಇಂದಿನ ಬ್ರಿಟೀಷ್ ಸರಕಾರವು ಸಹ ಕಾರಣ ಎಂದು ತಿಳಿಸುತ್ತಾ, ಬ್ರಿಟೀಷ್ ಸರಕಾರ ಹಿಂದೆ ಇದ್ದ ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಜೊತೆಗೆ ಅಸ್ಪೃಶ್ಯರಿಗೆ ಹಳೆಯಕೋಟೆಗೆ ಹೊಸ ತೇಪೆಯನ್ನು ಹಾಕಿಕೊಟ್ಟು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಮಸ್ಯೆಗಳನ್ನು ಹಾಗೇಯೇ ಉಳಿಸಿಕೊಂಡು ಬಂದಿದೆ ಎಂಬ ವಾದ ಮಂಡಿಸಿದರು.

ಅಲ್ಲದೆ ಸರಕಾರದಿಂದ ನಿಮ್ನವರ್ಗದವರೆದಂದು ಕರೆಯಲ್ಪಟ್ಟು ಜಾತಿ ಹಿಂದುಗಳಿಂದ ಹತ್ತಿಕ್ಕಲ್ಪಟ್ಟು, ಮುಸ್ಲಿಂರಿಂದ ತಿರಸ್ಕರಿಸಲ್ಪಟ್ಟು ಯಾವುದೇ ರೀತಿಯ ಹೋಲಿಕೆ ಇಲ್ಲದಂತೆ ನಿಸ್ಸಾಹಾಯಕ ಸ್ಥಿತಿಯಲ್ಲಿ ನಮ್ಮನ್ನು ಬಿಡಲಾಗಿದೆ ಎಂದರು, ಕೇಂದ್ರ ಮತ್ತು ಪ್ರಾಂತಿಯ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಬೇಕೆಂದು ಆಗ್ರಹಿಸಿದರು. ಆದರೆ ಈ ಅಧಿವೇಶನದಲ್ಲಿ ಕಾಂಗ್ರೇಸ್ ಭಾಗವಹಿಸದ ಕಾರಣ ಮೊದಲನೇ ದುಂಡುಮೇಜಿನ ಸಮ್ಮೇಳನ ವಿಫಲವಾಯಿತು. ಅಂಬೇಡ್ಕರವರ ಬೇಡಿಕೆಗಳನ್ನು ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಚರ್ಚಿಸುವುದಾಗಿ ಬ್ರಿಟೀಷರ ಸರಕಾರ ಭರವಸೆ ನೀಡಿತ್ತು. ಕಾಂಗ್ರೇಸ್ ಮೊದಲನೆ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸದಿರುವುದಕ್ಕೆ ಸೈಮನ್ ಆಯೋಗ ನಿಮ್ನ ವರ್ಗದವರ ಬಗ್ಗೆ ತೆಗೆದುಕೊಂಡ ತೀರ್ಮಾನವನ್ನು ವಿರೋಧಿಸಿ ಹೊರಗೆ ಉಳಿದಿರುತ್ತದೆ ಎಂಬುದನ್ನು ಬೇರೆ ಹೇಳುವ ಅಗತ್ಯವಿಲ್ಲ ಎನ್ನಿಸುತ್ತದೆ.

ಎರಡನೇ ದುಂಡು ಮೇಜಿನ ಸಮ್ಮೇಳನ ೧೯೩೧

ಮೊದಲನೆಯ ದುಂಡು ಮೇಜಿನ ಪರಿಷತ್‌ನಲ್ಲಿ ಕಾಂಗ್ರೆಸ್ ಭಾಗವಹಿಸಿದ ಕಾರಣ ಗಾಂಧಿ ಮತ್ತು ಇರ್ವಿನ್ ಮಧ್ಯೆ ಮಾರ್ಚ್ ೭ ೧೯೩೧ರಂದು ಒಪ್ಪಂದ ಏರ್ಪಟಿತು. ಈ ಒಪ್ಪಂದವೆ ಎರಡನೆ ದುಂಡುಮೇಜಿನ ಸಮ್ಮೇಳನಕ್ಕೆ ದಾರಿ ಮಾಡಿಕೊಟ್ಟಿತು.

ಎರಡನೆಯ ದುಂಡು ಮೇಜಿನ ಸಮ್ಮೇಳನವು ಸೆಪ್ಟಂಬರ್ ೭ ೧೯೩೧ರಂದು ಪ್ರಾರಂಭವಾಯಿತು. ಇದರಲ್ಲಿ ಗಾಂಧೀಜಿಯವರು ಕಾಂಗ್ರೇಸ್ ಏಕಮೇವ ಪ್ರತಿನಿಧಿಯಾಗಿ ಭಾಗವಹಿಸಿದ್ದರು ಗಾಂಧೀಜಿಯವರು ಈ ಸಭೆಯಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ತಾವು ಮುಸ್ಲಿಮರ ಹಾಗೂ ಇಬ್ಬರು ಹೊರತು ಇತರ ಯಾವ ಕೋಮಿನವರಿಗೆ ರಾಜಕೀಯ ಪ್ರಾತಿನಿಧ್ಯತೆ ಮಾನ್ಯತೆ ನೀಡಲು ಸಿದ್ದರಿಲ್ಲ ಎಂದು ತಿಳಿಸಿದರು. ಆದರೆ ಅಸ್ಪೃಶ್ಯರು ಬಯಸಿದರೆ ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಲಿ ನನ್ನ ಅಭ್ಯಂತರವಿಲ್ಲ ಅದನ್ನು ಸಹಿಸುವೆ, ಆದರೆ ನಮ್ಮ ಗ್ರಾಮಗಳು ಇಬ್ಭಾಗವಾದರೆ ಹಿಂದು ಧರ್ಮಕ್ಕೆ ಒದಗಬಹುದಾದ ಸ್ಥಿತಿಯನ್ನು ಸಹಿಸಲಾರೆ ಎಂದು ತಮ್ಮ ನಿರ್ಧಾರವನ್ನು

ಸಭೆಗೆ ತಿಳಿಸಿದರು. ಅದಕ್ಕೆ ಅಂಬೇಡ್ಕರರು ಪ್ರತಿಕ್ರಿಯಿಸುತ್ತಾ, ನನ್ನ ಮಟ್ಟಿಗೆ ಹೇಳುವುದಾದರೆ ಈ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅವಕಾಶವನ್ನು ನಿಮ್ನ ವರ್ಗದವರಿಗೆ ಕೊಟ್ಟಿದ್ದ ಪಕ್ಷದಲ್ಲಿ ನನಗೆ ಸ್ಥಾನ ದೊರೆಯುತ್ತಿತ್ತು ಎನ್ನುವುದರಲ್ಲಿ ನನಗೆ ಎಳ್ಳಷ್ಟು ಸಂಶಯವಿಲ್ಲ. ಆದ್ದರಿಂದ ನನ್ನ ಪ್ರತಿನಿಧಿಯೆಂದು ಹೇಳಲಿ ಬಿಡಲಿ ನಾನು ನನ್ನ ಕೋಮನ್ನು ಪ್ರತಿನಿಧಿಸುತ್ತೇನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬ್ರಿಟೀಷ್ ಸರಕಾರ ಅಧಿಕಾರವನ್ನು ಹಸ್ತಾಂತರ ಮಾಡುವುದಾದರೆ ಕೆಲವು ಕರಾರುಗಳೊಂದಿಗೆ ಮಾಡಬೇಕು. ಅಧಿಕಾರ ಹಸ್ತಾಂತರವು ಯಾವ ಒಂದು ಗುಂಪಿ (ಕಾಂಗ್ರೇಸ್) ಕೈ ಸೇರದಂತೆ ವಿಧಿವಿಧಾನಗಳನ್ನು ರೂಪಿಸಬೇಕು. ಇದಕ್ಕೆ ಪರಿಹಾರವೆಂದರೆ ಎಲ್ಲಾ ಅಧಿಕಾರದಲ್ಲಿ ಎಲ್ಲಾ ಕೋಮು ಮತ್ತು ಸಮೂಹಗಳಿಗೆ ತಮ್ಮ ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಪ್ರಾತಿನಿಧ್ಯ ಇರಲೇಬೇಕು ಎಂದರು. ಅದಕ್ಕೆ ಗಾಂಧೀಜಿಯವರು "ಪ್ರತ್ಯೇಕ ಚುನಾಯಿತ ವಿಷಯ ಬಂದಾಗ ಅದನ್ನು ನಾನು ಒಬ್ಬನೆ ವಿರೋಧಿಸಬೇಕಾಗಿ ಬಂದಾರೂ ಸಹ ನನ್ನ ಜೀವನವನ್ನು ಪಣಕ್ಕೆ ಇಟ್ಟಾದರೂ ಅದನ್ನು ವಿರೋಧಿಸುತ್ತೇನೆ ಎಂದು ತಿಳಿಸಿದರು.

ಕೋಮುವಾರು ಪ್ರಾತಿನಿಧ್ಯತೆಯ ವಿಚಾರದಲ್ಲಿ ತೀರ್ಮಾನಕ್ಕೆ ಬರುವುದರಲ್ಲಿ ಮೊದಲನೆ ದುಂಡುಮೇಜಿನ ಸಮ್ಮೇಳನ ಮತ್ತು ಎರಡನೆಯ ದುಂಡು ಮೇಜಿನ ಸಮ್ಮೇಳನಗಳು ಫಲ ನೀಡಲಿಲ್ಲ, ಅದಕ್ಕಾಗಿ ಶಾಸನ ಸಭೆಗಳ ಸ್ವರೂಪ, ಶಾಸನ ಸಭೆಗಳ ಗಾತ್ರ, ಹಾಗೂ ಕೋಮು ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ಸರಕಾರವು ಮತದಾನ ಹಕ್ಕಿನ ಶಿಫಾರಸ್ಸಿನ ಮೇರೆಗೆ ಭಾರತೀಯ ಮತದಾನ ಹಕ್ಕಿನ (ಲೋಥಿಯಾ) ಸಮಿತಿಯನ್ನು ೧೯೩೧ಡಿಸೆಂಬರ್‌ನಲ್ಲಿ ನೇಮಿಸಿತು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಗಾಂಧೀಜಿಯವರು ಅಸ್ಪೃಶ್ಯರು ಬಯಸಿದರೆ ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಹೊಂದಲಿ ಆದರೆ ಹಿಂದುಧರ್ಮಕ್ಕೆ ಧಕ್ಕೆಯಾದರೆ ಸಹಿಸಲಾರೆ ಎನ್ನುವುದು ಗಾಂಧೀಜೀಯವರು ಸನಾತನಧರ್ಮಕ್ಕೆ ಕೊಟ್ಟ ಪ್ರಾಧಾನ್ಯತೆ ಮತ್ತು ಅಸ್ಪೃಶ್ಯರ ಬಗ್ಗೆ ಇರುವ ತಾತ್ಸರ ಮನೋಭಾವವನ್ನು ತೋರಿಸುತ್ತದೆ. ಅದೇ ರೀತಿಯಾಗಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಿತ ಪ್ರಶ್ನೆ ಬಂದಾಗ ಅದನ್ನು ನನ್ನ ಜೀವನವನ್ನು ಪಣಕಿಟ್ಟಾದರೂ ವಿರೋಧಿಸುತ್ತೇನೆ ಎನ್ನುವುದು ಸಹ ಅಸ್ಪೃಶ್ಯರ ಬಗ್ಗೆ ಇದ್ದ ತಾತ್ಸರ ಭಾವನೆ ಎದ್ದು ಕಾಣುತ್ತದೆ. ಅದನ್ನು ಸಾಧಿಸಿದ್ದು ಪೂನಾ ಒಪ್ಪಂದದಲ್ಲಿ ಇದರಿಂದ ಅಸ್ಪೃಶ್ಯರ ಪ್ರತ್ಯೇಕ ಚುನಾಯಿತ ಕ್ಷೇತ್ರಗಳ ಕನಸು ನನಸಾಗದೆ ಹೋಯಿತು.

ಭಾರತೀಯ ಮತಧಾನ ಹಕ್ಕಿನ ಸಮಿತಿ (ಲೋಥಿಯಾನ್)

ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಎರಡು ದುಂಡು ಮೇಜಿನ ಸಮ್ಮೇಳನಗಳು ವಿಫಲಗೊಂಡ ಪರಿಣಾಮವಾಗಿ ಬ್ರಿಟೀಷರ ಸರಕಾರ ಲೋಥಿಯಾನ್ ಸಮಿತಿಯನ್ನು ನೇಮಿಸಿತು. ೧೯೩೨ ಮೇ ೧ ರಂದು ಡಾ. ಬಿ ಆರ್ ಅಂಬೇಡ್ಕರ್ ಅಸ್ಪೃಶ್ಯರ ಪರವಾಗಿ ಟಿಪ್ಪಣಿ ಮಂಡಿಸಿದರು. ಅಸ್ಪೃಶ್ಯರೆಂದು

ನಿರ್ಧರಿಸಲು ಭಾರತದೆಲ್ಲಡೆ ಏಕ ರೀತಿಯ ಮಾನದಂಡವನ್ನು ಬಳಸಬಾರದು ಮತ್ತು ಅಸ್ಪೃಶ್ಯತೆ ಇರುವಿಕೆ ಮತ್ತು ಅದರ ಭೀಕರತೆಯ ಬಗ್ಗೆ ಸಮಿತಿಯ ಗಮನ ಸೆಳೆದರು.

ಈ ಸಮಿತಿಯ ಶಿಫಾರಸ್ಸು ಮತ್ತು ಕೋಮುವಾದು ಪ್ರಾತಿನಿಧ್ಯದ ವಾದಗಳನ್ನು ಆಲಿಸಿದ ಬ್ರಿಟೀಷ್ ಸರಕಾರದ ಅಂದಿನ ಪ್ರಧಾನಿಯಾಗಿದ್ದ ರಾಮ್‌ಸೆಮ್ಯಾಕ್ ಡೋನಾಲ್ಡ್ ಅವರು ೧೯೩೨ ಆಗಸ್ಟ್ ೧೭ರಂದು ಕೋಮುವಾರು ಪ್ರಾತಿನಿಧ್ಯದ ತೀರ್ಪನ್ನು ಪ್ರಕಟಿಸಿದರು. ಈ ತೀರ್ಪಿನ ಪ್ರಕಾರ ನಿಮ್ನವರ್ಗದವರನ್ನು ಅಲ್ಪ ಸಂಖ್ಯಾತರೆಂದು ಅವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ನೀಡಲಾಯಿತು. ಇದರಿಂದ ಅಸ್ಪೃಶ್ಯರಿಗೆ ೨ ಮತ ನೀಡುವ ಹಕ್ಕನ್ನು ನೀಡಲಾಯಿತು. ಅದರಂತೆ ಒಂದು ಮತವನ್ನು ತಮ್ಮ ಕೋಮಿನ ಪ್ರತಿನಿಧಿಯನ್ನು ಆಯ್ಕೆಮಾಡಲು ಮತ್ತು ಇನ್ನೊಂದು ಮತವನ್ನು ಆಸ್ಪೃಶ್ಯತರ ಪ್ರತಿನಿಧಿಯನ್ನು ಚುನಾಯಿಸುವುದು ಆದರೆ ಗಾಂಧೀಜಿಯವರು ಅಸ್ಪೃಶ್ಯರಿಗೆ ನೀಡಿದ್ದ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಪೂನಾ ಯರವಾಡ ಜೈಲಿನಲ್ಲಿ ಅಮರಣಾಂತಿಕ ಉಪವಾಸ ಆರಂಭಿಸಿದರು.

ಪೂನಾ ಒಪ್ಪಂದ

ಭಾರತದ ಇತಿಹಾಸದಲ್ಲಿ ಪ್ರಸಿದ್ದಿಯಾದ ಪೂನಾ ಒಪ್ಪಂದವು ಅಸ್ಪೃಶ್ಯರ ಬದುಕನ್ನು ಮತ್ತೆ ಕರಾಳತೆಗೆ ತಳ್ಳಿದಂತು ನಿಜ (ಕೃಷ್ಣ ಮೂರ್ತಿ ಚಮರಂ ೨೦೧೬, ಪುಟ-೩೯) ಯಾಕೆಂದರೆ ಬ್ರಿಟೀಷರು ನೀಷಿದ್ಧ ಕೋಮುವಾರು ಪ್ರಾತಿನಿಧ್ಯ ತೀರ್ಪನ್ನು ಡಾ. ಅಂಬೇಡ್ಕರರು ಸಂತೋಷದಿಂದಲೇ ಸ್ವಾಗತಿಸಿದರು. ಆದರೆ ಇದನ್ನು ವಿರೋಧಿಸಿ ಗಾಂಧಿಜೀಯವರು ಪೂನಾದ ಯರವಾಡ ಜೈಲಿನಲ್ಲಿ ಉಪವಾಸ ಆರಂಭಿಸುತ್ತಾರೆ. ಇದರಿಂದ ದೇಶಾದಾದ್ಯಂತ ಕೋಮುಗಲಭೆಗಳು ನಡೆದವು. ಜೊತೆಗೆ ಅಂಬೇಡ್ಕರ ಅವರನ್ನು ಹಿಂದು ವಿರೋಧಿಯಾಗಿ ಚಿತ್ರಿಸಲಾಯಿತು. ಗಾಂಧೀಜಿಯವರು ಅಸ್ಪೃಶ್ಯರ ಪರವಾಗಿ ಉಪವಾಸ ಕುಳಿತ್ತಿದ್ದಾರೆ. ಅಂಬೇಡ್ಕರ ಅವರ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ದೇಶದಾದ್ಯಂತ ಪುಕಾರು ಎಬ್ಬಿಸಲಾಯಿತು. ಇದರ ಜೊತೆಗೆ ಅಸ್ಪೃಶ್ಯರ ಮೇಲೆ ಮಾರಾಣಾಂತಿಕ ಹಲ್ಲೆಗಳು ನಡೆದವು. ಇದರಿಂದ ಬೇಸತ್ತ ಅಂಬೇಡ್ಕರ್ ಒಲ್ಲದ ಮನಸ್ಸಿನಿಂದ ೨೪.೦೯.೧೯೩೨ರಂದು ಎರಡು ಓಟಿಗೆ ಬದಲಾಗಿ ಒಂದು ಓಟಿಗೆ (ಕ್ಷೇತ್ರಕ್ಕೆ) ಪ್ರತ್ಯೇಕ ಚುನಾಯಿತ ಕ್ಷೇತ್ರಗಳ ಬದಲಿಗೆ ಮೀಸಲು ಕ್ಷೇತ್ರಗಳಿಗೆ ಒಪ್ಪಿಕೊಂಡಿದ್ದರು. ಇದನ್ನೇ ಐತಿಹಾಸಿಕ ಪೂನಾ ಒಪ್ಪಂದವೆಂದು ಕರೆಯಲಾಗಿದೆ.

ಪೂನಾ ಒಪ್ಪಂದ ಪ್ರಕಾರ ಅಸ್ಪೃಶ್ಯರಿಗೆ ದೊರೆತಿದ್ದ ಎರಡು ವಿಶೇಷ ಮತದಾನದ ಹಕ್ಕು ಇರುವ ೭೮ ಸ್ವತಂತ್ರ ಚುನಾವಣಾ ಕ್ಷೇತ್ರಗಳನ್ನು ಕಸಿದುಕೊಂಡು ಒಂದೇ ಓಟು ಹಾಕುವ ೧೫೧ ಮೀಸಲು ಕ್ಷೇತ್ರಗಳನ್ನು ನೀಡಲಾಯಿತು. ಇದರಿಂದ ಮನನೊಂದ ಅಂಬೇಡ್ಕರ್ ಇದೊಂದು ಕರಾಳದಿನ ನನ್ನ ಜನರ ಸ್ವಾಭಿಮಾನವನ್ನು ಕಸಿದುಕೊಂಡು ಗಾಂಧೀಜಿಯವರಿಗೆ ನನ್ನ ಧಿಕ್ಕಾರವಿದೆ ಎಂದು ದುಖಿಃಸಿದರು.

ಸಂವಿಧಾನ ರಚನಾ ಸಭೆಯಲ್ಲಿ ಪರಿಶಿಷ್ಟ ರಾಜಕೀಯ ಮೀಸಲಾತಿ ಕುರಿತಾದ ಚರ್ಚೆಗಳು

ಸಂವಿಧಾನ ರಚನಾ ಸಭೆಗೆ ಡಾ. ಬಿ.ಆರ್. ಅಂಬೇಡ್ಕರರು ಅಸ್ಪೃಶ್ಯರ ಮತ್ತು ಮುಸ್ಲಿಂ ಲೀಗ್‌ನ ಬೆಂಬಲದೊಂದಿಗೆ ಮೊದಲಿಗೆ ಪಶ್ಚಿಮ ಬಂಗಾಳದಿಂದ ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗುತ್ತಾರೆ. ದೇಶ ವಿಭಜನೆಯಿಂದಾಗಿ ಎರಡನೆ ಬಾರಿಗೆ ಬಾಂಬೆಯಿಂದ ಸಂವಿಧಾನ ರಚನಾ ಸಭೆಗೆ ಆಯ್ಕೆಯಾದರು. ಈ ವೇಳೆಗೆ ಅಂಬೇಡ್ಕರ ಸೇವೆ ಮತ್ತು ಪ್ರಮಾಣಿಕತೆಯನ್ನು ಗುರುತಿಸಿದ ಗಾಂಧೀಜಿಯವರು ಮತ್ತು ಡಾ. ಬಾಬುರಾಜೇಂದ್ರ ಪ್ರಸಾದ್ ಅವರು ೨೯.೦೮.೧೯೪೭ರಂದು ಅಂಬೇಡ್ಕರವರನ್ನು ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಭಾರತ ಭವಿಷತ್ತಿನ ರಾಜಕೀಯದಲ್ಲಿ ಅಸ್ಪೃಶ್ಯರ ಸ್ಥಾನಗಳಿಗೆ ಭದ್ರತೆ ಕಲ್ಪಿಸುವ ಮನವಿ ಸಲ್ಲಿಸಿದರು. ಇದಕ್ಕೆ ಉತ್ತರವಾಗಿ ಸರದಾರ ವಲ್ಲಬಾಬಾಯಿ ಪಟೇಲ ಅವರು ಅಸ್ಪೃಶ್ಯತೆ ಆಚರಣೆ ಬಿಲ್ಲನ್ನು ಮಂಡಿಸಿದರು ಅದು ೨೧.೦೯.೧೯೪೯ರಂದು ಜಾರಿಗೆ ಬಂದಿತು. ಇದೊಂದು ಭಾರತದ ಸಾಮಾಜಿಕ ಇತಿಹಾಸದಲ್ಲಿ ಅಸ್ಪೃಶ್ಯರಿಗೆ ವಿಜಯೋತ್ಸವ ದಿನವಾಗಿತ್ತು ಅದೇ ರೀತಿಯಾಗಿ ೨೯೫(ಎ)ಯನ್ನು ಡಾ. ಅಂಬೇಡ್ಕರ್ ಅವರು ಮಂಡಿಸಿದರು ಇದರ ಪ್ರಕಾರ ಸಂವಿಧಾನ ಜಾರಿಯದ ದಿನದಿಂದ ೧೦ ವರ್ಷಗಳವರೆಗೆ ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಎಸ್.ಸಿ/ ಎಸ್.ಟಿ ಸ್ಥಾನಗಳನ್ನು ಮೀಸಲಿಡುವುದಾಗಿತ್ತು. ಮೋಹನದಾಸ್ ಅವರು ಸಾವಿರಾರು ವರ್ಷಗಳಿಂದ ಅಸ್ಪೃಶ್ಯರ ಏಳಿಗೆ ಸಾಧ್ಯವಾಗದೆ ಇರುವುದು ೧೦ ವರ್ಷಗಳಲ್ಲಿ ಸಾಧ್ಯವಾಗುವುದಿಲ್ಲ ಎಂಬುದಕ್ಕೆ ಕಾರಣಗಳನ್ನು ನೀಡುತ್ತಾ ೧೦ ವರ್ಷದಲ್ಲಿ ಅವರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಲಿಲ್ಲ ಅಂದರೆ ಅದನ್ನು ಮುಂದುವರಿಸಬೇಕು ಎಂಬ ಸ್ಪಷ್ಟ ಅಭಿಪ್ರಾಯವನ್ನು ಸದನದಲ್ಲಿ ಮಂಡಿಸಿದರು. ಅದೇ ರೀತಿಯಾಗಿ ಚಂದ್ರಿಕ ರಾಮ ಅವರು ಎಸ್.ಸಿ/ಎಸ್.ಟಿ ಎಲ್ಲಿಯವರೆಗೆ ಅವರು ಮೀಸಲಾತಿ ಇಷ್ಟಪಡುತ್ತಾರೆ ಅಲ್ಲಿಯವರೆಗೆ ಇರಬೇಕು ಯಾಕೆಂದರೆ ೧೦ ವರ್ಷ ಅವಧಿ ತುಂಬಾ ಚಿಕ್ಕ ಅವಧಿ ಎಂದು ಅಭಿಪ್ರಾಯಪಟ್ಟರು. ಅದೇ ರೀತಿಯಾಗಿ ಜಗನ್ನಾಥ್ ನಾರಿಯನ್, ಲಾಲ್ ಶ್ರೀ ಉಪೇಂದ್ರನಾಥ, ಬರಮನ್ ಮತ್ತು ಶ್ರೀಜುಡೇಜಿಯನ್ಸ್ ಶಾಹಿಗಳು ಈ ವಿಚಾರದಲ್ಲಿ ನಮಗೆ ಅಂಬೇಡ್ಕರ ತೀರ್ಮಾನಕ್ಕೆ ನಮ್ಮ ಬೆಂಬಲವಿದೆ ಎಂದು ತಿಳಿಸಿದರು. ಅಂತಿಮವಾಗಿ ಅಸ್ಪೃಶ್ಯರ ಮೀಸಲಾತಿಯ ಅವಧಿಯನ್ನು ೧೦ವರ್ಷದಲ್ಲಿ ಯಶಸ್ಸು ಕಾಣಲಿಲ್ಲವೆಂದರೆ ಅದನ್ನು ಮುಂದುವರೆಸಬೇಕೆನ್ನುವುದು ಅವರ ಸಾಮರ್ಥ್ಯ ಮತ್ತು ಬುದ್ಧಿವಂತಿಕೆ ಮೇಲೆ ನಿಂತಿದೆ ಎಂದು ಅಭಿಪ್ರಾಯಪಡಲಾಯಿತು. ಮೀಸಲಾತಿ ವಿರುದ್ಧವಾಗಿ ಮಾತನಾಡದ ಸದಸ್ಯರಿಗೆ ಉತ್ತರಿಸುತ್ತಾ ಅಸ್ಪೃಶ್ಯರ ಮೀಸಲಾತಿಯನ್ನು ಭಾರತ ಸರಕಾರದ ೧೯೩೫ರ ಕಾಯ್ದೆಯಲ್ಲಿ ಸೇರಿಸಿದರು. ಅದು ಜಾರಿಗೆ ಬಂದು ೧೯೩೭ರ ಚುನಾವಣೆಯಿಂದ ೧೯೩೯ರವರೆಗೆ ಜಾರಿಯಲ್ಲಿತ್ತು, ೧೯೩೯ರಿಂದ ೧೯೪೭ರವರೆಗೆ ಸಂವಿಧಾನದವನ್ನು ಅಮಾನತ್ತಿನಲ್ಲಿ ಇಡಲಾಗಿತ್ತು ಎಂದು ಸ್ಪಷ್ಟಪಡಿಸಿದರು.(ಸೋಮಶೇಖರ್ ಡಿಜಿ ಶಶಿಕುಮಾರ ಡಿಜಿ ೨೦೦೯)

೧೯೫೦ರಿಂದ ಸಂವಿಧಾನ ಜಾರಿಗೆ ಬಂದ ಮೇಲೆ ಸಂವಿಧಾನಿಕ ಅವಕಾಶಗಳು ಲಭ್ಯವಾದವು. ೧೯೫೭ರಲ್ಲಿ ಕೇಂದ್ರ ಸರಕಾರವು ಮಾಡಿರುವ ಪಟ್ಟಿಯಲ್ಲಿ ಮಾಡಿರುವ ಅಧಿಕೃತವಾದ ಜಾತಿಗಳಲ್ಲಿ

ಪಟ್ಟಿಯಲ್ಲಿ ೧೧೦೦ ಕೆಳ ಜಾತಿಗಳನ್ನು ಗುರುತಿಸಿ ಅವರಿಗೆ ಪರಿಶಿಷ್ಟ ಜಾತಿಗಳು ಎಂದು ಪರಿಗಣಿಸಲಾಯಿತು. ಭಾರತ ಸಂವಿಧಾನದಲ್ಲಿ ೩೩೦, ೩೩೨ ಮತ್ತು ೩೩೪ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯತೆಯನ್ನು ಪ್ರತಿಪಾದಿಸುತ್ತವೆ. ಸಂವಿಧಾನದ ೩೩೦ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಒಳಪಂಗಡದವರಿಗೆ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು ನ್ಯಾಯ ಮೂರ್ತಿ ಕುಲದೀಪ್ ಸಿಂಗ್ ಕ್ಷೇತ್ರ ಪುನರ್ ವಿಂಗಡಣಾ ಆಯೋಗದ ವರದಿಯಂತೆ ೩೩೦ ನೇ ವಿಧಿಯ ಪ್ರಕಾರ ಲೋಕಸಭೆಯಲ್ಲಿ ೫೪೩ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ೧೩೧ಸ್ಥಾನಗಳನ್ನು ಅದರಲ್ಲಿ ಪರಿಶಿಷ್ಟ ಜಾತಿಗೆ ೮೪ ಸ್ಥಾನಗಳು ಹಾಗೂ ಪರಿಶಿಷ್ಟ ಪಂಗಡಕ್ಕೆ ೪೭ ಸ್ಥಾನಗಳನ್ನು ಮೀಸಲಿಡಲಾಗಿದೆ. ೩೩೨ನೇ ವಿಧಿಯು ಪರಿಶಿಷ್ಟ ಜಾತಿ / ಪಂಗಡಗಳಿಗೆ ರಾಜ್ಯವಿಧಾನ ಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು, ಈ ವಿಧಿಯ ಅನ್ವಯ ಎಲ್ಲಾ ರಾಜ್ಯ ಒಟ್ಟಾರೆ ವಿಧಾನಸಭೆ ಸ್ಥಾನಗಳ ಸಂಖ್ಯೆ ४೦೩೩ ಅದರಲ್ಲಿ ಪರಿಶಿಷ್ಟಜಾತಿಗೆ ೬೦೭ ಪರಿಶಿಷ್ಟ ಪಂಗಡಕ್ಕೆ ೫೫೪ ಸ್ಥಾನಗಳನ್ನು ನೀಡಲಾಗಿ ಒಟ್ಟಾರೆಯಾಗಿ ೧೧೬೧ ಸ್ಥಾನಗಳನ್ನು ಎಸ್.ಸಿ/ಎಸ್.ಟಿಗೆ ಮೀಸಲಿಡಲಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಲೋಕಸಭೆಯ ೨೮ ಸ್ಥಾನಗಳ ಪೈಕಿ ೫ ಪರಿಶಿಷ್ಟ ಜಾತಿಗೆ ೨ ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ. ವಿಧಾನ ಸಭೆಯ ೨೨೪ ಸ್ಥಾನಗಳ ಪೈಕಿ ೩೬ ಪರಿಶಿಷ್ಟ ಜಾತಿಗೆ ಹಾಗೂ ೧೫ ಪರಿಶಿಷ್ಟ ಪಂಗಡಕ್ಕೆ ನಿಗಧಿ ಮಾಡಲಾಗಿದೆ. ಒಟ್ಟು ೫೧ ಸ್ಥಾನಗಳನ್ನು ಎಸ್.ಸಿ/ಎಸ್.ಟಿಯವರಿಗೆ ಮೀಸಲಿಡಲಾಗಿದೆ. ೩೩೪ನೇ ವಿಧಿಯು ಮೀಸಲು ಕ್ಷೇತ್ರಗಳ ಕಾಲಮಿತಿಯನ್ನು ವಿಸ್ತರಿಸುವ ಅವಕಾಶವನ್ನು ನೀಡುತ್ತದೆ. (ಪಾರ್ವತಮ್ಮ ಸಿ. ೨೦೦೧) ೧೯೬೦ರಲ್ಲಿ ಆಗ ಕಾಂಗ್ರೇಸ್ ಪಕ್ಷದ ಸಂಸತ್ ಸದಸ್ಯರಾದ ಎಳಯ ಪೆರುಮಾಳ್ ಅವರ ನೇತೃತ್ವದಲ್ಲಿ ರಾಜಕೀಯ ಮೀಸಲಾತಿಯ ಸಾಧಕ ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಮಿತಿಯನ್ನು ನೇಮಿಸಲಾಯಿತು. ಇದು ದೇಶಾದ್ಯಂತ ಸಂಚರಿಸಿ ಮೀಸಲಾತಿ ಪರಿಣಾಮವನ್ನು ದಾಖಲು ಮಾಡಿತು. ಪರಿಸ್ಥಿತಿಯು ಮೀಸಲಾತಿಯನ್ನು ವಿಸ್ತರಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿತು. ಪಾರ್ಲಿಮೆಂಟ್ ಸಮಿತಿಯೊಂದು ದೇಶದಲ್ಲಿ ಸಂಚಾರ ಮಾಡಿ ಮೀಸಲಾತಿ ಮುಂದುವರಿಕೆಗೆ ಶಿಫಾರಸ್ಸು ಮಾಡುತ್ತದೆ. ಅದರಂತೆ ಪರಿಶಿಷ್ಟರ ರಾಜಕೀಯ ಸಂರಕ್ಷಣೆಯನ್ನು ಸಂವಿಧಾನದ ೧೬(೪) ೩೩೫ ಹಾಗೂ ೩೩೮ ಅನುಚ್ಛೇದಗಳಲ್ಲಿ ಕಲ್ಪಿಸಿದೆ.

ಸಂವಿಧಾನದ ೩೩೪ನೇ ವಿಧಿಯ ಪ್ರಕಾರ ಮೀಸಲಾತಿಯನ್ನು ೧೦ ವರ್ಷಗಳಿಗೆ ವಿಸ್ತರಿಸಲು ಅವಕಾಶ ಕಲ್ಪಿಸಿದೆ. ಈ ವಿಧಿಯ ಪ್ರಕಾರ ಈವರೆಗೆ ಆರು ತಿದ್ದುಪಡಿಯನ್ನು ಕಂಡಿದೆ.

ಮೊದಲ ಬಾರಿಗೆ ೧೯೫೯ರಲ್ಲಿ ಸಂವಿಧಾನದ ೮ನೇ ತಿದ್ದುಪಡಿಯ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಿರುವ ಮೀಸಲಾತಿಯನ್ನು ೧೦ರಿಂದ ೨೦ವರ್ಷಕ್ಕೆ ವಿಸ್ತರಿಸಲಾಯಿತು.

ಎರಡನೇ ಬಾರಿಗೆ ೧೯೬೯ರಲ್ಲಿ ಸಂವಿಧಾನದ ೨೩ನೇ ತಿದ್ದುಪಡಿಯ ಮೂಲಕ ೨೦ರಿಂದ ೩೦ವರ್ಷಕ್ಕೆ ವಿಸ್ತರಿಸಲಾಯಿತು.

ಮೂರನೇ ಬಾರಿಗೆ ೧೯೮೦ರಲ್ಲಿ ೪೫ನೇ ತಿದ್ದುಪಡಿಯ ಮೂಲಕ ೩೦ರಿಂದ ೪೦ ವರ್ಷಕ್ಕೆ ವಿಸ್ತರಿಸಲಾಯಿತು.

ನಾಲ್ಕನೆ ಬಾರಿಗೆ ೧೯೮೯ರಲ್ಲಿ ೬೨ನೇ ತಿದ್ದುಪಡಿಯ ಮೂಲಕ ೪೦ರಿಂದ ೫೦ವರ್ಷಕ್ಕೆ ವಿಸ್ತರಿಸಲಾಯಿತು.

ಐದನೇ ಬಾರಿಗೆ ೧೯೯೯ರಲ್ಲಿ ೭೯ನೇ ತಿದ್ದುಪಡಿಯ ಮೂಲಕ ೫೦ರಿಂದ ೬೦ವರ್ಷಕ್ಕೆ ಹೆಚ್ಚಿಸಿತ್ತು. ಈ ಅವಧಿಯ ೨೦೧೦ಕ್ಕೆ ಮುಕ್ತಾಯವಾಗಬೇಕಾಗಿತ್ತು. ಆದರೆ ೨೦೦೯ರಲ್ಲಿ ಆರನೇ ಬಾರಿಗೆ ಸಂವಿಧಾನದ ೧೦೯ನೇ ತಿದ್ದುಪಡಿಯ ಮೂಲಕ ೬೦ವರ್ಷದಿಂದ ೭೦ವರ್ಷಕ್ಕೆ ವಿಸ್ತರಿಸಿ ಮುಂದುವರಿಸಲಾಗಿದೆ.[೨]

ಅಸ್ಪೃಶ್ಯತೆಯ ಭಾಗವಾಗಿ ಬಂದ ಮೀಸಲಾತಿ ಕ್ಷೇತ್ರಗಳು

ಪೂನಾ ಒಪ್ಪಂದ ನಂತರದ ಬೆಳವಣಿಗೆಗಳನ್ನು ಉಲ್ಲೇಖಿಸುತ್ತಾ, ಪೂನಾ ಒಪ್ಪಂದದ ಪ್ರಕಾರ ಅಸ್ಪ್ರಶ್ಯರಿಗೆ ಪ್ರತ್ಯೇಕ ಮತದಾರ ವರ್ಗಕ್ಕೆ ಬದಲಾಗಿ ಪ್ರತ್ಯೇಕ ಸ್ಥಾನಗಳು ಲಭ್ಯವಾದವು ಅದರಂತೆ ೧೯೩೫ರ ಭಾರತ ಸರಕಾರ ಕಾಯ್ದೆ ಪ್ರಕಾರ ೧೯೩೭ ಫೆಬ್ರವರಿ ತಿಂಗಳಲ್ಲಿ ಪ್ರಾಂತೀಯ ಶಾಸನ ಸಭೆಗಳಲ್ಲಿ ಚುನಾವಣೆ ನಡೆದವು. ಇದು ಕಾಂಗ್ರೇಸ್ ಎದುರಿಸಿದ ಪ್ರಥಮ ಚುನಾವಣೆಯಾಗಿತ್ತು ಮತ್ತು ಇದೆ ಪ್ರಪ್ರಥಮ ಬಾರಿಗೆ ಅಸ್ಪ್ರಶ್ಯರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಪಡೆದರು. ೧೯೩೫ರ ಭಾರತ ಸರಕಾರ ಕಾಯ್ದೆ ಪ್ರಕಾರ ೧೪೮ ಸ್ಥಾನಗಳ ಇದ್ದವು ಬಿಹಾರ ಮತ್ತು ರಾಜಸ್ಥಾನ ಹೊಂದಾಣಿಕೆಯಾದ ನಂತರ ೧೫೧ ಸ್ಥಾನಗಳು ಅಸ್ಪ್ರಶ್ಯರಿಗೆ ಮೀಸಲಿಸಲಾಗಿದ್ದು ಈ ಚುನಾವಣೆಯಲ್ಲಿ ಕಾಂಗ್ರೇಸ್ ಪಕ್ಷದಿಂದ ೭೮ ಸ್ಥಾನಗಳಲ್ಲಿ ಅಸ್ಪ್ರಶ್ಯರು ಆಯ್ಕೆಯಾಗಿದ್ದು. ನಂತರ ಡಾ. ವಿ.ಎಸ್. ಖಾರೆಯವರು ಕಾಂಗ್ರೇಸ್ ಮಂತ್ರಿಮಂಡಲದಲ್ಲಿ ಪ್ರಧಾನ ಮಂತ್ರಿಯಾದರು, ಕಾಂಗ್ರೇಸ್ ಮಂತ್ರಿ ಮಂಡಲದಲ್ಲಿ ಅಸ್ಪ್ರಶ್ಯರಿಗೆ ಒಂದುಸ್ಥಾನವು ಸಹ ದಕ್ಕಲಿಲ್ಲ. ಆಗ ಮಂತ್ರಿಮಂಡಲದಲ್ಲಿ ಅಂತರಿಕ ಕಚ್ಚಾಟಗಳು ನಡೆಯುತ್ತಿದ್ದವು ಇದ್ದರಿಂದ ಬೇಸತ್ತಾ ಡಾ. ಖಾರೆಯವರ ತಮ್ಮ ಹಾಗೂ ಮಂತ್ರಿಮಂಡಲದ ರಾಜೀನಾಮೆಯನ್ನು ಕೊಟ್ಟು ಹೊಸ ಮಂತ್ರಿ ಮಂಡಲ ರಚಿಸಲು ಅವಕಾಶ ಮಾಡಿಕೊಟ್ಟರು, ರಾಜ್ಯಪಾಲರು ಡಾ. ಖಾರೆಯವರನ್ನು ಪುನಃ ಅಹ್ವಾನಿಸಿ ಹೊಸ ಸರಕಾರ ರಚಿಸಿ ಅವರನ್ನು ಪ್ರಧಾನಿಯಾಗಲು ಸೂಚಿಸಿದರು. ರಾಜ್ಯಪಾಲರು ಅಹ್ವಾನವನ್ನು ಮನ್ನಿಸಿದ ಖಾರೆಯವರು ಮಂತ್ರಿ ಮಂಡಲ ರಚಿಸಿದರು. ಆದರೆ ಅದರಲ್ಲಿ ಒಂದೇ ಒಂದು ವ್ಯತ್ಯಾಸ ಮಾಡಿದ್ದರು. ಹೊಸ ಮಂತ್ರಿ ಮಂಡಲದಲ್ಲಿ ಕೇಂದ್ರ ಪ್ರಾಂತ್ಯದ ಶಾಸನ ಸಭೆಯ ಸದಸ್ಯರಾದ ಅಗ್ನಿ ಜೊಜ್‌ರನ್ನು ಸೇರಿಸಲಾಗಿತ್ತು. ಆದರೆ ಕಾಂಗ್ರೇಸ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರು ಖಾರೆಯವರು ಈ ವರ್ತನೆಯನ್ನು ಖಂಡಿಸಿತು. ನೀವು ಇಡೀ ಮಂತ್ರಿ ಮಂಡಲವನ್ನು ರಾಜೀನಾಮೆ ನೀಡುವಂತಹ ತಪ್ಪು ತೀರ್ಮಾನ ಕೈಗೊಂಡಿದ್ದಿರಿ, ಹಾಗೂ ಮಂತ್ರಿ ಮಂಡಲ ರಚನೆಯಲ್ಲಿ ಆಶಿಸ್ತಿನಿಂದ ವರ್ತಿಸಿದ್ದಿರಿ, ಎಂದು ಆರೋಪಿಸಲಾಯಿತು, ಆದರೆ ಅವರ ಆಶಿಸ್ತಿನ ವರ್ತನೆಯಂದರೆ ಅಸ್ಪ್ರಶ್ಯರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಉದ್ದಟತನ ತೋರಿದ್ದು. ಇದು ಗಾಂಧಿಜೀಯವರ ಅಭಿಪ್ರಾಯ ಡಾ. ಖಾರೆಯವರೆ

ಹೇಳಿದ್ದರು, ಅಷ್ಟೇ ಅಲ್ಲದೆ ಅಸ್ಪ್ರಶ್ಯರ ಮನಸ್ಸಿನಲ್ಲಿ ಮಂತ್ರಿಯಾಗುವಂತಹ ಮಹತ್ವಕಾಂಕ್ಷೆಯ ಆಸೆಗಳನ್ನು ಹುಟ್ಟಿಸಿ ದೊಡ್ಡ ತಪ್ಪು ಮಾಡಿದ್ದಿರಿ, ಇಂತಹ ತಪ್ಪು ನಿರ್ಧಾರಕ್ಕಾಗಿ ಡಾ. ಖಾರೆಯವರನ್ನು ಎಂದು ಕ್ಷಮಿಸುವದಿಲ್ಲವೆಂದು ಹೇಳಿದ್ದರು. ಈ ಮಾತುಗಳು ಅನೇಕ ಭಾರಿ ಸಾರ್ವಜನಿಕ ಸಮಾರಂಭಗಳಲ್ಲಿ ಹೇಳಿದ್ದರೂ ಗಾಂಧಿಜೀಯವರಿಗೆ ಈ ಹೇಳಿಕೆಯನ್ನು ಗಮನಿಸಲೇ ಇಲ್ಲ.

ಪೂನಾ ಒಪ್ಪಂದದಿಂದ ಅಸ್ಪ್ರಶ್ಯರಿಗೆ ೧೫೧ ಸ್ಥಾನಗಳು ಲಭ್ಯವಾದವು ಆದರೆ ಕೋಮುವಾರು ಪ್ರಾತಿನಿಧ್ಯದಿಂದ ಅಸ್ಪ್ರಶ್ಯರಿಗೆ ೭೮ ಸ್ಥಾನಗಳು ದೋರಕಿದ್ದವು, ಆದರೆ ಕೋಮುವಾರು ಒಪ್ಪಂದವು ಕಡಿಮೆ ಸ್ಥಾನಗಳನ್ನು ನೀಡಿದರೂ ಇತರ ಅನುಕೂಲಗಳನ್ನು ಸೃಷ್ಠಿಸಿತು. ಎಂಬುದನ್ನು ಮರೆಯಬಾರದು. ನಿರ್ದಿಷ್ಟ ಸ್ಥಾನಗಳಿಗೆ ದಲಿತ ಮತದಾರರಿಂದಲೆ ಆಯ್ಕೆಯಾದ ದಲಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು, ಎರಡು ಭಾರಿ ಮತದಾನ ಮಾಡುವುದು ಒಮ್ಮೆ ಪ್ರತ್ಯೇಕ ಚುನಾಯಿತಗಳ ಮತಗಳ ಮೂಲಕ, ಮತ್ತೊಮ್ಮೆ ಸಾಮಾನ್ಯ ಚುನಾಯಿತ ಮತಗಳ ಮೂಲಕ ಆಯ್ಕೆ ಮಾಡಬಹುದಾಗಿದೆ. ಇಲ್ಲಿ ಪೂನಾ ಒಪ್ಪಂದ ಅಸ್ಪ್ರಶ್ಯರಿಗೆ ಮೀಸಲು ಸ್ಥಾನಗಳನ್ನು ಹೆಚ್ಚಿಸಿದರೂ ಕೋಮುವಾರು ನಿರ್ಣಯ ನೀಡಿದ್ದ ಎರಡು ಮತದಾನದ ಹಕ್ಕನ್ನು ಕಸಿದುಕೊಂಡಿತು. ಕೋಮುವಾರು ನಿರ್ಣಯದ ಪ್ರಕಾರ ಎರಡನೇ ಮತದಾನವು ಬೆಲೆ ಕಟ್ಟಲಾಗದ ಹಕ್ಕಾಗಿತ್ತು, ಪ್ರತಿ ಕ್ಷೇತ್ರದಲ್ಲಿ ೧೦ ಮತದಾರ ಲೆಕಕ್ಕೆ ಒಬ್ಬ ಅಸ್ಪ್ರಶ್ಯ ಮತದಾರಗಿರುತ್ತಿದ್ದ. ಈ ಪ್ರಮಾಣದ ಮತದಾನ ಹಕ್ಕಿನಿಂದ ಸಾರ್ವತ್ರಿಕ ಚುನಾವಣೆಗಳನ್ನು ದಲಿತರಿಗೆ ನಿಣಾಯಕ ಪಾತ್ರ ವಹಿಸಬಲ್ಲವರಾಗಿದ್ದರೂ ಸಾಮಾನ್ಯ ಕ್ಷೇತ್ರದಲ್ಲಿ ಯಾವುದೇ ಹಿಂದು ಅಭ್ಯರ್ಥಿ ಹಿತಕ್ಕೆ ದಕ್ಕೆತರುವದಾಗಲಿ ಮಾಡುತ್ತಿರಲಿಲ್ಲ.

ಪೂನಾಃ ಒಪ್ಪಂದದಿಂದ ಕೇವಲ ಹೆಚ್ಚು ಸ್ಥಾನಗಳು ಪಡೆಯಲಾಯಿತೆ ಹೊರೆತು ಬೇರೆ ಯಾವ ವಿಶೇಷ ಹಕ್ಕುಗಳು ಇರಲಿಲ್ಲ. ಕೋಮುವಾರು ಪ್ರಾತಿನಿಧ್ಯದ ಪ್ರಕಾರ ಎರಡು ಮತಗಳು ಇದ್ದ ಪಕ್ಷದಲ್ಲಿ ದಲಿತರಿಗೆ ಕಡಿಮೆ ಸ್ಥಾನ ದೊರಕುತ್ತಿದ್ದವು. ಆದರೆ ಪ್ರತಿಯೊಬ್ಬ ಸದಸ್ಯ ಅಸ್ಪ್ರಶ್ಯರಲ್ಲಿ ಒಬ್ಬನಾಗಿರುತ್ತಿದ್ದ ಹೀಗೆ ಅಸ್ಪ್ರಶ್ಯರನ್ನು ದುರಂತಕ್ಕಿಡು ಮಾಡುತ್ತಾ ಬಂದಿರುವುದು ಸೋಜಿಗದ ಸಂಗತಿ. ಅವತ್ತು ಗಾಂಧಿಜಿಯವರು ಅಸ್ಪುಶ್ಯರ ಬಗ್ಗೆ ಕಣ್ಣು ಮತ್ತು ಕರಳು ತೆರುದು ನೋಡಿದ್ದರೆ ಇಂದು ದಲಿತರ ದುರಂತ ಜೀವನ ಸಾಗಿಸುತ್ತಿರಲಿಲ್ಲ.[೨೨]

ಕೋಷ್ಟಕ ೫.೨. ಭಾರತದಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಯೋಗಗಳು

ಕ್ರಸಂ.	ಆಯೋಗಗಳು	ವರ್ಷ	ಆದ್ಯತೆ
೧	ಹಂಟರ್ ಆಯೋಗಗಳು	೧೮೮೨	ಶಿಕ್ಷಣದಲ್ಲಿ ಮೀಸಲಾತಿ
೨	ರೆಪ್ರೆಸೆಂಟೇಶನ್ ಆ್ಯಕ್ಟ್	೧೮೯೨	ಕೋಮುವಾರು ಪ್ರಾತಿನಿದ್ಯ
೩	ಪೂನಾ ಒಪ್ಪಂದ	೧೯೩೨	ಆಸ್ಪೃಶ್ಯರಿಗೆ ರಾಜಕೀಂಯ ಪ್ರಾತಿನಿದ್ಯ
೪	ಸಂವಿಧಾನ ಜಾರಿಗೆ	೧೯೫೦	ಮೀಸಲಾತಿ ಖಾತ್ರಿ
೫	ಕಾಕ ಕಾಲೇಲ್ಕರ್ ಆಯೋಗ	೧೯೫೩	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೬	ದೇಬರ್ ಆಯೋಗ	೧೯೬೧	ಅದಿವಾಸಿ ಬುಡಕಟ್ಟುಗಳ ಮೀಸಲಾತಿ
೭	ಮಂಡಲ್ ವರದಿ	೧೯೯೦	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೮	ಸಾಚರ್ ಸಮಿತಿ	೧೯೯೨	ಮುಸ್ಲಿಂರ ಸ್ಥಿತಿಗತಿ (ಮೀಸಲಾತಿ)

ಕೋಷ್ಟಕ ೫.೩. ಕರ್ನಾಟದಲ್ಲಿ ಮೀಸಲಾತಿಗೆ ಸಂಬಂಧಿಸಿದ ಆಯೋಗಗಳು

ಕ್ರಸಂ.	ಆಯೋಗಗಳು	ವರ್ಷ	ಆದ್ಯತೆ
೧	ಜಸ್ಟಿಸ್ ಮಿಲ್ಲರ್ ಆಯೋಗ	೧೯೧೮	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೨	ಆರ್ ನಾಗನಗೌಡ ವರದಿ	೧೯೬೧	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೩	ಎಲ್.ಜಿ. ಹಾವನೂರು	೧೯೭೫	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೪	ವೆಂಕಟಸ್ವಾಮಿ ಆಯೋಗ	೧೯೮೫	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೫	ಚಿನ್ನಪ್ಪರೆಡ್ಡಿ ವರದಿ	೧೯೯೦	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೬	ದ್ವಾರಕನಾಥ ಆಯೋಗ	೨೦೧೧	ಹಿಂದುಳಿದ ವರ್ಗಗಳಿಗೆ ಮೀಸಲಾತಿ
೭	ಎ.ಜಿ. ಸದಾಶಿವ ಆಯೋಗ	೨೦೧೨	ಪರಿಶಿಷ್ಟರ ಒಳಮೀಸಲಾತಿ

ಆಧಾರ: ಸಿ.ಕೆ ಮಹೇಶ್ ೨೦೦೨ ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ, ವಿಮೋಚನ ಪ್ರಕಾಶನ ಚಿತ್ರದುರ್ಗ, ಪುಟ ೭೫,೭೬. ದೊಡ್ಡಪಾಳ್ಯ ನರಸಿಂಹಮೂರ್ತಿ ೨೦೧೪ ಡಿಸೆಂಬರ್ ಲಂಕೇಶ್ ಪತ್ರಿಕೆ ಪು.೧೩.

ಕೋಷ್ಟಕ ೫.೪. ಕರ್ನಾಟಕದಲ್ಲಿ ಜಾರಿಯಲ್ಲಿರುವ ಮೀಸಲಾತಿ ಪ್ರಮಾಣ

ಕ್ರಸಂ	ಮೀಸಲಾತಿ ಗುಂಪು	ಮೀಸಲಾತಿಯಲ್ಲಿ ಬರುವ ಜಾತಿಗಳು	ಒಟ್ಟು ಜಾತಿಗಳು	ಮೀಸಲಾತಿ ಪ್ರಮಾಣ
೧	ಪರಿಶಿಷ್ಟ ಜಾತಿ	ಮಾದಿಗ, ಹೊಲೆಯ, ಬೋವಿ, ಲಮಾಣಿ.	೧೦೧	೧೫%
೨	ಪರಿಶಿಷ್ಟ ಪಂಗಡ	ನಾಯಕ, ವಾಲ್ಮಿಕಿ, ಇರುಳಿಗ, ಸೋಲಿಗ.	೫೦	೩%
೩	ಪ್ರವರ್ಗ ೧	ಗೊಲ್ಲ, ಉಪ್ಪರ, ಪಿಂಜಾರ, ಗಂಗಾಮತ.	೯೫	೪%
೪	ಪ್ರವರ್ಗ ೨ಎ	ಕುರುಬ, ಇಡಿಗ, ಮಾಡಿವಾಳ, ವಿಶ್ವಕರ್ಮ.	೧೦೨	೧೫%
೫	ಪ್ರವರ್ಗ ೨ಬಿ	ಮುಸ್ಲಿಂ. ಇತರ ಸಮನಾಂತರ ಜಾತಿಗಳು.	–	೪%
೬	ಪ್ರವರ್ಗ ೩ಎ	ಒಕ್ಕಲಿಗ, ಬಂಟ, ರೆಡ್ಡಿ, ಬಲಿಜ, ಕೊಡವ.	೧೨	೪%
೭	ಪ್ರವರ್ಗ ೩ಬಿ	ಲಿಂಗಾಯತ ಮತ್ತು ಅದರ ಉಪಜಾತಿಗಳು.	೪೨	೫%

(ಆಧಾರ: ಭೀಮವಾದ ಮಾಸಪತ್ರಿಕೆ ಅಕ್ಟೊಬರ್, ೨೦೧೫)

ಕೋಷ್ಟಕ ೫.೫. ಭಾರತದ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭಾ ಕ್ಷೇತ್ರಗಳು ಮತ್ತು ಅವುಗಳ ಮೀಸಲಾತಿ ಕ್ಷೇತ್ರಗಳು

ಕ್ರ.ಸಂ	ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು	೧೯೭೬ ಚುನಾವಣಾ ಕಾಯ್ದೆಗಳಪ್ರಕಾರ				೨೦೦೮ ಚುನಾವಣಾ ಕಾಯ್ದೆಗಳಪ್ರಕಾರ		
		ಸಾಮಾನ್ಯ	ಪ.ಜಾ	ಪ.ಪಂ	ಒಟ್ಟು	ಸಾಮಾನ್ಯ	ಪ.ಜಾ	ಪ.ಪಂ
೧	ಆಂಧ್ರ ಪ್ರದೇಶ	೨೪೦	೩೯	೧೫	೨೯೪	೨೨೭	೪೮	೧೯
೨	ಅರುಣಾಚಲ ಪ್ರದೇಶ	೧	–	೫೯	೬೦	೧	–	೫೯
೩	ಅಸ್ಸಾಂ	೧೦೨	೮	೧೬	೧೨೬	೧೦೨	೮	೧೬
೪	ಬಿಹಾರ	೨೦೪	೩೯	–	೨೪೩	೨೦೩	೩೮	೨
೫	ಛತ್ತಿಸ್‌ಗಡ	೪೬	೧೦	೩೪	೯೦	೫೧	೧೦	೨೯
೬	ಗೋವಾ	೩೯	೧	–	೪೦	೩೯	೧	–
೭	ಗುಜರಾತ್	೧೪೩	೧೩	೨೬	೧೮೨	೧೪೨	೧೩	೨೭
೮	ಹರಿಯಾಣ	೭೩	೧೭	–	೯೦	೭೩	೧೭	
೯	ಹಿಮಾಚಲ ಪ್ರದೇಶ	೪೯	೧೬	೩	೬೮	೪೮	೧೭	೩
೧೦	ಜಮ್ಮು ಮತ್ತು ಕಾಶ್ಮೀರ	೮೦	೭	–	೮೭	–	–	–
೧೧	ಜಾರ್ಖಂಡ್	೪೪	೯	೨೮	೮೧	೪೪	೯	೨೮
೧೨	ಕರ್ನಾಟಕ	೧೮೯	೩೩	೨	೨೨೪	೧೭೩	೩೬	೧೫
೧೩	ಕೇರಳ	೧೨೬	೧೩	೧	೧೪೦	೧೨೪	೧೪	೨
೧೪	ಮಧ್ಯ ಪ್ರದೇಶ	೧೫೬	೩೩	೪೧	೨೩೦	೧೪೮	೩೫	೪೭

ಕ್ರಸಂ	ರಾಜ್ಯ/ಕೇಂದ್ರಾಡಳಿತ	ಸಾಮಾನ್ಯ	ಪ.ಜಾ	ಪ.ಪಂ	ಒಟ್ಟು	ಸಾಮಾನ್ಯ	ಪ.ಜಾ	ಪ.ಪಂ
೧೫	ಮಹಾರಾಷ್ಟ್ರ	೨೨೮	೧೮	೨೨	೨೮೮	೨೩೪	೨೯	೨೫
೧೬	ಮಣಿಪುರ	೪೦	೧	೧೯	೬೦	೪೦	೧	೧೯
೧೭	ಮೇಘಾಲಯ	೫	–	೫೫	೬೦	೫	–	೫೫
೧೮	ಮೀಜೋರಾಂ	೧	–	೩೯	೪೦	೧	–	೩೯
೧೯	ನಾಗಲ್ಯಾಂಡ್	೧	–	೫೯	೬೦	೧	–	೫೯
೨೦	ಒರಿಸ್ಸಾ	೯೧	೨೨	೩೪	೧೪೭	೯೦	೨೪	೩೩
೨೧	ಪಂಜಾಬ್	೮೮	೨೯	–	೧೧೭	೮೩	೩೪	–
೨೨	ರಾಜಸ್ತಾನ್	೧೪೩	೩೩	೨೪	೨೦೦	೧೪೧	೩೪	೨೫
೨೩	ಸಿಕ್ಕಿಂ	೧೮	೨	೧೨	೩೨	೧೭	೨	೧೨
೨೪	ತಮಿಳುನಾಡು	೧೮೯	೪೨	೩	೨೩೪	೧೮೮	೪೪	೧೨
೨೫	ತ್ರಿಪುರ	೩೩	೭	೨೦	೬೦	೩೦	೧೦	೨೦
೨೬	ಉತ್ತರ ಪ್ರದೇಶ	೩೧೪	೮೯	೩	೪೦೩	೩೧೮	೮೫	–
೨೭	ಉತ್ತರ ಖಂಡ	೫೫	೧೨	೩	೭೦	೫೫	೧೩	೨
೨೮	ಪಶ್ಚಿಮ ಬಂಗಾಳ	೨೧೮	೫೯	೧೭	೨೯೪	೨೧೦	೬೮	೧೬
	ಒಟ್ಟು	೨೯೩೬	೫೫೨	೫೩೨	೪೦೨೦	೨೭೮೯	೫೯೦	೫೫೪
	ಕೇಂದ್ರಡಳಿತ ಪ್ರದೇಶಗಳು							
೨೯	ಅಂಡಮನ್ ನಿಕೋಬರ್	–	–	–	–	–	–	–
೩೦	ಚಂಢಿಗಡ	–	–	–	–	–	–	–
೩೧	ದಾದ್ರ ಮತ್ತು ನಗರ ಹವೇಲಿ	–	–	–	–	–	–	–
೩೨	ಡೀಂಯು ಮತ್ತು ಡಾಮನ್	–	–	–	–	–	–	–
೩೩	ದೆಹಲಿ	೫೭	೧೭	–	೭೦	೫೮	೧೨	–
೩೪	ಲಕ್ಷದ್ವೀಪ	–	–	–	–	–	–	–
೩೫	ಪಾಂಡಿಚೇರಿ	೨೫	೫	–	೩೦	೨೫	೫	–
	ಒಟ್ಟು	೩೦೧೮	೫೭೦	೫೩೨	೪೧೨೦	೨೮೭೨	೬೦೭	೫೫೪

ಆಧಾರ: ಭಾರತದ ಚುನಾವಣಾ ಅಯೋಗದ ವರದಿ ೨೦೦೮ ಅಂತರಜಾಲ ಮಾಹಿತಿ eci.nic.in.main seats of legislature assemblies

ಕೋಷ್ಟಕ ೫.೬. ಭಾರತದ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಲೋಕಸಭಾ ಕ್ಷೇತ್ರಗಳು ಮತ್ತು ಅವುಗಳ ಮೀಸಲಾತಿ ಕ್ಷೇತ್ರಗಳು

ಕ್ರಸಂ	ರಾಜ್ಯ/ಕೇಂದ್ರಾಡಳಿತ ಪದೇಶಗಳು	೧೯೭೬ ಚುನಾವಣಾ ಕಾಯ್ದೆಗಳಪ್ರಕಾರ				೨೦೦೮ ಚುನಾವಣಾ ಕಾಯ್ದೆಗಳಪ್ರಕಾರ		
		ಸಾಮಾನ್ಯ	ಪ.ಜಾ	ಪ.ಪಂ	ಒಟ್ಟು	ಸಾಮಾನ್ಯ	ಪ.ಜಾ	ಪ.ಪಂ
೧	ಆಂಧ್ರಪ್ರದೇಶ	೩೪	೬	೨	೪೨	೩೨	೭	೩
೨	ಅರುಣಾಚಲ ಪ್ರದೇಶ	೨	–	–	೨	೨	–	–
೩	ಆಸ್ಸಾಂ	೧೧	೧	೨	೧೪	೧೧	೧	೨
೪	ಬಿಹಾರ	೩೩	೭	–	೪೦	೩೪	೬	–
೫	ಜಾರ್ಖಂಡ್	೮	೧	೫	೧೪	೮	೧	೫
೬	ಗೋವಾ	೨	–	–	೨	೨	–	–
೭	ಗುಜರಾತ್	೨೦	೨	೪	೨೬	೨೦	೨	೪
೮	ಹರಿಯಾಣ	೮	೨	–	೧೦	೮	೨	–
೯	ಹಿ.ಚ. ಪ್ರದೇಶ	೩	೪	–	೪	೩	೧	–
೧೦	ಜಮ್ಮು ಕಾಶ್ಮೀರ	೬	–	–	೬	೬	–	–
೧೧	ಕರ್ನಾಟಕ	೨೪	೪	–	೨೮	೨೧	೫	೨
೧೨	ಕೇರಳ	೧೮	೨	–	೨೦	೧೮	೨	–
೧೩	ಮಧ್ಯ ಪ್ರದೇಶ	೨೦	೪	೫	೨೯	೧೯	೪	೬
೧೪	ಛತ್ತಿಸಗಡ	೫	೨	೪	೧೧	೬	೧	೪
೧೫	ಮಹಾರಾಷ್ಟ್ರ	೪೧	೩	೪	೪೮	೩೯	೫	೪
೧೬	ಮಣಿಪುರ	೧	–	೧	೨	೧	–	೧
೧೭	ಮೇಘಾಲಯ	೨	–	–	೨	–	–	೨
೧೮	ಮೀಜೋರಾಂ	–	–	೧	೧	–	–	೧
೧೯	ನಾಗಲ್ಯಾಂಡ್	೧	–	–	೧	೧	–	–
೨೦	ಒರಿಸ್ಸಾ	೧೩	೩	೫	೨೧	೧೩	೩	೫
೨೧	ಪಂಜಾಬ	೧೦	೩	–	೧೩	೯	೪	–
೨೨	ರಾಜಸ್ತಾನ್	೧೮	೪	೩	೨೫	೧೮	೪	೩
೨೩	ಸಿಕ್ಕಿಂ	೧	–	–	೧	೧	–	–
೨೪	ತಮಿಳುನಾಡು	೩೨	೭	–	೩೯	೩೨	೭	–
೨೫	ತ್ರಿಪುರ	೧	–	೧	೨	೧	–	೧
೨೬	ಉತ್ತರ ಪ್ರದೇಶ	೬೩	೧೭	–	೮೦	೬೩	೧೭	–
೨೭	ಉತ್ತರ ಖಂಡ	೪	೧	–	೫	೪	೧	–

		ಸಾಮಾನ್ಯ	ಪ.ಜಾ	ಪ.ಪಂ	ಒಟ್ಟು	ಸಾಮಾನ್ಯ	ಪ.ಜಾ	ಪ.ಪಂ
೨೮	ಪಶ್ಚಿಮಬಂಗಾಳ	೩೮	೮	೨	೪೨	೩೦	೧೦	೨
೨೯	ಅ. ನಿಕೋಬರ್	೧	–	–	೧	೧	–	–
೩೦	ಚಢಿಗಾಡ	೧	–	–	೧	೧	–	–
೩೧	ದಾ.ನ ಹವೇಲಿ	–	–	೧	೧	–	–	೧
೩೨	ಡಿ. ಡಾಮ್	೧	–	–	೧	–	–	–
೩೩	ದೆಹಲಿ	೬	೧	–	೭	೬	೧	–
೩೪	ಲಕ್ಷದ್ವೀಪ	–	–	೧	೧	–	–	೧
೩೫	ಪಾಂಡಿಚರಿ	೧	–	–	೧	೧	–	–
	ಒಟ್ಟು	೪೨೩	೭೯	೪೧	೫೪೩	೪೧೨	೮೪	೪೭

(ಆಧಾರ: ಭಾರತದ ಚುನಾವಣಾ ಅಯೋಗದ ವರದಿ ೨೦೦೮ ಅಂತರಜಾಲ ಮಾಹಿತಿ eci.nic.in.main seats of lokasaba)

ಕೋಷ್ಟಕ ೫.೭. ೨೦೦೮ರ ಚುನಾವಣಾ ಕ್ಷೇತ್ರಗಳ ಮರುವಿಂಗಡನೆ ಕಾಯ್ದೆ ಪ್ರಕಾರ ಕರ್ನಾಟಕದ ವಿಧಾನಸಭಾ ಮೀಸಲು ಕ್ಷೇತ್ರಗಳು

ಕ್ರಸಂ.	ವಿಧಾನಸಭಾ ಮೀಸಲು ಕ್ಷೇತ್ರಗಳು (MLA)	ಮೀಸಲಾತಿ ವಿವರ	ಜಿಲ್ಲೆ
೧	ಸಿ.ವಿ.ರಾಮನ್ ನಗರ	ಪರಿಶಿಷ್ಟ ಜಾತಿ	ಬೆಂಗಳೂರು ಉತ್ತರ
೨	ಪುಲಕೇಶಿನಗರ	ಪರಿಶಿಷ್ಟ ಜಾತಿ	ಬೆಂಗಳೂರು ದಕ್ಷಿಣ
೩	ಮುದೋಳ	ಪರಿಶಿಷ್ಟ ಜಾತಿ	ಬಾಗಲಕೋಟೆ
೪	ದೇವನಹಳ್ಳಿ	ಪರಿಶಿಷ್ಟ ಜಾತಿ	ಬೆಂಗಳೂರು ಗ್ರಾಮಾಂತರ
೫	ನೆಲಮಂಗಲ	ಪರಿಶಿಷ್ಟ ಜಾತಿ	ಬೆಂಗಳೂರು ಗ್ರಾಮಾಂತರ
೬	ಆನೇಕಲ್	ಪರಿಶಿಷ್ಟ ಜಾತಿ	ಬೆಂಗಳೂರು ನಗರ
೭	ಮಹದೇವಪುರ	ಪರಿಶಿಷ್ಟ ಜಾತಿ	ಬೆಂಗಳೂರು ನಗರ
೮	ಕುಡಚಿ	ಪರಿಶಿಷ್ಟ ಜಾತಿ	ಬೆಳಗಾಂ
೯	ರಾಯಭಾಗ	ಪರಿಶಿಷ್ಟ ಜಾತಿ	ಬೆಳಗಾಂ
೧೦	ಯಮಕನಮರಡಿ	ಪರಿಶಿಷ್ಟ ಪಂಗಡ	ಬೆಳಗಾಂ
೧೧	ಬಳ್ಳಾರಿ	ಪರಿಶಿಷ್ಟ ಪಂಗಡ	ಬಳ್ಳಾರಿ
೧೨	ಹಡಗಲಿ	ಪರಿಶಿಷ್ಟ ಜಾತಿ	ಬಳ್ಳಾರಿ
೧೩	ಹಗರಿಭೋಮ್ಮನಹಳ್ಳಿ	ಪರಿಶಿಷ್ಟ ಜಾತಿ	ಬಳ್ಳಾರಿ
೧೪	ಕಂಪ್ಲಿ	ಪರಿಶಿಷ್ಟ ಪಂಗಡ	ಬಳ್ಳಾರಿ
೧೫	ಕೂಡ್ಲಿಗಿ	ಪರಿಶಿಷ್ಟ ಪಂಗಡ	ಬಳ್ಳಾರಿ
೧೬	ಸಿರಗುಪ್ಪಾ	ಪರಿಶಿಷ್ಟ ಪಂಗಡ	ಬಳ್ಳಾರಿ

ಕ್ರಸಂ.	ವಿಧಾನಸಭಾ ಮೀಸಲು ಕ್ಷೇತ್ರಗಳು (MLA)	ಮೀಸಲಾತಿ ವಿವರ	ಜಿಲ್ಲೆ
೧೭	ಸಂಡೂರು	ಪರಿಶಿಷ್ಟ ಜಾತಿ	ಬಳ್ಳಾರಿ
೧೮	ಔರಾದ	ಪರಿಶಿಷ್ಟ ಜಾತಿ	ಬೀದರ
೧೯	ನಾಗಠಾಣಾ	ಪರಿಶಿಷ್ಟ ಜಾತಿ	ಬಿಜಾಪುರ
೨೦	ಕೊಳ್ಳೆಗಾಲ	ಪರಿಶಿಷ್ಟ ಜಾತಿ	ಚಾಮರಾಜನಗರ
೨೧	ಮೂಡಿಗೆರೆ	ಪರಿಶಿಷ್ಟ ಜಾತಿ	ಚಿಕ್ಕಮಂಗಳೂರು
೨೨	ಚಳ್ಳಕೆರೆ	ಪರಿಶಿಷ್ಟ ಪಂಗಡ	ಚಿತ್ರದುರ್ಗ
೨೩	ಹೊಳಲ್ಕೆರೆ	ಪರಿಶಿಷ್ಟ ಜಾತಿ	ಚಿತ್ರದುರ್ಗ
೨೪	ಮೊಳಕಾಲ್ಮೂರು	ಪರಿಶಿಷ್ಟ ಪಂಗಡ	ಚಿತ್ರದುರ್ಗ
೨೫	ಸುಳ್ಯಾ	ಪರಿಶಿಷ್ಟ ಜಾತಿ	ದಕ್ಷಿಣ ಕನ್ನಡ
೨೬	ಜಗಳೂರು	ಪರಿಶಿಷ್ಟ ಪಂಗಡ	ದಾವಣಗೆರೆ
೨೭	ಮಾಯಕೊಂಡ	ಪರಿಶಿಷ್ಟ ಜಾತಿ	ದಾವಣಗೆರೆ
೨೮	ಹುಬ್ಬಳಿ-ದಾರವಾಡ ಪೂರ್ವ	ಪರಿಶಿಷ್ಟ ಜಾತಿ	ದಾರವಾಡ
೨೯	ಶಿರಹಟ್ಟಿ	ಪರಿಶಿಷ್ಟ ಜಾತಿ	ಗದಗ
೩೦	ಚಿಂಚೋಳಿ	ಪರಿಶಿಷ್ಟ ಜಾತಿ	ಗುಲ್ಬರ್ಗಾ
೩೧	ಚಿತ್ತಪೂರ	ಪರಿಶಿಷ್ಟ ಜಾತಿ	ಗುಲ್ಬರ್ಗಾ
೩೨	ಗುಲ್ಬರ್ಗಾ(ಗ್ರಾಮೀಣ)	ಪರಿಶಿಷ್ಟ ಜಾತಿ	ಗುಲ್ಬರ್ಗಾ
೩೩	ಸಕಲೇಶಪೂರ	ಪರಿಶಿಷ್ಟ ಜಾತಿ	ಹಾಸನ
೩೪	ಹಾವೇರಿ	ಪರಿಶಿಷ್ಟ ಜಾತಿ	ಹಾವೇರಿ
೩೫	ಬಂಗಾರಪೇಟೆ	ಪರಿಶಿಷ್ಟ ಜಾತಿ	ಕೋಲಾರ
೩೬	ಕೋಲಾರ ಗೋಲ್ಡಫಿಲ್ಡ್	ಪರಿಶಿಷ್ಟ ಜಾತಿ	ಕೋಲಾರ
೩೭	ಮುಳಭಾಗಿಲು	ಪರಿಶಿಷ್ಟ ಜಾತಿ	ಕೋಲಾರ
೩೮	ಕನಕಗಿರಿ	ಪರಿಶಿಷ್ಟ ಜಾತಿ	ಕೊಪ್ಪಳ
೩೯	ಮಳವಳ್ಳಿ	ಪರಿಶಿಷ್ಟ ಜಾತಿ	ಮಂಡ್ಯ
೪೦	ಯಗ್ಗಡದೇವನಕೋಟೆ	ಪರಿಶಿಷ್ಟ ಪಂಗಡ	ಮೈಸೂರು
೪೧	ತಿರುಮಕೂಡಲು ನರಸಿಪುರ	ಪರಿಶಿಷ್ಟ ಜಾತಿ	ಮೈಸೂರು
೪೨	ದೇವದುರ್ಗ	ಪರಿಶಿಷ್ಟ ಪಂಗಡ	ರಾಯಚೂರು
೪೩	ಲಿಂಗಸೂಗೂರು	ಪರಿಶಿಷ್ಟ ಜಾತಿ	ರಾಯಚೂರು
೪೪	ಮಾನ್ವಿ	ಪರಿಶಿಷ್ಟ ಪಂಗಡ	ರಾಯಚೂರು
೪೫	ಮಸ್ಕಿ	ಪರಿಶಿಷ್ಟ ಪಂಗಡ	ರಾಯಚೂರು
೪೬	ರಾಯಚೂರು ಗ್ರಾಮೀಣ	ಪರಿಶಿಷ್ಟ ಪಂಗಡ	ರಾಯಚೂರು

ಕ್ರ.ಸಂ.	ವಿಧಾನಸಭಾ ಮೀಸಲು ಕ್ಷೇತ್ರಗಳು (MLA)	ಮೀಸಲಾತಿ ವಿವರ	ಜಿಲ್ಲೆ
೪೭	ಶಿವಮೊಗ್ಗ ಗ್ರಾಮೀಣ	ಪರಿಶಿಷ್ಟ ಜಾತಿ	ಶಿವಮೊಗ್ಗ
೪೮	ಕೋರಟಗೆರೆ	ಪರಿಶಿಷ್ಟ ಜಾತಿ	ತುಮಕೂರು
೪೯	ಪಾವಗಡ	ಪರಿಶಿಷ್ಟ ಪಂಗಡ	ತುಮಕೂರು
೫೦	ನಂಜನಗೂಡು	ಪರಿಶಿಷ್ಟ ಜಾತಿ	ಮೈಸೂರು
೫೧	ಸುರಪುರ	ಪರಿಶಿಷ್ಟ ಪಂಗಡ	ಯಾದಗಿರಿ

ಕೋಷ್ಟಕ ೫.೮. ರಾಜ್ಯದಲ್ಲಿ ೨೦೧೫ರಲ್ಲಿ ನಡೆದ ಗ್ರಾಮಪಂಚಾಯಿತಿ ಸದಸ್ಯರುಗಳ ವಿವರ

ಕ್ರಸಂ	ಜಿಲ್ಲೆಗಳ ಹೆಸರು	ಒಟ್ಟು	ಒಟ್ಟು ಸ್ಥಾನಗಳ ಸಂಖ್ಯೆ			ಪರಿಶಿಷ್ಟ ಜಾತಿ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬೆಂಗಳೂರು	೧೦೪	೧೪೧೫	೧೪೬೦	೨೮೭೫	೨೬೯	೩೨೪	೫೯೩
೨	ಬೆಂಗಳೂರು	೧೦೫	೯೩೫	೯೮೯	೧೯೨೪	೨೧೨	೨೬೧	೪೭೩
೩	ಚಿತ್ರದುರ್ಗ	೧೯೦	೧೬೮೩	೧೭೭೭	೩೪೬೦	೩೭೯	೪೮೭	೮೬೬
೪	ದಾವಣಗೆರೆ	೨೩೫	೧೬೭೧	೧೭೭೩	೩೪೪೪	೩೫೫	೪೭೦	೮೨೫
೫	ಕೋಲಾರ	೧೫೬	೧೩೫೯	೧೪೩೧	೨೭೯೦	೪೦೩	೪೭೨	೮೭೫
೬	ಶಿವಮೊಗ್ಗ	೨೭೧	೧೪೦೩	೧೫೫೫	೨೯೫೮	೨೧೩	೪೦೬	೬೧೯
೭	ತುಮಕೂರು	೩೩೧	೨೬೧೨	೨೭೮೮	೫೪೦೦	೪೬೯	೬೪೯	೧೧೧೮
೮	ರಾಮನಗರ	೧೩೦	೧೦೩೬	೧೦೯೯	೨೧೩೫	೧೮೦	೨೪೩	೪೨೩
೯	ಚಿಕ್ಕಬಳ್ಳಾಪುರ	೧೫೭	೧೨೩೨	೧೩೧೮	೨೫೫೦	೩೧೩	೩೯೦	೭೦೩
೧೦	ಚಾಮರಾಜನಗರ	೧೩೦	೧೦೫೩	೧೧೧೮	೨೧೭೧	೨೫೨	೩೨೦	೫೭೨
೧೧	ಚಿಕ್ಕಮಗಳೂರು	೨೨೭	೧೧೧೭	೧೨೩೯	೨೩೫೬	೨೨೯	೩೪೮	೫೭೭
೧೨	ದಕ್ಷಿಣ ಕನ್ನಡ	೨೩೨	೧೭೧೭	೧೮೩೯	೩೫೫೬	೭೬	೨೪೯	೩೨೫
೧೩	ಹಾಸನ	೨೬೬	೨ಇ+೦೬	೧೯೪೯	೩೭೬೦	೩೨೫	೪೫೯	೭೮೪
೧೪	ಕೊಡಗು	೧೦೪	೧೮೮೭	೬೫೫	೧೨೬೦	೫೪	೧೨೫	೧೭೯
೧೫	ಮಂಡ್ಯ	೨೩೪	೧೮೮೭	೨೦೦೨	೩೮೮೯	೨೩೮	೩೩೯	೫೭೭
೧೬	ಮೈಸೂರು	೨೬೬	೨೩೦೧	೨೪೪೩	೪೭೪೪	೪೩೦	೫೭೨	೧೦೦೨
೧೭	ಉಡುಪಿ	೧೫೮	೧೧೯೬	೧೨೮೧	೨೪೭೭	೨೮	೧೬೨	೧೯೦
೧೮	ಬಳ್ಳಾರಿ	೨೦೫	೧೯೬೨	೨೦೬೭	೪೦೨೯	೪೨೭	೫೨೪	೯೫೧
೧೯	ಬೀದರ್	೧೮೬	೧೬೧೭	೧೬೯೭	೩೩೧೪	೩೮೧	೪೮೭	೮೬೮
೨೦	ಕಲಬುರುಗಿ	೨೬೪	೨೧೯೬	೨೩೩೧	೪೫೨೭	೫೬೬	೭೧೩	೧೨೭೯

		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೨೧	ಯಾದಗಿರಿ	೧೨೫	೧೨೦೧	೧೨೭೩	೨೪೭೪	೨೭೯	೩೪೩	೬೨೨
೨೨	ಕೊಪ್ಪಳ	೧೫೭	೧೪೬೭	೧೫೪೮	೩೦೧೫	೨೫೭	೩೨೯	೫೮೬
೨೩	ರಾಯಚೂರು	೧೮೫	೧೮೩೮	೧೯೩೧	೩೭೬೯	೩೬೨	೪೬೧	೮೨೩
೨೪	ಬಾಗಲಕೋಟೆ	೨೦೧	೧೬೪೯	೧೭೪೮	೩೩೯೭	೨೬೦	೩೬೧	೬೨೧
೨೫	ಬೆಳಗಾವಿ	೫೧೭	೪೬೪೩	೪೯೧೫	೯೫೫೮	೪೪೮	೭೭೮	೧೨೨೬
೨೬	ವಿಜಯಪುರ	೨೨೦	೨೦೮೯	೨೨೦೪	೪೨೯೩	೪೧೮	೫೧೮	೯೩೬
೨೭	ಧಾರವಾಡ	೧೪೩	೯೯೫	೧೦೬೯	೨೦೬೪	೪೪	೧೫೪	೧೯೮
೨೮	ಗದಗ	೧೨೦	೮೫೩	೯೧೬	೧೭೬೯	೧೩೦	೨೦೧	೩೩೧
೨೯	ಹಾವೇರಿ	೨೨೩	೧೫೭೦	೧೬೭೨	೩೨೪೨	೧೭೯	೩೧೩	೪೯೨
೩೦	ಉತ್ತರ ಕನ್ನಡ	೨೩೧	೧೩೨೭	೧೪೫೪	೨೭೮೧	೫೪	೨೫೭	೩೧೧
	ಒಟ್ಟು	೬೦೭೩	೪೮೪೪೦	೫೧೫೪೧	೯೯೯೮೧	೮೨೩೦	೧೧೭೧೫	೧೯೯೪೫

ಆಧಾರ: ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೫.೮. ರಾಜ್ಯದಲ್ಲಿ ೨೦೧೫ರಲ್ಲಿ ನಡೆದ ಗ್ರಾಮಪಂಚಾಯಿತಿ ಸದಸ್ಯರುಗಳ ವಿವರ

ಪರಿಶಿಷ್ಟ ಪಂಗಡ			ಹಿಂದುಳಿದ “ಅ” ವರ್ಗ			ಹಿಂದುಳಿದ “ಬ” ವರ್ಗ			ಸಾಮಾನ್ಯ		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧೯	೧೦೮	೧೨೭	೨೫೧	೨೯೪	೫೪೫	೬೩	೭೦	೧೩೩	೮೧೩	೬೬೪	೧೪೭೭
೩೧	೧೧೫	೧೪೬	೯೨	೧೬೦	೨೫೨	೪೨	೨೧	೬೩	೫೫೮	೪೩೨	೯೯೦
೨೯೦	೪೧೨	೭೦೨	೭೨	೧೭೦	೨೪೨	೪೪	೮	೫೨	೮೯೮	೭೦೦	೧೫೯೮
೧೮೪	೩೪೦	೫೨೪	೧೨೨	೨೨೪	೩೪೬	೪೫	೨೪	೬೯	೯೬೫	೭೧೫	೧೬೮೦
೫೮	೧೭೮	೨೩೬	೬೨	೧೬೦	೨೨೨	೪೧	೫	೪೬	೭೯೫	೬೧೬	೧೪೧೧
೨೦	೨೭೨	೨೯೨	೧೩೧	೩೧೪	೪೪೫	೭೭	೧೨	೮೯	೯೬೨	೫೫೧	೧೫೧೩
೧೫೪	೩೯೯	೫೫೩	೨೭೦	೫೦೧	೭೭೧	೧೩೩	೭೧	೨೦೪	೧೫೮೬	೧೧೬೮	೨೭೫೪
೯	೧೩೧	೧೪೦	೧೩೩	೨೩೬	೩೬೯	೭೦	೩೨	೧೦೨	೬೪೪	೪೫೭	೧೧೦೧
೧೪೧	೨೩೨	೩೭೩	೪೧	೧೨೪	೧೬೫	೨೫	೧	೨೬	೭೧೨	೫೭೧	೧೨೮೩
೯೩	೧೮೭	೨೮೦	೭೨	೧೪೩	೨೧೫	೪೦	೮	೪೮	೫೯೬	೪೬೦	೧೦೫೬
೧೫	೨೩೧	೨೪೬	೭೭	೨೦೩	೨೮೦	೪೨	೭	೪೯	೭೫೪	೪೫೦	೧೨೦೪
೪೪	೨೪೨	೨೮೬	೩೪೭	೪೭೭	೮೨೪	೧೦೭	೧೦೧	೨೦೮	೧೧೪೩	೭೭೦	೧೯೧೩
೬	೨೬೮	೨೭೪	೨೪೦	೩೭೦	೬೧೦	೭೮	೬೮	೧೪೬	೧೧೬೨	೭೮೪	೧೯೪೬
೪೯	೧೩೧	೧೮೦	೬೪	೧೪೧	೨೦೫	೩೭	೧೧	೪೮	೪೦೧	೨೪೭	೬೪೮
೨	೨೩೫	೨೩೭	೩೭೪	೪೬೯	೮೪೩	೯೯	೧೦೪	೨೦೩	೧೧೭೪	೮೪೫	೨೦೧೯
೨೬೭	೪೫೯	೭೨೬	೨೦೬	೩೪೩	೫೪೯	೭೯	೫೭	೧೩೬	೧೩೧೯	೧೦೧೨	೨೩೩೧
೩೨	೧೬೯	೨೦೧	೨೬೯	೩೩೪	೬೦೩	೬೮	೮೨	೧೫೦	೭೯೯	೫೩೪	೧೩೩೩
೩೭೮	೪೯೯	೮೭೭	೮೭	೧೭೩	೨೬೦	೩೭	೧೯	೫೬	೧೦೩೩	೮೫೨	೧೮೮೫
೨೩೧	೩೨೦	೫೫೧	೭೦	೧೫೮	೨೨೮	೨೯	೮	೩೭	೯೦೬	೭೨೪	೧೬೩೦
೨೩	೨೭೦	೨೯೩	೧೭೮	೩೬೧	೫೩೯	೯೭	೩೯	೧೩೬	೧೩೩೨	೯೪೮	೨೨೮೦
೧೩೪	೨೨೧	೩೫೫	೮೧	೧೪೮	೨೨೯	೩೫	೧೯	೫೪	೬೭೨	೫೪೨	೧೨೧೪
೧೬೦	೨೫೧	೪೧೧	೧೪೫	೨೪೫	೩೯೦	೬೫	೩೩	೯೮	೮೪೦	೬೯೦	೧೫೩೦
೩೭೯	೪೮೭	೮೬೩	೯೨	೧೭೨	೨೬೪	೪೧	೨೦	೬೧	೯೬೭	೭೯೧	೧೭೫೮
೬೮	೨೨೮	೨೯೬	೨೪೫	೩೬೦	೬೦೫	೮೦	೭೪	೧೫೪	೯೯೬	೭೨೫	೧೭೨೧
೨೪೭	೬೮೬	೯೩೩	೮೫೫	೧೧೧೧	೧೯೬೬	೨೫೨	೨೫೧	೫೦೩	೨೮೪೧	೨೦೮೯	೪೯೩೦
೯	೨೨೨	೨೩೧	೩೨೦	೪೩೧	೭೫೧	೧೦೦	೯೩	೧೯೩	೧೨೪೨	೯೪೦	೨೧೮೨
೨೭	೧೪೬	೧೭೩	೧೯೨	೨೮೨	೪೭೪	೭೬	೫೦	೧೨೬	೬೫೬	೪೩೭	೧೦೯೩
೨೯	೧೨೫	೧೫೪	೧೧೪	೧೯೧	೩೦೫	೫೨	೭೭	೧೨೯	೫೨೮	೩೭೨	೯೦೦
೧೦೫	೨೫೫	೩೬೦	೧೯೪	೩೭೫	೫೬೯	೧೦೮	೪೨	೧೫೦	೯೮೪	೬೮೭	೧೬೭೧
೧೫	೨೩೫	೨೫೦	೨೩೨	೩೭೧	೬೦೩	೮೦	೫೨	೧೩೨	೯೪೬	೩೫೯	೧೩೦೫
೩೨೧೬	**೮೦೫೪**	**೧೧೨೭೦**	**೫೬೨೮**	**೯೦೪೧**	**೧೪೬೬೯**	**೨೧೪೨**	**೧೪೧೯**	**೩೫೬೧**	**೨೯೭೨೪**	**೨೧೩೧೨**	**೫೦೫೩೬**

ಆಧಾರ: ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೫.೯. ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ತಾಲ್ಲೂಕು ಪಂಚಾಯಿತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯರ ಸ್ಥಾನಗಳ ವಿವರ

ವರ್ಗವಾರು ಸ್ಥಾನಗಳ ವಿವರ							
ಕ್ರಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪ.ಜಾ.	ಪ.ಪಂ.	ಹಿಂ.ವರ್ಗ(ಅ)	ಹಿಂ.ವರ್ಗ(ಬ)	ಸಾಮಾನ್ಯ
೧	ಬೆಂಗಳೂರು.	೯೭(೫೦)	೨೨(೧೨)	೪(೪)	೧೭(೯)	೪(೩)	೫೦(೨೨)
೨	ಬೆಂಗಳೂರು	೭೭(೩೯)	೧೮(೧೦)	೫(೫)	೧೨(೭)	೩(೨)	೩೯(೧೬)
೩	ರಾಮನಗರ	೮೧(೪೧)	೧೭(೯)	೪(೪)	೧೪(೯)	೫(೧)	೪೧(೧೮)
೪	ಚಿತ್ರದುರ್ಗ	೧೩೬(೭೦)	೩೫(೧೯)	೨೭(೧೫)	೫(೫)	೨(೦)	೬೭(೩೧)
೫	ದಾವಣಗೆರೆ	೧೩೩(೬೮)	೩೨(೧೭)	೨೦(೧೦)	೧೧(೭)	೨(೦)	೬೮(೩೪)
೬	ಕೋಲಾರ	೧೧೧(೫೭)	೩೫(೧೯)	೭(೫)	೯(೮)	೩(೦)	೫೭(೨೫)
೭	ಚಿಕ್ಕಬಳ್ಳಾಪುರ	೧೦೮(೫೬)	೩೧(೧೮)	೧೬(೯)	೫(೩)	೦(೦)	೫೬(೨೬)
೮	ಶಿವಮೊಗ್ಗ	೧೧೬(೬೧)	೨೨(೧೪)	೭(೭)	೧೯(೧೪)	೭(೧)	೬೧(೨೫)
೯	ತುಮಕೂರು	೨೧೫(೧೦೯)	೪೪(೨೩)	೨೧(೧೩)	೩೩(೧೯)	೮(೪)	೧೦೯(೫೦)
೧೦	ಚಿಕ್ಕಮಗಳೂರು	೧೦೭(೫೬)	೨೪(೧೪)	೮(೭)	೧೬(೧೦)	೩(೧)	೫೬(೨೪)
೧೧	ದಕ್ಷಿಣ ಕನ್ನಡ	೧೩೬(೬೯)	೧೧(೬)	೮(೫)	೩೪(೨೦)	೯(೪)	೭೪(೩೪)
೧೨	ಉಡುಪಿ	೯೮(೫೦)	೬(೩)	೪(೩)	೨೭(೧೪)	೬(೩)	೫೫(೨೭)
೧೩	ಹಾಸನ	೧೫೩(೮೦)	೩೩(೧೮)	೮(೮)	೨೫(೧೪)	೭(೩)	೮೦(೩೭)
೧೪	ಕೊಡಗು	೫೦(೨೬)	೬(೪)	೬(೪)	೯(೬)	೩(೧)	೨೬(೧೧)
೧೫	ಮಂಡ್ಯ	೧೫೫(೭೯)	೨೩(೧೩)	೭(೭)	೩೬(೧೮)	೧೦(೬)	೭೯(೩೫)
೧೬	ಮೈಸೂರು	೧೮೭(೧೯೪)	೩೯(೨೧)	೨೭(೧೫)	೨೨(೧೨)	೬(೩)	೯೩(೪೩)
೧೭	ಚಾಮರಾಜನಗರ	೮೯(೪೬)	೨೩೯೧೨)	೧೦(೬)	೮(೬)	೩(೦)	೪೫(೨೨)
೧೮	ಬೆಳಗಾವಿ	೩೪೫(೧೭೫)	೪೨(೨೪)	೨೭(೧೮)	೮೦(೪೧)	೨೦(೧೧)	೧೭೬(೮೧)
೧೯	ವಿಜಯಪುರ	೧೫೯(೮೧)	೩೫(೧೯)	೫(೫)	೩೦(೧೫)	೮(೫)	೮೧(೩೭)
೨೦	ಬಾಗಲಕೋಟೆ	೧೩೦(೬೭)	೨೪(೧೩)	೯(೭)	೨೪(೧೨)	೬(೪)	೬೭(೩೧)
೨೧	ಧಾರವಾಡ	೮೨(೪೨)	೭(೫)	೬(೫)	೨೧(೧೧)	೬(೪)	೪೨(೧೭)
೨೨	ಗದಗ	೭೫(೫೯	೧೪(೯)	೫(೫)	೧೪(೮)	೩(೨)	೩೯(೧೫)
೨೩	ಹಾವೇರಿ	೧೨೮(೬೫)	೧೯(೧೧)	೧೨(೭)	೨೫(೧೪)	೭(೪)	೬೫(೨೯)
೨೪	ಉತ್ತರ ಕನ್ನಡ	೧೩೦(೭೦)	೧೨(೧೧)	೧೧(೧೧)	೨೭(೨೧)	೧೦(೧)	೭೦(೨೬)
೨೫	ಬೀದರ್	೧೩೧(೬೬)	೩೪(೧೮)	೨೨(೧೩)	೮(೬)	೧(೦)	೬೬(೨೯)
೨೬	ಬಳ್ಳಾರಿ	೧೫೦(೭೬)	೩೬(೨೦)	೩೩(೧೭)	೬(೪)	೦(೦)	೭೫(೩೫)
೨೭	ರಾಯಚೂರು	೧೪೨(೭೨)	೩೧(೧೬)	೩೩(೧೮)	೭(೪)	೧(೦)	೭೦(೩೪)
೨೮	ಕಲಬುರುಗಿ	೧೭೯(೯೦)	೫೦(೨೭)	೮(೭)	೨೫(೧೩)	೬(೪)	೯೦(೩೯)
೨೯	ಯಾದಗಿರಿ	೯೪(೪೮)	೨೪(೧೩)	೧೨(೭)	೭(೬)	೩(೦)	೪೮(೨೨)
೩೦	ಕೊಪ್ಪಳ	೧೦೯(೫೬)	೨೨(೧೨)	೧೫(೯)	೧೨(೮)	೪(೧)	೫೬(೨೬)
	ಒಟ್ಟು	೩೯೦೩(೧೯೯೮)	೭೧೧(೪೩೦)	೩೮೭(೨೫೫)	೫೮೮(೩೪೪)	೧೫೬(೬೮)	೨೦೦೧(೯೦೧)

ಆಧಾರ: ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೫.೧೦. ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯರ ಸ್ಥಾನಗಳ ವಿವರ

ವರ್ಗವಾರು ಸ್ಥಾನಗಳ ವಿವರ							
ಕ್ರ.ಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪ.ಜಾ	ಪ.ಪಂ	ಹಿಂವರ್ಗ(ಅ)	ಹಿಂವರ್ಗ(ಬ)	ಸಾಮಾನ್ಯ
೧	ಬೆಂಗಳೂರು(ಗ್ರಾ)	೫೦(೨೫)	೧೧(೬)	೨(೧)	೧೦(೫)	೨(೧)	೨೫(೧೨)
೨	ಬೆಂಗಳೂರು(ನ)	೨೧(೧೧)	೫(೩)	೧(೧)	೩(೨)	೧(೦)	೧೧(೫)
೩	ರಾಮನಗರ	೨೨(೧೧)	೪(೨)	೧(೧)	೫(೨)	೧(೧)	೧೧(೫)
೪	ಚಿತ್ರದುರ್ಗ	೩೭(೧೯)	೯(೫)	೭(೪)	೨(೧)	೦(೦)	೧೯(೯)
೫	ದಾವಣಗೆರೆ	೩೬(೧೮)	೯(೫)	೫(೩)	೩(೨)	೧(೦)	೧೮(೮)
೬	ಕೋಲಾರ	೩೦(೧೫)	೯(೫)	೨(೧)	೩(೨)	೧(೦)	೧೫(೭)
೭	ಚಿಕ್ಕಬಳ್ಳಾಪುರ	೨೮(೧೪)	೮(೪)	೪(೨)	೨(೧)	೦(೦)	೧೪(೭)
೮	ಶಿವಮೊಗ್ಗ	೩೧(೧೬)	೬(೩)	೧(೧)	೬(೩)	೨(೧)	೧೬(೮)
೯	ತುಮಕೂರು	೫೭(೨೯)	೧೨(೬)	೫(೩)	೯(೫)	೨(೧)	೨೯(೧೪)
೧೦	ಚಿಕ್ಕಮಗಳೂರು	೩೩(೧೭)	೮(೪)	೧(೧)	೬(೩)	೧(೧)	೧೭(೮)
೧೧	ದಕ್ಷಿಣ ಕನ್ನಡ	೩೬(೧೮)	೩(೨)	೨(೧)	೧೦(೫)	೨(೧)	೧೯(೯)
೧೨	ಉಡುಪಿ	೨೬(೧೩)	೨(೧)	೧(೧)	೭(೪)	೨(೧)	೧೪(೬)
೧೩	ಹಾಸನ	೪೦(೨೦)	೮(೪)	೧(೧)	೯(೫)	೨(೧)	೨೦(೯)
೧೪	ಕೊಡಗು	೨೯(೧೫)	೪(೨)	೩(೨)	೬(೩)	೧(೧)	೧೫(೭)
೧೫	ಮಂಡ್ಯ	೪೧(೨೧)	೬(೨)	೧(೧)	೧೦(೬)	೩(೧)	೨೧(೧೦)
೧೬	ಮೈಸೂರು	೪೯(೨೫)	೧೦(೫)	೭(೪)	೬(೩)	೧(೧)	೨೫(೧೨)
೧೭	ಚಾಮರಾಜನಗರ	೨೩(೧೨)	೬(೩)	೩(೨)	೨(೧)	೦(೦)	೧೨(೬)
೧೮	ಬೆಳಗಾವಿ	೯೦(೪೫)	೧೧(೬)	೭(೪)	೨೨(೧೧)	೫(೩)	೪೫(೨೧)
೧೯	ವಿಜಯಪುರ	೪೨(೨೧)	೯(೫)	೧(೧)	೯(೫)	೨(೧)	೨೧(೯)
೨೦	ಬಾಗಲಕೋಟೆ	೩೬(೧೮)	೭(೪)	೨(೧)	೭(೪)	೨(೧)	೧೮(೮)
೨೧	ಧಾರವಾಡ	೨೨(೧೧)	೨(೧)	೧(೧)	೬(೩)	೧(೧)	೧೨(೫)
೨೨	ಗದಗ	೧೯(೧೦)	೪(೨)	೧(೧)	೩(೨)	೧(೦)	೧೦(೫)
೨೩	ಹಾವೇರಿ	೩೪(೧೭)	೫(೩)	೩(೨)	೭(೪)	೨(೧)	೧೭(೭)
೨೪	ಉತ್ತರ ಕನ್ನಡ	೩೯(೨೦)	೩(೨)	೧(೧)	೧೦(೬)	೩(೧)	೨೨(೧೦)
೨೫	ಬೀದರ್	೩೪(೧೭)	೯(೫)	೬(೩)	೨(೧)	೦(೦)	೧೭(೮)
೨೬	ಬಳ್ಳಾರಿ	೪೦(೨೦)	೯(೫)	೯(೫)	೨(೧)	೦(೦)	೨೦(೯)
೨೭	ರಾಯಚೂರು	೩೮(೧೯)	೮(೪)	೯(೫)	೨(೧)	೦(೦)	೧೯(೯)
೨೮	ಕಲಬುರುಗಿ	೪೭(೨೪)	೧೩(೭)	೧(೧)	೭(೪)	೨(೧)	೨೪(೧೧)
೨೯	ಯಾದಗಿರಿ	೨೪(೧೨)	೬(೩)	೩(೨)	೨(೨)	೧(೦)	೧೨(೫)
೩೦	ಕೊಪ್ಪಳ	೨೯(೧೫)	೬(೩)	೪(೨)	೩(೨)	೧(೦)	೧೫(೮)
	ಒಟ್ಟು	೧೦೮೩(೫೪೮)	೨೧೨(೧೧೩)	೯೫(೫೯)	೧೮೧(೯೯)	೮೨(೨೦)	೫೫೩(೨೫೭)

ಸ್ಥಳೀಯ ಸರ್ಕಾರದಲ್ಲಿ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯ

ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಥಳೀಯ ಸರ್ಕಾರದಲ್ಲಿ ಅಧಿಕಾರದಿಂದ ವಂಚಿತರಾದವರಿಗೆ ಅಧಿಕಾರದ ಹತ್ತಿರ ಸುಳಿವಂತೆ ಮಾಡಲಾಯಿತು, ಸಾವಿರಾರು ವರ್ಷಗಳಿಂದ ಕೆಳವರ್ಗದವರು ಮತ್ತು ಮಹಿಳೆಯನ್ನು ಸ್ಥಳೀಯ ಅಧಿಕಾರದಿಂದ ದೂರವೆ ಇಡಲಾಗಿತ್ತು. ೧೯೮೮ರಲ್ಲಿ ಆಗಿನ ಪ್ರಧಾನಿ ರಾಜೀವ್ ಗಾಂದಿ ಸ್ಥಳೀಯ ಸರ್ಕಾರವನ್ನು ಬಲ ಪಡಿಸುವುದರ ಜೊತೆಗೆ ಜನರನ್ನು ಒಳಗೊಳ್ಳುವ ಅಭಿವೃದ್ಧಿಯ ಕನಸ್ಸು ಕಂಡರು, ಅವರ ಕನಸ್ಸನ್ನು ೧೯೯೨ರಲ್ಲಿ ಪ್ರಧಾನಿ ಪಿ.ವಿ ನರಸಿಂಹ ರಾವ್ ಸಂವಿಧಾನದ ೭೩ನೆ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಅಂಗಿಕಾರ ಪಡೆದರು. ಇದು ೨೪/೦೮/೧೯೯೩ ರಿಂದ ಜಾರಿಗೆ ಬಂದಿದೆ, ದಿ ಪಂಚಾಯಿತ್ಸ್ ಎಂಬ ಶೀರ್ಷಿಕೆಯನ್ನು ಒಳಗೊಂಡ ೧೧ನೆ ಭಾಗಕ್ಕೆ ಸೇರಿಸಿ ಸಂವಿಧಾನದ ೨೪೩ ರಿಂದ ೨೪೩-೦ ವರೆಗೆ ೧೬ ಹೊಸ ವಿಧಿಗಳನ್ನು ಸೇರಿಸಲಾಗಿದೆ. ಇದರಲ್ಲಿ ಸಂವಿಧಾನದ ೭೩ನೆ ತಿದ್ದುಪಡಿ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಥಳೀಯ ಸರ್ಕಾರದಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಲಾಯಿತು. ಸಂವಿಧಾನದ ೨೪೩.ಡಿ ಮೀಸಲು ಸ್ಥಾನಗಳ ಬಗ್ಗೆ ವಿವರಣೆ ನೀಡುತ್ತದೆ. ಪ್ರತಿ ಹಂತದ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವರ ಜನಸಂಖ್ಯೆಗೆ ಅನುಗಣವಾಗಿ ಕೆಲವು ಸದಸ್ಯ ಸ್ಥಾನಗಳನ್ನು ಮೀಸಲಿಡಬೇಕು. ಈ ವರ್ಗಗಳಿಗೆ ನಿಗದಿ ಪಡಿಸುವ ಒಟ್ಟು ಮೀಸಲು ಕ್ಷೇತ್ರಗಳಲ್ಲಿ ೧/೩ಕಿಂತ ಕಡಿಮೆ ಇಲ್ಲದಂತೆ ಆ ವರ್ಗಗಳ ಮಹಿಳೆಯರಿಗೆ ಮೀಸಲು ಸ್ಥಾನಗಳ ಅವಕಾಶವಿದೆ. ಅಲ್ಲದೆ ಪರಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಮಹಿಳೆಯರಿಗೆ ಮಿಸಲಿಡುವ ಸ್ಥಾನಗಳು ಸೇರಿದಂತೆ ಇತರ ಮಹಿಳೆಯರಿಗೂ ಎಲ್ಲಾ ಹಂತದ ಪಂಚಾಯಿತಿಗಳಲ್ಲಿ ೧/೩ಕಿಂತ ಕಡಿಮೆ ಇಲ್ಲದಂತೆ ಸ್ಥಾನಗಳನ್ನು ಕಾಯ್ದಿರಿಸಬೇಕು. ಮೀಸಲು ಕ್ಷೇತ್ರಗಳನ್ನು ಸರದಿ ಆಧಾರದ ಮೇಲೆ ಬದಲಾಯಿಸಲು ಅವಕಾಶವಿದೆ. ರಾಜ್ಯ ಶಾಸಕಾಂಗ ಮಾಡುವ ಕಾನೂನುಗಳ ಅನ್ವಯ ಎಲ್ಲ ಹಂತದ ಪಂಚಾಯಿತಿಗಳ ಅಧ್ಯಕ್ಷ ಸ್ಥಾನವನ್ನು ಮೇಲೆ ತಿಳಿಸಿರುವ ವರ್ಗಗಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮತ್ತು ೧/೩ ರಷ್ಟು ಮಹಿಳೆಯರಿಗೆ ಮೀಸಲಿಡಬೇಕು. ಮೀಸಲು ನಿಯಮಕ್ಕೆ ಒಳಗಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಬದಲಾಯಿಸಲು ಅವಕಾಶವಿದೆ. ಅಲ್ಲದೆ ಹಿಂದುಳಿದ ವರ್ಗದವರಿಗೆ ಯಾವುದೇ ಹಂತದ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಮೀಸಲು ನಿಯಮ ಜಾರಿಗೆ ತರಲು ರಾಜ್ಯ ಶಾಸಕಾಂಗಕ್ಕೆ ಅಧಿಕಾರವಿದೆ ಎಂದು (೬) ಉಪವಿಧಿ ತಿಳಿಸುತ್ತದೆ. ಕೇಂದ್ರ ಸರ್ಕಾರದ ೨೦೦೯ರ ಆಗಸ್ಟ್‌ನಲ್ಲಿ ಮಹಿಳೆಯರಿಗೆ ಮೀಸಲು ಪ್ರಮಾಣವನ್ನು ಶೇ. ೫೦ಕ್ಕೆ ಹೆಚ್ಚಿಸಲು ತಿರ್ಮಾನಿಸಿತು. ಅದರಂತೆ ಬಿಹಾರ ಮತು ಮಧ್ಯಪ್ರದೇಶದಂತೆ ಕರ್ನಾಟಕದಲ್ಲಿ ಮಹಿಳೆಯರಿಗೆ ಮೀಸಲು ಪ್ರಮಾಣವನ್ನು ಶೇ. ೫೦ಕ್ಕೆ ೨೦೧೦ ಆಗಸ್ಟ್‌ನಲ್ಲಿ ಹೆಚ್ಚಿಸಲಾಯಿತು.[೨೪]

'ಅಪಾಯದಲ್ಲಿ ಸ್ಥಳೀಯ ಆಡಳಿತ: ಗ್ರಾಮೀಣ ಕರ್ನಾಟಕದ ಒಂದು ಪ್ರಕರಣ' ಎಂಬ ಹೆಸರಿನ ಅಧ್ಯಯನ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತ ಇರುವುದನ್ನು ಉಲ್ಲೇಖಿಸಿದೆ. ಐಸೆಕ್‌ನ

ಪ್ರಾಧ್ಯಾಪಕರಾದ ಕೆ.ಶಿವಣ್ಣ, ಮಂಜುಲಾ ಭಾರತಿ ಮತ್ತು ಕೆ.ಜಿ. ಗಾಯಿತ್ರಿದೇವಿ ಈ ಅಧ್ಯಯನ ತಂಡದ ಸದಸ್ಯರು. ಕಲಬುರ್ಗಿ, ಬಾಗಲಕೋಟೆ, ಬಳ್ಳಾರಿ, ಮಂಡ್ಯ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಬಳ್ಳಾರಿ, ಕಲಬುರ್ಗಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತ ಇದೆ. ಈ ಬಗ್ಗೆ ಸ್ವ- ಸಹಾಯ ಗುಂಪುಗಳ ಕೆಲವು ಸದಸ್ಯರು ಪ್ರಶ್ನೆ ಮಾಡಿದ್ದೂ ಇದೆ. ಎಮದು ಅಧ್ಯಯನ ಹೇಳಿದೆ. ಕಲಬಿರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಯಲವಾರ ಮತ್ತು ಹಣಸಿ ಗ್ರಾಮ ಪಂಚಾಯಿತಿಗಳಲ್ಲಿ ಸಭೆಯ ಒಳಗೆ ಪ್ರವೇಶಿಸುವುದಕ್ಕೆ ಮತ್ತು ಸದಸ್ಯರ ಕುಳಿತುಕೊಳ್ಳಲು ದಲಿತ ಮಹಿಳೆಯರಿಗೆ ಇತರೆ ಮೇಲ್ಜಾತಿಗಳವರು ಅವಕಾಶ ನೀಡುತ್ತಿಲ್ಲ. ಇದರಿಂದ ತಾವು ಪ್ರತಿನಿಧಿಸುವ ಪಂಚಾಯ್ತಿಯ ಸಮಸ್ಯೆಗಳನ್ನು ಹೇಳಿಕೊಳ್ಳಲು ಈ ಮಹಿಳೆಯರಿಗೆ ಸಾಧ್ಯವಾಗುತ್ತಿಲ್ಲ ಎಂದು ಅಧ್ಯಯನ ತಿಳಿಸಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಕೊಳಾಯಿ, ಹೇರ್ ಕಟಿಂಗ್ ಸಲೂನ್, ಹೋಟೆಲ್ ಮತ್ತು ದೇವಸ್ಥಾನಗಳಲ್ಲಿ ಜಾತಿ ತಾರತಮ್ಯ ಈಗಲೂ ಇದೆ. ಎಂಬುದನ್ನು ಅಧ್ಯಯನ ತಿಳಿಸಿದೆ. ಅಧ್ಯಯನದ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿರುವ ಬಹುಪಾಲು ಜನರು ಬಳ್ಳಾರಿ(ಶೇ ೭೭.೫) ಮತ್ತು ಬಾಗಲಕೋಟೆ(ಶೇ ೫೦)ಯಲ್ಲಿ ಅವರವರ ಗ್ರಾಮಗಳಲ್ಲಿ ಅಸ್ಪೃಶ್ಯತೆಗೆ ಒಳಗಾಗಿರುವುದನ್ನು ಹೇಳಿಕೊಂಡಿದ್ದಾರೆ. ಈ ಪ್ರಮಾಣ ಕಲಬುರ್ಗಿ ಶೇ ೩೨.೫, ದಕ್ಷಿಣ ಕನ್ನಡ ಶೇ ೩೭.೫ ರಷ್ಟು ಜನ ಅಸ್ಪೃಶ್ಯತೆ ಇರುವುದನ್ನು ಒಪ್ಪಿಕೊಂಡಿದ್ದಾರೆ.[೨೫]

ಕೋಷ್ಟಕ ೫.೧೧. ಸಮೀಕ್ಷೆಗೊಳಪಟ್ಟ ಲಿಂಗವಾರು ಸಾಮಾನ್ಯ ಮಾಹಿತಿ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಲಿಂಗ	ಗಂಡು	೮೫	೮೫	೮೭	೮೭	೭೪	೭೪
	ಹೆಣ್ಣು	೧೫	೧೫	೧೩	೧೩	೨೬	೨೬
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೇಲೆ ತೋರಿಸಲಾದ ಕರ್ನಾಟಕದ ಮೂರು ವಿಧಾನಸಭಾ ಕ್ಷೇತ್ರಗಳ ತಾಲೂಕುಗಳಲ್ಲಿನ ಗ್ರಾಮಗಳಲ್ಲಿ ಸಂದರ್ಶಿತಗೊಂಡ ಲಿಂಗ ಪ್ರಮಾಣದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಶೇ. ೮೫.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೧೫.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಅದರಂತೆ, ಲಿಂಗಸೂರು ತಾಲೂಕಿನಲ್ಲಿ ಶೇ. ೮೭.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೧೩.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ. ಕೊನೆಯದಾಗಿ, ಸಿಂಧನೂರು ತಾಲೂಕಿನಲ್ಲಿ ಶೇ. ೭೪.೦೦ರಷ್ಟು ಕುಟುಂಬಗಳ ಗಂಡಸರು ಉಳಿದ ಶೇ. ೨೬.೦೦ರಷ್ಟು ಕುಟುಂಬಗಳಲ್ಲಿ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ.

ಮೇಲಿನ ಅಂಶಗಳಿಂದ ತಿಳಿದು ಬರುವ ಅಂಶವೆಂದರೆ, ಹೈದ್ರಾಬಾದ್ ಕರ್ನಾಟಕದ ಪ್ರದೇಶದ ರಾಯಚೂರು ಜಿಲ್ಲೆಯ ಮೂರು ತಾಲೂಕುಗಳನ್ನು ಹೋಲಿಕೆ ಮಾಡಿದಾಗ ಮೂರು ತಾಲೂಕಿನಲ್ಲಿ ಮಹಿಳೆಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಸಂದರ್ಶನಗೊಂಡಿರುವುದನ್ನು ನೋಡಬಹುದಾಗಿದೆ. ಹಾಗಾಗಿ, ಕುಟುಂಬದ ಮಹಿಳೆಯರು ಮುಖ್ಯವಾಹಿನಿಯಲ್ಲಿ ಬರದೆ ತಮ್ಮ ಕೆಲಸಗಳನ್ನು ಮಾಡಿಕೊಂಡು ಕನಿಷ್ಠ ಜೀವನವನ್ನು ಸಾಗಿಸುತ್ತಿರುವುದು ಕಂಡು ಬಂದಿದೆ. ಇಲ್ಲಿ ತಿಳಿದು ಬರುವ ಸಂಗತಿಯೆಂದರೆ, ಪುರುಷರಿಗಿಂತ ಮಹಿಳೆಯರೆ ತಮ್ಮ ಮನೆಯ ಜೀವನವನ್ನು ನಡೆಸಿಕೊಂಡು ಹೋಗಬೇಕಾದ ಸ್ಥಿತಿ ಇನ್ನೂ ಇದೆ ಎನ್ನಲಾಗಿದೆ. ಇಲ್ಲಿ ಪುರುಷರು ಸೋಮಾರಿಗಳಾಗದೆ ಮಹಿಳೆಯರ ಜೊತೆಗೆ ಕೂಡಿಕೊಂಡು ತಮ್ಮ ಉತ್ತಮ ಜೀವನವನ್ನು ನಡೆಸಿಕೊಂಡು ಹೋಗಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೫.೧೨. ಸಮೀಕ್ಷೆಗೊಳಪಟ್ಟ ವಯೋಮಾನದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ವಯಸ್ಸು	೨೧–೩೦	೫೪	೫೪	೩೬	೩೬	೪೯	೪೯
	೩೧–೪೦	೨೪	೨೪	೪೮	೪೮	೪೬	೪೬
	೪೧ +	೨೨	೨೨	೧೬	೧೬	೫	೫
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಅಧ್ಯಯನಕ್ಕಾಗಿ ತಾಲೂಕುವಾರು ಸಂದರ್ಶನ ಮಾಡಿದ ಕುಟುಂಬಗಳು ಯಾವ ವಯಸ್ಸಿನವರು ಎಂದು ಈ ಕೆಳಗಿನಂತೆ ತೋರಿಸಲಾಗಿದೆ. ಪುರುಷ ಮತ್ತು ಮಹಿಳೆಯರ ವಯೋಮಿತಿಯವರು ಭಾಗವಹಿಸಿದ್ದಾರೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೫೪.೦೦ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿಯವರಾಗಿದ್ದಾರೆ. ಅದೇ ಪ್ರಕಾರ ಶೇ. ೨೪.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿಯವರಾಗಿದ್ದಾರೆ. ಉಳಿದ ಶೇ. ೨೨.೦೦ರಷ್ಟು ಕುಟುಂಬಗಳು ೪೧ ರಿಂದ ವಯೋಮಿತಿಯವರಾಗಿದ್ದಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೩೬.೦೦ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿಯವರಾಗಿದ್ದಾರೆ. ಅದೇ ಪ್ರಕಾರ ಶೇ. ೪೮.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿಯವರಾಗಿದ್ದಾರೆ. ಉಳಿದ ಶೇ. ೧೬.೦೦ರಷ್ಟು ಕುಟುಂಬಗಳು ೪೧ ರಿಂದ ವಯೋಮಿತಿಯವರಾಗಿದ್ದಾರೆ. ಕೊನೆಯದಾಗಿ, ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೪೯.೦೦ರಷ್ಟು ಕುಟುಂಬಗಳು ೨೧ರಿಂದ ೩೦ ವಯೋಮಿತಿಯವ ರಾಗಿದ್ದಾರೆ. ಅದೇ ಪ್ರಕಾರ ಶೇ. ೪೬.೦೦ರಷ್ಟು ಕುಟುಂಬಗಳು ೩೧ರಿಂದ ೪೦ ವಯೋಮಿತಿಯವ

ರಾಗಿದ್ದಾರೆ. ಉಳಿದ ಶೇ. ೫.೦೦ರಷ್ಟು ಕುಟುಂಬಗಳು ೪೧ ರಿಂದ ವಯೋಮಿತಿಯವರನ್ನು ಸಂದರ್ಶಿಸಲಾಗಿದೆ.

ಆದರೆ ಮೂರು ತಾಲೂಕಿನ ಗ್ರಾಮಗಳನ್ನು ಗಮನಿಸಿದಾಗ ೨೧-೩೦ ವರ್ಷದ ವಯೋಮಿತಿಯ ಕುಟುಂಬದವರು ಎರಡು ತಾಲೂಕಿನಲ್ಲಿ ಹೆಚ್ಚಿರುವುದು ಅಲ್ಲದೇ ೩೧-೪೦ ವರ್ಷದ ವಯೋಮಿತಿಯವರು ಲಿಂಗಸೂರಿನಲ್ಲಿ ಹೆಚ್ಚಾಗಿರುವುದನ್ನು ಅಧ್ಯಯನದಿಂದ ತಿಳಿದು ಬರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೆಂದರೆ, ಇವರೇ ಹೆಚ್ಚಿನ ಸಂಖ್ಯೆಯಲ್ಲಿ ಹುಮ್ಮಸ್ಸಿನಿಂದ ಸಂದರ್ಶಿತರಾಗುವ ಜೊತೆಗೆ ತಮ್ಮ ಗ್ರಾಮಗಳ ಸ್ಥಿತಿಯ ಬಗ್ಗೆ ತುಂಬಾ ಬೇಸರದಿಂದ ಹೇಳಿಕೊಂಡಿರುವುದು ಗಮನಿಸಲಾಗಿದೆ. ಅದೇ ರಿತಿಯಾಗಿ ೪೦ ವರ್ಷ ಮೆಲ್ಪಟ್ಟವರನ್ನು ಸಂದರ್ಶನ ಮಾಡಲಾಗಿದೆ.

ಕೋಷ್ಟಕ ೫.೧೩. ಸಮೀಕ್ಷೆಗೊಳಪಟ್ಟ ಶೈಕ್ಷಣಿಕ ಹಂತಗಳ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಶಿಕ್ಷಣ	ಅನಕ್ಷರಸ್ಥರು	೬೩	೬೩	೫೪	೫೪	೨೯	೨೯
	ಪ್ರಾಥಮಿಕ ಶಿಕ್ಷಣ	೯	೯	೧೮	೧೮	೩೧	೩೧
	ಪ್ರೌಡ ಶಿಕ್ಷಣ	೧೮	೧೮	೧೪	೧೪	೩೧	೩೧
	ಪದವಿ ಪೂರ್ವ	೧೦	೧೦	೧೪	೧೪	೯	೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ತಾಲೂಕುವಾರು ಗ್ರಾಮಗಳ ಕುಟುಂಬಗಳನ್ನು ಸಂದರ್ಶನ ಮಾಡಿದಾಗ ದೇವದುರ್ಗ ತಾಲೂಕಿನಲ್ಲಿ ಶೇ. ೬೩.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಶೇ. ೦೯.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೧೮.೦೦ರಷ್ಟು ಪ್ರೌಢ ಶಿಕ್ಷಣವನ್ನು ಹೊಂದಿರುತ್ತಾರೆ. ಉಳಿದ ಶೇ. ೧೦.೦೦ರಷ್ಟು ಕುಟುಂಬಗಳು ಪದವಿ ಪೂರ್ವ ಶಿಕ್ಷಣವನ್ನು ಹೊಂದಿರುತ್ತಾರೆ. ಅದರಂತೆ, ಲಿಂಗಸೂರು ತಾಲೂಕಿನಲ್ಲಿ ಶೇ. ೫೪.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಶೇ. ೧೮.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೧೪.೦೦ರಷ್ಟು ಪ್ರೌಢಶಿಕ್ಷಣವನ್ನು ಹೊಂದಿರುತ್ತಾರೆ. ಉಳಿದ ಶೇ. ೧೪.೦೦ರಷ್ಟು ಕುಟುಂಬಗಳು ಪದವಿ ಪೂರ್ವ ಶಿಕ್ಷಣವನ್ನು ಹೊಂದಿರುತ್ತಾರೆ. ಕೊನೆಯದಾಗಿ, ಸಿಂಧನೂರು ತಾಲೂಕಿನಲ್ಲಿ ಶೇ. ೨೯.೦೦ರಷ್ಟು ಕುಟುಂಬಗಳು ಅನಕ್ಷರಸ್ಥರ ಕುಟುಂಬಗಳನ್ನು ಸಂದರ್ಶಿಸಲಾಯಿತು. ಶೇ. ೩೧.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಅದೇ ಪ್ರಕಾರ ಶೇ. ೩೧.೦೦ರಷ್ಟು ಪ್ರೌಢ ಶಿಕ್ಷಣವನ್ನು

ಹೊಂದಿರುತ್ತಾರೆ. ಉಳಿದ ಶೇ. ೯.೦೦ರಷ್ಟು ಕುಟುಂಬಗಳು ಪದವಿ ಪೂರ್ವ ಶಿಕ್ಷಣವನ್ನು ಹೊಂದಿರುತ್ತಾರೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೂರು ತಾಲೂಕಿನಲ್ಲಿ ಗ್ರಾಮಗಳ ಕುಟುಂಬಗಳ ವಿದ್ಯಾರ್ಹತೆಯನ್ನು ಗಮನಿಸಿದಾಗ ದೇವದುರ್ಗ ಮತ್ತು ಲಿಂಗಸೂರು ಗ್ರಾಮಗಳ ಮೀಸಲು ಕ್ಷೇತ್ರಗಳಿಗಿಂತ ಸಿಂಧನೂರು ಸಾಮಾನ್ಯ ಕ್ಷೇತ್ರದಲ್ಲಿ ಅನಕ್ಷರಸ್ಥ ಕುಟುಂಬಗಳು ಕಡಿಮೆಯಾಗಿದೆ ಎಂದು ಅಧಯಯಯನಗಳಿಂದ ತಿ:ಳಿದು ಬಂದಿದೆ. ಇದರಿಂದ ತಿಳಿದುಬರುವ ಮತ್ತೊಂದು ಸಂಗತಿಯೆಂದರೆ, ಶಿಕ್ಷಣವು ಅಭಿವೃದ್ಧಿಯ ಮಾನದಂಡವಾಗಿದ್ದು ಅದರಲ್ಲಿ ಯಾರು ಮುಂದುವರಿಯುತ್ತಾರೋ ಅವರ ಬೆಳವಣಿಗೆಯನ್ನು ಕಾಣಬಹುದಾಗಿದೆ. ಆದರೆ ಇದಕ್ಕೆ ಹೊರತಾಗಿ ಸಿಂಧನೂರು ತಾಲೂಕಿನ ಗ್ರಾಮಗಳನ್ನು ಬಿಟ್ಟು ಉಳಿದ ತಾಲೂಕುಗಳು ಹಿಂದುಳಿದಿವೆ. ಹಾಗಾಗಿ ಆ ಎರಡು ಕ್ಷೇತ್ರಗಳಲ್ಲಿರುವ ಕುಟುಂಬಗಳನ್ನು ಶಿಕ್ಷಣಕ್ಕಾಗಿ ಹೆಚ್ಚು ಶ್ರಮಿಸಬೇಕಾದ ಅಗತ್ಯವಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.

ಕೋಷ್ಟಕ ೫.೧೪. ಸಮೀಕ್ಷೆಗೊಳಪಟ್ಟ ವಿವಿಧ ಉದ್ಯೋಗದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು
ಉದ್ಯೋಗ	ಕೂಲಿ	೫೪	೫೪	೩೯	೩೯	೨೦	೩೦
	ಖಾಸಗಿ	೯	೯	೧೪	೧೪	೨೯	೨೯
	ವ್ಯವಹಾರ	೧೪	೧೪	೨೫	೨೫	೨೧	೨೧
	ವ್ಯವಸಾಯ	೨೩	೨೩	೨೨	೨೨	೨೦	೨೦
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಕರ್ನಾಟಕದ ಮೂರು ತಾಲೂಕುಗಳ ಕುಟುಂಬಗಳು ತಮ್ಮ ಜೀವನೋಪಾಯಕ್ಕಾಗಿ ವಿವಿಧ ಕೆಲಸ ಕಾರ್ಯಗಳಲ್ಲಿ ತೊಡಗಿರುವುದನ್ನು ತೋರತಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೫೪.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೦೯.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೧೪.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇತರೆ ಶೇ. ೨೩.೦೦ರಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತರಾಗಿದ್ದಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೩೯.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೧೪.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೨೫.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು

ಜೀವನ ನಡೆಸುತ್ತಿದ್ದಾರೆ. ಇತರೆ ಶೇ. ೨೨.೦೦ರಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತರಾಗಿದ್ದಾರೆ. ಮುಂದುವರಿದು, ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೩೦.೦೦ರಷ್ಟು ಕುಟುಂಬಗಳು ಕೂಲಿಯಿಂದ ತಮ್ಮ ಜೀವನ ಮಾಡುತ್ತಿದ್ದಾರೆ. ಅದೇ ಪ್ರಕಾರ ಶೇ. ೨೯.೦೦ರಷ್ಟು ಕುಟುಂಬಗಳು ಖಾಸಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ, ಶೇ. ೨೧.೦೦ರಷ್ಟು ಪಾಲಕರು ವ್ಯವಹಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇತರೆ ಶೇ. ೨೦.೦೦ದಷ್ಟು ಕುಟುಂಬಗಳು ವ್ಯವಸಾಯವನ್ನು ಆಧಾರಿತರಾಗಿದ್ದಾರೆ. ಹೀಗೆ ಮುಂತಾದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವುದು ಅಧ್ಯಯದಿಂದ ತಿಳಿದು ಬರುತ್ತದೆ. ಮೂರು ಜಿಲ್ಲೆಯನ್ನು ನೋಡಿದಾಗ ಯಾವ ಪಾಲಕರು ಸರ್ಕಾರಿ ಹುದ್ದೆಯನ್ನು ಹೊಂದದೆ ಸರ್ಕಾರೇತರ ಮತ್ತು ಕೂಲಿ ನಾಲಿ ಮಾಡಿಕೊಂಡು ಜೀವಿಸುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಆದರೆ ಹೆಚ್ಚು ಅಭಿವೃದ್ಧಿಯನ್ನು ಕಾಣುವುದಕ್ಕೆ ಸರ್ಕಾರಿ ಉದ್ಯೋಗ ಇದ್ದರೆ ಹಲವು ಜನಗಳ ಸಂಪರ್ಕವಿದ್ದು, ಅದರಿಂದ ವಿವಿಧ ವಲಯಗಳ ಬಗ್ಗೆ ಜ್ಞಾನವನ್ನು ಹೊಂದಿ ಹೆಚ್ಚಿನ ಪ್ರಗತಿಯನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಈ ವಿಶ್ಲೇಷಣೆಯಿಂದ ತಿಳಿದುಬರುವುದೆನೆಂದರೆ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ಗ್ರಾಮಗಳು ಖಾಸಗೀ ವ್ಯವಹಾರವನ್ನು ಮಾಡುವಲ್ಲಿ ಮುಂದೆಯಿರುವುದನ್ನು ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಡತನದ ರೇಖೆಯ ಅಂಚಿನಲ್ಲಿರುವ ಬಹಳಷ್ಟು ಜನರು ಕಡಿಮೆ ಆದಾಯದ ಕೆಲಸಗಳಲ್ಲಿಯೇ ಒದ್ದಾಡುವುದು ಅವರ ಜೀವನ ಹೀನಾಯ ಸ್ಥಿತಿಯಲ್ಲಿದ್ದಾಗಿದೆ. ಹಾಗಾಗಿ ಮೀಸಲ ಕ್ಷೇತ್ರಗಳಾಗಿರುವ್ಯದರಿಂದ ಅವುಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ವಿಫಲಗೊಂಡಿರುವ್ಯದರಿಂದ ಅಭಿವೃದ್ಧಿಯನ್ನು ಕಾಣದಾಗಿದೆ. ಕೊನೆಯದಾಗಿ ಇಂತಹ ಒಂದು ವ್ಯವಸ್ಥೆಯನ್ನು ಗಮನಿಸಿ ಸರಿಯಾದ ರೀತಿಯಲ್ಲಿ ಸರ್ಕಾರದಿಂದ ಬರುವ ಗ್ರಾಮೀಣ ಯೋಜನೆಗಳನ್ನು ಅನುಷ್ಠಾನಗೊಳಿಸಿ ಅವರಿಗೂ ಗೌರವಾನ್ವಿತ ಉದ್ಯೋಗವನ್ನು ನೀಡುವ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೫.೧೫. ಸಮೀಕ್ಷೆಗೊಳಪಟ್ಟ ವರಮಾನದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮಾಸಿಕ ವರಮಾನ	೧೦೦೦-೫೦೦೦	೪೯	೪೯	೩೪	೩೪	೨೧	೨೧
	೬೦೦೦-೧೦೦೦೦	೩೨	೩೨	೪೨	೪೨	೪೩	೪೨
	೧೧೦೦೦-೨೦೦೦೦	೧೯	೧೯	೨೪	೨೪	೩೭	೩೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಮೇಲಿನ ಕೋಷ್ಟಕದಲ್ಲಿ ಮೂರು ತಾಲುಕಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವರಮಾನದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೪೯.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೩೨.೦೦ರಷ್ಟು ಕುಟುಂಬಗಳು ೬೦೦೦ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೧೯.೦೦ರಷ್ಟು ಕುಟುಂಬಗಳು ೧೧,೦೦೦ರಿಂದ ೨೦,೦೦೦ ವರಮಾನವನ್ನು ಹೊಂದಿರುತ್ತಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೩೪.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೪೨.೦೦ರಷ್ಟು ಕುಟುಂಬಗಳು ೬೦೦೦ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೨೪.೦೦ರಷ್ಟು ಕುಟುಂಬಗಳು ೧೧,೦೦೦ರಿಂದ ೨೦,೦೦೦ ವರಮಾನವನ್ನು ಹೊಂದಿರುತ್ತಾರೆ. ಕೊನೆಯದಾಗಿ, ಸಮಾನ್ಯ ಕ್ಷೇತ್ರವಾದ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೨೧.೦೦ರಷ್ಟು ಕುಟುಂಬಗಳು ೧೦೦೦ರಿಂದ ೫೦೦೦ ವರಮಾನ ಹೊಂದಿದವರಾಗಿದ್ದಾರೆ. ಅದೇ ಪ್ರಕಾರ ಶೇ. ೪೨.೦೦ರಷ್ಟು ಕುಟುಂಬಗಳು ೬೦೦೦ರಿಂದ ೧೦೦೦೦ ವರಮಾನ ಹೊಂದಿದವರಾಗಿದ್ದಾರೆ. ಕೆಲವು ಶೇ. ೩೬.೦೦ರಷ್ಟು ಕುಟುಂಬಗಳು ೧೧,೦೦೦ರಿಂದ ೨೦,೦೦೦ ವರಮಾನವನ್ನು ಹೊಂದಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ತೀರಾ ಹಿಂದುಳಿದ ತಾಲೂಕುಗಳಾದ ದೇವದುರ್ಗ ಮತ್ತು ಲಿಂಗಸೂರು ಗ್ರಾಮಗಳಿಗಿಂತ ಸಾಪೇಕ್ಷವಾಗಿ ಮುಂದುವರಿದಿರುವ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಮಾಸಿಕ ಆದಾಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವುನ್ನು ತಿಳಿಯಲಾಗಿದೆ. ಆದರೆ ದೇವದುರ್ಗ ಮತ್ತು ಲಿಂಗಸೂರಿನ ಗ್ರಾಮಗಳಲ್ಲಿ ಆ ಪ್ರಮಾಣ ಕೆಳಮಟ್ಟದಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವರಮಾನದ ಏರಿಕೆಯಿಲ್ಲದೆ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಇದು ಮೂರು ತಾಲೂಕಿನ ಗ್ರಾಮಗಳಿಗೆ ಅತ್ಯಂತ ಸೂಕ್ಷ್ಮವಾಗಿ ಅನ್ವಯವಾಗುತ್ತದೆ. ಹೆಚ್ಚು ವರಮಾನ ಹೊಂದುವುದರೊಂದಿಗೆ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ. ಆದರೆ ಹೆಚ್ಚಿನ ವರಮಾನವಿಲ್ಲದೆ ಅಭಿವೃದ್ಧಿಯು ಸಾಧ್ಯವಿಲ್ಲ. ವರಮಾನವು ಅಭಿವೃದ್ಧಿಯ ಸಾಧನ. ಅದು ಅಭಿವೃದ್ಧಿಗೆ ಅಗತ್ಯ. ಹಾಗಾಗಿ, ಮೀಸಲು ಕ್ಷೇತ್ರಗಳಲ್ಲಿ ವಾರದಲ್ಲಿ ಒಂದು ದಿನ ಕೆಲಸವಿದ್ದರೆ ಮತ್ತೊಂದು ದಿನ ಕೆಲಸವಿಲ್ಲದೇ ಮನೆಯಲ್ಲಿ ಇರಬೇಕಾದ ಸಂದರ್ಭ ಹೆಚ್ಚಾಗಿಯಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಹಾಗಾಗಿ ಇದಕ್ಕೆ ಸರಿಯಾಗಿ ಸ್ಥಳಿಯವಾಗಿ ಉದ್ಯೋಗವನ್ನು ಸೃಷ್ಟಿಸುವ ಮೂಲಕ ಅಭಿವೃದ್ಧಿ ಕಾಣುವ ಅಗತ್ಯವಿದೆ ಎಂದು ಹೇಳಬಹುದಾಗಿದೆ. ಇದರಿಂದ ಈ ಮೂರು ತಾಲೂಕುಗಳಲ್ಲಿ ಅರೆ ಉದ್ಯೋಗ ವಾತಾವರಣ ಅಗಾಗ ಸೃಷ್ಟಿಯಾಗುತ್ತದೆ. ಅದರಿಂದ ಮೂರು ತಾಲೂಕಗಳಲ್ಲಿ ವವಸೆ ಪ್ರಮಾಣವನ್ನು ತಪ್ಪಿಸಬಹುದಾಗಿದೆ.

ಕೋಷ್ಟಕ ೫.೧೬. ಸಮೀಕ್ಷೆಗೊಳಪಟ್ಟ ಸಮಾನತೆ ಮತ್ತು ಅಸಮಾನತೆ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ನಿಮ್ಮನ್ನು/ ನಿಮ್ಮ ಕುಟುಂಬದವರನ್ನು ಮನೆಯಿಂದ/ ವಾಸಸ್ಥಳದಿಂದ ಹೊರಗಿಡಲಾದ ಸಂದರ್ಭ/ಸ್ಥಳಗಳು	ಎಲ್ಲಾ ಸಂದರ್ಭ	೮೭	೮೭	೬೯	೬೯	೫೭	೫೭
	ಅಪರೂಪದ ಸಂದರ್ಭ	೧೩	೧೩	೩೧	೩೧	೪೩	೪೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಕೆಳಗಿನಂತೆ ತಾಲೂಕುವಾರು ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ಹೊರಗಿಡುವ ಸಂದರ್ಭವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಶೇ. ೮೭.೦೦ ರಷ್ಟು ಕುಟುಂಬಗಳು ನಮ್ಮನ್ನು ಇಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೧೩.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಕೆಲವು ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೬೯.೦೦ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೩೧.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಕೆಲವು ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಉಳಿದ, ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೫೭.೦೦ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೪೩.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಕೆಲವು ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂಬ ಅಭಿಪ್ರಾಯಗಳನ್ನು ಹೇಳಿಕೊಂಡಿದ್ದಾರೆ. ಅಂದರೆ ಮೀಸಲು ಕ್ಷೇತ್ರಗಳಲ್ಲಿ ಸಹ ಅಸ್ಪೃಶ್ಯತೆಯನ್ನು ಇನ್ನು ಜೀವಂತಿಕೆಯನ್ನು ಉಳಿಸಿಕೋಂಡಿರುವದನ್ನು ಕಾಣಬಹುದು.

ಒಟ್ಟಾರೆಯಾಗಿ ಮೂರು ತಾಲೂಕಿನ ವಿವರವನ್ನು ಗಮನಿಸಿದಾಗ ಮೂರು ತಾಲೂಕುಗಳಲ್ಲಿಯೂ ಸಹ ಸರಿಸುಮಾರು ಪರಿಶಿಷ್ಟ ಕುಟುಂಬದವರನ್ನು ಮನೆಯಿಂದ ಹೊರಗಿಡಲಾಗಿದೆ ಎಂದು ಹೇಳಲಾಗಿದೆ. ಆದರೂ ಸಹ ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಪರಿಶಿಷ್ಟರು ಎನ್ನುವ ಕಾರಣದಿಂದ ದೂರಯಿಡಲಾಗಿದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ

ಸಂಗತಿಯೆಂದರೆ, ಇಂದಿಗೂ ಸಹ ದಲಿತರನ್ನು ಮನೆ ಮಠಗಳಿಂದ ದೂರವಿಡುವಂತಹ ರೂಢಿಯನ್ನು ಹಳ್ಳಿಗಳಲ್ಲಿ ಕಾಣುತ್ತಿದ್ದೇವೆ. ಇದು ಸಾಮಾನ್ಯ ಕ್ಷೇತ್ರಕ್ಕಿಂತ ಮೀಸಲು ಕ್ಷೇತ್ರದಲ್ಲಿಯೇ ಹೆಚ್ಚು ಇರುವುದನ್ನು ನೋಡಲಾಗಿದೆ. ಅಂದರೆ, ಈ ಭಾಗದಲ್ಲಿ ಪರಿಶಿಷ್ಟರ ಜೀವನವು ಆರ್ಥಿಕವಾಗಿ ಹಿಂದುಳಿದಿದ್ದು ಅವರು ಕೂಲಿ ನಾಲಿ ಮಾಡಿಕೊಂಡು ಜೀವನವನ್ನು ಸಾಗಿಸಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಯಲಾಗಿದೆ. ಹಾಗಾಗಿ ಇವರನ್ನ ಆರ್ಥಿಕವಾಗಿ ಸದೃಢತೆಗೊಳಿಸುವ ಮೂಲಕ ಆ ಸಮುದಾಯವನ್ನು ಅಭಿವೃದ್ಧಿಗೊಳಿಸಬೇಕಾದ ಅಗತ್ಯತೆಯಿದೆ ಎಂದು ಮೇಲಿನ ಸಂಗತಿಗಳಿಂದ ತಿಳಿದುಕೊಳಬಹುದಾಗಿದೆ.

ಕೋಷ್ಟಕ ೫.೧೭. ಸಮೀಕ್ಷೆಗೊಳಪಟ್ಟ ಅಸ್ಪೃಶ್ಯತೆಗೆ ಸಂಬಂಧಿಸಿದ ಮಾಹಿತಿ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ನಿಮ್ಮನ್ನು/ ನಿಮ್ಮ ಕುಟುಂಬದವರನ್ನು ಹೋಟೆಲ್‌ಗಳಿಂದ ಹೊರಗಿಡಲಾದ ಸಂದರ್ಭ/ಹಂತಗಳು	ಎಲ್ಲಾ ಸಂದರ್ಭ	೬೪	೬೪	೫೭	೫೭	೪೩	೪೩
	ಅಪರೂಪದ ಸಂದರ್ಭ	೩೬	೩೬	೪೩	೪೩	೫೭	೫೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಕೆಳಗಿನಂತೆ ತಾಲೂಕುವಾರು ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ಹೋಟೆಲ್, ದೇವಸ್ಥಾನಗಳಿಂದ, ಉದ್ಯೋಗಗಳಿಂದ ಮತ್ತು ಹಬ್ಬ ಹರಿದಿನಗಳಿಂದ ದೂರಯಿಡುವ ಸಂದರ್ಭವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಶೇ. ೬೪.೦೦ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೩೬.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಅಪರೂಪದ ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೫೭.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೪೩.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಅಪರೂಪದ ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಉಳಿದ, ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೪೩.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಮತ್ತು ಶೇ. ೫೭.೦೦ರಷ್ಟು ಕುಟುಂಬಗಳು ತಮ್ಮನ್ನು ಸಹ ಅಪರೂಪದ ಸಂದರ್ಭಗಳಲ್ಲಿ ಹೊರಗಿಡಲಾಗಿದೆ ಎಂಬ ಅಭಿಪ್ರಾಯಗಳನ್ನು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ವಿವರವನ್ನು ಗಮನಿಸಿದಾಗ ಮೂರು ತಾಲೂಕುಗಳಲ್ಲಿಯೂ ಸಹ ಸರಿಸುಮಾರು ಪರಿಶಿಷ್ಟ ಕುಟುಂಬದವರನ್ನು ಹೋಟೆಲ್‌ಗಳಿಂದ ಹೊರಗಿಡಲಾಗಿದೆ ಎಂದು ಹೇಳಲಾಗಿದೆ. ಆದರೂ ಸಹ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರು ಎನ್ನುವ ಕಾರಣದಿಂದ ಹೋಟೆಲ್, ದೇವಸ್ಥಾನಗಳಿಂದ, ಉದ್ಯೋಗಗಳಿಂದ ಮತ್ತು ಹಬ್ಬ ಹರಿದಿನಗಳಿಂದ ದೂರಯಿಡಲಾಗಿದೆ ಎಂಬ ಅಂಶವು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಶತ-ಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ದಲಿತರನ್ನು ಇಂದಿಗೂ ಸಹ ಹೋಟೆಲ್‌ಗಳಿಂದ ಇನ್ನೂ ಹಲವು ಸಂಸ್ಥೆಗಳಲ್ಲಿ ದೂರವಿಡುವಂತಹ ರೂಢಿಯನ್ನು ಹಳ್ಳಿಗಳಲ್ಲಿ ಕಾಣುತ್ತಿದ್ದೇವೆ. ಇಂತಹ ಒಂದು ಸ್ಥಿತಿಯೂ ಮೂರು ತಾಲೂಕಿನಲ್ಲಿಯೂ ಸರಿಸುಮಾರು ಒಂದೇ ಆಗಿದ್ದು, ಆದರೆ ಇದರ ಪ್ರಮಾಣ ಲಿಂಗಸೂರಿನಲ್ಲಿ ಹೆಚ್ಚಿನಲ್ಲಿರುವುದನ್ನು ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಇಂತಹ ಒಂದು ವಾತಾವರಣದಿಂದ ದಲಿತ ಸಮುದಾಯವು ಮರ್ಯಾದೆಯಿಂದ ಬದುಕನಲ್ಲಿ ವಿಫಲವಾಗಿರುವುದನ್ನು ನಾವು ನೋಡಲಾಗಿದೆ. ಇಂತಹ ಒಂದು ವಾತಾವರಣದಿಂದ ಅವರು ಯಾವ ಸೌಲಭ್ಯಗಳನ್ನು ಪಡೆಯದೆ ತಮ್ಮ ಜೀವನವನ್ನು ನಿಕೃಷ್ಟವಾಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದರೆ ಇವರ ಜೀವನವನ್ನು ಸುಧಾರಿಸಲು ಅನೇಕ ದಶಕಗಳೆ ಬೇಕಾಗುವಂತಹ ವಾತಾವರಣ ನಿರ್ಮಾಣಗೊಂಡಿದೆ. ಅಂದಹಾಗೆ ಇವರನ್ನು ಸರ್ಕಾರವು ವಿಶ್ವಾಸನೀಯವಾಗಿ ಸಂಬಂಧಿಸುವಂತಹ ಅಗತ್ಯತೆ ಇದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೫.೧೮. ಸಮೀಕ್ಷೆಗೊಳಪಟ್ಟ ಸಾಮಾಜಿಕ ಸಮಾನತೆ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ನಿಮ್ಮನ್ನು/ ನಿಮ್ಮ ಕುಟುಂಬದವರನ್ನು ಪೌರ ಸೇವೆಗಳಲ್ಲಿ ಮತ್ತು ಮಾತು ಚರ್ಚೆಗಳಿಂದ ಹೊರಗಿಡಲಾದ ಸಂದರ್ಭ/ಹಂತಗಳು	ಬಹುತೇಕ ಸಂದರ್ಭ	೬೮	೬೮	೫೪	೫೪	೭೨	೭೨
	ಅಪರೂಪದ ಸಂದರ್ಭ	೧೨	೧೨	೩೧	೩೧	೯	೯
	ಅವಕಾಶವೇ ಇಲ್ಲಾ	೧೮	೧೮	೧೫	೧೫	೧೫	೧೫
	ಮುಕ್ತ ಅವಕಾಶ	೨	೨	–	–	೪	೧೪
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಕೆಳಗಿನಂತೆ ತಾಲೂಕುವಾರು ಪರಿಶಿಷ್ಟರು ತಮ್ಮ ಮೀಸಲಾತಿ ಕ್ಷೇತ್ರದಿಂದ ಆಯ್ಕೆಯಾಗಿ ಪೌರ ಸೇವೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮಾತು-ಚರ್ಚೆಗಲ್ಲಿ ಹೊರಗಿಡಲಾದ ಸಂದರ್ಭವನ್ನು ಕುರಿತು ತೋರಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಶೇ. ೬೮.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೧೨ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೧೮ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಕೊನೆಯದಾಗಿ, ಶೇ. ೨ರಷ್ಟು ಮಾತ್ರ ಮುಕ್ತ ಅವಕಾಶವನ್ನು ಮಾಡಿಕೊಟ್ಟಿಲ್ಲ ಎಂದು ತಿಳಿದು ಬಂದಿದೆ. ಲಿಂಗಸೂರು ತಾಲೂಕಿನಲ್ಲಿ ಶೇ. ೫೪.೦೦ ರಷ್ಟು ಕುಟುಂಬಗಳು ನಮ್ಮನ್ನು ಬಹುತೇಕ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೩೧ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೧೫ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಸಿಂಧನೂರು ತಾಲೂಕಿನಲ್ಲಿ ಶೇ. ೭೨.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೦೯ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೧೫ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಕೊನೆಯದಾಗಿ, ಶೇ. ೧೪ರಷ್ಟು ಮಾತ್ರ ಮುಕ್ತ ಅವಕಾಶವನ್ನು ಮಾಡಿಕೊಟ್ಟಿಲ್ಲ ಎಂದು ತಿಳಿದು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಗಮನಿಸಿದಾಗ, ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಸಾಮಾನ್ಯ ಕ್ಷೇತ್ರವಾದ ಸಿಂಧನೂರು ತಾಲೂಕಿನಲ್ಲಿ ಮೀಸಲಾತಿಯನ್ನು ಕಾಣದೆ ಪರಿಶಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದೆಯಿರುವುದರಿಂದ ಅವರನ್ನು ಪೌರ ಸೇವೆಗಳಲ್ಲಿ ಮತ್ತು ಅದರಲ್ಲಿ ನಡೆಯುವ ಮಾತು ಚರ್ಚೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಹೊರಗಿಡಲಾಗಿದೆ ಎಂದು ತಿಳಿದು ಬಂದಿದೆ. ಅಂದರೆ ಇಲ್ಲಿಯೂ ಸಹ ಜಾತಿಯ ವಿಷ ಬೀಜವು ತೇಲಾಡುತ್ತಿದೆ ಎಂದು ಮನಗಣಲಾಗಿದೆ. ಹಾಗಾಗಿ ಕೀಳು ಜಾತಿ ಎನ್ನುವ ಕಾರಣಕ್ಕಾಗಿ ಅವರನ್ನ ಸಮಾಜದ ಮುಖ್ಯವಾಹಿನಿಗೆ ತರದೆ ಇಂದಂತಹ ಸಂದರ್ಭದಲ್ಲಿ ಅವರನ್ನ ಅಭಿವೃದ್ಧಿಗೊಳಿಸುವುದು ಯಾವಾಗ ಎನ್ನುವ ಪ್ರಶ್ನೆ ಎದರಾಗುತ್ತದೆ. ಹಾಗಾಗಿ ಮಾನವನು ಸಂಘ ಜೀವಿಯಾಗಿದ್ದು ಸಮಾಜದಲ್ಲಿ ವಾಸಿಸುವ ಎಲ್ಲಾರನ್ನು ಸಮಾನರು ಎಂದು ನೋಡಿಕೊಳ್ಳುವ ಅಗತ್ಯವಿರುವುದು ತಿಳಿದು ಬಂದಿದೆ.

ಕೋಷ್ಟಕ ೫.೧೯. ಸಮೀಕ್ಷೆಗೊಳಪಟ್ಟ ಪರಿಶಿಷ್ಟರ ಮೇಲಿನ ದೌರ್ಜನ್ಯದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಪರಿಶಿಷ್ಟರು ಎನ್ನುವ ಕಾರಣಕ್ಕಾಗಿ ನಿಮ್ಮನ್ನು/ ನಿಮ್ಮ ಕುಟುಂಬದವರ ಮೇಲೆ ದೌರ್ಜನ್ಯ ಮಾಡಿ ಬಹಿಷ್ಕಾರ ಹಾಕಿರುವುದರ ಸಂದರ್ಭ/ಹಂತಗಳು	ಎಲ್ಲಾ ಸಂದರ್ಭ	೨೪	೨೪	೧೮	೧೮	೧೨	೧೨
	ಅಪರೂಪದ ಸಂದರ್ಭ	೬೮	೬೮	೭೨	೭೨	೪೨	೪೨
	ಅವಕಾಶವೇ ಇಲ್ಲಾ	೮	೮	೧೦	೧೦	೪೬	೪೬
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಕೆಳಗಿನಂತೆ ತಾಲೂಕುವಾರು ಪರಿಶಿಷ್ಟರ ಮೇಲೆ ದೌರ್ಜನ್ಯ ಮಾಡಿರುವುದರ ಕುರಿತು ತೋರಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಶೇ. ೨೪.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೬೮ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೦೮ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಲಿಂಗಸೂರು ತಾಲೂಕಿನಲ್ಲಿ ಶೇ. ೧೮.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೭೨ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೧೦ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಸಿಂಧನೂರು ತಾಲೂಕಿನಲ್ಲಿ ಶೇ. ೧೨.೦೦ ರಷ್ಟು ಕುಟುಂಬಗಳು ನಮ್ಮನ್ನು ಎಲ್ಲಾ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೪೨ರಷ್ಟು ಕುಟುಂಬಗಳು ಅಪರೂಪದ ಸಂದರ್ಭದಲ್ಲಿ ಹೊರಗಿಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೪೬ರಷ್ಟು ಕುಟುಂಬಗಳು ಇಂತಹ ಪರಿಸರದಲ್ಲಿ ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ.

ಒಟ್ಟಾರೆಯಾಗಿ, ಮೇಲಿನ ಅಂಶಗಳನ್ನು ಪರಿಗಣಿಸಿದಾಗ ಸಿಂದನೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಪರಿಶಿಷ್ಟರ ಮೇಲೆ ದೌರ್ಜನ್ಯವನ್ನು ಮಾಡಿ ಅವರನ್ನು ಬಹಿಷ್ಕರಿಸಿರುವುದನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ

ಸಂಗತಿಯೆಂದರೆ, ಪ್ರಸ್ತುತ ದಿನಮಾನದಲ್ಲಿ ಪರಿಶಿಷ್ಟರು ನಿತ್ಯ ಜೀವನವನ್ನು ಧೈರ್ಯದಿಂದ ಸಾಗಿಸುವಲ್ಲಿ ವಿಫಲಗೊಂಡಿರುವುದನ್ನು ಬಹುತೇಕ ಸಂದರ್ಭದಲ್ಲಿ ಕಾಣಲಾಗಿದೆ. ಅಂದರೆ, ಗ್ರಾಮೀಣ ಪ್ರದೇಶದಲ್ಲಿ ದಲಿತರು ಸಾರ್ವಜನಿಕ ಸ್ಥಳಗಳಲ್ಲಿ, ದೇವಸ್ಥಾನ ಮತ್ತು ಮೇಲ್ವಾರ್ಗದವರ ಮನೆಯೊಳಗೆ ಹೋದರೆ ಅವರ ವಿರುದ್ಧ ದೌರ್ಜನ್ಯ ಮಾಡುವುದರ ಮೂಲಕ ದೌರ್ಜನ್ಯವೆಸಗಲಾಗುತ್ತದೆ. ಸಮಾಜದ ಪ್ರತಿಯೊಬ್ಬ ಮನುಷ್ಯನು ಒಂದೇ ಎಂದು ಭಾವಿಸಿ ಅವರನ್ನು ಸಹ ಸಾರ್ವಜನಿಕ ಸ್ಥಳಗಳಿಗೆ ಕರೆ ತಂದು ಅವರಿಗೆ ಮರ್ಯಾದೆ ಜೀವನವನ್ನು ಕಲ್ಪಿಸಿಕೊಡಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ. ಈ ವಿಚಾರದಲ್ಲಿ ಸರಕಾರದ ಪಾತ್ರಕ್ಕಿಂತ ಸಮಾಜ ಮತ್ತು ಸಮುದಾಯಗಳ ಪಾತ್ರ ಮುಖ್ಯವಾದದ್ದು.

ಕೋಷ್ಟಕ ೫.೨೦ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ರಾಜಕೀಯ ಸಬಲೀಕರಣದ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಗ್ರಾ.ಪಂ., ತಾ.ಪಂ., ಮತ್ತು ಜಿ.ಪಂ.ಗಳಲ್ಲಿ ಹಿಂದೆ ಅಥವಾ ಹಾಲಿ ಸದಸ್ಯ, ಅದ್ಯಕ್ಷ, ಉಪಾಧ್ಯಕ್ಷರಾಗಿದ್ದಾರೆ ಯಾರು?	ಹಿಂದೆ	೧೨	೧೨	೨೧	೨೧	೩೭	೩೭
	ಹಾಲಿ	೧೫	೧೫	೧೬	೧೬	೯	೯
	ಇಲ್ಲಾ	೭೩	೭೩	೬೩	೬೩	೫೪	೫೪
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ರಾಜಕೀಯ ಸಬಲೀಕರಣದ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೨.೦೦ರಷ್ಟು ಜನರು ನಾವು ಪಂಚಾಯಿತಿ ವ್ಯವಸ್ಥೆಯಲ್ಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೧೫.೦೦ ರಷ್ಟು ಕುಟುಂಬಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಪಂಚಾಯಿತಿಗಳಲ್ಲಿ ಹಾಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ

ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೭೩.೦೦ರಷ್ಟು ಕುಟುಂಬಗಳು ನಾವು ಯಾವ ಪಂಚಾಯಿತಿ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೨೧.೦೦ ರಷ್ಟು ಜನರು ನಾವು ಪಂಚಾಯಿತಿ ವ್ಯವಸ್ಥೆಯಲ್ಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೧೬.೦೦ ರಷ್ಟು ಕುಟುಂಬಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಪಂಚಾಯಿತಿಗಳಲ್ಲಿ ಹಾಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೬೩.೦೦ರಷ್ಟು ಕುಟುಂಬಗಳು ನಾವು ಯಾವ ಪಂಚಾಯಿತಿ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೩೭.೦೦ ರಷ್ಟು ಜನರು ನಾವು ಪಂಚಾಯಿತಿ ವ್ಯವಸ್ಥೆಯಲ್ಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೦೯.೦೦ ರಷ್ಟು ಕುಟುಂಬಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಪಂಚಾಯಿತಿಗಳಲ್ಲಿ ಹಾಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಮೀಸಲಾತಿಯ ಆಧಾರದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೫೪.೦೦ರಷ್ಟು ಕುಟುಂಬಗಳು ನಾವು ಯಾವ ಪಂಚಾಯಿತಿ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ-ಅಂಶಗಳನ್ನ ಆಧಾರಿಸಿದಾಗ ಮೂರು ತಾಲೂಕಗಳನ್ನು ನೋಡಿದಾಗ ಸರಿಸುಮಾರು ಆಯಾಯ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಜನಸಂಖ್ಯೆಗೆ ಆಧಾರವಾಗಿ ಪರಿಶಿಷ್ಟರಿಗೆ ಮೀಸಲಾತಿಯನ್ನ ಕಲ್ಪಿಸಲಾಗಿರುತ್ತದೆ.ಅಂದರೆ, ಸ್ಥಳೀಯ ಸಂಸ್ಥೆಗಳಲ್ಲಿ ಅವರಿಗೆ ಏನೂ ಸ್ಥಾನ ಸಿಕ್ಕಿದೆ ಆದರೆ ಅವರು ಸಂಸ್ಥೆಗಳಲ್ಲಿ ಆಡಳಿತವನ್ನು ಸಮರ್ಥವಾಗಿ ನಿಭಾಯಿಸದೆ ಇದ್ದದರಿಂದ ರಾಜಕೀಯವಾಗಿ ಸಬಲೀಕರಣವನ್ನ ಕಾಣದಂತೆ ಆಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟರು ಕೇವಲ ತಮಗೆ ಇರುವ ಸ್ಥಾನವನ್ನ ಅಲಂಕರಿಸಿ ಕೂಡುವದು ಆಗಿದೆ. ಅದರಿಂದ ತಮ್ಮ ದುಃಸ್ಥಿತಿಯಲ್ಲಿರುವ ಸಮುದಾಯವನ್ನ ಅಭಿವೃದ್ಧಿಯ ಕಡೆಗೆ ಕರೆತರುವಂತಹ ಕೆಲಸ ನಡೆಯದೆಯಿರುವುದನ್ನ ಕಾಣಲಾಗಿದೆ. ಕೊನೆಯದಾಗಿ, ಅಭಿವೃದ್ದಿಯನ್ನ ಸಾಧಿಸಲು ಪ್ರಮುಖ ಮಾನದಂಡಗಳಲ್ಲಿ ರಾಜಕೀಯ ಭಾಗವಹಿಸುವಿಕೆಯು ಒಂದು ಹಾಗಾಗಿ ಅದನ್ನ ಪರಿಶಿಷ್ಟರಾದವರು ರಾಜಕೀಯದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಅರಿವನ್ನ ಮತ್ತು ಭಾಗವಹಿಸುವ ಅವಶ್ಯಕತೆಯಿದೆ ಎಂದು ಮನಗಣಲಾಗಿದೆ.

ಕೋಷ್ಟಕ ೫.೨೧. ಸಹಕಾರಿ ಕ್ಷೇತ್ರದಲ್ಲಿ ಪ್ರಾತಿನಿಧ್ಯ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ರೈತ ಸಂಘ, ಸಹಕಾರಿ ಸಂಘದಲ್ಲಿ ಹಿಂದೆ ಅಥವಾ ಹಾಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿದ್ದಾರೆ ಯಾರು?	ಹಿಂದೆ	೧೩	೧೩	೯	೯	೧೬	೧೬
	ಹಾಲಿ	–	–	–	–	೩	೩
	ಇಲ್ಲಾ	೮೭	೮೭	೯೧	೯೧	೮೧	೮೧
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ಸಂಸ್ಥೆಗಳಲ್ಲಿ ಜನರ ಪ್ರತಿನಿಧಿಕರಣದ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೧೩.೦೦ ರಷ್ಟು ಕುಟುಂಬಗಳು ನಾವು ರೈತ ಸಂಘ ಮತ್ತು ಸಹಕಾರಿ ಸಂಘಗಳಲ್ಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೮೭.೦೦ ರಷ್ಟು ಕುಟುಂಬಗಳು ನಾವು ಯಾವ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೦೯.೦೦ರಷ್ಟು ಕುಟುಂಬಗಳು ನಾವು ರೈತ ಸಂಘ ಮತ್ತು ಸಹಕಾರಿ ಸಂಘಗಳಲ್ಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೯೧.೦೦ ರಷ್ಟು ಕುಟುಂಬಗಳು ನಾವು ಯಾವ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೧೬.೦೦ ರಷ್ಟು ಕುಟುಂಬಗಳು ನಾವು ರೈತ ಸಂಘ ಮತ್ತು ಸಹಕಾರಿ ಸಂಘಗಳಲ್ಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೦೩.೦೦ ರಷ್ಟು ಕುಟುಂಬಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ವಿವಿಧ ಸಂಸ್ಥೆಗಳಲ್ಲಿ ಹಾಲಿ ಸದಸ್ಯರು ಅಲ್ಲದೇ ಒಟ್ಟು ಸದಸ್ಯರಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಾಲಿ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೮೧.೦೦ ರಷ್ಟು ಕುಟುಂಬಗಳು ನಾವು ಯಾವ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನ ಸಲ್ಲಿಸಿರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶಗಳನ್ನ ನೋಡಿದಾಗ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹಿಂದೆ ಮತ್ತು ಹಾಲಿ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎರಡು ಸಂಸ್ಥೆಗಳಲ್ಲಿ ಭಾಗವಹಿಸಿ ಸೇವೆ ಸಲ್ಲಿಸಿರುವುದನ್ನ ಮನಗಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸಿಂಧನೂರು ತಾಲೂಕಿನಲ್ಲಿರುವ ಪರಿಶಿಷ್ಟರು ಸಮಾಜದ ಸಂಪರ್ಕದಲ್ಲಿದ್ದು ಅವರ ಸೇವೆ ವಿವಿಧ ಸಂಸ್ಥೆಗಳಲ್ಲಿರುವುದನ್ನ ಕಂಡುಕೊಳ್ಳಲಾಗಿದೆ. ಕೊನೆಯದಾಗಿ, ಯಾರು ಸಮಾಜದ ಜೊತೆ ಸಂಪರ್ಕವನ್ನ ಹೆಚ್ಚಾಗಿ ಇಟ್ಟುಕೊಂಡಿರುತ್ತಾರೆಯೋ ಆ ಭಾಗ ಅಭಿವೃದ್ಧಿಯನ್ನ ಕಾಣಬಹುದಾಗಿದೆ. ಆದರೆ ಇದರಲ್ಲಿ ದೇವದುರ್ಗ ಮತ್ತು ಲಿಂಗಸೂರಿನ ಪರಿಶಿಷ್ಟರು ಕನಿಷ್ಟ ಮಟ್ಟದಲ್ಲಿ ಇಲ್ಲದೆಯಿರುವುದನ್ನ ಅಧ್ಯಯನಗಳ ಮೂಲಕ ನೋಡಲಾಗಿದೆ.

ಕೋಷ್ಟಕ ೫.೨೨. ಸ್ವ-ಸಹಾಯ ಸಂಘದಲ್ಲಿ ಪ್ರಾತಿನಿಧ್ಯ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಸ್ವಸಹಾಯ ಗುಂಪು/ ಸ್ತ್ರೀಶಕ್ತಿ ಗುಂಪುಗಳಲ್ಲಿ ಹಿಂದೆ ಅಥವಾ ಹಾಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿದ್ದಾರೆ ಯಾರು?	ಹಿಂದೆ	೨೧	೫೩.೮	೩೨	೬೫.೩	೪೧	೬೪.೧
	ಹಾಲಿ	೧೮	೪೬.೨	೧೭	೩೪.೭	೨೩	೩೫.೯
	ಒಟ್ಟು	೩೯	೧೦೦	೪೯	೧೦೦	೬೪	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಸ್ತ್ರೀಯರು ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಕರಣದ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೧.೦೦ರಷ್ಟು ಜನರು ಸ್ವ-ಸಹಾಯ ಮತ್ತು ಸ್ತ್ರೀ ಶಕ್ತಿ ಗುಂಪುಗಳಲ್ಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೧೮.೦೦ರಷ್ಟು ಕುಟುಂಬಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಸ್ವ-ಸಹಾಯ ಮತ್ತು ಸ್ತ್ರೀ ಶಕ್ತಿ ಗುಂಪುಗಳಲ್ಲಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಹಾಲಿ ಸೇವೆ ಸಲ್ಲಿಸುತ್ತಿದ್ದೇವೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ-ಅಂಶಗಳನ್ನ ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮೀಣ

ಪ್ರದೇಶಗಳಲ್ಲಿ ಸರಿಸುಮಾರಾಗಿ ಪರಿಶಿಷ್ಟ ಮಹಿಳೆಯರು ಸ್ವ-ಸಹಾಯ ಮತ್ತು ಸ್ತ್ರೀ-ಶಕ್ತಿ ಗುಂಪುಗಳ ಸದಸ್ಯರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಸೇವೆಯನ್ನ ಸಲ್ಲಿಸಿರುವದನ್ನ ಕಾಣಲಾಗಿದೆ. ಪರಿಶಿಷ್ಟ ಮಹಿಳೆಯರು ತಮ್ಮ ನಿತ್ಯ ಜೀವನದ ಜೊತೆಗೆ ಅವರು ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯರಾಗಿ ತಮ್ಮ ಸೇವೆಯನ್ನ ನಿರ್ವಹಿಸುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟ ಮಹಿಳೆಯರು ತಮ್ಮ ಬದುಕಿನಲ್ಲಿ ಬರುವ ಹಲವಾರು ಸಂಗತಿಗಳಿಗೆ ಆರ್ಥಿಕ ಅಂಶವು ಮುಖ್ಯವಾಗಿರುವುದರಿಂದ ಅಂತಹ ಒಂದು ಅಂಶವನ್ನ ಪಡೆಯಲು ಕೇವಲ ತಾವು ಕೂಲಿ-ನಾಲಿ ಮಾಡಿ ದುಡಿದು ನಿಭಾಯಿಸಲಿಕ್ಕೆ ಆಗದೆ ಅವರು ಇಂತಹ ಗುಂಪುಗಳಲ್ಲಿ ಸದಸ್ಯತ್ವವನ್ನ ಪಡೆಯುತ್ತಾ ಅದರ ಮೂಲಕ ಸಾಲವನ್ನ ಕಡಿಮೆ ಬಡ್ಡಿ ದರದಲ್ಲಿ ಪಡೆಯುತ್ತಾ ತಮ್ಮ ಜೀವನ ಅನಿವಾರ್ಯ ಸಂಗತಿಗಳನ್ನ ಈಡೆರಿಸುತ್ತಾ ಹೋಗುವುನ್ನ ಮನಗಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟರ ಜೀವನವನ್ನ ತೂಗಿಸಿಕೊಳ್ಳಲಿಕ್ಕೆ ಆಗದೆ ಇದ್ದಿದ್ದರಿಂದ ತಮ್ಮ ಜೀವನ ದುಃಸ್ಥಿತಿಯಲ್ಲಿರುವುದರಿಂದ ಹಲವಾರು ಕಷ್ಟ-ನಷ್ಟಗಳನ್ನ ಅನುಭವಿಸುತ್ತಾ ಇರುವುದನ್ನ ಅಧ್ಯಯನದ ಸಂದರ್ಭದಲ್ಲಿ ತಿಳಿಯಲಾಗಿದೆ.

ಕೋಷ್ಟಕ ೫.೨೩. ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದ ಮಾಹಿತಿ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಕುಟುಂಬದ ಸದಸ್ಯರು ಸಾಮಾನ್ಯವಾಗಿ ಯಾವ ಪಕ್ಷವನ್ನು ಬೆಂಬಲಿಸುತ್ತಾರೆ?	ಕಾಂಗ್ರೇಸ್	೪೧	೪೧	೨೯	೨೯	೩೭	೩೭
	ಬಿಜೆಪಿ	೩೪	೩೪	೪೩	೪೩	೪೧	೪೧
	ಜೆಡಿಎಸ್	೧೭	೧೭	೧೨	೧೨	೧೦	೧೦
	ಪಕ್ಷೇತರ	೮	೮	೧೬	೧೬	೧೨	೧೨
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಕುಟುಂಬದವರು ಪಕ್ಷಗಳ ಬೆಂಲಿಸುವ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೪೧.೦೦ ರಷ್ಟು ಕುಟುಂಬದವರು ಕಾಂಗ್ರೇಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೩೪.೦೦

ರಷ್ಟು ಕುಟುಂಬಗಳು ಬಿ.ಜೆ.ಪಿ. ಪಕ್ಷವನ್ನ ಬೆಂಬಲಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೧೭.೦೦ರಷ್ಟು ಕುಟುಂಬಗಳು ಜೆಡಿಎಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಕೊನೆಯದಾಗಿ, ಶೇ. ೦೮.೦೦ರಷ್ಟು ಕುಟುಂಬಗಳು ಪಕ್ಷೇತರವನ್ನ ಪ್ರೋತ್ಸಾಹಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೨೯.೦೦ ರಷ್ಟು ಕುಟುಂಬದವರು ಕಾಂಗ್ರೇಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೪೩.೦೦ ರಷ್ಟು ಕುಟುಂಬಗಳು ಬಿ.ಜೆ.ಪಿ. ಪಕ್ಷವನ್ನ ಬೆಂಬಲಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೧೨.೦೦ರಷ್ಟು ಕುಟುಂಬಗಳು ಜೆಡಿಎಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಕೊನೆಯದಾಗಿ, ಶೇ. ೧೬.೦೦ ರಷ್ಟು ಕುಟುಂಬಗಳು ಪಕ್ಷೇತರವನ್ನ ಪ್ರೋತ್ಸಾಹಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೩೭.೦೦ ರಷ್ಟು ಕುಟುಂಬದವರು ಕಾಂಗ್ರೇಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಶೇ. ೪೧.೦೦ ರಷ್ಟು ಕುಟುಂಬಗಳು ಬಿ.ಜೆ.ಪಿ. ಪಕ್ಷವನ್ನ ಬೆಂಬಲಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಅದಲ್ಲದೇ, ಶೇ. ೧೦.೦೦ ರಷ್ಟು ಕುಟುಂಬಗಳು ಜೆಡಿಎಸ್ ಪಕ್ಷವನ್ನ ಬೆಂಬಲಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ. ಕೊನೆಯದಾಗಿ, ಶೇ. ೧೨.೦೦ ರಷ್ಟು ಕುಟುಂಬಗಳು ಪಕ್ಷೇತರವನ್ನ ಪ್ರೋತ್ಸಾಹಿಸುವುದಾಗಿದೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೇಲಿನ ಅಂಶಗಳನ್ನ ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಂಗ್ರೇಸ್ ಪಕ್ಷವನ್ನ ಬೆಂಬಲಿಸುವುದಾಗಿ ಹೇಳಿಕೊಂಡಿದ್ದಾರೆ. ನಂತರ ಬಿ.ಜೆ.ಪಿ. ಪಕ್ಷವನ್ನ ಬೆಂಬಲಿಸುವುದಾಗಿ ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಬಹುತೇಕ ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಪಕ್ಷವನ್ನ ಬೆಂಬಲಿಸುತ್ತಾ ಬರಲಾಗಿದೆ ಅನ್ನಲಾಗಿದೆ. ಇಂತಹ ಪಕ್ಷಗಳ ಬೆಂಬಲದೊಂದಿಗೆ ಚುನಾವಣೆ ಯಲ್ಲಿ ಪ್ರಚಾರ ಮತ್ತು ಸಭೆ–ಸಮಾರಂಭಗಳಲ್ಲಿ ಭಾಗವಹಿಸುತ್ತಾ ತಾವು ಬೆಂಬಲಿಸುವ ಪಕ್ಷವನ್ನ ಗೆಲ್ಲಸಬೇಕು ಎನ್ನುವ ದೃಷ್ಟಿಯಿಂದ ಪ್ರತಿಯೊಬ್ಬರೂ ಕುಟುಂಬದ ಹಿರಿಯರು ಎಲ್ಲಾರನ್ನು ಕರೆದುಕೊಂಡು ಮತದಾನವನ್ನ ಮಾಡಿಸಿ ತಮ್ಮ ಪಕ್ಷದ ಅಭ್ಯರ್ಥಿಯನ್ನ ಗೆಲ್ಲಿಸುತ್ತಾರೆ. ಆದರೂ ಯಾವ ಪಕ್ಷ ಬಹುಮತ ತೆಗೆದುಕೊಂಡು ಅಧಿಕಾರಕ್ಕೆ ಬಂದರೂ ಪರಿಶಿಷ್ಟರ ಅಭಿವೃದ್ಧಿಯನ್ನ ಮಾಡಲಾಗುವುದಿಲ್ಲ ಎಂಬ ಅಭಿಪ್ರಾಯವನ್ನ ಹೇಳಿಕೊಂಡಿದ್ದಾರೆ.

ಕೋಷ್ಟಕ ೫.೨೪. ಜನಪ್ರತಿನಿಧಿಗಳ ಸಹಭಾಗಿತ್ವ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ರಾಜಕೀಯ ಪ್ರತಿನಿಧಿ ಗ್ರಾಮ, ಕ್ಷೇತ್ರಕ್ಕೆ, ವಾರ್ಡಿಗೆ ಭೇಟಿ ನೀಡುತ್ತಾರೆಯೇ?	ನೀಡುತ್ತಾರೆ	೩೭	೩೭	೪೦	೪೦	೪೭	೪೭
	ಇಲ್ಲಾ	೬೩	೬೩	೬೦	೬೦	೫೩	೫೩
	ಒಟ್ಟು	೧೦೦	೧೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೊಷ್ಟಕವನ್ನ ನೋಡಿದಾಗ ಜಿಲ್ಲೆಯ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ ರಾಜಕೀಯ ಪ್ರತಿನಿಧಿಗಳ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟು ಕುಟುಂಬಗಳಲ್ಲಿ ಶೇ. ೩೭.೦೦ ರಷ್ಟು ಕುಟುಂಬಗಳು ಗ್ರಾಮ, ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೬೩.೦೦ರಷ್ಟು ಕುಟುಂಬಗಳು ಯಾವ ಕ್ಷೇತ್ರ ಮತ್ತು ವಾರ್ಡಿಗೆ ಭೇಟಿ ನೀಡುವುದಿಲ್ಲ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟು ಕುಟುಂಬಗಳಲ್ಲಿ ಶೇ. ೪೦.೦೦ ರಷ್ಟು ಕುಟುಂಬಗಳು ಗ್ರಾಮ, ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೬೦.೦೦ರಷ್ಟು ಕುಟುಂಬಗಳು ಯಾವ ಕ್ಷೇತ್ರ ಮತ್ತು ವಾರ್ಡಿಗೆ ಭೇಟಿ ನೀಡುವುದಿಲ್ಲ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟು ಕುಟುಂಬಗಳಲ್ಲಿ ಶೇ. ೪೭.೦೦ ರಷ್ಟು ಕುಟುಂಬಗಳು ಗ್ರಾಮ, ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೫೩.೦೦ರಷ್ಟು ಕುಟುಂಬಗಳು ಯಾವ ಕ್ಷೇತ್ರ ಮತ್ತು ವಾರ್ಡಿಗೆ ಭೇಟಿ ನೀಡುವುದಿಲ್ಲ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ-ಅಂಶಗಳನ್ನ ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಸರಿಸುಮಾರು ಒಂದೇ ಪ್ರಮಾಣದಲ್ಲಿ ಕ್ಷೇತ್ರ ಮತ್ತು ವಾರ್ಡಿಗೆ ಭೇಟಿಯನ್ನು ನೀಡದೆಯಿರುವುದನ್ನು ಅಧ್ಯಯನಗಳ ಸಂದರ್ಭದಲ್ಲಿ ತಿಳಿದುಕೊಳ್ಳಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ತಾವು ಗೆದ್ದು ಬರುವ ಮುಂಚೆ ಎಲ್ಲಾರ ಮನಸ್ಸಿಗೆ ಹಿಡಿಸುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ತಾವು ಗೆದ್ದ ಮೇಲೆ ಕೇವಲ ಹೇಗೆ ದುಡ್ಡನ್ನು ಮಾಡಿಕೊಳ್ಳಬೇಕು ಹಾಗೂ ತಮ್ಮ ಕುಟುಂಬಗಳ ಹಿತಾಸಕ್ತಿಯನ್ನ ಹೇಗೆ

ಕಾಯ್ದುಕೊಳ್ಳಬೇಕು ಎಂಬಂತಹ ಅಲೋಚನೆಗಳಿಂದ ಗ್ರಾಮೀಣ ಭಾಗದ ಜನರನ್ನ ತಿರಸ್ಕರಿಸಿ ಅದರಿಂದ ಅಭಿವೃದ್ಧಿಯನ್ನ ಮಾಡುವ ಬದಲಾಗಿ ತಮ್ಮ ಅಭಿವೃದ್ಧಿಯನ್ನ ಮಾಡಿಕೊಳ್ಳುತ್ತಾರೆ ಎಂಬ ಅಂಶಗಳು ಅಧ್ಯಯನ ಸಂದರ್ಭದಲಿ ತಿಳಿಯಲಾಯಿತು. ಹೀಗೆ ಸ್ಥಳೀಯ ಮಟ್ಟದಲ್ಲಿಯೇ ಪರಿಶಿಷ್ಟರನ್ನ ಕಡೆಗಣಿಸುತ್ತಾ ಬಂದರೆ ಅವರ ಬೌದ್ಧಿಕ ಬೆಳವಣಗೆಯನ್ನ ಹೇಗೆ ಮಾಡಲಾದೀತು ಎಂಬ ಅಭಿಪ್ರಾಯವನ್ನ ಮನಗಾಣಲಾಗಿದೆ. ವಾರ್ಡಿನಲ್ಲಿ ಅದರಲ್ಲಿಯೂ ವಂಚಿತ ಸಮುದಾಯವಾದ ಪರಿಶಿಷ್ಟರನ್ನ ಹೆಚ್ಚಿನ ಸಂಖ್ಯೆಯಲ್ಲಿ ಅಭಿವೃದ್ಧಿಯ ಪ್ರಮುಖ ಮಾನದಂಡಗಳಲ್ಲಿ ಒಳಗೊಳ್ಳುವಂತೆ ಮಾಡಬೇಕಾದ ಅವಶ್ಯಕತೆಯಿದೆ ತಿಳಿದು ಬಂದಿದೆ.

ಕೋಷ್ಟಕ ೩.೨೫. ಜನಪ್ರತಿನಿದಿಗಳ ಬಗ್ಗೆ ಅರಿವಿನ ವಿವರ

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು
ಎಂ.ಪಿ., ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಬಗ್ಗೆ ಗೊತ್ತಿದೆಯಾ?	ಗೊತ್ತಿದೆ	೩೭	೩೭	೪೧	೪೧	೫೧	೫೧
	ಇಲ್ಲಾ	೬೩	೬೩	೫೯	೫೯	೪೯	೪೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನ ನೋಡಿದಾಗ ಜಿಲ್ಲೆಯ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯ ಕುಟುಂಬಗಳಿಗೆ ರಾಜಕಾರಣಿಗಳ ಬಗ್ಗೆ ತಿಳಿದಿರುವದರ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೩೭.೦೦ ರಷ್ಟು ಕುಟುಂಬಗಳು ಎಂ. ಪಿ., ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೬೩.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೪೧.೦೦ರಷ್ಟು ಕುಟುಂಬಗಳು ಎಂ. ಪಿ., ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೫೯.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೫೧.೦೦ರಷ್ಟು ಕುಟುಂಬಗಳು ಎಂ. ಪಿ., ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೪೯.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ-ಅಂಶಗಳನ್ನ ನೋಡಿದಾಗ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದವರಿಗೆ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಕ್ಷೇತ್ರದ ಸಚಿವ ಮತ್ತು ಶಾಸಕರ ಬಗ್ಗೆ ಗೊತ್ತಿರುವುದಾಗಿದೆ ಎಂದು ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾಗ ಸಂಗತಿಯೆಂದರೆ, ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದವರು ತಮ್ಮ ರಾಜಕಾರಣಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನ ಹೊಂದದೆ ತಾವು ಅವರೊಂದಿಗೆ ಸಂಪರ್ಕವನ್ನ ಹೊಂದಿ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸದೆ ಇರುವುದರಿಂದ ಅಭಿವೃದ್ಧಿಯನ್ನ ಕಾಣದೆ ತಮ್ಮ ಜೀವನದಲ್ಲಿ ಶೋಚನಿಯ ಕಷ್ಟಗಳನ್ನ ಅನುಭವಿಸಬೇಕಾದ ಪ್ರಸಂಗವಿದೆ ಎಂದು ಮನಗಣಾಲಾಗಿದೆ. ಎಲ್ಲಾರನ್ನ ಒಳ್ಳಗೊಳ್ಳುವಂತಹ ಅಭಿವೃದ್ಧಿಯನ್ನ ಕಾಣದೆ ಕೇವಲ ಯಾವ ವ್ಯಕ್ತಿ ರಾಜಕಾರಣಿಗಳ ಜೊತೆಗೆ ಸಂಪರ್ಕವನ್ನ ಹೊಂದಿರುತ್ತಾರೆಯೋ ಅಂತಹವರ ಕ್ಷೇತ್ರ, ಗ್ರಾಮ ಮತ್ತು ವಾರ್ಡುಗಳು ಅಭಿವೃದ್ಧಿಯನ್ನ ಕಾಣುತ್ತವೆ ಎಂದು ಅಧ್ಯಯನಗಳ ಸಂದರ್ಭದಲ್ಲಿ ತಿಳಿದು ಬಂದಿದೆ.

ಕೋಷ್ಟಕ ೩.೨೬. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಬಗ್ಗೆ ಅರಿವು

ಸೂಚಕಗಳು	ಉಪಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು		ಪ.ಜಾ. ಮೀಸಲು		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಬಗ್ಗೆ ಗೊತ್ತಿದೆಯಾ?	ಗೊತ್ತಿದೆ	೪೫	೪೫	೩೯	೩೯	೫೭	೫೭
	ಇಲ್ಲಾ	೫೫	೫೫	೬೧	೬೧	೪೩	೪೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನ ನೋಡಿದಾಗ ಜಿಲ್ಲೆಯ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕುಟುಂಬಗಳಿಗೆ ಸ್ಥಳೀಯ ರಾಜಕಾರಣಿಗಳ ಬಗ್ಗೆ ತಿಳಿದಿರುವದರ ವಿವರವನ್ನ ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೪೫.೦೦ ರಷ್ಟು ಕುಟುಂಬಗಳು ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೫೫.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೯.೦೦ ರಷ್ಟು ಕುಟುಂಬಗಳು ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ

ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೬೧.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೫೭.೦೦ ರಷ್ಟು ಕುಟುಂಬಗಳು ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಬಗ್ಗೆ ಗೊತ್ತಿದೆ ಎಂದಿದ್ದಾರೆ. ಅದರಂತೆ, ಶೇ. ೪೩.೦೦ ರಷ್ಟು ಕುಟುಂಬಗಳು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ-ಅಂಶಗಳನ್ನ ಪರಿಶೀಲಿಸಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ರಾಜಕಾರಣಿಗಳ ಬಗ್ಗೆ ಗೊತ್ತಿದೆ ಎಂದು ಹೇಳಲಾಗಿದೆ. ದೇಶದ ಅಭಿವೃದ್ಧಿಯನ್ನ ಕಾಣಬೇಕು ಎಂದಾದರೆ ಅದು ತಳಮಟ್ಟದಿಂದ ಮೇಲ್ಮಟ್ಟಕ್ಕೆ ಅಭಿವೃದ್ಧಿಯ ಸಾಧನಗಳು ಹರಿದುಕೊಂಡು ಹೋದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿಯನ್ನಕಾನಬಹುದಾಗಿದೆ. ಅಂದರೆ, ಸ್ಥಳೀಯ ಮಟ್ಟದ ಅಭಿವೃದ್ಧಿಯನ್ನ ಸ್ಥಳೀಯ ಸಂಸ್ಥೆಗಳ ಮೂಲಕವೇ ಆಗಬೇಕಾಗಿದೆ ಅಂತಹವುದರಲ್ಲಿ ಸ್ಥಳೀಯ ಕುಟುಂಬಗಳಿಗೆ ತಮ್ಮ ಸ್ಥಳೀಯ ಸಂಸ್ಥೆಗಳ ನಾಯಕರ ಬಗ್ಗೆ ಗೊತ್ತಿಲ್ಲಿರುವಾಗ ಅವರ ಅಭಿವೃದ್ಧಿಯನ್ನ ಹೇಗೆ ಮಾಡಿಯಾರು ಎನ್ನುವಂತಹ ಆಲೋಚನೆಯನ್ನ ಮಾಡಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ದಿನಾಲು ನೋಡುವಂತಹ ಸ್ಥಳೀಯ ನಾಯಕರನ್ನ ಅವರ ಬಗ್ಗೆ ಯಾವ ಮಾಹಿತಿಯನ್ನು ಹೊಂದದೆ ಇದ್ದರೆ ಯಾವ ಅಭಿವೃದ್ಧಿಯನ್ನ ಕಾಣಲಾರದೆ ಆ ಗ್ರಾಮೀಣ ಪ್ರದೇಶಗಳು ದುಃಸ್ಥಿತಿಯನ್ನ ಅನುಭವಿಸುವಂತಹ ಸಂಗತಿಗಳು ನಿರ್ಮಾಣವಾಗಿರುವುದನ್ನ ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ.

ಪರಿಶಿಷ್ಟ ಜಾತಿಗಳ ಮುಂದಿರುವ ಸವಾಲು ಮತ್ತು ಸಾಧ್ಯತೆಗಳು

ಭಾರತದ ಚರಿತ್ರೆಯಲ್ಲಿ ಪರಶಿಷ್ಟರು ಅನೇಕ ಬಗೆಯ ದಾವಂತಗಳಿಗೆ ಗುರಿಯಾದವರು. ಅವರ ಬದುಕಿನಲ್ಲಿ ಯಾವ ಕಾಶಲದಲ್ಲಿಯೂ ಸಹ ಮಹತ್ತರವಾದ ತಿರುವು ಅಥವಾ ಬದಲಾವಣೆಗಳು ಗೋಚರಿಸಲೇ ಇಲ್ಲ ಆದರೂ ಪರಿಶಿಷ್ಟರು ಸಾಕಷ್ಟು ಸ್ಥಿತ್ಯಾಂರತಗಳನ್ನು ಕಂಡಿದ್ದಾರೆ ಇದೇ ರೀತಿಯಾಗಿ ಅವರ ಬದುಕಿನಲ್ಲಿ ನಿರಿಕ್ಷತ ಪ್ರಮಾಣದಲ್ಲಿ ಅಲ್ಲದಿದ್ದರು ಉಸಿರಾಡುವಷ್ಟರ ಮಟ್ಟಿಗೆ ಬದಲಾವಣೆಗಲಾಗಿವೆ. ಶಿಕ್ಷಣ, ಉದ್ಯೋಗ, ಜೀವನಮಟ್ಟ, ನೋಡುವಷ್ಟರ ಮಟ್ಟಿಗೆ ಅಲ್ಪ ಸಲ್ಪ ಕಾಲಂತರದಲ್ಲಿ ಬದಲಾವಣೆಗಳಗಿವೆ. ಆದರೆ ಈ ಬದಲಾವಣೆಯ ಗೌರವ ಡಾ. ಬಿ ಆರ್ ಅಂಬೇಡ್ಕರ್ ಅವರಿಗೆ ಸಲ್ಲಬೇಕು. ಅದೇ ರೀತಿಯಾಗಿ ಸಾಮಾಜಿಕ ಆಂದೋಲನಗಳು ಸುದಾರಣವಾದಿ ಚಳುವಳಿಗಳು ಮತ್ತು ದಲಿತ ಚಳವಳಿಗಳ ಪಾತ್ರಗಳನ್ನು ಸಹ ಅಲ್ಲಗಳಿಯುವಂತಿಲ್ಲ. (ಸುಮ. ಬಿ.ಯು, ೨೦೧೫, ಪು.೩೮) ಇಂದು ಪರಿಶಿಷ್ಟರ ಸಮುದಾಯಗಳಲ್ಲಿ ಎಷ್ಟೋಂದು ಛಿದ್ರಗಳೆಂದರೆ ಅಂಬೇಡ್ಕರ್ ಕಟ್ಟಿದ ಬೌದ್ಧ ಧರ್ಮದ ಪರಂಪರೆ ದಲಿತ ಸಮುದಾಯಗಳನ್ನು ಒಂದು ಮಾಡಲು

ಬಿಡುತ್ತಿಲ್ಲ ಅವರ ರಾಜಕೀಯ ಆಯ್ಕೆಗಳಲ್ಲಿ ಒಗ್ಗಟಿಲ್ಲ. ಈ ಸಮಗತಿಯನ್ನು ಸ್ಪಷ್ಟಿಕರಿಸುವುದಕ್ಕೆ ಎರಡು ರಾಜಗಯಗಳ ಉದಾಹಾರಣೆ ಸಾಕು. ಆಂಧ್ರದಲ್ಲಿ ಮಾದಿಗರು ತೆಲುಗು ದೇಶಂನ ಪರವಾಗಿದ್ದರೆ, ಮಾಲಗಳು ಕಾಂಗ್ರೇಸ್ ಪಕ್ಷವನ್ನು ಬೆಂಬಲಿಸುತ್ತಾರೆ. ಮಹಾರಾಷ್ಟ್ರದಲ್ಲಿ ಮಾಂಗ್‌ಗಳು ಶಿವಸೇನೆಯನ್ನು ಬೆಂಬಲಿಸಿದರೆ ಮಹಾರ್‌ಗಳು ಕಾಂಗ್ರೆಸ್ ಜೊತೆ ನಿಂತಿದ್ದಾರೆ. ಈ ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣವಾಗಿಸುವ ಮತ್ತೊಂದು ಸಂಗತಿಯೆಂದರೆ ಭಾರತದ ರಾಜಕಾರಣದ ಸಂಕಥನಗಳೆಲ್ಲ ಜಾತಿ ಧರ್ಮಾಧಾರಿತವಾಗಿಯೇ ರೂಪುಗೊಂಡಿವೆ. ವಸ್ತುಸ್ಥಿತಿ ಹೀಗಿರುವಾಗ ವಿವಿಧ ಜಾತಿ ಮತ್ತು ಕೋಮಿಗೆ ಸೇರಿದ ಸಮುದಾಯಗಳನ್ನು ಸಂಘಟಿಸುವುದು ನಿಜಕ್ಕು ದೊಡ್ಡ ಸವಾಲೇ ಸರಿ.

ಪರಿಶಿಷ್ಟರು ರಾಜಕೀಯ ಸಬಲೀಕರಣದಲ್ಲಿ ಎದುರಿಸುತ್ತಿರುವ ಸವಾಲುಗಳು

೧. ಜಾತಿ ವ್ಯವಸ್ಥೆ

೨. ಮೇಲ್ವರ್ಗದವರ ಶೋಷಣೆ

೩. ಅಸ್ಪೃಶ್ಯರು ಎಂಬ ಸಂಕುಚಿತ ಭಾವನೆ

೪. ದಲಿತಲ್ಲಿ ಏಕತೆಯ ಕೊರತೆ(ಸಾಂಸ್ಕೃತಿಕ ಭಿನ್ನತೆ)

೫. ಸಮರ್ಥ ನಾಯಕತ್ವದ ಕೊರತೆ

೬. ಧಾರ್ಮಿಕ ವಿಚಾರಗಳಲ್ಲಿ ತಟಸ್ಥತೆ

೭. ಮತಮಾನ್ಯಗಳು ಇಲ್ಲದಿರುವುದು(ಬೆಂಬಲ ಮತ್ತು ಹಣದ ಕೊರತೆ)

೮. ದಲಿತರ ಧಾರ್ಮಿಕ ಮನೋಭಾವನೆಗಳು(ನಂಬಕೆ ಮತ್ತು ಬಲಿದಾನಗಳು)

೯. ಚುನಾವಣೆಯಲ್ಲಿ ಜಾತಿ, ಧರ್ಮ, ಹಣದ ಪ್ರಭಾವ ಕೊರತೆ / ದಲಿತರ ದುರ್ಬಳಕೆ

೧೦. ದಲಿತರು ಏಕ ಪಕ್ಷಕ್ಕೆ ಬೆಂಬಲ

೧೧. ಮತಾಂತರಗೊಂಡದಲಿತರು ಮತ್ತು ಮತಾಂತರಗೊಳ್ಳದ ದಲಿತರಮಧ್ಯೆ ಭಿನ್ನಾಭಿಪ್ರಾಯಗಳು

೧೨. ಅಸ್ಪೃಶ್ಯ ಮತ್ತು ಸ್ಪರ್ಶ ಜಾತಿಗಳ ನಡುವೆ ಭಿನ್ನಾಭಿಪ್ರಾಯಳು

೧೩. ಜಾತಿ ಧೃವೀಕರಣ

೧೪. ಪರಿಶಿಷ್ಟರನ್ನು ಏಕೀಕರಣಗೊಳಿಸುವ ಅಥವಾ ಪ್ರತಿನಿಧಿಸುವ ಒಂದು ಸಾಮಾನ್ಯ ವೇದಿಕೆಯ ಕೊರತೆ

೧೫. ಪರಿಶಿಷ್ಟ ಜನ ಪ್ರತಿನಿಧಿಗಳ ಅಪ್ರಮಾಣಿಕತೆ ಮತ್ತು ಅಪನಂಬಿಕೆಗೆ ಗುರಿಯಾಗುತ್ತಿರುವು

೧೬. ಒಳಮೀಸಲಾತಿಯ ಒಳ ಗುದ್ದಾಟ ಮತ್ತು ಪರಿಶಿಷ್ಟ ರಾಜಕಾರಳಿಗಳ ಸ್ವಾರ್ಥ.

ಕೊನೆ ಟಿಪ್ಪಣಿ

೧. ಇಂಧೂದರ ಹೊನ್ನಾಪುರ (ಸಂ.), ೨೦೦೯, ಸಂವಾದ ಎಸ್.ಪಿ ಜೋಗೂರು ಪ್ರಜಾಪ್ರಭುತ್ವ ಪ್ರಭಾ(ಹಾ)ವಳಿ ಸ್ಫೂರ್ತಿಧಾಮ ಅಂಜನಾ ನಗರ ಮಾಗಡಿ ರಸ್ತೆ, ವಿಶ್ವನೀಡಂ, ಬೆಂಗಳೂರು ಪು. ೧೬

೨. ಥೋಮಸ್ ಜಿ.ಎಂ., ೨೦೦೯, ದಕ್ಷಿಣ ಕನ್ನಡದ ಕ್ರೈಸ್ತರು ಮತ್ತು ರಾಜಕೀಯ ಭಾಗವಹಿಸುವಿಕೆ ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೧-೭

೩. ಪುನ್ನೆಪ್ಪ ಎಸ್ ಮಾಳ್ಗಿ, ೨೦೦೨, ಬಸವೇಶ್ವರ ಮತ್ತು ಅಂಬೇಡ್ಕರ ಅವರ ರಾಜಕೀಯ ಚಿಂತನೆಯಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ, ಒಂದು ತೌಲನಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಾಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ದಾರವಾಡ, ಪು.೨೪

೪. ಇರ್ಫಾನ್ ಹಬೀಬ್, ೨೦೧೩, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ಪು.೬

೫. ಲಾಲ್ ಕೆ.ಎಸ್., ಮಧ್ಯಯುಗದ ಭಾರತದಲ್ಲಿ ಪರಿಶಿಷ್ಟ ವರ್ಗಗಳ ವೃದ್ಧಿ, ೨೦೧೨, ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು ಪು. ೧೧೫

೬. ಜಗಜೀವನರಾಮ (ಅನು), ರಾಹು (ಮೂಲ), ೧೯೯೯, ಜಾತಿ ವ್ಯವಸ್ಥೆ ಸಮಸ್ಯೆ ಸವಾಲುಗಳು, ಅನುಭವ ಪ್ರಕಾಶನ, ಗುಲ್ಬರ್ಗಾ, ಪು.೧೧೯

೭. ಪ್ರಜಾವಾಣಿ, ದಿನಪತ್ರಿಕೆ, ೨೧.೦೭.೨೦೧೪, ಪು. ೭

೮. ಸುಖದೇವ್ ಥೋರಟ್ (ಅನು) ಬಿ. ಶ್ರೀಪಾದ, ೨೦೧೬, ಜಾತಿ ಅಸಮಾನತೆ ಪ್ರತ್ಯೇಕತೆ ಮತ್ತು ಬಡತನ, ಲಡಾಯಿ ಪ್ರಕಾಶನ, ಗದಗ, ಪು. ೨೮-೩೦

೯. ರಾಮ್‌ಪುನಿಯಾನಿ (ಮೂಲ), ಸುಜ್ಞಾನಮೂರ್ತಿ ಬಿ.,(ಕನ್ನಡ ಅನು) ೨೦೧೬, ದಲಿತ ರಾಜಕೀಯ ಒಂದು ಚಿತ್ರದರ್ಶನ, ಲಡಾಯಿ ಪ್ರಕಾಶನ, ಪು. ೧೬

೧೦. ಸುಖದೇವ್ ಥೋರಟ್ (ಅನು) ಬಿ. ಶ್ರೀಪಾದ, ೨೦೧೬ ಜಾತಿ ಅಸಮಾನತೆ ಪ್ರತ್ಯೇಕತೆ ಮತ್ತು ಬಡತನ, ಲಡಾಯಿ ಪ್ರಕಾಶನ, ಗದಗ, ಪು. ೧೯-೨೦

೧೧. ಕೃಷ್ಣ ಕೊತಮ್, ೨೦೧೬, ಪು. ೧೧೬

೧೨. ಸೋಮಶೇಖರ ಎಚ್., ೨೦೦೯, ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು (ಕೋಲಾರ ಜಿಲ್ಲೆಯ ಒಂದು ಅಧ್ಯಯನ), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೫೦-೫೧

೧೩. ಶಾಂತಕುಮಾರಿ ಕೆ., ೨೦೦೫ ಪು.

೧೪. ಶಾಶ್ವತಸ್ವಾಮಿ ಮುಕ್ಕುಂದಿಮಠ, ೨೦೦೮, ಸಿಂಧೂರ ದರ್ಪಣ, ಸಿಂಧೂರು ಪ್ರಕಾಶನ, ಸಿಂಧನೂರು, ಪು.

೧೫. ಅಂಬ್ರೋಸ್ ಪಿಂಟೊ, ೧೯೯೨, ಇ.ಪಿ.ಡಬ್ಲ್ಯೂ. ಪು. ೬೬

೧೬. ನುಡಿದಂತೆ ನಡೆದಿದ್ದೇವೆ ಸಾದನೆಯ ನಾಲ್ಕು ವರ್ಷಗಳು, ಕರ್ನಾಟಕ ವಾರ್ತೆ, ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೈಫಿಡಿ, ಬೆಂಗಳೂರು, ಪು.೨೬.

೧೭. ಉಪಾಧ್ಯಾಯ ಎಚ್.ಸಿ, ೧೯೯೧, ರಿಜರ್ವೇಶನ್ ಫಾರ್ ಶೇಡ್ಯೂಲ್ಡ್ ಕಾಸ್ಟ್ ಅಂಡ್ ಶೇಡ್ಯೂಲ್ಡ್ ಟ್ರೈಬ್ಸ್, ಅನ್‌ಮೊಲ್ ಪಬ್ಲಿಕೇಶನ್, ನವದೆಹಲಿ. ಪು. ೧೨೪-೧೨೯

೧೮. ನುಡಿದಂತೆ ನಡೆದಿದ್ದೇವೆ ಸಾದನೆಯ ನಾಲ್ಕು ವರ್ಷಗಳು, ಕರ್ನಾಟಕ ವಾರ್ತೆ, ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೈಫಿಡಿ, ಬೆಂಗಳೂರು, ಪುಟ. ೨೮-೩೦

೧೯. ಕೃಷ್ಣಮೂರ್ತಿ ಚಮರಂ, ೨೦೧೬, ಭಾರತೀಯರೆಲ್ಲರ ಮಹಾಬೆಳಕು ಬಾಬಾಸಾಹೇಬ ಅಂಬೇಡ್ಕರ್, ಮೈಸೂರು ಮಹಾನಗರ ಪಾಲಿಕೆ, ಮೈಸೂರು, ಪು. ೩೩

೨೦. ಮುಜಾಫರ್ ಆಸ್ಸಾದಿ, ದೇವೇಗೌಡ ಡಿ.ಟಿ(ಸಂ), ೨೦೦೯, ಸೋಮಶೇಖರ ಜೆ ಮತ್ತು ಶಶಿಕುಮಾರ ಡಿ.ಜೆ. (ಲೇ) "ರಾಜಕೀಯ ಪ್ರಾತಿನಿಧ್ಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಂದು ಅವಲೋಕನ ಹಾದಿ ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್ ವ್ಯಾಲ್ಯೂಂ-೧, ಪೊಲಿಕಲ್ ಸೈನ್ಸ್ ಟೀಚರ್ಸ್ ಅಕ್ಯಾಡೆಮಿ, ಮೈಸೂರು, ಪು.೧೬೨-೧೬೪

೨೧. ಕೃಷ್ಣಮೂರ್ತಿ ಚಮರಂ, ೨೦೧೬, ಭಾರತೀಯರೆಲ್ಲರ ಮಹಾ ಬೆಳಕು ಬಾಬಾಸಾಹೇಬ ಅಂಬೇಡ್ಕರ್, ಮೈಸೂರು ಮಹಾನಗರ ಪಾಲಿಕೆ, ಮೈಸೂರು, ಪು. ೩೮

೨೨. ಮುಜಾಫರ್ ಆಸ್ಸಾದಿ, ದೇವೇಗೌಡ ಡಿ.ಟಿ(ಸಂ), ೨೦೦೯, ಸೋಮಶೇಖರ ಜೆ ಮತ್ತು ಶಶಿಕುಮಾರ ಡಿ.ಜೆ. (ಲೇ) "ರಾಜಕೀಯ ಪ್ರಾತಿನಿಧ್ಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಂದು ಅವಲೋಕನ ಹಾದಿ ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್ ವ್ಯಾಲ್ಯೂಂ-೧, ಪೊಲಿಕಲ್ ಸೈನ್ಸ್ ಟೀಚರ್ಸ್ ಅಕ್ಯಾಡೆಮಿ, ಮೈಸೂರು, ಪುಟ-೧೬೫

೨೩. ಗೋಪಿನಾಥ ಎಂ., ೧೯೯೦, ಪು.

೨೪. ಸುರೇಶ್ ಕೆ.ಜಿ., ೨೦೧೫, ಕರ್ನಾಟಕ ರಾಜಕಾರಣ, ಚೇತನ ಬುಕ್‌ಹೌಸ್, ಬೆಂಗಳೂರು ಪು. ೩೬

೨೫. ಪ್ರಜಾವಾಣಿ, ದಿನಪತ್ರಿಕೆ, ೧೩.೧೨.೨೦೧೬, ಪು.೫

ಅಧ್ಯಾಯ ಆರು

ಪರಿಶಿಷ್ಟರು ಮತ್ತು ಮಾನವ ಅಭಿವೃದ್ಧಿ

೬.೧. ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ

೬.೨. ಮಾನವ ಅಭಿವೃದ್ಧಿ ಸೂಚ್ಯಂಕ

೬.೩. ಜಿ.ಡಿ.ಪಿ. ಮತ್ತು ಮಾನವ ಅಭಿವೃದ್ಧಿ

೬.೪. ಜಾಗತೀಕ ಮಾನವ ಅಭಿವೃದ್ಧಿ

೬.೫. ಭಾರತದಲ್ಲಿ ಮಾನವ ಅಭಿವೃದ್ಧಿ ಅಸಮತೋಲನ

೬.೬. ಪ್ರಾದೇಶಿಕ ಅಸಮಾನತೆ ಮತ್ತು ಮಾನವ ಅಭಿವೃದ್ಧಿ

೬.೭. ಪರಿಶಿಷ್ಟರು ಮತ್ತು ಮಾನವ ಅಭಿವೃದ್ಧಿ

೬.೮. ಅಧ್ಯಯನ ಕ್ಷೇತ್ರದಲ್ಲಿ ಮಾನವ ಅಭಿವೃದ್ಧಿ

ಅಧ್ಯಾಯ ಆರು

ಮಾನವ ಅಭಿವೃದ್ಧಿ

ಮಾನವ ಅಭಿವೃದ್ಧಿ ಎನ್ನುವ ಈ ಅಧ್ಯಾಯನದಲ್ಲಿ ಅಧ್ಯಾಯನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಮತ್ತು ವರದಿಗಳನ್ನು ಪರಾಮರ್ಶಿಸಲಾಗಿದೆ. ಈ ಅಧ್ಯಾಯದ ರಚನೆ ಮತ್ತು ಸ್ವರೂಪಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಈ ಅಧ್ಯಾಯದಲ್ಲಿ ಎಳು ಪರಿಕಲ್ಪನೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಧ್ಯಾಯನಗಳನ್ನು ಮತ್ತು ವರದಿಗಳನ್ನು ಪರಾಮರ್ಶಿಸಿ ತೀರ್ಮಾನಕ್ಕೆ ಬರಲಾಗಿದೆ, ಮೊದಲನೆಯದಾಗಿ ಈ ಅಧ್ಯಾಯದಲ್ಲಿ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಯ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ. ಎರಡನೆಯದಾಗಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮೂರನೆಯದಾಗಿ ಮಾನವ ಅಭಿವೃದ್ಧಿ ಮತ್ತು ಜಿ.ಡಿ.ಪಿ.ಯ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ. ನಾಲ್ಕನೆಯದಾಗಿ ಜಾಗತೀಕ ಮಾನವ ಅಭಿವೃದ್ಧಿಯನ್ನು ಲಿಂಗಸಂಬಂಧಿ ಅಧ್ಯಯನ ಮೌಲ್ಯಕರಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸ ಲಾಗಿದೆ. ಅದೇ ರೀತಿಯಾಗಿ ಭಾರತದಲ್ಲಿ ಮಾನವ ಅಭಿವೃದ್ಧಿಯ ಅಸಮತೋಲನ, ಮಾನವ ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆ, ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಕರ್ನಾಟಕದ ೩೦ ಜಿಲ್ಲೆಗಳ ದಲಿತ ಮಾನವ ಅಭಿವೃದ್ಧಿಯನ್ನು ವಿಶ್ಲೇಷಣೆಗೆ ಒಳಪಡಿಸಿಲಾಗಿದೆ, ಅಲ್ಲದೆ ಅಧ್ಯಾಯನದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಾನವ ಅಭಿವೃದ್ಧಿಯನ್ನು ಅನುಷಂಗಿಕ ಮಾಹಿತಿ ಮತ್ತು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಈ ಅಧ್ಯಾಯವು ಒಳಗೊಂಡಿದೆ.

ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ

೧೯೯೧ಕ್ಕಿಂತಲೂ ಪೂರ್ವದಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿಗೆ ಅಥವಾ ಬೆಳವಣಿಗೆ ಆದ್ಯತೆ ನೀಡಿದವು. ಅಂದರೆ ಆರ್ಥಿಕ ಬೆಳವಣಿಗೆಯಿಂದ ಆದಾಯ ಹೆಚ್ಚಾಗುತ್ತದೆ ಆದಾಯ ಹೆಚ್ಚಾದರೆ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬಹುದು ಎನ್ನುವ ಪರಿಕಲ್ಪನೆಯೊಂದಿಗೆ (ಜಿ.ಡಿ.ಪಿ) ರಾಷ್ಟ್ರದ ಒಟ್ಟು ಅಂತರಿಕ ಉತ್ಪನ್ನ ಕಲ್ಪನೆಯನ್ನು ಮುಂಚೂಣಿಗೆ ತರಲಾಯಿತು. ಆದರೆ ಕೆಲವೇ ವರ್ಷಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬದಲಾದ ರಾಜಕೀಯ ಪರಿಸರ ಮತ್ತು ಸನ್ನಿವೇಶಗಳು ಜಿ.ಡಿ.ಪಿ.ಯಿಂದ ಜನರ ಜೀವನ ಬದಲಾಯಿಸಲು ಸಾದ್ಯವಿಲ್ಲ ಎಂದು ಅರಿತು ಮಾನವ ಅಭಿವೃದ್ಧಿ ಕಲ್ಪನೆಯನ್ನು ಮುಂಚೂಣಿಗೆ ತಂದವು.[೧]

ಹೀಗೆ ಅಭಿವೃದ್ಧಿಯನ್ನು ಲಾಗಾಯ್ತಿನಿಂದ ನಿರ್ವಹಿಸಿಕೊಂಡು ಬರಲಾಗುತ್ತದೆ. ಅಭಿವೃದ್ಧಿಯ ಪ್ರಧಾನ ದಾರೆ ಪ್ರಣಾಳಿಕೆಯಲ್ಲಿ ಅದನ್ನು ವರಮಾನಕ್ಕೆ ಸಮೀಕರಿಸಿ ನಿರ್ವಹಿಸಲಾಗಿದೆ. ಅಭಿವೃದ್ಧಿ ಸಿದ್ಧಾಂತಗಳ ಬಗ್ಗೆ. ವಿವಿಧ ಸ್ಕೂಲ್‌ಗಳು ಇವೆ. ಪ್ರಸಿದ್ಧವಾದ ಪ್ರಮಾಣಿಕೆಯೆಂದರೆ ಅಭಿವೃದ್ಧಿಯನ್ನು ವರಮಾನದಲ್ಲಿನ ಹೇಳಿಕೆಯನ್ನು ಆಧರಿಸಿ ಪರಿಭಾವಿಸಿಕೊಳ್ಳುವ ಕ್ರಮವಿದೆ. ಅಭಿವೃದ್ಧಿಯೆಂದರೆ ಸಮಾಜಶಾಸ್ತ್ರಜ್ಞರು ಪ್ರಕಾರ ಸರಳವಾದ ಸಮಾಜಿಕ ವ್ಯವಸ್ಥೆಯಿಂದ ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಗೆ ಉಂಟಾಗುವ ಪರಿವರ್ತನೆಯನ್ನು ಅಭವೃದ್ಧಿ ಎಂದು ಕರೆಯುತ್ತಾರೆ. ಆರ್ಥಿಕತೆಯ ಮೂರು ವಲಯಗಳಲ್ಲಿ ಉಂಟಾಗುವ ಸಾಪೇಕ್ಷ ಸ್ಥಾನಮಾನದಲ್ಲಿ ಉಂಟಾಗುವ ಬದಲಾವಣೆಯನ್ನು ಅಭಿವೃದ್ಧಿ ಎಂದು ಕರೆಯಲಾಗುತ್ತದೆ.

ಇವೆಲ್ಲವು ಅಭಿವೃದ್ಧಿಯನ್ನು ಕುರಿತು ವಿವಿಧ ಬಗೆಯಲ್ಲಿ ಅರ್ಥಮಾಡಿಕೊಳ್ಳುವ ಕ್ರಮಗಳಾಗಿವೆ. ಆದರೆ ಅಮರ್ತ್ಯಸೇನ ಜನರನ್ನು ಮೂಲಧಾತುವನ್ನಾಗಿ ಮಾಡಿಕೊಂಡು ಅಭಿವೃದ್ಧಿಯನ್ನು ನಿರ್ವಚಿಸಬೇಕು ಎಂದು ಪ್ರತಿಪಾಸಿದ್ದಾರೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳು ವರಮಾನ ಕೇಂದ್ರಿತ ವರಮಾನದ ಹೆಚ್ಚಳವನ್ನು ಅಭಿವೃದ್ಧಿ ಎಂದು ಪ್ರತಿಪಾದಿಸುತ್ತದೆ. ಆದರೆ ಮಹೇಬೂಬ್ ಉಲ್-ಹಕ್ ಅಭಿವೃದ್ಧಿ ಸಿದ್ಧಾಂತವು ಜನರನ್ನು ಕೇಂದ್ರವಾಗಿ ಮಾಡಿಕೊಂಡು ಅಭಿವೃದ್ಧಿ ಪ್ರಣಾಳಿಕೆ ಯನ್ನು ರೂಪಿಸಬೇಕು ಎಂದಿದ್ದಾರೆ. ಯು.ಎನ್.ಡಿ.ಪಿ.ಯು ೧೯೯೦ರಲ್ಲಿ ಪ್ರಕಟಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ ಮಾನವ ಅಭಿವೃದ್ಧಿಯ ಬಗ್ಗೆ ಮಹೇಬೂಬ್-ಉಲ್-ಹಕ್ ಹೀಗೆ ಪ್ರತಿಪಾದಿಸುತ್ತಾರೆ. “ರಾಷ್ಟ್ರವೊಂದರ ನಿಜವಾದ ಸಂಪತ್ತು ಎಂದರೆ ಅಲ್ಲಿನ ಜನರು. ಆರೋಗ್ಯದಾಯಕರಾಗಿ ದೀರ್ಘಕಾಲ ಬದುಕಲು ಮತ್ತು ಬದುಕನ್ನು ಸೃಜನಶೀಲವಾಗಿ ಸಾಗಿಸಲು ಜನರಿಗೆ ಸಾಧ್ಯವಾಗುವಂತೆ ಮಾಡವುದು ಅಭಿವೃದ್ಧಿಯ ಮೂಲ ಉದ್ದೇಶವಾಗಿದೆ. ಇದು ತುಂಬಾ ಸರಳವಾದ ಸಂಗತಿಯಾಗಿ ಕಾಣಬಹುದು. ಆದರೆ ಸರಕು ಸಾಮಾಗ್ರಿಗಳನ್ನು ಮತ್ತು ಹಣಕಾಸನ್ನು ಗುಡ್ಡೆ ಹಾಕಿಕೊಳ್ಳುವ ಬರದಲ್ಲಿ ಮೇಲಿನ ಸಂಗತಿಗಳನ್ನು ಸಾಮಾನ್ಯವಾಗಿ ಮರೆತುಬಿಡುವ ಸಾಧ್ಯತೆಯಿದೆ ಎಂದು ಪ್ರತಿಪಾದಿಸಿದ್ದಾರೆ. ಅದೇ ರೀತಿಯಾಗಿ ಅರಿಸ್ಟಾಟಲನ ಪ್ರಕಾರ ಒಂದು ಸಮಾಜ ಎಷ್ಟರಮಟ್ಟಿಗೆ ಅರ್ಥ ಪ್ರಾಯವಾಗಿದೆ ಎಂಬುದನ್ನು ನಿರ್ಧರಿಸುವ ಮಾನದಂಡವೆಂದರೆ ಅದು ಎಷ್ಟರಮಟ್ಟಿಗೆ ಮಾನವರ ಒಳಿತನ್ನು ಸಾಧಿಸಿದೆ ಎಂದು ನೋಡುವುದಾಗಿದೆ. ಅಂದರೆ ಅರಿಸ್ಟಾಟಲ್ ಪ್ರಕಾರ ಜನರು ಜೀವನದಲ್ಲಿ ಸಾಧಿಸಿಕೊಳ್ಳಬೇಕಾಗಿರುವುದು ಸಂಪತ್ತಿನ ಸಂಗ್ರಹವಲ್ಲ ಏಕೆಂದರೆ. ಅದು ಉತ್ತಮ ಬದುಕನ್ನು ಸಾಧಿಸಿಕೊಳ್ಳಲು ಇರುವ ಒಂದು ಸಾಧನ. ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ ಕುರಿತಂತೆ ಇಮಾನವೇಲ್ ಕಾಂಟ್ ಹೀಗೆ ಬರೆಯುತ್ತಾನೆ. ಜನರನ್ನು ಸದಾಕಾಲ ಅಂತಿಮ ಗುರಿಯೆಂದು ಭಾವಿಸಬೇಕು. ವಿನಾಃ ಎಂದೆಂದೂ ಸಾಧನವಾಗಿಯಲ್ಲ ಎಂಬ ಅಂಶವನ್ನು ಪ್ರತಿಪಾದಿಸಿದ್ದಾರೆ.

ಅದೇ ರೀತಿಯಾಗಿ ೧೯೯೦ ಯು.ಎನ್.ಡಿ.ಪಿ. ಮಾನವ ಅಭಿವೃದ್ಧಿ ವರದಿಯಲ್ಲಿ ಮಹೆಬೂಬ್ ಉಲ್ ಹಕ್ ಮಾನವ ಅಭಿವೃದ್ಧಿಯನ್ನು ಈ ರೀತಿಯಾಗಿ ನಿರ್ವಹಿಸಿದ್ದಾರೆ. “ಜನರ ಆಯ್ಕೆಗಳ

ವ್ಯಾಪ್ತಿಯನ್ನು ವಿಸ್ತೃತ ಗೊಳಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿ ಎಂದಿದ್ದಾರೆ, ಅದರಲ್ಲಿ ಅತ್ಯಂತ ಆಯಕಟ್ಟಿನ ಆಯ್ಕೆಗಳೆಂದರೆ ದೇಶವೊಂದರ ಜನರು ಆರೋಗ್ಯಕರವಾಗಿ ದೀರ್ಘಕಾಲ ಬದುಕನ್ನು ಸಾಗಿಸಯವದು. ಎಲ್ಲಾರು ಶಿಕ್ಷಣ ಪಡೆಯುವದು ಮತ್ತು ಎಲ್ಲಾರು ಗೌರವಯುತವಾದ ಜೀವನ ಮಟ್ಟವನ್ನು ಸಾದಿಸಿಕೊಳ್ಳುವದು ಎಂದಿದ್ದಾರೆ ಇವುಗಳಿಗೆ ಪೂರಕವಾದ ಉಳಿದ ಆಯ್ಕೆಗಳಿಂದರೆ ರಾಜಕೀಯ ಸ್ವಾತಂತ್ರ್ಯ ದೃಡಿಕರಿಸಿದ ಮಾನವ ಹಕ್ಕುಗಳು ಮತ್ತು ಯಾವುದನ್ನು ಆ್ಯಡಂಸ್ಮಿತ್ ಅವಮಾನವನ್ನು ಅನುಭವಿಸದೆ ಇತರರ ಜೊತೆಗೆ ಸಹಭಾಗಿಗಳಾಗಲು ಸಾಧ್ಯವಾಗುವ ಸಂಗತಿಯೆಂದು ಹೇಳಿದ್ದಾನೋ ಅಂತಹ ಆತ್ಮಗೌರವ ಉಳಿಸಿಕೊಳ್ಳವಂತಹ ವಾತವರಣ ಸೃಷ್ಠಿಯಾದರೆ ಅದೇ ಮಾನವ ಅಭಿವೃದ್ಧಿ ಎಂದು ಪ್ರತಿಪಾದಿಸಿದ್ದಾನೆ. ಅದೇ ರೀತಿಯಾಗಿ ೨೦೧೦ ರಲ್ಲಿ ಯು.ಎನ್.ಡಿ.ಪಿ. ತನ್ನ ಇಪ್ಪತ್ತನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಹೀಗೆ ನಿರ್ವಹಿಸಲಾಗಿದೆ. ದೀರ್ಘವಾದ ಆರೋಗ್ಯಕರವಾದ ಮತ್ತು ಸೃಜನಶೀಲವಾದ ಬದುಕನ್ನು ಸಾಧಿಸಿಕೊಳ್ಳಲು ಜನರು ಯಾವುದು ಮೌಲ್ಯಯುತವಾದುದೆಂದು ಪರಿಗಣಿಸಿಕೊಳ್ಳಲು ಅವುಗಳನ್ನು ಸಾಧಿಸಿಕೊಳ್ಳಲು ಹಾಗೂ ನಾವೆಲ್ಲರು ಪಾಲುದಾರರಾಗಿರುವ ನಮ್ಮ ವಿಶ್ವದಲ್ಲಿ ಸಮಾನತೆ ಹಾಗೂ ಸುಸ್ಥಿರಗತಿ ಆಧಾರದಲ್ಲಿ ಅಭಿವೃದ್ಧಿ.

ರೂಪಿಸಲು ಅಗತ್ಯವಾದ ಜನರ ಸ್ವಾತಂತ್ರ್ಯಗಳೆ ಮಾನವ ಅಭಿವೃದ್ಧಿ. ಜನರು ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯ ಫಲಾನುಭವಿಗಳು ಹೌದು ಮತ್ತು ಅದರ ಚಾಲಕ ಶಕ್ತಿಯು ಹೌದು ಯು.ಎನ್.ಡಿ.ಪಿ. ೨೦೧೦ ಅಂದರೆ ಇಲ್ಲಿಯವರೆಗೂ ಅಭಿವೃದ್ಧಿಯನ್ನು ವರಮಾನದ ನೆಲೆಯಲ್ಲಿ ನೋಡುವ ಕ್ರಮವಿತ್ತು ಹೀಗಾಗಿ ಯು.ಎನ್.ಡಿ.ಪಿ.ಯು ಮಾನವ ಅಭಿವೃದ್ಧಿಯನ್ನು ಶಿಕ್ಷಣ, ಆರೋಗ್ಯ, ಆದಾಯದ ನೆಲೆಯಲ್ಲಿ ನೋಡಬೇಕೆಂದು ತನ್ನ ಪ್ರಣಾಳಿಕೆಯಲ್ಲಿ ಪ್ರತಿಪಾದಿಸಿದೆ ಮತ್ತು ವರಮಾನವನ್ನು ಪ್ರಧಾನಧಾತುವನ್ನಾಗಿ ಮಾಡಿಕೊಂಡಿರುವ ಅಭಿವೃದ್ಧಿ ಮೀಮಾಂಸೆಗೂ ಮತ್ತು ಜನರನ್ನು ಕೇಂದ್ರಿದಲ್ಲಿಟ್ಟು ಕೊಂಡಿರುವ ಅಭಿವೃದ್ಧಿ ಪ್ರಣಾಳಿಕೆಗೂ ನಡುವೆ ಇರುವ ಪ್ರಧಾನ ಬಿನ್ನತೆಯೆಂದರೆ ಮೊದಲನೆಯದರಲ್ಲಿ ಜನರಿಗೆ ಅಗತ್ಯವಾದ ವಿಸ್ತ್ರುತವಾದ ಆಯ್ಕೆಗಳಲ್ಲಿ ಒಂದಾದ ವರಮಾನಕ್ಕೆ ನೀಡಿದ್ದು. ಎರಡನೆಯದಲ್ಲಿ ಜನರು ಆರ್ಥಿಕ ಮತ್ತು ಸಾಮಾಜಿಕ ಸಾಂಸ್ಕೃತಿಕ ಆಯ್ಕೆಗಳೆಲ್ಲಕ್ಕೂ ಅವಕಾಶ ನೀಡಲಾಗಿದೆ. ಜನರು ಇಲ್ಲಿ ಅಭಿವೃದ್ಧಿಯಲ್ಲಿ ಅತ್ಯಂತ ಕೊನೆಯಲ್ಲಿ ಪರಿಗಣಿಸುವ ಗುರಿಯಲ್ಲಿ ಅವರು ಅಭಿವೃದ್ಧಿಯ ವಸ್ತುವೂ ಹೌದು ಅವರು ಅದನ್ನು ಅನುಭವಿಸ ಬೇಕಾದ ವ್ಯಕ್ತಿಗಳು ಆಗಿರುತ್ತಾರೆ. ಅವರು ಅಮೂರ್ತವಾದ ಆರ್ಥಿಕ ಸೂಚಿಗಳಲ್ಲ. ಅವರು ಅಭಿವೃದ್ಧಿಯಿಂದ ವಂಚಿತರಾದ ಬಲಿಪಶುಗಳು ಅಲ್ಲ. ಅವರು ಅಭಿವೃದ್ಧಿಯ ಅರಸರು ಎಂದಿದ್ದಾರೆ. ಹೀಗಾಗಿ ಅಭಿವೃದ್ಧಿ ಪ್ರಕ್ರಿಯೇಯ ದೋಷದಲ್ಲಿನ ಪರಿಣಾಮವಾಗಿ ಮಾನವ ಅಭಿವೃದ್ಧಿ ಸಿದ್ಧಾಂತ ಮುಂಚೂಣಿಗೆ ಬಂತು. ಆದ್ದರಿಂದ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಯ ಎರಡು ಒಂದೇ ಗುರಿ ಮತ್ತು ಉದ್ದೇಶವಾದಗ ಮಾನವ ಅಭಿವೃದ್ಧಿ ಸಫಲವಾಗುತ್ತದೆ.[೨]

ಮಾನವ ಅಭಿವೃದ್ಧಿ ಸೂಚ್ಯಾಂಕ (ಹೆಚ್.ಡಿ.ಐ)

ಮಾನವ ಅಭಿವೃದ್ಧಿ ರೂವಾರಿಗಳು ಜಿ.ಡಿ.ಪಿಗೆ ಪ್ರತಿಯೋಗಿ ರೂಪಿಸಿದ ಅಭಿವೃದ್ಧಿ ಮಾಪನವೆ ಎಚ್.ಡಿ.ಐ.(ಮಾನವ ಅಭಿವೃದ್ಧಿ ಸೂಚ್ಯಾಂಕ) ಜಿ.ಡಿ.ಪಿ ಯು ವರಮಾನವನ್ನು ಮಾತ್ರ ಪರಿಗಣಿಸಿ ಅಭಿವೃದ್ಧಿಯನ್ನು ಮಾಫನ ಮಾಡುತ್ತದೆ. ಆದರೆ ಅಮರ್ತ್ಯಸೇನೆ ಮತ್ತು ಮಹೆಬೂಬ್ ಉಲ್ ಹಕ್ ರೂಪಿಸಿದ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯನ್ನು ಬಹುಮುಖಿ ಅಯಾಮವಾಗಿ ನಿರ್ವಚಿಸಿದ್ದರಿಂದ ಅದರ ಮಾಪನಕ್ಕೆ ಸಂಯುಕ್ತ ಸೂಚಿ ಅಥವಾ ಮಾಪನ ಅಗತ್ಯವಾಯಿತು. ಮಾನವ ಅಭಿವೃದ್ಧಿ ಸೂಚ್ಯಂಕವು ಅಂತಹ ಒಂದು ಸಂಯುಕ್ತ ಮಾಪನವಾಗಿದೆ. ಅದರಲ್ಲಿ ಪ್ರಮುಖವಾಗಿ ಮೂರು ಸೂಚಿಗಳ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಕಟ್ಟಿಕೊಡಲಾಗಿದೆ.

೧. ಆರೋಗ್ಯವನ್ನು ಅಳೆಯುವ ಜೀವನಾಯಷ್ಯ ಸೂಚಿ.

೨. ವಿದ್ಯಾಸಂಪನ್ನ ಅಳೆಯುವ ಸಾಕ್ಷರತೆ ದಾಖಲಾತಿಗಳಿಂದ ಕೂಡಿದ ಸಂಯುಕ್ತ ಶೈಕ್ಷಣಿಕ ಸೂಚಿ'

೩. ಗೌರವಯುತ ಜೀವನ ಮಟ್ಟವನ್ನು ಮಾಪನ ಮಾಡುವ ನೈಜ ತಲಾವರಮಾನದ ಜಿ.ಡಿ.ಪಿ ಸೂಚಿ.

ಇದು ಸಂಯುಕ್ತ ಮಾಪನವಾದರು ಕೂಡ ಮುಖ್ಯವಾಗಿ ಅದು ಸಮಗ್ರ ಮಾಪನವಾಗಿದೆ, ಈ ಸೂಚ್ಯಂಕವು ವ್ಯಕ್ತಿಯ ಅಥವಾ ಕುಟುಂಬ ಧಾರಣ ಸಾಮರ್ಥದ ಬಗ್ಗೆ ಏನನ್ನು ಹೇಳುವದಿಲ್ಲ, ಇಡಿ ದೇಶದ ಬಗ್ಗೆ, ಒಂದು ಸರಾಸರಿ ಮಟ್ಟವನ್ನು ಮಾತ್ರ ಇದು ತೋರಿಸುತ್ತದೆ. ಉದಾ: ಭಾರತ ಮಾನವ ಅಭಿವೃದ್ಧಿ ಸೂಚ್ಯಾಂಕವು ೨೦೧೧ರಲ್ಲಿ ೦.೫೪೯ ಇದೊಂದು ಸಮಗ್ರ ಸೂಚಿ. ದೇಶದಲ್ಲಿ ಇದಕ್ಕಿಂತ ಕಡಿಮೆ ಮೌಲ್ಯವಿರುವ ಅಥವಾ ಅಧಿಕ ಮೌಲ್ಯವಿರುವ ಜನರಿರಬಹುದು ಅಥವಾ ಕುಟುಂಬಗಳಿರಬಹುದು ಎಂಬ ಮಾಹಿತಿಯನ್ನು ನೀಡುವುದಿಲ್ಲ.

ಅದೇ ರೀತಿಯಾಗಿ ಮಾನವ ಅಭಿವೃದ್ಧಿ ಸೂಚ್ಯಂಕವು ಸಾಮಜಿಕ ವ್ಯವಸ್ಥೆಯಲ್ಲಿ ಅಂತರಗತವಾಗಿರುವ ಅಸಮಾನತೆಯನ್ನು ಅಭಿವ್ಯಕ್ತಪಡಿಸುವುದಿಲ್ಲ, ಯಾಕೆಂದರೆ ಅಸಮಾನತೆ ಅಭಿವೃದ್ಧಿಗೆ ವಿರುದ್ದವಾದದ್ದು ಅಸಮಾನತೆಯು ಸಾಮಾಜಿಕ ನ್ಯಾಯಕ್ಕೆ ವಿರುದ್ದವಾದದ್ದು. ಮತ್ತು ಅಭಿವೃದ್ಧಿಗೆ ಜನರನ್ನು ಒಳಗೊಳ್ಳದಂತೆ ಮಾಡುವ ಸಂಗತಿಯೆಂದರೆ ಅಸಮಾನತೆ. ಅಭಿವೃದ್ಧಿ ಮತ್ತು ಬಡತನಗಳಿಗೆ ಬಹುಮುಖಗಳಿರುವಂತೆ ಅಸಮಾನತೆಗೂ ಬಹುಮುವಿದೆ, ಅದು ಮಾನವವ ವರಮಾನ ಸಂಬಂದಿತ ಇರಬಹುದು. ಲಿಂಗಸಂಬಂಧಿ ಇರಬಹುದು. ಪ್ರಾದೇಶಿಕ ಸಮಾನತೆ ಇರಬಹುದು. ವೃತ್ತಿ ಸಂಬಂಧಿತವಾಗಿರಬಹುದು. ಶಿಷ್ಟ-ಪರಿಶಿಷ್ಟರ ನಡುವಿನ ಸಂಬಂಧವಾಗಿರಬಹುದು, ಅಸಮಾನತೆ ಇರಬಹುದು, ನಗರ ಗ್ರಾಮೀಣ ನಡುವಿನ ಅಸಮಾನತೆ ಇರಬಹುದು, ಹೀಗೆ ಮುಂತಾದವುಗಳನ್ನು ಕೇವಲ ವರಮಾನಕ್ಕೆ ಸೀಮಿತಗೊಳಿಸಿದರೆ ಅದನ್ನು ನಿವಾರಿಸುವದು. ಸಾದ್ಯವಾಗುವದಿಲ್ಲ ಎಂದಿದ್ದಾರೆ.

ಮಾನವ ಅಭಿವೃದ್ಧಿ ಸೂಚ್ಯಾಂಕವು ಒಂದು ಸಮಗ್ರ ಸಂಯುಕ್ತ ಸೂಚ್ಯಂಕವಾದರೂ ಅದು ಕೇವಲ ಶಿಕ್ಷಣ ಆರೋಗ್ಯ ಮತ್ತು ಆದಾಯವನ್ನು ಮಾತ್ರ ಪ್ರತಿನಿದಿಸುತ್ತಾರೆ. ಆದರೆ ಮಾನವ ಮಾನವ ಅಭಿವೃದ್ಧಿ ವರದಿಯಾಗಲಿ ಅಥವಾ ಮಾನವ ಅಭಿವೃದ್ಧಿಯ ಸೂಚ್ಯಂಕವಾಗಲಿ ಅಥವಾ ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆಯಾಗಲಿ ಮತ್ತು ಅವುಗಳನ್ನು ಪಡೆದುಕೊಳ್ಳುವ ಸಾಮರ್ಥ್ಯದ ವಾತವರಣವಾಗಲಿ ಅಥವಾ ಸನ್ನಿವೇಶದ ಬಗ್ಗೆಯಾಗಲಿ ಮಾತನಾಡುವದಿಲ್ಲ. ಶಿಕ್ಷಣ, ಆರೋಗ್ಯ ಅಧ್ಯಾಯವನ್ನು ಹೆಚ್ಚಿಸುವ ಜವಾಬ್ದಾರಿಯನ್ನು ಸರಕಾರದ ಮೇಲೆ ಅವಲಂಬಿಸಿದೆ. ಜನರನ್ನು ಸ್ವಾತಂತ್ರ್ಯ ಮತ್ತು ಸ್ವಾಲಂಬಿ ಜೀವನ ರೂಪಿಸಿಕೊಳ್ಳಲು ಅವರಿಗೆ ಬೇಕಾದ ಪರಿಸರ

ಸನ್ನಿವೇಶದ ಬಗ್ಗೆ ಎಚ್.ಡಿ.ಐ. ಮತ್ತು ಎಚ್.ಡಿ.ಆರ್ ಮಾತನಾಡುವದಿಲ್ಲ ಇದು ತೀರ ಅವೈಜ್ಞಾನಿಕ ತೀರ್ಮಾನ ಎಂದು ಭಾವಿಸಬೇಕಾಗುತ್ತದೆ. ಉದಾ: ಶಿಕ್ಷಣ ಪಡೆಯಬೇಕಾದರೆ ಹಣಬೇಕು. ಸಂಪಾದನೆ ಮಾಡಬೇಕಾದರೆ ಹಣ ಅಥವಾ ಆದಾಯ ಪಡೆಯಬೇಕಾದರೆ ಸಂಪಾದನೆ ಮಾಡಬೇಕಾದರೆ ಉದ್ಯೋಗ ಬೇಕು, ಮೂಲಭೂತವಾಗಿ ದೇಶದ ಪ್ರತಿಯೊಬ್ಬ ಪ್ರಜೆಗೆ ಉದ್ಯೋಗ ಇದ್ದಾಗ ಮಾತ್ರ ಶಿಕ್ಷಣ, ಆದಾಯ ಪಡೆಯಲು ಸಾಧ್ಯವಾಗುತ್ತದೆ, ಹಾಗದಾಗ ಮಾತ್ರ ಆರೋಗ್ಯವನ್ನ ವೃದ್ಧಿಸಿಕೊಳ್ಳುವ ಸಾಮಾರ್ಥ ಬರುತ್ತದೆ. ಉದ್ಯೋಗವೆ. ಇಲ್ಲ ಎಂದಾಗ ಶಿಕ್ಷಣ ಆರೋಗ್ಯ ಆದಾಯವನ್ನು ವೃದ್ಧಿಸಿಕೊಳ್ಳಬಹುದು. ಹೀಗೆ ಮತ್ತೊಂದು ವಿಚಿತ್ರವೆಂದರೆ ೨೦೧೧ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ ೧೨೧ ಕೋಟಿ ಜನಸಂಖ್ಯೆ ಇದೆ, ಅದರಲ್ಲಿ ಸಂಘಟಿತ ವಲಯದಲ್ಲಿ ಅಂದರೆ ಸರ್ಕಾರಿ ನೌಕರರು ಇಡಿ ದೇಶದಲ್ಲಿ ೬.೫೦ ಕೋಟಿ ಉಳಿದ ೧೧೫ ಕೋಟಿಯಷ್ಟು ಜನ ಸಂಖ್ಯೆ ಉದ್ಯೋಗದ ನಡುವೆ ಭಾರಿ ಅಂತರವಿದೆ. ಸುಮಾರು ೧೨೧ ಕೋಟಿಯಷ್ಟು ಜನರು ಅಸಂಘ ಟಿತವಲಯದಲ್ಲಿ ದುಡಿಯುತ್ತಿದ್ದಾರೆ. ಅರೆ ಹೊಟ್ಟೆ, ಅರೆ ಬಟ್ಟೆ, ಯಾವುದೇ ಆರ್ಥಿಕ ಭದ್ರತೆಯೂ ಇಲ್ಲ, ಸಮಾಜಿಕ ಭದ್ರತೆಯೂ ಇಲ್ಲ, ಇಂತಹ ಸನ್ನಿವೇಶದಲ್ಲಿ ಶಿಕ್ಷಣ, ಅರೋಗ್ಯ, ಆದಾಯನ್ನು ಪಡೆಯುವದು ಹೇಗೆ, ಸರಕಾರ ಕನಿಷ್ಠವೆಂದರೂ ದೇಶದ ಎಲ್ಲಾ ಜನರಿಗೂ ಅಲ್ಲದಿದ್ದರೂ ಅರ್ಧದಷ್ಟು ಜನರಿಗಾದರೂ ಉದ್ಯೋಗ ಒದಗಿಸಬೇಕು. ಉದ್ಯೋಗವನ್ನು ಸೃಷ್ಠಿಸಬೇಕು ಅಥವಾ ಉದ್ಯೋಗ ಸೃಷ್ಠಿಯಾಗುವ ಸನ್ನಿವೇಶವನ್ನಾದರೂ ಸೃಷ್ಠಿಸಬೇಕು. ಹಾಗದಾಗ ಮಅತ್ರ ಜನರು ಮಾನವ ಅಭಿವೃದ್ಧಿಯ ಪ್ರಧಾನಧಾರೆಗೆ ಬರಲು ಸಾಧ್ಯವಾಗುತ್ತದೆ. ಅಂದರೆ ಜನರ ವಿದ್ಯೆ ಮತ್ತು ಸಾಮಾರ್ಥ್ಯಕ್ಕೆ ತಕ್ಕಂತೆ ಉದ್ಯೋಗಗಳು ಸೃಷ್ಠಿಯಾದರೆ ಜನರಿಗೆ ಆದಾಯ ಬರುತ್ತದೆ, ಆಗ ಶಿಕ್ಷಣ ಕಲಿಯಬಹುದು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು, ಅಂದಾಗ ಮಾತ್ರ ಜನರ ಧಾರಣ ಸಾಮಾರ್ಥ್ಯ ವೃದ್ಧಿಯಾಗುತ್ತದೆ. ಹೀಗಾಗಿ ಸರಕಾರವು ಎಲ್ಲಾರಿಗೂ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸಿ ಎಲ್ಲರನ್ನು ವಿದ್ಯಾವಂತರನ್ನಾಗಿ ಮಾಡಿ ಎಲ್ಲರನ್ನು ನಿರುದ್ಯೋಗಿಗಳಾಗಿರಲು ಅವಕಾಶ ನೀಡಬಾರದು. ಅಂದರೆ ಎಲ್ಲರಿಗೂ ಶಿಕ್ಷಣ ಕೊಡಬಾರೆದೆಂದು ಅರ್ಥವಲ್ಲ. ಅವರರವರ ಸಾಮಾರ್ಥ್ಯ ಮತ್ತು ಕೌಶಲ್ಯಕ್ಕೆ ಅನುಗುಣವಾಗಿ ಉದ್ಯೋಗ ಸೃಷ್ಠಿಯಾಗಬೇಕು, ಇಲ್ಲದಿದ್ದರೆ ಎಲ್ಲರು ನಿರುದ್ಯೋಗಿಗಳಾಗಿ ಬಡತನದ ವಿಷವರ್ತುಲದಲ್ಲಿ ಬದುಕಬೇಕಾಗುತ್ತದೆ. ಆಗ ಇಡಿ ದೇಶ ಮತ್ತು ಸಮಾಜ ರೋಗಗ್ರಸ್ಥ

ಸಮಾಜವಾಗಿ ಸೃಷ್ಠಿಯಾಗಬಹುದು, ಇದನ್ನು ಭವಿಷ್ಯದ ದೃಷ್ಟಿಯಲ್ಲಿ ನೋಡಿದರೆ ಸಾಧ್ಯವಾದಷ್ಟು ಮಟ್ಟಿಗೆ ಉತ್ತರ ಸಿಗಬಹುದು. ಹಾಗದಾಗ ಮಾತ್ರ ಮಾನವ ಅಭಿವೃದ್ಧಿ ವರದಿಗಳ ಕಲ್ಪನೆ, ಸಿದ್ಧಾಂತ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ(ಕಲ್ಪನೆ)ಗಳು ಜೀವಂತಿಕೆಯನ್ನು ಉಳಿಸಿಕೊಳ್ಳವ ಸಾಧ್ಯತೆ ಇದೆ. ಇಲ್ಲದಿದ್ದರೆ ಇದಕ್ಕೆ ಪರ್ಯಾಯವಾದ ಸಿದ್ಧಾಂತ/ಕಲ್ಪನೆ ರೂಪಗೊಳ್ಳುವದರಲ್ಲಿ ಯಾವ ಅನುಮಾನಗಳು ಇಲ್ಲ.

ಮಾನವ ಅಭಿವೃದ್ಧಿ ಮತ್ತು ಜಿ.ಡಿ.ಪಿ.

ಅಭಿವೃದ್ಧಿಯು ಒಂದು ಸಂಕೀರ್ಣವಾದ ಪ್ರಕ್ರಿಯೇಯಾಗಿದ್ದು ಅದನ್ನು ಅರಿಯಲು ಮತ್ತು ಅದನ್ನು ವಿಶ್ಲೇಷಿಸಲು ಚಿಂತಕರು ಮತ್ತು ನೀತಿ ನಿರೂಪಕರು ಸಾಕಷ್ಟು ಶ್ರಮವಹಿಸಿದ್ದಾರೆ. ಆದರೆ ಈಗಲೂ ಅದನ್ನು ಸ್ಪಷ್ಟವಾಗಿ ವಿಶ್ಲೇಷಿಸಲಾಗಿಲ್ಲ. ಈ ಹಿಂದೆ ಅಭಿವೃದ್ಧಿಯ ಪರಿಕಲ್ಪನೆ ಹೆಚ್ಚಾಗಿ ಆದಾಯದ ಹೆಚ್ಚಳ ಮಾಡುವದನ್ನು ಪ್ರತಿಪಾದಿಸಿತು. ಆರ್ಥಿಕ ಹಾಗೂ ರಾಷ್ಟ್ರದ ಪ್ರಗತಿ ಪ್ರಕ್ರಿಯೇಗಳು ಜನರಿಗೆ ಆದಾಯದ ಹೆಚ್ಚಳ ಪ್ರಯೋಜನಗಳನ್ನು ವರ್ಗಾಯಿಸಿ ಬಡತನವನ್ನು ಕೊನೆಗಾಣಿಸಲು ಸಹಕಾರಿ ಎಂದು ಭಾವಿಸಲಾಗಿತ್ತು. ಆದ್ದರಿಂದ ಹೆಚ್ಚಿನ ಗಮನವು ಆರ್ಥಿಕ ಪ್ರಗತಿ ಹಾಗೂ ಒಟ್ಟು ಆಂತರಿಕ ಉತ್ಪನ್ನವನ್ನು ಹೆಚ್ಚಿಸುವತ್ತ ಹೆಚ್ಚು ಕೇಂದ್ರಿಕೃತವಾಗಿತ್ತು. ಆದರೆ ಪ್ರಪಂಚದ ಯಾವ ಭಾಗದಲ್ಲಿ ಆರ್ಥಿಕ ಬೆಳವಣಿಗೆಯು ತನ್ನಿಂದತಾನೆ ಬಡತನ ಮತ್ತು ಅಸಮಾನತೆ ಇಳಿಕೆಗೆ ಕಾರಣವಾಗದೆ ಇರುವದರಿಂದ ಈ ಬಗ್ಗೆಯ ವಿಶ್ಲೇಷಣೆಯನ್ನು ದೋಷಪೂರಿತವಾದುದೆಂದು ಪರಿಗಣಿಸಲಾಯಿತು. ಪರಿಣಾಮವಾಗಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಸಿದ್ಧಾಂತಗಳು, ಮಾನವ ಅಭಿವೃದ್ಧಿ ಸಿದ್ಧಾಂತ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ ಕಲ್ಪನೆಗಳು ಮಂಚೂಣಿಗೆ ಬಂದವು ಇಲ್ಲಿಯವರೆಗೆ ಬಹುತೇಕವಾಗಿ ರಾಷ್ಟ್ರದ ಆದಾಯವೆ ಎಲ್ಲವನ್ನು ನಿರ್ಧರಿಸುತ್ತಿದೆ. ಎಂಬ ತೀರ್ಮಾನಕ್ಕೆ ಬರಲಾಗಿದೆ. ಆದರೆ ವಾಸ್ತವಿಕವಾಗಿ ಆದಾಯ ವೃದ್ಧಿಸಿಕೊಳ್ಳುವಾಗ ಎಷ್ಟು ಜನರು ಸತ್ತರು ಮತ್ತು ಎಷ್ಟು ಜನರು ಕಾಣೆಯಾದರು ಎಂಬುದು ಲೆಕ್ಕಕೆ ಬುರುವುದಿಲ್ಲ ಇದನ್ನೆ ಮಾನವ ಅಭಿವೃದ್ಧಿ ರೂವಾರಿಗಳು ಪ್ರತಿಪಾದಿಸಿದರು.

ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಜಿ.ಡಿ.ಪಿ. ಎಂದರೆ ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನ(Gross Domestic Product) ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನ ಎಂದರೆ ಸಾಮಾನ್ಯವಾಗಿ ಕೃಷಿ ಉತ್ಪನ್ನ ಮತ್ತು ಕೃಷಿಗೆ ಸಂಬಂದಿ ಕಚ್ಚಾವಸ್ತುಗಳ ಉತ್ಪನ್ನ ಎಂದು ಮೆಲ್ನೋಟಕ್ಕೆ ಎಲ್ಲರು ಭಾವಿಸಿದ್ದುಂಟು. ಆದರೆ ಜಿ.ಡಿ.ಪಿ. ಹೇಳುವ ಕಥೆಯ ಬೇರೆಯಾಗಿದೆ. ರಾಬರ್ಟ. ಎ.ಡ್. ಕೆನಡಿ ೧೯೬೮ ಅಭಿಪ್ರಾಯಪಡುವಂತೆ ಜಿ.ಡಿ.ಪಿ.ಯು ಉತ್ಪನ್ನವು ವಾಯುಮಾಲಿನ್ಯ ಜೊತೆಗೆ ಸಿಗರೇಟ್ ಜಾಹಿರಾತನ್ನು ಪರಿಗಣಿಸುತ್ತದೆ. ಕಗ್ಗೋಲೆಯ ಹೆದ್ದಾರಿಗಳಲ್ಲದೆ ಅಂಬುಲೆನ್ಸಗಳನ್ನು ಪರಿಗಣಿಸುತ್ತದೆ. ಇದು ನಮ್ಮ ರಾಷ್ಟ್ರದ ಅರಣ್ಯನಾಶ ಹಾಗೂ ಪ್ರಾಕೃತಿಕ ಸಂಪನ್ಮೂಲಗಳು ಅದ್ಭುತಗಳ ವಿನಾಶವನ್ನು ಪರಿಗಣಿಸುತ್ತದೆ. ಪರಮಾಣು ಸಿಡಿತಲೆಗಳನ್ನು ಹಾಗೂ ನಮ್ಮ ನಗರಗಳಲ್ಲಿನ

ದಂಗೆಗಳನ್ನು ಅಡಗಿಸಲು ಸಶಸ್ತ್ರ ಪೋಲಿಸ್ ಕಾರುಗಳನ್ನು ಪರಿಗಣಿಸುತ್ತದೆ. ಆದರೆ ಈ ಕೆಳಗಿನ ಅಂಶಗಳನ್ನು ಪರಿಗಣಿಸುವದಿಲ್ಲ. ಜನರ ಕ್ರೀಡೆಯ ಸಂತೋಷವನ್ನಾಗಲಿ ವಿವಾಹ ಬಂದದ ಶಕ್ತತೆಯನ್ನಾಗಲಿ ನಮ್ಮ ಸಾರ್ವಜನಿಕ ಕಛೇರಿಗಳ ಸಮಗ್ರತೆಯನ್ನಾಗಲಿ ನಮ್ಮ ಸಾರ್ವಜನಿಕ ಚರ್ಚೆಗಳ ಜಾಣ್ಮೆಯನ್ನಾಗಲಿ ಅಥವಾ ನಮ್ಮ ಸಾರ್ವಜನಿಕ ಕಛೇರಿಗಳ ಸಮಗ್ರತೆಯನ್ನಾಗಲಿ ಒಳಗೊಂಡಿಲ್ಲ, ಇದು ನಮ್ಮ ಹಾಸ್ಯ ಪ್ರಜ್ಞೆಯಾಗಲಿ ಅಥವಾ ಧೈರ್ಯವನ್ನಾಗಲಿ ಅಳತೆ ಮಾಡುವುದಿಲ್ಲ ನಮ್ಮ ಬುದ್ಧಿಮತ್ತೆಯನ್ನು ಅಳೆಯುವುದಿಲ್ಲ ಸಂಕ್ಷಿಪ್ತದಲ್ಲಿ ಹೇಳುವದಾದರೆ. ಇದು ನಮ್ಮ ಜೀವನವನ್ನು ಜೀವಿಸಲು ಯೊಗ್ಯರನ್ನಾಗಿಸುವ ಅಂಶಗಳನ್ನು ಬಿಟ್ಟು ಉಳಿದೆಲ್ಲವನ್ನು ಅಳೆಯುತ್ತದೆ. ಇದು ಅಮೇರಿಕದ ಬಗ್ಗೆ ಎಲ್ಲವನ್ನು ಹೇಳಬಹುದಾದರು, ನಾವೇಕೆ ಅಮೇರಿಕನರೆಂದು ಹೆಮ್ಮೆ ಪಡುತ್ತೇವೆ ಎಂಬುದನ್ನು ಹೇಳುವದಿಲ್ಲ ಎಂಬ ಅಂಶವನ್ನು ಹೊರಹಾಕುತ್ತದೆ.[೩]

ಭಾರತದಲ್ಲಿ ಜನರ ಆರೋಗ್ಯ ಮತ್ತು ಜಿ.ಡಿ.ಪಿ.ಯನ್ನು ವಿಶ್ಲೇಷಿಸುತ್ತಾ ನೀವು ಆರೋಗ್ಯ ವಂತರಾಗಿದ್ದರೆ ದೇಶದ ಜಿ.ಡಿ.ಪಿ. ಏರುವುದೇ ಇಲ್ಲ ಗೊತ್ತ. ಜಿ.ಡಿ.ಪಿ. ಹೆಚ್ಚಾಗಬೇಕೆಂದರೆ ನೀವು ಕಾಯಿಲೆ ಬೀಳಬೇಕು. ರೋಗಸ್ತರ ಸಂಖ್ಯೆ, ಹೆಚ್ಚಾಗಬೇಕು, ಅಂಬುಲೆನ್ಸ್‌ಗಳ ಸಂಖ್ಯೆ ಹೆಚ್ಚಾಗಬೇಕು. ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಬೇಕು, ಡಯಾಗ್ನೋಸ್ಟಿಕ್ ಸೆಂಟ್‌ರಗಳ ಸಂಖ್ಯೆ ಹೆಚ್ಚಾಗಬೇಕು ಇವೆಲ್ಲವು. ಜಿ.ಡಿ.ಪಿ.ಯನ್ನು ಏರಸುತ್ತವೆ. ಭಾರತ ಈಗ ಜಗತ್ತಿನಲ್ಲೆ ಅತಿ ವೇಗದ ಜಿ.ಡಿ.ಪಿ. (ರಾಷ್ಟ್ರ ನಿವ್ವಳ ಅಂತಂಕ ಉತ್ಪನ್ನ) ಏರಿಕೆಯನ್ನು ಸಾಧಿಸಿದ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ಪಡೆಯಲು ಹೊರಟಿದೆ. ಮೂರು ವರ್ಷಗಳ ಹಿಂದೆ ಜಿ.ಡಿ.ಪಿಯ ವಾರ್ಷಿಕ ಎರಿಕೆ ಶೇ ೪.೭ ರಷ್ಟು ಇದ್ದದ್ದು ಶೇ. ೫ರ ಮನೆಯನ್ನು ದಾಟಿ. ಇದೀಗ ೬.೯ಕ್ಕೆ ಏರಿದೆ. ಈ ವರ್ಷಕೊನೆಯಲ್ಲಿ ಅದು ಇನ್ನು ಮೇಲಕ್ಕೇರಿ ೭.೫ ದಾಟಿ ೨೦೧೬ಕ್ಕೆ ಚೀನಾವನ್ನಾ ಹಿಂದಿಕ್ಕಾವ ಸಾದ್ಯತೆಯಿದೆ. ಈ ಏರಿಕೆಯಲ್ಲಿ ಸತ್ಯಂಶವಿದ್ದರೆ. ಐ.ಎಂ.ಎಫ್. ತಂಡದಿಂದ ಸದ್ಯದಲ್ಲೆ ನಮಗೆ ಶಭಾಸ್‌ಗಿರಿ ಸಿಗಲಿದೆ. ಆದರೆ ಸಾಮಾನ್ಯ ಬದುಕಿನ ಗುಣಮಟ್ಟಕ್ಕೂ ಈ. ಜಿ.ಡಿ.ಪಿ.ಗೂ ತಾಳಮೇಳವೆ ಇಲ್ಲವಲ್ಲ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ ತೀರಾ ಕೆಳಗೆ ಅಂದರೆ ೧೩೫ನೇ ಸ್ಥಾನದಲ್ಲಿದೆ. ಒಟ್ಟು ೭೮ ಜಾಗತೀಕ ಹಸಿವಿನ ಸೂಚ್ಯಂಕದಲ್ಲಿಯೂ ನಮ್ಮ ದೇಶದ ಸೂಚ್ಯಂಕ ೫೭ರಷ್ಟು ಕೆಳಗಿದೆ. ಸದಾ ಬರಗಾಲ, ಕ್ಷಾಮ ಡಾಮರಗಳಿಂದ ತತ್ತರಿಸುತಿರುವ ಇಥೋಪಿಯಾ, ಘಾನ, ರುವಾಂಡಗಳಿಗಿಂತ ಕೆಳಗಿನ ಸ್ಥಾನದಲ್ಲಿ ನಾವಿದ್ದೆವೆ. ಆದರೂ ಜಿ.ಡಿ.ಪಿ ಏರಿಕೆಯನ್ನಷ್ಟೆ ನಮ್ಮ ರಾಷ್ಟ್ರದ ವಕ್ತಾರರು ಹೇಮ್ಮೆಯಿಂದ ಠೆಂಕರಿಸುತ್ತಾರೆ. ಅರ್ಥಶಾಸ್ತ್ರದ ವಿಶ್ಲೇಷಣೆಯಲ್ಲಿ ಇಂತಹ ವಿರೋದಭಾಸ ಇರುವದಿರಿಂದಲೆ ತುಂಬಾ ಹಿಂದೆ. ಥಾಮಸ್ ಕಾರ್ಲೈಲ್ ಎಂಭಾತ ಅಥಶಾಸ್ತ್ರವನ್ನು "ವಿಷಣ್ಣ ವಿಜ್ಞಾನ" (ಡಿಸ್ಮಲ್ ಸೈನ್ಸ್) ಎಂದು ಕರೆದಿದ್ದಾನೆಂದು ಕಾಣುತ್ತದೆ. ಜಿ.ಡಿ.ಪಿ. ಗೂ ಸುಸ್ಥಿರ ಬದುಕಿಗೂ ಸಂಬಂಧವೆ ಇಲ್ಲ ಎಂಬುದಕ್ಕೆ ಇನ್ನು ಬಹಳಷ್ಟು ಉದಾಹರಣೆಗಳಿವೆ. ಒಂದು ಮರ ತಾನಾಗಿ ಬೆಳೆದು ನಿಂತಿದ್ದರೆ. ಅದು ಜಿ.ಟಿ.ಡಿ. ವೃದ್ದಿಗೆ ಎನುನ್ನು ಕೊಡಲಾರದು. ಮರವನ್ನು ಕಡಿದು ಶಾಮಿಲ್ಲಿಗೆ ಸಾಗಿಸಿ, ಸೀಳಿ ಹಲಗೆ, ಕಪಾಟು, ಕುರ್ಚಿ ಮಂಚಮಾಡಿ ಅದಕ್ಕೆ ವಾರ್ನಿಸ್ ಬಣ್ಣ ಹಚ್ಚಿದಾಗ ಆಗ ಅದಕ್ಕೆ ಒಂದು

ಬೆಲೆ ಬರುತ್ತದೆ. ಅದು ಮಾರಾಟವಾಗುತ್ತದೆ. ಆಗ ಜನರ ಮಧ್ಯೆ ಹಣದ ಚಲಾವಣೆಯಾಗುತ್ತದೆ, ಇದರಿಂದ ಜಿ.ಡಿ.ಪಿ. ಏರುತ್ತದೆ. ತನ್ನ ಪಾಡಿಗೆ ತಾನು ಆಮ್ಲಜನಕವನ್ನೋ ಹಣ್ಣು-ಹಂಪಲಗಳನ್ನು ನೆರಳನ್ನು ಆಸರೆಯನ್ನು ನೀಡುತ್ತಾ ಸಮೃದ್ಧಿಯ ನೆಮ್ಮದಿಯ ಮಳೆಗರೆಯುತ್ತಿದ್ದಾರೆ. ಆದರಿಂದ ಜಿ.ಡಿ.ಪಿ.ಗೆ ಏನೂ ಕೊಡುಗೆ ಇರುವುದಿಲ್ಲ. ಅಷ್ಟೆ ಅಲ್ಲ ಆ ಮರವನ್ನು ಕಡಿದ ಮೇಲೆ ನಿಸರ್ಗಕ್ಕಾಗುವ ಹಾನಿಯ ಬಗ್ಗೆ ವ್ಯವಸ್ಥೆಯ ಜಿ.ಡಿ.ಪಿ.ಯ ಲೆಕ್ಕಾಚಾರದಲಿಲ್ಲ. ಅದೇ ರೀತಿಯಾಗಿ ಕೊಳವೆ ಭಾವಿಗಳ ಸಂಖ್ಯೆ ಹೆಚ್ಚಿದಷ್ಟು ಜಿ.ಡಿ.ಪಿ. ಏರುತ್ತದೆ. ಬರಗಾಲ ಬಂದು ನೀರಿನ ಟ್ಯಾಂಕಗಳ ಸಂಖ್ಯೆ ಹೆಚ್ಚಾದಷ್ಟು ಅದು ಏರುತ್ತದೆ. ಅತಿವೃಷ್ಟಿ, ಚಂಡಮಾರುತ, ಭೂಕಂಪ, ಸಂಕ್ರಾಮಿಕ ರೋಗದಿಂದಲೂ ಅದು ಏರುತ್ತದೆ. ಸಮಾಜದಲ್ಲಿ ಪ್ರಕ್ಷುಬದ್ದತೆ ಹೆಚ್ಚಾಗಿ ಕಳವು, ಕೊಲೆ, ಸುಲಿಗೆ, ದರೋಡೆ, ಅಪರಾದ ಸಂಖ್ಯೆ ಹೆಚ್ಚಿದಷ್ಟು ಅದು ಏರುತ್ತದೆ. ಅಂದರೆ ಜೈಲುಗಳ ಸಂಖ್ಯೆ ಎರಿದಷ್ಟು ಜಿ.ಡಿ.ಪಿ. ಹೆಚ್ಚುತ್ತದೆ. ಕೌಟುಂಬಿಕ ಕಲಹ, ವಿವಾಹ, ವಿಚ್ಚೇದನ, ಅನಾಥಲಯ, ವೃದ್ದಾಶ್ರಮಗಳ ಸಂಖ್ಯೆ ಏರಿದಂತೆಲ್ಲ. ಜಿ.ಡಿ.ಪಿ. ಏರುತ್ತದೆ. ಇದು ಜಿ.ಡಿ.ಪಿಯ ವಾಸ್ತವಿಕ ಸ್ಥಿತಿ ಆದರೂ ಸರಕಾರ ಮತ್ತು ಅರ್ಥಶಾಸ್ತ್ರಜ್ಞರು ಜಿ.ಡಿ.ಪಿ.ಯ ಬೆನ್ನ ಹಿಂದೆ ಬಿದ್ದಿರುವ ಕಾರಣ ಅರ್ಥವಾಗದ ಸಂಗತಿಯಾಗಿದೆ. ಯಾವುದರಿಂದ ಜಿ.ಡಿ.ಪಿ. ಹೆಚ್ಚಾಗುತ್ತದೆ. ಎಂಬುದನ್ನು ನಾವು ಈಗಾಗಲೆ ನೋಡಿದ್ದೇವೆ ಅಂದರೆ ಪರಿಸರ ಹಾಳಾದರೆ ಸರಕಾರಕ್ಕೆ ಜಿ.ಡಿ.ಪಿ. ಹೆಚ್ಚಾಗುತ್ತದೆ. ಅದೇ ಹಣದಿಂದ ಸರಕಾರ ಪರಿಸರ ಉಳಿಸಲಿಕ್ಕೆ ಪ್ರಯತ್ನ ಮಾಡುತ್ತದೆ.

ಸಮಾಜದಲ್ಲಿ ಅಶಾಂತಿ, ಗಲಭೆ. ದಂಗೆಗಳು ಹೆಚ್ಚಾದರೆ ಜಿ.ಡಿ.ಪಿ. ಹೆಚ್ಚಾಗುತ್ತದೆ. ಅದೇ ಹಣದಿಂದ ಇವುಗಳನ್ನು ಹತ್ತಿಕಲು ಸರಕಾರ ಪ್ರಯತ್ನಿಸುತ್ತದೆ ಮತ್ತು ಮೂರನೆಯದಾಗಿ ದೇಶದಲ್ಲಿ ಜನರು ರೋಗರುಜಿನಗಳಿಂದ ಜನರು ನರಳುತ್ತಿದ್ದರೆ ಜಿ.ಡಿ.ಪಿ ಹೆಚ್ಚಾಗುತ್ತದೆ. (ಜನರು ಆಸ್ಪತ್ರೆ, ಔಷದ ಖರೀದಿಯಿಂದ ಹಣಬರುತ್ತದೆ) ಇದೇ ಹಣದಿಂದ ಮತ್ತೆ ಜನರಿಗೆ ವಿನಿಯೋಗಿಸುತ್ತದೆ. ಇಂತಹ ಜಿ.ಡಿ.ಪಿ.ಯ ಹಿಂದೆ ಸರಕಾರ ಬೆನ್ನು ಹತ್ತಿರುವದರಿಂದ ಅದರಲ್ಲಿ ಎನಿದೆ ಮರ್ಮ ಎಂಬುದು ಸಾಮಾನ್ಯ ಜನರಿಗೆ ತಿಳಿಯುವುದೇ ಇಲ್ಲ.[೪]

ಹೀಗಾಗಿ ಜಿ.ಡಿ.ಪಿ.ಗೂ ಮತ್ತು ಮಾನವ ಅಭಿವೃದ್ಧಿಗೂ ಸಂಬಂಧವಿಲ್ಲವೆಂದು ಹೆಳಬಹುದು. ಜಿ.ಡಿ.ಪಿ.ಯ ಮುಖ್ಯವಾದ ಲಾಜಿಕ್ ಎಂದರೆ ದೊಡ್ಡ ಮಟ್ಟದ ಬಂಡವಾಳಶಾಹಿಗಳ ಸೃಷ್ಠಿ ಮತ್ತು ಅವರು ಉಳಿವಿಗಾಗಿ ಅನುಕುಲಕರ ವಾತವರಣ ಸೃಷ್ಟಿಸುವದು. ಅದೇ ರೀತಿಯಾಗಿ ಮಧ್ಯವರ್ತಿಗಳ ಸೃಷ್ಠಿ ಎಂಬಂತೆ ಕಾಣುತ್ತದೆ. ಸಾಮಾನ್ಯ ಜನರ ಜೀವನಕ್ಕೂ ಮಾತ್ತು ಜಿ.ಡಿ.ಪಿ.ಗೂ ಸಂಬಂಧವೆ ಇಲ್ಲವೇನಿಸುತ್ತದೆ. ಕೇವಲ ರಾಷ್ಟ್ರಕ್ಕೆ ಬರುವ ಅದಾಯವನ್ನು ಮಾತ್ರ ಜಿ.ಡಿ.ಪಿ ಪರಿಗಣಿಸುತ್ತದೆ. ಆದಾಯ ಹೇಗೆ ಬಂತು ಮತ್ತು ಎಲ್ಲಿಂದ ಬಂತು ಸತ್ತವರಿಂದ ಎಷ್ಟು ಬಂದಿದೆ ಮತ್ತು ಸಾಯುತ್ತಿರುವವರಿಂದ ಎಷ್ಟು ಬರುತ್ತದೆ ಎಂಬಂದರ ಬಗ್ಗೆ ಜಿ.ಡಿ.ಪಿ. ತಲೆಕೆಡಿಸಿಕೊಳ್ಳುವುದಿಲ್ಲ. ಇನ್ನೂ ಬಡವರು, ನಿರ್ಗತಿಕರ ಬಗ್ಗೆ ಜಿ.ಡಿ.ಪಿ. ಏನನ್ನು ಹೇಳುವದಿಲ್ಲ. ಅವರ ಜೀವನಮಟ್ಟ

ಸುಧಾರಿಸುವಲ್ಲಿ. ಜಿ.ಡಿ.ಪಿ.ಯಲ್ಲಿ ಮಾರ್ಗಸೂಚಿಗಳಿಲ್ಲ. ಹೀಗಾಗಿ ಜಿ.ಡಿ.ಪಿ. ಜನರ ನೆಲೆಯಲ್ಲಿ ರೂಪಗೊಳ್ಳಬೇಕು. ಅಂದಾಗ ಮಾತ್ರ ಜಿ.ಡಿ.ಪಿ. ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುವ ಸಾಧ್ಯತೆಯಿದೆ.

ಜಾಗತಿಕ ಮಾನವ ಅಭಿವೃದ್ಧಿ

ಮಾನವ ಅಭಿವೃದ್ಧಿ ಕೇವಲ ದೇಶ, ಪ್ರದೇಶಕ್ಕೆ ಸಂಬಂಧಪಟ್ಟಿದ್ದಲ್ಲ, ಇಡೀ ಜಗತ್ತಿಗೆ ಸಂಬಂಧಿಸಿದಾಗಿದೆ. ಹೀಗಾಗಿ ಯು.ಎನ್.ಡಿ.ಪಿ. ಮೇ ೬ರಂದು ೨೦೧೫ ಮಾನವನ ಏಳಿಗೆ ಮತ್ತು ಉಳಿವಿಗಾಗಿ ಜಾಗತೀಕಮಟ್ಟದ ಚರ್ಚೆಯ ಫಲವಾಗಿ ೧೯೯೦ರಲ್ಲಿ ಯು.ಎನ್.ಡಿ.ಪಿಯ ಮೊದಲ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿತು. ಅದೇ ರೀತಿಯಾಗಿ ಜಗತ್ತಿನ ಬಹುತೇಕ ರಾಷ್ಟ್ರ, ರಾಜ್ಯಗಳು ಮಾನವ ಅಭಿವೃದ್ಧಿಗೆ ಒತ್ತು ನೀಡಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದವು. ಅಂದಿನಿಂದ ಇಂದಿನವರೆಗೆ ಯು.ಎನ್.ಡಿ.ಪಿ.ಯು ಮೊದಲ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸುತ್ತಲೆ ಇದೆ. ಅದರಲ್ಲಿ ಪ್ರಮುಖವಾಗಿ ಮಾನವ ಅಭಿವೃದ್ಧಿಯನ್ನು ಪ್ರಾದೇಶಿಕವಾಗಿ ಗಮನಿಸಿದ್ದರೆ ಭಾರಿ ಪ್ರಮಾಣದ ವ್ಯತ್ಯಾಸವನ್ನು ಕಾಣಬಹುದು.

ಕೋಷ್ಟಕ ೬.೧. ಪ್ರಾದೇಶಿಕ ಲಿಂಗ ಅಭಿವೃದ್ಧಿ ಮೌಲ್ಯ ೨೦೧೪

ಕ್ರಸಂ	ಪ್ರದೇಶ	ಹೆಣ್ಣು	ಗಂಡು	ಹೆಚ್.ಡಿ.ಐ. ಮೌಲ್ಯ ಗಂಡು–ಹೆಣ್ಣು
೧	ಆರಬ್ ರಾಷ್ಟಗಳು	೦.೬೧	೦.೭೨	೦.೮೪೨
೨	ಪೂರ್ವಏಷ್ಯಾ ಮತ್ತು ಪೆಸಿಸಿನ್	೦.೬೯	೦.೭೩	೦.೯೪೮
೩	ಯುರೋಜ್ & ಕೇಂದ್ರ ಏಷ್ಯ	೦.೭೨	೦.೭೬	೦.೯೪೫
೪	ಲ್ಯಾ–ಅಮೇರಿಕ & ಕೆರೆಬಲಿಯಾನ್	೦.೭೪	೦.೭೫	೦.೯೭೬
೫	ದಕ್ಷಿಣ ಏಷ್ಯ	೦.೫೩	೦.೬೬	೦.೮೦೧
೬	ಸಬ್. ಸಹಾರ ಆಫ್ರಿಕನ್ ಆಹಾರಗಳು	೦.೪೮	೦.೫೫	೮೭೨

ಯು.ಎನ್.ಡಿ.ಪಿ ಮಾನವ ಅಭಿವೃದ್ಧಿ ವರದಿ ೨೦೧೫

ಈ ಮೇಲೆ ತೋರಿಸಲಾದ ಕೋಷ್ಟಕದ ಪ್ರಕಾರ ಜಾಗತೀಕ ಮಟ್ಟದಲ್ಲಿ ಮಾನವ ಅಭಿವೃದ್ಧಿಯನ್ನು ಗಮನಿಸುವದಾದರೆ. ಆರು ಪ್ರಾದೇಶಿಕ ವಿಭಾಗದಲ್ಲಿ ದಕ್ಷಿಣ ಏಷ್ಯದಲ್ಲಿ ಅತ್ಯಂತ ಕಡಿಮೆ ಮಾನವ ಅಭಿವೃದ್ಧಿಯನ್ನು ಸೂಚಿಸುತ್ತದೆ. ಸಬ್ ಸಹರಾ ಆಫ್ರಿಕನ್ ರಾಷ್ಟ್ರಗಳಲ್ಲಿ ಮಾತ್ರ ಹೆಣ್ಣು ಮಕ್ಕಳು ೦.೪೮೦ ಮಾನವ ಅಭುವೃದ್ಧಿ ಸೂಚಿಯನ್ನು ಹೊಂದಿದ್ದಾರೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಮಕ್ಕಳು ದುರಸ್ಥಿತಿಯಲ್ಲಿದೆ, ಎಂಬುದನ್ನು ಸೂಚಿಸುತ್ತಾರೆ ಅದೇ ರೀತಿಯಾಗಿ ಆರಬ್ ರಾಷ್ಟ್ರಗಳ ಹೆಣ್ಣು ಮಕ್ಕಳ ದಯನೀಯ ಸ್ಥಿತಿಯನ್ನು ಸೂಚಿಸುತ್ತದೆ, ಆದರೆ ದಕ್ಷಿಣ ಏಷ್ಯದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳುಗಳ ದಯನೀಯ ಸ್ಥಿತಿಯನ್ನು ಸೂಚಿಸುತ್ತದೆ. ಲ್ಯಾಟೀನ್ ಅಮೇರಿಕಾ ಮತ್ತು ಕೆರೆಬಿಯನ್

ರಾಷ್ಟ್ರಗಳಲ್ಲಿ ಮಾತ್ರ ಮಾನವ ಅಭಿವೃದ್ಧಿ ಸೂಚ್ಯಂಕವು ಗಣನೀಯ ಪ್ರಗತಿಯನ್ನು ಸೂಚಿಸುತ್ತದೆ, ಏಕೆಂದರೆ ಎಲ್ಲಾ ಪ್ರದೇಶಿಕ ಮತ್ತು ಜಾಗತೀಕವು ಮಟ್ಟಕ್ಕೆ ಹೋಲಿಸಿದ್ದಾರೆ (೦.೯೭೬) ಅತಿ ಹೆಚ್ಚು ಪ್ರಗತಿ ಪಥದಲ್ಲಿದೆ ಎಂದು ಎಚ್.ಡಿ.ಐ ಸೂಚಿಸುತ್ತದೆ. ಅದೇ ರೀತಿಯಾಗಿ ಜಾಗತೀಕ ಹಸಿವಿನ ಸೂಚ್ಯಂಕವು ಇದೆ ಅಂಕಿ-ಅಂಶಗಳನ್ನು ಹೊರಹಾಕುತ್ತದೆ. ವಿಶೇಷವಾಗಿ ದಕ್ಷಿಣ ಏಷ್ಯಾದಲ್ಲಿ ಹಸಿವಿನ ಸೂಚ್ಯಾಂಕವು ಅತಿ ಹೆಚ್ಚು ಇದೆ ಮತ್ತು ಇಲ್ಲಿನ ಜನರು ಒಟ್ಟಾರೆಯಾಗಿ ಹೇಳುವುದಾದರೆ ೨೧೪೦ ಕ್ಯಾಲರಿಯಷ್ಟು ಅಹಾರವನ್ನು ಧಕ್ಕಿಸಿಕೊಳ್ಳಲು ಆರ್ಹರಾಗಿದ್ದರೆ. ಇದರಿಂದಾಗಿ ಈ ಪ್ರದೇಶದಲ್ಲಿ ಅದರಲ್ಲಿ ಭಾರತದಲ್ಲಿ ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಸಹ ವರದಿಯಲ್ಲಿ ತಿಳಿಸಲಾಗಿದೆ.

ಅದೇ ರೀತಿಯಾಗಿ ೨೦೧೫ರ ಯು.ಎನ್.ಡಿ.ಪಿ ಮಾನವ ಅಭಿವೃದ್ಧಿ ವರದಿ ಪ್ರಕಾರ ಭಾರತದಲ್ಲಿ ನೀರುದ್ಯೋಗ ಪ್ರಮಾಣ ೧೮೮ ದೇಶಗಳ ಪೈಕಿ. ೧೩೦ನೇ ಸ್ಥಾನದಲ್ಲಿದೆ ಮತ್ತು ೨೦೦೫ ರಿಂದ ೨೦೧೩ರ ಅವದಿಯಲ್ಲಿ ಭಾಲಕಾರ್ಮಿಕರ ಪ್ರಮಾಣ ೧೧.೦೮ ಇದೆ. ಹೀಗಾಗಿ ಜಾಗತೀಕ ಮಟ್ಟದಲ್ಲಿ ದಕ್ಷಿಣ ಏಷ್ಯದಲ್ಲಿ ಅದರಲ್ಲಿ ವಿಶೇಷ ಭಾರತದಲ್ಲಿ ಬಡತನ, ಹಸಿವು, ನಿರುದ್ಯೋಗ ಮತ್ತು ಅಪೌಷ್ಠಿಕತೆ, ಈ ಪ್ರದೇಶದಲ್ಲಿನ ಜನರನ್ನು ಹೆಚ್ಚಾಭಾದಿಸುತ್ತಿದೆ ಎಂದು ವರದಿಯಲ್ಲಿ ಉಲ್ಲೆಖಿಸಲಾಗಿದೆ. ಹೀಗಾಗಿ ಭಾರತದಲ್ಲಿ ಮಾನವ ಅಭಿವೃದ್ಧಿಯನ್ನು ಹೊಸ ಮಾನದಂಡಗಳನ್ನು ಸೃಷ್ಟಿಸಿ ನೋಡುವ ಅಗತ್ಯವಿದೆ.[೫]

ಭಾರತದಲ್ಲಿ ಮಾನವ ಅಭಿವೃದ್ಧಿಯ ಅಸಮತೋಲನ

ಮಾನವ ಅಭಿವೃದ್ಧಿಗೆ ಸಂಬಂಧಪಟ್ಟಂತೆ ದೇಶ, ಪ್ರದೇಶಗಳನ್ನು ಗಮನಿಸಿದರೆ ಬರಿ ಅಸಮತೋಲನ ಮಾತ್ರ ಹೊರಹಾಕುತ್ತಿವೆ. ಮಾನವ ಅಭಿವೃದ್ಧಿಯ ಮಾನದಂಡಗಳನ್ನು ಗಮನಿಸಿದರೆ, ರಾಷ್ಟ್ರಮಟ್ಟದಲ್ಲಿ ಪ್ರಾದೇಶಿಕ ಮಟ್ಟ ಭಾರಿ ಅಂತರವನ್ನು ಗುರುತಿಸಬಹುದು. ಮಾನವ ಅಭಿವೃದ್ಧಿ ಅಸಮತೋಲನವನ್ನು ಈ ಕೆಳಗಿನ ಕೊಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೬.೨. ಭಾರತದಲ್ಲಿ ಮಾನವ ಅಭಿವೃದ್ಧಿಯ ಅಸಮತೋಲನ

ಭಾರತದ ರಾಜ್ಯಗಳು, ಕರ್ನಾಟಕದ ಜಿಲ್ಲೆಗಳು.	ಮಾನವ ಅ.ಸೂ. – ೧೯೯೧	ಶ್ರೇಣಿ	ಮಾನವ ಅಭಿವೃದ್ದಿ ಸೂ. –೨೦೦೧	ಶ್ರೇಣಿ
ಉತ್ತರಪ್ರದೇಶ	–	–	೦.೫೩೫	–
ಕೇರಳ	–	–	೦.೭೪೬	–
ಕರ್ನಾಟಕ	೦.೫೧೪	–	೦.೬೫	–
ಬೆಂಗಳೂರು ನಗರ	೦.೬೨೩	೪ನೇ	೦.೭೫೩	೧ನೇ
ರಾಯಚೂರು	೦.೪೪೩	೨೭ನೇ	೦.೫೪೭	೨೭ನೇ

ಮೂಲ: ಜೀನ್ಸ್ ಲರ್ಸಿ, ಇಸಾಬೆಲ್ ಗುರಿನ್ ಮತ್ತು ರವಿಶ್ರೀವಾಸ್ತವ (೨೦೧೨)

ಮೇಲಿನ ಕೋಷ್ಟಕದಲ್ಲಿ ನೀಡಿರುವ ಅಂಕಿ ಅಂಶಗಳು ಭಾರತದ ವಿವಿಧ ರಾಜ್ಯಗಳಲ್ಲಿನ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ದಶಕ ಬೆಳವಣಿಗೆಯನ್ನು ಗಮನಕ್ಕೆ ತೆಗೆದುಕೊಂಡರೆ ವ್ಯತ್ಯಾಸವನ್ನು ಕಾಣಬಹುದು. ೨೦೧೧ರ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರಕಾರ ಭಾರತದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಬಹುತೇಕ ರಾಜ್ಯಗಳು ಅದರ ಆಸುಪಾಸಿನಲ್ಲಿಯೂ ಕೂಡ ಇಲ್ಲಾ. ೨೦೧೧ರಲ್ಲಿ ಉತ್ತರ ಪ್ರದೇಶದ ಮಾನವ ಅಭಿವೃದ್ಧಿ ಸೂಚ್ಯಾಂಕವು ೦.೫೩೫ ರಷ್ಟಿದೆ. ಅದೇ ಕಾಲಘಟ್ಟದಲ್ಲಿ ಕೇರಳ ೦.೭೯೬ ರಷ್ಟಿದೆ. ಅಂದರೆ ಒಂದೇ ದೇಶದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಮಾನವನ ಅಭಿವೃದ್ಧಿಯಲ್ಲಿ ಅಸಮತೋಲನ ಮತ್ತು ಅಂತರವನ್ನು ಕಾಣಬಹುದು..

ಅದರಂತೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಾನವ ಆಭಿವೃದ್ಧಿ ಸೂಚ್ಯಾಂಕವನ್ನು ಗಮನಿಸುವುದಾದರೆ, ೧೯೯೧ರಲ್ಲಿ ೦.೫೧೮ರಷ್ಟಿದೆ. ಆದರೆ ೨೦೦೧ರಲ್ಲಿ ೦.೬೫೦ಕ್ಕೆ ದಶಕದ ಬೆಳವಣಿಗೆಯನ್ನು ನೋಡಿದರೆ ಉತ್ತಮ ಬೆಳವಣಿಗೆ ಅದರಂತೆ ಬೆಂಗಳೂರು ನಗರ ಮತ್ತು ರಾಯಚೂರು ಜಿಲ್ಲೆಗೆ ಹೋಲಿಸಿದರೆ ಭಾರಿ ಅಂತರ ಮತ್ತು ಅಸಮತೋಲನವನ್ನು ಕಾಣಬಹುದು. ೧೯೯೧ರಲ್ಲಿ ಬೆಂಗಳೂರು ನಗರ ೦.೬೬೩ರಷ್ಟಿದೆ. ಇದು ರಾಜ್ಯಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ೪ನೇ ಸ್ಥಾನದಲ್ಲಿತ್ತು. ಅದೇ ರೀತಿಯಾಗಿ ೨೦೦೧ರಲ್ಲಿ ೦.೭೫೩ರಷ್ಟು ಮಾನವ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿತು. ಅದೇ ಕಾಲದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಮಾನವ ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದಿತ್ತು. ೨೦೦೦ರಲ್ಲಿ ನಂಜುಂಡಪ್ಪ ವರದಿ ಪ್ರಕಾರ ಹೈದ್ರಾಬಾದ್ ಕರ್ನಾಟಕದ ೩೧ ತಾಲೂಕುಗಳ ಪೈಕಿ ೧ ಸಾಪೇಕ್ಷ ಅಭಿವೃದ್ಧಿ (ಗುಲ್ಬರ್ಗಾ), ೨ ಹಿಂದುಳಿದ ತಾಲೂಕು(ಬೀದರ್‌ನ ಭಾಲ್ಕಿ) ೧೦ ಹಿಂದುಳಿದ ತಾಲೂಕುಗಳು ಮತ್ತು ೧೮ ಅತ್ಯಂತ ಹಿಂದುಳಿದ ತಾಲೂಕುಗಳಿದ್ದವು. ಅದರಲ್ಲಿ ರಾಜ್ಯದಲ್ಲಿಯೇ ರಾಯಚೂರು ಅತ್ಯಂತ ಹಿಂದುಳಿದ ಜಲ್ಲೆಯೆಂದು ವರದಿ ತಿಳಿಸಿದೆ. ಹೀಗಾಗಿ ಮೇಲಿನ ಕೋಷ್ಟಕದಲ್ಲಿ ನೀಡಲಾದ ರಾಯಚೂರು ಜಿಲ್ಲೆ ಸೂಚ್ಯಾಂಕದಲ್ಲಿ ೧೯೯೧ರಲ್ಲಿ ೨೭ನೇ ಸ್ಥಾನದಲ್ಲಿತ್ತು ಮತ್ತು ೨೦೦೧ರಲ್ಲಿನ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ೨೭ನೇ ಸ್ಥಾನದಲ್ಲಿತ್ತು. ಕಾರಣ ಮಾನವ ಅಭಿವೃದ್ಧಿಯೂ ಶಿಕ್ಷಣ, ಆರೋಗ್ಯ, ಆದಾಯವನ್ನು ಮಾತ್ರ ಪರಿಗಣಿಸಿದೆ. ಸಾಮಾಜಿಕ ರಚನೆ, ಅಸಮಾನತೆ, ಆರ್ಥಿಕ ಸಂಗತಿಗಳ ಪಾತ್ರ ನಿರ್ಲಕ್ಷಿಸಿದೆ. ಸಾಮಾಜಿಕ ಅಸಮಾನತೆ, ಆರ್ಥಿಕ ರಚನೆ ಮೇಲೆ ಭಾರಿ ಪರಿಣಾಮ ಉಂಟಾಗುತ್ತದೆ. ವಿಶೇಷವಾಗಿ ಮಾನವ ಅಭಿವೃದ್ಧಿಗೆ ತೊಡಕುಂಟುಮಾಡುತ್ತಿದೆ ಎಂಬುದನ್ನು ಗಮನಿಸಬೇಕಾದ ಸಂಗತಿಯಾಗಿದೆ.[೬]

ಕೋಷ್ಟಕ ೬.೩. ಭಾರತದಲ್ಲಿನ ಸಾಮಾಜಿಕ ಗುಂಪುಗಳಲ್ಲಿ ಮಾನವ ಅಭಿವೃದ್ಧಿಯ ಚಿತ್ರಣ ೨೦೧೧

ಕ್ರಸಂ.	ಸೂಚಕಗಳು	ಪ.ಜಾತಿ	ಪ. ಪಂಗಡ	ಮುಸ್ಲಿಮರು	ಎಲ್ಲಾ ವರ್ಗ
೧	ಸಾಕ್ಷರತೆ	೬೩.೫	೬೦.೫	೬೭.೬	೭೨
೨	ಅಪೌಷ್ಟಿಕತೆ(ಮಹಿಳೆ)	೪೧.೨	೪೬.೬	೩೬.೨	೩೩
೩	ಕಡಿಮೆ ತೂಕದ ಮಕ್ಕಳು	೪೭.೯	೫೪.೫	೪೧.೮	೩೯.೧
೪	ಪಕ್ಕಾ ಮನೆ	೩೮,೩	೫೭.೯	೬೩.೮	೬೬.೧
೫	ಶೌಚಾಲಾಯವಿಲ್ಲದವರು	೬೫	೬೯.೧	೩೫.೮	೪೯.೨
೬	ವಿದ್ಯುತ್‌ಸೌಲಭ್ಯವಿಲ್ಲದವರು	೬೧.೨	೬೬.೨	೭೫.೨	೭೫
೭	ಐ. ಎಂ. ಆರ್	೬೬.೪	೬೨.೧	೫೨.೧	೫೦
೮	ಯು.ಎಂ.ಆರ್	೮೮.೧	೯೫.೧	೭೦	೭೪.೩
೯	ಬಿ. ಎಫ್. ಆರ್	೨.೯೨	೩.೧೨	೩.೦೯	೨.೬
೧೦	ಮಕ್ಕಳ ರೋಗನಿರೋಧಕತೆ	೩೯.೭	೫,೪	೩೬.೩	೪೩.೫

ಆಧಾರ: Indian Human Development report 2011 towards social inclusion institute of applied manpower research planning commission government of India page-5.

ಇದು ಭಾರತದ ಎರಡನೇ ಮಾನವ ಅಭಿವೃದ್ಧಿ ವರದಿ ಪ್ರಕಾರ ಈ ವರದಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಮುಸ್ಲಿಮರ ೧೦ ವರ್ಷಗಳ ಮಾನವ ಅಭಿವೃದ್ಧಿಗೆ ಸಂಬಂಧಿಸಿದೆ. ಬಡತನ, ಉದ್ಯೋಗ, ಅಪೌಷ್ಟಿಕತೆ, ಅನಾರೋಗ್ಯ, ವಿದ್ಯುತ್ ಸೌಲಭ್ಯಗಳ ಕೊರತಗೆ ಸಂಬಂಧಿಸಿದಂತೆ ವಿವರ ನೀಡುವುದರ ಜೊತೆಗೆ ಸಾಮಾಜಿಕ ಗುಂಪುಗಳ ದುಸ್ಥಿತಿಯ ಚಿತ್ರಣವನ್ನು ಹೊರಹಾಕುತ್ತದೆ. ಒಟ್ಟಾರೆಯಾಗಿ ಪರಿಶಿಷ್ಟರು ಮೂಲಭೂತ ಅವಶ್ಯಕತೆಗಳನ್ನು ಪಡೆಯುವಲ್ಲಿ ಅಥವಾ ಸೃಷ್ಟಿಸಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದಾರೆ ಎಂಬುದು ಗೋಚರಿಸುತ್ತದೆ. ಹಾಗೆಂದ ಮಾತ್ರಕ್ಕೆ ಮೂಲಭೂತ ಅವಶ್ಯಕತೆಗಳು ಇಲ್ಲವೆಂದು ಅರ್ಥವಲ್ಲ. ಜನರು ತಡೆಯುವಲ್ಲಿ ಮತ್ತು ಜಾರಿಗೊಳಿಸುವಲ್ಲಿ ಇರುವ ತೊಂದರೆಗಳನ್ನು ನಿವಾರಿಸಿದರೆ ಎಲ್ಲರೂ ಮಾನವ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳಲು ಸಾಧ್ಯವಿದೆ.[೬]

ಡಾ. ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ಕರ್ನಾಟಕದಲ್ಲಿ ೨೦೦೨ರಲ್ಲಿರುವ ಪ್ರಾದೇಶಿಕ ಅಸಮಾಮನತೆಯನ್ನು ಹೊರಹಾಕುತ್ತಾ. ಹೈದರಾಬಾದ ಕರ್ನಾಟಕದಲ್ಲಿ ಗುಲ್ಬರ್ಗಾ ತಾಲೂಕು ಮಾತ್ರ ಸಾಪೇಕ್ಷ ಅಭಿವೃದ್ಧಿಯನ್ನು ಸಾದಿಸಿದ್ದು ಒಟ್ಟು ಹೈದರಾಬಾದ ಕರ್ನಾಟಕದ ೨೯ ತಾಲೂಕುಗಳ ಪೈಕಿ ೨೮ ತಾಲೂಕುಗಳು ಹಿಂದುಳಿದ ೦೨ ಅತೀ ಹಿಂದುಳಿದ ೦೫ ಮತ್ತು ಅತ್ಯಂತ ಹಿಂದುಳಿದ ೨೧ ತಾಲೂಕಗಳು ಪಟ್ಟಿಯಲ್ಲಿದ್ದವು. ಈ ರೀತಿಯ ದುಃಸ್ಥಿತಿಯನ್ನು ಸಮಿತಿ ಹೊರಹಾಕಿತು, ಹೀಗಾಗಿ ಹೈದಾರಬಾದ್ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯ ತೀವ್ರತೆಯನ್ನು ಕಾಣಬಹುದು.

ಕೋಷ್ಟಕ ೬.೪. ೨೦೦೫ರ ಮಾನವ ಅಭಿವೃದ್ಧಿ ವರದಿ ಪ್ರಕಾರ ಪ್ರಾದೇಶಿಕ ಅಸಮಾನತೆ

ಪ್ರದೇಶ	ಅತ್ಯಂತ ಹಿಂದುಳಿದ ತಾಲೂಕು	ಅತಿ ಹಿಂದುಳಿದ ತಾಲೂಕು	ಹಿಂದುಳಿದ ತಾಲೂಕು	ಒಟ್ಟು
ಹೈದ್ರಾಬಾದ್ ಕರ್ನಾಟಕ	೨೧	೫	೨	೨೮
ಬಾಂಬೆ ಕರ್ನಾಟಕ	೫	೧೨	೧೪	೩೧
ಉತ್ತರ ಕರ್ನಾಟಕ	೨೬	೧೭	೧೬	೫೯
ದಕ್ಷಿಣ ಕರ್ನಾಟಕ	೧೩	೨೩	೧೯	೫೫
ಒಟ್ಟು	೬೫	೫೭	೫೧	೧೭೩

ಆಧಾರ : Higher power committee redressal of regional imbalance June 2002.

ಅಲ್ಲದೆ. ಪ್ರಾದೇಶಿಕ ಅಸಮಾನತೆ ತರುವ ಮಾನವ ಸಹ ಅಷ್ಟೇ ಹೀನವಾದದು, ಜಗತ್ತಿನ ಎಲ್ಲಾ ದೇಶ ಪ್ರದೇಶಗಳಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಬಿನ್ನತೆಗಳಿರುತ್ತವೆ. ಆದರೆ ಹೈದರಾಬಾದ್ ಕರ್ನಾಟಕ ಸ್ಥಿತಿ ಬೇರೆಯದೆ ಹೊರಹಾಕುತ್ತದೆ. ಮುಖ್ಯವಾಗಿ ಈ ಪ್ರದೇಶದಲ್ಲಿ ಶಿಕ್ಷಣ ಆರೋಗ್ಯ ಮತ್ತು ಆದಾಯ ಅತ್ಯಂತ ಕೆಳಮಟ್ಟದಲ್ಲಿದೆ. ಎಂದು ಅನೇಕ ವರದಿಗಳನ್ನು ಸಹ ಕಾಣಬಹುದು. ಹೀಗಾಗಿ ಈ ಪ್ರದೇಶದ ಅಭಿವೃದ್ಧಿಗೆ, ಈಗ ಪ್ರಯತ್ನಗಳು ನಡೆಯುತ್ತಿವೆ.[೮]

ಕರ್ನಾಟಕದ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಪ್ರಾದೇಶಿಕ ಅಸಮಾನತೆಯ ನೆಲೆಯಲ್ಲಿ ವಿಶ್ಲೇಷಿಸುತ್ತಾ ಡಾ. ಡಿ.ಎಂ. ನಂಜುಡಪ್ಪ. ಅಧ್ಯಕ್ಷತೆಯಲ್ಲಿನ ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನದ ಉನ್ನತಾಧಿಕಾರಿ ಸಮಿತಿಯು ತನ್ನ ವರದಿಯಲ್ಲಿ ೨೦೦೨ರಲ್ಲಿ ವಸ್ತುನಿಷ್ಠವಾಗಿ ಮಾಪನ ಮಾಡಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಿತು. ಕರ್ನಾಟಕ ಸರಕಾರವು ೧೯೯೯ರಲ್ಲಿ ಪ್ರಕಟಿಸಿರುವ ಕರ್ನಾಟಕ ಮಾನವ ಅಭಿವೃದ್ಧಿ ವರದಿ ಇದನ್ನು ದೃಡಪಡಿಸಿತು. ಡಾ. ಡಿ.ಎಂ. ನಂಜುಡಪ್ಪ ವರದಿ ಪ್ರಕಾರ ರಾಜ್ಯದಲ್ಲಿ ಒಟ್ಟು ಹಿಂದುಳಿದಿರುವಕೆ ಸೂಚ್ಯಂಕ ಶೇ ೨೦.೨೬ ಇದರಲ್ಲಿ ಹೈದರಾಬಾದ್ ಕರ್ನಾಟಕ ಪಾಲು ಶೇ.೪೦ ಬೆಳಗಾವಿ ವಿಭಾಗದ ಪಾಲು ಶೇ. ೨೦ ಬೆಂಗಳೂರು ವಿಭಾಗದ ಪಾಲು ಶೇ. ೨೫ ಮತ್ತು ಮೈಸೂರು ವಿಭಾಗದ ಪಾಲು ಶೇ. ೧೫. ಕರ್ನಾಟಕದ ೩೦ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳು ೨೦೧೪ ರಲ್ಲಿ ಪ್ರಕಟಕವಾಗಿದೆ. ಇವುಗಳು ಸಹ ರಾಜ್ಯದಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ಖಚಿತವಾಗಿ ತೋರಿಸಿವೆ. ಅದರಲ್ಲಿ ಅತ್ಯಂತ ಉನ್ನತ ಸೂಚ್ಯಂತ ಶೇ ೦.೯೨೮ ಬೆಂಗಳೂರು ನಗರ ಜಿಲ್ಲೆಯಲ್ಲಿದ್ದರೆ. ಅತ್ಯಂತ ಕನಿಷ್ಠ ಸೂಚ್ಯಂಕ ಶೇ. ೦.೧೬೫ ರಾಯಚೂರು ಜಿಲ್ಲೆಯಲ್ಲಿದೆ/ ಕನಿಷ್ಠ ಸೂಚ್ಯಂಕದ ಎಂಟು ಮತ್ತು ಉನ್ನತ ಸೂಚ್ಯಂಕದ ಏಳು ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಇದನ್ನು ರಾಜ್ಯ ಮಟ್ಟದಿಂದ ಪ್ರಾದೇಶಿಕ

ಮಟ್ಟ ಮತ್ತು ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕ ನೀಡಲಾಗಿದೆ, ಇದರಿಂದ ಗರಿಷ್ಠ ಮತ್ತು ಕನಿಷ್ಠ ಸೂಚ್ಯಂಕಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ.

ಕೋಷ್ಟಕ ೬.೫. ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ ೨೦೧೪

ಕ್ರಸಂ	ಉನ್ನತ ಸೂಚ್ಯಂಕದ ಜಿಲ್ಲೆಗಳು (೦.೬೦೦)	ಮಾನವ ಅಭಿವೃದ್ಧಿ ಸೂಚ್ಯಂಕ	ಕನಿಷ್ಠ ಸೂಚ್ಯಂಕದ ಜಿಲ್ಲೆಗಳು (೦.೪೦೦)	ಮಾನವ ಅಭಿವೃದ್ಧಿ ಸೂಚ್ಯಂಕ
೧	ಬೆಂಗಳೂರು(ನಗರ)	೦.೯೨೮	ಚಿತ್ರದುರ್ಗಾ	೦.೩೮೬
೨	ದಕ್ಷಿಣ ಕನ್ನಡ	೦.೬೯೧	ಬಾಗಲಕೋಟೆ	೦.೩೫೪
೩	ಉಡುಪಿ	೦.೬೭೫	ಬಳ್ಳಾರಿ	೦.೩೫೪
೪	ಕೊಡಗು	೦.೬೫೮	ಗದಗ	೦.೩೫
೫	ಚಿಕ್ಕ ಮಗಳೂರು	೦.೬೨೭	ವಿಜಯಪುರ	೦.೩೨೯
೬	ದಾರವಾಡ	೦.೬೧	ಕೊಪ್ಪಳ	೦.೨೮
೭	ಬೆಂಗಳೂರು(ಗ್ರಾಮೀಣ)	೦.೬೦೩	ಯಾದಗಿರಿ	೦.೧೯೯
೮	--	–	ರಾಯಚೂರು	೦.೧೬೫

ಆಧಾರ: ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು ೨೦೧೬ ಪುಟ ೧೨೧.

ಇಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯಗಳು ೦.೬೦೦ಕ್ಕಿಂತ ಆರ್ಥಿಕವಿರುವ ಏಳು ಜಿಲ್ಲೆಗಳು ಮತ್ತು ಸೂಚ್ಯಂಕ ೦.೪೦೦ಕ್ಕಿಂತ ಕಡಿಮೆ ಇರುವ ಎಂಟು ಜಿಲ್ಲೆಗಳ ಪಟ್ಟಿಯನ್ನು ನೀಡಲಾಗಿದೆ. ಈ ಏಳು ಜಿಲ್ಲೆಗಳ ಜನರು ತಮ್ಮನ್ನು ತಾವು ಕರ್ನಾಟಕಸ್ಥರು ಎಂದು ಹೇಗೆ ಭಾವಿಸುತ್ತಾರೆ? ಅವರಿಗೆ ಹಿಟ್ಟು ಹೊಟ್ಟೆ ಮತ್ತು ಬಟ್ಟೆ ಮುಖ್ಯವಾಗುತ್ತದೆ ವಿನಃ ಕನ್ನಡ ಭಾಷೆ ಅಥವಾ ಕರ್ನಾಟಕ ರಾಷ್ಟ್ರಯತೆಯಲ್ಲ. ಭಾಷೆ ಜನರ ಹೊಟ್ಟೆಯನ್ನು ತುಂಬುದಿಲ್ಲ. ಈ ಕಾರಣಕ್ಕೆ ಅಂದು ಏಕೀಕರಣಕ್ಕೆ ಹೊರಾಡಿದ ಉತ್ತರ ಕರ್ನಾಟಕ ಮತ್ತು ಹೈದರಬಾದ್ ಕರ್ನಾಟಕದ ಜನರು ಮಾತನಾಡುತ್ತಿದ್ದಾರೆ. ಹೀಗಾಗಿ ಪ್ರಾದೇಶಿಕ ಅಸಮಾನತೆಯನ್ನಾ ತೊಡೆಯದೆ. ಕರ್ನಾಟಕವನ್ನು ಒಂದಾಗಿರುವದು ಕಷ್ಟವಾಗುತ್ತದೆ. ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಶಶ್ವಿಯಾಗುತ್ತಿಲ್ಲ ಎಂದಿದ್ದಾರೆ.[೮]

ಪರಿಶಿಷ್ಟರು ಮತ್ತು ಮಾನವ ಅಭಿವೃದ್ಧಿ

ಮಾನವ ಅಭಿವೃದ್ಧಿ ವರದಿಗೆ ೨೫ ವರ್ಷಗಳು ಸಂದಿವೆ. ಮಾನವ ಅಭಿವೃದ್ಧಿಯಲ್ಲಿ ಸುಮಾರು ೨೫ ವರ್ಷಗಳಲ್ಲಿ ಹಲವಾರು ಏರುಪೇರುಗಳು ಆಗಿವೆ. ಆದರೆ ಮಾನವ ಅಭಿವೃದ್ಧಿಗೆ ಸೃಷ್ಟಿಸಿದ ಮಾನದಂಡಗಳಲ್ಲಿ ಇಲ್ಲಿಯ ವರಗೆ ಬದಲಾವಣೆಗಳು ಆಗಿಲ್ಲ ಮುಖ್ಯವಾಗಿ ಮಾನವ ಅಬಿವೃದ್ಧಿ ಶಿಕ್ಷಣ, ಆರೋಗ್ಯ, ಆದಾಯಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ. ಅಂದರೆ ಒಂದು

ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಕ್ಷರಸ್ಥರು. ಹೆಚ್ಚಿನ ಪ್ರಮಾಣ ಆರೋಗ್ಯವಂತ ಪ್ರಜೆಗಳು ಮತ್ತು ತಲಾವರಮಾನದಲ್ಲಿ ಹೆಚ್ಚು ಜನರು ಒಳಗೊಂಡಿದ್ದಾರೆ. ಆದೇಶ ಮಾನವ ಅಭಿವೃದ್ಧಿಯಲ್ಲಿ ಪ್ರಗತಿ ಸಾದಿಸಿದೆ ಮತ್ತು ಅಭಿವೃದ್ಧಿಯಲ್ಲಿ ಮಂಚೂಣಿಯಲ್ಲಿದೆ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಸಹ ಇದನ್ನೆ ಮಾನದಂಡವನ್ನಾಗಿಟ್ಟಕೊಂಡು ಅಭಿವೃದ್ಧಿಯನ್ನು ಸಾದಿಸಲು ಹೋರಟಿದೆ, ಆದರೆ ಯಾವ ದೇಶವೂ ಕೂಡ ಮಾನವ ಅಭಿವೃದ್ಧಿಯಲ್ಲಿ ಗಣನೀಯವಾದ ಪ್ರಗತಿ ಸಾದಿಸಿಲ್ಲ. ಯಾಕೆಂದರೆ ಎಲ್ಲಾ ದೇಶ ಪ್ರದೇಶಗಳ ಪರಿಸರ ಮತ್ತು ಸನ್ನಿವೇಶಗಳು ಒಂದೇ ರೀತಿಯಾಗಿ ಇರುವದಿಲ್ಲ ಅಂದರೆ ಉದಾಹರಣೆಗೆ ಭಾರತದಲ್ಲಿ ಜಾತಿ ವ್ಯವಸ್ಥೆ ಇದೆ. ಆಫ್ರಿಕಾ ಮತ್ತು ಯುರೋಪಿನ ರಾಷ್ಟ್ರಗಳಲ್ಲಿ ವರ್ಣಬೇದ ನೀತಿಯಿದೆ. ಆರಬ್ ರಾಷ್ಟ್ರಗಳಲ್ಲಿ ಧಾರ್ಮಿಕ ಕಾನೂನು ಕಟ್ಟುಪಾಡುಗಳಿವೆ. ಇವು ಮಾನವ ಅಭಿವೃದ್ಧಿಗೆ ಎಷ್ಟು ತೊಡಕಾಗುತ್ತವೆ. ಇವು ಸಾಮಾಜಿಕ ವ್ಯವಸ್ಥೆಯಲ್ಲಿ ಎಷ್ಟೊಂದು ಅಸಮಾನತೆ ಸೃಷ್ಠಿಸಿವೆ ರಾಜಕೀಯ ಮತ್ತು ಆರ್ಥಿಕ ಸಂಗತಿಗಳ ಮೇಲೆ ಬೀರಿದ ಪರಿಣಾಮಗಳೇನು ಮತ್ತು ಇಲ್ಲಿಯವರೆಗೂ ಮಾನವ ಅಭಿವೃದ್ಧಿಯಲ್ಲಿ ಅಸಮಾನತೆಯನ್ನು ಯಾಕೆ ಕಂಡುಬರುತ್ತದೆ ಎಂಬುದರ ಬಗೆಗೆ ಮಾನವ ಅಭಿವೃದ್ಧಿ ವರದಿ ಏನು ಹೇಳುವುದಿಲ್ಲ. ಈ ಮೇಲಿನ ಅಂಶಗಳ ಮಾನವ ಅಭಿವೃದ್ಧಿ ವರದಿ ಮೇಲೆ ಬೆಳಕು ಚಲ್ಲಿದ್ದರೆ ಈ ವೇಳೆಗಾಗಲೆ ಎಲ್ಲಾ ರಾಜ್ಯ ರಾಷ್ಟ್ರಗಳು ನೀರಿಕ್ಷಿತ ಮಟ್ಟದಲ್ಲಿ ಅಲ್ಲದಿದ್ದರೂ. ಸಾದ್ಯವಾದಷ್ಟು ಮಟ್ಟಿಗೆ ಪ್ರಗತಿ ಸಾದಿಸಬಹುದಿತ್ತು. ಭಾರತದ ಮಟ್ಟಿಗೆ ಹೇಳುವದಾದರೆ ಭಾರತ ಮೂಲಭೂತವಾಗಿ ಜಾತಿಯಾಧಾರಿತ ಸಮಾಜ ಭಾರತ ಮತ್ತು ಅದರ ಸಾಮಾಜಿಕ ರಚನೆ ಏಣಿ-ಶ್ರೇಣಿಗಳಿಂದ ಕೂಡಿದೆ. ಅದರಲ್ಲಿ ಕೆಳ ಅಥವಾ ಅಸ್ಪೃಶ್ಯ ಜಾತಿಗಳು ಯಾವುದೇ ಭೂಮಿ ಬಂಡವಾಳ ಮತ್ತು ಆಧುನಿಕ ಕೌಶಲ್ಯವನ್ನು ಹೊಂದಿಲ್ಲ. ಹೀಗಾಗಿ ಮೇಲ್ವರ್ಗದವರ ಜೋತೆ ಸೇರಿಸಿ ಮಾನವ ಅಭಿವೃದ್ಧಿಯನ್ನು ನೋಡುವದು ಸರಿಯಾದ ಕ್ರಮವಲ್ಲ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಚಾರದಲ್ಲಿ ಮಾನವ ಅಭಿವೃದ್ಧಿಯನ್ನ ಶಿಕ್ಷಣ ಆರೋಗ್ಯ ಮತ್ತು ಆದಾಯದ ನೆಲೆಯಲ್ಲಿ ನೋಡುವದು ಸೂಕ್ತವಲ್ಲ ಎನಿಸುತ್ತದೆ. ಯಾಕೆಂದರೆ,

೧. ಭೂಮಿ ಆದಾಯವನ್ನು ತರುತ್ತದೆ, ೨. ಬಂಡವಾಳ ಸಾಮಾಜಿಕ ಸ್ಥಾನಮಾನ ಮತ್ತು ಸುಸ್ಥಿರ ಬದುಕಿಗೆ ಆಸ್ಥಿ ಭಾರ ಹಾಕುತ್ತದೆ, ಜೊತೆಗೆ ಶಿಕ್ಷಣ ಉದ್ಯೋಗವನ್ನು ಪಡೆಯಲು ಅನುಕೂಲ ಆಸರೆಯಾಗುತ್ತದೆ. ೩. ಆಧುನಿಕ ಕೌಶಲ್ಯವು ಉತ್ತಮ ವ್ಯಕ್ತಿ ಮತ್ತು ವ್ಯಕ್ತಿತ್ವವನ್ನು ರೂಪಿಸುತ್ತದೆ, ಇವುಗಳಿಲ್ಲದೆ, ಶಿಕ್ಷಣ ಪಡೆಯುವದು ಹೇಗೆ? ಶಿಕ್ಷಣ ಪಡೆಯಲು ಹಣ ಬೇಕು ಅಥವಾ ಉದ್ಯೋಗ ಬೇಕು. ಉತ್ತಮ ಆರೋಗ್ಯಕ್ಕೆ ಹಣಬೇಕು ಆದಾಯ ಬರಬೇಕೆಂದರೆ. ಭೂಮಿ ಅಥವಾ ಉದ್ಯೋಗ ಬೇಕು ಇವು ಇಲ್ಲದೆ. ಶಿಕ್ಷಣ ಆರೋಗ್ಯ ಆದಾಯ ಪಡೆಯುವದು ಹೇಗೆ. ಇದು ಜಗತ್ತಿನ ಎಲ್ಲಾ ದೇಶ ಸಮಾಜಗಳಲ್ಲಿ ಇರುವ ಸಮಸ್ಯೆ. ಹೀಗಾಗಿ ಭಾರತದಲ್ಲಿ ಸಾಮಾಜಿಕ ಅಸಮಾನತೆ ಇದೆ, ಆರ್ಥಿಕ ಅಸಮಾನತೆ ಇದೆ. ನಿರುದ್ಯೋಗ ಸಮಸ್ಯೆಯಿದೆ. ಹೀಗಾಗಿ ಭಾರತಕ್ಕೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿಯನ್ನು ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ಅಸಮಾನತೆಯ

ಮತ್ತು ನಿರುದ್ಯೋಗದ ನೆಲೆಯಲ್ಲಿ ನೋಡಬೇಕಾಗಿದೆ. ಹೀಗಾಗಿ ಮಾನವ ಅಭಿವೃದ್ಧಿ ವರದಿಯಲ್ಲಿ ಒಂದು ಪ್ರತ್ಯೇಕ ಅಧ್ಯಾಯಗಳ ಪರಿಶಿಷ್ಟರಿಗಾಗಿ ಸೃಷ್ಟಿ ಅದರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ನೆಲೆಯಲ್ಲಿ ನೋಡುವ ಕ್ರಮ ಜಾರಿಯಾಗಬೇಕು. ಕೇಲವೆ ಜನರ ಶ್ರೀಮಂತರ ಆದಾಯವನ್ನು ಎಲ್ಲಾರಿಗೂ ಹಂಚಿಕೆ ಮಾಡಿ (ಅವರ ಆದಾಯವೆ ಎಲ್ಲರ ತಲಾವರಮಾನ ಎಂದು ಪರಿಗಣಿಸಿ) ಮಾನವ ಅಭಿವೃದ್ಧಿಯಲ್ಲಿ ಪ್ರಗತಿ ಸಾದಿಸಿದೆ ಎಂದು ಹೇಳುವುದು ಸರಿಯಲ್ಲ.[೯]

ಜಾತಿ ಮತ್ತು ಅಸ್ಪೃಶ್ಯತೆಗಳೊಂದಿಗೆ ಜೋತುಕೊಂಡಿರುವ ಮೇಲಿನ ಅಸಮರ್ಥ್ಯಗಳನ್ನು ಸೃಷ್ಟಿಸುವ ಸಂಗತಿಗಳನ್ನು ಮಾನವ ಅಭಿವೃದ್ಧಿ ವರದಿ ಇಂಡೆಕ್ಸ ಪರಿಗಣಿಸಿಯೇ ಇಲ್ಲ. ಆದ್ದರಿಂದ ಮಾನವ ಅಭಿವೃದ್ಧಿ ಯಥಾ ರೂಪದಲ್ಲಿ ಅಥವಾ ಈಗ ಇರುವ ರೂಪದಲ್ಲಿ ಬಳಸಿದರೆ ದಲಿತರು ಪಿರಾಮಿಡ್ ಬುಡದಲ್ಲಿರುವವರ ಅಭಿವೃದ್ಧಿಯನ್ನು ಮಾಪನ ಮಾಡಲು ಸಾದ್ಯವಿಲ್ಲ. ಈ ಎಲ್ಲದರ ಹಿನ್ನೆಲೆಯಲ್ಲಿ ದಲಿತರ ಅಭಿಪ್ರಾಯವನ್ನು ಮಾಪನ ಮಾಡಲು ಪ್ರತ್ಯೇಕ ಇಂಡೆಕ್ಸನ್ನು ಕಟ್ಟುವ ಅನಿವಾರ್ಯತೆ ಇದೆಯನ್ನುವದು ನನ್ನವಾದ ಯಾಕೆಂದರೆ ದಲಿತರ ಅಭಿವೃದ್ಧಿಯನ್ನು ಮಾಪನ ಮಾಡುವ ಇಂಡೆಕ್ಸನ್ನು(ಸೂಚಿ) ಮಾನವ ಅಭಿವೃದ್ಧಿ ಇಂಡೆಕ್ಸನಲ್ಲಿರುವ ಕೊರತೆಗಳನ್ನು ತುಂಬುವ ಜೊತೆಗೆ ರಾಜಕೀಯ ಅಂಶವನ್ನು ಒಳಗೊಂಡರೆ ಇನ್ನು ಹೆಚ್ಚು ಪರಿಣಾಮಕಾರಿಯಾಗುತ್ತದೆ, ಹೀಗೆ ದಲಿತರ ಅಭಿವೃದ್ಧಿಯನ್ನು ಒಟ್ಟು ಆರು ಆಯಾಮಗಳನ್ನು ಒಳಗೊಳ್ಳುವಿಕೆ ತಾರತಮ್ಯ, ಸ್ವಾತಂತ್ರ್ಯ, ಜೀವನಮಟ್ಟ, ಲಿಂಗಸಂಬಂಧಿಸಿದ ಸಮಸ್ಯೆ ಹಾಗೂ ಮೂಲಸೌಕರ್ಯಗಳ ಲಭ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಮಾನವ ಅಭಿವೃದ್ಧಿ ಸೂಚಿಯನ್ನು ಸೃಷ್ಟಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಅದೇ ರೀತಿಯಾಗಿ ದಲಿತರ ಅಭಿವೃದ್ಧಿಗಾಗಿ ಹತ್ತು ಸೂಚಿಗಳ ಮೂಲಕ ಸಮಗ್ರ ಅಭಿವೃದ್ಧಿ ಸಾದಿಸಬಹುದು ಎಂದಿದ್ದಾರೆ. ೧. ಸಾಂಸ್ಥಿಕ ಒಳಗೊಳುವಿಕೆ ಸೂಚ್ಯಂಕ ೨. ಸಾಮಾಜಿಕ ಒಳಗೊಳ್ಳುವಿಕೆ, ೩. ತಾರತಮ್ಯ ಅನುಭವ ಸೂಚಾಂಕ ಒಳಗೊಳ್ಳುವಿಕೆ. ೪ ತಾರತಮ್ಯದ ವಿರುದ್ದ ಪ್ರತಿಭಟನೆ ಸೂಚ್ಯಂಕ, ೫. ಸಂಘರ್ಷ ಪರಿಹಾರದ ಸೂಚ್ಯಾಂಕ, ೬ ಸ್ವಾತಂತ್ರ ಅನುಭವದ ಸೂಚ್ಯಂಕ ೭ ಜೀವನ ಮಟ್ಟ ಸೂಚ್ಯಂಕ ೮ ದಲಿತ ಅಭಿವೃದ್ಧಿಯ ಲಿಂಗಸಂಬಂಧಿ ಸೂಚ್ಯಂಕ ೯ ಮೂಲಸೌಲಭ್ಯ ಲಭ್ಯತೆಯ ಸೂಚ್ಯಂಕ ೧೦ ಶೈಕ್ಷಣಿಕ ಸೌಲಭ್ಯಗಳ ಲಭ್ಯತೆಯ ಸೂಚ್ಯಂಕ. ಈ ರೀತಿಯಾಗಿ ಅವರದೇ ಆದ ಸಮಸ್ಯೆಗಳಿಗೆ ಅನುಗುಣವಾಗಿ ಮಾನದಂಡಗಳನ್ನು ಸೃಷ್ಟಿಸಿ ನೋಡುವ ಅವಶ್ಯವಿದೆ. ಎಂದಿದ್ದಾರೆ. ಪ್ರತಿಯೊಂದು ಜನಾಂಗ ಮತ್ತು ಸಮುದಾಯಗಳ ಸಮಸ್ಯೆಗೆ ಅಭಿವೃದ್ಧಿ ಪಡಿಸಬೇಕಾದರೆ. ಅಯಾ ಸಮುದಾಯಗಳ ಸಮಸ್ಯೆಗೆ ಅಬಿವೃದ್ದಿಯ ಮಾನದಂಡಗಳನ್ನು ಸೂಚಿಗಳಿಗೆ ಅನುಗುಣವಾಗಿ ಯೋಜನೆ ಕಾರ್ಯಕ್ರಮ ರೂಪಿಸಿದರೆ ಅವರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಿದೆ. ಈ ವರೆಗೆ ಯೋಜನೆ ಮತ್ತು ಕಾರ್ಯಕ್ರಮಗಳು ರೋಗ ಪತ್ತೆ ಹಚ್ಚದೆ ಔಷಧ ನೀಡಿದಂತಾಗುತ್ತದೆ ಅಥವಾ ಔಷಧ ನೀಡಿ ರೋಗಪತ್ತೆ ಹಚ್ಚಿದಂತಾಗಿದೆ. ಆದರೆ ರೋಗ ಯಾವುದರಿಂದ ಬರುತ್ತದೆ ಎನ್ನುವುದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಹಾಗಾಗಿ ದಲಿತರ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ.

ಕರ್ನಾಟಕದ ೩೦ ಜಿಲ್ಲೆಗಳ ದಲಿತ ಮಾನವ ಅಭಿವೃದ್ಧಿಯ ವಿಶ್ಲೇಷಿಸುತ್ತಾ ಕರ್ನಾಟಕ ಸರಕಾರ ಮಾನವ ಅಭಿವೃದ್ಧಿ ವರದಿಯಲ್ಲಿ ದಲಿತ ಮಾನವ ಅಭಿವೃದ್ಧಿ ಕೂಡ ಸೇರಿದೆ. ಮಾನವ ಅಭಿವೃದ್ಧಿ ವರದಿಯಲ್ಲಿ ಇದನ್ನು ಸಮಗ್ರ ದಲಿತ ಅಭಿವೃದ್ಧಿ ಸೂಚಿಯೆಂದು ಹೆಸರಿಸಲಾಗಿದೆ. ಈ ಸೂಚ್ಯಂಕವನ್ನು ಮಾನವ ಅಭಿವೃದ್ಧಿ ವರದಿಯ ದಲಿತ ಬುಡಕಟ್ಟು ಎಂಬ ಅಧ್ಯಾಯದಲ್ಲಿ ನೋಡಬಹುದು. ಜಿಲ್ಲಾ ಮಾನವ ಅಭಿವೃದ್ಧಿ ವರದಿಯ ಕೊನೆಯ ಭಾಗದಲ್ಲಿ ಸೂಚ್ಯಂಕಗಳನ್ನು ಸಿದ್ದಪಡಿಸುವ ವಿಧಾನಗಳನ್ನು ನೀಡಿದ್ದಾರೆ. ಕೆಲವರು ವರದಿಯ ಕೊನೆಯಲ್ಲಿ ಇತರ ಸೂಚ್ಯಂಕಗಳೊಂದಿಗೆ ದಲಿತ ಅಭಿವೃದ್ಧಿಯ ಸೂಚ್ಯಂಕವನ್ನು ಕಟ್ಟುವ ವಿಧಾನವನ್ನು ನೀಡಿದ್ದಾರೆ. ಕರ್ನಾಟಕದ ಸರ್ಕಾರ ಎಲ್ಲಾ ತಾಲೂಕುಗಳನ್ನು ಒಂದೊಂದು ಪಂಚಾಯತ್‌ನಲ್ಲಿ ದಲಿತರ ಅಧ್ಯಯನ ಮಾಡಿ ಈ ಸೂಚ್ಯಂಕವನ್ನು ಸಿದ್ದಪಡಿಸುವ ಆಲೋಚನೆ ಮಾಡಿತು. ಆದರೆ ಸಂಪನ್ಮೂಲ ಹಾಗೂ ಸಮಯದ ಕೊರತೆಯ ಕಾರಣಗಳನ್ನು ಮುಂದಿಟ್ಟು ಪ್ರತಿ ಜಿಲ್ಲೆಯಲ್ಲಿ ಒಂದೊಂದು ಪಂಚಾಯತಿಯಲ್ಲಿರುವ ದಲಿತರನ್ನು ಅಧ್ಯಯನ ಮಾಡಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ. ಎಲ್ಲಾ ಜಿಲ್ಲೆಗಳ ಲೀಡ್ ಏಜೆನ್ಸಿಗಳು ಸಿದ್ಧಪಡಿಸಿದ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಕೋಷ್ಟಕದ ಮೂಲಕ ನೀಡಿದ್ದಾರೆ. ದಲಿತರ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಹತ್ತು ಸೂಚ್ಯಂಕಗಳ ವಿವರಗಳನ್ನು ಕೋಷ್ಟಕ ಒಳಗೊಂಡಿದೆ. ಅದರ ಅಂಕಿಅಂಶಗಳ ಪ್ರಕಾರ ಕರ್ನಾಟಕ ಒಂಬತ್ತು ಜಿಲ್ಲೆಗಳಲ್ಲಿ ದಲಿತ ಮಾನವ ಅಭಿವೃದ್ಧಿ ಸ್ಥಿತಿ ತುಂಬಾ ಕೆಟ್ಟದಾಗಿದೆ. ಅಂದರೆ ದಲಿತೇತರರ ಶೇ. ೪೦ರಷ್ಟು ಕೂಡ ದಲಿತರ ಅಭಿವೃದ್ಧಿಯಾಗಿಲ್ಲ, ಸಾದನೆಯಾಗಿಲ್ಲ. ಉಳಿದ ಜಿಲ್ಲೆಗಳಲ್ಲಿ ದಲಿತೇತರರ ಅಭಿವೃದ್ಧಿಗೆ ಹೊಲಿಸಿದರೆ ದಲಿತರ ಅಭಿವೃದ್ಧಿ ಗಾವುದ ದೂರ ಇದೆ. ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ರಾಜ್ಯದ ಯಾವ ಜಿಲ್ಲೆಯಲ್ಲಿಯ ದಲಿತೇತರಿಗೆ ಹೋಲಿಸಿ ದಲಿತರ ಅಭಿವೃದ್ಧಿ ಉತ್ತಮ ಅಥವಾ ಅತ್ಯುತ್ತಮ ಎನ್ನುವ ಸ್ಥಿತಿಯಲ್ಲಿಲ್ಲ. ಈ ಉತ್ತಮ ಮತ್ತು ಅತ್ಯುತಮ ಕೂಡ ತುಂಬಾ ಧಾರಳವಾಗಿ ವ್ಯಾಖ್ಯಾನಿಸಲಾಗಿದೆ. ದಲಿತೇತರರ ಅಭಿವೃದ್ಧಿಯ ಶೇ. ೬೦ಕ್ಕಿಂತ ಹೆಚ್ಚಿದ್ದರೆ ಉತ್ತಮವೆಂದು ಮತ್ತು ದಲಿತೇತರ ಅಭಿವೃದ್ಧಿಯ ಶೇ. ೮೦ಕ್ಕಿಂತ ಹೆಚ್ಚಿದ್ದರೆ ಅತ್ಯುತಮವೆಂದು ಪರಿಗಣಿಸಲಾಗಿದೆ. ಇಲ್ಲಿಯೂ ಕೂಡ ಎಲ್ಲೂ ದಲಿತೇತರರ ಅಭಿವೃದ್ಧಿಗೆ ಸಮಾನಾವಾದ ಅಭಿವೃದ್ಧಿಯನ್ನು ಕಲ್ಪಿಸಿಕೊಂಡಿಲ್ಲ ಇಂತಹ ಲಿಬರಲ್ ಮಾನದಂಡಗಳನ್ನು ಬಳಸಿಕೊಂಡು ದಲಿತ ಅಭಿವೃದ್ಧಿಯನ್ನು ಮಾಪನ ಮಾಡಿದಾಗಲೂ ದಲಿತರು ದಲಿತತೇತರರಿಗಿಂತ ಗಾವುದ ದೂರ ಇದ್ದಾರೆ. ಇದು ಕೇವಲ ನಮ್ಮ ರಾಜಕೀಯದ ಸಮಸ್ಯೆಯಲ್ಲ, ತಳಸ್ತರದ ಜನರ ಬಗ್ಗೆ ನಮ್ಮ ಸಮಾಜ ಸಂಸ್ಕೃತಿಯಲ್ಲಿರುವ ಅಸುರಕ್ಷತೆಯ ಪಾತ್ರವು ದಲಿತರ ಅಭಿವೃದ್ಧಿಯ ಹಿಂದೆ ಕೆಲವ ಮಾಡುತ್ತಿರಬಹುದು ಎಂದಿದ್ದಾರೆ. ಆದರೆ ದಲಿತರನ್ನು ದಲಿತೇತರಿಗೆ ಹೋಲಿಸಿ ನೋಡುವ ಅಗತ್ಯವಿಲ್ಲ ಎನಿಸುತ್ತದೆ. ಯಾಕೆಂದರೆ ದಲಿತೇತರಿಗೆ ಭೂಮಿ ಹೇಗೆ ಲಭ್ಯವಾಗಿವೆಯೋ ಹಾಗೇ ಶಿಕ್ಷಣ ಕೂಡ ಲಭ್ಯವಾಗಿದೆ, ಅದೇ ರೀತಿ ಬಂಡವಾಳವು ಅವರನ್ನು ಕೈಹಿಡಿದಿವೆ. ಅಲ್ಲದೆ, ಅವರದ್ದೆ ಆದ ಕೆಲವು ಸ್ಥಿರ ಮತ್ತು ಚರಾಸ್ಥಿಗಳಿವೆ

ಇದರ ಜೋತೆಗೆ ಸಾಮಾಜೀಕ ಸ್ಥಾನಮಾನಗಳು ಅವರನ್ನು ಉತ್ತಮ ಸ್ಥಿತಿಯತ್ತ ಕೊಂಡಯ್ಯೊತ್ತವೆ. ಆದರೆ ದಲಿತರಿಗೆ ಭೂಮಿ ಬಂಡವಾಳ ಮತ್ತು ಶಿಕ್ಷಣ ಅವರಿಗೆ ಇನ್ನೂ ಲಭ್ಯವಾಗಿಲ್ಲ ಹಾಗಾಗಿ ಈ ಸೌಲಭ್ಯಗಳನ್ನು ಅವರಿಗೆ ಒದಗಿಸಿ ದಲಿತೇತರರಿಗೆ ಹೋಲಿಸಿ ಅಷ್ಟೊಂದು ಸಮರ್ಪಕವಲ್ಲ ಎನ್ನಿಸುತ್ತದೆ. ಆದ್ದರಿಂದ ಅವರ ಸಮಸ್ಯೆಗಳನ್ನು ಅವರದ್ದೆ ನೆಲೆಯಲ್ಲಿ ಅಭಿವೃದ್ಧಿ ನಿರ್ವಹಿಸುವದು ಉತ್ತಮ.[೧೦]

ಕೋಷ್ಟಕ ೬.೬. ಕರ್ನಾಟಕದಲ್ಲಿ ಜಿಲ್ಲಾವಾರು ದಲಿತ ಮಾನವ ಅಭಿವೃದ್ಧಿ ಸೂಚ್ಯಾಂಕ–೨೦೧೪

ಕ್ರಸಂ	ಜಿಲ್ಲೆಗಳು	೧	೨	೩	೪	೫	೬	೭	೮	೯	೧೦	೧೧
೧	ಬಳ್ಳಾರಿ	೦.೫	೦.೩	೦.೫	೦.೧	೦.೩	೦.೨	೦.೨	೦.೫	೦.೩	೮೦೦	೦.೪
೨	ಬೀದರ	೦.೩	೦.೫	೦.೩	೦.೪	೦.೧	೦.೩	೦.೪	೦.೧	೦.೫	೦.೫	೦.೪
೩	ಕಲಬುರ್ಗಿ	೦.೪	೦.೪	೦.೫	೦.೪	೦.೪	೦.೪	೦.೬	೦.೪	೦.೫	೦.೫	೦.೫
೪	ಕೊಪ್ಪಳ	೦.೬	೦.೨	೪೦	೦	೦	೦.೨	೦.೭	೦.೭	೦.೩	೦.೩	೦.೪
೫	ರಾಯಚೂರು	೦.೩	೦.೭	೧	೦	೦	೦.೩	೦.೨	೦.೪	೦.೨	೦.೩	೦.೪
೬	ಯಾದಗಿರಿ	೦.೫	೦	೦.೫	೦	೦	೦.೮	೦.೨	೦.೭	೦.೮	೦.೫	೦.೪
೭	ಬಾಗಲಕೋಟೆ	೦.೪	೦.೧	೦.೫	೦	೦.೭	೦.೩	೦.೩	೦.೨	೦.೨	೦.೩	೦.೩
೮	ಬೆಳಗಾವಿ	೦.೩	೦.೪	೦.೪	೦.೪	೦.೪	೦.೧	೦.೮	೦.೩	೦.೩	೦.೭	೦.೪
೯	ಬಿಜಾಪೂರ	೦.೪	೦.೨	೦.೫	೦	೦.೫	೦.೩	೦.೩	೦.೨	೦.೩	೦.೩	೦.೨
೧೦	ಗದಗ	೦.೫	೦.೬	೦.೫	೦.೨	೦.೩	೦.೨	೦.೨	೦.೩	೦.೩	೦.೩	೦.೪
೧೧	ಧಾರವಾಡ	೦.೫	೦.೪	೧	೦.೨	೦.೭	೦.೬	೦.೪	೦.೩	೦.೩	೦.೩	೦.೫
೧೨	ಹಾವೇರಿ	೦.೫	೦.೪	೦.೧	೦.೨	೦.೩	೦.೬	೦.೨	೦.೩	೦.೫	೦.೨	೦.೫
೧೩	ಉತ್ತರ ಕನ್ನಡ	೦.೨	೧	೧	೦	೦	೧.೪	೧	೦.೩	೦.೫.	೦.೨	೦.೬
೧೪	ಬೆಂಗಳೂರು	೦.೫	೦.೨	೦.೩	೦.೧	೦.೫	೧	೦.೨	೦.೪	೦.೨	೦.೨	೦.೬
೧೫	ಬೆಂಗಳೂರು ಗ್ರಾ	೦.೫	೦.೫	೦.೯	೦	೧	೦.೫	೦.೬	೦.೫	೦.೪	೧	೦.೭
೧೬	ತುಮಕೂರು	೦.೭	೦.೫	೧	೦	೦	೧	೦.೪	೦.೩	೦	೦.೬	೦.೫
೧೭	ಕೋಲಾರ	೦.೭	೦.೬	೦.೭	೦.೧	೦.೪	೦.೧	೦.೬	೦.೪	೦.೨	೦.೫	೦.೪
೧೮	ರಾಮನಗರ	೦.೩	೦.೨	೦.೨	೦	೦.೨	೦.೨	೦	೦	೦.೩	೦.೩	೦.೨
೧೯	ಚಿಕ್ಕಬಳ್ಳಾಪುರ	೦.೨	೧.೧	೦.೨	೦	೦.೨	೦..೧೦	೦	೦.೩	೦.೩	೦.೩	೦.೨
೨೦	ಚಿತ್ರದುರ್ಗ	೦.೩	೦.೩	೦.೧	೦.೪	೦.೪	೦.೩	೦.೨	೦.೪	೦.೨	೦.೪	೦.೪
೨೧	ದಾವಣಗೆರೆ	೦.೩	೦.೨	೦.೮	೦.೬	೦.೧	೦.೩	೦.೬	೦.೭	೦.೨	೦.೫	೦.೪
೨೨	ಶಿವಮೊಗ್ಗ	೦	೦.೯	೧	೦	೦	೧	೦.೨	೦.೬	೦.೭	೦.೩	೦.೫
೨೩	ಮೈಸೂರು	೦.೫	೦.೬	೦.೬	೦.೭	೦.೩	೦.೩	೦.೩	೦.೯	೦.೭	೦	೦.೬
೨೪	ಮಂಡ್ಯ	೦.೩	೦.೭	೦.೮	೧	೧	೧	೦.೩	೦.೪	೦	೦.೧	೦.೩
೨೫	ಚಾಮರಾಜನಗರ	೦.೬	೦.೧	೦.೮	೧	೧	೧	೦.೧	೦.೪	೦.೧	೧೦	೦.೫
೨೬	ಹಾಸನ	೦.೨	೦.೧	೦.೫	೦.೯	೦.೩	೦.೪	೦.೨	೦.೯	೦.೨	೦.೯	೦.೪
೨೭	ಚಿಕ್ಕಮಗಳೂರು	೦.೪	೦.೫	೦.೯	೦.೩	೦.೪	೦.೨	೦.೫	೦.೮	೦.೬	೧	೦.೫
೨೮	ಉಡುಪಿ	೦.೬	೦.೮	೧	೦.೯	೦.೯	೦.೬	೦.೮	೦.೬	೦.೮	೦.೫	೦.೫
೨೯	ದಕ್ಷಿಣ ಕನ್ನಡ	೦.೫	೦.೯	೧	೧	೧	೦.೭	೧	೦.೬	೦.೫	೦.೭	೦.೮
೩೦	ಕೊಡಗು	೦.೪	೧	೧	೦.೪	೦.೪	೦.೨	೧	೦.೬	೦.೫	೦.೫	೦.೬

ಆಧಾರ: ಡಾ. ಚಂದ್ರ ಪುಜಾರಿ ದಲಿತ ಮಾನವ ಅಭಿವೃದ್ಧಿ–೨೦೧೬ ಪುಟ–೨೫.

ಕೋಷ್ಟಕ ೬.೭. ಕರ್ನಾಟಕದಲ್ಲಿ ವಿವಿಧ ಸಾಮಾಜಿಕ ಗುಂಪುಗಳಲ್ಲಿನ ಶಾಲೆಬಿಟ್ಟ ಮಕ್ಕಳ ಪ್ರಮಾಣ (% ಪ್ರತಿಶತದಲ್ಲಿ)

ಜಾತಿ/ವರ್ಗ	೧–೨	೨–೩	೩–೪	೪–೫	೫–೬	೬–೭	೭–೮	೮–೯	೯–೧೦
ಪರಿಶಿಷ್ಟ ಜಾತಿ	೬	೪	೩	೩	೭	೬	೮	೧೧	೧೩
ಪರಿಶಿಷ್ಟ ಪಂಗಡ	೫	೨	೩	೨	೬	೪	೬	೧೨	೧೪
ಮುಸ್ಲಿಮರು	೪	೦	೧	೧	೬	೪	೯	೧೧	೧೨
ಇತರೆ	೫	೧	೧	೧	೩	೨	೨	೭	೯
ಒಟ್ಟು	೫	೨	೨	೧	೫	೩	೪	೯	೧೧

Source: Calculated based on enrolment data in DISE report of public instruction government of Karnataka. Twelth five year plan 2012-17 vol-3 page 237.

ಈ ಮೇಲಿನ ಕೋಷ್ಟಕದಲ್ಲಿ ನೀಡಲಾದ ಅಂಕಿ ಅಂಶಗಳ ಜಾತಿ / ವರ್ಗ / ಮಕ್ಕಳ ಶಾಲಾ ದಾಖಲಾತಿ ಮತ್ತು ಶಾಲೆ ಬಿಟ್ಟ ಮಕ್ಕಳ ಪ್ರಮಾಣವನ್ನು ತೊರಿಸಲಾಗಿದೆ, ಮುಖ್ಯವಾಗಿ ನಾಲ್ಕು ವರ್ಗಗಳನ್ನು ವಿಶ್ಲೇಷಣಗೆ ಒಳಪಡಿಸಲಾಗಿದೆ. ಭಾರತದಲ್ಲಿ ಮಾನವ ಅಭಿವೃದ್ಧಿಯಲ್ಲಿ ತೀರ ಕೆಳಮಟ್ಟದಲ್ಲಿರುವ ಪರಿಶಿಷ್ಟ ಜಾತಿಯು, ಕರ್ನಾಟಕದಲ್ಲಿಯು ಸಹ ಅದೇ ಮಾದರಿಯ ಅಂಕಿ ಅಂಶಗಳನ್ನು ಹೊರಹಾಕಿದೆ. ಹೀಗಾಗಿ ೨೦೦೮ ರಿಂದ ೨೦೧೧ರವರೆಗೆ ಪರಿಶಿಷ್ಟ ಜಾತಿಯ ಮಕ್ಕಳು ಒಂದನೇಯ ತರಗತಿಯಿಂದ ೧೦ ನೇ ತರಗತಿಯ ವರೆಗೆ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಇದೆ. ಕೇವಲ ನಾಲ್ಕು ವರ್ಷಗಳ ಅವದಿಯಲ್ಲಿ ಶೇ. ೧೩ರಷ್ಟು ಪರಿಶಿಷ್ಟ ಜಾತಿಯ ಮಕ್ಕಳು ಶಾಲೆಯ ಹೊರಗೆ ಉಳಿಯುತ್ತವೆ. ಇದಕ್ಕೆ ಕಾರಣ ಪರಿಶಿಷ್ಟರು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಎಂದರೆ ಅನ್ನ ಅರಿವೆ ಆಸರೆ ತಮ್ಮ ಬದುಕನ್ನು ಕಟ್ಟಿಕೊಳ್ಳಲು ದಿನಂಪ್ರತಿ–ಪ್ರಯಾಸ ಪಡುತ್ತಿದ್ದಾರೆ. ಆದರೆ ಪರಿಶಿಷ್ಟ ಪಂಗಡಕ್ಕೆ ಹೊಲಿಸಿದರೂ ಆದೇ ಫಲಿತಾಂಶ ಹೊರಹಾಕುತ್ತದೆ, ೨೦೦೮–೨೦೧೧ ಅವದಿಯಲ್ಲಿ ಪರಿಶಿಷ್ಟ ಪಂಗಡಗಳ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಶೇ ೧೪ ರಷ್ಟು ಇದನ್ನು ಗಮನಿಸಿದರೆ ಎಲ್ಲಾ ಜಾತಿವರ್ಗಗಳಿಗಿಂತ ಪರಿಶಿಷ್ಟ ಪಂಗಡದ ಮಕ್ಕಳಲ್ಲಿಹೆಚ್ಚಿನ ಪ್ರಮಾಣದಲ್ಲಿ ಶಾಲೆ ಬಿಡುವುದನ್ನು ಕಾಣಬಹುದು ಏಕೆಂದರೆ ಪರಿಶಿಷ್ಟ ಪಂಗಡಗಳ ಸಾಂಪ್ರಾದಾಯಿಕ ಉದ್ಯೋಗ ಮತ್ತು ಭೂಮಿಯನ್ನು ಸರಕಾರಿ ಸಾರ್ವಜನಿಕ ಉದ್ದೇಶಕ್ಕಾಗಿ ಕಸಿದುಕೊಂಡು ಅವರನ್ನು ನಿರ್ಗತಿಕರನ್ನಾಗಿ ಮಾಡಿ ಬೀದಿಯಲ್ಲಿ ನಿಲ್ಲುವಂತೆ ವಾತವರಣ ಸೃಷ್ಟಿಸಿದೆ, ಹಾಗಾಗಿ ಪರಿಶಿಷ್ಟ ಪಂಗಡಗಳಿಗೆ ಆರ್ಥಿಕ ಅಭದ್ರತೆ ಮತ್ತು ಉದ್ಯೋಗದ ಅಭದ್ರತೆ ಹೆಚ್ಚಾಗಿ ಕಾಡುತ್ತಿದೆ, ಹೀಗಾಗಿ ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ.

ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೋಲಿಸಿದರೆ ಅಲ್ಪ ಸಂಖ್ಯಾತರ ಮಕ್ಕಳಲ್ಲಿ ಮದ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಕಡಿಮೆ ೨೦೦೮ ಮತ್ತು ೨೦೧೧ರ ನಡುವೆ ೧-೧೦ನೇ ತರಗತಿ ವರೆಗೆ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಶೇ ೧೨ ಅದೇ ರೀತಿಯಾಗಿ ಅಲ್ಪ ಸಂಖ್ಯಾರಿಗೂ ಮತ್ತು ಇತರ ವರ್ಗಕ್ಕೆ ಹೋಲಿಸಿದರೆ ಇತರ ವರ್ಗದವರ ಮಕ್ಕಳು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ತೀರಾ ಕಡಿಮೆ. ೨೦೦೮-೧೧ರ ಅವಧಿಯಲ್ಲಿ ಶೇ ೯ರಷ್ಟು ಮಕ್ಕಳನ್ನು ಮಾತ್ರ ಕಾಣಬಹುದು. ೨೦೦೮ರಿಂದ ೨೦೧೧ರ ಅವಧಿಯಲ್ಲಿ ರಾಜ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಶೇ. ೧೧ರಷ್ಟು, ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕರ್ನಾಟಕ ಶಿಕ್ಷಣಕ್ಕೆ ಸಂಬಂಧಪಟ್ಟ ಅಗತ್ಯ ವಾತಾವರಣದ ಕೊರತೆ ಕಂಡುಬರುತ್ತದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಸಾಮಾಜಿಕ ಅಸಮಾನತೆ, ಆರ್ಥಿಕತೆಯ ಅಸಮಾನ ಹಂಚಿಕೆ ಸಾಂಸ್ಕೃತಿಕ ಅವಕಾಶಗಳು ಇಲ್ಲದಿರುವುದು ಮಾನವ ಅಭಿವೃದ್ಧಿಯಿಂದ ದೂರ ಉಳಿಯುವಂತೆ ಮಾಡಿದೆ. ಹೀಗಾಗಿ ಸರಕಾರ ಎಲ್ಲಾ ರೀತಿಯ ಅಸಮಾನತೆಯನ್ನು ಹೋಗಲಾಡಿಸಲು ಅಗತ್ಯ ಕ್ರಮಗಳನ್ನು ಯೋಜನೆಗಳನ್ನು ರೂಪಿಸಿದರೆ ಅಭಿವೃದ್ಧಿಗೆ ಆಯಾ ಸಮುದಾಯಯಗಳು ಮುಖಾಮುಖಿಯಾಗುತ್ತವೆ.

ಕೋಷ್ಟಕ ೬.೮. ಸಮೀಕ್ಷೆಗೊಳಪಟ್ಟ ಶಿಕ್ಷಣದಲ್ಲಿ ಅಂಗನವಾಡಿ ಸೌಲಭ್ಯಗಳ ವಿವರ

ವಿವರಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಮನೆಯಲ್ಲಿ ಅಂಗನವಾಡಿ ಮಕ್ಕಳು ಇದ್ದಾರೆಯೇ?	ಇದ್ದಾರೆ	೩೭	೩೭	೨೪	೨೪	೬೮	೬೮
	ಇಲ್ಲಾ	೬೩	೬೩	೭೬	೭೬	೩೨	೩೨
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನಲ್ಲಿರುವ ಗ್ರಾಮಗಳ ಮನೆಯಲ್ಲಿರುವ ಅಂಗನವಾಡಿ ಮಕ್ಕಳ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೩೭ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೬೩ರಷ್ಟು ಕುಟುಂಬಗಳು ಶಾಲೆಗೆ ಹೋಗುವುದಿಲ್ಲ ಎಂದು ಹೇಳಿಕೊಂಡಿರುವುದನ್ನು ನೋಡಲಾಗಿದೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೨೪ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೭೬ರಷ್ಟು ಕುಟುಂಬಗಳು ಶಾಲೆಗೆ ಹೋಗುವುದಿಲ್ಲ

ಎಂದು ಹೇಳಿಕೊಂಡಿರುವುದನ್ನು ನೋಡಲಾಗಿದೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೬೮ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೩೨ ರಷ್ಟು ಕುಟುಂಬಗಳು ಶಾಲೆಗೆ ಹೋಗುವುದಿಲ್ಲ ಎಂದು ಹೇಳಿಕೊಂಡಿರುವುದನ್ನು ನೋಡಲಾಗಿದೆ.

ಒಟ್ಟಾರೆಯಾಗಿ ಈ ಮೇಲಿನ ಅಂಶದಿಂದ ತಿಳಿದು ಬರುವುದೇನೆಂದರೆ, ಮೂರು ತಾಲೂಕಿನ ಗ್ರಾಮಗಳನ್ನು ಗಮನಿಸಿದಾಗ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿರುವ ಕುಟುಂಬಗಳಲ್ಲಿ ತಮ್ಮ ಮಕ್ಕಳನ್ನು ಅಂಗನವಾಡಿ ಶಾಲೆಗೆ ಕಳುಹಿಸುವಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಫಲವಾಗಿರುವುದು ತಿಳಿದು ಬಂದಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲು ಕ್ಷೇತ್ರವಾದ ಲಿಂಗಸೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರು ಇರುವ ಕಾರಣದಿಂದ ಅವರು ಆರ್ಥಿಕವಾಗಿ ಹಿಂದುಳಿದಿದ್ದು ಅವರಿಗೆ ತಮ್ಮ ಜೀವನವನ್ನೆ ನಡೆಸಿಕೊಂಡು ಹೋಗುವುದು ದುಸ್ತರವಾಗಿದ್ದಂತಹ ಸಂದರ್ಭದಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಅವರನ್ನು ಮನೆಯಲ್ಲಿ ಇಟ್ಟುಕೊಂಡಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಲಿಂಗಸೂರು ತಾಲೂಕಿನ ಗ್ರಾಮಗಳಿಗೆ ಹೋಲಿಕೆ ಮಾಡಿದಾಗ ಸಿಂಧನೂರು ಮತ್ತು ದೇವದುರ್ಗ ತಾಲೂಕುಗಳು ಸುಧಾರಣೆಯಲ್ಲಿರುವುದನ್ನ ಅಧ್ಯಯನಗಳಿಂದ ತಿಳಿದು ಬಂದಿದೆ. ಕೊನೆಯದಾಗಿ, ಆರ್ಥಿಕವಾಗಿ ಹಿಂದುಳಿದಿರುವ ತಾಲೂಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಂಪನ್ಮೂಲವನ್ನು ಒದಗಿಸುವಂತಹ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ. ಇದರ ಜೊತೆಗೆ ಅಂಗನವಾಡಿ ಕೇಂದ್ರಗಳು ಕ್ರೀಯಾಶಿಲವಾಗಿ ಕೆಲಸ ಮಾಡುವ ಅಗತ್ಯವಿದೆ ಎಂದು ಮತ್ತು ಅವು ಮಕ್ಕಳನ್ನು ಒಳಗೋಳ್ಳುವ ಕೇಂದ್ರಗಳಾಗದೆ ಮಕ್ಕಳೆ ಒಳಗೊಳ್ಳುವ ಕೇಂದ್ರಗಳಾಗಬೇಕು.

ಕೋಷ್ಟಕ ೬.೯. ಸಮೀಕ್ಷೆಗೊಳಪಟ್ಟ ಅಂಗನವಾಡಿ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ

ವಿವರಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು		ಪ.ಜಾ. ಮೀಸಲು		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹೌದಾದರೆ ಎಷ್ಟು ಮಕ್ಕಳು ಶಾಲೆಗೆ ಹೋಗುತ್ತಾರೆ	ಒಬ್ಬರು	೨೧	೫೭	೧೯	೬೮	೪೩	೬೩
	ಇಬ್ಬರು	೧೬	೪೩	೫	೩೨	೨೫	೩೭
	ಒಟ್ಟು	೩೭	೧೦೦	೨೪	೧೦೦	೬೮	೧೦೦

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಅಂಗನವಾಡಿ ಶಾಲೆಗೆ ಎಷ್ಟು ಮಂದಿ ಮಕ್ಕಳ ಹೋಗುತ್ತರೆ ಎಂಬುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೬.೭೫ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಒಬ್ಬರು ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ.

೪೩.೨೪ರಷ್ಟು ಕುಟುಂಬಗಳು ಅಂಗನವಾಡಿ ಶಾಲೆಗೆ ಇಬ್ಬರು ಹೋಗುತ್ತಾರೆ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ವರಲ್ಲಿ ಶೇ. ೬೭.೮೫ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಒಬ್ಬರು ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೩೨.೧೪ರಷ್ಟು ಕುಟುಂಬಗಳು ಅಂಗನವಾಡಿ ಶಾಲೆಗೆ ಇಬ್ಬರು ಹೋಗುತ್ತಾರೆ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ವರಲ್ಲಿ ಶೇ. ೬೩.೨೩ರಷ್ಟು ಕುಟುಂಬಗಳಲ್ಲಿ ಅಂಗನವಾಡಿ ಶಾಲೆಗಳಿಗೆ ಒಬ್ಬರು ಹೋಗುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೩೬.೭೬ರಷ್ಟು ಕುಟುಂಬಗಳು ಅಂಗನವಾಡಿ ಶಾಲೆಗೆ ಇಬ್ಬರು ಹೋಗುತ್ತಾರೆ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ.

ಒಟ್ಟಾರೆಯಾಗಿ, ಸಿಂದನೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರಿನಲ್ಲಿರುವ ಗ್ರಾಮಗಳ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿ ಶಾಲೆಗೆ ಹೋಗದೆಯಿರುವುದನ್ನು ನೋಡಲಾಗಿದೆ. ಅಂದರೆ ಇಲ್ಲಿ ತಿಳಿದು ಬರುವ ಸಂಗತಿಯೆಂದರೆ, ಲಿಂಗಸೂರಿನ ಗ್ರಾಮಗಳಲ್ಲಿ ವಾಸಿಸುವ ಪರಿಶಿಷ್ಟ ಜಾತಿಯ ಮಕ್ಕಳು ಆಗಿರುವುದರಿಂದ ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ದುಸ್ತರವಾಗಿರುವುದರಿಂದ ತಮ್ಮ ಪಾಲಕರ ಜೊತೆ ಕೂಲಿನಾಲಿ ಮಾಡಲು ಹೋಗುವ ಸಂದರ್ಭದಲ್ಲಿ ಅವರೊಡನೆ ಹೋಗುತ್ತಾರೆ ವಿನಃ ಅವರನ್ನು ಕನಿಷ್ಠ ಶಿಕ್ಷಣವನ್ನು ಕೊಡಿಸಬೇಕು ಎಂಬ ಅರಿವು ಅವರಿಗೆ ಇಲ್ಲದಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಹಾಗಾಗಿ, ಇಂತಹ ವಾತವರಣದಲ್ಲಿರುವ ಪಾಲಕರಿಗೆ ಸರಿಯಾದ ಮಾರ್ಗದರ್ಶನ ಮಾಡುವುದರ ಮೂಲಕ ಶಿಕ್ಷಣವನ್ನು ಹೆಚ್ಚಿನ ರೀತಿಯಲ್ಲಿ ಕೊಡಿಸಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ. ಮತ್ತು ಶೇ. ೭೦ರಷ್ಟು ಒಣ ಪ್ರದೇಶವಾಗಿದ್ದರಿಂದ ಉದ್ಯೋಗವನ್ನರಸಿ ವಲಸೆ ಹೋಗುವ ಪ್ರವೃತ್ತಿಯಿಂದ ಈ ರಿತಿಯ ಫಲಿತಾಂಶಗಳು ಕಂಡು ಬರುತ್ತವೆ.

ಕೋಷ್ಟಕ ೬.೧೦. ಸಮೀಕ್ಷೆಗೊಳ್ಳಪಟ್ಟ ಕುಟುಂಬಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಮನೆಯಲ್ಲಿ ಮಕ್ಕಳು ಶಾಲೆಗೆ ಹೋಗುವುದರ ವಿವರ	ಹೋಗುತ್ತಾರೆ	೩೪	೩೪	೫೭	೫೭	೪೮	೪೮
	ಹೋಗುವದಿಲ್ಲ	೬೬	೬೬	೪೩	೪೩	೫೨	೫೨
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗೆ ಹೋಗುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೩೪.೦೦ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೬೬.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಾಲೆಗೆ ಹೋಗುವದಿಲ್ಲ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೭.೦೦ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೪೩.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಾಲೆಗೆ ಹೋಗುವದಿಲ್ಲ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೪೮.೦೦ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೫೨.೦೦ರಷ್ಟು ಕುಟುಂಬಗಳು ಪ್ರಾಥಮಿಕ ಶಾಲೆಗೆ ಹೋಗುವದಿಲ್ಲ ಎಂದು ಹೇಳಿಕೊಂಡಿರುವುದನ್ನು ಕಾಣಲಾಗಿದೆ.

ಒಟ್ಟಾರೆಯಾಗಿ, ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿರುವ ಮಕ್ಕಳಿಗಿಂತ ಲಿಂಗಸೂರಿನಲ್ಲಿರುವ ಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿ ಪ್ರಾಥಮಿಕ ಶಾಲೆಗೆ ಹೋಗದಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಲಿಂಗಸೂರು ತಾಲೂಕು ಮೀಸಲು ಕ್ಷೇತ್ರವಾಗಿರುವುದರಿಂದ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯವರೇ ಹೆಚ್ಚಾಗಿರುವುದರಿಂದ ಆ ವರ್ಗವು ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ಅವರಿಗೆ ಮತ್ತೆ ಯಾವ ಬೇರೆ ಆರ್ಥಿಕ ಮೂಲಗಳು ಇಲ್ಲದೆಯಿರುವುದರಿಂದ ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗಿರುವುದರಿಂದ ಅವರನ್ನ ಎಲ್ಲಿ ಸರ್ ಶಾಲೆಗೆ ಕಳುಹಿಸುವುದು ಎಂಬುದನ್ನು ಹೇಳಿಕೊಂಡಿದ್ದಾರೆ. ಹಾಗಾಗಿ, ದೇಶವು ಅಭಿವೃದ್ಧಿಯನ್ನು ನೋಡಬೇಕಾದರೆ ಶಿಕ್ಷಣವು ಮುಖ್ಯ ಸಾಧನವಾಗಿದೆ. ಹಾಗಾಗಿ ಪಾಲಕರಿಗೆ ಎಂತಹ ಕಷ್ಟಗಳು ಇದ್ದರೂ ಮಕ್ಕಳಿಗೆ ಸರ್ಕಾರದಿಂದ ಅಕ್ಷರ ಕಲಿಯುದಕ್ಕಾಗಿಯೇ ಹಲವಾರು ಸೌಲಭ್ಯಗಳು ಇರುವುದರಿಂದ ಅವರಿಗೆ ಶಿಕ್ಷಣವನ್ನು ಕೊಡಿಸುವಂತಹ ಪ್ರಯತ್ನ ಮಾಡಿಕೊಡಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ. ಇದರ ಜೋತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಈ ಜನಾಂಗದವರಿಗೆ ಹೆಚ್ಚು ಲಾಭವನ್ನು ತಂದಿಲ್ಲ ಎಂದು ಕಂಡುಬರುತ್ತದೆ.

ಕೋಷ್ಟಕ ೬.೧೧. ಸರ್ಕಾರಿ ಹಾಗೂ ಖಾಸಗಿ ಶಾಲೆಗೆ ಹೋಗುವ ಮಕ್ಕಳ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹೌದಾದರೆ ಯಾವ ಶಾಲೆಗೆ ಹೋಗುವುದರ ವಿವರ	ಸರ್ಕಾರಿ	೨೮	೭೪	೪೨	೭೪	೩೧	೬೫
	ಖಾಸಗಿ	೯	೨೬	೧೫	೨೬	೧೭	೩೫
	ಒಟ್ಟು	೩೭	೧೦೦	೫೭	೧೦೦	೪೮	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಯಾವ ಮಾದರಿಯ ಶಾಲೆಗೆ ಹೋಗುತ್ತಾರೆ ಎಂಬುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೭೩.೬೮ರಷ್ಟು ಕುಟುಂಬಗಳಲ್ಲಿ ಸರ್ಕಾರಿ ಶಾಲೆಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೨೬.೩೧ರಷ್ಟು ಕುಟುಂಬಗಳು ಖಾಸಗಿ ಶಾಲೆಗೆ ಹೋಗುತ್ತಾರೆ ಎಂದು ಹೇಳಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೭೩.೬೮ರಷ್ಟು ಕುಟುಂಬಗಳಲ್ಲಿ ಸರ್ಕಾರಿ ಶಾಲೆಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೨೬.೩೧ರಷ್ಟು ಕುಟುಂಬಗಳು ಖಾಸಗಿ ಶಾಲೆಗೆ ಹೋಗುತ್ತಾರೆ ಎಂದು ಹೇಳಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೬೪.೫೮ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಾರೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೩೫.೪೧ರಷ್ಟು ಕುಟುಂಬಗಳು ಪ್ರಾಥಮಿಕ ಶಾಲೆಗೆ ಹೋಗುವುದಿಲ್ಲ ಎಂದು ಹೇಳಿಕೊಂಡಿರುವುದನ್ನು ಕಂಡುಬರುತ್ತದೆ.

ಒಟ್ಟಾರೆಯಾಗಿ, ದೇವದುರ್ಗ ಮತ್ತು ಲಿಂಗಸೂರು ತಾಲೂಕಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುತ್ತಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೇಲಿನ ಎರಡು ತಾಲೂಕುಗಳು ಮೀಸಲು ಕ್ಷೇತ್ರಗಳಾಗಿದ್ದರಿಂದ ಅವರಲ್ಲಿ ಕನಿಷ್ಠ ಜೀವನವನ್ನು ನಡೆಸುವುದೇ ಸಾಕಾದಾಗ ಅವರ ಮಕ್ಕಳಿಗೆ ಅಕ್ಷರ ಕಲಿಸುವುದು ಹೆಚ್ಚಿನ ಖರ್ಚು ಆಗಿದ್ದರಿಂದ ಅವರು ಶಿಕ್ಷಣಕ್ಕಾಗಿ ಹೆಚ್ಚಿನ ಕಾಳಜಿಯನ್ನು ವಹಿಸದೆ ಕೇವಲ ಮಕ್ಕಳಿಗೆ ಶಿಕ್ಷಣವನ್ನು ಕಲಿಸಿದರೆ ಸಾಕು ಎನ್ನುವ ತವಕದಲ್ಲಿದ್ದರಿಂದ ಅವರು ಸರ್ಕಾರಿ ಶಾಲೆಗೆಯೇ ಕಳುಹಿಸುತ್ತಿದ್ದಾರೆ ಎಂದು

ಅಧ್ಯಯನದಿಂದ ತಿಳಿದು ಬಂದಿದೆ. ಹಾಗಾಗಿ ಮಕ್ಕಳನ್ನು ಖಾಸಗಿ ಶಾಲೆಯೋ ಅಥವಾ ಸರ್ಕಾರಿ ಶಾಲೆಯೋ ಮುಖ್ಯ ಅಲ್ಲ ಅದರ ಬದಲಾಗಿ ಯಾವ ಶಾಲೆಯಲ್ಲಿ ಉತ್ತಮ ಶಿಕ್ಷಣವನ್ನು ಕಲಿಸುತ್ತಾರೆಯೋ ಆ ಶಾಲೆಗೆ ಕಳುಹಿಸಿ ಅಕ್ಷರವನ್ನು ಕಲಿಸುವ ಕೆಲಸವಾಗಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೧೨. ಪ್ರಾಥಮಿಕ ಶಿಕ್ಷಣ ಮುಂದುವರಿಸುತ್ತಿರುವ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	೨೩	೬೧	೩೭	೬೫	೨೮	೫೮
	ಹೆಣ್ಣು	೧೧	೩೯	೨೦	೩೫	೨೦	೪೨
	ಒಟ್ಟು	೩೪	೧೦೦	೫೭	೧೦೦	೪೮	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೦.೫೨ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೯.೪೭ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೪.೬೧ರಷ್ಟು ಗಂಡು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೫.೩೯ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೮.೩೩ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೪೧.೬೬ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೇಲಿನ ಅಂಶವನ್ನು ಗಮನಿಸಿದಾಗ ಲಿಂಗಸೂರು ತಾಲೂಕಿನ ಗ್ರಾಮಗಳಿಗಿಂತ ದೇವದುರ್ಗ ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳ ಮಕ್ಕಳು ಕಡಿಮೆ ಪ್ರಮಾಣದಲ್ಲಿ ಶಾಲೆಯನ್ನು ಮುಂದುವರಿಸಿರುವುದರ ಬಗ್ಗೆ ಅಧ್ಯಯನಗಳಿಂದ ತಿಳಿದು ಬಂದಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲಾತಿ ಕ್ಷೇತ್ರವಾಗಿರುವುದರಿಂದ ಲಿಂಗಸೂರು ತಾಲೂಕಿನ

ಗ್ರಾಮಗಳಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಿರುವುದರ ಜೊತೆಗೆ ಅವರನ್ನು ಶಾಲೆಯನ್ನು ಬಿಡದ ಹಾಗೆ ನೋಡಿಕೊಂಡು ಅಕ್ಷರ ಜ್ಞಾನವನ್ನು ಕಲಿಸುವ ಪ್ರಯತ್ನ ಮಾಡುತ್ತಾರೆ ಎಂದು ತಿಳಿಯಲಾಗಿದೆ.

ಕೋಷ್ಟಕ ೬.೧೩. ಮಾಧ್ಯಮಿಕ ಶಿಕ್ಷಣ ಮುಂದುವರಿಸುತ್ತಿರುವ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	೧೮	೬೨	೩೪	೬೭	೨೬	೫೮
	ಹೆಣ್ಣು	೧೧	೩೮	೧೭	೩೩	೧೯	೪೨
	ಒಟ್ಟು	೨೯	೧೦೦	೫೧	೧೦೦	೪೫	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಮಾದ್ಯಮಿಕ ಶಾಲೆಯನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೨.೦೬ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೭.೯೩'ಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೬.೬೬ರಷ್ಟು ಗಂಡು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೩.೩೪ ರಷ್ಟು ಹೆಣ್ಣು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೭.೭೭ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೪೨.೨೩ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕುಗಳನ್ನು ನೋಡಿದಾಗ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಶಾಲೆಗೆ ಮುಂದುವರಿಸದೆಯಿರುವುದನ್ನು ಅಧ್ಯನಗಳಿಂದ ತಿಳಿದು ಬಂದಿದೆ. ಅಂದರೆ, ಸಾಮಾನ್ಯ ಕ್ಷೇತ್ರವಾದರೂ ಅವರಲ್ಲಿ ಸಹ ಬಡತನದಿಂದ ಕೂಡಿದ ಕುಟುಂಬಗಳು ಇರುವುದರಿಂದ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುವ ಮೂಲಕ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡಿಸುತ್ತಾರೆ

ಆದರೆ ಸರ್ಕಾರಿ ಶಾಲೆಯಲ್ಲಿ ತಮ್ಮ ಮಕ್ಕಳಿಗೆ ಸುರಕ್ಷಿತವಿಲ್ಲ ಎಂಬ ಕಾರಣದಿಂದ ಸರ್ಕಾರಿ ಶಾಲೆಯನ್ನು ಬಿಡಿಸಿ ಖಾಸಗಿ ಶಾಲೆಗೆ ಸೇರಿಸಲಿಕ್ಕೆ ಪಾಲಕರಲ್ಲಿ ಹಣ ಇರದೆ ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೂರು ತಾಲೂಕಿನ ಗ್ರಾಮಗಳಲ್ಲಿ ಸರಿಸುಮಾರು ಒಂದೇ ಮಟ್ಟದಲ್ಲಿ ಶಾಲೆಯನ್ನು ಬಿಡಿಸುವಲ್ಲಿ ಹಲವು ಕಾರಣಗಳನ್ನು ನೀಡಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಇಂತಹ ಒಂದು ಸಂಗತಿಯನ್ನು ಪರಿಗಣಿಸಿ ಸರ್ಕಾರವು ಸರ್ಕಾರಿ ಶಾಲೆಯಲ್ಲಿ ಸೂಕ್ತ ಸೌಲಭ್ಯಗಳನ್ನು ಒದಗಿಸುವ ಮೂಲಕ ಬಡ ಮಕ್ಕಳಿಗೆ ಶಾಲೆಯನ್ನು ಸೇರುವಂತಹ ಕೆಲಸ ಮಾಡುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೧೪. ಪ್ರೌಢಶಿಕ್ಷಣ ಮುಂದುವರಿಸುತ್ತಿರುವ ಮಕ್ಕಳ ಪ್ರಮಾಣ

ಸೂಚಕಗಳು	**ಉಪ ಸೂಚಕಗಳು**	**ದೇವದುರ್ಗ**		**ಲಿಂಗಸೂರು**		**ಸಿಂಧನೂರು**	
		ಪ.ಪಂ. ಮೀಸಲು ಕ್ಷೇತ್ರ		**ಪ.ಜಾ. ಮೀಸಲು ಕ್ಷೇತ್ರ**		**ಸಾಮಾನ್ಯ ಕ್ಷೇತ್ರ**	
		ಸಂಖ್ಯೆ ಗಳು	**ಶೇಕಡ ವಾರು**	**ಸಂಖ್ಯೆ ಗಳು**	**ಶೇಕಡ ವಾರು**	**ಸಂಖ್ಯೆ ಗಳು**	**ಶೇಕಡ ವಾರು**
ಹಾಗಾದರೆ ಪ್ರೌಢ ಶಿಕ್ಷಣವನ್ನು ಮುಂದು ವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	೧೮	೬೨	೨೯	೬೫	೨೩	೫೫
	ಹೆಣ್ಣು	೧೧	೩೮	೧೭	೩೫	೧೯	೪೫
	ಒಟ್ಟು	**೨೯**	೧೦೦	**೪೬**	೧೦೦	**೪೨**	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಪ್ರೌಢ ಶಕ್ಷಣವನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೨.೦೯ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೭.೯೩ ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೬೫.೧೧ರಷ್ಟು ಗಂಡು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೪.೮೮ ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೫೪.೭೬ರಷ್ಟು ಗಂಡು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೪೫.೨೩ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ದೇವದುರ್ಗ ತಾಲೂಕಿನ ಮಕ್ಕಳಿಗಿಂತ ಸಿಂಧನೂರು ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಪುನಃ ಮಕ್ಕಳನ್ನು ಶಾಲೆಯನ್ನು ಮುಂದುವರಿಸುವಲ್ಲಿ ಕಡಿಮೆ ಪ್ರಮಾಣದಲ್ಲಿದ್ದು, ಆದರೆ ದೇವದುರ್ಗ ತಾಲೂಕು ಅದನ್ನು ಸಮತೋಲನ ರೀತಿಯಲ್ಲಿ ಕಂಡುಕೊಂಡಿದೆ. ಇದರಿಂದ ನಮಗೆ ತಿಳಿದು ಬರುವ ಸಂಗತಿಯೆಂದರೆ, ಅದರಲ್ಲಿ ಹೆಣ್ಣು ಮಕ್ಕಳು ಋತುವಾಗುವದು, ಬಡತನದಿಂದ ಕೂಲಿಗೆ ಕರೆದುಕೊಂಡು ಹೋಗುವದ ಮತ್ತು ಮನೆಯಲ್ಲಿ ದುಡಿಯುವವರು ಒಬ್ಬರು ಆದರೆ ಸಂಸಾರವನ್ನು ನೀಗಿಸಿಕೊಂಡು ಹೋಗುವದು ಆಗದೆಯಿರುವುದರಿಂದ ಕೆಲವು ಮಕ್ಕಳು ಆಯಾ ತಾಲೂಕಿನಲ್ಲಿ ಶಾಲೆಯನ್ನು ಬಿಡಿಸಲಾಗಿದೆ. ಕೊನೆಯದಾಗಿ, ಶಾಲೆಯನ್ನು ಬಿಡಿಸಿದರೆ ಮಕ್ಕಳ ಭವಿಷ್ಯವು ನಾಶ ಮಾಡಿದಾಗೆ ಆಗುತ್ತದೆ. ಹಾಗಾಗಿ ಸರ್ಕಾರಿ ಶಾಲೆಗೆ ಕಳುಹಿಸುವ ಮೂಲಕ ಕನಿಷ್ಠ ಮಟ್ಟದ ಶಿಕ್ಷಣ ದೊರೆತು ಅದರಿಂದ ತಾವು, ತಮ್ಮ ಕುಟುಂಬವು ಅಭಿವೃದ್ಧಿಯನ್ನು ಕಾಣಬಹುದು ಎಂದು ತಿಳಿದುಬಂದಿದೆ. ಮತ್ತು ಅಂತಹ ಪ್ರಯತ್ನ ಮಾಡುತ್ತಿದ್ದಾರೆ. ನಿರುದ್ಯೋಗ ಮತ್ತು ವಲಸೆ, ಅರ್ಥಿಕ ಪರಿಸ್ಥಿತಿ ಅವರನ್ನು ಹೆಚ್ಚು ಭಾದಿಸುತ್ತದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೧೫. ಪದವಿಪೂರ್ವ ಶಿಕ್ಷಣ ಮುಂದುವರಿಸುತ್ತಿರುವ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ ಪದವಿ ಪೂರ್ವ ಶಿಕ್ಷಣವನ್ನು ಮುಂದುವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	೧೪	೬೧	೨೫	೮೮	೨೩	೬೨
	ಹೆಣ್ಣು	೯	೩೯	೧೩	೧೨	೧೪	೩೮
	ಒಟ್ಟು	೨೩	೧೦೦	೩೮	೧೦೦	೩೭	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಲ್ಲಿ ಶೇ. ೬೦.೮೩ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೯.೧೪ ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ ಶೇ. ೮೮.೪೬ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೧೧.೫೩ ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು

ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೨.೧೬ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೭.೮೪ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ನೊಡಿದಾಗ ಮೂರು ತಾಲೂಕಿನ ಗ್ರಾಮಗಳನ್ನು ಹೋಲಿಕೆ ಮಾಡಿದಾಗ ದೇವದುರ್ಗ, ಲಿಂಗಸೂರು ಮತ್ತು ಸಿಂಧನೂರು ಗ್ರಾಮಗಳಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳನ್ನು ಪದವಿ ಪೂರ್ವ ಶಿಕ್ಷಣದಿಂದ ಬಿಡಿಸಿರುವುದು ಅಧ್ಯಯನಗಳಿಂದ ತಿಳಿಯಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಗಂಡು ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ವಿದ್ಯೆಯನ್ನು ಕಲಿಯಬಹುದು ಆದರೆ, ಹೆಣ್ಣುಮಕ್ಕಳು ಶಾಲೆಯನ್ನು ಕಲಿಯದೆ ಮನೆಯಲ್ಲಿಯೇ ಇದ್ದು ಮನೆಗೆಲಸ ಮಾಡುವುದ ಅಥವಾ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವಂತಹ ಮನಸ್ಥಿತಿಯನ್ನು ಹೊಂದಿದ್ದಾರೆ ಇಂತಹ ಹಲವು ಕಾರಣಗಳಿಂದ ಹೆಣ್ಣುಮಕ್ಕಳನ್ನು ಶಾಲೆಯನ್ನು ಬಿಡಿಸಿ ಅವರನ್ನು ಶಿಕ್ಷಣದಿಂದ ವಂಚಿಸಿ ಸಬಲೀಕರಣ ಎಂದು ಹೇಳುವ ಸಂದರ್ಭದಲ್ಲಿ ಅವರನ್ನು ದುಃಸ್ಥಿತಿಗೆ ತಳುವಂತಹ ಕೆಲಸ ನಡೆಯುತ್ತಿದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಕೊನೆಯದಾಗಿ ಮಹಿಳೆಯರನ್ನು ಸಹ ಗಂಡು ಮಕ್ಕಳನ್ನು ಹೇಗೆ ಗೌರವಿಸುತ್ತಿವೆಯೋ ಹಾಗೇ ಹೆಣ್ಣು ಮಕ್ಕಳನ್ನು ಸಹ ಗೌರವಿಸಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೧೬. ಪದವಿ ಶಿಕ್ಷಣದಲ್ಲಿ ದಾಖಲಾದ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ ಪದವಿ ಶಿಕ್ಷಣವನ್ನು ಮುಂದು ವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	೧೦	೫೯	೨೩	೭೦	೨೦	೬೧
	ಹೆಣ್ಣು	೭	೪೧	೧೩	೩೦	೧೧	೩೯
	ಒಟ್ಟು	೧೭	೧೦೦	೩೬	೧೦೦	೩೩	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಪದವಿ ಶಿಕ್ಷಣವನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೫೮.೮೨ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೪೧.೧೭ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ ರಷ್ಟರಲ್ಲಿ

ಶೇ. ೭೦.೩೭ರಷ್ಟು ಗಂಡು ಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೨೯.೬೩ ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೬೦.೬೦ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೯.೦೪ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಇಲ್ಲಿಯೂ ಸಹ ಮೂರು ತಾಲೂಕಿನಲ್ಲಿರುವ ಗ್ರಾಮಗಳನ್ನು ನೋಡಿದಾಗ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಫಲ ವಾಗಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇನ್ನು ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಿಸುವಲ್ಲಿ ವಿಫಲವಾಗಿರುವುದನ್ನು ಗುರಿತಿಸಲಾಗಿದೆ. ಕೊನೆಯದಾಗಿ, ಲಿಂಗ ಸಮಾನತೆಯ ದೃಷ್ಟಿಕೋನದಲ್ಲಿ ನೋಡಿದಾಗ ಗಂಡು ಮತ್ತು ಹೆಣ್ಣುಮಕ್ಕಳು ಸರಿ ಸಮನಾದ ಅಕ್ಷರವನ್ನು ಕಲಿಯುವುದು ಸಮಾಜದ ಸರ್ವತೋಮುಖ ಬೆಳವಣಿಗೆ ಎಂದು ತಿಳಿಯುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೧೭. ಸ್ನಾತಕೋತ್ತರ ಶಿಕ್ಷಣದಲ್ಲಿ ದಾಖಲಾದ ಮಕ್ಕಳ ಪ್ರಮಾಣ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ ಸ್ನಾತಕೋತ್ತರ ಶಿಕ್ಷಣವನ್ನು ಮುಂದು ವರಿಸುತ್ತಿರುವ ಮಕ್ಕಳ ಸಂಖ್ಯೆಯ ವಿವರ	ಗಂಡು	–	–	೧೮	೭೪	೯	೬೯
	ಹೆಣ್ಣು	–	–	೯	೨೬	೪	೩೧
	ಒಟ್ಟು	೧೦೦	೧೦೦	೨೭	೧೦೦	೧೩	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಮುಂದುವರಿಸುತ್ತಿರುವವರ ವಿವರವನ್ನು ತೋರಿಸಲಾಗಿದೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ ಶೇ. ೭೩.೬೮ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೨೬.೩೨ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಒಟ್ಟು ಶೇ. ೧೦೦ರಷ್ಟರಲ್ಲಿ

ಶೇ. ೬೯.೨೩ರಷ್ಟು ಗಂಡುಮಕ್ಕಳು ಶಾಲೆಯನ್ನು ಮುಂದುವರಿಸಿದ್ದಾರೆ. ಅದರಂತೆ, ಶೇ. ೩೦.೭೭ರಷ್ಟು ಹೆಣ್ಣುಮಕ್ಕಳು ಸ್ನಾತಕೋತ್ತರ ಶಿಕ್ಷಣವನ್ನು ಮುಂದುವರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಯಾಕೆಂದರೆ ಈ ಎರಡು ತಾಲೂಕಿಗೆ ಸ್ನಾತಕೊತ್ತರ ಕೇಂದ್ರಗಳು ಸ್ಥಳಿಯವಾಗಿರುವದರಿಂದ ಸಂದರ್ಶನಗೊಂಡವರು ಈ ರೀತಿಯಾಗಿ ಅಭಿಪ್ರಾಯ ನೀಡಿದ್ದಾರೆ.

ಒಟ್ಟಾರೆಯಾಗಿ ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಗಂಡಾಗಲಿ ಅಥವಾ ಹೆಣ್ಣಾಗಲಿ ಉನ್ನತ ವಿದ್ಯಾಭ್ಯಾಸವನ್ನು ಮುಂದುವರಿಸುವಲ್ಲಿ ವಿಫಲವಾಗಿದ್ದಾರೆ. ಸಂದರ್ಶನಗೊಂಡವರಲ್ಲಿ ಕಂಡುಬಂದಿಲ್ಲ. ಇಲ್ಲಿಯೂ ಸಹ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳು ಉನ್ನತ ವ್ಯಾಸಂಗಕ್ಕೆ ಕಳುಹಿಸಿರುವುದನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದಾಗಿದೆ. ಅಂದರೆ, ದೇವದುರ್ಗ ತಾಲೂಕು ಏಷ್ಯಾ ಖಂಡದಲ್ಲಿಯೇ ಅತೀ ಹಿಂದುಳಿದ ತಾಲೂಕಾಗಿದೆ. ಅದಲ್ಲದೆ, ಕೆಳಜಾತಿಯ ಸ್ಥಿತಿಯನ್ನು ತಿಳಿಯದಾಗಿದೆ. ಅಲ್ಲಿಯಾ ಜನ ಬೆಸಗಿ ಬಂತೆಂದರೆ ಬೇರೆ ಊರಿಗೆ ವಲಸೆ ಹೋಗುವ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಕೊಳ್ಳುವಲ್ಲಿ ಗಮನಹರಿಸುತ್ತಾರೆ. ಮುಂದುವರಿದು ಹೆಣ್ಣಿಗೆ ವಯಸ್ಸು ಆಯಿತು ಎಂದಾದರೆ ಅವರನ್ನು ಮದುವೆ ಮಾಡಿಕೊಟ್ಟರೆ ಸಾಕು ಎನ್ನುವ ಸ್ಥಿತಿಯಲ್ಲಿರುವುದರಿಂದ ಇಂತಹ ಹಲವು ಕಾರಣಗಳಿಂದ ಶಾಲೆಯನ್ನು ಬಿಡಿಸಿ ಅವರ ಅಕ್ಷರ ಜ್ಞಾನದಿಂದ ವಂಚಿತರನ್ನಾಗಿ ಮಾಡಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಕೊನೆಯದಾಗಿ ಗಂಡುಮಕ್ಕಳ ಜೊತೆಗೆ ಹೆಣ್ಣುಮಕ್ಕಳನ್ನು ಸಹ ಉತ್ತಮ ರೀತಿಯ ಶಿಕ್ಷಣವನ್ನು ಕೊಡಿಸುವ ಮೂಲಕ ಅವರನ್ನು ಎಲ್ಲಾ ರಂಗದಲ್ಲಿ ಸಬಲೀಕರಣಗೊಳಿಸುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ. ಮತ್ತು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ವರೆಗೂ ಸರಕಾರವೆ ಶಿಕ್ಷಣದ ವೆಚ್ಚವನ್ನು ನೋಡಿಕೊಳ್ಳಬೇಕು ಅರ್.ಟಿ.ಇ. ವ್ಯಾಪ್ತಿಗೆ ಹೆಣ್ಣುಮಕ್ಕಳನ್ನು ತರಬಾರದು.

ಕೋಷ್ಟಕ ೬.೧೮. ಆರೋಗ್ಯದ ಸ್ಥಿತಿಗತಿಗಳ ವಿವರಗಳು

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹೆರಿಗೆ ಎಲ್ಲಿ ಮಾಡಿಸುತ್ತೀರಿ	ಮನೆಯಲ್ಲಿ	೩೩	೩೩	೨೯	೨೯	೨೧	೨೧
	ಆಸ್ಪತ್ರೆಯಲ್ಲಿ	೬೭	೬೭	೭೧	೭೧	೭೯	೭೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಆರೋಗ್ಯದ ಸ್ಥಿತಿಯಲ್ಲಿ ಹೆರಿಗೆಯ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೩.೦೦ರಷ್ಟು ಕುಟುಂಬಗಳು ಹೆರಿಗೆಯನ್ನು ನಾವು ಮನೆಯಲ್ಲಿ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೬೭.೦೦ರಷ್ಟು ಕುಟುಂಬಗಳು ನಾವು ಮನೆಯಲ್ಲಿ ಮಾಡಿಸದೆ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೯.೦೦ರಷ್ಟು ಕುಟುಂಬಗಳು ಹೆರಿಗೆಯನ್ನು ನಾವು ಮನೆಯಲ್ಲಿ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೭೧.೦೦ರಷ್ಟು ಕುಟುಂಬಗಳು ನಾವು ಮನೆಯಲ್ಲಿ ಮಾಡಿಸದೆ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೧.೦೦ರಷ್ಟು ಕುಟುಂಬಗಳು ಹೆರಿಗೆಯನ್ನು ನಾವು ಮನೆಯಲ್ಲಿ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೭೯.೦೦ರಷ್ಟು ಕುಟುಂಬಗಳು ನಾವು ಮನೆಯಲ್ಲಿ ಮಾಡಿಸದೆ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ಮನೆಯಲ್ಲಿ ಮಾಡಿಸುವುದಕ್ಕಿಂತ ಆಸ್ಪತ್ರೆಯಲ್ಲಿ ಹೆರಿಗೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಸುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದರೂ ಸಹ ಮನೆಯಲ್ಲಿ ನೋಡಿದಾಗ ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮನೆಯಲ್ಲಿಯೇ ಮಾಡಿಸಿಕೊಳ್ಳುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಮನೆಯಲ್ಲಿ ಮಾಡಿಸಲು ಆರ್ಥಿಕವಾಗಿ ಹಿಂದುಳಿದಿದ್ದು ಅಲ್ಲದೇ ಸಾಂಪ್ರದಾಯಿಕವಾಗಿ ಮನೆಯಲ್ಲಿ ಮಾಡಿಸುತ್ತಾ ಬಂದಿದ್ದೇವೆ ಹಾಗಾಗಿ ನಮಗೆ ಯಾವ ಸಮಸ್ಯೆಗಳು ಆಗುವುದಿಲ್ಲ ಎನ್ನುವಂತಹ ಕಾರಣಗಳನ್ನು ನೀಡುತ್ತಾರೆ. ಕೊನೆಯದಾಗಿ ಹೆರಿಗೆಯನ್ನು ಆದಷ್ಟೂ ಆಸ್ಪತ್ರೆಯಲ್ಲಿಯೇ ಮಾಡಿಸಿಕೊಳ್ಳುವಂತಹ ಅರಿವನ್ನು ಜನರಿಗೆ ಮೂಡಿಸುವಂತಹ ಕಾರ್ಯ ಆಗಬೇಕಾಗಿದೆ ಎಂದು ತಿಳಿದು ಬಂದಿದೆ. ಮತ್ತು ಇಂತಹ ಹೆರಿಗೆಗೆ ಸಂಬಂದಿಸಿದ ಖಾಸಗಿ ಅಸ್ಪತ್ರೆಯಲ್ಲಿನ ಖರ್ಚು ವೆಚ್ಚವನ್ನು ಸರಕಾರವೆ ಭರಿಸಬೇಕು. ಯಾಕೆಂದರೆ ಸರಕಾರಿ ಅಸ್ಪತ್ರೆಯಲಿ ನಿರ್ಲಕ್ಷ್ಯ ಮಾಡುತ್ತಾರೆ ಎಂಬ ಬಾವನೆ ಬೇರೂರಿ ಬಿಟ್ಟಿದೆ ಹಾಗಾಗಿ ಖಾಸಗಿ ಅಸ್ಪತ್ರೆಗೆ ಹೋಗಿತ್ತಾರೆ. ಸರ್ವಾಜನಿಕ ಆರೋಗ್ಯ ವಿಚಾರದಲ್ಲಿ ಸರಕಾರ ಗಂಬೀರ ತಿರ್ಮಾನಗಳನ್ನು ಮತ್ತು ಕಾಯಿದೆ, ಕಾನೂನುಗಳನ್ನು ರೂಪಿಸುವ ಅಗತ್ಯವಿದೆ ಎಂಬ ಅಂಶವು ಅಧ್ಯಯನದಿಂದ ತಿಳಿದು ಬರುತ್ತದೆ.

ಕೋಷ್ಟಕ ೬.೧೯. ಹೆಣ್ಣುಮಕ್ಕಳ ಹೆರಿಗೆಗೆ ಸಂಬಂಧಪಟ್ಟ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಮನೆಯಲ್ಲಾದರೆ ಸೂಲಗಿತ್ತಿಯ ಸಹಾಯ ಪಡೆಯುತ್ತೀರಾ?	ಪಡೆಯುತ್ತೇವೆ	೨೭	೮೧.೨	೨೫	೮೬.೨೧	೨೧	೧೦೦
	ಇಲ್ಲಾ	೬	೧೮.೨	೪	೧೩.೭೯	–	–
	ಒಟ್ಟು	೩೩	೧೦೦	೨೯	೧೦೦	೨೧	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಆರೋಗ್ಯದ ಸ್ಥಿತಿಯಲ್ಲಿ ಹೆರಿಗೆಯು ಒಂದು ವೇಳೆ ಮನೆಯಲ್ಲಾದರೆ ಸೂಲಗಿತ್ತಿಯ ಸಹಾಯ ಪಡೆಯದವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೧.೧೮ರಷ್ಟು ಕುಟುಂಬಗಳು ಹೆರಿಗೆಯು ಮನೆಯಲ್ಲಾದರೆ ಸೂಲಗಿತ್ತಿಯ ಸಹಾಯವನ್ನು ಪಡೆಯುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೧೮.೧೮ರಷ್ಟು ಕುಟುಂಬಗಳು ಹೆರಿಗೆಯು ಮನೆಯಲ್ಲಿ ಆದರೆ ಸೂಲಗಿತ್ತಿಯ ಸಹಾಯವನ್ನು ಪಡೆಯುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೬.೨೧ರಷ್ಟು ಕುಟುಂಬಗಳು ಹೆರಿಗೆಯು ಮನೆಯಲ್ಲಾದರೆ ಸೂಲಗಿತ್ತಿಯ ಸಹಾಯವನ್ನು ಪಡೆಯುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೧೩.೭೯ರಷ್ಟು ಕುಟುಂಬಗಳು ಹೆರಿಗೆಯು ಮನೆಯಲ್ಲಿ ಆದರೆ ಸೂಲಗಿತ್ತಿಯ ಸಹಾಯವನ್ನು ಪಡೆಯುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೦೦ರಷ್ಟು ಕುಟುಂಬಗಳು ಹೆರಿಗೆಯು ಮನೆಯಲ್ಲಾದರೆ ಸೂಲಗಿತ್ತಿಯ ಸಹಾಯವನ್ನು ಪಡೆಯುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ನೋಡಿದಾಗ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖೆಯಲ್ಲಿ ಹೆರಿಗೆಯನ್ನು ಮಾಡಿಸುವಂತಹ ಸಂದರ್ಭದಲ್ಲಿ ಸೂಲಿಗಿತ್ತಿಯರನ್ನು ನೇಮಿಸುವಂತಹದ್ದು ಇನ್ನೂ ಅಸ್ತಿತ್ವದಲ್ಲಿದೆ ಎಂದು ತಿಳಿಯಲಾಗಿದೆ. ಅಲ್ಲದೇ ಮನೆಗಿಂತ ಆಸ್ಪತ್ರೆಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಹೆರಿಗೆಯನ್ನು ಮಾಡಿಸುವುದಾದರೂ ಸಹ ಮನೆಯಲ್ಲಿ ಆಗುವ ಹೆರಿಗೆಯನ್ನು ಸೂಲಗಿತ್ತಿಯರ ಹತ್ತಿರವೇ ಮಾಡಿಸುವುದು ಅವರಲ್ಲಿರುವ ಅನಕ್ಷರಸ್ಥರು, ನಮ್ಮಲ್ಲಿ ಹಣವಿಲ್ಲ ಎಂಬಿತ್ಯಾದಿ ಕಾರಣಗಳನ್ನು ಒಡ್ಡುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಆಸ್ಪತ್ರೆಗಿಂತ ಮನೆಯಲ್ಲಿ ಆಗುವ ಹೆರಿಗೆಗಳು

ಉತ್ತಮ ಯಾಕೆಂದರೆ, ಆಸ್ಪತ್ರೆಯಲ್ಲಿ ಇವತ್ತು ತುಂಬಾ ಹಣ ಇದ್ದರೆ ಮಾತ್ರ ಹೆರಿಗೆಯು ಆಗುತ್ತೆ ಮತ್ತು ಮಗುವು ಉಳಿಯುತ್ತೆ ಎಂದು ಕಾರಣಗಳನ್ನು ಕೊಡುತ್ತಾರೆ. ಕೊನೆಯದಾಗಿ, ಇಂತಹ ಸಂದರ್ಭಗಳನ್ನು ಮುಖ್ಯವಾಗಿ ಪರಿಗಣಿಸಿ ಆಸ್ಪತ್ರೆಗಳಲ್ಲಿ ಆಗುವಂತಹ ದರೋಡೆಯಿಂದ ಜನರು ಬೆಸತ್ತು ಇಂತಹ ಸುಲಿಗೆಯನ್ನು ನಿಲ್ಲಿಸುವಂತಹ ಅಗತ್ಯವಿದೆ ಎಂದು ತಿಳಿದು ಬಂದಿದೆ. ಇದರ ಜೊತೆಗೆ ಅಸ್ಪತ್ರೆಯಲ್ಲಿ ಮನುಷ್ಯತ್ವ ಎಂದರೆ ಕೆ.ಜಿ. ಎಷ್ಟು ಸಿಗುತ್ತದೆ ಎಂದು ಕೇಳುತ್ತಾರೆ. ಮೂದಲು ಹಣ ನಂತರ ಕೆಲಸ ಎಂದು ವಾದಿಸುತ್ತಾರೆ. ಈ ಪದ್ಧತಿ ಮೋದಲು ಹೋಗಬೇಕು ಮತ್ತು ಸಾರ್ವಜನಿಕ ಆರೋಗ್ಯ ನೀತಿಯನ್ನು ಕಟ್ಟುನಿಟ್ಟಿನ ಮೂಲಕ ಜಾರಿಗೆ ತರಬೇಕು.

ಕೋಷ್ಟಕ ೬.೨೦. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಾದ ಹೆರಿಗೆ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು
ಆಸ್ಪತ್ರೆ ಯಲ್ಲಾದರೆ	ಸರ್ಕಾರಿ	೪೨	೬೨.೭	೫೧	೭೧.೮೩	೬೩	೭೯.೭೫
	ಖಾಸಗಿ	೨೫	೩.೩೧	೨೦	೨೮.೧೭	೧೬	೨೦.೨೫
	ಒಟ್ಟು	೬೭	೧೦೦	೭೧	೧೦೦	೭೯	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಆರೋಗ್ಯದ ಸ್ಥಿತಿಯಲ್ಲಿ ಹೆರಿಗೆಯು ಒಂದು ವೇಳೆ ಆಸ್ಪತ್ರೆಯಲ್ಲಾದರೆ ಸೂಲಗಿತ್ತಿಯ ಸಹಾಯ ಪಡೆಯುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೨.೬೮ರಷ್ಟು ಕುಟುಂಬಗಳು ಹೆರಿಗೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೩.೩೧ರಷ್ಟು ಕುಟುಂಬಗಳು ಹೆರಿಗೆಯನ್ನು ಖಾಸಗೀ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೭೧.೮೩ರಷ್ಟು ಕುಟುಂಬಗಳು ಹೆರಿಗೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೨೮.೧೭ರಷ್ಟು ಕುಟುಂಬಗಳು ಹೆರಿಗೆಯನ್ನು ಖಾಸಗೀ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೭೯.೭೫ರಷ್ಟು ಕುಟುಂಬಗಳು ಹೆರಿಗೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೨೦.೨೫ರಷ್ಟು ಕುಟುಂಬಗಳು ಹೆರಿಗೆಯನ್ನು ಖಾಸಗೀ ಆಸ್ಪತ್ರೆಯಲ್ಲಿ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ಖಾಸಗೀ ಆಸ್ಪತ್ರೆಗಿಂತ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯನ್ನು ಮಾಡಿಸುವುದನ್ನು ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಖಾಸಗೀ ಆಸ್ಪತ್ರೆಯಲ್ಲಿ ಸರಳವಾದ ಹೆರಿಗೆಯನ್ನು ಮಾಡಿಸುವಂತಹ ಸ್ಥಿತಿ ಇದ್ದರೂ ಸಹ ಅದನ್ನು ಮಾಡಿಸದೆ ಶಸ್ತ್ರಚಿಕಿತ್ಸೆಯನ್ನು ಮಾಡುವುದರ ಮೂಲಕ ಹೆರಿಗೆಯನ್ನು ಮಾಡಿಸಿ ಬಾಯಿಗೆ ಬಂದ ಹಾಗೆ ಹಣವನ್ನು ಸುಲಿಯುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿಯೇ ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ, ಸರ್ಕಾರಿ ಆಸ್ಪತ್ರೆಯಲ್ಲಿಯೂ ಸಹ ಹೆರಿಗೆಯನ್ನು ಮಾಡಿಸುವಂತಹ ಸಂದರ್ಭದಲ್ಲಿ ಸಣ್ಣ ಪುಟ್ಟ ಹಣವನ್ನು ಕೇಳಿ ಪಡೆದ ನಂತರ ಹೆರಿಗೆಯನ್ನು ಮಾಡಿಸುವಂತಹದ್ದು ಇದೆ ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಕೊನೆಯದಾಗಿ, ಸರ್ಕಾರವು ಸ್ತ್ರೀಯರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಅವುಗಳು ಕೇವಲ ಪುಸ್ತಕದಲ್ಲಿದ್ದರೇ ಮಾತ್ರ ಸಾಧ್ಯವಾಗದು ಅವುಗಳನ್ನು ಅನುಷ್ಠಾನಕ್ಕೆ ತರುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೨೧. ಸಾಮಾಜಿಕ ಪ್ರತ್ಯೇಕತೆ ಬಗ್ಗೆ ಆಶಾಕಾರ್ಯಕರ್ತೆಯರ ದೃಷ್ಟಿಕೋನ

ಸೂಚಕಗಳು	**ಉಪ ಸೂಚಕಗಳು**	**ದೇವದುರ್ಗ ಪ.ಪಂ. ಮೀಸಲು ಕ್ಷೇತ್ರ**		**ಲಿಂಗಸೂರು ಪ.ಜಾ. ಮೀಸಲು ಕ್ಷೇತ್ರ**		**ಸಿಂಧನೂರು ಸಾಮಾನ್ಯ ಕ್ಷೇತ್ರ**	
		ಸಂಖ್ಯೆಗಳು	**ಶೇಕಡವಾರು**	**ಸಂಖ್ಯೆಗಳು**	**ಶೇಕಡವಾರು**	**ಸಂಖ್ಯೆಗಳು**	**ಶೇಕಡವಾರು**
ಆಶಾಕಾರ್ಯಕರ್ತೆಯರ ಸೇವೆ ತೃಪ್ತಿಕರವಾಗಿದೆಯಾ?	ಇದೆ	೧೯	೧೯	೨೩	೨೩	೩೯	೩೯
	ಇಲ್ಲಾ	೮೧	೮೧	೭೭	೭೭	೬೧	೬೧
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಆರೋಗ್ಯದ ಸುಧಾರಣೆಗಾಗಿ ಆಶಾಕಾರ್ಯಕರ್ತೆಯರ ಸೇವೆಯ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೯.೦೦ರಷ್ಟು ಕುಟುಂಬಗಳು ಆಶಾಕಾರ್ಯ ಕರ್ತೆಯರ ಸೇವೆ ಉತ್ತಮವಾಗಿದೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೮೧.೦೦ರಷ್ಟು ಕುಟುಂಬಗಳು ಆಶಾಕಾರ್ಯಕರ್ತೆಯರ ಸೇವೆ ಉತ್ತಮವಾಗಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೩.೦೦ರಷ್ಟು ಕುಟುಂಬಗಳು ಆಶಾಕಾರ್ಯಕರ್ತೆಯರ ಸೇವೆ ಉತ್ತಮವಾಗಿದೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ.

೭೭.೦೦ರಷ್ಟು ಕುಟುಂಬಗಳು ಆಶಾಕಾರ್ಯಕರ್ತೆಯರ ಸೇವೆ ಉತ್ತಮವಾಗಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೯.೦೦ರಷ್ಟು ಕುಟುಂಬಗಳು ಆಶಾಕಾರ್ಯಕರ್ತೆಯರ ಸೇವೆ ಉತ್ತಮವಾಗಿದೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೭೧.೦೦ರಷ್ಟು ಕುಟುಂಬಗಳು ಆಶಾಕಾರ್ಯಕರ್ತೆಯರ ಸೇವೆ ಉತ್ತಮವಾಗಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮಗಳಲ್ಲಿ ಆಶಾಕಾರ್ಯಕರ್ತೆರ ಸೇವೆ ಉತ್ತಮವಾಗಿರುವುದಕ್ಕಿಂತ ಉತ್ತಮವಾಗಿಲ್ಲ ಎಂದು ಹೇಳಿಕೊಂಡಿರುವುದನ್ನು ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಸಾಮಾನ್ಯರಿಗೆ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುವಲ್ಲಿ ಆಶಾಕಾರ್ಯಕರ್ತೆಯರು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಆದರೆ, ಇವರು ಗ್ರಾಮೀಣ ಪ್ರದೇಶಕ್ಕೆ ಯಾವಾಗಲೋ ಒಂದು ಬಾರಿ ಬರುತ್ತಾರೆಯೇ ವಿನಃ ತಿಂಗಳಿಗೊಮ್ಮೆಯೋ ಅಥವಾ ಹದಿನೈದು ದಿವಸಕ್ಕೆ ಒಂದು ಬಾರಿಯೋ ಬರದೆ ತಮ್ಮ ಸೇವೆಯನ್ನು ಕಳಪೆಗೊಳಿಸಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗುತ್ತದೆ. ಕೊನೆಯದಾಗಿ, ಸರ್ಕಾರದ ಅಡಿಯಲ್ಲಿ ಕೆಲಸವನ್ನು ಮಾಡುವ ಆಶಾಕಾರ್ಯಕರ್ತೆಯರು ತಮಗೆ ನೀಡುವಂತಹ ಸಂಬಳ ಆಗುವುದಿಲ್ಲ ಎಂದು ಹೇಳಿ ಅವರು ತಮ್ಮ ಕರ್ತವ್ಯನ್ನು ಸರಿಯಾಗಿ ನಿಭಾಯಿಸದೆಯಿರುವುದನ್ನು ಸಹ ಅಧ್ಯಯನಗಳಿಂದ ತಿಳಿಯಲಾಗಿದೆ. ಸರ್ಕಾರವು ಇಂತಹ ವಾತಾವರಣವನ್ನು ಗಮನಿಸುವುದರ ಮೂಲಕ ಅವರಿಗೆ ಸಂಬಳವನ್ನು ಯೋಗ್ಯ ರೀತಿಯಲ್ಲಿ ನೀಡುವ ಮೂಲಕ ಗ್ರಾಮೀಣ ಪ್ರದೇಶ ಜನರಿಗೆ ಸರಿಯಾದ ಸೇವೆಯನ್ನು ನೀಡಬೇಕಾದ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೨೨. ಗಂಭೀರ ಕಾಯಿಲೆಗೆ ತುತ್ತಾದ ಕುಟುಂಬಗಳ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಗಂಭೀರ ಖಾಯಿಲೆಗಳು ಇವೆಯಾ?	ಇವೆ	೩೭	೩೭	೨೬	೨೬	೪೭	೪೨
	ಇಲ್ಲಾ	೬೩	೬೩	೭೪	೭೪	೫೩	೫೮
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಅನಾರೋಗ್ಯದಿಂದ ಬಳುಲುವಾಗ ಗಂಭೀರ ಖಾಯಿಲೆಗಳ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೭.೦೦ರಷ್ಟು ಕುಟುಂಬಗಳಲ್ಲಿ ಗಂಭೀರ ಖಾಯಿಲೆಗಳು ಇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೬೩.೦೦ರಷ್ಟು ಕುಟುಂಬಗಳ ಗಂಭೀರ ಖಾಯಿಲೆಗಳು ಇಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೬.೦೦ರಷ್ಟು ಕುಟುಂಬಗಳಲ್ಲಿ ಗಂಭೀರ ಖಾಯಿಲೆಗಳು ಇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೭೪.೦೦ರಷ್ಟು ಕುಟುಂಬಗಳ ಗಂಭೀರ ಖಾಯಿಲೆಗಳು ಇಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೨.೦೦ರಷ್ಟು ಕುಟುಂಬಗಳಲ್ಲಿ ಗಂಭೀರ ಖಾಯಿಲೆಗಳು ಇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೫೮.೦೦ರಷ್ಟು ಕುಟುಂಬಗಳ ಗಂಭೀರ ಖಾಯಿಲೆಗಳು ಇಲ್ಲ ಎಂದು ಹೇಳಿಕೊಂಡಿದ್ದಾರೆ. ಮತ್ತು ಹೊಸ ಸಮಸ್ಯೆ ಎಂದರೆ ಅಪೌಷ್ಠಿಕತೆ, ಹಿಮೋಗ್ಲೋಬಿನ್ ಬಹುತೇಕರಲ್ಲಿ ಕಡಿಮೆ ಇರುವುದು ವರದಿಗಳಿಂದ ತಿಳಿದು ಬಂದಿದೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಗಮನಿಸಿದಾಗ ಮೂರು ತಾಲೂಕಿನ ಗ್ರಾಮಗಳಲ್ಲಿ ಸಿಂಧನೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಗಂಭೀರ ಖಾಯಿಲೆಗಳನ್ನು ಹೊಂದಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರಿಗೆ ಇರುವ ಗಂಭೀರ ಖಾಯಿಲೆಗಳು ಇರುವುದರಿಂದ ಅವರ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಸೌಲಭ್ಯಗಳು ಇಲ್ಲದೆಯಿರುವುದರಿಂದ ಅವರು ಖಾಸಗೀ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಳ್ಳುವ ಅನಿವಾರ್ಯತೆಯಿದೆ ಎಂದು ಅಧ್ಯಯನಗಳಿಂದ ತಿಳಿಯಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರಿಗೆ ತಮ್ಮ ನಿತ್ಯ ಜೀವನವನ್ನು ನಡೆಸಿಕೊಂಡು ಹೋಗುವದೆ ಒಂದು ದುಸ್ತರವಾಗಿದೆ. ಅಂದಹಾಗೆ ಅವರಿಗೆ ಸರ್ಕಾರದಿಂದ ಇರುವ ಸಹಾಯಧನಗಳಾಗಲ್ಲಿ ಮತ್ತು ಅವರಲ್ಲಿ ಯಾವ ವಿಮಾ ಸೌಲಭ್ಯಗಳು ಇಲ್ಲದೆ ದುಡಿದಿರುವ ಹಣವನ್ನು ಆರೋಗ್ಯಕ್ಕೆ ಇಡುವುದು ಅಲ್ಲದೇ ಸಾಲವನ್ನು ಮಾಡಿ ಚಿಕಿತ್ಸೆಯನ್ನು ಪಡೆಯುವಂತಹ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದಾರೆ. ಕೊನೆಯದಾಗಿ ಸರ್ಕಾರದಿಂದ ಕೊಡ ಮಾಡುವ ಆರೋಗ್ಯ ಸೌಲಭ್ಯಗಳನ್ನು ಬಡತನ ರೇಖೆಗಿಂತ ಕೆಳಗಿರುವವರಿಗೆ ಕೊಡಬೇಕೆಂಬ ಒಂದು ನಿಯಮವಿದೆ. ಆದರೆ ಇಂತಹ ಒಂದು ವ್ಯವಸ್ಥೆ ಸಮರ್ಥವಾಗಿ ಪರಿಗಣಿಸಿ ಪರಿಹಾರವನ್ನು ನೀಡುವಂತಹ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೨೩. ಆರೋಗ್ಯ ಕಾರ್ಡ್ ಹೊಂದಿದವರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಯಶಸ್ವಿನಿ ಮತ್ತು ವಾಜಪೇಯಿ ಆರೋಗ್ಯ ಕಾರ್ಡುನ್ನು ಹೊಂದಿದ್ದೀರಾ?	ಹೊಂದಿದ್ದೇವೆ	೧೬	೧೬	೨೧	೨೧	೪೭	೪೭
	ಇಲ್ಲಾ	೮೪	೮೪	೭೯	೭೯	೫೩	೫೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೊಷ್ಟಕದಲ್ಲಿ ಹೇಳಿರುವಂತೆ ಮೂರು ತಾಲೂಕಿನ ಗ್ರಾಮಗಳಲ್ಲಿ ಆನಾರೋಗ್ಯದಿಂದ ಬಳುಲುವಾಗ ಅವರಿಗೆ ಸಹಾಯಕ್ಕೆಂದು ಸಹಾಯಧನ ನೀಡುವಂತಹ ಕಾರ್ಡಿನ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೬.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೮೪.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೧.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೭೯.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೭.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಶೇ. ೫೩.೦೦ರಷ್ಟು ಕುಟುಂಬಗಳಲ್ಲಿ ಚಿಕಿತ್ಸೆಗಾಗಿ ಸರ್ಕಾರದಿಂದ ನೀಡುವ ಯಶಸ್ವಿನಿ ಮತ್ತು ವಾಜಪೇಯಿ ಕಾರ್ಡ್‌ನ್ನು ಹೊಂದಿಲ್ಲ ಎಂದು ಹೇಳುತ್ತಾ ನಾವು ಸರ್ಕಾರದಿಂದ ಸಿಗುವ ಸೌಲಭ್ಯಗಳಾವುವು ಮತ್ತು ಅದರಿಂದ ಬರುವ ಕಾರ್ಡುಗಳು ಯಾವುವು ಎಂಬುದೇ ಗೊತ್ತಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ಹೇಳುತ್ತಾ ಮುಂದುವರಿದು,

ಒಟ್ಟಾರೆಯಾಗಿ ಮೇಳಿನ ಅಂಶವನ್ನು ಪರಿಗಣಿಸಿದಾಗ ಮೂರು ತಾಲೂಕಿನ ಗ್ರಾಮಗಳಲ್ಲಿ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಸರ್ಕಾರದಿಂದ ಕೊಟ್ಟಿರುವ ಸಹಾಯಧನದ ಕಾರ್ಡುಗಳನ್ನು ಹೊಂದ್ದೇವೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸರ್ಕಾರ ನೀಡುವ ಆರೋಗ್ಯ ಸೌಲಭ್ಯದ ಕಾರ್ಡುಗಳನ್ನು ಪಡೆಯುವಲ್ಲಿ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳು ಹಿಂದೆ ಬಿದ್ದಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಕೊನೆಯದಾಗಿ ಯಾರು ರಾಜಕೀಯ ಮತ್ತು ಆರ್ಥಿಕವಾಗಿ ಸದೃಢರಾಗಿರುತ್ತಾರೋ ಅಂತಹವರು ಮಾತ್ರ ಈ ಆರೋಗ್ಯ ಕಾರ್ಡುಗಳನ್ನು ಪಡೆಯಬಹುದಾಗಿ. ಆದರೆ ಸಾಮಾನ್ಯ ಜನರು ಇಂತಹ ಕಾರ್ಡುಗಳನ್ನು ತಲುಪಿಸುವಂತಹ ತುರ್ತು ಅಗತ್ಯವಿದೆ ಎಂದು ತಿಳಿದು ಬಂದಿದೆ ಮತ್ತು ಆಸ್ಪತ್ರೆ ಖರ್ಚುವೆಚ್ಚಗಳ ಬಗ್ಗೆ ಮಾಹಿತಿ ಪಟ್ಟಿ ನೀಡಬೇಕು. ಆರೋಗ್ಯ ವಿಮೆಯ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ.

ಕೋಷ್ಟಕ ೬.೨೪. ವಸತಿ ಸೌಲಭ್ಯದ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮಗೆ ಸ್ವಂತ ಮನೆ ಇದೆಯಾ?	ಇದೆ	೪೭	೪೭	೬೪	೬೪	೫೭	೫೭
	ಇಲ್ಲಾ	೫೩	೫೩	೩೬	೩೬	೪೩	೪೩
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೭ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೫೩.೦೦ರಷ್ಟು ಕುಟುಂಬಗಳು ನಾವು ಯಾವ ಸೌತ ಮನೆಯನ್ನು ಹೊಂದದೆ ಗುಡಿಸಲು ಮತ್ತು ಬಾಡಿಗೆಯ ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೪.೦೦ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೩೬.೦೦ರಷ್ಟು ಕುಟುಂಬಗಳು ನಾವು ಯಾವ ಸ್ವಂತ ಮನೆಯನ್ನು ಹೊಂದದೆ ಗುಡಿಸಲು ಮತ್ತು ಬಾಡಿಗೆಯ ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಸಿಂಧನೂರು

ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೫೭.೦೦ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೪೩.೦೦ರಷ್ಟು ಕುಟುಂಬಗಳು ನಾವು ಯಾವ ಸೌತ ಮನೆಯನ್ನು ಹೊಂದದೆ ಗುಡಿಸಲು ಮತ್ತು ಬಾಡಿಗೆಯ ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಮತ್ತು ಕೌಟುಂಬಿಕ ವಿಘಟನೆಯಂದ ದಿನದಿಂದ ದಿನಕ್ಕೆ ವಸತಿ ಮತ್ತು ನಿವೇಶನ ಸಮಸ್ಯೇ ಗಂಭಿರ ಪರಿಣಾಮವನ್ನು ತರುತ್ತದೆ ಎಂದು ಅಧ್ಯಯನದಿಂದ ತಿಳುದು ಬಂದಿದೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಸ್ವಂತ ಮನೆಯನ್ನು ಹೊಂದಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಆದರೆ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀಸಲಾತಿಯವರು ಇರುವುದರಿಂದ ಅವರಿಗೆ ಮೀಸಲಾತಿಯಡಿಯಲ್ಲಿ ಮನೆಗಳು ದೊರಕಿರುವುದನ್ನು ಕಾಣಲಾಗಿದೆ. ಮುಂದುವರಿದು, ಸ್ವಂತ ಮನೆಯನ್ನು ಹೊಂದದೆ ಇರುವ ಕೆಲವರು ಯೋಜನೆಯಡಿ ಮನೆಗಳು ದೊರಕಿದೆ ಎಂದು ತೃಪ್ತಿಯನ್ನು ಸೂಚಿಸಿರುತ್ತಾರೆ. ಉಳಿದ ಕುಟುಂಬಗಳು ದೊರಕದಿರುವುದಕ್ಕೆ ಅತೃಪ್ತಿಯನ್ನು ತಿಳಿಸಿರುವುದು ಕಂಡುಬಂದಿದೆ. ಅದಲ್ಲದೇ ಸೌಲಭ್ಯ ದೊರಕದಿರಲು ಕಾರಣಗಳು ಕೇಳಿದಾಗ ಇತರೆ ಕಾರಣಗಳನ್ನು ನೀಡುತ್ತಾ ಅರ್ಧ ಭಾಗದ ಹಣ ಹಾಕಲು, ಆಗುವದಿಲ್ಲ ದಾಖಲಾತಿಗಳು ಇಲ್ಲ ಎಂದು, ಉಳಿದ ಕುಟುಂಬಗಳು ಲಂಚ ನೀಡಲಾಗಿಲ್ಲವೆಂದು ಅತೃಪ್ತಿಯನ್ನು ಹೊಂದಿರುವುದು ತಿಳಿದುಬಂದಿದೆ. ಮೇಲಿನ ಹೇಳಿಕೆಗಳನ್ನು ಕಂಡಾಗ ಸರ್ಕಾರದಿಂದ ಬಡವರಿಗಾಗಿ ನೀಡಿದ ಮನೆಗಳನ್ನು ಬಡವರಿಗೆ ಕೊಡುವಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಸರ್ಕಾರವು ಸೂಕ್ತ ಮಾರ್ಗದರ್ಶನವನ್ನು ನೀಡುವ ಅಗತ್ಯತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೨೫. ಸ್ವಂತ ಮನೆ ಮತ್ತು ಬಾಡಿಗೆ ನಿವೇಶನ ಹೊಂದಿದವರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಒಂದು ವೇಳೆ ಸ್ವಂತ ಮನೆಯಿಲ್ಲ ಅಂದರೆ ಬಾಡಿಗೆ ಮನೆಯಲ್ಲಿದ್ದೀರಾ	ಹೌದು	೧೩	೨೪.೫	೯	೨೫	೭	೧೬.೨೭
	ಇಲ್ಲ	೪೦	೭೫.೫	೨೭	೭೫	೩೬	೮೩.೭೨
	ಒಟ್ಟು	೫೩	೧೦೦	೩೬	೧೦೦	೪೩	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ಮನೆಯಿಲ್ಲ ಎಂದಾದರೆ ಅವರಿಗೆ ಬಾಡಿಗೆ ಮನೆಯಲ್ಲಿರುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೪.೫೨ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದದೆ ಬಾಡಿಗೆ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೭೫.೪೮ರಷ್ಟು ಕುಟುಂಬಗಳು ನಾವು ಯಾವ ಸ್ವಂತ ಮನೆಯನ್ನು ಹೊಂದದಿದ್ದರೂ ಸಹ ಬಾಡಿಗೆ ಮನೆಯನ್ನು ಹೊಂದದೆ ಗುಡಿಸಲು ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೫.೦೦ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದದೆ ಬಾಡಿಗೆ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೭೫.೦೦ರಷ್ಟು ಕುಟುಂಬಗಳು ನಾವು ಯಾವ ಸ್ವಂತ ಮನೆಯನ್ನು ಹೊಂದದಿದ್ದರೂ ಸಹ ಬಾಡಿಗೆ ಮನೆಯನ್ನು ಹೊಂದದೆ ಗುಡಿಸಲು ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೬.೨೭ರಷ್ಟು ಕುಟುಂಬಗಳು ನಮಗೆ ಸ್ವಂತ ಮನೆಯನ್ನು ಹೊಂದದೆ ಬಾಡಿಗೆ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಶೇ. ೮೩.೭೩ರಷ್ಟು ಕುಟುಂಬಗಳು ನಾವು ಯಾವ ಸ್ವಂತ ಮನೆಯನ್ನು ಹೊಂದದಿದ್ದರೂ ಸಹ ಬಾಡಿಗೆ ಮನೆಯನ್ನು ಹೊಂದದೆ ಗುಡಿಸಲು ಮನೆಯಲ್ಲಿ ವಾಸವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಮುಂದುವರಿದು, ಮೇಲಿನ ಜನರ ಜೊತೆಗೆ ಅವಲೋಕನ ಮತ್ತು ಮುಖಾ-ಮುಖಿ ಸಂದರ್ಶನ ಮಾಡಿದಾಗ ತಾಲೂಕು ಪ್ರದೇಶದಲ್ಲಿ ಬಾಡಿಗೆಯನ್ನು ಕೇಳಲಿಕ್ಕೆ ಹೋದಾಗ ಜಾತಿಯನ್ನು ಕೇಳಿದಂತಹ ಸಂದರ್ಭಗಳು ಎದುರಾಗಿರುವುದು ಕಂಡು ಬರುತ್ತದೆ. ಅದಕ್ಕೆ ಕೆಲವು ಸಂದರ್ಭದಲ್ಲಿ ಮಾನಸಿಕ ಹಿಂಸೆ ಅನುಭವಿಸಿದ ಉದಾಹರಣೆಗಳು ಇರುವುದನ್ನು ಸಹ ಅಧ್ಯಯನಗಳಿಂದ ತಿಳಿಯಲಾಗಿದೆ.

ಒಟ್ಟಾರೆಯಾಗಿ, ಮೂರು ತಾಲೂಕಿನ ಗ್ರಾಮಗಳನ್ನು ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಬಾಡಿಗೆಯ ಮನೆಯನ್ನು ಹೊಂದದೆಯಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಅಲ್ಲದೇ, ಮೂರು ತಾಲೂಕಿನಲ್ಲಿ ಸರಿಸುಮಾರು ಒಂದೇ ಪ್ರಮಾಣದಲ್ಲಿ ಬಾಡಿಗೆ ಮನೆಯನ್ನು ಹೊಂದದೆ ಯಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಇದರಿಂದ ಸಿಂಧನೂರು ತಾಲೂಕಿನಲ್ಲಿಯೂ ಸಹ ಬಡತನದಿಂದ ಕೂಡಿದ ವರ್ಗವೊಂದಿದೆ ಎಂದು ತಿಳಿದು ಬರುತ್ತದೆ. ಮೂರು ಕ್ಷೇತ್ರಗಳನ್ನು ವೈಯಕ್ತಿಕವಾಗಿ ವಸತಿ ನಿರ್ಮಿಸಿಕೊಳ್ಳಲಿಕ್ಕೆ ಆಗದೇ ಯೋಜನೆಯ ಫಲಾನುಭವಿಗಳಾಗಿದ್ದರು ಅವರು ವಸತಿಯಿಂದ ವಂಚಿತರಾಗಲು ಆರ್ಥಿಕವಾಗಿ ದುರ್ಬಲರಾಗಿದ್ದು, ಕೃಷಿಯೇತರ ಕೆಲಸಗಳಿಗೆ ಹೋಗದೆ ಕೂಲಿ ಮಾಡುತ್ತಾ ಕನಿಷ್ಠ ಮೂಲಭೂತ ಸೌಲಭ್ಯಗಳಿಗೂ ಸಹ ಸರ್ಕಾರ ಯೋಜನೆಗಳ ಮೇಲೆ ಅವಲಂಬಿತರಾಗಿದ್ದುಕೊಂಡಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಕನಿಷ್ಠ ಸೂರನ್ನು ಹೊಂದದೆಯಿರುವ ಸಾಮಾನ್ಯ ಜನರು ಇದ್ದಾರೆ ಅವರಿಗೆ ಸೂರನ್ನು ಒದಗಿಸಿಕೊಡುವ ಅಗತ್ಯತೆ ಮತ್ತು ವಸತಿ ಮೇಲಿನ ಕೆಲವು ಕಟ್ಟುನಿಟ್ಟಿನ ನಿಭಂದನೆಗಳನ್ನು ತೆಗೆಯುವ ಅಗತ್ಯವಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.

ಕೋಷ್ಟಕ ೬.೨೬. ವಸತಿ ಯೋಜನೆಯ ಲಾಭ ಪಡೆದವರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ, ನಿಮಗೆ ಯಾವುದಾದರೂ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆಯಾ?	ಸಿಕ್ಕಿದೆ	೨೮	೫೯.೬	೩೯	೬೦.೯೩	೧೭	೨೯.೮೨
	ಸಿಕ್ಕಿಲ್ಲಾ	೧೯	೪೦.೪	೨೫	೩೯.೦೬	೪೦	೭೦.೧೮
	ಒಟ್ಟು	**೪೭**	೧೦೦	**೬೪**	೧೦೦	**೫೭**	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ಮನೆಯಿಲ್ಲ ಎಂದಾದರೆ ಸರ್ಕಾರದಿಂದ ಯಾವುದಾದರೂ ಯೋಜನೆಯಿಂದ ವಸತಿ ಯೋಜನೆಯ ಸೌಲಭ್ಯದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೫೯.೫೭ರಷ್ಟು ಕುಟುಂಬಗಳು ನಮಗೆ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೪೦.೪೨ರಷ್ಟು ಕುಟುಂಬಗಳು ನಮಗೆ ಯಾವ ವಸತಿ ಯೋಜನೆಯ ಸೌಲಭ್ಯ ಸಿಕ್ಕಿಲ್ಲ ಎಂದು ತಿಳಿಸಿರುತ್ತಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೦.೯೩ರಷ್ಟು ಕುಟುಂಬಗಳು ನಮಗೆ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೩೯.೦೬ರಷ್ಟು ಕುಟುಂಬಗಳು ನಮಗೆ ಯಾವ ವಸತಿ ಯೋಜನೆಯ ಸೌಲಭ್ಯ ಸಿಕ್ಕಿಲ್ಲ ಎಂದು ತಿಳಿಸಿರುತ್ತಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೯.೮೨ರಷ್ಟು ಕುಟುಂಬಗಳು ನಮಗೆ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೭೦.೧೮ರಷ್ಟು ಕುಟುಂಬಗಳು ನಮಗೆ ಯಾವ ವಸತಿ ಯೋಜನೆಯ ಸೌಲಭ್ಯ ಸಿಕ್ಕಿಲ್ಲ ಎಂದು ತಿಳಿಸಿರುತ್ತಾರೆ. ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ಮೀಸಲಾತಿ ಕ್ಷೇತ್ರಗಳನ್ನು ಹೊಂದಿರುವ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಿಗಿಂತ ಸಾಮಾನ್ಯ ಕ್ಷೇತ್ರವಾದ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಸೌಲಭ್ಯದ ತಲುಪಿವಿಕೆಯು ಕಡಿಮೆ ಪ್ರಮಾಣದಲ್ಲಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಆದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟರು ಹೆಚ್ಚಾಗಿರುವ ಪ್ರದೇಶದಲ್ಲಿ ಸರ್ಕಾರದಿಂದ ಸಿಗುವ ಸೌಲಭ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಅವರಿಗೆ ಅದರ ಪ್ರಮಾಣ ಸಾಮಾನ್ಯ ಕ್ಷೇತ್ರಕ್ಕೆ ಹೋಲಿಕೆ ಮಾಡಿದಾಗ ಕಡಿಮೆ ಎನ್ನಬಹುದಾಗಿದೆ.

ಅದಲ್ಲದೇ ಸೌಲಭ್ಯವನ್ನು ಪಡೆಯಬೇಕಾದರೆ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಯೋಜನಾಕಾರರಿಗೆ ಹಣವನ್ನು ಕೊಡುವ ಮೂಲಕ ವಸತಿಯನ್ನು ಅವರ ಹೆಸರಿಗೆ ಹಾಕಿಸಿಕೊಳ್ಳುವಂತಹ ವ್ಯವಸ್ಥೆ ನಿರ್ಮಾಣವಾಗಿದೆ. ಕೊನೆಯದಾಗಿ, ಸೌಲಭ್ಯದ ಫಲಾನುಭವಿಗಳು ತಾವು ಆರ್ಥಿಕವಾಗಿ ಹಿಂದುಳಿದು ಮತ್ತು ಯಾವ ಅರಿವನ್ನು ಕಾಣದೆ ಯೋಜನೆಯಿಂದ ವಂಚಿತರಾಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಂತಹ ಒಂದು ದುರಾಡಳಿತವನ್ನು ತೆಗೆದು ಹಾಕುವಂತಹ ವ್ಯವಸ್ಥೆಯನ್ನು ನಿರ್ಮಿಸುವ ಅಗತ್ಯತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೨೭. ವಿವಿಧ ವಸತಿ ಯೋಜನೆಗಳ ಲಾಭ ಪಡೆದವರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹೌದಾದರೆ, ಯಾವ ಯೋಜನೆ	ಇಂದಿರಾ ಆವಾಸ್	೯	೩೨.೧	೧೯	೪೮.೭	೫	೨೯.೪
	ಆಶ್ರಯ ವಸತಿ ಯೋಜನೆ	೭	೨೫	೧೨	೩೦.೮	೦	೦
	ಅಂಬೇಡ್ಕರ್ ವಸತಿ ಯೋಜನೆ	೧೨	೪೨.೯	೮	೨೦.೫	೧೨	೭೦.೬
	ಒಟ್ಟು	೨೮	೧೦೦	೩೯	೧೦೦	೧೭	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲೆ ತಿಳಿಸಿರುವಂತೆ ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ಮನೆಯಿಲ್ಲ ಎಂದಾದರೆ ಸರ್ಕಾರದಿಂದ ಮನೆ ಪಡೆದವರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೨.೧೪ರಷ್ಟು ಕುಟುಂಬಗಳು ನಮಗೆ ಇಂದಿರಾ ಆವಾಸ್ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ, ಶೇ. ೨೫.೦೦ರಷ್ಟು ಕುಟುಂಬಗಳು ನಮಗೆ ಆಶ್ರಯ ವಸತಿ ಯೋಜನೆಯ ಸೌಲಭ್ಯ ಸಿಕ್ಕದೆ ಎಂದಿದ್ದಾರೆ. ಮುಂದುವರಿದು, ಶೇ. ೪೨.೮೫ರಷ್ಟು ಕುಟುಂಬಗಳು ನಮಗೆ ಅಂಬೇಡ್ಕರ್ ವಸತಿ ಯೋಜನೆಯ ಸೌಲಭ್ಯ ದೊರಕಿದೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೮.೭೨ರಷ್ಟು ಕುಟುಂಬಗಳು ನಮಗೆ ಇಂದಿರಾ ಆವಾಸ್ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ, ಶೇ. ೩೦.೭೬ರಷ್ಟು ಕುಟುಂಬಗಳು ನಮಗೆ ಆಶ್ರಯ ವಸತಿ ಯೋಜನೆಯ ಸೌಲಭ್ಯ ಸಿಕ್ಕದೆ ಎಂದಿದ್ದಾರೆ. ಮುಂದುವರಿದು, ಶೇ. ೨೦.೫೧ರಷ್ಟು ಕುಟುಂಬಗಳು ನಮಗೆ ಅಂಬೇಡ್ಕರ್ ವಸತಿ ಯೋಜನೆಯ ಸೌಲಭ್ಯ ದೊರಕಿದೆ ಎಂದಿದ್ದಾರೆ.

ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೨೯.೪೧ರಷ್ಟು ಕುಟುಂಬಗಳು ನಮಗೆ ಇಂದಿರಾ ಆವಾಸ್ ವಸತಿ ಯೋಜನೆಯ ಸೌಲಭ್ಯ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ಅದರಂತೆ, ಶೇ. ೭೦.೫೮ರಷ್ಟು ಕುಟುಂಬಗಳು ನಮಗೆ ಅಂಬೇಡ್ಕರ್ ವಸತಿ ಯೋಜನೆಯ ಸೌಲಭ್ಯ ದೊರಕಿದೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಹೇಳಿಕೆಯನ್ನು ನೋಡಿದಾಗ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಎಲ್ಲಾ ವಸತಿ ಯೋಜನೆಯ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲವಾಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಮೀಸಲಾತಿ ಕ್ಷೇತ್ರಗಳಾದ ದೇವದುರ್ಗಮತ್ತು ಲಿಂಗಸೂರು ತಾಲೂಕಿನಲ್ಲಿ ತಮಗೆ ಸ್ವಂತ ಮನೆಯನ್ನು ಹೊಂದಲು ಆಗದಿದ್ದರೂ ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಉಪಯೋಗ ಮಾಡಿಕೊಳ್ಳುವಲ್ಲಿ ಸಫಲವಾಗಿದ್ದಾರೆ. ಆದರೆ ಸಾಮಾನ್ಯ ಕ್ಷೇತ್ರವಾದ ಸೀಧನೂರಿನಲ್ಲಿ ಅವರ ಪ್ರಮಾಣ ಕಡಿಮೆಯಿರುವುದರಿಂದ ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲವಾಗಿರುವುದನ್ನು ಸಹ ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲಾತಿ ಕ್ಷೇತ್ರಗಳಲ್ಲಿ ಪರಿಷ್ಟರ ಸ್ಥಿತಿಯು ಉತ್ತಮವಾಗಿದ್ದು ಸಾಮಾನ್ಯ ಕ್ಷೇತ್ರದಲ್ಲಿ ಅವರ ಜೀವನವು ಶೋಚನೀಯವಾಗಿದೆ ಅಧ್ಯಯನಗಳಿಂದ ತಿಳಿಯಲಾಗುತ್ತದೆ. ಕೊನೆಯದಾಗಿ, ಪರಿಶಿಷ್ಟರ ಜೀವನ ಎಲ್ಲಾ ಸಂಧರ್ಭಗಳಲ್ಲಿ ಒಂದೇಯಾಗಿರುವುದರಿಂದ ಕೆಲವು ಪ್ರದೇಶದಲ್ಲಿಯೂ ಸಹ ಉತ್ತಮಗೊಳಿಸಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೭.೨೮. ಮನೆಯ ಮಾದರಿ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಹಾಗಾದರೆ, ನಿಮ್ಮ ಮನೆಯ ಮಾದರಿ ಯಾವುದು?	ಗುಡಿಸಲು	೧೪	೧೪	೭	೭	೯	೯
	ಮಣ್ಣಿನ ಮನೆ	–	–	೧೨	೧೨	–	–
	ಛಾವಣಿ ಸೀಟ್	೨೭	೨೭	೧೭	೧೭	೨೧	೨೧
	ಹಂಚಿನ ಮನೆ	೧೪	೧೪	–	–	೪೨	೪೨
	ಜನತಾ ಆಶ್ರಯ	೨೮	೨೮	೩೯	೩೯	೧೭	೧೭
	ಆರ್.ಸಿ.ಸಿ.	೧೭	೧೭	೨೫	೨೫	೧೧	೧೧
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಮೇಲಿನ ಕೋಷ್ಟಕವನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಜನರ ಮನೆಗಳು ಯಾವ ಮಾದರಿಯಲ್ಲಿ ಇವೆ ಎಂಬ ವಿವರವನ್ನು ತಿಳಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೧೪.೦೦ ರಷ್ಟು ಕುಟುಂಬಗಳು ನಾವು ಗುಡಿಸಲಿನ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಅಲ್ಲದೇ, ಶೇ. ೨೭.೦೦ ರಷ್ಟು ಕುಟುಂಬಗಳು ನಾವು ಛಾವಣಿ ಮನೆಯನ್ನು ನಿರ್ಮಿಸಿಕೊಂಡಿದ್ದೇವೆ. ಅದಲ್ಲದೇ, ಶೇ. ೧೪.೦೦ ರಷ್ಟು ಕುಟುಂಬಗಳು ಹಂಚಿನ ಮನೆಯನ್ನು ಹೊಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೨೮.೦೦ ರಷ್ಟು ಕುಟುಂಬಗಳು ಸಹ ಜನತಾ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಕೊನೆಯದಾಗಿ ಶೇ. ೧೭.೦೦ ರಷ್ಟು ಕುಟುಂಬಗಳು ನಾವು ಆರ್.ಸಿ.ಸಿ. ಮನೆಯನ್ನು ಹೊಂದಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೦೭.೦೦ ರಷ್ಟು ಕುಟುಂಬಗಳು ನಾವು ಗುಡಿಸಲಿನ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಹಾಗೆಯೇ, ಶೇ. ೧೨.೦೦ರಷ್ಟು ಕುಟುಂಬಗಳು ಮಣ್ಣಿನ ಮನೆಯನ್ನು ಹೊಂದಲಾಗಿದೆ ಎಂದಿದ್ದಾರೆ. ಅಲ್ಲದೇ, ಶೇ. ೧೭.೦೦ರಷ್ಟು ಕುಟುಂಬಗಳು ನಾವು ಛಾವಣಿ ಮನೆಯನ್ನು ನಿರ್ಮಿಸಿಕೊಂಡಿದ್ದೇವೆ. ಅದರಂತೆ, ಶೇ. ೩೯.೦೦ರಷ್ಟು ಕುಟುಂಬಗಳು ಸಹ ಜನತಾ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಕೊನೆಯದಾಗಿ ಶೇ. ೨೫.೦೦ ರಷ್ಟು ಕುಟುಂಬಗಳು ನಾವು ಆರ್.ಸಿ.ಸಿ. ಮನೆಯನ್ನು ಹೊಂದಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೦೯.೦೦ರಷ್ಟು ಕುಟುಂಬಗಳು ನಾವು ಗುಡಿಸಲಿನ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಅಲ್ಲದೇ, ಶೇ. ೨೧.೦೦ರಷ್ಟು ಕುಟುಂಬಗಳು ನಾವು ಛಾವಣಿ ಮನೆಯನ್ನು ನಿರ್ಮಿಸಿಕೊಂಡಿದ್ದೇವೆ. ಅದಲ್ಲದೇ, ಶೇ. ೪೨.೦೦ರಷ್ಟು ಕುಟುಂಬಗಳು ಹಂಚಿನ ಮನೆಯನ್ನು ಹೊಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅದರಂತೆ, ಶೇ. ೧೭.೦೦ರಷ್ಟು ಕುಟುಂಬಗಳು ಸಹ ಜನತಾ ಮನೆಯನ್ನು ಹೊಂದಿದ್ದೇವೆ ಎಂದಿದ್ದಾರೆ. ಕೊನೆಯದಾಗಿ ಶೇ. ೧೧.೦೦ರಷ್ಟು ಕುಟುಂಬಗಳು ನಾವು ಆರ್.ಸಿ.ಸಿ. ಮನೆಯನ್ನು ಹೊಂದಲಾಗಿದೆ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶಗಳನ್ನು ನೋಡಿದಾಗ ಸಾಮಾನ್ಯ ಕ್ಷೇತ್ರವಾದ ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ಮೀಸಲು ಕ್ಷೇತ್ರವಾದ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಸರಿಯಾಗಿ ನಿರ್ಮಿಸಿಕೊಂಡಿರುವುದನ್ನು ಅಧ್ಯಯನ ಗಳಿಂದ ತಿಳಿಯಲಾಗಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸಾಮಾನ್ಯ ಕ್ಷೇತ್ರದಲ್ಲಿ ಪರಿಶಿಷ್ಟರು ಎನ್ನುವ ಕಾರಣಕ್ಕೆ ಅವರ ಅಭಿವೃದ್ಧಿಯನ್ನು ಕಡೆಗಣಿಸಲಾಗಿದ್ದು ಹಾಗೆಯೇ ಮೀಸಲಾತಿ ಯನ್ನು ಹೊಂದಿರುವ ಕ್ಷೇತ್ರಗಳಲ್ಲಿ ಕೆಳಜಾತಿಯವರನ್ನು ಮುಖ್ಯವಾಗಿ ಪರಿಗಣಿಸಿ ಅವರಿಗೆ ಸರಿಯಾದ ಸೌಲಭ್ಯಗಳ ಬಳಕೆಯನ್ನು ಸದುಪಯೋಗವಾಗುವಂತೆ ಮಾಡಲಾಗಿದೆ. ಹಾಗಾಗಿ ಸಾಮಾನ್ಯ ಕ್ಷೇತ್ರ ದಲ್ಲಿರುವ ಪರಿಶಿಷ್ಟರನ್ನು ಸಹ ಮುಖ್ಯವಾಗಿ ಪರಿಗಣಿಸುವಂತಹ ಅವಶ್ಯಕತೆಯಿದೆ ಎಮದು ತಿಳಿದು ಬಂದಿದೆ.

ಕೋಷ್ಟಕ ೬.೨೯. ವಿದ್ಯುತ್ ಸೌಲಭ್ಯ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಮನೆಗೆ ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೀರಾ?	ಇದೆ	೯೦	೯೦	೮೮	೮೮	೯೩	೯೩
	ಇಲ್ಲಾ	೧೦	೧೦	೧೨	೧೨	೭	೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೇಲಿನ ಕೋಷ್ಟಕದಲ್ಲಿ ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ಮನೆಗೆ ವಿದ್ಯುತ್ತ್ ಸೌಲಭ್ಯದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೯೦.೦೦ರಷ್ಟು ಕುಟುಂಬಗಳು ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೧೦.೦೦ರಷ್ಟು ಕುಟುಂಬಗಳು ನಮಗೆ ವಿದ್ಯುತ್ ಸೌಲಭ್ಯ ಇಲ್ಲಾ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೮.೦೦ರಷ್ಟು ಕುಟುಂಬಗಳು ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೧೨.೦೦ರಷ್ಟು ಕುಟುಂಬಗಳು ನಮಗೆ ವಿದ್ಯುತ್ ಸೌಲಭ್ಯ ಇಲ್ಲಾ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೯೩.೦೦ರಷ್ಟು ಕುಟುಂಬಗಳು ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೦೭.೦೦ರಷ್ಟು ಕುಟುಂಬಗಳು ನಮಗೆ ವಿದ್ಯುತ್ ಸೌಲಭ್ಯ ಇಲ್ಲಾ ಎಂದಿದ್ದಾರೆ.

ಮೇಲಿನ ಅಂಶವನ್ನು ಪರಿಗಣಿಸಿದಾಗ ಸಾಮಾನ್ಯ ಕ್ಷೇತ್ರವಾದ ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ಮೀಸಲು ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಯೇ ವಿದ್ಯುತ್‌ನ ಸೌಲಭ್ಯವನ್ನು ಹೊಂದಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟರಿಗೆ ಸರ್ಕಾರದಿಂದ ಕೊಡಮಾಡುವ ಹಲವು ಸೌಲಭ್ಯಗಳು ಸಾಮಾನ್ಯ ಕ್ಷೇತ್ರದಲ್ಲಿ ದೊರೆಯದೆಯಿರುದನ್ನು ನೋಡಬಹುದಾಗಿದೆ. ಅಂದರೆ, ಕೆಳಜಾತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಿದ್ಯಾವಂತರಾಗಿದ್ದು ಅವರಿಗೆ ಕೂಲಿ-ನಾಲಿ ಮಾಡಿಕೊಂಡು ಊಟ ಉಪಚಾರವನ್ನು ಮಾಡಿಕೊಂಡಿರುವೊಂದೆ ಜೀವನವಾಗಿದೆ. ಕೊನೆಯದಾಗಿ ಸಾಮಾನ್ಯ ಕ್ಷೇತ್ರದಲ್ಲಿಯೂ ಸಹ ಪರಿಶಿಷ್ಟರ ಜೀವನಕ್ಕೆ ಆದ್ಯತೆಯನ್ನು ನೀಡುವಂತಹ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೦. ಸ್ವಂತ ಹಾಗೂ ಸರ್ಕಾರದಿಂದ ವಿದ್ಯುತ್ ಪಡೆದವರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಇದ್ದರೆ ಯಾವ ಬಗೆಯದು	ಭಾಗ್ಯಜ್ಯೋತಿ	೪೩	೪೩	೬೩	೬೩	೪೧	೪೧
	ಸ್ವಂತ	೫೭	೫೭	೩೭	೩೭	೫೯	೫೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ಮೂರು ತಾಲೂಕಿನ ಗ್ರಾಮೀಣವಾರು ಸಂದರ್ಶಿಸಿದಾಗ ಮನೆಗೆ ವಿದ್ಯುತ್ ಸೌಲಭ್ಯವಿದ್ದರೆ ಯಾವ ಬಗೆಯದು ಎಂಬ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೩.೦೦ರಷ್ಟು ಕುಟುಂಬಗಳು ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೫೭.೦೦ರಷ್ಟು ಕುಟುಂಬಗಳು ನಾವು ಸ್ವಂತ ವಿದ್ಯುತ್ ಸೌಲಭ್ಯ ಹೊಂದಿದ್ದೇವೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೩.೦೦ರಷ್ಟು ಕುಟುಂಬಗಳು ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೩೭.೦೦ರಷ್ಟು ಕುಟುಂಬಗಳು ನಾವು ಸ್ವಂತ ವಿದ್ಯುತ್ ಸೌಲಭ್ಯ ಹೊಂದಿದ್ದೇವೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೧.೦೦ರಷ್ಟು ಕುಟುಂಬಗಳು ಭಾಗ್ಯ ಜ್ಯೋತಿ ವಿದ್ಯುತ್ ಸೌಲಭ್ಯವನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಶೇ. ೫೯.೦೦ರಷ್ಟು ಕುಟುಂಬಗಳು ನಾವು ಸ್ವಂತ ವಿದ್ಯುತ್ ಸೌಲಭ್ಯ ಹೊಂದಿದ್ದೇವೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ಸಿಂಧನೂರು ತಾಲೂಕಿನ ಗ್ರಾಮಗಳಿಗಿಂತ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ವಂತ ಮತ್ತು ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಪಡೆಯುವಲ್ಲಿ ಸಫಲರಾಗಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೂರು ತಾಲೂಕಿನಲ್ಲಯೂ ಪರಿಷ್ಟರು ಇರುವುದಲ್ಲದೆ ಸಿಂಧನೂರಿನಲ್ಲಿರುವ ಪರಿಶಿಷ್ಟರು ಮಾತ್ರ ತಮಗೆ ಸಿಗುವ ಸೌಲಭ್ಯದಿಂದ ವಂಚಿತರಾಗಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಕೊನೆಯದಾಗಿ ಎಲ್ಲಾ ಪರಿಶಿಷ್ಟರು ಸಮಾಜದಿಂದ ತುಂಬಾ ಶೋಷಣೆಯನ್ನು ಅನುಭವಿಸುತ್ತಾ ಊರಿನ ಹೊರಗೆ ಇದ್ದುಕೊಂಡು ಗೌರಾನ್ವಿತ ಜೀವನವನ್ನು ನಡೆಸದೆ ಕಟ್ಟಕಡೆಯ ವ್ಯಕ್ತಿಯಾಗಿ ಇರುವುದನ್ನು ಕಾಣಲಾಗುತ್ತದೆ. ಇಂತಹ ಒಂದು ಸಂದರ್ಭವನ್ನು ಹೋಗಲಾಡಿಸುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೧. ಶೌಚಾಯಲವನ್ನು ಹೊಂದಿರುವುದರ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಮನೆಯಲ್ಲಿ ಶೌಚಾಲಯ ವಿದೆಯಾ?	ಇದೆ	೨೬	೨೬	೩೮	೩೮	೪೧	೪೧
	ಇಲ್ಲಾ	೭೪	೭೪	೬೨	೬೨	೫೯	೫೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಈ ಮೇಲಿನ ಕೋಷ್ಟಕದಲ್ಲಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯದ ವಿವರಗಳನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೨೬.೦೦ ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ ಎಂದು ತಿಳಿಸಿದ್ದಾರೆ. ಅದರಂತೆ ಶೇ. ೭೪.೦೦ರಷ್ಟು ಕುಟುಂಬಗಳು ಶೌಚಾಲಯಗಳ ಸೌಲಭ್ಯ ಇಲ್ಲ ಎಂದು ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಹಾಗೆಯೇ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೩೮.೦೦ರಷ್ಟು ಕುಟುಂಬಗಳು ಶೌಚಾಲಯದ ಸೌಲಭ್ಯ ಇದೆ ಎಂದು ತಿಳಿಸಿರುತ್ತಾರೆ. ಅದರಂತೆ ಉಳಿದ ಶೇ. ೬೨.೦೦ರಷ್ಟು ಕುಟುಂಬಗಳು ಯಾವುದೇ ರೀತಿಯ ಶೌಚಾಲಯಗಳ ಸೌಲಭ್ಯ ಹೊಂದಿಲ್ಲ ಎಂದು ತಿಳಿಸಿರುತ್ತಾರೆ. ಅದಲ್ಲದೇ, ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೪೧.೦೦ ರಷ್ಟು ಕುಟುಂಬಗಳು ಶೌಚಾಲಯ ಸೌಲಭ್ಯವನ್ನು ಹೊಂದಿದ್ದೇವೆ ಎಂದಿದ್ದಾರೆ. ಶೇ. ೫೯.೦೦ ರಷ್ಟು ಕುಟುಂಬಗಳು ಶೌಚಾಲಯವನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿಯೂ ಸರಿಸುಮಾರು ಒಂದೇ ಮಟ್ಟದಲ್ಲಿ ಶೌಚಾಲಯವನ್ನು ಹೊಂದದೆಯಿರುವುದನ್ನು ಅಧ್ಯಯನಗಳಿಂದ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲಾತಿ ಮತ್ತು ಸಾಮಾನ್ಯ ಕ್ಷೇತ್ರಗಳನ್ನು ಹೋಲಿಕೆ ಮಾಡಿ ನೋಡಿದಾಗ ಸರ್ಕಾರದಿಂದ ನೀಡುವ ಶೌಚಾಲಯವನ್ನು ಪಡೆಯುವುದು ತುಂಬಾ ಕಷ್ಟದ ಕೆಲಸವಾಗಿದೆ. ಯಾಕೆಂದರೆ ಸರ್ಕಾರಿ ಸಂಸ್ಥೆಯಲ್ಲಿ ಕೆಲಸವನ್ನು ಮಾಡುವ ಸಿಬ್ಬಂದಿಗಳಿಗೆ ಯಾರು ಹಣವನ್ನು ನೀಡುತ್ತಾರೆಯೋ, ರಾಜಕೀಯ ಬಲ ಇದ್ದವರಿಗೆ ಶೌಚಾಲಯವನ್ನು ಕಟ್ಟಿಸಿಕೊಳ್ಳಲು ಸಹಾಯಧನವನ್ನು ನೀಡುತ್ತಾರೆ. ಆದರೆ ಈ ಅಂಶವನ್ನು ಪರಿಗಣಿಸಿದಾಗ ಕಡಿಮೆ ಆದಾಯ ಮತ್ತು ಅನಕ್ಷರತೆಯಿಂದ ಜನರು ಸೌಲಭ್ಯ ಪಡೆಯಲಿಕ್ಕೆ ಆಗುತ್ತಿಲ್ಲ ಎಂಬ ಮಾಹಿತಿಯು ನಮಗೆ ಕಂಡುಬಂದಿದೆ. ಅಂದರೆ ಹಲವಾರು ಅಧ್ಯಯನಗಳಿಂದ ಮತ್ತು ವರದಿಗಳನ್ವಯವಾಗಿ ಭಾರತದಲ್ಲಿ ದಶಲಕ್ಷ ಜನ ಶೌಚಾಲಯ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂಬ ಅಂಶವು ತಿಳಿಯಲಾಗಿದೆ.

ಹಾಗಾಗಿ ಸ್ಥಳೀಯ ಮಟ್ಟದಿಂದ ಹಿಡಿದು ರಾಜ್ಯ ಮತ್ತು ಕೇಂದ್ರ ಮಟ್ಟದವರಿಗೂ ಸಾಮಾನ್ಯ ಜನರಿಗೆ ಸ್ವಚ್ಛತೆಯ ಬಗ್ಗೆ ಅರಿವುನ್ನು ಮೂಡಿಸುವ ಮೂಲಕ ಶೌಚಾಲಯಗಳನ್ನು ಸರಲ ರೀತಿಯಲ್ಲಿ ಎಲ್ಲಾರಿಗೂ ತಲುಪುವಂತೆ ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೨. ಸ್ವಂತ ಅಥವಾ ಸರ್ಕಾರ ನಿರ್ಮಿಸಿದ ಶೌಚಾಲಯದ ವಿವರ

ಸೂಚಕಗಳು	**ಉಪ ಸೂಚಕಗಳು**	**ದೇವದುರ್ಗ**		**ಲಿಂಗಸೂರು**		**ಸಿಂಧನೂರು**	
		ಪ.ಪಂ. ಮೀಸಲು ಕ್ಷೇತ್ರ		**ಪ.ಜಾ. ಮೀಸಲು ಕ್ಷೇತ್ರ**		**ಸಾಮಾನ್ಯ ಕ್ಷೇತ್ರ**	
		ಸಂಖ್ಯೆ ಗಳು	**ಶೇಕಡ ವಾರು**	**ಸಂಖ್ಯೆ ಗಳು**	**ಶೇಕಡ ವಾರು**	**ಸಂಖ್ಯೆ ಗಳು**	**ಶೇಕಡ ವಾರು**
ಇದ್ದರೆ ಸರ್ಕಾರ ಕಟ್ಟಸಿದ್ದಾ? ಅಥವಾ ನೀವು ಕಟ್ಟಿಸಿದ್ದೀರಾ?	ಸರ್ಕಾರ	೧೭	೬೫.೪	೨೧	೫೫.೩	೩೨	೭೮
	ಸ್ವಂತ	೯	೩೪.೬	೧೭	೪೪.೭	೯	೨೨
	ಒಟ್ಟು	**೨೬**	**೧೦೦**	**೩೮**	**೧೦೦**	**೪೧**	**೧೦೦**

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವಲ್ಲಿ ವಿವರಗಳನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೬೫.೩೮ ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸರ್ಕಾರ ನೀಡಿದೆ ಎಂದಿದ್ದಾರೆ. ಅದರಂತೆ ಶೇ. ೩೪.೬೧ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸ್ವಂತ ಹಣವನ್ನು ಬಳಸಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೫೫.೨೬ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸರ್ಕಾರ ಸೀಡಿದೆ ಎಂದಿದ್ದಾರೆ. ಅದರಂತೆ ಶೇ. ೪೪.೭೩ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸ್ವಂತ ಹಣವನ್ನು ಬಳಸಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೭೮.೦೪ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸರ್ಕಾರ ನೀಡಿದೆ ಎಂದಿದ್ದಾರೆ. ಅದರಂತೆ ಶೇ. ೨೧.೯೬ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸ್ವಂತ ಹಣವನ್ನು ಬಳಸಿದ್ದೇವೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳನ್ನು ನೋಡಿದಾಗ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ಸಿಂಧನೂರು ತಾಲೂಕಿನ ಗ್ರಾಮೀಣ

ಪ್ರದೇಶಗಳಲ್ಲಿ ಸ್ವಂತವಾಗಿ ಕಟ್ಟಿಸಿಕೊಂಡ ಶೌಚಾಲಯಗಳ ಪ್ರಮಾಣ ಕಡಿಮೆಯಿದೆ ಎಂದು ತಿಳಿದು ಬಂದಿದೆ. ಅಂದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಲವಾರು ಕಾರಣಗಳಿಂದ ತಮಗೆ ಸ್ವಂತತನದಿಂದ ಯಾವ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲಿಕ್ಕೆ ಸಾಧ್ಯವಾಗದೆ ಸಮುದಾಯ ಶೌಚಾಲಯವೋ ಅಥವಾ ಶೌಚಾಲಯಕ್ಕೆ ಹೊರಗಡೆಯೋ ಹೋಗುವುದನ್ನು ಅಧ್ಯಯನದ ಸಂದರ್ಭದಲ್ಲಿ ತಿಳಿಯಲಾಗಿದೆ. ಕೊನೆಯದಾಗಿ, ಸ್ವಂತ ಅಥವಾ ಸರ್ಕಾರದಿಂದ ಕಟ್ಟಿಸಿಕೊಳ್ಳುವಾಗ ಯಾವುದಾದರೂ ಆಗಲಿ ಪ್ರತಿಯೊಬ್ಬ ನಾಗರೀಕನಿಗೆ ಶೌಚಾಲಯವನ್ನು ನಿರ್ಮಿಸಿಕೊಡುವ ಅಗತ್ಯತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ: ೬.೩೩. ಕುಡಿಯುವ ನೀರಿನ ಸೌಲಭ್ಯದ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನೀರು ಸರಬುರಾಜು ವ್ಯವಸ್ಥೆ ಇದೆಯಾ?	ಇದೆ	೩೭	೩೭	೪೧	೪೧	೩೨	೩೨
	ಇಲ್ಲ	೬೩	೬೩	೫೯	೫೯	೬೮	೬೮
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೭.೦೦ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೬೩.೦೦ರಷ್ಟು ಕುಟುಂಬಗಳು ಯಾವ ನೀರಿನ ವ್ಯವಸ್ಥೆಯನ್ನು ಹೊಂದಿಲ್ಲ ಎಂದಿದ್ದಾರೆ. ಲಿಂಗಸೂರು ತಾಲೂಕಿನಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೪೧.೦೦ರಷ್ಟು ಕುಂಟುಂಬಗಳು ನೀರಿನ ಸೌಲಭ್ಯವನ್ನು ಹೊಂದಿದ್ದೇವೆ ಎಂದು ಹೇಳಿದ್ದಾರೆ. ಹಾಗೂ ಶೇ. ೫೯.೦೦ರಷ್ಟು ಕುಟುಂಬಗಳು ಯಾವ ನೀರಿನ ಸಣಲಭ್ಯವನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮಗಳಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೨.೦೦ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ಹೊಂದಿದ್ದಾರೆ. ಅಲ್ಲದೆ, ಶೇ. ೬೮.೦೦ರಷ್ಟು ಕುಟುಂಬಗಳು ಯಾವ ನೀರಿನ ಸೌಲಭ್ಯವನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ, ಮೂರು ತಾಲೂಕನ್ನು ನೋಡಿದಾಗ ಲಿಂಗಸೂರು ಮತ್ತು ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದ ಜನರಿಗಿಂತ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರನ್ನು ಹೊಂದಿರುವುದರ ಪ್ರಮಾಣ ಕಡಿಮೆಯಿರುವುದನ್ನು ನೋಡಲಾಗಿದೆ. ಅಂದರೆ, ಪರಿಶಿಷ್ಟರಿಗೆ ನೀಡಿರುವ ಮೂಲಭೂತ ಸೌಲಭ್ಯಗಳನ್ನು ನೋಡಿದಾಗ ಮೀಸಲು ಕ್ಷೇತ್ರಗಳಿಗಿಂತ ಸಾಮಾನ್ಯ ಕ್ಷೇತ್ರಗಳಿಗೆ ಕಡಿಮೆ ಪ್ರಮಾಣದಲ್ಲಿ ನೀಡಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲು ಕ್ಷೇತ್ರಗಳಾಗಿರುವುದರಿಂದ ಪರಿಶಿಷ್ಟರಿಗೆ ಅಲ್ಲಿ ವಾಸ ಮಾಡುವ ಸಾಮಾನ್ಯ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇವಾ ಸೌಲಭ್ಯಗಳನ್ನು ಒದಗಿಸುವ ಜೊತೆಗೆ ಪರಿಶಿಷ್ಟರಿಗೂ ಒದಗಿಸುವಂತಹ ಸಂದರ್ಭ ಬಂದು ಒದಗುತ್ತದೆ ಎನ್ನುವಂತಹ ಕಾರಣದಿಂದ ಅವರೂ ಹೆಚ್ಚಿನ ರೀತಿಯಲ್ಲಿ ಸಾಮಾನ್ಯ ಕ್ಷೇತ್ರಕ್ಕಿಂತ ಮೀಸಲು ಕ್ಷೇತ್ರದಲ್ಲಿರುವ ಜನರಿಗೆ ಹೆಚ್ಚಿನ ಸೌಲಭ್ಯವನ್ನು ನೀಡಲಾಗಿದೆ ಎಂದು ಹೇಳಲಾಗಿದೆ. ಆದರೆ, ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟರನ್ನು ಕಡೆಗಣಿಸಲಾಗಿದೆ ಎಂದು ತಿಳಿದು ಬಂದಿದೆ. ಕೊನೆಯದಾಗಿ, ಅಂದರೆ, ಸಾಮಾನ್ಯ ಕ್ಷೇತ್ರದಲ್ಲಿರುವ ಪರಿಶಿಷ್ಟರನ್ನು ಇಂತಹ ಹಲವಾರು ಸಾಮಾನ್ಯ ಸೌಲಭ್ಯಗಳಿಂದ ಕಡೆಗಣಿಸುವಂತಹದನ್ನು ಕಡಿಮೆ ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೪. ಕುಡಿಯುವ ನೀರು ಬಿಡುವ ದಿನಗಳು

ಸೂಚಕಗಳು	ಉಪ ಸೂಚಕಗಳು	ದೇವದುರ್ಗ ಪ.ಪಂ. ಮೀಸಲು ಕ್ಷೇತ್ರ		ಲಿಂಗಸೂರು ಪ.ಜಾ. ಮೀಸಲು ಕ್ಷೇತ್ರ		ಸಿಂಧನೂರು ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಒಂದು ವೇಳೆ ಇದೆ ಎಂದಾದರೆ ಎಷ್ಟು ಸಮಯ ಬಿಡುತ್ತಾರೆ	ದಿನಾಲು	–	–	–	–	೧೨	೧೨
	ದಿನ ಬಿಟ್ಟು ದಿನ	೪೧	೪೧	೩೯	೩೯	೪೧	೪೧
	೨ ದಿನಕ್ಕೊಮ್ಮೆ	೫೯	೫೯	೬೧	೬೧	೪೭	೪೭
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ಸರಬುರಾಜನ್ನು ಎಷ್ಟು ಸಮಯ ಬಿಡುತ್ತಾರೆ ಎನ್ನುವ ಬಗ್ಗೆ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೪೧.೦೦ರಷ್ಟು ಕುಟುಂಬಗಳು ನೀರು ಸರಬುರಾಜನ್ನು ದಿನ ಬಿಟ್ಟು ದಿನ ಮಾಡುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೫೯.೦೦ರಷ್ಟು ಕುಟುಂಬಗಳು ನೀರು ಸರಬುರಾಜು ವ್ಯವಸ್ಥೆಯನ್ನು ಎರಡು ದಿನಕ್ಕೊಮ್ಮೆ ಮಾಡುತ್ತಾರೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ.

೧೦೦ರಷ್ಟರಲ್ಲಿ ಶೇ. ೩೯.೦೦ರಷ್ಟು ಕುಟುಂಬಗಳು ನೀರು ಸರಬುರಾಜನ್ನು ದಿನ ಬಿಟ್ಟು ದಿನ ಮಾಡುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೬೧.೦೦ರಷ್ಟು ಕುಟುಂಬಗಳು ನೀರು ಸರಬುರಾಜು ವ್ಯವಸ್ಥೆಯನ್ನು ಎರಡು ದಿನಕ್ಕೊಮ್ಮೆ ಮಾಡುತ್ತಾರೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೨.೦೦ರಷ್ಟು ಕುಟುಂಬಗಳು ನೀರು ಸರಬುರಾಜನ್ನು ದಿನಾಲು ಮಾಡುತ್ತಾರೆ ಎಂದಿದ್ದಾರೆ. ಅಲ್ಲದೇ, ಶೇ. ೪೧.೦೦ರಷ್ಟು ಕುಟುಂಬಗಳು ನೀರು ಸರಬುರಾಜನ್ನು ದಿನ ಬಿಟ್ಟು ದಿನ ಮಾಡುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೪೭.೦೦ರಷ್ಟು ಕುಟುಂಬಗಳು ನೀರು ಸರಬುರಾಜು ವ್ಯವಸ್ಥೆಯನ್ನು ಎರಡು ದಿನಕ್ಕೊಮ್ಮೆ ಮಾಡುತ್ತಾರೆ ಎಂದಿದ್ದಾರೆ.

ಒಟ್ಟಾರೆಯಾಗಿ, ಮೂರು ತಾಲೂಕನ್ನು ನೋಡಿದಾಗ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಕ್ಕಿಂತ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ನೀರು ಸರಬುರಾಜು ದಿನಾಲು ಕಡಿಮೆ ಪ್ರಮಾಣದಲ್ಲಿ ಮಾಡುತ್ತಿರುವುದನ್ನು ಅಧ್ಯಯನಗಳಿಂದ ತಿಳಿದು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ನೀರು ಪಡೆಯುವುದು ಮಾನವನ ಹಕ್ಕು ಅದನ್ನು ಪಡಿಯುವುದು ಅವರ ಕರ್ತವ್ಯ ಕೂಡ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟರಲ್ಲಿಯೇ ಹೆಚ್ಚಿನ ಜನಕ್ಕೆ ದಿನಾಲು ಬಿಡುವ ನೀರು ಸಿಗುತ್ತಿಲ್ಲ ಅದು ಸಾಮಾನ್ಯರು ಇರುವ ಪ್ರದೇಶದಲ್ಲಿ ಬಿಡುವುದರಿಂದ ಅದನ್ನು ತೆಗೆದುಕೊಂಡು ಬರುತ್ತೇವೆ ಎಂದಿದ್ದಾರೆ. ಅಂದರೆ, ಮೂರು ಪ್ರದೇಶಗಳಿಗೆ ಹೋಲಿಕೆಯನ್ನು ಮಾಡಿದಾಗ ಸರಿಸುಮಾರು ಒಂದೇ ಪ್ರಮಾಣದಲ್ಲಿ ನೀರಿನ ಸರಬುರಾಜನ್ನು ಮಾಡಲಾಗುತ್ತದೆ ಎಂದಿದ್ದಾರೆ. ಕೊನೆಯದಾಗಿ, ನೀರಿನ ಅಗತ್ಯತೆ ತುಂಬಾ ಇರುವುದರಿಂದ ಅದನ್ನು ಬಿಟ್ಟು ಜೀವನ ಮಾಡಲಿಕ್ಕೆ ಹೇಗೆ ಸಾಧ್ಯವಿಲ್ಲ ಹಾಗಾಗಿ ಎಲ್ಲಾರಿಗೂ ಸಮಾನತೆಯಿಂದ ನೀರನ್ನು ಸರಬುರಾಜು ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದುಬಂದಿದೆ.

ಕೋಷ್ಟಕ ೬.೩೫. ಕುಡಿಯುವ ನೀರಿನ ಗುಣಮಟ್ಟದ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನೀರಿನ ಗುಣಮಟ್ಟ ಹೇಗಿದೆ?	ಉತ್ತಮ	೧೭	೧೭	೨೩	೨೩	೧೬	೧೬
	ಉತ್ತಮವಾಗಿಲ್ಲ	–	–	–	–	–	–
	ಪರವಾಗಿಲ್ಲ	೮೩	೮೩	೭೭	೭೭	೮೪	೮೪
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ಗುಣಮಟ್ಟದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೧೭.೦೦ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಉತ್ತಮವಾಗಿದೆ ಎಂದಿದ್ದಾರೆ. ಅದರಂತೆ, ಶೇ. ೮೩.೦೦ ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಪರವಾಗಿಲ್ಲ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಲ್ಲಿ ಶೇ. ೨೩.೦೦ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಉತ್ತಮವಾಗಿದೆ ಎಂದಿದ್ದಾರೆ. ಅದರಂತೆ, ಶೇ. ೭೭.೦೦ ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಪರವಾಗಿಲ್ಲ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಲ್ಲಿ ಶೇ. ೧೬.೦೦ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಉತ್ತಮವಾಗಿದೆ ಎಂದಿದ್ದಾರೆ. ಅದರಂತೆ, ಶೇ. ೮೪.೦೦ ರಷ್ಟು ಕುಟುಂಬಗಳು ನೀರಿನ ಗುಣಮಟ್ಟ ಪರವಾಗಿಲ್ಲ ಎಂದಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕಿನ ಗ್ರಾಮಗಳನ್ನು ನೋಡಿದಾಗ ಸರಿಸುಮಾರು ನೀರಿನ ಗುಣಮಟ್ಟ ಉತ್ತಮವಾಗಿರುವುದರ ಫಲಿತಾಂಶ ಕಡಿಮೆ ಪ್ರಮಾಣದಲ್ಲಿದ್ದು, ಪರವಾಗಿಲ್ಲ ಎಂಬ ಅಂಶವು ಹೆಚ್ಚಿನ ಪ್ರಮಾಣದಲ್ಲಿದೆ ಎನ್ನಲಾಗಿದೆ. ಅಂದರೆ, ನೀರು ಸರಬುರಾಜು ಮಾಡುವುದು ಒಂದೇ ಅಲ್ಲ ಅದರ ಜೊತೆಗೆ ನೀರನ್ನು ಗುಣಮಟ್ಟದ ರೀತಿಯಲ್ಲಿ ಸರಬುರಾಜು ಮಾಡಬೇಕಾಗುತ್ತದೆ. ಅಂದರೆ, ನೀರು ಎಷ್ಟೇ ಪ್ರಮಾಣದಲ್ಲಿದ್ದರೂ ಅದನ್ನು ಬಳಸಲು ಉಪಯುಕ್ತ ಇದ್ದಾಗ ಮಾತ್ರ ಅದರಿಂದ ಸಮಾಜದಲ್ಲಿರುವ ಎಲ್ಲಾರೂ ಬೆಳವಣಿಗೆಯನ್ನು ಕಾಣಬಹುದಾಗಿದೆ. ಇಂತಹ ಒಂದು ವಾತಾವರಣವನ್ನು ಪರಿಗಣಿಸಿದಾಗ ಪ್ರತಿಯೊಬ್ಬ ಪ್ರಜೆಯು ನೀರು ಪಡೆಯುವುದಲ್ಲದೆ ಗುಣಮಟ್ಟದ ನೀರನ್ನು ಪಡೆಯುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೬. ಕುಡಿಯುವ ನೀರಿನ ಸಂಪರ್ಕದ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನೀರಿನ ಸಂಪರ್ಕ ಎಲ್ಲಿದೆ?	ಹೊರಗಿದೆ	೨೧	೫೬.೮	೨೯	೭೦.೭	೧೮	೫೬.೩
	ಒಳಗಿದೆ	೧೬	೪೩.೨	೧೨	೨೯.೨	೧೪	೪೩.೮
	ಒಟ್ಟು	೩೭	೧೦೦	೪೧	೧೦೦	೩೨	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ಸಂಪರ್ಕದ ವ್ಯವಸ್ಥೆಯ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಲ್ಲಿ ಶೇ. ೫೬.೭೫ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ಹೊರಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೪೩.೨೪ ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ಒಳಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಲ್ಲಿ ಶೇ. ೨೦.೭೩ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ಹೊರಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೭೯.೨೪ ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ಒಳಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೫೬.೨೫ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ಹೊರಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೪೩.೭೫ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ಒಳಗಡೆ ಮಾಡಿಕೊಂಡಿದ್ದೇವೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಮೂರು ತಾಲೂಕಿನಲ್ಲಿರುವ ಗ್ರಾಮೀಣ ಪ್ರದೇಶದಲ್ಲಿರುವ ಜನರಲ್ಲಿ ನೀರಿನ ಸಂಪರ್ಕವು ಹೆಚ್ಚಿನ ಪ್ರಮಾಣದಲ್ಲಿ ಹೊರಗಡೆ ಯಿರುವುದನ್ನು ನೋಡಲಾಗಿದೆ. ಅಂದರೆ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಇಲ್ಲಿರುವ ಸಂಪರ್ಕದ ಪ್ರಮಾಣದಲ್ಲಿ ಸಾರ್ವಜನಿಕ ನಳವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಹಾಗಾಗಿ ಅಂತಹ ನಳಗಳು ಹೊರಗಡೆಯಿರುವುದನ್ನು ಕಾಣಲಾಗಿದೆ. ಈ ರೀತಿಯ ವಾತಾವರಣವನ್ನು ಕಂಡು ಮೂರು ತಾಲೂಕಿನಲ್ಲಿರುವ ಜನರ ಆರ್ಥಿಕ ಸ್ಥಿತಿಯು ತುಂಬಾ ಶೋಚನಿಯವಾಗಿರುವುದು ಅಧ್ಯಯನಗಳಿಂದ ತಿಳಿಯಲಾಗಿದೆ. ಅದಲ್ಲದೆ, ನೀರನ್ನು ಸರಬುರಾಜು ಮಾಡುವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಫಲವಾಗಿರುವುದನ್ನು ನೋಡಲಾಗಿದೆ. ಮುಂದುವರಿದು ನೀರಿನ ಸಂಪರ್ಕದ ವಿಚಾರದಲ್ಲಿ ಬಂದಾಗ ಅಲ್ಲಿಯೂ ಕೂಡ ಯಾವ ಹೆಚ್ಚಿನ ಜನರು ಸುಸಜ್ಜಿತವಾದ ನೀರಿ ಸರಬುರಾಜು ವ್ಯವಸ್ಥೆಯನ್ನು ಮಾಡುವಲ್ಲಿ ವಿಫಲವಾಗಿರುವುದನ್ನು ಸಹ ಕಂಡುಕೊಳ್ಳಲಾಗಿದೆ. ಇಂತಹ ವಿಚಾರವನ್ನು ಪ್ರಮುಖವಾಗಿ ಪರಿಗಣಿಸಿ ನೀರಿನ ಸರಬುರಾಜನ್ನು ಸಮರ್ಥವಾಗಿ ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೭. ಕುಡಿಯುವ ನೀರಿನ ಸಂಗ್ರಹಕ್ಕೆ ಇರುವ ಅಂತರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು	ಸಂಖ್ಯೆ ಗಳು	ಶೇಕಡ ವಾರು
ಹೊರಗಿದ್ದರೆ, ನಿಮ್ಮ ಮನೆ ಯಿಂದ ನೀರಿನ ಜಾಗಕ್ಕೆ ಎಷ್ಟು ದೂರ ಇದೆ?	೫೦ ಮೀ.	೧೪	೬೬.೭	೧೩	೪೪.೮	೧೩	೭೨.೨
	೧೦೦ ಮೀ.	೭	೩೩.೩	೧೬	೫೫.೨	೫	೨೭.೮
	ಒಟ್ಟು	೨೧	೧೦೦	೨೯	೧೦೦	೧೮	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ಸಂಪರ್ಕದ ಅಂತರದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಲ್ಲಿ ಶೇ. ೬೬.೬೭ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ೫೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೩೩.೩೪ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ೧೦೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಲ್ಲಿ ಶೇ. ೪೪.೮೩ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ೫೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೫೫.೧೭ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ೧೦೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಲ್ಲಿ ಶೇ. ೭೨.೨೨ರಷ್ಟು ಕುಟುಂಬಗಳು ನೀರು ಸೌಲಭ್ಯವನ್ನು ೫೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೨೭.೭೮ ರಷ್ಟು ಕುಟುಂಬಗಳು ನೀರಿನ ಸೌಲಭ್ಯವನ್ನು ೧೦೦ ಮೀಟರ್‌ಯಿಂದ ಮಾಡಿಕೊಂಡಿದ್ದೇವೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ದೇವದುರ್ಗ ಮತ್ತು ಸಿಂಧನೂರು ತಾಲೂಕಿಗಿಂತ ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮನೆಯಿಂದ ದೂರ ಹೋಗಿ ನೀರನ್ನಾ ತೆಗೆದುಕೊಂಡು ಬರಬೇಕಾದ ಸನ್ನಿವೇಶಯಿದೆ ಎಂದು ತಿಳಿಯಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಮೀಸಲು ಕ್ಷೇತ್ರವಾದ ಲಿಂಗಸೂರು ತಾಲೂಕಿನ ಗ್ರಾಮೀಣ

ಪ್ರದೇಶದಲ್ಲಿಯೇ ಪರಿಶಿಷ್ಟರಿಗೆ ನೀರನ್ನು ಪಡೆಯಬೇಕಾದರೆ ದೂರ ಹೋಗಿ ತರಬೇಕಾದ ಪ್ರಸಂಗವಿದೆ ಎನ್ನಲಾಗಿದೆ. ಹಾಗಾಗಿ ಪರಿಶಿಷ್ಟರು ಎನ್ನುವ ಕಾರಣಕ್ಕೆ ಅವರನ್ನ ಸಮಾಜದ ಕೊನೆಯ ಸ್ಥಾನದಲ್ಲಿಟ್ಟು ನೋಡುವುದು ದುರಂತವೆನ್ನಲಾಗುತ್ತದೆ. ಹಾಗಾಗಿ ಅವರು ವಾಸ ಮಾಡುವ ಸ್ಥಳಗಳಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಸಜ್ಜಿತವಾಗಿ ಮಾಡಬೇಕಾದ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೮. ಕುಡಿಯುವ ನೀರಿನ ಸಮರ್ಪಕ ಪೂರೈಕೆಯ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಬಳಕೆಗೆ ಸಾಕಷ್ಟು ನೀರು ಪೂರೈಕೆ ಯಾಗುತ್ತದೆಯಾ?	ಆಗುತ್ತೆ	೩೧	೩೧	೩೮	೩೮	೨೧	೨೧
	ಆಗಲ್ಲಾ	೬೯	೬೯	೬೨	೬೨	೭೯	೭೯
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರು ಬಳಕೆಗೆ ಬೇಕಾಗುವಷ್ಟು ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೩೧.೦೦ರಷ್ಟು ಕುಟುಂಬಗಳು ನೀರಿನ ಪೂರೈಕೆ ಸಾಕಷ್ಟು ಆಗುತ್ತದೆ ಎಂದಿದ್ದಾರೆ. ಅದರಂತೆ, ಶೇ. ೬೯.೦೦ರಷ್ಟು ಕುಟುಂಬಗಳು ನೀರಿನ ಸೌಲಭ್ಯದಿಂದ ಸಾಕಷ್ಟು ಪೂರೈಕೆಯಾಗುವುದಿಲ್ಲ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೩೮.೦೦ರಷ್ಟು ಕುಟುಂಬಗಳು ನೀರಿನ ಪೂರೈಕೆ ಸಾಕಷ್ಟು ಆಗುತ್ತದೆ ಎಂದಿದ್ದಾರೆ. ಅದರಂತೆ, ಶೇ. ೬೨.೦೦ರಷ್ಟು ಕುಟುಂಬಗಳು ನೀರಿನ ಸೌಲಭ್ಯದಿಂದ ಸಾಕಷ್ಟು ಪೂರೈಕೆಯಾಗುವುದಿಲ್ಲ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೨೧.೦೦ರಷ್ಟು ಕುಟುಂಬಗಳು ನೀರಿನ ಪೂರೈಕೆ ಸಾಕಷ್ಟು ಆಗುತ್ತದೆ ಎಂದಿದ್ದಾರೆ. ಅದರಂತೆ, ಶೇ. ೭೯.೦೦ರಷ್ಟು ಕುಟುಂಬಗಳು ನೀರಿನ ಸೌಲಭ್ಯದಿಂದ ಸಾಕಷ್ಟು ಪೂರೈಕೆಯಾಗುವುದಿಲ್ಲ ಎಂದಿದ್ದಾರೆ.

ಒಟ್ಟಾರೆಯಾಗಿ ಮೂರು ತಾಲೂಕುಗಳನ ಮಾಹಿತಿಯನ್ನು ಗಮನಿಸಿದಾಗ ದೇವದುರ್ಗ ಮತ್ತು ಸಿಂಧನೂರು ತಾಲೂಕುಗಳಿಗಿಂತ ಲಿಂಗಸೂರು ತಾಲೂಕಿನಲ್ಲಿಯೇ ಹೆಚ್ಚಿನ ನೀರಿನ ಪ್ರಮಾಣವಿರುವುದನ್ನು ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಇವೆರೆಡು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟರನ್ನು ಹೆಚ್ಚಿನ ಪ್ರಮಾಣದಲ್ಲಿ ಕಡೆಗಣಿಸಿರುದನ್ನು ನೋಡಲಾಗಿದೆ. ಗ್ರಾಮದ ಮಾಹಿತಿಯ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾಮಾನ್ಯ ಜನರಿಗೆ ಆದ್ಯತೆಯನ್ನು ನೀಡಲಾಗಿದೆ ಎಂದು ತಿಳಿಯಲಾಗಿದೆ. ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯುವುದು ಮಾನವನ ಹಕ್ಕು ಅದರಲ್ಲಿ ಯಾವ ತಾರತಮ್ಯ ಎಸಗದೆ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಮಾಡುವುದು ಂತಹ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೩೯. ನೀರಿನ ಸಮಸ್ಯೆ ನಿಭಾಯಿಸುವ ವಿಧಾನಗಳು

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ಆ ಸಂದರ್ಭದಲ್ಲಿ ನಿಮ್ಮ ನೀರಿನ ಸಮಸ್ಯೆಯನ್ನು ಹೇಗೆ ಪರಿಹರಿಸಿ ಕೊಳ್ಳುತೀರಿ?	ಕೊಳವೆ ಬಾವಿ	೫೩	೫೩	೩೫	೩೫	೩೪	೧೪
	ಸಾರ್ವಜನಿಕ ನಳ	೪೭	೪೭	೬೫	೬೫	೬೬	೬೬
	ವಾಟರ್ ಟ್ಯಾಂಕ+ನಳ	–	–	–	–	–	–
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನಲ್ಲಿ ಏನಾದರೂ ಸಮಸ್ಯೆ ಉಂಟಾದರೆ ಅದಕ್ಕೆ ಪರಿಹಾರವನ್ನು ಮಾಡಿಕೊಳ್ಳುವುದರ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೫೩.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆಯನ್ನು ಕೊಳವೆ ಭಾವಿಯ ಮುಖಾಂತರ ಪರಿಹರಿಸಿಕೊಳ್ಳುತ್ತೇವೆ ಎಂದಿದ್ದಾರೆ. ಅದರಂತೆ, ಶೇ. ೪೭.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆ ಬಂದಾಗ ಸಾರ್ವಜನಿಕ ನಳ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೩೫.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆಯನ್ನು ಕೊಳವೆ ಬಾವಿಯ ಮುಖಾಂತರ ಪರಿಹರಿಸಿಕೊಳ್ಳುತ್ತೇವೆ ಎಂದಿದ್ದಾರೆ. ಅದರಂತೆ, ಶೇ. ೬೫.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆ ಬಂದಾಗ ಸಾರ್ವಜನಿಕ

ನಳ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೧೪.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆಯನ್ನು ಕೊಳವೆ ಬಾವಿಯ ಮುಖಾಂತರ ಪರಿಹರಿಸಿಕೊಳ್ಳುತ್ತೇವೆ ಎಂದಿದ್ದಾರೆ. ಅದರಂತೆ, ಶೇ. ೬೬.೦೦ರಷ್ಟು ಕುಟುಂಬಗಳು ನೀರಿನ ಸಮಸ್ಯೆ ಬಂದಾಗ ಸಾರ್ವಜನಿಕ ನಳ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿಅಂಶಗಳನ್ನು ನೋಡಿದಾಗ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶಗಳಿಗಿಂತ ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಯನ್ನು ಅವಲಂಬಿಸಿರುವುದನ್ನು ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಬೇಸಿಗೆ ಮತ್ತು ವಿದ್ಯುತ್‌ನ ಸಮಸ್ಯೆಯ ಸಂದರ್ಭದಲ್ಲಿ ಪರಿಶಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತ್ಯೇಕ ನಳಗಳನ್ನು ಹೊಂದದೆ ಇರುವುದರಿಂದ ಸಾರ್ವಜನಕ ನಳಗಳಿಗೆ ಸರಬುರಾಜು ಮಾಡುವ ವ್ಯವಸ್ಥೆ ಹಾಗೂ ಇಲ್ಲಿಯೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರನ್ನು ಹೊರತುಪಡಿಸಿ ಉಳಿದ ಸಮುದಾಯದವರು ಕೊಳವೆ ಬಾವಿಗಳಿಗೆ ಹೋಗಿ ನೀರನ್ನು ತೆಗೆದುಕೊಂಡು ಬರುವ ವ್ಯವಸ್ಥೆಯನ್ನು ಮಾಡಿಕೊಂಡಿರುವುದು ತಿಳಿದು ಬರುತ್ತದೆ. ಅಲ್ಲದೇ, ಇಂತಹ ನೀರಿನ ಸಮಸ್ಯೆಯನ್ನು ಬಗೆಹರಿಸಲು ದಿನಾ ಬಿಟ್ಟು ದಿನಾ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಕೊನೆಯದಾಗಿ, ಸರ್ಕಾರದಿಂದ ಹಲವು ನೀರು ಪೂರೈಕೆ ಮಾಡುವಂತಹ ಯೋಜನೆಗಳಿದ್ದು, ಸರಕಾರದ ನಿಯಮಾವಳಿ ಪ್ರಕಾರ ಸಮರ್ಪಕವಾಗಿ ನೀರು ಪೂರೈಕೆಯಾಗುವ ಹಂತದಲ್ಲಿದೆ. ಆದರೆ ಅದು ದಾಖಲೆಯಲ್ಲಿ ಮಾತ್ರವಿದ್ದು ಯಾವುದೇ ಸಮರ್ಪಕ ನಿರ್ವಹಣೆಯ ಅನುಷ್ಠಾನದಲ್ಲಿ ಇಲ್ಲದಿರುವುದು ತಿಳಿದು ಬಂದಿದೆ. ಅಂದಹಾಗೆ, ನೀರು ಪೂರೈಕೆ ನಿರ್ವಹಣೆಯಲ್ಲಿ ಗುಣಮಟ್ಟದ ಬದಲಾವಣೆಯನ್ನು ತರುವುದರ ಮೂಲಕ ನೀರು ಪೂರೈಕೆಯಲ್ಲಿ ತುರ್ತು ಕಾರ್ಯ ನಿರ್ವಹಿಸಬೇಕಾದ ಅಗತ್ಯತೆಯಿದೆ ಎಂದು ತಿಳಿಯಬಹುದಾಗಿದೆ.

ಕೋಷ್ಟಕ: ೬.೪೦. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಹಾರ ಸೌಲಭ್ಯಗಳ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಪಡಿತರ ಚೀಟಿ ಇದೆಯೇ?	ಇದೆ	೨೬	೨೬	೮೪	೮೪	೯೨	೯೨
	ಇಲ್ಲಾ	೭೪	೭೪	೧೬	೧೬	೮	೮
	ಒಟ್ಟು	೧೦೦	೧೦೦	೧೦೦	೧೦೦	೧೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಪಡಿತರ ಚೀಟಿಯ ಸಂಪರ್ಕದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೭೬.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೨೪.೦೦ ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೮೪.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೧೬.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ೯೨.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿದ್ದೇವೆ ಎಂದಿದ್ದಾರೆ. ಅದರಂತೆ, ಶೇ. ೦೮.೦೦ರಷ್ಟು ಕುಟುಂಬಗಳು ಪಡಿತರ ಚೀಟಿಯನ್ನ ಹೊಂದಿಲ್ಲ ಎಂದು ಹೇಳಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಮೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಮಾಹಿತಿಯನ್ನು ನೋಡಿದಾಗ ಲಿಂಗಸೂರು ಮತ್ತು ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಕ್ಕಿಂತ ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಪಡಿತರ ಚೀಟಿಯನ್ನ ಹೊಂದದೆಯಿರುವುದನ್ನ ಕಾಣಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಗ್ರಾಮೀಣ ಪ್ರದೇಶದಲ್ಲಿ ಬಿಪಿಎಲ್ ಕುಟುಂಬಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಡಿತರ ಚೀಟಿಯನ್ನ ಹಂಚಿಕೆಯಾಗಿರುವುದನ್ನ ಕಾಣಲಾಗಿದೆ. ಆದರೆ, ಅದಕ್ಕೆ ವಿರುದ್ಧವಾದ ಪ್ರಸಂಗವನ್ನು ನೋಡಲಾಗುತ್ತದೆ. ಅಂದರೆ, ಅರ್ಹತೆಯಿರುವ ವ್ಯಕ್ತಿಗಳಿಗೆ ನೀಡುವಲ್ಲಿ ವಿಫಲಗೊಂಡಿದ್ದು ಅದರ ಪ್ರತಿಫಲವನ್ನು ಇದ್ದಂತಹವರು ಪಡೆದುಕೊಂಡಿರುವುದನ್ನು ಮನಗಣಲಾಗಿದೆ. ಹಾಗಾಗಿ ಮೇಲಿನ ವಿವರಣೆಯ ಜೊತೆಯಾಗಿ ದೇವದುರ್ಗ ತಾಲೂಕಿನ ಗ್ರಾಮೀಣ ಜನರು ಹೆಚ್ಚಿನ ಸಂಖ್ಯೆಯಲ್ಲಿ ತುಂಬಾ ಬಡತನದಿಂದ ಇದ್ದು ಅವರು ಪಡಿತರ ಚೀಟಿಯನ್ನು ಪಡಿತರ ಚೀಟಿಯನ್ನು ಪಡಿದಾಗ ಅವರ ಬಡತನಕ್ಕೆ ಸ್ವಲ್ಪ ಸಹಾಯ ಆಗುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಡಿತರ ಚೀಟಿಗಳನ್ನು ಒದಗಿಸಿಕೊಡುವ ಅವಶ್ಯಕತೆಯಿದೆ ಎಂದು ತಿಳಿದು ಬಂದಿದೆ.

ಕೋಷ್ಟಕ ೬.೪೧. ಪಡೀತರ ಚೀಟಿಯಿಂದ ದೊರೆಯುವ ಆಹಾರದ ಪ್ರಮಾಣದ ವಿವರ

ಸೂಚಕಗಳು	ಉಪ ಸೂಚಕಗಳು	ದೇವದುರ್ಗ		ಲಿಂಗಸೂರು		ಸಿಂಧನೂರು	
		ಪ.ಪಂ. ಮೀಸಲು ಕ್ಷೇತ್ರ		ಪ.ಜಾ. ಮೀಸಲು ಕ್ಷೇತ್ರ		ಸಾಮಾನ್ಯ ಕ್ಷೇತ್ರ	
		ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು	ಸಂಖ್ಯೆಗಳು	ಶೇಕಡವಾರು
ನಿಮ್ಮ ಕುಟುಂಬಕ್ಕೆ ಪಡಿತರ ಚೀಟಿಯಿಂದ ದೊರೆಯುವ ಒಟ್ಟು ಆಹಾರ ಪ್ರಮಾಣವೆಷ್ಟು?	೧-೨೦ ಕೆ.ಜಿ.	೧೪	೫೮.೩	೧೭	೫೩.೧	೧೨	೨೯.೩
	೨೦-೪೦ ಕೆ.ಜಿ.	೧೦	೪೧.೭	೧೫	೪೬.೯	೨೯	೭೦.೭
	ಒಟ್ಟು	೨೪	೧೦೦	೩೨	೧೦೦	೪೧	೧೦೦

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಮೂರು ತಾಲೂಕಿನಲ್ಲಿ ವಾಸಿಸುವ ಜನರಿಗೆ ಪಡಿತರ ಚೀಟಿಯ ಸಂಪರ್ಕದಲ್ಲಿ ಪಡೆಯುವ ಆಹಾರದ ಪ್ರಮಾಣದ ವಿವರವನ್ನು ತೋರಿಸಲಾಗಿದೆ. ದೇವದುರ್ಗ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ ರಷ್ಟರಲ್ಲಿ ಶೇ. ೫೮.೩೩ಕುಟುಂಬಗಳು ಪಡಿತರ ಚೀಟಿಯಿಂದ ೧-೨೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೪೧.೬೬ರಷ್ಟು ಕುಟುಂಬಗಳು ಪಡಿತರ ಚೀಟಿಯಿಂದ ೨೦ರಿಂದ ೪೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ. ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ರಷ್ಟು ೫೩.೧೨ಕುಟುಂಬಗಳು ಪಡಿತರ ಚೀಟಿಯಿಂದ ೧-೨೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೪೬.೮೮ರಷ್ಟು ಕುಟುಂಬಗಳು ಪಡಿತರ ಚೀಟಿಯಿಂದ ೨೦ ರಿಂದ ೪೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ. ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಶೇ. ೧೦೦ರಷ್ಟರಲ್ಲಿ ಶೇ. ರಷ್ಟು ೭೯.೧೬ಕುಟುಂಬಗಳು ಪಡಿತರ ಚೀಟಿಯಿಂದ ೧-೨೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ. ಅದರಂತೆ, ಶೇ. ೨೦.೮೩ರಷ್ಟು ಕುಟುಂಬಗಳು ಪಡಿತರ ಚೀಟಿಯಿಂದ ೨೦ ರಿಂದ ೪೦ ಕೆ.ಜಿ.ಯಷ್ಟು ಆಹಾರದ ಪ್ರಮಾಣವನ್ನು ಪಡೆಯುತ್ತಾರೆ ಎಂದಿದ್ದಾರೆ.

ಒಟ್ಟಾರೆಯಾಗಿ ಮೇಲಿನ ಅಂಶವನ್ನು ಗಮನಿಸಿದಾಗ ಮಾರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಪಡಿತರ ಚೀಟಿಯನ್ನು ಪಡೆದಿರುವ ಜನರು ಬಿ.ಪಿ.ಎಲ್. ಕಾರ್ಡುಗಳನ್ನೆ ಪಡೆದಿರುತ್ತಾರೆಯೇ ವಿನಃ ಯಾವ ಅಂತ್ಯೋದಯ ಮತ್ತು ಎ.ಪಿ.ಎಲ್. ಕಾರ್ಡುಗಳನ್ನ ಪಡೆಯದೆ ಯಿರುವುದನ್ನ ಅಧ್ಯಯನಗಳಲ್ಲಿ ತಿಳಿಯಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸಿಂಧನೂರು ತಾಲೂಕಿ ಗ್ರಾಮೀಣ ಪ್ರದೇಶದಲ್ಲಿರುವ ಜನರಿಗಿಂತ ದೇವದುರ್ಗ ಮತ್ತು ಲಿಂಗಸೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ಪಡಿತರವನ್ನು ಪಡೆಯುತ್ತಾರೆ ಎಂದು ತಿಳಿದು ಬಂದಿದೆ. ಅಂದರೆ, ಆಯಾಯ ಮನೆಯಲ್ಲಿ ವಾಸಿಸುವ ಜನಕ್ಕೆ ಅನುಗುಣವಾಗಿ ಪಡಿತರವನ್ನು ವಿತರಿಸಲಾಗುತ್ತದೆ ಎನ್ನಲಾಗಿದೆ. ಆದಾಗ್ಯಯೂ ಇಲ್ಲಿ ಅದಕ್ಕೆ ವಿರುದ್ಧವಾಗಿರುವುದನ್ನು ಕಾಣಲಾಗಿದೆ. ಅಭಿವೃದ್ಧಿಯ ಮಾನದಂಡಗಳಲ್ಲಿ ಪಡಿತರ ವಿತರಣೆಯು ಒಂದು ಅಂದಹಾಗೆ, ಇಲ್ಲಿ ವಾಸಿಸುವ ಜನರಿಗೆ ಅವರು ದುಡಿದು ಊಟವನ್ನು ಮಾಡುವುದಕ್ಕೆ ಆಹಾರದ ಪ್ರಮಾಣ ಆಗದೆ ಇರುವುದರಿಂದ ಅವರು ಸರ್ಕಾರದಿಂದ ನೀಡುವ ಪಡಿತರದ ಮೇಲೆ ಅವಲಂಬಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ದೊರೆಯುವ ಆಹಾರದ ಮಟ್ಟ ಕಡಿಮೆಯಾಗಿರುವದರಿಂದ ಹೆಚ್ಚಿನ ಸಂಖ್ಯೆಯಲ್ಲಿ ದುಃಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ಕಾಣಲಾಗಿದೆ.

ಈ ಎಲ್ಲಾ ಮೇಲಿನ ಅಂಶಗಳನ್ನು ಗಮನಿಸಿದರೆ ಮತ್ತು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿ ನೋಡಿದರೆ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟರಿಗೆ ಇರುವ ಸೌಲಭ್ಯಗಳು

ಮತ್ತು ಸರ್ಕಾರ ನೀಡಿರುವ ಅವಕಾಶಗಳು ಹೇರಳವಾಗಿವೆ. ಅದರೆ ಅವುಗಳನ್ನು ಪಡೆದುಕೊಳಳುವ ಸಾಮರ್ಥ್ಯ ಜನರಿಗೆ ಇಲ್ಲ ಎಂಬ ಮಾಹಿತಿ ಲಭ್ಯವಾಗುತ್ತದೆ. ಯಾಕೆಂದರೆ ಉದಾಹರಣೆಗೆ ಸಣ್ಣಕೈಗಾರಿಕೆ, ಹೈನುಗಾರಿಕೆ ಅಥವಾ ಸಬ್ಸಿಡಿ ಆಧಾರಿತ ಸಾಲ ಪಡೆಯಬೇಕಾದರೆ ಮೊದಲು ಅದಕ್ಕೆ ಹಣ ಹೂಡಿಕೆ ಮಾಡಬೇಕು. ಅಂದರೆ ಮಾರ್ಜನ್ ಹಣ ಕಟ್ಟಬೇಕು. ಈ ಹಣ ಕಟ್ಟುವ ಸಾಮರ್ಥ್ಯ ಅವರಲ್ಲಿ ಇಲ್ಲ. ಹೀಗಾಗಿ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿಯಾಗಿ ಸೌಲಭ್ಯಗಳನ್ನು ಹುಡುಕಿಕೊಂಡು ಹೋಗಬೇಕು ಆಗ ಕೂಲಿ ನಷ್ಟವಾಗುತ್ತದೆ ಮತ್ತು ಹೋದರೆ ಹಣ ಖರ್ಚಾಗುತ್ತದೆ. ಹೀಗಾಗಿ ಕೆಲವು ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂಬ ಅಂಶವನ್ನು ಹೊರಹಾಕಿದ್ದಾರೆ.

ಅದ್ದರಿಂದ ಪ್ರತಿ ಹಣಕಾಸು ವರ್ಷ ಮುಂಗಡಪತ್ರ ಮಂಡನೆ ಆದ ನಂತರ ಸರ್ಕಾರದ ಯೋಜನೆಗಳ ಬಗ್ಗೆ ಪ್ರತಿ ಗ್ರಾಮದಲ್ಲಿ ತಿಳುವಳಿಕೆ, ಅರಿವು ಮೂಡಿಸಲು ಒಂದು ದಿನದ ಶಿಬಿರಗಳನ್ನು ನಡೆಸಬೇಕು. ಆಗ ಮಾತ್ರ ಸರ್ಕಾರದ ಯೋಜನೆಗಳಲ್ಲಿ ಜನರು ಒಳ್ಳಗೊಳ್ಳಲು ಸಾಧ್ಯವಿದೆ.

ಕೊನೆ ಟಿಪ್ಪಣೆ

೧. ಚಂದ್ರಶೇಖರ್ ಎಸ್, ಸುರೇಂದ್ರರಾವ್ ಬಿ. (ಸ.ಸಂ) ಹಂ. ಗುರಾಜೇಶ್, ೨೦೧೬ ಚಂದ್ರಶೇಖರ ಟಿ.ಆರ್. ಕರ್ನಾಟಕ ಏಕೀಕರಣ ಭಾವನಾತ್ಮಕ ಆಯಾಮಗಳು ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ, ಪ್ರಾಧಿಕಾರ ಬೆಂಗಳೂರು ಪು.೧೭೫

೨. ಅದೇ ಪು. ೧೭೬

೩. ಚಂದ್ರಶೇಖರ್ ಟಿ.ಆರ್. ೨೦೧೪ ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಪು.೧೫

೪. ಅದೇ ಪು. ೧೬

೫. ಅದೇ ಪು. ೧೭

೬. ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪ ಜಿಲ್ಲಾ ಪಂಚಾಯತ್ ರಾಯಚೂರು, ಯೋಜನೆ ಕಾರ್ಯಕ್ರಮ ಸಂಯೋಜನ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ ಪು. ೩

೭ ನಾಗೇಶ ಹೆಗಡೆ, ೨೩.೦೪.೨೦೧೫ ಕೊಳಕು ಡೇರಿಗಳಿಗೆ ಎ-೨ ಹಾಲಿನ ಏಟು, ಪ್ರಜಾವಾಣಿ ಪು. ೬

೮. ಯು.ಎನ್.ಡಿ.ಪಿ ಮಾನವ ಅಭಿವೃದ್ಧಿ ವರದಿ, ೨೦೧೫ ಪು. ೫೯

೯. ಕೆಂಪೇಗೌಡ ಪಿ., ೨೦೧೫ ಗ್ರಾಮೀಣ ಹಣಕಾಸು (ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೦. ಚಂದ್ರ ಪೂಜಾರಿ ಎಂ., ೨೦೧೬, ದಲಿತ ಮಾನವ ಅಭಿವೃದ್ಧಿ, ದಲಿತ ಹಕ್ಕುಗಳ ಸಮಿತಿ ಕರ್ನಾಟಕ, ೬ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು ಪು. ೨೦

೧೧. ಅದೇ ಪು. ೨೪

೧೨. ಅದೇ ಪು. ೨೫

೧೩. ಅದೇ ಪು. ೨೬

ಅಧ್ಯಾಯ ಏಳು

ಸಮಾರೋಪ

ಅಧ್ಯಯನ ಫಲಿತಗಳು

ಸಲಹೆಗಳು

ಅಧ್ಯಾಯ ಏಳು

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆ ಎಂದು ಕರೆಯಲ್ಪಡುವ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳನ್ನು ಪ್ರಾದೇಶಿಕ ಅಸಮಾನತೆಯೊಂದಿಗೆ ತಳುಕು ಹಾಕಿಕೊಂಡಿರುವ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ನೆಲೆಯಲ್ಲಿ ಪರಿಶಿಷ್ಟರಿಗೆ ಇರುವ ಮೀಸಲಾತಿಯಂತಹ ಸಂವಿಧಾನಾತ್ಮಕ ಅವಕಾಶಗಳಿಂದ ಅವರ ಸ್ಥಿತಿ ಬದಲಾಗಿದೆಯೇ ಎಂಬ ಅಂಶಗಳನ್ನು ಸಂವಿಧಾನಾತ್ಮಕ ಅವಕಾಶಗಳು ಮತ್ತು ಸಾಮಾನ್ಯ ಕಾರ್ಯಕ್ರಮಗಳ ನೆಲೆಯಿಂದ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸುಮಾರು ೭೦ ವರ್ಷಗಳ ಇತಿಹಾಸದಲ್ಲಿ ಮೀಸಲಾತಿ ಮೂಲಕ ಬಂದ ಮೀಸಲಾತಿ ಕ್ಷೇತ್ರಗಳು ಮತ್ತು ಮೀಸಲಾತಿ ಸೌಲಭ್ಯಗಳ ನೆಲೆಯಲ್ಲಿ ನೋಡಿದಾಗ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ರಾಜಕೀಯ ಕ್ಷೇತ್ರದಲ್ಲಿನ ಭಾಗವಹಿಸುವಿಕೆಯಲ್ಲಿ ಸಂಖ್ಯಾತ್ಮಕ ಅಂಶಗಳೇ ಹೆಚ್ಚಾಗಿ ಗೋಚರಿಸುತ್ತವೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಅಭಿವೃದ್ಧಿ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಪಟ್ಟ ಅಧ್ಯಯನಗಳು ಸಹ ಇದನ್ನೇ ಹೇಳುತ್ತವೆ. ಆದರೆ ಪರಿಶಿಷ್ಟರಿಗೆ ಮೀಸಲಾತಿ ಮೂಲಕ ನೀಡಿದ ರಾಜಕೀಯ ಪ್ರಾತಿನಿಧ್ಯವು ಪರಿಶಿಷ್ಟರಿಗೆ ರಾಜಕೀಯ ಸ್ವಾತಂತ್ರ್ಯ ದೊರೆತಿದೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಯಾಕೆಂದರೆ ಮೀಸಲಾತಿ ಕ್ಷೇತ್ರಗಳಲ್ಲಿ ಮೇಲ್ವರ್ಗದವರ ಮತಗಳೇ ನಿರ್ಣಾಯಕವಾಗುತ್ತವೆ. ಹೀಗಾಗಿ ಪರಿಶಿಷ್ಟರಿಗೆ ರಾಜಕೀಯ ಸ್ವಾತಂತ್ರ್ಯವನ್ನು ಸಂಖ್ಯೆಗಳಲ್ಲಿ ನೀಡಲಾಗಿದೆ ಹೊರತು ಸಾಮರಸ್ಯದಲ್ಲಿ ಅಲ್ಲ ಎಂದು ಹೇಳಬಹುದು.

ಆದ್ದರಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ನಾವು ಮತ್ತೊಂದು ಸಂದಿಗ್ಧತೆಯಲ್ಲಿ ಹೆಜ್ಜೆಯಿಡಬೇಕಾದ ಅನಿವಾರ್ಯತೆಯಲ್ಲಿ ಸಿಲುಕಿದ್ದೇವೆ. ನಮಗೆ ಮೀಸಲಾತಿ ಮೂಲಕ ರಾಜಕೀಯ ಸ್ವಾತಂತ್ರ್ಯವನ್ನು ನೀಡಲಾಗಿದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಹಾಗೆಯೇ ಮುಂದುವರೆಯಲಿವೆ. ಹಾಗಾಗಿ ನಾವು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಸರಿಪಡಿಸಲು ಸಾಧ್ಯವಾಗದಿದ್ದರೆ ನಾವು ಮತ್ತಷ್ಟು ವೈರುಧ್ಯಗಳಿಗೆ ಒಳಗಾಗುತ್ತೇವೆ ಎಂಬ ಅಂಶವನ್ನು ಜನವರಿ ೨೬, ೧೯೫೦ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರು

ಅಭಿಪ್ರಾಯಪಟ್ಟಿದ್ದರು. "We are going to enter into a life of contridictions in politics. We will have equality and in social and economic life we will in equality" ಅಂಬೇಡ್ಕರ್ ಅವರು ಗುರಿತಿಸಿರುವ ವೈರುಧ್ಯಗಳನ್ನು ೭೦ ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಸರಿಪಡಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಈ ನೆಲೆಗಳನ್ನು ಗುರುತಿಸಿ ಚಿಕಿತ್ಸೆ ಕೊಡುವಲ್ಲಿ ಸಮಾಜ ವಿಜ್ಞಾನಿಗಳ ಪ್ರಯತ್ನ ಮತ್ತು ಸರ್ಕಾರದ ಪ್ರಮಾಣಿಕ ಪ್ರಯತ್ನ ಮಾಡುತ್ತಲ್ಲೇ ಬಂದಿದ್ದಾರೆ. ಅದರೂ ನೀರಿಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧ್ಯವಾಗಿಲ್ಲ.

೧೯೯೦ರ ನಂತರ ಜಾರಿಗೆ ಬಂದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ವ್ಯವಸ್ಥೆ ಪರಿಶಿಷ್ಟರ ಸಂಪ್ರದಾಯಿಕ ಉದ್ಯೋಗಗಳಿಗೆ ಮಾರಣಾಂತಿಕ ಹೊಡೆತ ನೀಡಿದವು. ಅವರು ಮತ್ತೊಂದು ಸ್ಥಿತ್ಯಂತರದ ಹೊಡೆತಕ್ಕೆ ಸಿಲುಕಿ ಅವರ ಅವರ ಬದುಕು ಅತ್ತದರಿ ಇತ್ತಪುಲಿ ಎಂಬಂತಾಗಿ ಪರಿಶಿಷ್ಟರಿಗೆ ಇರುವ ಮೀಸಲಾತಿ ದಿನ ದಿನಕ್ಕೆ ಸೊರಗಿ ಹೊಯಿತು. ಮೀಸಲಾತಿ ಎಂದರೆ ಅವರಲ್ಲಿ ಅಸಹ್ಯ ಹುಟ್ಟಿಸುವಂತಹ ವಾತಾವರಣ ಸೃಷ್ಟಿಸಲಾಗುತ್ತಿದೆ.

ಇತ್ತೀಚೆಗೆ ಜಾತಿ ಮತ್ತು ಧರ್ಮದ ಜೊತೆಗೆ ಅರ್ಥಿಕ ಅಂಶಗಳು ಸೇರಿ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯವನ್ನು ನಿಯಂತ್ರಿಸುತ್ತವೆ. ಜಾತಿ ಮತ್ತು ಧರ್ಮವನ್ನು ಬಂಡವಾಳ ಮಾಡಿಕೊಂಡು ರಾಜಕೀಯ ಅಧಿಕಾರವನ್ನುಹಿಡಿದು ಇತರರು ಅದರ ಹತ್ತಿರ ಸುಳಿಯದಂತೆ ಮಾಡಲಾಗುತ್ತಿದೆ. ಕೇವಲ ರಾಜಕೀಯ ಲಾಭಕ್ಕಾಗಿ ಸಾಮಾಜೀಕ ನ್ಯಾಯದ ಮಾತುಗಳು ಪುಂಕಾನುಪಂಕವಾಗಿ ಹರಿಬಿಡಲಾಗುತ್ತಿದೆ. ಆದರೆ ಮೀಸಲಾತಿ ನೀಡಿರುವ ಸಾಮಾಜಿಕ ಅವಕಾಶಗಳನ್ನು ಶಾಶ್ವತವಾಗಿ ಜಾತಿ ಗುಂಪುಗಳಾಗಿ ವಿಂಗಡಿಸಿ ರಾಜಕೀಯ ಲಾಭ ಪಡೆಯಲಾಗುತ್ತಿದೆ. ಅಷ್ಟೇ ಅಲ್ಲದೆ ಮೀಸಲಾತಿಯನ್ನು ರಾಜಕೀಯ ಕಾರಣಗಳಿಗಾಗಿ ಸಾಂಕೇತಿಕವಾಗಿ ಬಳಸಿಕೊಂಡು ಮುಂದವರೆದ ಜಾತಿಗಳು ರಾಜಕೀಯ ಅಧಿಕಾರವನ್ನು ಕೆಳವರ್ಗದವರಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯ ರಾಜಕೀಯಕ್ಕಿಂತ ಪಕ್ಷ ರಾಜಕೀಯ ಮತ್ತು ಜಾತಿ ರಾಜಕೀಯವೇ ಪ್ರಬಲವಾಗಿ ಹೊಸ ತಲೆಮಾರಿನ ಪರಿಶಿಷ್ಟ ನಾಯಕರನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಯಾಗಿದೆ. ಇದರ ಜೊತೆಗೆ ಪರಿಶಿಷ್ಟರ ಆರ್ಥಿಕ, ಸಾಮಾಜಿಕ ದುಸ್ಥಿತಿಯನ್ನು ಅಸರೆಯಾಗಿ ಬಳಸಿಕೊಂಡು ಹಣದ ಮೂಲಕ ಚುನಾವಣೆ ನಡೆಯುತ್ತಿರುವ ಪ್ರಜಾಪ್ರಭುತ್ವ ಸಂಕಷ್ಟದಲ್ಲಿದೇ ಎಂಬುದು ಗೊಚರಿಸುತ್ತಿದೆ. ರಾಜಕೀಯ ನಾಯಕರ ಹುಸಿ ಭರವಸೆ. ಮಾಧ್ಯಮದ ಪ್ರಚಾರ ಪರಿಶಿಷ್ಟರನ್ನು ಕಾಲ್ಪನಿಕ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಇದರ ಜೊತೆಗೆ ಹಳ್ಳಿಯಿಂದ ದಿಲ್ಲಿಯವರೆಗೆ ಜಿಡ್ಡುಗಟ್ಟಿದ ಜಾತಿ ಮತ್ತು ಧರ್ಮದ ಮೂಲಕ ದಲಿತರ ರಾಜಕೀಯ ಪ್ರಾತಿನಿಧ್ಯ ಮತ್ತು ಅವಕಾಶಗಳಿಂದ ದೂರವಿಡಲಾಗುತ್ತಿದೆ.

ಸಂವಿಧಾನದ ಆಶಯ, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನೀತಿ ನಿರ್ದೇಶಾತ್ಮಕ ತತ್ವಗಳು ಮತ್ತು ಸಂವಿಧಾನದ ೭೩ ಮತ್ತು ೭೪ನೇ ತಿದ್ದುಪಡಿಯ ಆಶಯ ಸೇರಿದಂತೆ ಯಾವುದೇ ತಾತ್ವಿಕತೆಯನ್ನು ರಾಜಕೀಯ ವ್ಯವಸ್ಥೆಯೊಳಗೆ ಮಾಡಿಕೊಂಡಿಲ್ಲ. ಎಲ್ಲರನ್ನೂ ಒಳಗೊಳ್ಳದ

ದೂರದೃಷ್ಟಿಯಿಂದಲೇ ಎಲ್ಲರನ್ನು ಒಳಗೊಳ್ಳದ ಪಕ್ಷ ರಾಜಕಾರಣ ಬೆಳೆಯುತ್ತಿರುವುದು ಪರಿಶಿಷ್ಟರಲ್ಲಿ ಆತಂಕ ಮೂಡಿಸಿದೆ. ರಾಜಕೀಯ ಪಕ್ಷಗಳು ಜಾತಿ ಕೆಸರನ್ನು ಮೈಗೆ ಹಚ್ಚಿಕೊಂಡಿರುವುದರಿಂದ ಅವು ಕೆಲವು ಜಾತಿ ಸಂಘಗಳಂತೆ ಗೋಚರಿಸುತ್ತವೆ. ಆರ್ಥಿಕವಾಗಿ ಪ್ರಬಲವಾಗಿರುವ ಹಾಗೂ ಸಾಮಾಜಿಕ ಬಂಡವಾಳದ ಮೇಲೆ ಹಿಡಿತ ಸಾಧಿಸಿರುವ ಶ್ರೀಮಂತರ ಮತ್ತು ಮೇಲ್ಜಾತಿಗಳು ಮಾಡುವ ಜಾತಿ ರಾಜಕಾರಣವು ದಲಿತರ ರಾಜಕೀಯ ದಮನಕ್ಕೆ ಅತ್ಯಂತ ಜಾಣ್ಮೆಯಿಂದ ಬಳಸುತ್ತಿವೆ. ಅದೇ ರೀತಿಯಾಗಿ ರಾಜಕೀಯೇತರ, ರಾಜಿ ರಹಿತ ಜಾತ್ಯತೀತ ವಾದಿಗಳು ಎಂದು ಹೇಳುವ ವರ್ಗಗಳು ದುರ್ಬಲ ವರ್ಗಗಳನ್ನು ರಾಜಕೀಯ ದಾಳವಾಗಿ ಬಳಸಲಾಗುತ್ತಿದೆ. ಇದರ ಜೊತೆಗೆ ಯಾವುದು ಸರಿ, ಯಾವುದು ತಪ್ಪು, ಯಾವುದನ್ನು ಪ್ರಶ್ನಿಸಬೇಕು ಯಾವುದನ್ನು ಪ್ರಶ್ನಿಸಬಾರದು ಎಂಬುದನ್ನು ಸಾಮಾಜಿಕ ರಚನೆಯ ಪದರುಗಳಲ್ಲಿ ಹರಡಲಾಗುತ್ತಿದೆ. ಹೀಗೆ ಮಾಡುವಾಗ ತಮಗೆ ಸೇರದ ವ್ಯಕ್ತಿ / ಗುಂಪುಗಳನ್ನು ಸಾಮಜಿಕ ರಚನೆಯಿಂದ ಹೊರ ಹಾಕಲಾಗುತ್ತಿದೆ. ಜಾತಿ ಹೆಸರಿನಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಧುನೀಕರ ಅವಕಾಶಗಳನ್ನು ಬಳಸಿಕೊಳ್ಳುತ್ತಾ ಸಂಪ್ರದಾಯಿಕ ಅಧಿಪತ್ಯವನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಜಾತಿ ಇಂದು ರಾಜಕೀಯ ಪ್ರಜ್ಞೆಯಾಗಿ ಪ್ರಕ್ರಿಯೆಯಾಗಿ ಕಾಣುತ್ತಿದೆ.

ಇತ್ತೀಚೆಗೆ ಭಾರತದಲ್ಲಿ ಶಿಕ್ಷಣದಿಂದ ಬದುಕು ಕಟ್ಟಿಕೊಳ್ಳುವುದು ಕಷ್ಟ ಕೆಲಸವೆನಿಸುತ್ತದೆ. ಯಾಕೆಂದರೆ ವಿದ್ಯೆಗೂ ಮತ್ತು ಉದ್ಯೋಗಕ್ಕೂ ಸಂಬಂಧವಿಲ್ಲದ ರೀತಿಯಲ್ಲಿ ನಮ್ಮ ಶೈಕ್ಷಣಿಕ ಸಂಸ್ಥೆಗಳು ಸೇರಿದಂತೆ ಆಧುನಿಕ ಸಂಸ್ಥೆಗಳು ಜಾತಿ ವಾದವನ್ನು ಹುಟ್ಟು ಹಾಕುವ ಹೊಸ ಕೇಂದ್ರಗಳಾಗಿವೆ. ಅವಕಾಶ ವಂಚಿತ ಅಮಾಯಕ ದಲಿತ ವಿದ್ಯಾರ್ಥಿಗಳು ತಮಗೆ ಪ್ರತಿಸ್ಪರ್ಧಿಗಳು ಎಂಬ ಅಭಿಪ್ರಾಯದಿಂದ ಮೇಲ್ಜಾತಿಯ ವಿದ್ಯಾರ್ಥಿಗಳು ಅವರ ಬಗ್ಗೆ ಅಸಮಾದಾನ, ನಿರ್ಲಕ್ಷತೆ, ತಾತ್ಸರ, ಹಗೆತನ ಹೊಂದಿದವರಾಗಿರುತ್ತಾರೆ. ಹೀಗಾಗಿ ಶೈಕ್ಷಣಿಕ ವ್ಯವಸ್ಥೆಯಿಂದ ಬದುಕು ಕಟ್ಟಿಕೊಳ್ಳವುದು ದಲಿತರಿಗೆ ದುಸ್ತರ ವೆನಿಸುತ್ತದೆ. ಇದರ ಜೊತೆಗೆ ಶೇ. ೧೫ರಷ್ಟು ಮೀಸಲಾತಿಯ ಗಡಿದಾಟಲು ದಲಿತರನ್ನು ಬಿಟ್ಟಿಲ್ಲ. ಹಾಗಾಗಿ ದಲಿತರಲ್ಲಿ ದೊಡ್ಡ ಪ್ರಮಾಣದ ನಿರುದ್ಯೋಗವು ಸೃಷ್ಟಿಯಾಗಲು ಕಾರಣವಾಗಿದೆ.

ಇನ್ನು ಆರ್ಥಿಕ ಅವಕಾಶಗಳು ದಲಿತರನ್ನು ಹೆಚ್ಚು ಬಾಧಿಸುತ್ತಿರುವುದು. ಆದರೆ ಅದನ್ನು ಸರಿಪಡಿಸುವಲ್ಲಿ ೭೦ ವರ್ಷಗಳಲ್ಲಿ ಒಂದನ್ನು ಸಹ ಸಮರ್ಪಕವಾಗಿ ಜಾರಿಗೆ ತರಲು ಪ್ರಮಾಣಿಕ ಪ್ರಯತ್ನ ನಡೆಯಲಿಲ್ಲ. ಮೇಲ್ವರ್ಗದವರಿಗೆ ಕಮೀಷನ್ ಬರುವ ಯೋಜನೆಗಳನ್ನು ಜಾರಿಗೆ ತಂದು ಅದರ ಎಲ್ಲಾ ಲಾಭವನ್ನು ಅವರೇ ಪಡೆಯುತ್ತಿರುವುದು. ಅಂದರೆ ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದಂತೆ ಹಾಗೇ ಇವರು ಸರ್ಕಾರ ರೂಪಿಸುವ ಯೋಜನೆಗಳು ಅದೇ ರೀತಿಯಾಗಿ ಭಾರತದಲ್ಲಿ ರಾಜಕೀಯ ವ್ಯವಸ್ಥೆ ಜಾತಿ ಮತ್ತು ಧರ್ಮದೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ರಾಜಕೀಯ ಮೀಸಲಾತಿ ನೆಲಬಿಟ್ಟು ಎಳಲೇ ಇಲ್ಲ. ರಾಜಕೀಯ ಮೀಸಲಾತಿ ದಲಿತರ ಸಂಖ್ಯೆ ಮತ್ತು ಪ್ರಾತಿನಿಧ್ಯವನ್ನು ಪ್ರತಿನಿಧಿಸುತ್ತದೆ ಹೊರತು ದಲಿತರನ್ನು ಪ್ರತಿನಿಧಿಸುವುದಿಲ್ಲ ಎಂಬ ಅಂಶಗಳು

ಗೋಚರಿಸುತ್ತಲೇ ರಾಜಕೀಯದಲ್ಲಿ ದಲಿತರ ಪಾತ್ರ ನಿರ್ಣಯ ತೆಗೆದುಕೊಳ್ಳುವುದರಲ್ಲಿ ಇನ್ನು ಗೌಣವಾಗಿ ಗೋಚರಿಸುತ್ತಿದೆ.

ಹಾಗಾಗಿ ಬಹುತೇಕ ಅಧ್ಯಯನಗಳು ದಲಿತ ಯುವಕರ ಶೈಕ್ಷಣಿಕ ಅನುಭವಗಳು ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ದೃಷ್ಟಿಕೋನಗಳ ನಡುವೆ ಇರುವ ನೇರವಾದ ಸಂಬಂಧವನ್ನು ಗುರುತಿಸಿಲ್ಲ. ಇವುಗಳ ನಡುವಿನ ಸಂಬಂಧ, ತಿರಸ್ಕಾರ, ನಿರುತ್ಸಾಹ ಮತ್ತು ನಕಾರಾತ್ಮಕ ಅನುಭವಗಳನ್ನು ಹೊರಹಾಕಿವೆ. ಇದಕ್ಕೆ ಕಾರಣ ಎಂದರೆ ಶೈಕ್ಷಣಿಕ ಚರ್ಚೆಗಳು ಸಮಾಜಕ್ಕೆ ಬರಲಿಲ್ಲ. ಸಾಮಾಜದ ಚರ್ಚೆಗಳ ಪಠ್ಯಕ್ರಮಕ್ಕೆ ಬರಲಿಲ್ಲ.

ಇಂತಹ ದೃಷ್ಟಾಂತಗಳಲ್ಲಿ ಪರಿಶಿಷ್ಟರು ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಿದರು ಅದರಲ್ಲಿ ವಿರೋಧ ಮತ್ತು ಪ್ರತಿರೋಧಗಳನ್ನು ಹಿಂಸೆ, ದೌರ್ಜನ್ಯಗಳನ್ನು ಎದುರಿಸಬೇಕಾಗಿದೆ. ಇದರ ತಾಯಿಬೇರು ಗ್ರಾಮೀಣ ಸಾಮಾಜಿಕ ವ್ಯವಸ್ಥೆ ಸಂಸ್ಕೃತಿ, ಆಚಾರ, ವಿಚಾರಗಳು ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ಸಾಮಾಜಿಕ, ರಾಜಕೀಯ ಬದಲಾವಣೆಗಳು ನಡೆಯುವುದು ಮೇಲ್ಜಾತಿಯ ಪ್ರತಿರೋಧ ಮತ್ತು ಅಸಮಾಧಾನಗಳಿಂದ ಹಿಂಸೆ ನಡೆದಿವೆ. ಸಂಪ್ರದಾಯಿಕ ಸಮಾಜವು ದಲಿತರ ಸಾಮಾಜಿಕ ಚಲನೆಯನ್ನು ಮತ್ತು ಸಾಂಸ್ಕೃತಿಕ ಬದಲಾವಣೆಯನ್ನು ಒಪ್ಪಿಕೊಳ್ಳುವುದಿಲ್ಲ. ಅದರಲ್ಲಿ ಉತ್ತಮ ಉಡುಪು ಧರಿಸಿದರೆ ಸ್ಥಳೀಯ ಸರ್ಕಾರದ ಕಛೇರಿಗಳಲ್ಲಿ ಕುರ್ಚಿಯಲ್ಲಿ ಕುಳಿತರೆ ಅವರನ್ನು ನೋಡುವ ದೃಷ್ಟಿಕೋನಗಳು ಇನ್ನು ಬದಲಾಗಿಲ್ಲ ಎಂಬ ಅಂಶಗಳನ್ನು ಅಧ್ಯಯನ ಗುರುತಿಸಿವೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯ ಕುರಿತು ಇಟ್ಟುಕೊಂಡಿರುವ ಆಶಯಗಳು ಮತ್ತು ಪರಿಶಿಷ್ಟರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ನೀತಿ ಕಾರ್ಯಕ್ರಮಗಳ ಆಚೆಗೆ ಪರಿಶಿಷ್ಟರ ಮೀಸಲಾತಿ ಮತ್ತು ಸಂವಿಧಾನಾತ್ಮಕ ಅವಕಾಶಗಳ ಗಟ್ಟಿಗೊಳಿಸುವ ಪ್ರಜಾಪ್ರಭುತ್ವ ನೆಲೆಯಲ್ಲಿ ರಾಜಕೀಯ ಇಚ್ಛಾಶಕ್ತಿ ಮತ್ತು ಅದರಲ್ಲಿ ದಲಿತ ಪ್ರತಿನಿಧಿಗಳ ಇಚ್ಛಾಶಕ್ತಿ ಮುಖ್ಯವೆನಿಸುತ್ತದೆ. ಬದಲಾಗುತ್ತಿರುವ ಜ್ಞಾನದ ಪರಿಕಲ್ಪನೆ ಭವಿಷ್ಯ ಜಾಗತಿಕ ಪ್ರಪಂಚದಲ್ಲಿ ಅವಕಾಶವಂಚಿತ ತಳಸಮುದಾಯಗಳ ಜೀವನದ ಮೇಲೆ ಭಾರಿ ಪರಿಣಾಮ ಉಂಟು ಮಾಡುವುದರಿಂದ ಅವರ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ. ಪ್ರಜಾಪ್ರಭುತ್ವದ ನೆಲೆಯಲ್ಲಿ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯ ಮತ್ತು ಭಾಗವಹಿಸುವಿಕೆಯನ್ನು ಶಕ್ತಗೊಳಿಸಲು ಹೊಂದಿರುವ ಶಕ್ತಿಯನ್ನು ಸರಿಯಾಗಿ ಗ್ರಹಿಸದೆ. ಇಂದಿನ ಭಾರತದ ಸಂದರ್ಭದಲ್ಲಿ ದಲಿತರ ಮೀಸಲಾತಿ ಮತ್ತು ರಾಜಕೀಯ ಪ್ರಾತಿನಿಧ್ಯವು ಸಾಮಾಜಿಕ ಅಸಮಾನತೆ ಹೊಗಲಾಡಿಸುವ ಏಕೈಕ ಸಾಧನ ಎಂದು ಭಾವಿಸಿರುವುದು ದುರಂತದ ಸಂಗತಿ. ಆದ್ದರಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ರಾಜಕೀಯ ಸಬಲೀಕರಣ, ಮೀಸಲಾತಿಯ ಸಾಧಕಬಾಧಕಗಳು ಎನ್ನುವ ವಿಚಾರಗಳು ಸಮಕಾಲೀನ ಸಂದರ್ಭದಲ್ಲಿ ತುಂಬಾ ಗಂಭೀರವಾದ ಮತ್ತು ಚರ್ಚಿಸಬೇಕಾದ ವಿಚಾರವಾಗಿದೆ.

ಈ ಹಿನ್ನೆಲೆಯಲ್ಲಿ ಪರಿಶಿಷ್ಟರನ್ನು ಕೇಂದ್ರೀಕರಿಸಿ ಇನ್ನಷ್ಟು ಚರ್ಚೆಗಳು, ಸಂವಾದಗಳು, ಅಧ್ಯಯನಗಳು, ಸಂಶೋಧನೆಗಳು ನಡೆಯಬೇಕು ಎನ್ನುವುದು ಈ ಅಧ್ಯಯನದ ಆಶಯವಾಗಿದೆ. ಈ ಅಧ್ಯಯನವು ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮಾನುಸಾರವಾಗಿ ಪೂರ್ಣಗೊಳಿಸಲಾಗಿದೆ. ಪ್ರತಿಯೊಂದು ಅಧ್ಯಾಯವು ಅಧ್ಯಾಯಗಳಲ್ಲಿನ ವಿನ್ಯಾಸದಲ್ಲಿರುವ ಯಾವ ಯಾವ ವಿಷಯಗಳು ಪ್ರಸ್ತಾಪಿಸಿಲಾಗಿದೆಯೋ ಆ ವಿಷಯಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನ ಸ್ವರೂಪವನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಕ್ಷೇತ್ರ ಪರಿಚಯದೊಂದಿಗೆ ಅಧ್ಯಯನ ಗ್ರಾಮಗಳ ಪರಿಚಯ ಮತ್ತು ಅವುಗಳ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ ಮೂರರಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಪರಾಮಿರ್ಶೆಗೆ ಒಳಪಡಿಸಿ ಅಧ್ಯಾಯನದ ಶೀರ್ಷಿಕೆಗೆ ಸೈದ್ಧಾಂತಿಕ ಚೌಕಟ್ಟು ರೂಪಿಸಿದ ವಿವರಣೆ ನೀಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂವಿಧಾನಾತ್ಮಕ ಅವಕಾಶಗಳು ಮತ್ತು ಅಭಿವೃದ್ಧಿಯನ್ನು ಕುರಿತು ವಿಸ್ತೃತವಾಗಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅಸ್ಪೃಶ್ಯತೆಯ ಭಾಗವಾಗಿ ಬಂದ ಮೀಸಲಾತಿ, ರಾಜಕೀಯ ಪ್ರಾತಿನಿಧ್ಯ ಮತ್ತು ಅಧ್ಯಯನ ಪ್ರದೇಶದಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ಕುರಿತು ವಿವರಿಸಲಾಗಿದೆ. ಅದೇ ರೀತಿಯಾಗಿ ರಾಜಕೀಯ ಪ್ರಾತಿನಿಧ್ಯದ ಕುರಿತು ವಿವಿಧ ದೃಷಟಿಕೋನಗಳು ಚರ್ಚೆ, ವಿಮರ್ಶೆಯನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಾನವ ಅಭಿವೃದ್ಧಿಯನ್ನು ಕುರಿತು ಜಿ.ಡಿ.ಪಿ. ಮತ್ತು ಮಾನವ ಅಭಿವೃದ್ಧಿ ಸಂಬಂಧ ಮಾನವ ಅಭಿವೃದ್ಧಿ ಸೂಚ್ಯಾಂಕ, ಮಾನವ ಅಭಿವೃದ್ಧಿಯ ಅಸಮತೋಲನವನ್ನು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಇದರಲ್ಲಿ ಅಧ್ಯಯನದ ಸಾರಾಂಶ ಮತ್ತು ಅಧ್ಯಯನದ ಫಲಿತಗಳನ್ನು ಕುರಿತು ವಿಶ್ಲೇಷಿಸುವುದರೊಂದಿಗೆ ಸಲಹೆಗಳನ್ನು ನೀಡಲಾಗಿದೆ.

ಅಧ್ಯಯನ ಕ್ಷೇತ್ರದಲ್ಲಿ ನಡೆಸಿದ ಕ್ಷೇತ್ರಕಾರ್ಯ ಮಾಹಿತಿಯನ್ನು ಆಧರಿಸಿ ಗ್ರಾಮೀಣ ಜನರ ಜೀವನ ಮತ್ತು ಪರಿಶಿಷ್ಟರ ಜೀವನಕ್ರಮಗಳನ್ನು ಪ್ರಶ್ನಾವಳಿ ಮೂಲಕ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಲಾಗಿದೆ. ಅಧ್ಯಯನಕ್ಕಾಗಿ ಹೈದರಾಬಾದ್-ಕರ್ನಾಟಕ ಪ್ರದೇಶದ ಹಿಂದುಳಿದ ಜಿಲ್ಲೆ ಎಂದು ಕರೆಯಲ್ಪಡುವ ರಾಯಚೂರು ಜಿಲ್ಲೆ ಮೂರು ವಿಧಾನಸಭೆಯ ಮೀಸಲಾತಿ ಕ್ಷೇತ್ರ(ತಾಲೂಕುಗಳನ್ನು) ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ನಾಲ್ಕು ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿ ಮಾಹಿತಿ ಸಂಗ್ರಹಿಸಲಾಗಿದ್ದು, ಕೋಷ್ಟಕಗಳ ರೂಪದಲ್ಲಿ ವಿವರಣೆ ನೀಡಲಾಗಿದೆ. ಹೀಗೆ ಮೂರು ಮೀಸಲಾತಿ ಕ್ಷೇತ್ರಗಳಲ್ಲಿ ಪರಿಶಿಷ್ಟರ ಸಾಮಾಜಿಕ ಸ್ಥಿತಿ,

ಆರ್ಥಿಕ ಸ್ಥಿತಿಯ ಚಿತ್ರಣ ವಿಶ್ಲೇಷಣೆಗೆ ಒಳಪಡಿಸಿ ಫಲಿತಗಳನ್ನು ನೀಡಲಾಗಿದೆ. ಕೊನೆಯಲ್ಲಿ ಅನುಬಂಧ ಮಾಹಿತಿಯೊದಗಿಸಿದ ಪರಾಮರ್ಶನ ಗ್ರಂಥಗಳು, ಪೂರಕವಾದವುಗಳನ್ನು ನೀಡಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಹಿಂದಿನ ಅಧ್ಯಾಯಗಳ ಕೊನೆಯಲ್ಲಿ ಬಂದ ಸಾರಂಶ ಅಥವಾ ಫಲಿತಗಳ ಆಧಾರಗಳ ಮೇಲೆ ಕೊನೆಯಲ್ಲಿ ಸಲಹೆಗಳನ್ನು ನೀಡಲಾಗಿದೆ. ವಾಸ್ತವಿಕತೆಯಲ್ಲಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಿರುವ ಸಂವಿಧಾನಾತ್ಮಕ ಕಾರ್ಯಕ್ರಮಗಳು ರಕ್ಷಣೆಗಳು, ಅವಕಾಶಗಳು ಸರಿಯಾದ ಪ್ರಮಾಣದಲ್ಲಿ ತಲಿಪಿಲ್ಲ ಎನ್ನುವುದನ್ನ ಅನುಷಂಗಿಕ ಮಾಹಿತಿ ಆಧಾರದ ಮೇಲೆ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ವಾದಿಸಲಾಗಿದೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಕ್ಕೆ ಅವರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಲಭಿಸಿಲ್ಲ ಎನ್ನುವುದನ್ನು ಸಹ ಸರ್ಕಾರದ ಅಂಕಿ-ಅಂಶಗಳು ಮತ್ತು ವರದಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಫಲಿತಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

೧. ಗ್ರಾಮೀಣ ಪ್ರದೇಶದಲ್ಲಿ ಸ್ವಾತಂತ್ರ್ಯ ಬಂದು ೭೦ ವರ್ಷಗಳಾದರು ಹೊಟೆಲ್ ದೇವಸ್ಥಾನದಲ್ಲಿ ಹೊರಗಿಡುವ ಪ್ರಕ್ರಿಯೆ ಇದೆ. ಹೀಗೆ ಮಾಡುವ ಹೊಟೆಲ್‌ಗಳ ಲೈಸನ್ಸ್ ರದ್ದು ಮಾಡಬೇಕು ಮತ್ತು ಅಂತಹ ದೇವಸ್ಥಾನಗಳನ್ನು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಸೇರಿಸಬೇಕು.

೨. ಅಧ್ಯಯನದಲ್ಲಿ ಕಂಡುಬಂದ ಅತಂಕಕಾರಿ ಸಂಗತಿಯೆಂದರೆ ಮೀಸಲಾತಿಯಲ್ಲಿ ಬರುವ ಹೊಲೆಮಾದಿಗರನ್ನು ಹೊರತು ಪಡಿಸಿ ಉಳಿದ ಸ್ಪರ್ಶ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮೇಲ್ಜಾತಿ ಜನರಂತೆ ಅಸ್ಪೃಶತೆ ಆಚರಿಸುತ್ತಿರುವುದು ದುರಂತದ ಸಂಗತಿ ಹಾಗಾಗಿ ಮೀಸಲಾತಿ ಯಾರಿಗೆ ಅವಶ್ಯಕತೆ ಇದೆ ಮತ್ತು ಯಾರಿಗೆ ಅವಶ್ಯಕತೆ ಇಲ್ಲ ಎಂಬುದನ್ನು ಪುನರೆ ವಿಮರ್ಶೆಯಾಗಬೇಕಾದ ಅಗತ್ಯತೆ ಇದೆ.

೩. ಅಶ್ಪೃಶತೆಯ ಕಾರಣಕ್ಕಾಗಿ ದೌರ್ಜನ್ಯ ಬಹಿಷ್ಕಾರ ತೀರ ಅಪರೂಪದ ಸಂದರ್ಭದಲ್ಲಿ ಆಗಿವೆ. ಆದರೆ ಅದರ ಸ್ವರೂಪ ಮಾತ್ರ ಬೇರೆ ಬೇರೆ ಬಗೆಯಲ್ಲಿ ನಡೆಯುತ್ತವೆ ಎಂಬುದನ್ನು ಕ್ಷೇತ್ರಕಾರ್ಯದ ಮಾಹಿತಿಯಿಂದ ಕಂಡುಬಂದಿದೆ.

೪. ಶೈಕ್ಷಣಿಕ ಸಂಸ್ಥೆಗಳಲ್ಲಿಯು ಸಹ ಜಾತಿಯ ಕಲ್ಪನೆ ಬದಲಾಗಿದೆ. ಅದರಲ್ಲಿ ಸರಕಾರಿ ಶಾಲ ಕಾಲೇಜುಗಳಲ್ಲಿ ಅಂಗನವಾಡಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ನೋಡುವ ದೃಷ್ಟಿಕೋನ ಈ ಕಡಿಮೆಯಾಗಿದೆ ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

೫. ಕೋಷ್ಟಕ ೧೦ರಲ್ಲಿ ವಿವರಿಸಿದಂತೆ ಮದ್ಯದಲ್ಲಿ ಶಾಲೆ ಬಿಡುವದು ಪರಿಶಿಷ್ಟರಲ್ಲಿ ಸಮಾನ್ಯ ಸಂಗತಿಯನ್ನು ಹೊರಹಾಕಿದ ಯಾಕೆಂದರೆ ಇಂದಿನ ದುಬಾರಿ ಶಿಕ್ಷಣಕ್ಕೆ ಒಗ್ಗಿಕೊಳ್ಳಲು ಸಾದ್ಯವಾಗುತ್ತಿಲ್ಲ.

ಇತರ ಜಾತಿಗಳಲ್ಲಿ ಇದರ ಪ್ರಮಾಣ ಕಡಿಮೇ ಇದೆ. ಇದಕ್ಕೆ ಪರಿಹಾರ ಪದವಿ ಶಿಕ್ಷಣದವರೆಗೆ ಎಲ್ಲಾರಿಗೂ ಉಚಿತ ಶಿಕ್ಷಣ ಕೊಡಬೇಕು.

೬. ಅಧ್ಯಯನದ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳು ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಾಗಿ ಖಾಸಗಿ ಆಸ್ಪತ್ರೆಯನ್ನೆ ಅವಲಂಬಿಸಿದ್ದಾರೆ. ದುಡಿದ ಹಣ ಆರೋಗ್ಯಕ್ಕೆ ಹೆಚ್ಚು ಖರ್ಚಾಗುತ್ತಿದೆ. ಹೀಗಾಗಿ ಪರಿಶಿಷ್ಟರು ಆರ್ಥಿಕವಾಗಿ ದುಸ್ಥಿತಿ ಅನುಭವಿಸುತ್ತಿದ್ದಾರೆ. ಅಧ್ಯಯನಕ್ಕೆ ಒಳಪಡಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜೀವನ ಋಣಾತ್ಮಕವಾಗಿ ಕಂಡು ಬರುತ್ತದೆ. ಇವರಿಗೆ ಬಿ.ಪಿ.ಎಲ್. ಕಾರ್ಡ್ ಬಿಟ್ಟರೆ ಯಾವುದೇ ಅರೋಗ್ಯ ಕಾರ್ಡ್ ಇಲ್ಲ. ಹಾಗಾಗಿ ಈ ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಅರೋಗ್ಯ ತೀರ ತಳ ಮಟ್ಟದಲ್ಲಿದೆ. ಆದೆ ರೀತಿಯಾಗಿ ದೇವದುರ್ಗ ತಾಲೂಕಿನಲ್ಲಿ ಶೇ. ೮೪ರಷ್ಟು ಲಿಂಗಸೂಗೂರು ತಾಲೂಕಿನಲ್ಲಿ ಶೇ. ೮೦ರಷ್ಟು ಸಿಂಧನೂರ ತಾಲೂಕಿನಲ್ಲಿ ಶೇ. ೫೩ರಷ್ಟು ಜನ ಯಾವುದೇ ಆರೋಗ್ಯ ಕಾರ್ಡ್‌ಗಳನ್ನು ಹೊಂದಿರುವುದಿಲ್ಲ. ಇದಕ್ಕೆ ಕಾರಣ ಕಾರ್ಡ್ ಮಾಡಿಸಬೇಕಾದರೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಮೂರು ಒಪ್ಪತ್ತಿನ ಊಟಕ್ಕೂ ಪರದಾಡುವ ಪರಿಶಿಷ್ಟರು ಈ ರೀತಿಯ ಸೌಲಭ್ಯ ಪಡೆಯುವುದು ದೂರದ ಮಾತು. ಸರಕಾರ ಕುರಿಗಳಿಗೆ ಆರೋಗ್ಯ ವಿಮೇ ನಿಗದಿ ಪಡಿಸಿದೆ ಆದರೆ ಮನುಷ್ಯರಿಗೆ ಆರೋಗ್ಯ ವಿಮೇ ನಿಗದಿ ಪಡಿಸಿಲ್ಲ. ಹಾಗಾಗಿ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಆರೋಗ್ಯ ವಿಮೇ ಸೌಲಭ್ಯವನ್ನು ಒದಗಿಸಬೇಕು.

೭. ವಸತಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳಲ್ಲಿ ಶೇ. ೫೦ರಷ್ಟು ಜನರು ವಸತಿ ಸೌಲಭ್ಯ ಮತ್ತು ಶೇ. ೫೦ರಷ್ಟು ಜನರು ನಿವೇಶನ ಸಮಸ್ಯೆ ಎದುರಿಸುತ್ತಿದ್ದಾರೆ. ವಸತಿ ಯೋಜನೆ ಜಾರಿಯಾದಾಗಿನಿಂದಲೂ ಇಲ್ಲಿಯವರೆಗೆ ಲೆಕ್ಕ ಹಾಕಿದರೆ ಕರ್ನಾಟಕದಲ್ಲಿ ಪರಿಶಿಷ್ಟರ ಜನಸಂಖ್ಯೆಗೆ ಮತ್ತು ಮಂಜೂರು ಆದ ಮನೆಗಳ ಸಂಖ್ಯೆಗೆ ತಾಳಮೇಳವೆ ಇಲ್ಲ ಇಲ್ಲಿಯವರೆಗೂ ಮಂಜೂರಿಯಾದ ಮನೆಗಳು ಒಂದು ಕುಟುಂಬಕ್ಕೆ ಎರಡು ಮನೆಗಳು ಇರಬೇಕಾಗಿತ್ತು ಆದರೆ ವಾಸ್ತವದಲ್ಲಿ ಹಾಗೆಯಿಲ್ಲ ಎಂಬುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಮಾಹಿತಿ ವಿವರಿಸುತ್ತದೆ. ಹಾಗಾಗಿ ಐದು ವರ್ಷಕ್ಕೊಮ್ಮೆ ಇದರ ಸಮರ್ಪಕವಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ನಡೆಯಬೇಕು.

೮. ಅಧ್ಯಯವ ನಡೆಸಿದ ಕ್ಷೇತ್ರದಲ್ಲಿ ಶೇ. ೬೦ರಷ್ಟು ಕುಟುಂಬಗಳಿಗೆ ಭಾಗ್ಯಜೋತಿ ಮತ್ತು ಕುಟಿರ ಜೋತಿ ಯೋಜನೆ ಸೌಲಭ್ಯ ಸಿಕ್ಕಿರುವುದಿಲ್ಲ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಗಳಲ್ಲಿಯೂ ಸಹ ಐದು ವರ್ಷಕೊಮ್ಮೆ ಇದರ ಸಮರ್ಪಕವಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ನಡೆಯಬೇಕು.

೯. ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟರು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಧ್ಯಯನಕ್ಕೆ ಒಳಪಡಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಶೇ.

೫೦ರಷ್ಟು ಕುಟುಂಬಗಳಿಗೆ ಶೌಚಾಲಯಗಳಿಲ್ಲ, ಸರ್ಕಾರ ಹಣದ ನೆರವು ನೀಡಿದರೂ ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ ಎಂಬ ಭಯದಿಂದ ಶೇ ೬೫ ರಷ್ಟು ಕುಟುಂಬಗಳಿಗೆ ಕುಡಿಯುವ ನೀರಿನ ಸೌಲಭ್ಯವಿಲ್ಲ ಇದಕ್ಕಾಗಿ ಅವರು ಪರಸ್ಥಳವನ್ನೆ ಅವಲಂಭಿಸಬೇಕಾಗಿದೆ ಮತ್ತು ಅವರ ಓಣಿಗಳಲ್ಲಿ ಉತ್ತಮವಾದ ರಸ್ತೆಗಳಿಲ್ಲದಿರುವುದು ಕಂಡು ಬಂದಿದೆ.

೧೦. ಆರ್ಥಿಕ ಭದ್ರತೆಗೆ ಸಂಬಂಧಿಸಿದಂತೆ ಅಧ್ಯಯನದ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳೆಂದರೆ ಮೂರೂ ವಿಧಾನಸಭಾ ಕ್ಷೇತ್ರಗಳಲ್ಲಿ ದೇವದುರ್ಗ ಮೀಸಲಾತಿ ಕ್ಷೇತ್ರವಾಗಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಶೇ. ೨೦ರಷ್ಟು ಕುಟುಂಬಗಳಿಗೆ ಬಿ.ಪಿ.ಎಲ್. ಕಾರ್ಡ್‌ಗಳಿಲ್ಲ. ಸಮಾನ್ಯ ಕ್ಷೇತ್ರವಾದ ಸಿಂಧನೂರ ಕ್ಷೇತ್ರದಲ್ಲಿ ಶೇ. ೧೫ರಷ್ಟು ಕುಟುಂಬಗಳಿಗೆ ಮತ್ತು ಲಿಂಗಸುಗೂರು ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಶೇ ೨೧ರಷ್ಟು ಬಿ.ಪಿ.ಎಲ್. ಕಾರ್ಡ್‌ಗಳಿಲ್ಲ ಮತ್ತು ಶೇ. ೧೫ರಷ್ಟು ಜನರು ಭೂ ಒಡೆತನ ಹೊಂದಿದ್ದಾರೆ. ಉಳಿದವರು ಕೂಲಿಯನ್ನೇ ಅವಲಂಬಿಸಿದ್ದಾರೆ. ಹಾಗಾಗಿ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜನರ ಆರ್ಥಿಕ ಸ್ಥಿತಿ ತೀರ ಕೆಳಮಟ್ಟದಲ್ಲಿ ಇದೆ ಎಂದು ತಿಳಿದುಬರುತ್ತದೆ. ಹಾಗಾಗಿ ಈ ಜಿಲ್ಲೆಯ ಜನರು ಬಹುತೇಕವಾಗಿ ಮೇಲ್ವರ್ಗ ಜನರನ್ನು ಅವಲಂಭಿಸಿದ್ದಾರೆ. ಅದ್ದರಿಂದ್ದ ಈ ಪ್ರದೇಶದಲ್ಲಿ ವಲಸೆ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ. ಅದರಿಂದ ಅವರಿಗೆ ಅವರದೇ ಆದ ನೆಲೆಯಿಂದ ಉದ್ಯೋಗ, ಭೂಮಿ ಮತ್ತು ಬಂಡವಾಳ ಅನುಕೂಲ ಕಲ್ಪಿಸಿದರೆ ಆಯಾ ಸಮುದಾಯಗಳು ಆರ್ಥಿಕ ಸಬಲೀಕರಣಕ್ಕೆ ಅನುಕೂಲವಾಗುತ್ತದೆ.

೧೧. ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜೀವನ ಮಟ್ಟ ಅತ್ಯಂತ ಕೆಳಮಟ್ಟದಲ್ಲಿ ಕಂಡುಬರುತ್ತದೆ. ಶೇ. ೭೦ರಷ್ಟು ಜನರು ಲೇವಾದೇವಿಗಾರರಿಂದ ಸಾಲ ಪಡೆದು (ಖಾಸಗಿ ಸಾಲ) ಜಮೀನು, ಜೀವನ, ಶಿಕ್ಷಣ ಮುಂತಾದವುಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಹಾಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಖಾಸಗಿ ಸಾಲಕ್ಕಾಗಿ ಮೇಲ್ವಾಗದವರನ್ನೇ ಅವಲಂಬಿಸಿದ್ದಾರೆ. ಯಾಕೆಂದರೆ ಬ್ಯಾಂಕುಗಳು ಸಹ ಇವರಿಗೆ ಸಾಲದ ಸೌಲಭ್ಯವನ್ನು ನಿಡುವದಿಲ್ಲ. ಯಾಕೆಂದರೆ ಸಾಲ ನಿಡಬೇಕೆಂದರೆ ಜಾಮಿನ್ (ಭೂಮಿ, ನಿವೇಶನ ಮತ್ತು ಉದ್ಯೋಗದ ವೇತನ ಪತ್ರ ಜೊತೆಗೆ ಜಾಮಿನ್ದಾರರ ಸಾಕ್ಷಿ ಅಗತ್ಯ) ಇವು ಯಾವುವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಇರುವುದಿಲ್ಲ. ಹೀಗಾಗಿ ಇವರು ಬ್ಯಾಂಕುಗಳಿಂದ ದೂರ ಉಳಿದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಲ್ಲಿ, ಸಾಲ ಸೌಲಭ್ಯಗಳು ಮಂಜೂರಿಯಾದರು ಇದೇ ಶರತ್ತುಗಳು ಇರುತ್ತವೆ. ಹೀಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಿರುವ ಅನುದಾನ ಸಮರ್ಪಕವಾಗಿ ಬಳಕೆಯಾಗದಿರುವುದು ಮತ್ತು ಪ್ರತಿವರ್ಷ ವಾಪಾಸ್ ಹೋಗುವುದು ಸರ್ವಸಾಮಾನ್ಯವಾದ ಸಂಗತಿ ಪರಿಶಿಷ್ಟರ ಆರ್ಥಿಕ ಅಭಿವೃದ್ಧಿಗಾಗಿ ಆನೇಕ

ಕಾರ್ಯಕ್ರಮಗಳಿವೆ ಆದರೆ ಅವು ಇವರನ್ನು ಕೈ ಹಿಡಿದಂತೆ ಕಾಣುವುದಿಲ್ಲ ಇದನ್ನು ಬಹಳ ಗಂಭಿರವಾಗಿ ಪರಿಗಣಿಸಿ ಸೂಕ್ಷ್ಮ ರೀತಿಯಲ್ಲಿ ಜಾರಿಗೆ ತರಬೇಕು.

೧೨. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಸಬಲಿಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ಶೇ. ೬೦ರಷ್ಟು ಜನರು ಸ್ಥಳಿಯ ಸಂಸ್ಥೆಗಳಲ್ಲಿ ರಾಜಕೀಯ ಸಹನಾಗಿತ್ವದಲ್ಲಿ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜಕೀಯದ ಬಗ್ಗೆ ನಿರಾಸಕ್ತಿ ತೋರಿಸಿದ್ದಾರೆ. ಅದೇ ರೀತಿಯಾಗಿ ಶೇ. ೮೫ರಷ್ಟು ಜನರು ಸಹಕಾರಿ ಕ್ಷೇತ್ರದ ಪರಿಚಯವಿಲ್ಲದವರು ಇದ್ದಾರೆ. ಅಂದರೆ ಯಾವುದೇ ಸ್ಥಾನಮಾನ ಶೇರು, ಅಥಾವ ಖಾತೆಗಳನ್ನು ಹೊಂದಿಲ್ಲದಿರುವುದು ಕಂಡುಬಂದಿದೆ. ಶೇ. ೫೨ರಷ್ಟು ಜನರು ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯರಾಗಿ ಸಕ್ರಿಯವಾಗಿ ಭಾಗವಹಿದ್ದೆವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಾಕೆಂದರೆ ಹಣದ ಅವಶ್ಯಕತೆ ಮತ್ತು ಜೀವನದ ಅವಶ್ಯಕತೆಯನ್ನು ಪೂರೈಸಲು ಈ ರೀತಿಯಾದ ಮಾರ್ಗವನ್ನು ಕಂಡುಕೊಂಡಿದ್ದಾರೆ.

೧೩. ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ಯಾರು ಸಹ ರಾಜಕೀಯ ಪಕ್ಷದ ಸದಸ್ಯರಲ್ಲ ರಾಜಕೀಯ ಪಕ್ಷದ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ. ಆದರೆ ಚುನುವಣಾ ಸಂದರ್ಭದಲ್ಲಿ ಯಾವುದಾದರು ಒಂದು ಪಕ್ಷಕ್ಕೆ ಬೆಂಬಲಿಸುತ್ತಾರೆ. ಶೇ. ೩೫ರಷ್ಟು ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೆ ಶೇ. ೬೫ರಷ್ಟು ಜನರು ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ. ಪಕ್ಷವನ್ನು ಬೆಣಬಲಿಸುತ್ತೇವೆ ಎಂದ್ದು ಹೇಳಿಕೊಂಡಿದ್ದಾರೆ. ಇದು ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಈಗ ಇತರ ಪಕ್ಷಗಳನ್ನು ಬೆಂಬಲಿಸುತ್ತಾರೆ. ಎಂದರೆ ಅವರ ರಾಜಕೀಯ ದೃಷ್ಟಿಕೋನ ಬದಲಾಗಿದೆ. ಎಂದರ್ಥವಲ್ಲ ಹಾಗೂ ಅವರು ರಾಜಕೀಯವಾಗಿ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಲು ಬರುವುದಿಲ್ಲ ಆದರೆ ಚುಣಾವಣೆಯಲ್ಲಿ ಪ್ರಣಾಳಿಕೆಯನ್ನು ಗಮನಿಸಿ ಬದಲಾಗಿದ್ದಾರೆ ಎಂದು ಹೇಳಲು ಬರುವುದಿಲ್ಲ. ಅಡ್ಡ ಪರಿಶೀಲನೆಯಲ್ಲಿ ಕಂಡುಬಂದ ಪ್ರಮುಖ ಅಂಶಗಳೆಂದರೆ, ಹಣ ಮತ್ತು ಅಂತಸ್ತು ನಿರ್ಣಯಕ ಪಾತ್ರ ವಹಿಸುತ್ತದೆ ಎಂದು ಹೇಳಿಕೊಂಡಿದ್ದಾರೆ. ಹೀಗಾಗಿ ಸ್ಥಳಿಯ ಸಂಸ್ಥೆಗಳಲ್ಲಿ ಅಥವಾ ರಾಜ್ಯ, ರಾಷ್ಟ್ರಮಟ್ಟದ ರಾಜಕೀಯದಲ್ಲಿ ನಿರಸಕ್ತಿಯನ್ನು ತೋರಿಸುತ್ತಾರೆ. ಅವರ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಅಭಿಪ್ರಾಯ ಕೇಳಿದರೆ ರಾಜಕೀಯ ಎಂದರೆ ಹೋಲಸು ಎಂದು ಅಭಿಪ್ರಾಯ ಪಡುತ್ತಾರೆ. ಇದರ ಬಗ್ಗೆ ಸಮರ್ಪಕ ತಿಳುವಳಿಕೆ ತರಬೇತಿ ದೂರದೃಷ್ಟಿ ಮತ್ತು ಭೂತ ಮತ್ತು ಭವಿಷ್ಯದ ಬಗ್ಗೆ ಸಮಗ್ರ ತಿಳುವಳಿಕೆಯನ್ನು ನೀಡಬೇಕಾದ ಅಗತ್ಯತೆ ಇದೆ.

೧೪. ಅಧ್ಯಯನ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ತಿಳುವಳಿಕೆ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ಶೇ. ೫೩ರಷ್ಟು ಜನರು ಸ್ಥಳಿಯ ಸಂಸ್ಥೆಗಳಾದ ಗ್ರಾಮ

ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯರುಗಳ ಹೆಸರು ಗೊತ್ತಿಲ್ಲದವರಾಗಿದ್ದಾರೆ.ಆದೇ ರೀತಿಯಾಗಿ ಈ ಸ್ಥಳಿಯ ಸಂಸ್ಥೆಗಳ ಸದಸ್ಯರುಗಳು ವಾರ್ಡ್‌ಗಳಿಗೆ ಮತ್ತು ತಮ್ಮ ಕ್ಷೇತ್ರಗಳಿಗೆ ಚುಣಾವಣೆ ನಂತರ ಐದು ವರ್ಷಗಳಲ್ಲಿ ಒಂದೆರಡು ಬಾರಿ ಮಾತ್ರ ಭೇಟಿ ನೀಡುತ್ತಾರೆ. ಹೀಗಾಗಿ ಸ್ಥಳಿಯ ಸಂಸ್ಥೆಗಳ ಸದಸ್ಯರೊಂದಿಗೆ ಸಮಸ್ಯೆ ಬಗ್ಗೆ ಚರ್ಚಿಸಿ ಆಹವಾಲು ಸಲ್ಲಿಸುವದು ಕೂಡ ಕಷ್ಟ ಎನ್ನಿಸುತ್ತದೆ ಎಂಬ ಮಾಹಿತಿ ನೀಡುತ್ತಾರೆ.

೧೫. ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಡಿಸಿದ ಶೇ. ೬೦ ರಷ್ಟು ಜನರು ಎಂ.ಎಲ್.ಎ. ಮತ್ತು ಎಂ.ಪಿ. ವಿಧಾನ ಪರಿಷತ್ ಸದಸ್ಯರ ಹೆಸರುಗಳು ಗೊತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ಮತ್ತು ಚುಣಾವಣೆ ಆದ ನಂತರ ಮತ್ತೆ ಐದು ವರ್ಷಗಳವರೆಗೂ ಜನರತ್ತ ಸುಳಿಯುವದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ರಾಜಕೀಯ ಭಾಗವಹಿಸುವಿಕೆ ನಿರಾಸಕ್ತಿಯಿಂದ ಅನೇಕ ಅಧ್ಯಯನಗಳು ಸಾದರಪಡಿಸಿವೆ.

ಸಲಹೆಗಳು

ಪ್ರಸ್ತುತ ಅಧ್ಯಯನದಲ್ಲಿ ಹಿಂದಿನ ಅಧ್ಯಾಯಗಳ ಕೊನೆಯಲ್ಲಿ ಬಂದ ಫಲಿತಗಳ ಆಧಾರದ ಮೇಲೆ ಕೊನೆಯಲ್ಲಿ ಸಲಹೆಗಳನ್ನು ನೀಡಲಾಗಿದೆ. ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅದರಲ್ಲಿ ವಿಶೇಷವಾಗಿ ಮೀಸಲಾತಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆ ಸಮುದಾಯಗಳಿಗೆ ಲಭಿಸಿಬೇಕಾಗಿದ್ದ ಆರ್ಥಿಕ, ಸಾಮಾಜಿಕ, ರಾಜಕೀಯ ಅವಕಾಶಗಳಲ್ಲಿ ಇನ್ನೂ ನೀರಿಕ್ಷಿತ ಪ್ರಮಾಣದಲ್ಲಿ ಲಭಿಸಿಲ್ಲ ಎನ್ನುವುದನ್ನು ಅಧ್ಯಯನದಿಂದ ಹೊರ ಬಂದಿರುವ ಅಂಶಗಳಾಗಿವೆ. ಇದರ ಆಧಾರದ ಮೇಲೆ ರಾಯಚೂರು ಜಿಲ್ಲೆಯ ಪರಿಶಿಷ್ಟರ ಜೀವನ ಉತ್ತಮ ಪಡಿಸುವ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

ಭಾರತದಲ್ಲಿ ಎಲ್ಲಾ ಜಾತಿಗಳು ಮತ್ತು ಉಪಜಾತಿಗಳು ಮೀಸಲಾತಿ ವ್ಯಾಪ್ತಿಗೆ ಬಂದು ಬಿಟ್ಟಿವೆ ಕೆಲವು ಮುಂದಿನ ಬಾಗಿಲಿನಿಂದ ಬಂದರೆ ಕೆಲವು ಹಿಂದಿನ ಬಾಗಿಲಿನಿಂದ ಬಂದಿವೆ. ಉದಾ: ಹಿಂದಿನ ಬಾಗಿಲಿನಿಂದ ಸುಳ್ಳು ಜಾತಿ ಪ್ರಮಾಣ ಪತ್ರ, ಬ್ರಾಹ್ಮಣರು–ಮಾಲೆಯರೆಂದು, ಜಂಗಮರು ಬೇಡ ಜಂಗಮರೆಂದು, ಕುರುಬರು ಕಾಡುಕುರುಬರೆಂದು, ಮೀಸಲಾತಿಯ ಲಾಭ ಪಡೆಯುತ್ತಿದ್ದಾರೆ. ಮುಂದಿನ ಬಾಗಿಲಿನಿಂದ ಸಾಮಾನ್ಯ ವರ್ಗ ಕೋಟಾದಡಿ ಲಾಭ ಪಡೆಯುತ್ತಿದ್ದಾರೆ. ಅದೇ ರೀತಿಯಾಗಿ ಧಾರ್ಮಿಕ ಅಲ್ಪಸಂಖ್ಯಾತರು, ಅಲ್ಪಸಂಖ್ಯಾತರ ಕೋಟಾದಡಿ ಮೀಸಲಾತಿ ಪಡೆಯುತ್ತಿದ್ದಾರೆ. ಅದೇ ರೀತಿಯಾಗಿ ಹಿಂದುಳಿದ ವರ್ಗದವರು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಶೇ.೧೫ರಷ್ಟು ಮೀಸಲಾತಿ ಪಡೆಯುತ್ತಿದ್ದಾರೆ. ಇದರ ಜೊತೆಗೆ ಪಂಜಾಬ ಹರಿಯಾಣದಲ್ಲಿ ಜಾಟರು, ರಾಜಸ್ಥಾನದಲ್ಲಿ ಗುಜ್ಜಾರರು, ಗುಜುರಾತನಲ್ಲಿ ಪಟೇಲರು, ಮಹಾರಾಷ್ಟ್ರದಲ್ಲಿ ಮರಾಠರು ಮೀಸಲಾತಿಗಾಗಿ ಅಗ್ರಹಿಸುತ್ತಿದ್ದಾರೆ. ಇವರೆಲ್ಲರ ಕಣ್ಣು ಇರುವುದು ಶೇ. ೧೮ರ ಎಸ್.ಸಿ. ಎಸ್.ಟಿ ಮೀಸಲಾತಿ ಮೇಲೆ ಈಗಾಗಿ ಮೀಸಲಾತಿ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಅದರ ಉದ್ದೇಶ ಮತ್ತು ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

೧. ಮೀಸಲಾತಿಗೆ ಸಂಬಂಧಿಸಿದಂತೆ ಹೊಸ ಮಾನದಂಡಗಳನ್ನು ಸೃಷ್ಟಿಸುವ ಅಗತ್ಯವಿದೆ. ಏಕೆಂದರೆ ಪ್ರತಿಯೊಂದು ಜಾತಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ದಿನಕ್ಕೊಂದು ಜಾತಿ ಮೀಸಲಾತಿ ಪಟ್ಟಿಗೆ ಸೇರುತ್ತೀವೆ. ಮೀಸಲಾತಿ ಸಾಮಾಜಿಕ ನ್ಯಾಯದ ಭಾಗವಾಗಿ ಬಂದಿಲ್ಲ. ಬದಲಾಗಿ ಅಸ್ಪೃಷ್ಯತೆ, ಶೋಷಣೆ, ಅಸಮಾನತೆಯ ಭಾಗವಾಗಿ ಬಂದಿದೆ. ಮುಂದುವರೆದ ಜಾತಿಗಳು ಮೂಲ ವಿಷಯಗಳನ್ನು ಮರೆಮಾಚಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಪರಿಶಿಷ್ಟರಿಗೆ ಇರುವ ಮೀಸಲಾತಿಯನ್ನು ಇಲ್ಲವಾಗಿಸುವ ಪ್ರಯತ್ನ ನಿರಂತರವಾಗಿ ಮಾಡುತ್ತಲೇ ಬಂದಿದ್ದಾರೆ.

೨. ಭಾರತದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಎರಡೆ ಜಾತಿಗಳು ಅಸ್ಪೃಶ್ಯ ಜಾತಿಗಳು ಎನಿಸಿಕೊಂಡಿವೆ. ಅವುಗಳೆಂದರೆ ಮಹಾರಾಷ್ಟ್ರದಲ್ಲಿ ಮಹಾರ ಮತ್ತು ಮಾಂಗ್‌ಗಳು. ಆಂಧ್ರಪ್ರದೇಶದಲ್ಲಿ ಮಾಲಾ ಮತ್ತು ಮಾದಿಗ ತಮಿಳಿನಾಡಿನಲ್ಲಿ ಚಕ್ಕಲಿಯನ ಮತ್ತು ಪರೈಯ ಕರ್ನಾಟಕದಲ್ಲಿ ಮಾದಿಗ ಮತ್ತು ಹೊಲೆಯ, ಪಂಜಾಬ್, ಬಿಹಾರ, ಉತ್ತರ ಪ್ರದೇಶ ಮತ್ತು ಉತ್ತರ ಭಾರತದಲ್ಲಿ ಚಮ್ಮಾರರು ಅಸ್ಪೃಶ್ಯ ಜಾತಿಗಳಾಗಿವೆ. ಈ ಜಾತಿಗಳು ಮಾತ್ರ ವೇದಗಳ ಕಾಲದಿಂದ ಉಪನಿಷತ್ತುಗಳ ಕಾಲದಿಂದ ಅದೇರೀತಿಯಾಗಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಕೆರೆ, ಭಾವಿ, ದೇವಸ್ಥಾನ ಹೋಟಲ್‌ಗಳಲ್ಲಿ ನಿರ್ಬಂಧಕ್ಕೆ ಒಳಗಾಗಿ ಶೋಷಣೆ ಅನುಭವಿಸುತ್ತಿದ್ದಾರೆ. ಈ ಎರಡು ಜಾತಿಯ ಉಪಜಾತಿಗಳಿಗೂ ಸಹ ಜಾತಿ ಅಥವಾ ಅಸ್ಪೃಶ್ಯತೆಯ ಸೊಂಕು ಸೋಕುವುದಿಲ್ಲ. ಉದಾ: ಕರ್ನಾಟಕದಲ್ಲಿ ಚೆನ್ನ ದಾಸರು, ಛಲುವಾದಿ ಜಾತಿಯ ಉಪಜಾತಿ, ಅದೇರೀತಿಯಾಗಿ ದಕ್ಕಲಿಗರೂ ಮಾದಿಗರ ಉಪಜಾತಿ ಇವರಿಗೆ ಎಲ್ಲಿಯೂ ಸಹ ಅಸ್ಪೃಶ್ಯತೆ ಸಮಸ್ಯೆ ಉದ್ಭವಿಸುವುದಿಲ್ಲ. ಇದು ಜಾತಿ ಮತ್ತು ಉಪಜಾತಿಯ ಸಂಕಥನವಾದರೆ ಸಂವಿಧಾನದ ಪ್ರಕಾರ ಮೀಸಲಾತಿ ಪಟ್ಟಿಯಲ್ಲಿ ಬರುವ ಕರ್ನಾಟಕದ ೧೦೧ ಪರಿಶಿಷ್ಟ ಜಾತಿಯಲ್ಲಿ ಮಾದಿಗ ಮತ್ತು ಹೊಲೆಯ ಜಾತಿಯನ್ನು ಹೊರತುಪಡಿಸಿ ಉಳಿದ ೯೯ ಜಾತಿಗಳಿಗೂ ಜಾತಿ ಸೊಂಕು ಸೊಕುವುದಿಲ್ಲ. ಹಾಗೆಯೇ ಆರ್ಥಿಕ, ಸಮಾಜಿಕ, ರಾಜಕೀಯ ಮತ್ತು ಸಂಸ್ಕೃತಿಕ ಅವಕಾಶಗಳನ್ನು ಸ್ಪರ್ಶ ಜಾತಿಗಳು ಹೆಚ್ಚಿನ ಪ್ರಮಾಣ ಪಡೆದಿವೆ ಎಂದು ಅನೇಕ ವರದಿಗಳು ಸರ್ಕಾರದ ಅಂಕಿ ಅಂಶಗಳು ಸಾದರ ಪಡಿಸಿವೆ. ಇಂತಹ ಅಸಮಾನತೆಯನ್ನು ಸರಿಪಡಿಸಲು ೧೯೭೫ರಲ್ಲಿ ಪಂಜಾಬ ಮತ್ತು ಹರಿಯಾಣದಲ್ಲಿ ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಜಾರಿಗೆ ತಂದವು. ೨೦೦೪ರಲ್ಲಿ ಆಂಧ್ರಪ್ರದೇಶದ ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸಿತು ಆದರೆ ನ್ಯಾಯಲಯವು ಅದನ್ನು ಮಾನ್ಯಮಾಡಲಿಲ್ಲ. ಅದೇರೀತಿಯಾಗಿ ೨೦೧೨ರಲ್ಲಿ ನ್ಯಾಯ ಮೂರ್ತಿ ಎ.ಜೆ. ಸದಾಶಿವ ನೇತೃತ್ವದಲ್ಲಿ ಆಯೋಗವು ಮಾದಿಗ ಮತ್ತು ಅದರ ಉಪಜಾತಿಗಳು(೨೮)ಗಳಿಗೆ ಶೇ.೬ರಷ್ಟು ಒಳಮೀಸಲಾತಿ ಮತ್ತು ಛಲವಾದಿ ಮತ್ತು ಅದರ ಉಪಜಾತಿ(೨೫)ಗಳಿಗೆ ಶೇ. ೫ರಷ್ಟು ಒಳಮೀಸಲಾತಿಯನ್ನು ನೀಡಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆದರೆ ಪರಿಶಿಷ್ಟ ಜಾತಿಯಲ್ಲಿರುವ ಕೆಲವೇ ಕೆಲವು ಸ್ಪರ್ಶ ಜಾತಿಗಳು ಪರಿಶಿಷ್ಟರ ಒಳಮೀಸಲಾತಿಗೆ ಅಡ್ಡಗಾಲು ಹಾಕುತ್ತಿವೆ ಅಲ್ಲದೆ

ಪರಿಶಿಷ್ಟ ಜಾತಿಯಲ್ಲಿರುವ ೧೦೧ ಜಾತಿಗಳ ಪೈಕಿ ಮಾದಿಗ ಮತ್ತು ಹೊಲೆಯ ಜಾತಿಯವರು ಸಿಂಹಪಾಲು ಪಡೆದರೆ ಉಳಿದ ೯೯ ಜಾತಿಗಳಿಗೆ ಅನ್ಯಾಯವಾಗುತ್ತದೆ ಎಂದು ಮೇಲ್ವರ್ಗ ಮತ್ತು ಇತರ ಜಾತಿ, ಧರ್ಮಗಳು ಜಾತಿಯ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಹಾಗಾಗಿ ಪರಿಶಿಷ್ಟ ಜಾತಿಗಳಲ್ಲಿರುವ ೧೦೧ ಜಾತಿಗಳಲ್ಲಿ ಹೊಲೆಯ-ಮಾದಿಗರನ್ನು ಬಿಟ್ಟು ಉಳಿದ ೯೯ ಜಾತಿಗಳು ಇಲ್ಲಿಯ ವರೆಗೂ ಅನ್ಯಾಯ ಮಾಡುತ್ತ ಬಂದಿದ್ದಾರೆ. ಅದು ಅವರಿಗೆ ತಪ್ಪು ಅನಿಸುವುದಿಲ್ಲವೆ. ಇನ್ನೊಬ್ಬರಿಗೆ ಬೇಡವೆಂದು ಪ್ರತಿಭಟನೆ ಮಾಡುತ್ತಾರೆ ಎಂದರೆ ಅವರಲ್ಲಿ ಮೀಸಲಾತಿ ರುಚಿ ಎಷ್ಟೊಂದು ಬದಲಾವಣೆ ತಂದಿದೆ ಎಂದು ಬೇರೆನು ಹೇಳಬೇಕಾಗಿಲ್ಲ. ಇಂತವರು ಅನ್ಯಾದ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾರೆ. ಈ ವಿಚಾರವನ್ನು ಹೊಲೆಯ ಮತ್ತು ಮಾದಿಗರು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯತೆ ಇದೆ. ಇಲ್ಲಿಯವರೆಗೂ ಎಲ್ಲಾ ಮೇಲ್ವರ್ಗಗಳ ವಿರೋಧಬಾಸಗಳನ್ನು ಹೆದುರಿಸಿ ಮೀಸಲಾತಿಯನ್ನು ಉಳಿಸಿಕೊಂಡು ಬರಲಾಗಿದೆ. ಇಂತಹ ಜಾತಿಗಳ ಬಗ್ಗೆ ಬಹಳ ಜಾಗ್ರುಕತೆಯಿಂದ ಹೆಜ್ಜೆ ಇಡಬೇಕಾದ ಅಗತ್ಯತೆ ಇದೆ. ೧೯೭೮ರಲ್ಲಿ ಸ್ಪರ್ಶ ಜಾತಿಯವರಿಗೆ ಮೀಸಲಾತಿ ನೀಡಬಾರದು ಎಂದು ಹೊಲೆಯ ಮಾದಿಗರು ಆ ದಿನಮಾನಗಳಲ್ಲಿ ಪ್ರತಿಭಟನೆ ಮಾಡಿದ್ದರೆ ಇವರು ಮೀಸಲಾತಿ ವ್ಯಾಪ್ತಿಗೆ ಬರುತ್ತಿರಲಿಲ್ಲ. ಏನೇ ಆದರೂ ಮೀಸಲಾತಿ ಸಂವಿಧಾನವಾದ ಹಕ್ಕು ಅದನ್ನು ಯಾರು ಬೇಕಾದರು ಕೇಳಬಹುದು ಅಥವಾ ಯಾರು ಬೇಕಾದರೂ ಪಡೆಯಬಹುದು. ಆದರೆ ಅವರಿಗೆ ಅದನ್ನು ಕೊಡಬಾರದು ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ಇದು ಒಳ ಮೀಸಲಾತಿಯನ್ನು ವಿರೋಧಿಸುವವರ ಅಧಿಕ ಪ್ರಸಂಗ ಎನಿಸುತ್ತದೆ. ಇಂತಹ ಮನಸ್ಸುಗಳಿಗೆ ಉತ್ತರ ನಿಜವಾಗಲು ನೊಂದವರಿಗೆ ನ್ಯಾಯಸಿಗಬೇಕಾದರೆ ಒಳಮೀಸಲಾತಿ ಅವಶ್ಯಕವೆನಿಸುತ್ತದೆ. ಅದರ ಪ್ರಕಾರ ಮೀಸಲಾತಿಗೆ ಮತ್ತು ಮೀಸಲಾತಿ ವ್ಯಾಪ್ತಿಗೆ ಯಾವುದೇ ಜಾತಿ ಬರಲಿ ಇತರ ಜಾತಿ ಧರ್ಮದವರಿಗೆ ಮೀಸಲಾತಿ ಇರಲಿ. ಆದರೆ ಯಾವ ಮೀಸಲಾತಿಯಲ್ಲಿ ಬರುತ್ತಾರೋ ಆ ಗುಂಪಿನೊಳಗೆ ಅಂತರಜಾತಿ ವಿವಾಹ ಸಂಬಂಧಗಳು ಬೆಳಸಲಿಕ್ಕೆ ಯಾವ ಜಾತಿಗಳು ಇಷ್ಟ ಪಡುತ್ತವೆಯೋ ಅಂತಹ ಜಾತಿಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸಬಹುದು. ಉದಾ: ಪರಿಶಿಷ್ಟ ಜಾತಿಯಲ್ಲಿ ೧೦೧ ಜಾತಿಗಳಿವೆ. ಈ ಜಾತಿಗಳು ಪರಸ್ಪರ ಗಂಡು-ಹೆಣ್ಣು ಕೊಡುಕೊಳ್ಳುವಿಕೆಗೆ ಯಾವ ಜಾತಿ ಒಪ್ಪುತ್ತದೆಯೋ ಅಂತಹ ಜಾತಿಯನ್ನು ಮೀಸಲಾತಿ ಪಟ್ಟಿಯಲ್ಲಿ ಉಳಿಸಬೇಕು. ಏಕೆಂದರೆ ಇವರೆಲ್ಲರು ಪರಿಶಿಷ್ಟ ಜಾತಿಯವರು ಅಲ್ಲವೆ? ಆಗ ಪರಿಶಿಷ್ಟರು ಎಲ್ಲಾರು ಒಂದೆ ಎಂಬ ಭಾವನೆ ಬರುತ್ತದೆ. ಒಂದೇ ಸಮುದಾಯ ಎಂದು ಒಗಟ್ಟು ಸಾಧ್ಯವಾಗುತ್ತದೆ. ಮೀಸಲಾತಿ ಪಟ್ಟಿಯಲ್ಲಿದ್ದರು ವೈವಾಹಿಕ ಸಂಬಂಧಕ್ಕೆ ಒಪ್ಪದ ಜಾತಿ, ಸಮುದಾಯಗಳನ್ನು ಮೀಸಲಾತಿ ಪಟ್ಟಿಯಿಂದ ತೆಗೆದುಹಾಕಬೇಕು, ಹೀಗಾದರೆ ಎಲ್ಲಾ ಜಾತಿಗಳು ಸಮಾನ ಮನಸ್ಕರು ಒಂದು ತೀರ್ಮಾನಕ್ಕೆ ಬರುತ್ತಾರೆ. ಆಗ ನಿಜವಾದ ಅಸ್ಪೃಶ್ಯರು ಮೀಸಲಾತಿಯ ಲಾಭಪಡೆಯಲು ಸಾಧ್ಯವಾಗುತ್ತದೆ. ನನಗೆಬೇಕು, ನಮ್ಮವ್ವನಿಗೆಬೇಕು, ನಮ್ಮಪ್ಪನಿಗೆ ಬೇಕು, ಸತ್ತ ನಮ್ಮ ಅಜ್ಜಿಗೂ ಬೇಕು ಅಂತಾರೇ ಹಾಗಿದೆ ಒಳಮೀಸಲಾತಿಯನ್ನು ವಿರೋಧಿಸುವವರ ಕಥೆ. ಇದನ್ನೆ ಇನ್ನೊಂದು ರೀತಿಯಲ್ಲಿ

ಹೇಳುವುದಾದರೆ ಕರ್ನಾಟಕದಲ್ಲಿ ೧೨ನೇ ಶತಮಾನದ ಬಸವಣ್ಣನನ್ನು ಬ್ರಾಹ್ಮಣನೆಂದಾಗ ಯಾರು ತಲೆಕೆಡಿಸಿಕೊಳ್ಳಲಿಲ್ಲ, ನಂತರ ಬಸವಣ್ಣ ಲಿಂಗಾಯತ ಜಾತಿಗೆ ಸೇರಿದವನು ಎಂದಾಗಲೂ ಯಾರು ತಲೆಕೆಡಿಸಿಕೊಳ್ಳಲಿಲ್ಲ. ಬಸವಣ್ಣ ಮಾದಿಗ ಜಾತಿಗೆ ಸೇರಿದವನು ಎಂದಾಗ ಎಲ್ಲರು ಬಾಯಿ, ಬಾಯಿ ಬಡಿದುಕೊಂಡರು, ಹಾಗಿದೆ ಈ ಒಳಮೀಸಲಾತಿ ವಿರೋಧಿಸುವವರ ಕತೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹೈದಾರಬಾದ್ ಕರ್ನಾಟಕದಲ್ಲಿ ಅತೀ ಹೆಚ್ಚು ಜನಸಂಖ್ಯೆ ಇದೆ. ಇದರಲ್ಲಿ ಬಹುತೇಕವಾಗಿ ಮೂರು-ಮುಕ್ಕಾಲು ಭಾಗದಷ್ಟು ಜನಸಂಖ್ಯೆ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಐತಿಹಾಸಿಕ ಕಾರಣಗಳಿರುವುದು ಸಹ ಅಲ್ಲೆಗೆಳೆಯುವಂತಿಲ್ಲ ಏಕೆಂದರೆ ಬಹುತೇಕವಾಗಿ ಈ ಭಾಗವು ಅರಸೊತ್ತಿಗೆ ಕಾಲದಲ್ಲಿ, ನಿಜಾಮಕಾಲದಲ್ಲಿ, ಬ್ರಿಟೀಶ ಕಾಲದಲ್ಲಿ ಹಾಗೂ ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ರಾಜಕಾರಣದ ನಿರಾಸಕ್ತಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬ ಅಪವಾದವು ಇದೆ. ಹೀಗಾಗಿ ಪ್ರದೇಶದ ಜೊತೆಗೆ ಈ ಭಾಗದ ಜನಸಂಖ್ಯೆಯು ಸಹ ಹಿಂದುಳಿದಿರುವದಕ್ಕೆ ಕಾರಣ.

ಹೈದಾರಬಾದ್ ಕರ್ನಾಟಕದಲ್ಲಿ ಅತೀ ಹೆಚ್ಚು ಮೀಸಲಾತಿ ಕ್ಷೇತ್ರಗಳಿವೆ. ಈ ಮೀಸಲಾತಿ ಕ್ಷೇತ್ರಗಳು ಜನಸಂಖ್ಯೆ ಆಧಾರದಲ್ಲಿ ಬಂದಿರುವುದು ನಮಗೆಲ್ಲ ತಿಳಿದಿರುವ ಸಂಗತಿ. ಇಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಹೆಚ್ಚು ಇರುವುದರಿಂದ ಅವುಗಳನ್ನು ಪರಿಶಿಷ್ಟ ಜಾತಿಯ ಮೀಸಲಾತಿ ಕ್ಷೇತ್ರಗಳೆಂದು ಘೋಷಿಸಲಾಗಿದೆ. ಈ ಮೀಸಲಾತಿ ಕ್ಷೇತ್ರದಲ್ಲಿ ಬರುವ ಜನರು ಎಲ್ಲಾ ದೃಷ್ಟಿಯಲ್ಲಿ ಬದಲಾವಣೆ ಆಗಬೇಕಾಗಿತ್ತು. ಆದರೆ ವಾಸ್ತವದಲ್ಲಿ ಹಾಗೇ ಆಗಲಿಲ್ಲ. ಈ ಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಭೂಮಿ, ಉದ್ಯೋಗ, ವಸತಿ, ಆರೋಗ್ಯ, ಆಹಾರ ಈ ವಿಚಾರಕ್ಕೆ ಸಂಬಂಧಿಸಿದಂತೆ ಸಂಕಟಪ್ಪವನು ಎದುರಿಸಿದ್ದಾರೆ. ಎಂಬುದನ್ನು ಹೀಗಾಗಲೆ ಅನೇಕ ಅಧ್ಯಯನಗಳು ಸಾಧರಪಡಿಸಿವೆ. ಈ ಅಧ್ಯಯನದ ಕೊನೆಯಲ್ಲಿ ಬಂದ ಮುಖ್ಯ ಅಂಶಗಳೆಂದರೆ ಪರಿಶಿಷ್ಟರಿಗೆ ಯಾವುದೇ ಆರ್ಥಿಕ ಭದ್ರತೆಯಾಗಲಿ, ಸಾಮಾಜಿಕ ಭದ್ರತೆಯಾಗಲಿ ಇಲ್ಲ. ಇದರ ಜೊತೆಗೆ ಸರ್ಕಾರದ ಯೋಜನೆಗಳು ಸಹ. ಸಮರ್ಪಕವಾಗಿ ತಲುಪಿಲ್ಲ ಎಂದು ಅಧ್ಯಯನದಲ್ಲಿ ಕಂಡುಬಂದಿದೆ. ಮುಖ್ಯವಾಗಿ ಈ ಭಾಗದ ಪರಿಶಿಷ್ಟರು ನಿಜಾಮನ ಮತ್ತು ಭೂಮಾಲೀಕನ ಕೈಯಲ್ಲಿ ನಲುಗಿ ಹೋಗಿದ್ದಾರೆ. ಹಾಗಾಗಿ ಕೆಲವೊಂದು ಬಾರಿ ಕಂಡಂತೆ, ಕಾಣದಂತೆ ಸಂಕಷ್ಟ ಎದುರಿಸಿದ್ದಾರೆ. ಮುಖ್ಯವಾಗಿ ಮೇಲ್ವರ್ಗದವರ ಅವಲಂಬನೆ ಮತ್ತು ವಲಸೆ. ಇದು ಅವರ ಮುಂದಿರುವ ದಾರಿ. ಹೀಗಾಗಿ ಅವರ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಮತ್ತು ಉತ್ತಮ ಜೀವನಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಕುಟುಂಬಕ್ಕೆ ಐದು ಎಕರೆ ನೀರಾವರಿ ಭೂಮಿ ನೀಡಬೇಕು. ಇಲ್ಲದಿದ್ದರೆ ಪ್ರತಿಯೊಂದು ಕುಟುಂಬಕ್ಕೆ ಒಂದು ಸರ್ಕಾರಿ ಉದ್ಯೋಗವನ್ನು ನೀಡಿದರೆ ಅವರು ಸಹ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವ ವಾತಾವರಣವನ್ನು ಸೃಷ್ಟಿಸಬೇಕು. ಉದಾಹರಣೆಗೆ ೧೯೭೧ರ ಭಾರತ ಮತ್ತು ಪಾಕಿಸ್ತಾನದ ಯುದ್ಧದ ಸಂದರ್ಭದಲ್ಲಿ

ನಿರಾಶ್ರಿತರಾಗಿ ಬಂದ ಭಾಂಗ್ಲದೇಶದ ಜನರಿಗೆ ಭಾರತ ಸರ್ಕಾರವು ಸಿಂಧನೂರು ತಾಲೂಕಿನ ಜವಳಗೇರಿ ಹೋಬಳಿಯಲ್ಲಿ ಸುಮಾರು ೧೦ಸಾವಿರ ಎಕರೆ ಜಮೀನು ಖರೀಧಿಸಿ ಪ್ರತಿಯೊಂದು ಕುಟುಂಬಕ್ಕೆ ೫ಎಕರೆ ಜಮೀನನ್ನು ನೀಡಲಾಗಿದೆ. ಸುಮಾರು ೫ಕ್ಯಾಂಪ್‌ಗಳಿದ್ದು ೨೫ಸಾವಿರ ಜನಸಂಖ್ಯೆಯಿಂದ ಕೂಡಿದೆ. ಈ ಜನಸಂಖ್ಯೆ ಆರ್ಥಿಕವಾಗಿ ಸದೃಢವಾಗಿದ್ದು, ಆಡಳಿತ ಮತ್ತು ಚುನವಾಣಿಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದ್ದಾರೆ. ಇದೇ ಮಾದರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಯೋಜನೆಗಳನ್ನು ರೂಪಿಸಿದರೆ ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಬಹುದು.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೈದಾರಬಾದ್ ಕರ್ನಾಟಕದಲ್ಲಿ ಹಿಂದುಳಿದಿರುವಿಕೆಗೆ ಹಲವಾರು ವ್ಯಾಖ್ಯನಗಳಿವೆ. ಎಲ್ಲಾ ದೃಷ್ಟಿಯಿಂದ ೨೦೦೦ದಲ್ಲಿ ನೇಮಕವಾದ ಡಾ. ಎಂ. ನಂಜುಂಡಪ್ಪ ವರದಿ ೩೫ ಇಂಡಿಕೇಟರ್‌ಗಳ ಮೂಲಕ ಸಮಸ್ಯೆಗಳನ್ನು ಗುರುಸಿತು. ಅದರಲ್ಲಿ ಹೈದಾರಬಾದ್ ಕರ್ನಾಟಕವು ಶಿಕ್ಷಣ ಮತ್ತು ಉದ್ಯೋಗ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅದರಲ್ಲಿ ರಾಯಚೂರು ಜಿಲ್ಲೆಯಲ್ಲಿ ಆಯ್.ಆಯ್.ಟಿ ಸ್ಥಾಪನೆ, ಮೆಡಿಕಲ್ ಕಾಲೇಜು ಸ್ಥಾಪನೆ, ಕೈಗಾರಿಕೆಗಳ ಸ್ಥಾಪನೆ ಮತ್ತು ಸಾರಿಗೆ ಮತ್ತು ಸಂಪರ್ಕದ ಸೌಲಭ್ಯಕ್ಕೆ ಶಿಪಾರಸ್ಸು ಮಾಡಿತು. ಜೊತೆಗೆ ಈ ಭಾಗದ ಜನರ ಅಭಿವೃದ್ಧಿಗಾಗಿ ೩೭೧ನ್ನು ಜಾರಿಗೊಳಿಸಬೇಕೆಂದು ಶಿಫಾರಸ್ಸು ಮಾಡಿತು. ವಾಸ್ತವಿಕತೆಯಲ್ಲಿ ಇವೆಲ್ಲವು ಜಾರಿಗೆ ಬಂದವು. ಆದರೆ ಇದರಿಂದ ಜನರ ಜೀವನ ಬದಲಾಗಲಿಲ್ಲ. ಏಕೆಂದರೆ ಈ ಭಾಗದ ಜನರ ಮೂಲ ಸಮಸ್ಯೆಗಳಾದ ಉದ್ಯೋಗ, ಅನ್ನ, ಅರಿವೆ, ಆಸರೆ ಅಭಿವೃದ್ಧಿಯನ್ನ ಜನರ ನೆಲೆಯಲ್ಲಿ ಪರಿಭಾವಿಸಿಕೊಳ್ಳಬೇಕೆ ಹೊರತು ಉಧ್ಯಮದ ರೀತಿಯಲ್ಲಿ ಅಲ್ಲ. ಉದಾಹರಣೆಗೆ ರಾಯಚೂರುನಲ್ಲಿ ಆಯ್.ಆಯ್.ಟಿ ಸ್ಥಾಪನೆಯಾದರೆ ರಾಯಚೂರಿನ ಜನತೆಗೆ(ವಿಧ್ಯಾರ್ಥಿಗಳಿಗೆ) ಸ್ಥಾನಗಳು ಲಭ್ಯವಾಗುವುದಿಲ್ಲ. ಏಕೆಂದರೆ ಅದು ರಾಷ್ಟ್ರೀಯ ಮಟ್ಟದ ಸಂಸ್ಥೆ. ಒಂದು ರಾಜ್ಯ ಮತ್ತು ಜಿಲ್ಲೆಗೆ ಸಂಬಂಧಪಟ್ಟದ್ದು ಅಲ್ಲ. ಇಡೀ ದೇಶದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಉದಾಹರಣೆಗೆ: (ಕರ್ನಾಟಕದ ಧಾರವಾಡದಲ್ಲಿ ಇತ್ತೀಚೆಗೆ ಸ್ಥಾಪನೆಯಾದ ಆಯ್.ಆಯ್.ಟಿ ಯಲ್ಲಿ ಕೇವಲ ೬ ಜನರಿಗೆ ಮಾತ್ರ ಸ್ಥಾನಗಳ ಲಭ್ಯವಾಗಿವೆ.) ಅದೇ ರೀತಿಯಾಗಿ ಮೆಡಿಕಲ್ ಕಾಲೇಜು ಸ್ಥಾಪನೆ ಆದರೆ ಕೇವಲ ಇದೇ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಿಗುತ್ತವೆ ಎಂದು ಹೇಳಲು ಬರುವುದಿಲ್ಲ. ಇಲ್ಲಿಯು ಸಹ ರಾಷ್ಟ್ರ ಮತ್ತು ರಾಜ್ಯಮಟ್ಟದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಹೀಗಾದರೆ ಇಲ್ಲಿನ ಶೈಕ್ಷಣಿಕ ವ್ಯವಸ್ಥೆ ಪರಿಹರಿಸಿದಂತೆ ಆಗುತ್ತದಯೇ. ಹೀಗಾಗಲೇ ನೀಟ್‌ನಲ್ಲಿ ಮೀಸಲಾತಿ ತೆಗೆಯಲಾಗಿದೆ. ಇದರ ಜೊತೆಗೆ ಸಾರಿಗೆ ಮತ್ತು ಸಂಪರ್ಕಗಳಲ್ಲಿ ಬಾರೀ ಬದಲಾವಣೆಯಾದರೆ ಸಾರಿಗೆ ಮತ್ತು ಸಂಪರ್ಕಗಳು ಎಷ್ಟು ಜನರಿಗೆ ಉದ್ಯೋಗ ಸಿಗುತ್ತದೆ. ಎಂಬುದನ್ನು ಗಮನಿಸಿದರೆ ಇವು ಯಾವವು ಈ ಭಾಗದ ದಲಿತರ ಬದುಕಿನಲ್ಲಿ ಯಾವುದೇ ಬದಲಾವಣೆ ತಂದಿಲ್ಲ ಮತ್ತು ತರುವುದಿಲ್ಲ. ಈ ಭಾಗದ ಜನರಲ್ಲಿ ಬದಲಾವಣೆಯಾಗ ಬೇಕಾದರೆ ಅವರ ಮೂಲ ಸಮಸ್ಯೆಗಳನ್ನು ಅರಿತು ಕಾರ್ಯಕ್ರಮಗಳನ್ನು ರೂಪಿಸಬೇಕೆ ಹೊರೆತು ಕಾರ್ಯಕ್ರಮಗಳನ್ನು ರೂಪಿಸಿ ಬದಲಾವಣೆಗೆ ಪ್ರಯತ್ನಿಸಬಾರದು.

ಇನ್ನೂ ಈ ಭಾಗದ ಜನರಿಗೆ ೩೭೧(ಜೆ) ಬಗ್ಗೆ ಆಗಾದವಾದ ನಂಬಿಕೆ ಮತ್ತು ಬದುಕು ಬದಲಾವಣೆಯಾಗುತ್ತದೆ. ಎಂಬ ಭ್ರಮೆಯಲ್ಲಿದ್ದಾರೆ. ಇದರಿಂದಲೂ ಸಹ ಸೂಕ್ತ ಬದಲಾವಣೆಯಾಗುತ್ತದೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಈಗಾಗಲೇ ನಿಜಾಮ ಸಂಸ್ಥಾನಕ್ಕೊಳಪಟ್ಟ ಮಾಹರಾಷ್ಟ್ರದ ವಿದರ್ಭ, ಮತ್ತು ಆಂಧ್ರಪ್ರದೇಶದ ತೆಲಾಂಗಾಣ ೩೭೧ರಿಂದ ಬದಲಾವಣೆಯಾಗದೆ ಪ್ರತ್ಯೇಕ ರಾಜ್ಯಕ್ಕಾಗಿ ಅಗ್ರಹಿಸಿ ಆ ನಿಟ್ಟಿನಲ್ಲಿ ಯಶಸ್ವಿಯು ಆಗಿದೆ. ಹೀಗಾಗಿ ೩೭೧(ಜೆ) ಈ ಭಾಗದ ಜನರಿಗೆ ಎಷ್ಟರಮಟ್ಟಿಗೆ ನ್ಯಾಯ ಒದಗಿಸುತ್ತದೆ. ಎಂಬುದು ಸಹ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಅದಕ್ಕೆ ಕಾರಣ ಅದು ತನ್ನಲ್ಲಿಯೇ ಕೆಲವು ದೌರ್ಬಲ್ಯಗಳನ್ನು ಹುದುಗಿಸಿ ಕೊಂಡಿದೆ. ಇದರ ಮಾನದಂಡಗಳು ಎಂದರೆ ಇದರ ಸೌಲಭ್ಯ ಪಡೆಯಲು ಹತ್ತು ವರ್ಷ ಇದೇ ಪ್ರದೇಶ ವಾಸವಾಗಿರಬೇಕು, ಹತ್ತು ವರ್ಷ ಇದೇ ಭಾಗದಲ್ಲಿ ಶಿಕ್ಷಣ ಪೂರೈಸಿರಬೇಕು, ಸ್ಥಳೀಯ ಮೂಲ ನಿವಾಸಿ ದಾಖಲೆಗಳನ್ನು ಹೊಂದಿರ ಬೇಕು ಎಂಬ ನಿಬಂಧನೆಗಳಿವೆ. ಇದರಲ್ಲಿ ೧. ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ, ರಾಜಸ್ಥಾನ ಮುಂತಾದ ಪ್ರದೇಶದಿಂದ ವಲಸೆ ಬಂದವರು, ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ವಲಸೆ ಬಂದವರು ಇಲ್ಲಿನ ಮೂಲ ನಿವಾಸಿಗಳು ಹೇಗೆ ಆಗುತ್ತಾರೆ. ಇದರ ಜೊತೆಗೆ ೩೭೧(ಜೆ) ಸೌಲಭ್ಯ ಪಡೆಯುವುದಕ್ಕಾಗಿ ವಿವಾಹವಾಗುವುದು, ಸುಳ್ಳು ದಾಖಲಾತಿಯನ್ನು ಸೃಷ್ಟಿಸುವುದು, ಮೂಲ ನಿವಾಸಿಗಳನ್ನು ಪರಕೀಯರಾಗಿ ದೇಶಾಂತರವಾಗಿ ವಲಸೆ ಹೋಗುವ ಇಲ್ಲಿನ ಜನರಿಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂಬುದನ್ನು ಊಹಿಸಬಹುದು. ಇದರಿಂದ ದಲಿತರ ಬದುಕು ಬದಲಾವಣೆ ಸಾಧ್ಯವಿದೆನಾ? ಎಂಬ ಅನುಮಾನ ಸಹ ಕಾಡದೇ ಇರದು. ಹಾಗಾಗಿ ಇವುಗಳನ್ನು ದಲಿತರ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ಅನುಬಂಧಗಳು

* ಪರಾಮರ್ಶನ ಗ್ರಂಥಗಳು
* ಸಂಶೋಧನಾ ಮಹಾಪ್ರಬಂಧಗಳು
* ವರದಿಗಳು
* ಲೇಖನಗಳು

ಪರಾಮರ್ಶನ ಗ್ರಂಥಗಳು

ಆನಂದ್ ತೆಲ್ ತುಂಬ್ಡೆ (ಸಂ), ೨೦೧೬, ಗಂಗಾಧರ ಮೂರ್ತಿ(ಅನು), ಹಿಂದುತ್ವ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ

ಕರ್ನಾಟಕ ಸರ್ಕಾರ, ೨೦೦೬, ಕರ್ನಾಟಕ ಮಾನವ ಅಭಿವೃದ್ಧಿ ವರದಿ-೨೦೦೫. ಕರ್ನಾಟಕ ಮುದ್ರಣಾಲಯ ಬೆಂಗಳೂರು.

ಕೃಷ್ಣಮೂರ್ತಿ ಚಮರಂ, (ಸಂ), ರಾಮು ಬಿ. (ಲೇ), ೨೦೦೩, ಮೀಸಲಾತಿ ಚಳವಳಿ ಇತಿಹಾಸ ಮತ್ತು ಭವಿಷ್ಯ, ಜಸ್ಟೀಸ್ ಪ್ರಕಾಶನ, ಮೈಸೂರು.

ಗೆಲ್ ಆಮ್‌ವೆಲ್ಡ್ (ಮೂಲ), ಮೂಡ್ನಾಕೂಡು ಚಿನ್ನಸ್ವಾಮಿ (ಅನು), ೨೦೧೪, ದಲಿತ ದರ್ಶನ, ಸುಮೇಧ ಪ್ರಕಾಶನ, ಕಲಬುರ್ಗಿ.

ಗೌತಮ್ ಎಸ್ ಆರ್, ೨೦೦೦, ಭೂ ಮಂಜುರಾತಿ ಮತ್ತು ಹಕ್ಕು ಬದಲಾವಣೆ, ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು.

ಚಂದ್ರಶೇಖರ ಟಿ.ಆರ್, ೧೯೯೩, ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೧೯೯೪, ಬಳ್ಳಾರಿ ಜಿಲ್ಲೆಯ ನಿಸರ್ಗ ಮತ್ತು ಸಂಪತ್ತು, ಸಿದ್ದವೀರ ಶಿವಚಾರ್ಯ ಜ್ಞಾನ ಪ್ರಕಾಸನ, ಪುರ.

ಚಂದ್ರಶೇಖರ ಟಿ.ಆರ್, ೧೯೯೪, ಕನಾಟಕದಲ್ಲಿ ಸಾಮಾಜಿಕ ವೈಫಲ್ಯ ಸಾಪ್ತಾಹಿಕ ಪುರಾವಣಿ, ಪ್ರಜಾವಣಿ, ನವೆಂಬರ್ ೧.

ಚಂದ್ರಶೇಖರ ಟಿ.ಆರ್, (ಸಂಯೋಜಕರು) ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ, ಕೊಪ್ಪಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, (ಸಂಯೋಜಕರು), ೧೯೯೯, ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೧೯೯೯, ಅಮರ್ತ್ಯಸೇನ್ ಅಬಿವೃದ್ಧಿ ಅಧ್ಯಯನಗಳು, ಕ್ರೈಸ್ಟ್ ಕಾಲೇಜು, ಬೆಂಗಳುರು.

ಚಂದ್ರಶೇಖರ ಟಿ.ಆರ್, ೧೯೯೯, ಕನಾಟಕದ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ ಪಬ್ಲಿಕೇಶನ್ಸ್ ಬೆಂಗಳೂರು.

ಚಂದ್ರಶೇಖರ ಟಿ.ಆರ್, ೨೦೦೩, ಆಹಾರ ಮತ್ತು ಸ್ವಾತಂತ್ರ್ಯ, ಅಭಿವೃದ್ಧಿ ಅಧ್ಯಯನ, ಸಂಪುಟ-೩, ಸಂಚಿಕೆ-೧, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೨೦೦೫, ಜನರ ಯೋಜನೆ ಕನಾಟಕದ ಅನುಭವಗಳು, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೨೦೦೬, ಅಸ್ಪೃಶ್ಯತೆ ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಅಧ್ಯಯನ, ಸಂಪುಟ-೫ ಸಂಚಿಕೆ-೧, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೨೦೦೭, ಕರ್ನಾಟಕ ಅಭಿವೃದ್ಧಿ ಆಕೃತಿ, ಪಲ್ಲವ ಪ್ರಕಾಶನ, ಬಳ್ಳಾರಿ

ಚಂದ್ರಶೇಖರ ಟಿ.ಆರ್, ೨೦೦೯, ಜನರನ್ನು ಒಳಗೊಳ್ಳುವ ಅಭಿವೃದ್ಧಿ ಹೈದರಾಬಾದ್ ಕರ್ನಾಟಕ ಪ್ರದೇಶ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೨೦೧೦, ಲಿಂಗ ಸಂಬಂಧಗಳು ಮತ್ತಯ ಅಭೀವೃದ್ಧಿ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್, ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಎಸ್, ಸುರೇಂದ್ರರಾವ್(ಸಂ), ಹಂ.ಗು.ರಾಜೇಶ್ (ಸಂ.ಸ), ೨೦೧೬, ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ಚನ್ನಣ್ಣ ವಾಲಿಕಾರ, ೧೯೯೪, ಹೈದ್ರಬಾದ್ ಕರ್ನಾಟಕ ಪ್ರದೇಶದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ.

ಚಿನ್ನಸ್ವಾಮಿ ಸೋಸಲೆ ಎನ್, ೨೦೧೨, ದಲಿತರ ಬದುಕು ಮತ್ತು ಮೆಲುಕು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿನ್ನಸ್ವಾಮಿ ಸೋಸಲೆ ಎನ್, ೨೦೧೩, ದಲಿತರ ಮೆಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ, ಹೊಸಪೇಟೆ.

ಚಿನ್ನಸ್ವಾಮಿ ಸೋಸಲೆ ಎನ್, ೨೦೧೬ ಕರ್ನಾಟಕ ಸಮಗ್ರ ದಲಿತ ಚರಿತ್ರೆ, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು

ಜಯದೇವ್ ಬಿ.ಎಸ್, ೨೦೧೫, ಜಾಗತೀಕರಣ ಶಿಕ್ಷಣ ಮತ್ತು ಸಮಾಜ, ಅಭಿರುಚಿ ಪ್ರಕಾಶನ, ಮೈಸೂರು.

ಜಾಫೆಟ್ ಎಸ್, ಕೆ ಎಲ್ ಚಂದ್ರಶೇಖರ ಐಜೂರು, ೨೦೧೧, ಸಂವಿಧಾನ೬೦ ಸಾಮಾಜಿಕ ನ್ಯಾಯ ಮತ್ತು ಕರ್ನಾಟಕದ ಸಾಮಾಜಿಕ ಮತ್ತು ಪ್ರತ್ಯೇಕತೆ ನೀತಿಯ ಅಧ್ಯಯನ ಕೇಂದ್ರ ಭಾರತ ರಾಷ್ಟೀಯ ಕಾನೂನು ಶಾಲೆ ಬೆಂಗಳೂರು.

ತಿಮ್ಮಯ್ಯ ಜೆ, ೧೯೯೪, ಹೈದ್ರಬಾದ್ ಕರ್ನಾಟಕ ಆರ್ಥಿಕ ಪ್ರಗತಿ ಸಮಸ್ಯೆಗಳು ಮತ್ತು ಸಾಧ್ಯತೆಗಳು, ಯೋಜನಾ ಸಂಪುಟ-೧೦, ಸಂಚಿಕೆ-೧೪, ಬೆಂಗಳೂರು.

ದಾಸನೂರು ಕೂಸಣ್ಣ, ೨೦೦೫, ರೈತರ ಆತ್ಮಹತ್ಯೆ ಮತ್ತು ದಲಿತರ ನವಬ್ರಾಹ್ಮಣಿಕೆ?, ಮಾತಂಗ ಪ್ರಕಾಶನ, ಮೈಸೂರು.

ದೇವರಾಜ ಪಿ, ೨೦೦೫, ಹಿಂದುಳಿದ ಜಾತಿಗಳು ಮತ್ತು ಸಂವಿಧಾನ, ಜಸ್ಟಿಸ್ ಪಬ್ಲೀಕೇಶನ್, ಮೈಸೂರು.

ಪ್ರಶಾಂತ್ ಎಚ್.ಡಿ, ೨೦೦೫, ಈಶಾನ್ಯ ಕರ್ನಾಡಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ್ ಎಚ್.ಡಿ, ೨೦೦೯, ಶಾಲಾ ಶಿಕ್ಷಣದ ಸಾರ್ವತ್ರೀಕರಣ ದಲಿತ ಮಕ್ಕಳ ಸ್ಥಿತಿಗತಿ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

ಪ್ರಶಾಂತ್ ಎಚ್.ಡಿ, ೨೦೧೦, ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮನಿವೆಂಕಟಪ್ಪ ವಿ, ೨೦೦೯, ದಲಿತ ಚಳವಳಿ ಮತ್ತು ಸಾಹಿತ್ಯ, ತನುಮನು ಪ್ರಕಾಶನ, ಮೈಸೂರು.

ಮಮತಾಜ್ ಅಲಿಖಾನ್, ೨೦೧೧, ದಲಿತರು ಅಂದು ಮತ್ತು ಇಂದು, ಸಪ್ನ ಬುಕ್‌ಹೌಸ್ ಬೆಂಗಳೂರು.

ಮಹಾದೇವಯ್ಯ ಪಿ, ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಯ್ಯ ಪಿ, ೨೦೦೬, ದಲಿತರು ಭಾಷೆ ಮತ್ತು ಸಮಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾಬಲೇಶ್ವರಪ್ಪ ಬಿ.ಸಿ, ೧೯೯೭, ಹೈದರಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿ, ಪ್ರಸಾರಾಂಗ, ಗುಲಗಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ.

ಮೊಗಳ್ಳಿ ಗಣೇಶ್, ೨೦೧೫, ಜಾತಿಮೀಮಾಂಸೆ, ಅಭಿನವ ಪ್ರಕಾಶನ, ಬೆಂಗಳೂರು.

ಮೋಹನ್ ಕುಮಾರ, ೨೦೧೪, ಕರ್ನಾಟಕದ ಬುಡಕಟ್ಟಿಗಳು ಮತ್ತು ಅಭಿವೃದ್ಧಿ, ಗಾಯಿತ್ರಿ ಪ್ರಕಾಶನ, ಬಳ್ಳಾರಿ.

ಲಕ್ಷ್ಮಣ್ ತೆಲಗಾವಿ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶ. ಕೆ, ಅಂಬೇಡ್ಕರ್ ಒಂದು ಮರು ವ್ಯಾಖ್ಯಾನ, ಸಂಸ್ಕೃತಿ ಪ್ರಕಾಶನ, ಬಳ್ಳಾರಿ.

ಶಂಕರ್ ಜೋಗನ್, ೧೯೯೫, ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು.

ಶಿವಸುಂದರ ೨೦೧೧, ಚಾರ್ವಕ, ರಾಜಕೀಯ ಆರ್ಥಿಕ ಸಾಂಸ್ಕೃತಿಕ ಲೇಖನಗಳು, ಲಂಕೇಶ ಪ್ರಕಾಶನ, ಬೆಂಗಳೂರು.

ಶಿಕ್ಷಣದಲ್ಲಿ ಮೀಸಲಾತಿ, ೨೦೦೬, ಚಿಂತನ ಪ್ರಕಾಶನ, ಉತ್ತರಕನ್ನಡ.

ಶ್ರೀನಿವಾಸ ಮರಡ್ಡಿ (ಸಂ), ೨೦೧೪, ಒಳಮೀಸಲಾತಿ ಮುಟ್ಟಲಾರದವನ ಒಡಲಾಳ, ಲಡಾಯಿ ಪ್ರಕಾಶನ, ಗದಗ.

ಶ್ರೀನಿವಾಸ ಎಂ.ಎನ್, ೨೦೧೮, ಆಧುನಿಕ ಭಾರತದಲ್ಲಿ ಸಾಮಾಜಿಕ ಬದಲಾವಣೆ, ರಾಷ್ಟ್ರೀಯ ಅನುವಾದ ಮಿಷನ್ ಭಾರತೀಯ ಭಾಷೆಗಳ ಕೇಂದ್ರ ಮೈಸೂರು.

ಶೇಷಾದ್ರಿ ಬಿ ಮತ್ತು ಚಂದ್ರಶೇಖರ. ಟಿ.ಆರ್, ೧೯೯೮, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇಷಾದ್ರಿ ಬಿ ಮತ್ತು ಇತರರು, ೧೯೯೯, ಕುಟುಂಬ ಯೋಜನೆ ಮತ್ತು ಮಹಿಳೆ, ಮಹಿಳಾ ಅಧ್ಯಯನ, ಸಂಪುಟ-೧, ಸಂಚಿಕೆ-೨, ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿಂಹಾದ್ರಿ ಎಸ್. (ಮೂ) ಸುಜ್ಞಾನಮೂರ್ತಿ, ೨೦೧೮, ಜಾತಿಯ ನೆರಳಲ್ಲಿ ಅಭಿವೃದ್ದಿ ರಾಜಕೀಯ, ಲಡಾಯಿ ಪ್ರಕಾಶನ, ಗದಗ.

ಸಿದ್ದಲಿಂಗಯ್ಯ, ೨೦೦೭, ಜನಸಂಸ್ಕೃತಿ ವಸಂತ ಪ್ರಕಾಶನ, ಬೆಂಗಳೂರು.

ಸುಖದೇವ್ ತೋರಟ್, ಶ್ರೀಪಾಧ್ ಬಿ(ಅನು), ಜಾತಿ ಸಾಮಾಜಿಕ ಪ್ರತ್ಯೇಕತೆ ಮತ್ತು ಬಡತನ, ಲಡಾಯಿ ಪ್ರಕಾಶನ, ಗದಗ.

ಸುಮಾ ಬಿ.ಯು, ೨೦೧೫, ಸಮಾಜ ಸಂಸ್ಕೃತಿ ಚಿಂತನೆಗಳು ಸಂತೆಯೊಳಗೊಂದು ಮನೆ, ಲಡಾಯಿ ಪ್ರಕಾಶನ, ಗದಗ.

ಹರ್ಷಕುಮಾರ ಕುಣ್ವೆ, ೨೦೧೬, ದೇಶ ಅಂದರೆ ಮನುಷ್ಯ ಲಂಕೇಶ ಪ್ರಕಾಶನ, ಬೆಂಗಳೂರು.

ಆಸೋಮಕೋಟೋ ಆ್ಯಂಡ್ ಅಮನೋಕಿಟೋ ೧೯೭೨, ಏಜ್ಯುಕೇಷನ್ ಆ್ಯಂಡ್ ಜಪಾನ್ಸ್ ಮೊಡರ್ನೈಜೆಶನ್ ಮಿನಿಸ್ತ್ರಿ ಆಫ್ ಪಾರೆನ್ ಅಪೈರಿಸ್, ಜಪಾನ್.

ಭಾರ್ಗವ ಎ., ಆ್ಯಂಡ್ ಹೊಸ್ಮನಿ ಎಸ್.ಆರ್., ೧೯೯೬ ಹೆಲ್ಪ್ ಆ್ಯಂಡ್ ನ್ಯೂಟ್ರಿಷನ್ ಇನ್ ಎಮರ್ಜಿಂಗ್ ಏಷಿಯಾ ಬ್ಯಾಕ್‌ಗ್ರೌಂಡ್ ಪೇಪರ್ ಫಾರ್ ಎಮರ್ಜಿಂಗ್ ಎಕ್ಷಿಯಾ ಜೇಜ್ಸ್ ಆ್ಯಂಡ್ ಚಾರ್ಜಸ್ ಆ್ಯಂಡ್ ಡೆವಲಪಮೆಂಟ್ ಬ್ಯಾಂಕ್ ಮಾನಿಲಾ.

ಬುಲಾಟಾವ್ ಆರ್.ಎಸ್. ಆ್ಯಂಡ್ ಲೀ ಆರ್.ಡಿ., ೧೯೮೩, ಡಿಟಂಮಿನೆಂಟ್ಸ್ ಆಫ್ ಪರ್ಟಿಲಿಜಿ

ಇನ್ ಡೆವಲಪಿಂಗ್ ಕಂಟ್ರೀಸ್ ಅಕಾಡೆಮಿಕ್ ಪಬ್ಲಿಕೇಷನ್, ನ್ಯೂಯರ್ಕ್

ಕಾಲ್ಡವೆಲ್ ಸಿ ಜೌನ್‌ರೆಡ್ಡಿ ಪಿ.ಎಮ್., ಆ್ಯಂಡ್ ಕಾಲ್ಡವೆಲ್, ೧೯೮೮ ದ ಕಾಸ್‌ಸ್ ಆಫ್ ಡೆಮೊಗ್ರಾಫಿಕ್ ಚೆಂಜ್ ಎಕ್ಸ್‌ಪೇರಿಮೆಂಟಲ್ ರಿಸರ್ಚ್ ಇನ್ ಸೌಥ್ ಇಂಡಿಯಾ ಯುನಿರ್ವಸಿಟಿ ಆಫ್ ವಿಸ್ಕನ್‌ಸಿನ್ ಪ್ರೆಸ್ ಮ್ಯಾಡಿಸನ್.

ಕಂಟ್ರಿ ರಿಪೋರ್ಟ್ ೧೯೯೫, ಪೋರ್ತ ವರ್ಲ್ಡ್ ಕಾನ್ಫರೆನ್ಸ್ ಆನ್ ವುಮೇನ್ ಬೀಜಿಂಗ್ ಎಂ.ಎಚ್.ಆರ್.ಡಿ., ನ್ಯೂಡೆಲಿ.

ದಾದಿಭಾವಿ ಆರ್.ವಿ., ೧೯೮೩, ಇಂಟರ್ ಡಿಸ್ಟ್ರಿಕ್ಟ್ ವೇರಿಯೇಸೆನ್ಸ್ ಇನ್ ಇನ್‌ಕಮ್ ಪ್ರೋಡಕ್ಷನ್ ಇಂಡಸ್ಟ್ರಿಯಲ್ ಸ್ಟ್ರಕ್ಚರ್ ಇನ್ ಕರ್ನಾಟಕ ಸ್ಟೇಟ್ ಪಿಎಚ್.ಡಿ. ಥೀಸಸ್ ಎಂ.ಎಸ್. ಯುನಿರ್ವಸಿಟಿ, ಬರೋಡಾ.

ಡಾಕ್ ಟಿ.ಎಂ. (ಇಡಿ), ೧೯೯೧, ಹ್ಯೂಮನ್ ಡೆವಲ್ಪಮೆಂಟ್ ಆ್ಯನ್ ಇಂಡಿಯನ್ ಪರಸ್ಪೆಕ್ಟಿವ್ ವಿಕಾಸ್, ನ್ಯೂಡೆಲಿ.

ಫೆಡ್ರಿಕ್ ಹಾರ್ಬಿಸನ್ ಆ್ಯಂಡ್ ಚಾರ್ಲಸ್ ಆಮೇಯಾರಸ್, ೧೯೬೪, ಎಜುಕೇಷನ್ ಮ್ಯಾನ್‌ಪವರ್ ಆ್ಯಂಡ್ ಎಕಾನಾಮಿಕ್ ಗ್ರೌಥ್, ಸ್ಟ್ರಾಟಜಿಸ್ ಆಫ್ ಎಚ್.ಆರ್.ಡಿ. ಎಂ.ಸಿ. ಗ್ರಾವ್‌ಹಿಲ್, ನ್ಯೂಡೆಲಿ.

ಗವರ್ನಮೆಂಟ್ ಆಫ್ ಉತ್ತರ ಪ್ರದೇಶ, ೧೯೮೩, ರಿಜನಲ್ ಡೈಮೆನ್‌ಸೆನ್ಸ್ ಆಫ್ ಇಂಡಿಯನ್ ಎಕಾನಾಮಿಕ್ ಡೆವಲಪ್‌ಮೆಂಟ್ ಪ್ಲಾನಿಂಗ್ ಕಮಿಶನ್, ಲಕ್ನೋ.

ಡಿಸೋಜ ಎಸ್. ವಿಕ್ಟರ್, ೧೯೯೦, ಡೆವಲಪ್ ಪ್ಲಾನಿಂಗ್ ಆ್ಯಂಡ್ ಸ್ಟ್ರಕ್ಚರಲ್ ಇನ್ ಇಗಾಲಿಟಿಸ್ ಸೇಜ್ ಪಬ್ಲಿಕೇಷನ್, ನ್ಯೂಡೆಲಿ.

ಷಾಹ ಎ.ಎಂ., ಶ್ರೀನಿವಾಸ್ ಎಂ.ಎನ್., ೨೦೦೭, ದಿ ಗ್ರಾಸ್‌ರೂಟ್ಸ್ ಆಫ್ ಡೆಮಾಕ್ರಸಿ ಫೀಲ್ಡ್ ಸ್ಟಡೀಸ್ ಆಫ್ ಇಂಡಿಯನ್ ಎಲೆಕ್ಷನ್ಸ್ ಪರಮೆಂಟ್ ಬ್ಲಾಕ್ ಹಿಮಾಲಯನ್ ಮಾಲ್, ರಾಣಿಖೇರ್.

ಶಾಲಿನಿ ರಜನಿಸ್, ಛಾಯಾದೇಗಾಂಕರ್, ಸಂಗೀತಾ ಎನ್. ಕಟ್ಟಿಮನಿ, ೨೦೧೧, ಇನ್‌ಕ್ಲೂಸಿವ್ ಗ್ರೌಥ್ ೩೭೧(ಜೆ), ಫಾರ್ ಡೆವಲಪ್‌ಮೆಂಟ್ ಆಫ್ ಹೈದ್ರಾಬಾದ್-ಕರ್ನಾಟಕ ರೀಜನ್, ಪ್ರಸಾರಾಂಗ, ಗುಲಬರ್ಗಾ ಯುನಿರ್ವಸಿಟಿ, ಗುಲಬರ್ಗಾ.

ಶರ್ಮಾ ಎ.ಕೆ., ೨೦೦೬, ರೂರಲ್ ಪಾವರ್ಟಿ ಇನ್ ಇಂಡಿಯಾ ಸಬ್ ಲೈಮ್ ಪಬ್ಲಿಕೇಷನ್, ಜೈಪುರ.

ದೀಪಂಕರ ಗುಪ್ತಾ, ೨೦೦೦, ಇಂಟರಗೆಟಿಂಗ್ ಅಂಡರಸ್ಟ್ಯಾಂಡಿಂಗ್ ಹೈರಾರ್ಕಿ ಆ್ಯಂಡ್ ಡಿಫರೆನ್ಸ್ ಇನ್ ಇಂಡಿಯನ್ ಸೊಸೈಟಿ, ಪೆಂಗ್‌ವಿನ್ ಬುಕ್ ಇಂಡಿಯಾ.

೧. ಅಮರೇಶ ಹನುಮಂತ ೨೦೧೪ ರಾಯಚೂರು ದೋ ಅಬ್ ಪ್ರದೇಶ ಆಧಿಕಾರ ಮತ್ತು ಹೋರಾಟ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೨. ಕಿಚಡಿ ಚನ್ನಪ್ಪ, ೨೦೧೪, ಗ್ರಾಮ ಪಂಚಾಯಿತಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಕೆಂಪೇಗೌಡ ಪಿ, ೨೦೧೫, ಗ್ರಾಮೀಣ ಹಣಕಾಸು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೪. ಯಲ್ಲಪ್ಪ ತಾಯಪ್ಪ, ೨೦೧೬, ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೫. ಗೋವರ್ಧನ್ ಎಸ್ ಎ. ೨೦೧೬, ಪಂಚಾಯತ್ ಜಮಾಬಂದಿಯ ಸಾಮಾಜಿಕ ಆಯಾಮಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೬. ಸೋಮಶೇಖರ್ ಎಚ್, ೨೦೦೯, ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ಕೋಲಾರ ಜಿಲ್ಲೆಯ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೭. ಪುನ್ನೆಪ್ಪ ಎಸ್ ಮಾಳ್ಗೆ. ೨೦೦೨ ಬಸವೇಶ್ವರ ಮತ್ತು ಅಂಬೇಡ್ಕರ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ. ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧. ಭಾರತ ಗ್ಯಾಜೆಟಿಯರ ಭಾರತ ದೇಶ–ಕೋಶ ಸಂ ಪ್ರತಿ–೩ ಭಾಗ–೨, ೧೯೮೭, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

೨. ಮಾನವ ಅಭಿವೃದ್ಧಿ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರಕಾರ ಬೆಂಗಳೂರು.

೩. ಕರ್ನಾಟಕ ಮಾನವ ಅಭಿವೃಧಿ ವರದಿ ೨೦೧೫, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಬೆಂಗಳೂರು.

೪. ಆರ್ಥಿಕ ಸಮೀಕ್ಷೆ ೨೦೧೨–೧೩, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

೫. ಕುಟುಂಬ ವಾರ್ತೆ, ಫೆಬ್ರವರಿ ೨೦೧೩, ಅಭಿಯಾನ, ನಿರ್ದೇಶಕರು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಬೆಂಗಳೂರು.

೬. ಯುಎನ್‌ಡಿಪಿ ಮಾನವ ಅಭಿವರದಿ ೧೯೯೦.

೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ರಾಯಚೂರು ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೯. ಕರ್ನಾಟಕ ಅರ್ಥಿಕ ಸಮೀಕ್ಷೆ ೨೦೧೬-೧೭ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು.

೧೦. ಕರ್ನಾಟಕ ಕೈಪಿಡಿ ೧೦೧೭, ಕರ್ನಾಟಕ ಗ್ಯಾಜೆಟಿಯರ ಇಲಾಖೆ, ಬೆಂಗಳೂರು

೧೧. ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ೨೦೦೯, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೨. ಕರ್ನಾಟಕ ಕೈಪಿಡಿ ೧೦೧೧, ಕರ್ನಾಟಕ ಗ್ಯಾಜೆಟಿಯರ ಇಲಾಖೆ, ಬೆಂಗಳೂರು.

೧೩. ಜನಗಣತಿ ವರದಿ ೨೦೧೧, ಭಾರತ ಸರಕಾರ

೧೪. ಅರ್ಥಿಕ ಸಮೀಕ್ಷೆ ೨೦೦೮-೦೪ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

೧೫. ನಂಜುಂಡಪ್ಪ ಡಿ.ಎಂ, ೨೦೦೨, ಪ್ರಾದೇಶಿ ಅಸಮಾನತೆಯ ಉನ್ನತ ಅಧಿಕಾರ ಸಮಿತಿಯ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು.

೧೬. ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪, ರಾಯಚೂರು ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ.

೧೭. ಕೋಲಾರ ಜಿಲ್ಲಾ ಮಾನವ ಅಭಿವೃದ್ದಿ ವರದಿ ೨೦೧೪. ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ.

೧೮. ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ದಿ ವರದಿ ೨೦೧೪. ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ.

೧೯. ಚಿತ್ರದುರ್ಗ ಜಿಲ್ಲಾ ಮಾನವ ಅಭಿವೃದ್ದಿ ವರದಿ ೨೦೧೪. ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ.

೨೦. ಯಾದಗಿರಿ ಜಿಲ್ಲಾ ಮಾನವ ಅಭಿವೃದ್ದಿ ವರದಿ ೨೦೧೪. ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ.

೨೧. ಸಾಮಾಜಿಕ ಮತ್ತು ಅರ್ಥಿಕ ಅವಲೋಕನ ೨೦೧೩-೧೪. ರಾಯಚೂರು ಜಿಲ್ಲೆ ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ ರಾಯಚೂರು.

೨೨. ರಾಯಚೂರು ಜಿಲ್ಲಾ ಅಂಕಿ ಸಂಖ್ಯೆಗಳ ನೋಟ- ೨೦೧೨-೧೩ ಅಂಕಿ ಸಂಖ್ಯೆಗಳ ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಛೇರಿ ರಾಯಚೂರು.

೨೩. ಪ್ರಾವಿನ್ಸಿಯಲ್ ಸಿರೀಸ್ ಆಫ್ ಹೈದ್ರಾಬಾದ್ ಸ್ಟೇಟ್ ರಾಯಚೂರು, ೨೦೧೧ ಕರ್ನಾಟಕ ಗೆಜೆಟಿಯರ್ ಡಿಪಾರ್ಟ್‌ಮೆಂಟ್, ಬೆಂಗಳೂರು.

೨೪. ಕರ್ನಾಟಕ ಡೇವಲಪ್‌ಮೆಂಟ್ ರಿಪೋರ್ಟ್ ೨೦೦೭, ಅಕಾಡೆಮಿಕ್ ಫೌಂಡೇಷನ್ ಪ್ಲಾನಿಂಗ್ ಕಮಿಶನ್, ನ್ಯೂಡೆಲಿ.

೨೫. ಎಕಾನಾಮಿಕ್ ಸರ್ವೆ ೨೦೧೧-೧೨ ಗವರ್ನಮೆಂಟ್ ಆಫ್ ಇಂಡಿಯಾ, ಮಿನಿಸ್ಟ್ರಿ ಆಫ್ ಫೈನಾನ್ಸ್ ಡಿಪಾರ್ಟ್‌ಮೆಂಟ್ ಆಫ್ ಎಕಾನಾಮಿಕ್ ಅಫೈರಿಸ್ ಮಾರ್ಚ್, ೨೦೧೨, ನ್ಯೂಡೆಲಿ.

೨೬. ರಾಯಚೂರು ಡಿಸ್ಟ್ರಿಕ್ಟ್ ಪಾಪುಲೇಶನ್ ಸೆನ್ಸಸ್, ೨೦೦೧

೨೭. ಡಿಸ್ಟ್ರಿಕ್ಟ್ ಸೊಸಿಯೋ ಎಕಾನಾಮಿಕ್ ಇಂಡಿಕೆಟರಸ್, ೧೯೯೪, ಡೈರೆಕೋರೆಟ್ ಆಫ್ ಎಕಾನಾಮಿಕ್ ಆ್ಯಂಡ್ ಸ್ಟ್ಯಾಟ್‌ಸ್ಟಿಕಲ್ ಡಿಪಾರ್ಟ್‌ಮೆಂಟ್ ಗವರ್ನಮೆಂಟ್ ಆಫ್ ಕರ್ನಾಟಕ.

೨೮. ಇಂಡಿಯನ್ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ೨೦೧೧ ಟುವರ್ಡ್ಸ್ ಸೋಸಿಯಲ್ ಇನ್‌ಕ್ಲೂಸನ್ ಪ್ಲಾನಿಂಗ್ ಕಮಿಶನ್ ಗವರ್ನಮೆಂಟ್ ಇಂಡಿಯಾ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲಿ.

೨೯. ಡ್ರಾಪ್ಟಿಂಗ್ ಆ್ಯನುವಲ್ ಪ್ಲಾನ್ ೨೦೧೧-೧೨ ಗವರ್ನಮೆಂಟ್ ಆಫ್ ಇಂಡಿಯಾ, ಮಿನಿಸ್ಟ್ರಿ ಆಫ್ ಪೈನಾನ್ಸ್ ಡಿಪಾರ್ಟ್‌ಮೆಂಟ್ ಆಫ್ ಎಕಾನಿಕ ಅಪೈರಿಸ್ ಆಕ್ಸ್‌ಪರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲಿ.

೩೦. ಕರ್ನಾಟಕ ಆ್ಯಕ ಗ್ಲಾನ್ಸ್ ೨೦೧೦-೧೧ ಡೈರೆಕ್ಟೋರೆಟ್ ಆಫ್ ಎಕಾನಾಮಿಕ್ ಆ್ಯಂಡ್ ಸ್ಟ್ಯಾಟಸ್ಟಿಕಲ್ ಡಿಪಾರ್ಟ್‌ಮೆಂಟ್ ಗವರ್ನಮೆಂಟ್ ಆಫ್ ಕರ್ನಾಟಕ.

೧. ಕೃಷ್ಣ ಆರ್. ೨೦೦೨, ಮೀಸಲು 'ನೀತಿ ಶತಕ' ಉದ್ದೇಶ ಸಾರ್ಥಕವಾಯಿತೆ, ಉದಯವಾಣಿ ದಿನಪತ್ರಿಕೆ ವಿಶೇಷ ಪುರವಾಣಿ ೨೫.೦೭.೨೦೦೨.

೨. ಮಾದೇವ ಭರಣಿ ೨೦೦೬, "ಮೀಸಲಾತಿ ಹರಿಕಾರ ಸಾಹುಮಹಾರಾಜ್" ಪ್ರಜಾವಾಣಿ ದಿನ ಪತ್ರಿಕೆ ವಿಶೇಷ ಪುರವಾಣಿ ೨೬.೧೧.೨೦೦೬.

೩. ಮುಜಾಫರ್ ಅಸ್ಸಾದಿ. "ಮೀಸಲಾತಿಯ ಹಿಂದಿನ ಸೂಕ್ಷ್ಮತೆ ಮತ್ತು ಮನಸ್ಸುಗಳು, ಪ್ರಜಾವಾಣಿ ದಿನಪತ್ರಿಕೆ ೧೪.೦೫.೨೦೦೮ ಪುಟ ೦೬.

೪. ರವೀಂದ್ರ ಎಸ್ ದೇಶಮುಖ್. ೨೦೧೫ ಮೀಸಲಾತಿ ಮೀಮಾಂಸೆ ಅವಲೋಕನ, ವಿಜಯವಾಣಿ ದಿನಪತ್ರಿಕೆ ೨೬.೦೯.೨೦೧೫ ಪುಟ ೦೯.

೫. ಸಿ ಎಸ್ ದ್ವಾರಕನಾಥ್. ಖಾಸಗಿ ವಲಯಾದ ಮೀಸಲಾತಿ ರಾಜಕಾರಣ, ಕನ್ನಡಪ್ರಭ ದಿನಪತ್ರಿಕೆ ೦೬.೦೨.೨೦೧೬ ಪುಟ ೦೬

೬. ಗೋಪಾಲ್‌ಗುರು. ಸುಂದರ್ ಸರುಕ್ಕೈ ಜಾತಿ ಸಂವಾದ ಮೇರಿಟ್‌ಜಂತು ಮತ್ತು ಮೀಸಲಾತಿಯ ಅದರ್ಶ ಪ್ರಜಾವಾಣಿ ದಿನಪತ್ರಿಕೆ ವಿಶೇಷ ಪುರವಾಣಿ ೧೫.೦೪.೨೦೧೩ ಪುಟ ೦೭

೭. ವಸು ಮಳಲಿ. ಕಳ್ಳುಬಳ್ಳಿ. ಮೀನು ಹಿಡಿಯುವ ಬೆಸ್ತನಿಗೆ ಮೀಸಲಾತಿ, ಪ್ರಜಾವಾಣಿ ದಿನಪತ್ರಿಕೆ ೦೪.೦೨.೨೦೧೪ ಪುಟ ೦೬

೮. ಆರ್ ಪೂರ್ಣಿಮಾ. ಜೀವನ್ಮುಖಿ. "ಮೀಸಲಾತಿಯನ್ನು ವಿರೋಧಿಸುವುದಕ್ಕೆ ಮುನ್ನ ಚರಿತ್ರೆಯ ಹಿನ್ನೋಟ ಅಗತ್ತೆ". ಮೈಲಾರ್ಡ! ನೀವೇ ಹೀಗಂದುಬಿಟ್ಟರೆ ಹೇಗೆ, ಪ್ರಜಾವಾಣಿ ದಿನಪತ್ರಿಕೆ ೨೨.೦೨.೨೦೧೫ ಪುಟ ೦೬.

೯. ಏಜಾಜ್ ಆಶ್ರಫ್. ಮಾಧ್ಯಮಲೋಕ ಮತ್ತು ಜಾತಿ ತಾರತಮ್ಯ, ವಿಜಯಕರ್ನಾಟಕ ದಿನಪತ್ರಿಕೆ ೦೮.೦೮.೨೦೧೩ ಪುಟ ೦೬.

೧೦. ದೇವನೂರ ಮಹಾದೇವ. ಉಳ್ಳವರ ಕ್ರೂರ ವ್ಯಂಗ್ಯದ ನಡುವೆ ಇಲ್ಲದವರು ಸೆಣಸಾಡುತ್ತಾ, ಪ್ರಜಾವಾಣಿ ದಿನಪತ್ರಿಕೆ ೧೧.೦೭.೨೦೧೩ ಪುಟ ೦೬.

೧೧. ಡಾ. ಡಿ ಸಿ ನಂಜುಂಡ. ಕವಲುದಾರಿಯಲ್ಲಿ ಬುಡಕಟ್ಟು ಅಭಿವೃದ್ಧಿ ಯೋಜನೆ, ಪ್ರಜಾವಾಣಿ ದಿನಪತ್ರಿಕೆ ೦೮.೦೮.೨೦೧೬ ಪುಟ ೦೬.

೧೨. ವಿನಯಾ ಒಕ್ಕುಂದ, ಯಾರಿಗೆ, ಎಲ್ಲಿಗೆ ಬಂತು ಸ್ವಾತಂತ್ರ್ಯ, ವಿಜಯಕರ್ನಾಟಕ ದಿನಪತ್ರಿಕೆ ೧೪.೦೮.೨೦೧೪ ಪುಟ ೦೬.

೧೩. ಅಂತರ್ ಜಾಲ ಮಾಹಿತಿ ವಾರ್ತಾ ಭಾರತಿ, ದಿನಪತ್ರಿಕೆ ಒಳಮೀಸಲಾತಿ ಸಾಮಾಜಿಕ ನ್ಯಾಯ, ೨೫.೦೯.೨೦೧೨ ಮಂಗಳೂರು.

೧೪. ಉಗಮ ಶ್ರೀನಿವಾಸ, ಸಾಮಾಜಿಕ ನ್ಯಾಯದ ತಳ ಅದಿ ಒಳಮೀಸಲಾತಿ, ಕನ್ನಡಪ್ರಭ ದಿನಪತ್ರಿಕೆ ೧೫.೧೨.೨೦೧೬ ಪುಟ ೦೭.

೧೫. ಮಾದೇವ ಪ್ರಕಶ್, ರಾಜ್ಯದಲ್ಲಿ ಉಳುವವನೇ ನೆಲದೊಡೆಯನಾದ ಕಥನ, ವಿಜಯಕರ್ನಾಟಕ ದಿನಪತ್ರಿಕೆ ೧೩.೧೨.೨೦೧೪ ಪುಟ ೦೬.

೧೬. ಟಿ.ಎಸ್. ಚನ್ನೇಶ್, ಭೂಮಿ ಮತ್ತು ಹಸಿವಿನ ಸವಾಲು. ವಿಜಯಕರ್ನಾಟಕ ದಿನಪತ್ರಿಕೆ ೨೭.೦೮.೨೦೧೩ ಪುಟ ೦೬.

೧೭. ಡಾ. ಮಧುಸೂದನ ಎನ್. ಡಾ. ಕಿರಣ್ ಎಂ ಗಾಜನೂರ್. ಅಡ್ಡಾದಿಡ್ಡಿ ಅಭಿವೃದ್ಧಿಗೆ ನಲುಗಿರುವ ಭೂಮಿ ತಾಯಿ. ವಿಜಯಕರ್ನಾಟಕ ದಿನ ಪತ್ರಿಕೆ ೦೭.೦೬.೨೦೧೫ ಪು.೬.

೧. ಸುರಿಂದರ ಎಸ್., ಜೊಡಕ್, ಅವಿನಾಶ್ ಕುಮಾರ್, ಇಂಟರ್‌ನ್ಯಾಷನಲ್ ಕ್ಲಾಸಿಫಿಕೇಷನ್ ಆಫ್ ಶೇಡ್ಯೂಲ್ಡ್ ಕ್ಯಾಸ್ಟ್ ಸ್ಟೋರಿ, ಅಕ್ಟೋಬರ್ ೨೭, ೨೦೦೭ ಎಕಾನಾಮಿಕ್ ಆ್ಯಂಡ್ ಪೋಲಿಟಿಕಲ್ ವಿಕ್ಲಿ ಮಂಥ್ಲಿ ಮ್ಯಾಗಝಿನ್, ಸಮೀಕ್ಷಾ ಟ್ರಸ್ಟ್ ಪಬ್ಲಿಕೇಷನ್.

೨. ವಿವೇಕ್ ಕುಮಾರ್, ಅಂಡರ್‌ಸ್ಟ್ಯಾಂಡಿಂಗ್ ದಿ ಪೊಲಿಟಿಕಲ್ ಆಫ್ ರಿಜರ್ವೇಷನ್ ಎ ಪರಸ್ಪೆಕ್ಟಿವ್ ಫ್ರಮ್ ಬಿಲೋ ಇ.ಪಿ.ಡಬ್ಲ್ಯೂ ಫೆಬ್ರವರಿ ೨೬, ೨೦೦೫, ವ್ಯಾಲೂಂ XL, ನಂ.೯.

೩. ಮುಕುಲ ಶರ್ಮಾ, ದಲಿತ್ಸ್ ಆ್ಯಂಡ್ ಇಂಡಿಯನ್ ಎನ್‌ವಿರಾನ್‌ಮೆಂಟಲ್ ಪೊಲಿಟಿಕ್ಸ್ ಇ.ಪಿ.ಡಬ್ಲ್ಯೂ ಜೂನ್ ೯, ೨೦೧೨, ವ್ಯಾಲೂಂ. XLVII

೪. ಪ್ರತಾಪ್ ಭಾನು ಮೆಹತಾ, ಅಫರಮೇಶನ್ ವಿಥೌಟ್ ರಿಜರ್ವೇಶನ್, ಇ.ಪಿ.ಡಬ್ಲ್ಯೂ ಜುಲೈ ೩, ೯, ೨೦೦೪, ವ್ಯಾ. XXXIX, ನಂ.೨೭ ಪು. ೨೯೫೧

೫. ವಿವೇಕ ಪ್ರಧಾನ, ಎಮರ್ಜೆನ್ಸ್ ಆಫ್ ದಿ ಇಂಡಿಯನ್ ಕಾನ್‌ಸ್ಟ್ಯೂಟಿಟ್ಯೂಷನ್ (ಅಫ್‌ರಮೆಟಿವ್ ಆ್ಯಕ್ಸನ್ ಆ್ಯಂಡ್ ಕಲ್ಚರಲ್ ಪಾಲ್ಯೂಟ್‌ಲೈನ್ಸ್, ಇ.ಪಿ.ಡಬ್ಲ್ಯೂ ಫೆಬ್ರವರಿ ೧೮, ೨೦೧೨, ವ್ಯಾ. XLVII, ನಂ.೭, ಪು. ೪೫

೬. ಸರಾದಾ ಬಾಲಗೋಪಾಲನ್, ಫ್ರೀ ಆ್ಯಂಡ್ ಕಂಪಲ್ಸರಿ ಎಜ್ಯುಕೇಷನ್ ಬಿಲ್ ೨೦೦೪, ಇ.ಪಿ.ಡಬ್ಲ್ಯೂ ಆಗಸ್ಟ್ ೭, ೨೦೦೪

೭. ವಾಸವಿ ಎ.ಆರ್., ಕಾಸ್ಟ್ ಇಂಡಿಜಿನಿಯಸ್ ಆ್ಯಂಡ್ ಸಬ್ಜೆಕ್ಟೆಡ್ ಪರಸನ್ ಹುಡ್ಸ್, ಇ.ಪಿ.ಡಬ್ಲ್ಯೂ ಸೆಪ್ಟೆಂಬರ್ ೨, ೮, ೨೦೦೬, ವ್ಯಾ. XLI, ನಂ.೩೫, ಪು. ೩೭೬೬.

೮. ಕಿರಣ್ ಪ್ರಸಾದ್ ಬಿ., ದಲಿತ್ಸ್ ಆ್ಯಂಡ್ ಎಜ್ಯುಕೇಷನ್ ದಿ ಕೇಸ್ ಆಫ್ ಕೆಂಬಟ್ಟಿಸ್ ಆಫ್ ಕೊಡಗು ಸಮಾಜ ಶೋಧನಾ ಜರ್ನರ್ ಆಫ್ ಸೋಶಿಯಾಲಾಜಿಕಲ್ ಆಸೋಸಿಯೆಷನ್ ಮಂಗಳೂರು, ವ್ಯಾ.೨೦, ಮಾರ್ಚ್ ೨೦೧೧, ಪು.೭

೯. ರೂರಲ್ ಎಜ್ಯೂಕೇಷನ್, ಕುರುಕ್ಷೇತ್ರ ಎ ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್ ವ್ಯಾ.೬೦, ನಂ.೧೧, ಸೆಪ್ಟೆಂಬರ್ ೨೦೧೨, ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್‌ಮೆಂಟ್ ಗವರ್ನಮೆಂಟ್ ಆಫ್ ಇಂಡಿಯಾ.

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಅಭಿವೃದ್ಧಿ ಅಧ್ಯಯನ ವಿಭಾಗ